ವಿಶ್ವ ಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಶಬರಿ

ಬರಗೂರು ರಾಮಚಂದ್ರಪ್ಪ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಶಬರಿ

ಬರಗೂರು ರಾಮಚಂದ್ರಪ್ಪ

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು – ೫೬೦ ೦೦೨

**SHABARI :** A novel by **Prof. Baraguru Ramachandrappa**, Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧

ಪ್ರತಿಗಳು : ೧೦೦೦

ಪುಟಗಳು : [illegible] + ೨೪೭

ಬೆಲೆ : ರೂ. ೬೫/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

**(ಗೋವಿಂದ ಎಂ. ಕಾರಜೋಳ)**

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಕಷ್ಟಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

**ಎಲ್.ಎಸ್. ಶೇಷಗಿರಿ ರಾವ್**

ಅಧ್ಯಕ್ಷ

ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಹೊನ್ನುಡಿ

ನಾಡಿನ ಭಾಷೆ, ಸಂಸ್ಕೃತಿ ಮತ್ತು ಜನಜೀವನದ ಪರಿಮಾಣವನ್ನು ಅಳೆಯುವುದರಲ್ಲಿ ಅಲ್ಲಿನ ಸಾಹಿತ್ಯದ ಕೃತಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಸುಮಾರು ಎರಡು ಸಾವಿರದ ಐದನೂರು ವರ್ಷಗಳಿಗೂ ದೀರ್ಘವಾದ ಐತಿಹಾಸಿಕ ಪರಂಪರೆ ಚೆಲುವ ಕನ್ನಡ ನಾಡಿನದು. ಹಾಗೆಯೇ ಅದರ ಸಾಹಿತ್ಯ ಕೂಡ ಪಂಪ, ಕುಮಾರವ್ಯಾಸ, ಶರಣರು, ದಾಸರು ಮೊದಲಾದವರಿಂದ ಸಮೃದ್ಧವಾಗಿ ಬೆಳೆದಿದೆ. ಅದರ ಸಮೃದ್ಧತೆಗೆ ಏಳು ಜ್ಞಾನಪೀಠಗಳ ಗರಿಮೆಯೇ ಸಾಕ್ಷಿ.

ಕರ್ನಾಟಕವು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಚರಿಸುತ್ತಿರುವುದು ಒಂದು ಐತಿಹಾಸಿಕವೂ ಹಾಗೂ ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ.

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಹಾಗೂ ಸೃಜನೇತರ ಪ್ರಕಾರದ ೧೦೧ ಕೃತಿಗಳನ್ನು, ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ.

ಈ ವಿಶಿಷ್ಟ ಕೃತಿಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ನನ್ನ ವಂದನೆಗಳು. ಈ ಸಾಹಿತ್ಯ ಮಾಲಿಕೆಯನ್ನು ಸಾಹಿತ್ಯಾಭಿಮಾನಿಗಳು ಸ್ವಾಗತಿಸುವ ಮೂಲಕ ಈ ಕೃತಿಗಳ ಸದುಪಯೋಗ ಪಡೆದುಕೊಳ್ಳುತ್ತಾರೆಂದು ಭಾವಿಸಿದ್ದೇನೆ.

**(ಐ.ಎಂ. ವಿಠ್ಠಲಮೂರ್ತಿ)**
ವಿಶೇಷಾಧಿಕಾರಿಗಳು
ವಿಶ್ವ ಕನ್ನಡ ಸಮ್ಮೇಳನ

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕ್ಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿ ರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕ್ಕರ್
ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಅರ್ಪಣೆ

ಆತ್ಮಸಂಬಂಧಿಗಳಾದ
**ಡಾ. ಎಚ್.ಎಸ್. ರಾಘವೇಂದ್ರರಾವ್**
**ಮತ್ತು ಶ್ರೀಮತಿ ನಿರುಪಮ**
ಅವರ ಅಂತಃಕರಣಪೂರ್ವಕ ಪ್ರೀತಿಗಾಗಿ–

# ಬರಗೂರೆಂಬ ಬಯಲೊಳಗೆ

ಆ ರಾಮಾಯಣದಲ್ಲೊಬ್ಬ ಶಬರಿ; ಈ ಕಾದಂಬರಿಯಲ್ಲೊಬ್ಬ ಶಬರಿ. ಇಬ್ಬರ ನಡುವಿನ ಸಾಮ್ಯ ಮತ್ತು ವ್ಯತ್ಯಾಸಗಳನ್ನು ಕುರಿತು ತೀರ್ಮಾನಕ್ಕೆ ಬರುವ ಮೊದಲು ಒಂದು ಮಾತು: ನನ್ನ ದೃಷ್ಟಿಯಲ್ಲಿ 'ಶಬರಿ' ಒಂದು ಪಾತ್ರವಲ್ಲ; 'ಶಬರಿ' ಒಂದು ರೂಪಕ. ಈ ರೂಪಕಕ್ಕೆ ಹಿನ್ನೆಲೆಯಾಗಿ ಬರುವುದು ಬುಡಕಟ್ಟಿನ ಬವಣೆಯ ಬದುಕು. ಆದರೆ ನನ್ನ ಕಾದಂಬರಿ, ಬುಡಕಟ್ಟಿನ ಬದುಕಿನ ರೂಪಿಕೆಗಳನ್ನು ಸಂಗ್ರಹಿಸಿಡುವ ಸಾಂಸ್ಕೃತಿಕ ಮ್ಯೂಜಿಯಂ ಅಲ್ಲ. ಬುಡಕಟ್ಟಿನ ಬದುಕಿನ ವಿವರಗಳ ಮೂಲಕ ಚಲನಶೀಲ ಸಂಸ್ಕೃತಿಯ ಅಂತಃಶಕ್ತಿಯನ್ನು ಅನಾವರಣಗೊಳಿಸುವ, ರಾಜಕೀಯ, ಅಂತಃಕರಣವನ್ನು ಶೋಧಿಸುವ, ಒಂದು ಪ್ರಾಮಾಣಿಕ ಪ್ರಯತ್ನವಾಗಿ ನನ್ನ 'ಶಬರಿ' ರೂಪುಗೊಂಡಿದೆ. ಜನಸಂಸ್ಕೃತಿ ಮತ್ತು ಜನಪರ ರಾಜಕಾರಣದ ಅಂತರ್ ಸಂಬಂಧದಲ್ಲಿ ಹುಟ್ಟುವ ಕ್ರಿಯಾರೂಪಕ ನನ್ನ ಈ ಕಾದಂಬರಿ. ಇದಿಷ್ಟು ನನ್ನೊಳಗಿನ ಆಶಯ. ಅಭಿವ್ಯಕ್ತಿಯೆನ್ನುವುದು ಒಳಗಿನ ಬೆಳಗಲ್ಲವೆ?

ಈ ಕಾದಂಬರಿಯಲ್ಲಿ ಕೆಲವು ಆಚರಣೆ ಹಾಗೂ ನಂಬಿಕೆಗಳ ಪ್ರಸ್ತಾಪವಿದೆ. ಮುಖ್ಯವಾಗಿ, ಮದುವೆಯಾದ ಹೆಣ್ಣು ಮೊದಲ ರಾತ್ರಿಯನ್ನು ದೇವರೊಂದಿಗೆ ಕಳೆಯಬೇಕೆಂಬ ನಂಬಿಕೆ. ಇಂತಹ ನಂಬಿಕೆಯೇ ಆಚರಣೆಯಾಗಿ ಅಸ್ತಿತ್ವ ಪಡೆದದ್ದನ್ನು ಕೆಲವು ಗ್ರಂಥಗಳಲ್ಲಿ ಓದಿದ್ದೇನೆ, ಕೇಳಿದ್ದೇನೆ. ಅಂತೆಯೇ ಮರಗಳನ್ನು ಅಪ್ಪಿಕೊಂಡು ಗೌರವಿಸುವ ಆಚರಣೆಯು ಕೆಲವು ಬುಡಕಟ್ಟುಗಳಲ್ಲಿ ಇರುವುದನ್ನು ಕಂಡಿದ್ದೇನೆ. ಈ ರೀತಿಯ ನಂಬಿಕೆಗಳನ್ನು ಕಾದಂಬರಿಯ ಆಶಯಗಳ ಅಂತಃಚಲನೆಯ ಅಂಗವಾಗಿ ನಿರ್ವಹಿಸಿದ್ದೇನೆ. ಸಾಮಾಜಿಕ ಸಂಸ್ಕೃತಿ ಮತ್ತು ರಾಜಕೀಯ ಸಂಸ್ಕೃತಿಗಳ ಸಂಬಂಧದಲ್ಲಿ ಗರ್ಭಧಾರಣೆ ಮಾಡುವ ಭಾವನೆ ಹಾಗೂ ಚಿಂತನೆಗಳ ಒಳಬೆಳಗು ತಂತಾನೆ ಬೆಳೆಯುತ್ತ ಕೃತಿಯಾಗಿ ಹುಟ್ಟುವುದು– ನಾನು ಆಹ್ವಾನಿಸಿಕೊಂಡಿರುವ ಒಂದು ಸೃಜನಶೀಲ ಸವಾಲು. ಇದರ ಫಲವಾಗಿ 'ಶಬರಿ' ಜನ್ಮತಾಳಿದೆ; ಓದು ಮತ್ತು ವಿಮರ್ಶೆಗೆ ಕಾದಿದೆ– ಶಬರಿಯಂತೆ.

ಕಾಯುವುದು– ಶಬರಿಯ ಅಂತಃಶಕ್ತಿ. ಕನ್ನಡದಲ್ಲಿ ಕಾಯುವುದೆಂದರೆ waiting ಮಾತ್ರ ಅಲ್ಲ. 'ನೀರು ಕಾಯುವುದು' ಎಂದಾಗ waiting ಎಂಬ ಅರ್ಥ ಇರುವುದಿಲ್ಲ. ಹೀಗೆ ಕಾಯುವ ಕ್ರಿಯೆಯ ಒಳ ಆಯಾಮಗಳನ್ನು ಒಳಗೊಳ್ಳುತ್ತ ನನ್ನ 'ಶಬರಿ' ಬೆಳೆಯುತ್ತಾಳೆ. ಜೊತೆಗೆ ಒಟ್ಟು ವಾತಾವರಣವೇ ಬೆಳೆಯುತ್ತದೆ.

ಒಂಟಿತನ, ಹೋರಾಟ, ಪ್ರೀತಿ–ಪ್ರೇಮಗಳ ಅಂತರ್ಜಲದಲ್ಲಿ ತೋಯುವ ಪಾತ್ರ ಪರಿಸರಗಳು ಕತೆಯನ್ನು ಕಟ್ಟುತ್ತವೆ.

ಗದ್ಯನಿರೂಪಣೆ, ಸಂಭಾಷಣೆಗಳ ಮೂಲಕ ಸನ್ನಿವೇಶವನ್ನು ಕಟ್ಟಿಕೊಡುತ್ತ, ಒಳಗಿನ ಸೂಕ್ಷ್ಮಗಳಿಗೆ ಸ್ಪಂದಿಸುವ ಸಂದರ್ಭದಲ್ಲಿ ಕಾವ್ಯಾತ್ಮಕವಾಗುವ ಬರವಣಿಗೆಯ ಪ್ರಯೋಗವನ್ನು ನೀವು ಕಾಣಬಹುದು. ಅಲ್ಲದೆ, ಶಬರಿಯು ತಲುಪುವ ಹೊಸ ಆಯಾಮದ ನಿರ್ವಹಣೆಯಲ್ಲಿ ಅಕ್ಕಮಹಾದೇವಿಯ ಕೆಲವು ವಚನಗಳು ಬಳಕೆಯಾಗಿರುವುದನ್ನು ಗಮನಿಸಬಹುದು. ಇವುಗಳ ವ್ಯಾಖ್ಯಾನವನ್ನು ಓದು ಮತ್ತು ವಿಮರ್ಶೆಗೆ ಬಿಡುತ್ತೇನಾದರೂ ನನ್ನ ಬರವಣಿಗೆಯ ಹೊಸ ವಿಧಾನವನ್ನು ಸಾದರಪಡಿಸಿದ ಸಂತೋಷವನ್ನು ಸಂಕೋಚದಿಂದಲೇ ಹಂಚಿಕೊಳ್ಳಬಯಸುತ್ತೇನೆ.

ಸಾಂಸ್ಕೃತಿಕ ಮಹತ್ವದ ಪ್ರಕಾಶನ ಸಂಸ್ಥೆಯಾಗಿ ಬೆಳೆಯುತ್ತಿರುವ 'ಅಂಕಿತ ಪುಸ್ತಕ'ದ ಗೆಳೆಯ ಶ್ರೀ ಪ್ರಕಾಶ್ ಕಂಬತ್ತಳ್ಳಿ ಮತ್ತು ಅವರ ಶ್ರೀಮತಿ ಪ್ರಭಾ ಅವರು 'ಶಬರಿ'ಯನ್ನು ನಿಮ್ಮ ಬಳಿಗೆ ಕರೆತಂದಿದ್ದಾರೆ. ನನ್ನ 'ಶಬರಿ'ಯನ್ನು ನಿಮ್ಮ ಬಳಿಗೆ ಕರೆತರುವ ಕಾಯಕಕ್ಕೆ, ಅಕ್ಷರಜೋಡಣೆಯ ಶ್ರೀಧರ್, ಲಕ್ಷ್ಮಿ ಮುದ್ರಣಾಲಯದ ಅಶೋಕ್‌ಕುಮಾರ್ ಮತ್ತು ಕೆಲಸಗಾರರು ಕೈಜೋಡಿಸಿದ್ದಾರೆ. ಎಂದಿನಂತೆ ಹಿತೈಷಿಗಳು, ಗೆಳೆಯರು ಮತ್ತು ಮನೆಯವರು ನನ್ನೊಂದಿಗಿದ್ದಾರೆ; ನಾನು ಅವರೊಂದಿಗಿದ್ದೇನೆ. ಮತ್ತೇನು ಹೇಳಲಿ?

ನಾನು 'ಬರಗೂರು'. ಬರಗೂರರೆಂಬ ಬಯಲೊಳಗೆ ಹುಟ್ಟಿದ ಆಲಯ ಈ 'ಶಬರಿ'. ಮತ್ತೆ ಬಯಲಾಗಲು ಕಾದಿದ್ದಾಳೆ; ಪ್ರೀತಿಯಿಂದ ಬರಮಾಡಿಕೊಳ್ಳಿ.

ಬೆಂಗಳೂರು **ಬರಗೂರು ರಾಮಚಂದ್ರಪ್ಪ**

# ಪರಿವಿಡಿ


| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಅಧ್ಯಕ್ಷರ ಮಾತು | v |
| ಹೊನ್ನುಡಿ | vi |
| ಎರಡು ನುಡಿ | vii |
| ಪ್ರಕಾಶಕರ ಮಾತು | viii |
| ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ | x |
| ಬರಗೂರೆಂಬ ಬಯಲೊಳಗೆ | xiii |
| **ಶಬರಿ** | **೧–೨೫೦** |

# ಶಬರಿ

# ೧

ಕತ್ತಲು!

ಶಬರಿ ಕಾಯುತ್ತಿದ್ದಾಳೆ!

ಅದೊಂದು ಹಟ್ಟಿ. ಸುಮಾರು ಮೂವತ್ತಕ್ಕೂ ಹೆಚ್ಚು ಗುಡಿಸಲುಗಳು ಇರಬಹುದು. ಬುಡಕಟ್ಟಿನ ಜನ ವಾಸಮಾಡುವ ಈ ಹಟ್ಟಿ ಮೂಲ ಊರಿಗೆ ಸಮೀಪದಲ್ಲೇ ಇದೆ. ಆದರೆ ಆಚಾರ ವಿಚಾರಗಳಲ್ಲಿ ತನ್ನದೇ ರೂಪ ಪಡಕೊಂಡು ಲಾಗಾಯ್ತಿಂದ ಅನುಸರಿಸ್ಕೊಂಡು ಬರ್ತಾ ಇದೆ. ಈ ಆಚಾರ–ಆಚರಣೆಗಳ ವಕ್ತಾರನಂತೆ ಪೂಜಾರಪ್ಪ ಇದಾನೆ. ಆತನ ಮತು ಅಂದ್ರೆ ಅದೇ ವೇದ–ವಿಚಾರ ಎಲ್ಲಾ ಅನ್ನಬಹುದು. ಪೂಜಾರಪ್ಪನನ್ನ ಬಿಟ್ಟರೆ ತಿಮ್ಮರಾಯಿ ಮಾತಿಗೆ ಇಲ್ಲಿ ಮನ್ನಣೆ; ಗೌರವ. ಈ ತಿಮ್ಮರಾಯಿ ಹಟ್ಟೀಗೆಲ್ಲ ಹಿರಿಯ. ನಿಯತ್ತಿನ ನಡವಳಿಕೆ. ತುಟಿ ಮೀರದ ಮಾತು. ಬುಡಕಟ್ಟಿನ ಬದುಕೇ ತುಂಬಿಕೊಂಡಂಥ ಮನುಷ್ಯ. ಈತನ ಮಗಳೇ ಶಬರಿ. ಹುಟ್ಟಿದ ಕೂಡಲೇ ತಾಯೀನ ಕಳಕೊಂಡು ತಂದೆ ತಿಮ್ಮರಾಯಿ ಹೇಳ್ದಂತೆ ಕೇಳ್ಕೊಂಡು ಬೆಳೆದ ಕೂಸು; ಈಗ ಯುವತಿ. ಶಬರಿ ಅನ್ನೊ ಹೆಸರು ರೂಢೀಲಿ ಬಂದದ್ದು. ಅದೂ ಅಪ್ಪನ ಬಾಯಿಂದ. ಶಬರಿ ರಾಮನ ಆಗಮನಕ್ಕೆ ಅಂತ ಕಾದ ಕತೇನ ಯಾವಾಗ್ಲೂ ಹೇಳ್ತಿದ್ದ ತಿಮ್ಮರಾಯಿ– 'ಯಾರೂ ಆತ್ರ ಬೀಳ್‌ಬಾರ್ದು'– ಅಂತ ಒತ್ತಾಯ ಮಾಡ್ತಿದ್ದ. 'ನೀತಿ, ನಿಷ್ಠೆ ಇಟ್ಕಂಡು ಕಾಯ್ತಾ ಇದ್ರೆ ಒಳ್ಳೇದು ಆಗೇ ಆಗುತ್ತೆ' ಅನ್ನೋದು ತಿಮ್ಮರಾಯಿಯ ನಂಬಿಕೆ. ಇದನ್ನೇ ತನ್ನ ಮಗಳಿಗೂ ಹೇಳ್ತಾ ಬಂದ. ತನಗೆ ತುಂಬಾ ಇಷ್ಟವಾದ ಶಬರಿ ಹೆಸರಿನಿಂದ್ಲೇ ಮಗಳನ್ನ ಕರೆದ.

ಆದರೆ ಅದೇ ತಿಮ್ಮರಾಯಿ ಇವತ್ತು ಇಲ್ಲ!

ಆತನನ್ನು ಮಣ್ಣುಮಾಡಿ ಬಂದು ಹಟ್ಟಿಗೆ ಹಟ್ಟಿಯೇ ಕತ್ತಲಲ್ಲಿ ಕೂತಿದೆ. ಈ ಕತ್ತಲಲ್ಲಿ–ಶಬರಿಯ ಕಣ್ಣಂಚಿನಲ್ಲಿ ಉಕ್ಕೋ ದುಃಖ ಬೇರೆಯವರಿಗೆ ಕಾಣಿಸದೆ ಇದ್ರೂ ಮನಸ್ಸಿಗೆ ಮಾತ್ರ ತಟ್ಟಿದೆ. "ಅತ್ರೆ ಸತ್ತೋರ್ ಎದ್ ಬರಲ್ಲ ಶಬರಿ. ನಿಮ್ಮಪ್ಪಾನೇ ಯೇಳ್ತಾ ಇರ್ಲಿಲ್ವ ಒಳ್ಳೇ ದಿನಕ್ಕೆ ಕಾಯ್ಬೇಕು ಅಂಬ್ತ. ಶಬರೀನೇ ಕಾಯ್ದಿದ್ರೆ ಇನ್ ಯಾರ್ ಕಾಯ್ತಾರೆ ಯೇಳು"—ಎಂದು ಪೂಜಾರಪ್ಪ ಹೇಳಿ

ಎದ್ದ ಮೇಲೆ ಎಲ್ಲರೂ ತಂತಮ್ಮ ಗುಡಿಸಲು ಸೇರಿಕೊಂಡರು. ಕದಲದೆ ಕೂತವರೆಂದರೆ ಶಬರಿ ಹೊಟ್ಟೆಯೊಳಗಿನ ಮಗು ಮತ್ತು ಮಾತುಬರದ ಮೂಗ–ಹುಚ್ಚೀರ. ಹೊಟ್ಟೆಯೊಳಗಿನ ಮಗು ಮಾತಾಡೊಲ್ಲ. ಹುಚ್ಚೀರನಿಗೆ ಮಾತು ಬರೊಲ್ಲ; ಶಬರಿಯ ಮೂಕವೇದನೆಗೆ ಸಾಕ್ಷಿ–ಸಂಕೇತಗಳೇನೊ ಅನ್ನೊ ಹಾಗೆ ಇವರಿಬ್ಬರೂ ಆಕೆಗೆ ಹತ್ತಿರವಿದ್ದರು. ಶಬರಿಯ ಕಣ್ಣಲ್ಲಿ ನೀರು. ಹುಚ್ಚೀರನ ಒದ್ದೆ ಮನಸ್ಸಲ್ಲಿ ಮಾತಾಗಿ ಹೊರ ಹೊಮ್ಮಲಾಗದೆ ಸುಳಿಯಾದ ಸಂಕಟ. ದಿಕ್ಕೆಟ್ಟ ಶಬರಿಯ ನೋಟ.

ಕತ್ತಲನ್ನು ಸೀಳಿ ಮಿಂಚೊಂದು ಸುಳಿಯಿತು.

ಫಳಾರನೆ ಬಂದ ಬೆಳಕು ಹಾಗೇ ಮಾಯವಾಯ್ತು.

ಕೂತಿದ್ದ ಶಬರಿ ಎದ್ದಳು. ಹಟ್ಟಿಯ ಆ ಕಡೆಗೆ ಹೋಗಿ ನಿಂತು ದಿಟ್ಟಿಸಿದಳು. ದೂರಕ್ಕೆ ಕಣ್ಣರಳಿಸಿ ನೋಡಿದಳು.

ಇಲ್ಲ....... ಯಾರೂ ಕಾಣುತ್ತಿಲ್ಲ. ಯಾರೂ ಬರುತ್ತಿಲ್ಲ.

ಹೀಗೆ ಎಷ್ಟೋ ದಿನ ಕಾದಿದ್ದಳು. ತನ್ನ ಸೂರ್ಯ ಬರುತ್ತಾನೆಂದು ಹಂಬಲಿಸಿದ್ದಳು. ಚಡಪಡಿಸಿದ್ದಳು. ಆಗ ತಿಮ್ಮರಾಯಿ ಹೇಳಿದ್ದ–"ಸೂರ್ಯಪ್ಪ ಬಂದೇ ಬತ್ತಾನೆ ಕಣವ್ವ. ಒಸಿ ಕಾಯ್ಬೇಕು, ಆಟೇ; ಅವ್ನ್ ಬಂದೇ ಬತ್ತಾನೆ."

ಶಬರಿಗೆ ನೆನಪು ಒತ್ತರಿಸಿತು. ಸುರ್ಯ ಹೇಳಿದ್ದ–"ಗಂಡುಮಗು ಹುಟ್ಟಿದ್ರೆ ತೇಜ ಅಂತ ಹೆಸರಿಡೋಣ ಅಥವಾ ಉದಯ ಅಂತ ಇಡೋಣ."

"ಇಂತ ಯೆಸ್ರುನ್ನ ನಾವ್ ಕೇಳೇ ಇಲ್ಲ. ಯೆಸ್ರ್ ಕರ್ಯಾಕೆ ನಾಲ್ಗೆ ತಿರುಗ್‌ಬೇಕಲ್ಲ ನಮ್ ಜನ್ರಿಗೆ"– ಎಂದಿದ್ದಳು ಶಬರಿ.

"ನಾಲ್ಗೆ ತಿರ್ಗಲ್ಲ ಅಂತ ಹಾಗೇ ಇದ್ರೆ ಹೊಸದಾಗಿ ಮಾತೇ ಆಡೋಕಾಗೊಲ್ಲ. ಕರೀತಾ ಕರೀತಾ ತಾನಾಗೇ ಅಭ್ಯಾಸ ಆಗುತ್ತೆ. ಇವೆರಡರಲ್ಲಿ ಯಾವ್ದಾದ್ರು ಒಂದ್ ಹೆಸ್ರು ಇಟ್ರಾಯ್ತು"– ಸೂರ್ಯ ಹೇಳಿದ್ದ.

"ತೇಜ ಅಂಬಾದೆ ಚಂದಾಗೈತೆ, ಅಂಗಂದ್ರೆ ಏನು?"

"ಫಳ ಫಳ ಅಂತ ಹೊಳೆಯುತ್ತಲ್ಲ ಅದು–ತೇಜ. ಅದು ಸೂರ್ಯನ್ ಬೆಳಕು ಇದ್ದಂತೆ..."

ಸೂರ್ಯ ವಿವರಿಸುತ್ತಿದ್ದಾಗಲೇ ಶಬರಿ ಹೇಳಿಬಿಟ್ಟಳು–

"ಅಂಗಾರೆ ಅದೇ ಇರ್ಲಿ, ಸೂರ್ಯಂಗೂ ಅದ್ಕೂ ವೊಂದಾಣ್ಕೆ ಐತೆ ಅಂದ್ ಮ್ಯಾಲೆ ತೇಜ ಅಂಬಾದೇ ಇರ್ಲಿ."

ಸೂರ್ಯ ನಕ್ಕು ನುಡಿದಿದ್ದ–

"ಅದೇನೊ ಸರಿ. ಗಂಡು ಮಗೂನೆ ಹುಟ್‌ಬೇಕಲ್ಲ?"

ಮದುವೆಯಿಲ್ಲದೆ ನಡೆದ ಮಾತುಕತೆ. ಆನಂತರ.... ಅದು ಬೇರೆಯೇ ಕತೆ. ಈಗ ಸೂರ್ಯ ಇಲ್ಲ. ಹೋದವನು ಬಂದಿಲ್ಲ. ಬಂದೇ ಬರುತ್ತಾನೆಂಬ ಆಸೆ ಬತ್ತಿಲ್ಲ. ತಿಮ್ಮರಾಯಿ ಪ್ರಕಾರ ಕಾಯಬೇಕು. ಆದರೆ ಶಬರಿ ಪ್ರಶ್ನೆ– 'ಕಾಯ್ತಾನೇ ಎಷ್ಟು ದಿನ ಇರೋದು?' 'ಶ್ರೀರಾಮ ಬಂದ. ಶಬರಜ್ಜೀಗೆ ಸಂತೋಸ ಆಯ್ತು. ಅವ್ನೊ ಇಲ್ವೊ?'– ಇದು ತಿಮ್ಮರಾಯಿ ಪ್ರಶ್ನೆ. 'ಅಂದ್ರೆ ನಾನೂ ಮುದುಕಿ ಆಗಬೇಕು ಅನ್ನು'?– ಶಬರಿಯ ಮರುಪ್ರಶ್ನೆ. 'ಅಂಗಲ್ಲ ಕಣವ್ವ. ಒಳ್ಳೇದ್ ಯಾವಾಗ್ಲೂ ತಡವಾಗೇ ಬರಾದು. ಆ ರಾಮ ಎಂಗಿದ್ನೊ ಏನ್ಕತ್ಯೊ ನಮ್ಗೇನ್ ಗೊತ್ತ? ಶಬರಿ ನಮ್ ತರಾ ಬಾಳ್ವೆ ಮಾಡ್ದೋಳು. ಅವ್ಳ ಆಸೇನೂ ಒಂದಲ್ಲ ಒಂದ್ ದಿನ ಈಡೇರ್‌ತಲ್ವ? ಈಡೇರ್ಲೇಬೇಕು. ನಂಗ್ ತಿಳ್ದಾದ್ ಈಟೇ ಕಣವ್ವ.'– ಹೀಗೆ ತಿಮ್ಮರಾಯಿ ತನ್ನ ದರ್ಶನಾನ ತನ್ನದೇ ದಾಟೀಲಿ ಹೇಳಿದ್ದ.

ಶಬರಿಯ ನಿಟ್ಟುಸಿರೇ ನೋಟವಾಗಿತ್ತು.
ಹಟ್ಟಿಯ ಹೊರಬಂದು ಕಾಯ್ತಾ ಇತ್ತು.

"ಆ ರಾಮ ಬಂದಾಗ ಆ ಶಬರೀಗೆ ಸಂತೋಷ ಆಯ್ತು. ಈ ಸೂರ್ಯ ಬಂದ್ರೆ ನಂಗೂ ಸಂತೋಷ ಆಗ್ತೈತೆ. ಬಾಳ್ವೇವ್ಗೆ ಬೆಳಕು ಬರ್‍ತೈತೆ. ಬೆಳಕು ಬರ್‍ಲಿ ಅಂಬ್ತ ಕತ್ತಲಾಗ್ ಕಾಯಾದೇ ನಮ್ಮ ಬಾಳ್ವೇವ?"

–ಹೀಗೆ ಶಬರಿ ಒಳಗೇ ಉರೀತಾ ಕಾದಿದ್ದಳು.

ಸೂರ್ಯ ಬರಲಿಲ್ಲ.
ಆತ ಬರುವವರೆಗೆ ತಿಮ್ಮರಾಯಿ ಬದುಕಲಿಲ್ಲ.
ಸೂರ್ಯ ಬರ್‍ತಾನೆ ಅಂತ ಭರವಸೆಯ ಮಾತಾಡ್ತ, ಮಗಳ ಸಂಕಟಾನ ತನ್ನೊಳಗೆ ತಂದ್ಕೊಂಡು ಸೊರಗಿದ; ಸುಟ್ಟು ಕರಕಲಾದ.
ಕಡೆಗೆ ಸತ್ತೇ ಹೋದ.

..............................................

ಕತ್ತಲಲ್ಲಿ ನಿಂತು ಶಬರಿ ನೋಡ್ತಾನೆ ಇದ್ದಳು.
ತತ್ತರಿಸಿ ಕೂತಿದ್ದ ಹುಚ್ಚೀರ ಹತ್ತಿರ ಬಂದ.

ಗುಡುಗು ಮಿಂಚುಗಳು ಒಟ್ಟಿಗೆ ಬಂದು ಅಪ್ಪಳಿಸಿದವು. ಹೆದರಿದ ಹುಚ್ಚೀರ ಶಬರಿ ಕಡೆ ನೋಡಿ ಒಳಗೆ ಹೋಗಲು ಸನ್ನೆ ಮಾಡಿದ.

ಆಕೆ ಹೋಗಲಿಲ್ಲ.

ಇನ್ನೇನು ಮಳೆ ಬರಬಹುದು ಅನ್ನೊ ವಾತಾವರಣದಲ್ಲಿ ಗಾಳಿ ಬೀಸೋಕೆ ಶುರುವಾಯ್ತು. ಗುಡಿಸಲುಗಳು ತರತರ ಅಂದವು. ಮರದ ಎಲೆಗಳು ಬಂದು ಮುಖಕ್ಕೆ ಬಡಿದವು. ನಡುವೆ ನುಗ್ಗಿದ ಮಿಂಚಿನ ಬೆಳಕಲ್ಲಿ ಶಬರಿ ದೂರಕ್ಕೆ ದಿಟ್ಟಿಸಿದಳು. ಅಪ್ಪ ಸಾಯುವಾಗ್ಲೂ 'ಸೂರ್ಯ ಬತ್ತಾನೆ ಕಣವ್ವ. ನಿನ್ ಮಗಾ ಹುಟ್ಟಿದ್ ಮ್ಯಾಕೆ ಸೂರ್ಯಪ್ಪನ್ ತರಾ ಚಂದಾಗ್ ಬೆಳುಸ್ಬೇಕು. ನನ್ ಮೊಮ್ಮಗ ನಮ್ಮ ಹಟ್ಟೀಗೆ ದೀಪ ಆಗ್‌ಬೇಕು, ದ್ಯಾವ್ರ್ ಆಗ್ಬೇಕು.' ಎಂದು ಒಂದೇ ಉಸಿರಲ್ಲಿ ಹೇಳಿದ್ದ. ಅಪ್ಪನ ದೇವರ ಕಲ್ಪನೆ ಕಂಡು ಶಬರಿಗೆ ಅಚ್ಚರಿಯಾಗಿತ್ತು. 'ದ್ಯಾವ್ರು ನಮ್ತಾವ್ಲೆ ಇರ್ತಾನೆ ಕಣವ್ವ. ಯಾರೊ ಒಬ್ರು ದ್ಯಾವ್ರ್ ತರಾ ಬೆಳೀತಾರೆ.' ಎಂದೆಲ್ಲಾ ಮಾತಾಡುತ್ತಿದ್ದ ತಿಮ್ಮರಾಯೀನೆ ಒಂದು ಒಗಟಾಗಿ ಕಾಡಿಸಿದ್ದುಂಟು. ಆದ್ರೆ ಆತನ ಮಾತಿಗೆ ಎದುರಾಡೋಕೆ ಶಬರೀಲಿ ಬೇರೆ ವಿಚಾರಾನೇ ಇರ್ಲಿಲ್ಲ. ಒಳಗೆಲ್ಲ ಸೂರ್ಯ ತುಂಬಿಕೊಂಡಿದ್ದ. ಹೊರಗೆ ಕತ್ತಲು ಕಾಡುಸ್ತಾ ಇತ್ತು.

ಈಗಲೂ ಅಷ್ಟೆ. ಕತ್ತಲಲ್ಲಿ ಸೂರ್ಯನ ಹುಡುಕಾಟ.
ಸೂರ್ಯನ ಸೂಚನೆ ಕಾಣಲೇ ಇಲ್ಲ.
ಆಗ ಚಂದ್ರ ದೊಪ್ಪನೆ ನೆನಪಲ್ಲಿ ನುಗ್ಗಿದ.
ಮೋಡದಲ್ಲೊಂದು ಗುಡುಗು.
ಯಾರು ಈ ಚಂದ್ರ?
ಶಬರಿ ಬೆಚ್ಚಿದಳು.

* * *

ಚಂದ್ರ ತೇಲಿ ಬಂದ.
ಆದರೆ ಕೆಂಪಾಗಿದ್ದ.
ತೊಟ್ಟಿಕ್ಕುವ ಬೆಳದಿಂಗಳು.
ಅದು ನೆನಪಿನ ನೆತ್ತರು!
ಶಬರಿ ಕತ್ತಲಲ್ಲಿ ತತ್ತರಿಸಿದಳು.
ಹುಚ್ಚೀರ ಒಳಗೆ ಹೋಗಿ ಮಲಗುವಂತೆ ಸನ್ನೆ ಮಾಡಿದ.
ಈಕೆ ನೀನೇ ಹೋಗಿ ಮಲಗು ಎಂಬಂತೆ ಸನ್ನೆಯಲ್ಲಿ ಸೂಚಿಸಿದಳು.
ಆತ ಒಪ್ಪಲಿಲ್ಲ.
ಶಬರಿ ಅಸಹಾಯಕಳಾದಳು– ಎಂದಿನಂತೆ.

ಗಾಳಿ ಬೀಸತೊಡಗಿತು.
ಜೊತೆಗೆ ಬರಲೊ ಬೇಡವೊ ಎಂಬಂತೆ ಚಿಮ್ಮಿದ ಹನಿಗಳು.
ನೆತ್ತರುಕ್ಕಿ ನೆನಪನ್ನು ನೆಕ್ಕಿದ ಅನುಭವ;
ಕತ್ತಲಲ್ಲಿ ಕೆಂಡದುಂಡೆಯಾಗಿ ಬಂದ ಚಂದ್ರ.

* * *

ಚಂದ್ರ ಹತ್ತಿರದಲ್ಲೇ ಇದ್ದ ಇನ್ನೊಂದು ಹಟ್ಟಿಗೆ ಸೇರಿದವನು. ತಿಮ್ಮರಾಯಿಗೆ ನೆಂಟನಾದ್ದರಿಂದ ಆಗಾಗ್ಗೆ ಬರ್‍ತಾ ಇದ್ದ. ಶಬರಿಗಿಂತ ನಾಲ್ಕೈದು ವರ್ಷ ದೊಡ್ಡೋನು; ನೆಂಟರವನು. ಮುಂದೆ ಅಳಿಯ ಆದ್ರೂ ಆಗಬಹುದು– ಅಂತ ತಿಮ್ಮರಾಯಿ ಆಸೆ ಇಟ್ಕೊಂಡಿದ್ದ. ಚಂದ್ರ ಬಂದ ಅಂದ್ರೆ ಶಬರೀಗೆ ಅದು ಮಾಡು ಇದು ಮಾಡು ಅಂತ ಹೇಳ್ತಾ ಇದ್ದ. ನೋಡೋಕೆ ಚಂದವಾಗಿದ್ದ ಚಂದ್ರ ಶಬರೀಗೂ ಹಿಡಿಸಿದ್ದ. ಆದ್ರೆ ಮದುವೆ ಪ್ರಸ್ತಾಪ ಬರೋಕೆ ಮುಂಚೆ ಆತ ಮಂಗಮಾಯವಾದ. ಹದಿನೈದು ದಿನಕ್ಕೊಂದ್ಸಾರಿನಾದ್ರು ಬರ್‍ತಾ ಇದ್ದ ಚಂದ್ರ ಇತ್ತೀಚೆಗೆ ಬರದೆ ಬರೀ ಅಮಾವಾಸ್ಯೆ ಆವರಿಸ್ಕೊಂಡಂತಾಗಿತ್ತು. ಕೇಳೋನೊ ಬೇಡವೊ ಅಂತ ಹಿಂಜರೀತಾನೆ ಶಬರಿ ಕೇಳಿದ್ದಳು.

"ಯಪ್ಪೊ, ಚಂದ್ರ ಮಾಮ ಯಾಕ್ ಬರ್‍ತಾ ಇಲ್ಲ?"

"ಯಾವನಿಗ್ಗೊತ್ತಮ್ಮ? ಅದೆಲ್‌ವೋದ್ನೊ ಏನ್ ಕತ್ಯೊ"– ತಿಮ್ಮರಾಯಿ ತಿರಸ್ಕಾರದಿಂದ ಹೇಳಿದ.

"ಯಾಕಪ್ಪ, ನೀನೇನಾರ ಅವ್ನ್ ಜತ್ಯಾಗ್ ಜಗಳ ಆಡಿದ್ಯಾ?"

–ಶಬರಿ ಕೇಳಿಯೇಬಿಟ್ಟಳು.

"ನಾನ್ಯಾಕಮ್ಮ ಜಗಳ ಆಡ್ಲಿ, ಅವ್ನೇ ಊರ್ ಇರೇರತ್ರ ಏನೇನೊ ಜಗಳ ಆಡಿದ್ನಂತಮ್ಮ. ನಾವ್ ಬಡವರು–ಬುಡಕಟ್ನೋರು–ಊರ್ ಇರೇರ್ ಇರೋದ ಕಟ್ಕಂಡ್ ಬಾಳ್ವೇವ್ ಮಾಡಾಕಾಯ್ತದ?"

"ಅಂಗಂಬ್ತ ನಮ್ ಬುಡಕ್ ಬಿಸಿನೀರಾಕಿದ್ರೂ ಸುಮ್ಕೆ ಇರಾಕಾಯ್ತದ?"

–ಶಬರಿ ಥಟ್ಟನೆ ಕೇಳಿದಳು.

ತಿಮ್ಮರಾಯಿ ಬೆಚ್ಚಿ ನೋಡಿದ.

ಅದು ಚುಚ್ಚಿದಂತೆ ಕಾಣಿಸಿತು.

ಶಬರಿ ಸರ್‍ರನೆ ಅಲ್ಲಿಂದ ಹೋದಳು.

ಆವೊತ್ತಿನಿಂದ ಶಬರಿಯು ತಾನಾಗೇ ಚಂದ್ರನ ಪ್ರಸ್ತಾಪ ಮಾಡಲಿಲ್ಲ.
ಆಕೆಯ ಮಾತಿಗಾಗಿ ತಿಮ್ಮರಾಯಿ ಕಾದ–ಶಬರಿಯಂತೆ,
ಆದರೆ ಆಕೆ ಏನೂ ಆಗಿಲ್ಲವೆಂಬಂತೆ ಇದ್ದಳು.

ಹೀಗಿರುವಾಗ ಚಂದ್ರ ಬಂದೇಬಿಟ್ಟ–ಬೆಳದಿಂಗಳ ಸಮೇತ.
ಎದುರು ಚಂದ್ರ–ಶಬರಿಯಲ್ಲಿ ಬೆಳದಿಂಗಳು.
ಓಡಿಹೋಗಿ ತಿಮ್ಮರಾಯಿಗೆ ಹೇಳಿದಳು.

ತಿಮ್ಮರಾಯಿ ಬಂದವನೇ "ಏನಪ್ಪ ಎಲ್ಡಕ್ಸರ ಕಲ್ತಿವ್ನಿ ಅಂಬ್ತ ಊರ್ ಇರೇರ್‌ನೆಲ್ಲ ಎದ್ರಾಕ್ಕಂಡ್ರೆ ಆಯ್ತದ?" ಎಂದು ಕೇಳಿಬಿಟ್ಟ.

ಶಬರಿಗೆ ಕಸಿವಿಸಿಯಾಯ್ತು. "ಅದೆಲ್ಲ ಆಮ್ಯಾಕ್ ಮಾತಾಡಿರಾಗಾಕಿಲ್ವ?" ಎಂದಳು

ತಿಮ್ಮರಾಯಿಗೆ ತಾನು ಹಾಗೆ ಕೇಳಿದ್ದು ತಪ್ಪೆಂದು ತಿಳುವಳಿಕೆ ಬಂದು– "ವೋಗ್ಲಿ ಬಿಡಪ್ಪ. ಈಟ್ ದಿನ ನಿನ್ ಮಕ ನೋಡ್ದೆ. ಮಾತ್ ಕೇಳ್ದೆ ಬ್ಯಾಸ್ರ ಆಗಿತ್ತು ಅಂಗಂದೆ" ಎಂದು ಶಬರಿಯ ಮುಖ ನೋಡಿದ.

ಶಬರಿ ಚಂದ್ರನ ಕಡೆ ನೋಡಿದಳು.

"ಅದ್ರಾಗ್ ತಪ್ಪೇನೈತೆ ಮಾವ? ನಿನ್ನಂತೋರ್ ಕೇಳ್‌ಬೇಕು. ನನ್ನಂತೋರ್ ಯೇಳ್‌ಬೇಕು. ಲಾಗಾಯ್ತಿಂದ ನಡಬಗ್ಗಿಸ್ಕಂಡ್ ಬಂದಿದ್ದೀವಿ ಅಂಬ್ತ ನೆಲಮಟ್ಟ ತುಳ್ಯಾಕ್ ಬಂದ್ರೆ, ಎದ್ದು ಎದೆ ಸೆಟಸ್ಕೊಂಡು ನಿಂತ್ಕಬೇಕು. ಇಲ್ದಿದ್ರೆ ನಿಂತ್ ನೆಲಾನೆ ನಮ್ಮನ್ನ ನುಂಗ್ ಹಾಕ್ ಬಿಡ್ತೈತೆ."

ಎಂದು ಚಂದ್ರ ತನ್ನ ದೃಷ್ಟಿ–ಧೋರಣೆಗೆ ಮಾತುಕೊಟ್ಟು ಹೆಮ್ಮೆಯಿಂದ ಶಬರಿ ಕಡೆ ನೋಡಿದ.

ಆಕೆ "ಏನಾರ ತಿಂಬಾಕ್ ಮಾಡ್ಲೊ ಬರೀ ಮಾತ್ನಾಗೇ ವೊಟ್ಟೆ ತುಂಬಿಸ್ಕಂಬ್ತೀರೊ?" ಎಂದು ಕೇಳಿದಳು.

"ಮಾತ್ನಲ್ಲೆ ಹೊಟ್ಟೆ ತುಂಬೋದಾಗಿದ್ರೆ ನಮ್‌ದೇಶ ಪ್ರಪಂಚದಲ್ಲೇ ಶ್ರೀಮಂತವಾಗ್ತಿತ್ತು" ಎಂದು ಚಂದ್ರ ನಕ್ಕ.

"ಯೇ ಅದೆಲ್ಲ ನಂಗೊತ್ತಾಗಕಿಲ್ಲ. ರೊಟ್ಟಿ ಮಾಡ್ಕಂಡ್ ಬತ್ತೀನಿ. ನೀವ್ ಅಲ್ಲೀಗಂಟ ಮಾತಾಡ್ತಾ ಇರ್ರಿ" ಎಂದು ಶಬರಿ ಒಳಹೋಗಿ ರೊಟ್ಟಿಗೆ ಹಿಟ್ಟು ಕಲೆಸತೊಡಗಿದಳು. ಆದರೂ ಚಂದ್ರನ ಮಾತು ಕಿವಿ ಮೇಲೆ ಬೀಳ್ತಾ ಇತ್ತು.

"ನಾನ್ ಇಷ್ಟು ದಿನ ಬರ್ಲಿಲ್ಲ ಅಂತ ನಿಂಗ್ ಬೇಜಾರ ಮಾಮ?"

"ನಂಗ್ ಬ್ಯಾಸರ ಆದ್ರೆ ನಿಂಗೇನ್ ನೋವಾಯ್ತದ?"

"ಯೇ ಯಾಕಿಂಗಂಬ್ತೀಯ! ನಾನು ಅಂಗೆಲ್ಲ ಸದರ ಮಾಡಾನಲ್ಲ."

"ಅದು ಗೊತ್ತು ಕಣ್ಲ. ಯೇಳ್ದೆ ಕೇಳ್ದೆ ಇಂಗ್ ಮಂಗ್‌ಮಾಯ ಆದ್ರೆ ಎಂಗೆ ಅಂಬ್ತ ನಿಮ್ ಹಟ್ಟೀಗ್ ಬಂದ್ ಕೇಳಿದ್ರೆ, ನಿಮ್ಮಮ್ಮ ಇವ್ನ್ ಯಾವಾಗ್ಲು ಇಂಗೇ ಕಣಣ್ಣೋ, ಅಂಗ್ ಬತ್ತಾನೆ, ಇಂಗ್ ವೋಯ್ತಾನೆ ಅಂಬ್ತ ಕಣ್ಣಾಗ್ ಸಂಕಟ ತುಂಬ್ಕಂಡ್ ಮಾತಾಡಿದ್ಲು."

"ನೋಡು ಮಾಮ, ನಂಗೆ ಬೇಕಾದಷ್ಟು ಕೆಲ್ಸ ಐತೆ. ಅಲ್ಲಲ್ಲೆ ಗೆಣೆಕಾರ್ರು ಬೇರೆ ಅವ್ರೆ. ಆಗಾಗ್ಗೆ ಅವ್ರ್ ಹತ್ರ ಹೋಗ್ಬೇಕು. ಮಾತಾಡ್ಬೇಕು. ಕೆಲ್ಸ ಮಾಡ್ಬೇಕು."

"ನೋಡು ಮಾಮ, ನಂಗೆ ಬೇಕಾದಷ್ಟು ಕೆಲ್ಸ ಐತೆ. ಅಲ್ಲಲ್ಲೆ ಗೆಣೆಕಾರ್ರು ಬೇರೆ ಅವ್ರೆ. ಆಗಾಗ್ಗೆ ಅವ್ರ್ ಹತ್ರ ಹೋಗ್ಬೇಕು. ಮಾತಾಡ್ಬೇಕು. ಕೆಲ್ಸ ಮಾಡ್ಬೇಕು."

"ಅದೇನಪ್ಪ ಕಡ್ದು ಕಟ್ಟೆ ಆಕಾ ಅಂತ ಕೆಲ್ಸ?"

"ಅದೆಲ್ಲ ಆಮೇಲ್ ಯಾವಾಗಾರ ಹೇಳ್ತೀನಿ. ನಮ್ಮ ಲೀಡರ್ ಒಬ್ಬ ಗೆಳೆಯ ಅವ್ನೆ–ಸೂರ್ಯ ಅಂತ. ಅವ್ನನ್ನೇ ಒಂದ್ಸಾರಿ ಕರ್ಕಂಡ್ ಬತ್ತೀನಿ ಬಿಡು."

ತಿಮ್ಮರಾಯಿ ಸುಮ್ಮನಾದ. ಸ್ವಲ್ಪ ಹೊತ್ತಿನ ನಂತರ ಚಂದ್ರ ತಾನೇ ಮಾತಿಗೆ ಎಳೆದ. ತಿಮ್ಮರಾಯಿ ಸುತ್ತಿ ಬಳಸಿ ಮದುವೆ ವಿಷಯ ಎತ್ತಿದ. ಚಂದ್ರ ಮುಚ್ಚಿಟ್ಟುಕೊಳ್ಳಲಾಗದೆ "ನನ್ ಮನಸ್ನಾಗೂ ಅದೇ ಇತ್ತು ಕಣ್ ಮಾಮ" ಎಂದ.

ಶಬರಿಯ ರೊಟ್ಟಿಗಳು ಹದಗೊಂಡು ಕೂತವು. ಆದರೆ ಈ ಮಾತು ಕೇಳಿಸಿಕೊಂಡ ಮೇಲೆ ಎಂದಿಲ್ಲದ ನಾಚಿಕೆ ಬಂತು. ಇದ್ಯಾಕೆ ಹೀಗೆ? ಮಾತಿಗೆ ದಕ್ಕುವಂತಿರಲಿಲ್ಲ. ಮೆಲ್ಲಗೆ ಎದ್ದು ಹಿಂದಿನಿಂದ ಹೋಗಿ ತನ್ನ ಗೆಳತಿ ಗೌರೀನ ಕರಕೊಂಡು ಬಂದಳು. ಆಕೆಯ ಕೈಲಿ ರೊಟ್ಟಿ ಕಳಿಸಿದಳು. ಚಂದ್ರ ರೇಗಿಸಿದ– "ಯಾಕೆ? ಇವತ್ತೇನ್ ವಿಶೇಷ? ಗೌರಿ ಕೈಲಿ ರೊಟ್ಟಿ ಕಳ್ಸಿದ್ದೀಯ?"

ಶಬರಿ ಒಳಗೇ ನಕ್ಕಳು. ತಿಮ್ಮರಾಯಿ ಕೂಗಿ ಹೇಳಿದ– "ನೀನೂ ಬಾರವ್ವ"– ಅಂತ. ಗೌರಿ ಅರ್ಥಮಾಡಿಕೊಂಡಳು. ತಾನೇ ಒಳಹೋಗಿ ಶಬರೀನ ಕರಕೊಂಡು ಬಂದಳು. ಚಂದ್ರ ಹೇಳಿದ– "ಒಟ್ಟಿಗೆ ಕುಂತ್ಕಂಡು ರೊಟ್ಟಿ ತಿನ್ನಾಣ. ಒಟ್ಟಿಗೆ ಇರಾದ್ರಾಗ್ ಇರೊ ಸಂತೋಷ ಒಂಟಿ ಇರಾದ್ರಾಗ್ ಇರಲ್ಲ."

* * *

ನೆನಪು:

ಇಲ್ಲಿ ಗಾಳಿ ರೊಯ್ಯನೆ ಬೀಸಿತು.

ಒಂದೆರಡು ಎಲೆಗಳು ಮುಖಕ್ಕೆ ಬಡಿದವು.

'ಒಟ್ಟಿಗೆ ಇರಾದ್ರಾಗಿರೊ ಸಂತೋಸ ಒಂಟಿ ಇರಾದ್ರಾಗಿರಲ್ಲ.'

–ಎಂಥ ಮಾತು!

ಗುಡುಗು ಮಿಂಚುಗಳೊಂದಾಗಿ ನೆಲ ನಡುಗಿದಂತಾಯ್ತು.

ಕತ್ತಲೆ ಬೆಳಕಿನಾಟದಲ್ಲಿ ಭಯ ಬಿರಿದು ಹುಚ್ಚೀರ ಮುಚ್ಚಿಕೊಂಡ. ಆಹಾ! ಆಕಾಶವೇ, ಸೂರ್ಯ ಚಂದ್ರರಿಬ್ಬರನ್ನೂ ಇಟ್ಟುಕೊಂಡು, ನೆಲದ ಮಕ್ಕಳ ಜೊತೆ ಅದೆಂಥ ಆಟ ನಿನ್ನದು– ಎಂದೆಲ್ಲ ಕೇಳಬೇಕೆನ್ನಿಸಿತು ಶಬರಿಗೆ.

ಸದ್ದು ಗದ್ದಲವೆಲ್ಲ ಸಂತನಂತಾಗಿ ಮೋಡದಂಚಿನಲ್ಲಿ ಚಂದ್ರ ಕಾಣಿಸಿದ. ಇನ್ನೇನು ಹೊರಬಂದ ಅನ್ನೊ ಆಸೆಗೆ ಅಪ್ಪಳಿಸುವಂತೆ ಕಾರ್ಮೋಡವೊಂದು ಬೆಳದಿಂಗಳಿಗೆ ಬೀಗ ಹಾಕಿತು.

ಆದರೆ ಶಬರಿಯ ನೆನಪಿಗೆ ಬೀಗ ಹಾಕಲು ನಿಸರ್ಗಕ್ಕೆ ಸಾಧ್ಯವಾಗಲಿಲ್ಲ.

# ೨

ಅಂದು ಚಂದ್ರನೊಂದಿಗೆ ಮದುವೆ. ಗೆಣೆಕಾತಿ ಗೌರಿಗೆ ಮತ್ತು ಹುಚ್ಚೀರನಿಗೆ ಎಲ್ಲೆಯಿಲ್ಲದ ಆನಂದ. ಶಬರಿಯ ಅಂತರಂಗವನ್ನು ಬಲ್ಲ ಗೌರಿ ಒಂದು ಕಡೆ, ಮೂಕನಾಗಿದ್ದೂ ಮೌನದಲ್ಲೇ ಮಾತು ಮೀಟುವ ಹುಚ್ಚೀರ ಇನ್ನೊಂದು ಕಡೆ. ಹಟ್ಟಿಯಲ್ಲಿ ಹುಚ್ಚೀರನದೊಂದು ಮುರುಕಲು ಗುಡಿಸಲು ಇದೆ– ಅವನ ಬಾಳಿನಂತೆ. ಮೈಮೇಲೆ ಹರಿದ ಅಂಗಿಯಿದೆ– ಅವನ ಹಾದಿಯಂತೆ. ಕೆದರಿದ ಕೂದಲು– ಮನದಾಳದಂತೆ. ಹಿಂದೆ ಮುಂದೆ ಯಾರೂ ಇಲ್ಲದ ಹುಚ್ಚೀರ ಅವರಿವರ ಕೆಲಸ ಮಾಡಿ ಅನ್ನಕ್ಕೆ ಕೈಯ್ಯೊಡ್ಡುವುದನ್ನು ಕಂಡ ಶಬರಿ ತನ್ನ ಮನೇಲೆ ದಿನಾ ಉಂಡು ಹೋಗಲು ಹೇಳಿದ್ದಳು. ಆದರೂ ಈ ಆಹ್ವಾನವನ್ನು ದುರುಪಯೋಗ ಮಾಡಿಕೊಳ್ಳದ ಹುಚ್ಚೀರ ಬೇರೆಯವರ ಕೆಲಸ ಮಾಡೋದು ನಿಲ್ಲಿಸಲಿಲ್ಲ. ಕಡೆಗೆ ಶಬರಿ ಗದರಿದಳು. 'ನೀನು ಅನಾತ ಅಂದ್ಕಾಬ್ಯಾಡ. ನೀನು ಅನಾತ ಅನ್ನಂಗಿದ್ರೆ ನಾನೂ ಅನಾತೇನೆ. ಸುಮ್ಕೆ ನಮ್ಮನೆ ತಾವ್ ಬಾ ಉಂಬಾಕೆ" ಎಂದಳು. ಅಂದಿನಿಂದ ಸ್ವಲ್ಪ ಹೆಚ್ಚು ಬರತೊಡಗಿದ್ದ. ಶಬರಿಗೆ ಬೆಂಗಾವಲಿನಂತೆ ಇದ್ದ. ತಂಗಿಯಂತೆ ಭಾವನೆ ಮಾಡ್ಕೊಂಡು ಅವಳಿಗಾಗಿ ತುಡೀತಾ ಇದ್ದ. ಆದ್ದರಿಂದ ಆತನಿಗೆ ಆನಂದ ಆಗಲೇಬೇಕಲ್ಲವೆ?

ತಿಮ್ಮರಾಯಿ ಗೌರಿಗೆ ಹೇಳಿದ್ದ–'ನೋಡಮ್ಮ ನೀನು ಚಿಕ್ಕೋಳಿರಬವ್ದು, ಆದ್ರೆ ನಮ್ ಶಬರೀಗೆ, ನೀನೇ ತಂಗಿ, ತಮ್ಮ, ಬಂದು, ಬಳಗ, ಎಲ್ಲಾ ಅಂಬ್ತ ತಿಳ್ಕಂಡು ಮದ್ವೆ ಕೆಲ್ಸ ಮಾಡ್ಬೇಕು ಕಣವ್ವ."

ಗೌರಿ "ಇದನ್ನೆಲ್ಲ ನಿನ್ತಾವೇಳಿಸ್ಕಬೇಕಾ? ನೀನ್ ಸುಮ್ಕೆ ನಿಸೂರಾಗ್ ಇದ್‌ಬಿಡು. ನಾನಿವ್ನಿ" ಎಂದು ಹೇಳಿದ್ದನ್ನು ಚಾಚೂ ತಪ್ಪದೆ ನೆರವೇರಿಸಿದ್ದಳು.

ಇನ್ನು ಪೂಜಾರಪ್ಪನದು ಒಣದರಬಾರು. ಅದು ಹಂಗೆ, ಇದು ಹಿಂಗೆ ಅಂತ ತಲೆ ಕೆಡಸೋದೇ ಭಾಗ್ಯ ಅಂತ ಭಾವಿಸಿದಂತಿತ್ತು ಆತ. ಚಂದ್ರ ಈತನ ಆದೇಶಗಳಿಗೆ ಸೊಪ್ಪು ಹಾಕೊ ಹಾಗೆ ಕಾಣಲಿಲ್ಲವಾದ್ದರಿಂದ ಸಿಡಿಮಿಡಿ ಜಾಸ್ತಿಯಾಗಿತ್ತು.

"ಎಲ್ಡಕ್ಸರ ಕಲ್ತ್ ಬಿಟ್ರೆ ನನ್ನಂಗ್ ಮಂತ್ರ ಯೇಳಾಕಾಯ್ತದ" ಎಂದು ಗೊಣಗುವ ಪೂಜಾರಪ್ಪ ಹುಚ್ಚೀರನಿಗೆ ತಮಾಷೆಯಾಗಿ ಕಾಣ್ತಿದ್ದ.

ಮದುವೆ ಸಮಯ ಬಂದೇ ಬಿಡ್ತು. ಬುಡಕಟ್ಟಿಗೆ ತಕ್ಕಂತೆ ಶಬರಿಗೆ ಅಲಂಕಾರವಾಗಿತ್ತು. ಕುಪ್ಪಸವಿಲ್ಲದೆ ಸೀರೆ ಉಟ್ಟು ಎದೆ ಮುಚ್ಚಿಕೊಂಡಿದ್ದ ಚೆಲುವೆಗೆ ನಾನಾ ಲೋಹದ ಸರಗಳು; ದಂತದ ಆಭರಣಗಳು. ಕಪ್ಪನೆ ಕೂದಲಲ್ಲಿ ಕೂತ ಬೆಳ್ಳನೆ ಹೂಗಳು. ಹೊಸ ಓಲೆ, ಮೂಗುತಿ. ಹೊಸ ಆಸೆ ಹೊತ್ತ ಮೂರುತಿ! ಬುಡಕಟ್ಟಿನ ಬೆಳಕಂತೆ ಕಾಣುವ ಚಂದಗಾತಿ!

ಚಂದ್ರ ಸರಳವಾಗಿದ್ದ. ಮದುವೆಯ ಹಿಂದಿನ ರಾತ್ರಿಯೇ ಹೆಣ್ಣಿನ ಹಟ್ಟಿಗೆ ಬಂದು ಹತ್ತಿರದ ಮಂಟಪದಲ್ಲಿ ಬೀಡುಬಿಡಬೇಕು. ಅದರಂತೆ ಬಂದು ಬೀಡು ಬಿಟ್ಟಿದ್ದಾಗಿತ್ತು. ತಾಳಿ ಕಟ್ಟೊ ಸಮಯ ಹತ್ತಿರ ಬರ್ತಾ ಇದ್ದಾಗ ಇವನಿಗೂ ಅದೂ ಇದೂ ಅಲಂಕಾರ ಮಡಲು ಬಂದರು. 'ನಂಗೇನೂ ಬೇಡ. ಪಂಚೆ, ಷರಟು ಅಷ್ಟೇ ಸಾಕು' ಎಂದು ಹಟಮಾಡಿ ಗೆದ್ದ. ಕಡೆಗೆ ಹಣೆಗೊಂದು ಬಾಸಿಂಗ ಕಟ್ಟಿಸಿಕೊಳ್ಳಲೇಬೇಕಾಯ್ತು.

ಹೆಣ್ಣಿನ ಮನೆ ಮುಂದಕ್ಕೆ ಕರೆದೊಯ್ಯಲು ವಾಲಗ ಸಮೇತ ಹೆಣ್ಣಿನ ಕಡೆಯೋರು ಬಂದರು. ಚಂದ್ರ ಹೊರಡಲಿಲ್ಲ. ಸ್ವಲ್ಪ ದೂರ ಹೋಗ್ತಾ ಇದ್ದ; ದಾರಿ ನೋಡ್ತಾ ಇದ್ದ; ವಾಪಸ್ ಬರ್ತಾ ಇದ್ದ. ಒಟ್ಟಾರೆ ಚಡಪಡುಸ್ತಾ ಇದ್ದ. ಯಾಕಿಂಗ್ ಮಾಡ್ತಿದ್ದಾನೆ ಅಂತ ಹೆಣ್ಣಿನ ಕಡೆಯೋರಿಗೆ ಅನುಮಾನ ಬಂತು. ಚಂದ್ರನ ತಾಯಿಗೆ ತಾಕೀತು ಮಾಡಿದರು. ಆಕೆ ಚಂದ್ರನ ಹತ್ತಿರಬಂದು "ಯಾಕೊ ಇಂಗ್ ಮಾಡ್ತಿದ್ದೀಯ? ಏನಾಗೈತೊ ನಿಂಗೆ? ತಾಳಿ ಕಟ್ಟೊವೊತ್ತು ಅತ್ರಕ್ ಬತ್ತಾ ಐತೆ. ಇಂಗೆಲ್ಲ ಮಾಡಿದ್ರೆ ಎಂಗೆ?" ಎಂದು ಗದರಿದಾಗ, "ಬರ್ತೀನ್ ಇರಮ್ಮ. ತಾಳಿ ಕಟ್ಟಾಕ್ ಯಾವ್ ಹೊತ್ತಾದ್ರೇನು. ನಂಗೆ ನನ್ನ ಗೆಣೆಕಾರ್ರು ಬರ್ಬೇಕು. ನಮ್ ಲೀಡರ್ರು ಸೂರ್ಯ ಬರ್ಬೇಕು" ಎಂದು ಚಂದ್ರ ಸಮಜಾಯಿಷಿ ನೀಡಿದ. ತಾಯಿ ಬಿಡಲಿಲ್ಲ. "ಹೆಣ್ಣಿನ ಮನೆತಾವ್‌ವೋಗಿ ಅಲ್ ಕಾದ್ರಾತು ಬಾ" ಎಂದು ಕರೆದೊಯ್ದರು. ಇದೆಲ್ಲ ಗಮನಿಸಿದ ಹುಚ್ಚೀರ ನಿಟ್ಟುಸಿರುಬಿಟ್ಟ.

ಗಂಡು, ಹೆಣ್ಣಿನ ಮನೆಯ ಹತ್ತಿರ ಬಂದಿದ್ದಾಯಿತು. ಮನೆ ಮುಂದೆಯೇ ತೆರೆಹಿಡಿದು ತಾಳಿ ಕಟ್ಟಿಸುವ ತಯಾರಿ ನಡೀತು. ಚಂದ್ರ ಚಕ್ಕನೆ ಅಲ್ಲಿಂದ ಹೊರಟ. ಹುಚ್ಚೀರ ಹಿಂದೆಯೇ ಹೋದ. ದೂರದ ದಾರಿ ನೋಡಿದ ಚಂದ್ರನಿಗೆ ನಿರಾಶೆ. ಹುಚ್ಚೀರ ಕೈಹಿಡಿದು ಕರೆತಂದ. ಇಲ್ಲಿ ಪೂಜರಪ್ಪ ಸಿಡಿಮಿಡಿಯಾಗಿದ್ದ. "ಇಂಗೆಲ್ಲ ಮಾಡಿದ್ರೆ ನಾನು ಮಂತ್ರ ಯೇಳಾಕೇ ಇಲ್ಲ" ಎಂದ. ಚಂದ್ರ ಸುಮ್ಮನಿರಲಿಲ್ಲ– "ಸದ್ಯ ಅಷ್ಟು ಮಾಡು. ನನ್ನಾರಕ್ ನಾನ್ ತಾಳಿಕಟ್ತೀನಿ. ನಮ್ಮಿಬ್ರ ಮನಸ್ನಾಗೆ ಆಗ್ಲೆ ಮಂತ್ರ ಹೇಳಿದ್ದಾಗೈತೆ" ಎಂದ. ಪೂಜಾರಪ್ಪ ತಬ್ಬಿಬ್ಬಾದ. ತಿಮ್ಮರಾಯಿ

ಕಡೆ ನೋಡಿ "ನಂಗೆ ಇಂಗೆಲ್ಲ ಅವ್ಮಾನ ಮಾಡಿದ್ರೆ ಸರ್ ಕಾಣಾಕಿಲ್ಲ. ಒಸಿ ಬುದ್ದಿಯೇಳು ಈ ಬಡ್ಡೆತ್ಗೆ" ಎಂದ. ತಿಮ್ಮರಾಯಿ ಚಂದ್ರನಿಗೆ "ಯಾಕಪ್ಪ ಅಂಗೆಲ್ಲ ಮಾತಾಡ್ತೀಯ. ಒಳ್ಳೆ ವ್ಯಾಳೇನಾಗೆ ಒಳ್ಳೆ ಮಾತಾಡ್‌ಬೇಕಪ್ಪ" ಎಂದು ಹೇಳಿದಾಗ "ಅಂಗಲ್ಲ ಮಾಮ, ನಮ್ ಲೀಡರ್ರು ಸೂರ್ಯ ಬರಾತಂಕ ನಾನ್ ತಾಳಿಕಟ್ಟಾಕಿಲ್ಲ. ಅದ್ಕೇ ಸ್ವಲ್ಪ ಹೊತ್ತು ಕಾಯ್ಬೇಕು" ಎಂದು ಚಂದ್ರ ಒತ್ತಾಯಿಸಿದ. ತಿಮ್ಮರಾಯಿ ಸುಮ್ಮನಾಗಲಿಲ್ಲ. "ತಾಳೀನ ಸರ್ರ್ಯಾದ್ ವ್ಯಾಳೇಗ್ ಕಟ್ಟೇಕು ಕಣಪ್ಪ. ಅವ್ರು ತಡವಾಗ್ ಬಂದ್ರೆ, ರಾತ್ರಿ ಹೆಣ್ಣು ಗಂಡು ಕೂಡುಸ್ತೀವಲ್ಲ, ಅವಾಗ ನಿನ್ ಜತ್ಯಾಗಿದ್ದೇ ಇರ್ತಾರೆ. ಇವಾಗ್ ಇಂಗೆಲ್ಲ ಆಡ್‌ಬ್ಯಾಡ ಕಣಪ್ಪ" ಎಂದು ಹೇಳಿದಾಗ ಆತ ಅಂಗಲಾಚುತ್ತಿರುವಂತೆ ಕೇಳಿಸಿತು. ಚಂದ್ರ ಸರಿಯೆಂದು ಒಪ್ಪಿದ. ಪೂಜಾರಪ್ಪನಿಗೆ "ನಿಮ್ ಮಂತ್ರಗಿಂತ್ರ ಜಾಸ್ತಿ ಮಾಡ್ ಬ್ಯಾಡ್ರಿ" ಎಂದು ಅವಡುಗಚ್ಚಿ ಹೇಳಿದ. ಪೂಜಾರಪ್ಪ "ಎಲ್ಲಾ ನಂಗೊತ್ತು ಕಣ್ಲಾ" ಎಂಬಂತೆ ನೋಡಿದ.

ಮದುವೆಯಾಯಿತು.

ಚಂದ್ರನ ಚಡಪಡಿಕೆ ನಿಲ್ಲಲಿಲ್ಲ. ತನ್ನ ಗೆಳೆಯರೊಂದಿಗೆ ಬಂದೇ ಬರುವುದಾಗಿ ಹೇಳಿದ್ದ ಸೂರ್ಯ ಬಂದಿರಲಿಲ್ಲ.

ಸೂರ್ಯ, ಚಂದ್ರನಿಗೆ ಮಾರ್ಗದರ್ಶಿಯಾಗಿ ಮಾರ್ಪಟ್ಟಿದ್ದ. ಇವರ ಪರಿಚಯ ಹಳೆಯದೇನೂ ಅಲ್ಲ. ತೀರಾ ಇತ್ತೀಚಿನದು. ಒಮ್ಮೆ ಬೆಟ್ಟ ಗುಡ್ಡಗಳ ನಡುವೆ ಇದ್ದಕ್ಕಿದ್ದಂತೆ ಕಾಣಿಸಿಕೊಂಡ ಸೂರ್ಯ, ತನ್ನ ಗೆಳೆಯರೊಂದಿಗೆ ಚಂದ್ರನ ಪರಿಚಯ ಮಾಡಿಕೊಂಡ. ಬುಡಕಟ್ಟುಗಳ ಸ್ಥಿತಿಗತಿ ತಿಳಿದುಕೊಂಡ. ತಮ್ಮ ಜೊತೆ ಕೆಲಸ ಮಾಡುವಂತೆ ಚಂದ್ರನ ಮನವೊಲಿಸಿದ. ಅಂದಿನಿಂದ ಚಂದ್ರ ಬೇರೆ ವ್ಯಕ್ತಿಯೇ ಆಗಿದ್ದ. ಆಗಾಗ್ಗೆ ಹಟ್ಟಿ ಬಿಟ್ಟು ಹೋಗುತ್ತಿದ್ದ. ಬಂದವನು ಬುಡಕಟ್ಟಿನೋರು ಹೇಗೆ ಬಾಳಬೇಕು ಅಂತ ಹೇಳ್ತಾ ಇದ್ದ. ಊರ ಒಡೆಯರನ್ನು ಕಂಡ್ರೆ ಸಿಡುಕ್ತಾ ಇದ್ದ. ಇವೆಲ್ಲದರ ಆರಂಭದ ದಿನಗಳಲ್ಲೇ ಈ ಮದುವೆ ಆಗಿತ್ತು.

ರಾತ್ರಿ ವೇಳೆಗಾದರೂ ಸೂರ್ಯ ಬರಬಹುದೆಂದು ಚಂದ್ರ ನಿರೀಕ್ಷಿಸಿದ. ತಾನು ಚಂದ್ರ–ರಾತ್ರಿಯ ರಾಜ. ಆತ ಸೂರ್ಯ–ಹಗಲಿನ ಒಡೆಯ. ಆದರೆ ಆತ ತನ್ನನ್ನು ಭೇಟಿ ಮಾಡಲು ಬಯಸ್ತಾ ಇದ್ದದ್ದು ಮಾತ್ರ ರಾತ್ರಿ ಹೊತ್ತಿನಲ್ಲೇ. ಇದು ಮೊದಮೊದಲು ಆಶ್ಚರ್ಯ ತಂದಿತ್ತಾದರೂ ಆಮೇಲೆ ಚಂದ್ರನಿಗೆ ಅರಿವಾಯಿತು– ಸೂರ್ಯನ ಭೇಟಿ ರಾತ್ರಿ ಹೊತ್ತೇ ಸರಿ– ಅಂತ.

ರಾತ್ರಿಯಾಯಿತು.

ಹೆಣ್ಣು–ಗಂಡನ್ನು ಕೂಡಿಸಿ ಆರತಿ ಬೆಳಗುವ ಆಚರಣೆ. ಆಗ 'ಮುಯ್ಯಿ'

ಕೊಡೋರೆಲ್ಲ ಕೊಡಬಹುದು. ಕೆಲವರು ಬಟ್ಟೆ ಕೊಡುಗೆ ಕೊಡ್ತಿದ್ದರು. ಇನ್ನು ಕೆಲವರು ಹಣ ತಟ್ಟೇಲಿ ಇಟ್ಟು ಕೊಡೋರು. ತಮಗೆ ಇಷ್ಟವಾದ 'ಮುಯ್ಯಿ' ಒಪ್ಪಿಸೋಕೆ ಇದೇ ಸಂದರ್ಭ. ಹೆಂಡತಿ ಪಕ್ಕದಲ್ಲಿ ಕೂತಿದ್ದರೂ ಚಂದ್ರನಲ್ಲಿ ಚಡಪಡಿಕೆ.

ಬೆಳದಿಂಗಳ ತಂಪಿನ ಬದಲು ಚಂದ್ರನಿಗೆ ಬಿಸಿಲಿನ ಬೇಗೆ.
ಮೇಲ್ನೋಟಕ್ಕೆ ನಗೆಯಿದ್ದರೂ ಒಳಗೆಲ್ಲ ಹೊಗೆ.
ಉಸಿರು ಕಟ್ಟುತ್ತಿರುವ ಮನಸ್ಥಿತಿ.
ಹಗ್ಗದ ಕುಣಿಕೆಯಲ್ಲಿ ಸಿಕ್ಕಿಬಿದ್ದ ನಿರೀಕ್ಷೆಯ ನೋಟ.

ಚಂದ್ರ ಮೇಲೇಳಲು ತವಕಿಸಿದ. ಶಬರಿ ಭದ್ರವಾಗಿ ಕೈಹಿಡಿದುಕೊಂಡಳು. ಚಂದ್ರ ಆಕೆಯ ಮುಖ ನೋಡಿದ. ಏಳುವುದು ಬೇಡ ಎಂಬ ಬೇಡಿಕೆ ಮನೆ ಮಾಡಿತ್ತು. ಚಂದ್ರ ಕೂತಿದ್ದ ಕಟ್ಟೆಯನ್ನು ಬಿಟ್ಟು ಏಳಲಿಲ್ಲ. ಹತ್ತಿರದಲ್ಲೇ ಇದ್ದ ಹುಚ್ಚೀರನನ್ನು ಸನ್ನೆ ಮಾಡಿ ಕರೆದ. ಆ ಕಡೆ ಹೋಗಿ ತನ್ನ ಗೆಳೆಯರು ಬರುತ್ತಿದ್ದಾರೆಯೆ ನೋಡುವಂತೆ ಸನ್ನೆಯಲ್ಲೇ ಹೇಳಿದ. ಹುಚ್ಚೀರ ಹೋದ. ನಿಂತ; ನೋಡಿದ; ಚಡಪಡಿಸಿದ– ಚಂದ್ರನಂತೆ. ಯಾರೂ ಬರಲಿಲ್ಲ– ದೂರದಲ್ಲಿ ಯಾರೋ ಲಾಟೀನು ಹಿಡಿದು ಬರುತ್ತಿರುವುದು ಕಾಣಿಸಿತು. ಓಡಿ ಬಂದ. ಚಂದ್ರನಿಗೆ ಸನ್ನೆ ಮಾಡಿ ಹೇಳಿದ.

ಚಂದ್ರ ಸಂತೋಷಗೊಂಡ; ನಿರಾಳವಾದ; ಬೆಳದಿಂಗಳಾದ.
ಶಬರಿಗೆ ತಂಗಾಳಿಯಾದ.
ಲಾಟೀನು ಹಿಡಿದವರು ಬಂದರು.
ಪೂಜಾರಪ್ಪ ಸಂಭ್ರಮಿಸಿದ.
ಚಂದ್ರ ದಿಗ್ಭ್ರಮೆಗೊಂಡ.
ಹುಚ್ಚೀರ ಬೆಪ್ಪಾಗಿ ತಲೆತಗ್ಗಿಸಿದ.
ಎಲ್ಲರೂ ಎದ್ದು ನಿಂತರು.
ಚಂದ್ರ ಕೂತಲ್ಲೇ ಕೂತು ನಿರಾಶೆಯನ್ನು ನುಂಗಿಕೊಂಡ.

ಇವರು ಬರುವ ವೇಳೆಗಾದರೂ ಸೂರ್ಯ ತನ್ನ ಸಹಾಯಕ್ಕೆ ಬರಬೇಕೆಂದು ನಿರೀಕ್ಷಿಸಿದ್ದ. ಸೂರ್ಯ ಬರಲಿಲ್ಲ. ಆತನ ಬದುಕೇ ಅಡ್ಡಿ ಆತಂಕಗಳ ಗುಡ್ಡೆ. ಏನಾಯಿತೊ ಏನೊ? ಈಗ ಬಂದಿದ್ದಾರೆ– ಊರ ಒಡೆಯರು!

ಚಂದ್ರ ಯಾವುದನ್ನು ಬೇಡವೆಂದುಕೊಂಡಿದ್ದನೊ, ಯಾವುದನ್ನು ವಿರೋಧಿಸಬೇಕೆಂದುಕೊಂಡಿದ್ದನೊ ಆ ಪ್ರಸಂಗಕ್ಕೆ ಮುನ್ನುಡಿ ಬರೆಯಲು ಊರ ಒಡೆಯರು ಬಂದು ನಿಂತಿದ್ದರು. ಒಬ್ಬ– ನರಸಿಂಹರಾಯಪ್ಪ ಇನ್ನೊಬ್ಬ– ರಾಮಾಜೋಯಿಸ. ಜೊತೆಗೆ ಬೆಂಗಾವಲ ಭಟರು!

ಚಂದ್ರನಿಗೆ ಕಸಿವಿಸಿ. ಆದರೆ ಬುಡಕಟ್ಟಿನ ಜನಕ್ಕೆ ಖುಷಿ!

ಊರ ಒಡೆಯರ ಪಾದ ತಮ್ಮ ಹಟ್ಟಿಗೆ ಬಂದಿದೆ. ಅದೂ ಹೆಣ್ಣನ್ನು ಸಂಪ್ರದಾಯದಂತೆ ದೇವಸ್ಥಾನಕ್ಕೆ ಆಹ್ವಾನಿಸುವುದಕ್ಕೆ. ರೇಷ್ಮೆ ಸೀರೆ, ಕುಪ್ಪಸದ ಬಟ್ಟೆ, ವೀಳ್ಯದೆಲೆ, ಅರಿಸಿನ ಕುಂಕುಮಗಳನ್ನು ತಟ್ಟೆಯಲ್ಲಿಟ್ಟು ಹೆಣ್ಣಿಗೆ ಒಪ್ಪಿಸಿ ದೇವಾಲಯಕ್ಕೆ ಬಂದು ಮೊದಲ ರಾತ್ರಿಯನ್ನು ದೇವರ ಜೊತೆ ಕಳೆಯಬೇಕೆಂದು ಕೇಳಿಕೊಳ್ಳುವುದಕ್ಕೆ.

ಹೌದು; ಇದೊಂದು ಸಂಪ್ರದಾಯ. ಲಾಗಾಯ್ತಿಂದ ಈ ಬುಡಕಟ್ಟಿನವರು ನಡೆಸಿಕೊಂಡು ಬಂದ ಪದ್ಧತಿ. ಹಿಂದೆ ರಾಜರ ಕಾಲದಿಂದಲೂ ಈ ಪದ್ಧತಿ ಇದೆಯೆಂದು ಪ್ರತೀತಿ. ಆಗ ಸ್ವತಃ ರಾಜನೇ ಮಂತ್ರಿ ಸಮೇತ ಬಂದು ಬುಡಕಟ್ಟಿನ ಹೆಣ್ಣನ್ನು ಹೀಗೆ ಆಹ್ವಾನಿಸುತ್ತಿದ್ದನಂತೆ. ಮದುವೆಯಾದ ಬುಡಕಟ್ಟಿನ ಹೆಣ್ಣು ತನ್ನ ಮೊದಲ ರಾತ್ರಿಯನ್ನು ದೇವಾಲಯದಲ್ಲಿ ಕಳೆಯಬೇಕು. ಅಲ್ಲಿ ಗರ್ಭಗುಡಿಯಿಂದ ಬರುವ ದೇವರಿಗೆ ತನ್ನನ್ನು ಒಪ್ಪಿಸಿಕೊಳ್ಳಬೇಕು. ಮೊದಲ ರಾತ್ರಿಯನ್ನು ದೇವರೊಂದಿಗೆ ಕಳೆದ ಮೇಲೆ ಗಂಡನೊಂದಿಗೆ ಸಂಸಾರ. ಇದು ಹಿಂದಿನಿಂದ ನಡೆದುಕೊಂಡು ಬಂದ ನಂಬಿಕೆ. ದೇವಾಲಯಕ್ಕೆ ಹೋಗಿ ಬಂದ ಹೆಣ್ಣುಗಳೆಲ್ಲ ಗರ್ಭಗುಡಿಯಿಂದ ದೇವರು ಬಂದಂತಾಯ್ತು; ತನ್ನೊಂದಿಗೆ ಮಲಗಿ ಸುಖ ಕೊಟ್ಟಿದ್ದಾಯ್ತು. ದೇವರ ಕೃಪೆ ತನ್ನ ಮೇಲೆ ಬಿತ್ತು–ಎಂದೇ ಹೇಳುತ್ತಿದ್ದರು. ಹಿಂದಿನ ರಾಜವಂಶದ ಈಗಿನ ಕುಡಿ ಎಂದು ಹೇಳಿಕೊಳ್ಳುವ ನರಸಿಂಹರಾಯಪ್ಪ, ಜೋಯಿಸರ ಸಮೇತ ಬಂದು ಹೆಣ್ಣಿಗೆ ಬಾಗಿನ ಕೊಡುತ್ತಾನೆ. ಇದನ್ನು ಬುಡಕಟ್ಟಿನ ಜನರು ತಮಗೆ ಸಲ್ಲುವ ಗೌರವವೆಂದೇ ಭಾವಿಸಿಕೊಳ್ಳುತ್ತಾರೆ. ಈ ಪದ್ಧತಿಯ ಸತ್ಯಾಸತ್ಯತೆಯ ಶೋಧ ಅವರಿಗೆ ಬೇಕಾಗಿಲ್ಲ. ಯಾಕೆಂದರೆ ಇದು ಅವರಮಟ್ಟಿಗೆ ದೈವಕೃಪೆ! ದೇವರ ಕರುಣೆ!

ದೇವರ ಪ್ರತಿನಿಧಿಯಾಗಿ ಅಂದು ರಾಜ; ಇಂದು ನರಸಿಂಹರಾಯಪ್ಪ!

ಇದಕ್ಕೆ ಸಾಕ್ಷಿಯಾಗಿ ಅಂದು ಮಂತ್ರಿ: ಇಂದು ಜೋಯಿಸ!

ಈ ಪದ್ಧತಿಯನ್ನು ತನ್ನ ಮದುವೆಯ ಸಂದರ್ಭದಲ್ಲಿ ವಿರೋಧಿಸಬೇಕೆಂಬ ಅಭಿಲಾಷೆ ಚಂದ್ರನದು. ಅದಕ್ಕಾಗಿ ಸೂರ್ಯನ ಸಹಾಯ ಕೇಳಿದ್ದ.

ಚಂದ್ರನ ಆಸೆಯಂತೆ ಸೂರ್ಯ ಬರಲಿಲ್ಲ!

ಪದ್ಧತಿಯ ಪ್ರಾರಂಭಕ್ಕೆ ಅಡ್ಡಿಯಾಗಲಿಲ್ಲ.

ಚಂದ್ರ, ಚಡಪಡಿಕೆಯಲ್ಲಿ ಜರ್ಝರಿತನಾದ.

ನರಸಿಂಹರಾಯಪ್ಪ ಶಬರಿಗೆ ಸೀರೆ ಕೊಡುವಾಗ ತಡೆಯಬೇಕೆಂದು ಕೊಂಡ. ಯಾಕೊ ತಾನೊಬ್ಬ ಒಂಟಿ ಎನ್ನಿಸಿತು. ಉರಿಯುತ್ತಲೇ ಒಳಗೆ ಬೂದಿಯಾಗುವ ಅನುಭವ. ಬೂದಿಯಿಂದ ಎದ್ದು ಬರಬೇಕು ಎಂದು ಕೊಳ್ಳುತ್ತಿರುವಾಗ ಶಬರಿ ಎದ್ದಳು; ನರಸಿಂಹರಾಯಪ್ಪ ಮತ್ತು ಜೋಯಿಸರ ಪಾದಗಳಿಗೆ ನಮಸ್ಕರಿಸಿದಳು. ಚಂದ್ರ ಮುಖ ತಿರುಗಿಸಿಕೊಂಡು ಕೂತ. ಪೂಜಾರಪ್ಪ ಇದನ್ನು ಗಮನಿಸಿ ಹೇಳಿದ– "ಚಂದ್ರ, ಒಡೇರ್ ಕಾಲ್ಗೆ ನೀನೂ ಬೀಳ್‌ಬೇಕು."

ಚಂದ್ರ ಉರಿದು ಮುಕ್ಕುವಂತೆ ನೋಡಿದ.

"ಎನ್ ಅಂಗ್ ನೋಡ್ತೀಯ? ಲಾಗಾಯ್ತಿಂದ ನಡ್ಕಂಡ್ ಬಂದಿರಾದ್ನ ಬಿಡಾಕಾಗಲ್ಲ. ಕಾಲಿಗ್ ಬೀಳು"– ಪೂಜಾರಪ್ಪ ಒತ್ತಾಯಿಸಿದ.

"ಬೀಳಲ್ಲ ಅಂದ್ರೆ ಏನ್ ಮಾಡ್ತೀಯ?"

–ಚಂದ್ರ ಸ್ಫೋಟಗೊಂಡ.

ಎಲ್ಲರೂ ಒಂದು ಕ್ಷಣ ತಬ್ಬಿಬ್ಬಾದರು.

ಆದರೆ ಪೂಜಾರಪ್ಪ ಸುಮ್ಮನಿರಲಿಲ್ಲ. ಸಿಡಿದು ನುಡಿದ–

"ನೀನ್ ಇಂಗೆಲ್ಲ ಮಾತಾಡಿದ್ರೆ ರಕ್ತ ಕಾರ್ಕಂಡು ಸತ್ತೋಗ್ತೀಯ"

"ಕಟ್ಕೊಂಡ್ ಹೆಂಡ್ತೀನ ಕಂಡೋರ್ ಮಗ್ಗಲಾಗ್ ಮಲುಗ್ಸಾ ಬದ್ಲು ಒಟ್ಟಿಗೇ ಸಾಯೋದೆ ವಾಸಿ"– ಚಂದ್ರ ಎದುರಾಡಿದ.

"ದ್ಯಾವ್ರನ್ನೇ, ಕಂಡೋರ್ ಗಿಂಡೋರು ಅಂಬ್ತ ಮಾತಾಡ್ತೀಯಲ್ಲ. ನಿನ್ ನಾಲ್ಗೆ ಸೇದೋಗ"– ಪೂಜಾರಪ್ಪ ಅಬ್ಬರಿಸಿದ.

"ಕಂಡೋರ್ ಹೆಂಡ್ತೀರ ಜತೆ ಮಲ್ಗೋನು ಅದೆಂಥ ದೇವ್ರು? ಇದೆಲ್ಲ ಮೂಢನಂಬಿಕೆ. ನನ್ ಹೆಂಡ್ತೀನ್ ನಾನು ದೇವಸ್ಥಾನಕ್ಕೆ ಕಳ್ಸೊಲ್ಲ."

–ಚಂದ್ರನ ಈ ಮಾತಿನಿಂದ ಎಲ್ಲರೂ ಗರಬಡಿದಂತೆ ನಿಂತರು.

ತಿಮ್ಮರಾಯಿ ಮೆಲ್ಲನೆ ಚಂದ್ರನ ಬಳಿ ಬಂದು ಹೇಳಿದ.

"ಸರ್‍ಯೊ ತಪ್ಪೊ ಲಾಗಾಯ್ತಿಂದ ನಡ್ಕಂಡ್ ಬಂದೈತೆ. ಊರು ಒಡೇರ್ ಮುಂದೆ ಇಂಗೆಲ್ಲ ಮಾತಾಡ್‌ಬ್ಯಾಡ ಮಗ."

ಚಂದ್ರ ಅದೇ ಸಿಟ್ಟಿನಲ್ಲಿದ್ದ. ಈ ಸಿಟ್ಟು ಆಕಸ್ಮಿಕವಾದದ್ದಲ್ಲ. ಸೂರ್ಯನ ಜೊತೆ ಸೇರಿದ ಮೇಲೆ ಬಂದ ತಿಳುವಳಿಕೆಯಿಂದ ಮೂಡಿದ ಸಿಟ್ಟು.

"ಲಾಗಾಯ್ತಿಂದ ಬಂದೈತೆ ಅಂತ ಕಣ್ಮುಚ್ಕಂಡು ಕಂಡೋರ್ ಮಗ್ಗಲೀಗೆ ಮಗಳನ್ನ ಕಳುಸ್ತಿಯೇನು?"

ಚಂದ್ರನ ಪ್ರಶ್ನೆಗೆ ತಿಮ್ಮರಾಯಿ ಸಿಡಿಮಿಡಿಗೊಂಡ–

"ಏನಂಬ್ತ ಮಾತಾಡ್ತೀಯ ನೀನು. ದ್ಯಾವ್ರನ್ನೇ ಕಂಡೋರು ಗಿಂಡೋರು ಅಂಬ್ತೀಯೇನು? ನೀನೇನ್ ದ್ಯಾವ್ರಿಗಿಂತ ದೊಡ್ಡೋನ? ನೀನ್ ಈಟೊಂದೆಲ್ಲ ಮಾತಾಡಿದ್ರೆ ನಾನು ನನ್ ಮಗಳನ್ನ ಪೂರ್ತ ದ್ಯಾವ್ರಿಗೇ ಬಿಟ್ ಬಿಡ್ತೀನಿ."

ಈಗ ಶಬರಿ ಬೆಚ್ಚಿದಳು.

ಮೈಮೇಲೆ ಬೆಂಕಿ ಬಿದ್ದಂಥ ಅನುಭವ!

"ಏನ್ ಮಾತು ಅಂಬ್ತ ಆಡ್ತೀಯಪ್ಪ ನೀನು?"

–ಶಬರಿಯ ಬಾಯಲ್ಲಿ ಈ ಮಾತು ಬಂದದ್ದೇ ತಡ ತಿಮ್ಮರಾಯಿ ತಬ್ಬಿಬ್ಬಾದ.

"ದ್ಯಾವ್ರಿಗ್ ಬಿಡಾಕೆ ನನ್ನ ಏನು ಅಂಬ್ತ ತಿಳ್ಕಂಡಿದ್ದೀಯ?"

ಮಗಳ ಪ್ರಶ್ನೆಗೆ ಸರಿಯಗಿ ಉತ್ತರ ಕೊಡಲಾಗದೆ ತಿಮ್ಮರಾಯಿ ತಡವರಿಸುತ್ತ ಹೇಳಿದ– "ಅಂಗಲ್ಲ ಕಣವ್ವ, ಲಾಗಾಯ್ತಿಂದ ನಡ್ಕಂಡ್ ಬಂದಿರಾದ್ನ ಕೈಬಿಟ್ರೆ ಒಂದೋಗಿ ಇನ್ನೊಂದಾದ್ರೆ ಏನವ್ವ ಗತಿ? ಕೈಗ್ ಬಂದಿರಾ ನಿನ್ ಕಳ್ಕಂಡು ನಾನ್ ಜೀವ್ ಸಯ್ತಾ ಇರಾಕಾಯ್ತದೇನವ್ವ? ಅದಕ್ಕೇ ಅಂಗಂದೆ."

ನರಸಿಂಹರಾಯಪ್ಪ–ಈಗ ಹುತ್ತದೊಳಗಿನ ಹಾವು.

ಹೊರಬಂದು ಹೆಡೆಯೆತ್ತುವುದಕ್ಕೆ ಮುಂಚೆ ಜೋಯಿಸರ ಕಡೆ ನೋಡಿದ.

ರಾಮಾಜೋಯಿಸರು ಕಣ್ಣು ಮಿಟುಕಿಸಿ ಮಾತಾಡಿದರು.–

"ಚಂದ್ರ ಪೇಟೆಗೀಟೆ ಸುತ್ತಿ ಬಂದಿರೊ ಮನುಷ್ಯ. ಮೂಢನಂಬಿಕೆ ಬೇಡ ಅಂತ ಆತ ಹೇಳೋದ್ರಲ್ಲಿ ತಪ್ಪೇನೂ ಇಲ್ಲ. ಆದ್ರೆ ನಂಬಿಕೆಗಳೆಲ್ಲ ತಪ್ಪು ಅಂತ ವಾದ ಮಾಡೋದ್ರಲ್ಲಿ ಸುಖ ಇಲ್ಲ. ಇದು ನೀವು–ಬುಡಕಟ್ಟಿನೋರು ನಡಿಸ್ಕೊಂಡು ಬಂದ ಪದ್ಧತಿ. ಇದನ್ನು ಮೀರಿದ್ರೆ ಏನಾಗುತ್ತೇ ಗೊತ್ತ? ಹಿಂದೆ ರಾಜರ ಕಾಲ್ದಲ್ಲಿ ಹೀಗೆ ಒಬ್ಬರು ಯಾರೊ ತಪ್ಪಿ ನಡೆದಿದ್ಕೆ ಕುಂತ್ಕಡೇನೆ ರಕ್ತ ಕಾರ್‍ಕೊಂಡು ಸತ್ತೋದ್ರಂತೆ. ಒಬ್ರಲ್ಲ, ಇಬ್ರಲ್ಲ, ನೂರಾರ್ ಜನ. ಅದಕ್ಕೆ ನಿಮ್ ಬುಡಕಟ್ಟು ಕರಗೀ ಕರಗಿ ಇಷ್ಟು ಕಡಿಮೆ ಆಗಿದೆ. ಇಷ್ಟರಮೇಲೆ ನಿಮ್ಮಿಷ್ಟ."

ಈಗ ಪೂಜಾರಪ್ಪ ಅಬ್ಬರಿಸಿದ–

"ಜೋಯಿಸರು ಯೇಳಿದ್ ಕೇಳಿಸ್ಕಂಡ್ಯ? ಅವ್ರು ಸುತ್ತೇಳಳ್ಳೀಗೆಲ್ಲ ಜೋಯಿಸ್ರು. ನಾನು ಈ ಹಟ್ಟೀಗ್ ಜೋಯಿಸ್ರಿದ್ದಂಗೆ. ನಮ್ ಪದ್ಧತಿ ನಾವ್ ಬಿಡಾಕಿಲ್ಲ."

"ಹಂಗಂದ್ರಾಗಲ್ಲ, ಶಬರೀನೂ ಒಂದ್ ಮಾತ್ ಕೇಳ್ಬೇಕು" ಎಂದ ಚಂದ್ರ. ಈಗ ಶಬರಿಯ ಸರದಿ.

ಅಪ್ಪ ತಿಮ್ಮರಾಯಿ ಕಡೆ ನೋಡಿದಳು. ಎಲ್ಲವನ್ನೂ ಮೂಕನಾಗಿ ನೋಡುತ್ತಿದ್ದ ಹುಚ್ಚೀರ ಗಾಬರಿಗೊಂಡು ಶಬರಿಯ ಹತ್ತಿರ ಬಂದು ನಿಂತ.

ಗೌರಿ ಮೊದಲೇ ಅಲ್ಲಿ ನಿಂತಿದ್ದಳು. ಶಬರಿಯ ಭುಜವನ್ನು ಹಿಡಿದಿದ್ದಳು. ತಳಮಳವೆಲ್ಲ ತಲೆ ತಗ್ಗಿಸಿದಂತೆ ಶಬರಿ ನೆಲದ ಕಡೆ ನೋಡುತ್ತ ಹೇಳಿದಳು–

"ಹಿರೇರೆಲ್ಲ ಎಂಗಂಬ್ತೀರೊ ನಾನೂ ಅಂಗೇ"

ಚಂದ್ರ ಕುಸಿದು ಕೂತ.

ಆದರೆ ಕೂಡಲೇ ಚೇತರಿಸಿಕೊಂಡ.

"ಅಸಹಾಯಕನಾದಾಗ ಬರೀ ಆಕ್ರೋಶ ತೋರಿಸಿದ್ರೆ ಪ್ರಯೋಜನ ಇಲ್ಲ. ಮೈ ಪರಚಿಕೊಂಡ್ರೆ ಏನೂ ಸಾಧಿಸೋಕಾಗೊಲ್ಲ. ಸತ್ಯಾನ ನಾವೇ ಖುದ್ದು ಸ್ಥಾಪಿಸ್ಬೇಕು"– ಅಂತ ಸೂರ್ಯ ಹಿಂದೊಮ್ಮೆ ಹೇಳಿದ್ದನ್ನು ಜ್ಞಾಪಿಸಿಕೊಂಡ.

ಸಿಟ್ಟಿನ ಸಿಂಬೆ ಸುತ್ತಿಟ್ಟು ಸದ್ಯಕ್ಕೆ ಸುಮ್ಮನಾದ.

"ಹಾಗಾದ್ರೆ ಎಲ್ಲಾ ಸಾಂಗೋಪಾಂಗವಾಗಿ ನೇರವೇರಲಿ" ಎಂದು ಜೋಯಿಸರು ಮಂತ್ರಘೋಷಣೆ ಮಾಡಿದರು.

ನರಸಿಂಹರಾಯಪ್ಪನ ಮೀಸೆಯ ಕೆಳಗೆ ನಗೆ ಚಿಮ್ಮಿತು.

ಶಬರಿ ತಗ್ಗಿಸಿದ ತಲೆಯನ್ನು ಮೇಲೆತ್ತಲಿಲ್ಲ.

ಆಕೆಯ ಕೈ ಚಂದ್ರನ ಕೈಯನ್ನು ಹಿಡಿದುಕೊಂಡಿತು.

ಹುಚ್ಚೀರ ಚಂದ್ರನ ಹಿಂದೆ ಬಂದು ಭುಜನ ಮೇಲೆ ಕೈಯ್ಯಿಟ್ಟ.

ಚಂದ್ರನ ಒಂದು ಕೈ ಶಬರಿಯ ಕೈಯ್ಯನ್ನು ಹಿಡಿದಿತ್ತು. ಇನ್ನೊಂದು ಕೈ ಹುಚ್ಚೀರನ ಕೈಯನ್ನು ಸಾವರಿಸಿತು.

* * *

ಗಂಡು–ಹೆಣ್ಣಿನ ಮೆರವಣಿಗೆ ಗುಡಿಯ ಕಡೆಗೆ ಹೊರಟಿತು. ಮುಂದೆ ವಾದ್ಯಗೋಷ್ಠಿ. ಅದರ ಹಿಂದೆ ಆರತಿ ಹಿಡಿದ ಹೆಂಗಸರು. ಆನಂತರ ಕೈಹಿಡಿದುಕೊಂಡಿರುವ ಗಂಡು–ಹೆಣ್ಣು, ಪಕ್ಕದಲ್ಲೇ ಹುಚ್ಚೀರ; ಗೌರಿ ಜೊತೆಗೆ ಪೂಜಾರಪ್ಪ–ತಿಮ್ಮರಾಯಿ. ಪೂಜಾರಪ್ಪನಲ್ಲಿ ವಿಜಯದ ಹೆಮ್ಮೆ. ವಿಕೃತ ಉತ್ಸಾಹ. ತಿಮ್ಮರಾಯಿಯಲ್ಲಿ ತುಂಬಿದ ತಳಮಳ. ಮಾತೇ ಇಲ್ಲದ ಖಿನ್ನತೆ. ಹುಚ್ಚೀರನ ಮುಖದಲ್ಲಿ ದಿಕ್ಕೆಟ್ಟ ಭಾವ.

ಚಂದ್ರನ ಒಳಗೆ ಕೆಂಡದುಂಡೆಗಳ ಚಂಡಿನಾಟ

ಶಬರಿಯದು ಭಾವ ಬಿತ್ತಿದ ಯಾಂತ್ರಿಕ ನಡಿಗೆ.

ಆಗಾಗ್ಗೆ ಗೌರಿಯತ್ತ ನೋಟ.

ದೇವರಗುಡಿ ಬಂದೇ ಬಿಟ್ಟಿತು.

ಚಂದ್ರ, ತಡೆಯಲಾರದೆ "ಯಾಕ್ ಜೋಯಿಸ್ರೆ ರಾಜವಂಶಸ್ಥರು ಬಂದಿಲ್ಲ. ನರಸಿಂಹರಾಯಪ್ಪನೋರ್ನ ಎಲ್ ಬಿಟ್ ಬಂದ್ರಿ?" ಎಂದ.

"ದೇವಸ್ಥಾನದ ಉಸ್ತುವಾರಿ ನಮ್ದು. ಅವ್ರ್ ಬಂದಿರೋದ್ಕೆ ಇದೇನು ಅರಮನೆ ಅಲ್ವಲ್ಲ" ಎಂದು ಒರಟಾಗಿ ಉತ್ತರಿಸಿ, ಉಳಿದೋರ ಕಡೆ ನೋಡಿ "ಸುಮ್ನೆ ಮುಂದಿನ ಕಾರ್ಯನಡ್ಸಿ" ಎಂದರು.

ಶಬರಿ ಭಯದಿಂದ ಗೌರಿಯ ಕಡೆ ನೋಡಿದಳು. ಗೌರಿ ಆರತಿ ಹಿಡಿದಿದ್ದಳು.

ಆರತಿ ಗೀರತಿ ಎಲ್ಲವೂ ಯಾಂತ್ರಿಕವಾಗಿ ನಡೀತು.

ಶಬರಿ, ಚಂದ್ರನ ಕೈಬಿಟ್ಟಳು. ಜೋಯಿಸ ಮತ್ತು ಪೂಜಾರಪ್ಪ ಹೇಳಿದ ಹಾಗೆ ಹೆಜ್ಜೆ ಮುಂದಿಟ್ಟಳು.

"ಬಲಗಾಲಿಟ್ಟು ಒಳ್ಗಡೆ ಹೋಗಮ್ಮ."

ಶಬರಿ ದೇವರಗುಡಿಯ ಒಳಹೋದಳು.

ರಾಮಾಜೋಯಿಸರು ಹೊರಗಿನಿಂದ ಬೀಗ ಹಾಕಿದರು.

'ಇದು ಯಾಕೆ ಹೀಗೆ' ಎಂದು ಕೇಳಬೇಕೆನ್ನಿಸಿದರೂ ಚಂದ್ರ ಸುಮ್ಮನಾದ. ಜೋಯಿಸರೇ ಘೋಷಣೆ ಮಾಡಿದರು– "ನಿಮ್ಗೆಲ್ಲ ಹೇಗಿದ್ರೂ ಗೊತ್ತು. ಬೆಳಗ್ಗೆವರೆಗೂ ಈ ಗುಡಿ ಕಡೆ ಯಾರೂ ಸುಳೀಬಾರ್ದು. ಈ ಆಸು–ಪಾಸಿನಲ್ಲಿ ಯಾರು ಸುಳಿದಾಡಿದ್ರು ರಕ್ತ ಕಾರ್ಕೊಂಡ್ ಸಾಯ್ತಾರೆ. ಬೆಳಗ್ಗೆ ಸೂರ್ಯ ಹುಟ್ಟಿದ್‌ಮೇಲೆ ನೀವೆಲ್ಲ ಬನ್ನಿ. ನಿಮ್ ಎದ್ರಿಗೇ ಬೀಗ ತೆಗೀತೀನಿ. ಎಂದಿನಂತೆ ನಿಮ್ ಹೆಣ್ ಮಗಳನ್ನ ನೀವ್ ಕರ್ಕೊಂಡ್ ಹೋಗಿ."

ಸರಿ; ಎಲ್ಲರೂ ವಾದ್ಯಸಮೇತ ವಾಪಸ್ ಹೊರಟರು.

ಚಂದ್ರ, ತಿರುಗಿ ನೋಡಿದ–

ದೇವರಗುಡಿ ಒಂಟಿಯಾಗಿತ್ತು.

ಒಳಗಿರುವ ಶಬರಿ?

ಚಂದ್ರನಿಗೆ ಊಹಿಸಿಕೊಳ್ಳಲು ಸಾಧ್ಯವಾಗಲಿಲ್ಲ

ಅಸ್ಪಷ್ಟ ಆಸ್ಫೋಟ.

## ೩

ಎಲ್ಲರೂ ಹಟ್ಟಿಗೆ ಬರುವ ವೇಳೆಗೆ ನರಸಿಂಹರಾಯಪ್ಪನ ಆಳುಗಳು ಸಾರಾಯಿ ಪೀಪಾಯಿಗಳನ್ನು ತಂದಿಟ್ಟು ಕಾದಿದ್ದರು. ಇದೂ ಒಂದು ಪದ್ಧತಿ. ಮದುವೆಯ ದಿನ ರಾತ್ರಿ ಹೆಣ್ಣನ್ನು ಗುಡಿಯೊಳಗೆ ಬಿಟ್ಟು ಬಂದ ಮೇಲೆ ಕುಡಿತ ಮತ್ತು ಊಟದ ವ್ಯವಸ್ಥೆಯು ರಾಜ ವಂಶಸ್ಥರಿಗೆ ಸೇರಿದ್ದು. ಅದರಂತೆ ಎಲ್ಲ ವ್ಯವಸ್ಥೆಯಾಗಿತ್ತು. ಪೂಜಾರಪ್ಪ ಎಲ್ಲವನ್ನೂ ದೇವಿಯ ವಿಗ್ರಹದ ಮುಂದೆ ಇರಿಸಿದ. ಪೂಜೆ ಮಾಡಿದ. ಆನಂತರ ಸೇವಿಸಲು ಎಲ್ಲರಿಗೂ ಹೇಳಿದ. ಇದೊಂದು ಪೂಜೆಯೆಂಬಂತೆ ಎಲ್ಲರೂ ಸೇವಿಸತೊಡಗಿದರು. ಗಂಡಸರು ಕುಡಿಯತೊಡಗಿದರೆ, ಹೆಂಗಸರು ಹಬ್ಬದ ಊಟವನ್ನು ಒಳಗೆ ಕೊಂಡೊಯ್ದರು.

ಎಲ್ಲವನ್ನೂ ಸಂಬಂಧ ಪಡದವರಂತೆ ನೋಡುತ್ತಿದ್ದವರು ಇಬ್ಬರು– ಚಂದ್ರ ಮತ್ತು ಹುಚ್ಚೀರ.

ಸಿಟ್ಟು ಮತ್ತು ಸಂಕಟ ಎರಡೂ ಒಟ್ಟಾದಂತೆ ಇಬ್ಬರೂ ಕೂತಿದ್ದರು. ಸ್ವಲ್ಪ ಹೊತ್ತಾದ ನಂತರ ಚಂದ್ರ, ಹುಚ್ಚೀರನನ್ನು ಕರಕೊಂಡು ಹಟ್ಟಿಯ ಹೊರಗಡೆ ಹೋದ. ಹಿಂತಿರುಗಿ ಬರುವ ವೇಳೆಗೆ ಎಲ್ಲರೂ ಕುಡಿದು,. ತಿಂದು ಮಲಗಿದ್ದರು. ಚಂದ್ರ, ಹುಚ್ಚೀರನನ್ನು, ಮತ್ತೆ ಕರೆದುಕೊಂಡು ಅಲ್ಲಿಂದ ಹೊರಟ.

ಚಂದ್ರ ಮತ್ತು ಹುಚ್ಚೀರ ದೇವರಗುಡಿಯ ಹತ್ತಿರ ಬಂದರು.

ಅದೊಂದು ಪುರಾತನ ದೇವಾಲಯ.

ಹಾಗಂತ ಸುಂದರ ಶಿಲ್ಪಗಳೇನೂ ಇಲ್ಲ.

ದೊಡ್ಡ ಬಾಗಿಲ ಬಳಿ ಆ ಕಡೆ– ಈ ಕಡೆ ಎರಡು ಆಕೃತಿಗಳನ್ನು ಕೆತ್ತಲಾಗಿದೆ. ಅವರು ದೇವರ ಕಾವಲು ಪುರುಷರೆಂದು ಪ್ರತೀತಿ. ಒಬ್ಬ ಕಾಲಪುರುಷನಿಗೆ ಇಬ್ಬರು ಕಾವಲು ಪುರುಷರು!

–ಇದು ಚಂದ್ರನ ಒಳಗೆ ಕಿಡಿಯುವ ನುಡಿ.

ಹುಚ್ಚೀರನಿಗೆ ಹುಚ್ಚು ಧೈರ್ಯ ತುಂಬಿ, ಚಂದ್ರ ಇಲ್ಲೀವರೆಗೆ ಕರೆತಂದಿದ್ದ. ಗುಡಿಯ ಹತ್ತಿರ ಬರುತ್ತಿದ್ದಂತೆ ಹುಚ್ಚಿರನಿಗೆ ಸಣ್ಣನಡುಕ. ಆದರೆ ಚಂದ್ರ ಬಿಡಲಿಲ್ಲ.

"ಇವತ್ತು ಎರಡ್ರಲ್ಲೊಂದು ತೀರ್ಮಾನ ಆಗ್ಬೇಕು. ಅದಕ್ಕೆ ನೀನೆ ಸಾಕ್ಷಿಯಾಗಿರ್ಬೇಕು. ನರಸತ್ತೋರ್ ತರಾ ಇರೋ ಬದ್ಲು ಸಾಯೋದೆ ವಾಸಿ ಅಂತ ಹೇಳ್ಳಿಲ್ವ ನಾನು. ಇಷ್ಟಕ್ಕೂ ಏನೂ ಆಗಲ್ಲ. ನಮ್ ಶಬರೀನ ನಾವ್ ಕಾಪಾಡ್‌ಬೇಕೊ ಇಲ್ವೊ ಹೇಳು" ಎಂದು ಮತ್ತೊಮ್ಮೆ ಹುರಿದುಂಬಿಸಿದ.

ಅಲ್ಲಿ ಆ ಕಡೆ ದೇವರಗುಡಿಯ ಒಳಬಂದ ಶಬರಿಗೆ ಒಳಗೆಲ್ಲ ಕತ್ತಲ ಇರಿತ. ಮುಂದೆ ಗರ್ಭಗುಡಿಯಲ್ಲಿ ಹಚ್ಚಿದ ಹಣತೆ. ಅದು ಯವಾಗ ಆರುವುದೋ ಗೊತ್ತಿಲ್ಲ. ನಿಂತಲ್ಲೇ ನಿಂತು ಸಾವರಿಸಿಕೊಂಡ ಮೇಲೆ ಗುಡಿಯ ಒಳಗು ಇಷ್ಟಿಷ್ಟೇ ಕಾಣತೊಡಗಿದೆ. ಗೆಳತಿ ಗೌರಿಯನ್ನು ಜ್ಞಾಪಿಸಿಕೊಂಡಳು. ಆಕೆ "ಏನೂ ಆಗಾಕಿಲ್ಲ. ಅಂಗ್ ವೋಗಿ ಇಂಗ್ ಬತ್ತೀಯ" ಎಂದು ಕಿವಿಯಲ್ಲಿ ಉಸಿರಿದ್ದಳು. ಅದೇ ಉಸಿರಾಗಿ ಮುಂದೆ ಹೆಜ್ಜೆಯಿಟ್ಟಳು.

ಒಂದು ಕಡೆ ಅಲಂಕಾರಗೊಂಡ ಮಂಚ. ಹಿರಿಯರು ಹೇಳಿದ ಹಾಗೆ ತಾನು ಅದರ ಮೇಲಿರಬೇಕು. ದೇವರಿಗಾಗಿ ಕಾಯಬೇಕು. ಮಧ್ಯರಾತ್ರಿಯ ವೇಳೆಗೆ ದೇವರು ಗರ್ಭಗುಡಿಯಿಂದ ಬರುತ್ತಾನೆ. ಬಂದವನ ಪಾದಕ್ಕೆ ಬೀಳಬೇಕು. ಮುಂದೆ ಆತನ ವಶ. ದೈವ ವಶ!

ಇಲ್ಲಿ ಈ ಕಡೆ ಚಂದ್ರ ಹುಚ್ಚೀರನೊಂದಿಗೆ ದೇವರಗುಡಿಯನ್ನು ಒಂದು ಸುತ್ತು ಹಾಕಿದ. ಹಳೆಯದಾದ ಗುಡಿಯ ಒಳಗೆ ಹೋಗಲು ಯಾವುದಾದರೂ ಕಳ್ಳಗಿಂಡಿ ಇದ್ದೀತೆ ಅಂತ ಹುಡುಕಿದ. ಎಲ್ಲೂ ಇರಲಿಲ್ಲ. ಕಲ್ಲಿನಿಂದ ಕಟ್ಟಿದ ಗುಡಿ, ಗುಂಡುಕಲ್ಲಿನಂತೆ ಗಟ್ಟಿಯಾಗಿ ನಿಂತಿತ್ತು.

ಚಂದ್ರ ಬಾಗಿಲ ಬಳಿಗೆ ಬಂದ. ತಾನು ತಂದಿದ್ದ ಅನೇಕ ಬೀಗದ ಕೈಗಳಿಂದ ಬೀಗ ತೆಗೆಯಲು ಪ್ರಯತ್ನಿಸಿದ. ಕಡೆಗೆ ತಂತಿಗಳನ್ನು ತೂರಿಸಿ ತೆಗೆಯಲು ನೋಡಿದ. ಕಡೆಗೆ ಅತ್ತಿತ್ತ ನೋಡಿ ಬೀಗವನ್ನು ಒಡೆದೇ ಬಿಟ್ಟ.

ಒಂದು ಕ್ಷಣ ಮೌನ.
ಸದ್ದಿನ ನಂತರದ ಸ್ತಬ್ಧತೆ.
ಸುತ್ತೆಲ್ಲ ನೋಡಿದ. ಮಲಗಿದ ಮನೆಗಳು! ಸದ್ದಿಲ್ಲದ ಸಂದಿಗೊಂದಿಗಳು!
ಸೀದಾ ಒಳನುಗ್ಗಿದ. ಬಾಗಿಲು ಹಾಕಿದ.
ಹುಚ್ಚೀರನ ಜೊತೆ ಮರೆಯಲ್ಲಿ ನಿಂತು ನೋಡಿದ.
ಮಂಚದ ಮೇಲೆ ಶಬರಿ ಕೂತಿದ್ದಾಳೆ.
ಉಸಿರುಗಟ್ಟಿದ ಶಬರಿ.
ಗರ್ಭಗುಡಿ–ಉಸಿರುಗಟ್ಟಿದ ಹುತ್ತ

ಬುಸ್ಸೆಂದು ಹೊರಟಿರುವ ಹೆಡೆಗಾಗಿ
ಸರಸರನೆ ಹರಿಯುವ ನಡೆಗಾಗಿ
ಕಾದಿರುವಳು ಶಬರಿ!

ಮರೆಯಲ್ಲಿ ನಿಂತ ಚಂದ್ರ ಮತ್ತು ಹುಚ್ಚೀರ ನೋಡುತ್ತಿರುವಂತೆಯೇ ಗರ್ಭಗುಡಿಯ ದೀಪ ಆರಿತು. ಇವರಲ್ಲಿ ತವಕ. ಶಬರಿಗೆ ಸಣ್ಣ ನಡುಕ.

ನೋಡು ನೋಡುತ್ತಿದ್ದಂತೆಯೇ ಗರ್ಭಗುಡಿಯ ಕತ್ತಲಲ್ಲಿ 'ದೇವರ ರೂಪವೊಂದು' ಕಾಣಿಸಿಕೊಂಡಿತು. ಮೆಲ್ಲನೆ ಮುಂದಡಿಯಿಟ್ಟ ದೇವರ ರೂಪದ ಈ ಆಕೃತಿಯ ಕಿರೀಟ ಹೊಳೆಯುತ್ತಿತ್ತು. ಉಳಿದದ್ದು ಅಸ್ಪಷ್ಟ. ಆದರೂ ಚಂದ್ರನ ಕಣ್ಣುಗಳಿಗೆ ಈ ಅಸ್ಪಷ್ಟ ದೇವರ ರೂಪದಲ್ಲಿ ಯಾವುದೋ ಆಕಾರವೊಂದು ಸ್ಪಷ್ಟವಾಗತೊಡಗಿತು. ಆ ರೂಪ ಶಬರಿಯ ಸಮೀಪಕ್ಕೆ ಬರುತ್ತಿದ್ದಂತೆ ಚಂದ್ರ 'ಏಯ್' ಎಂದು ಕಿರುಚುತ್ತ ಮುನ್ನುಗ್ಗಿ ಆ ರೂಪದ ಮೇಲೆ ಬಿದ್ದ.

'ದೇವರು' ಸ್ತಂಭೀಭೂತನಾದ!

ಶಬರಿ ದಿಗ್ಭ್ರಾಂತಳಾದಳು.

ದಿಕ್ಕೆಟ್ಟು ಅಲ್ಲಿಂದ ಓಡಿದಳು.

ಹುಚ್ಚೀರ ಮಾತ್ರ ಚಂದ್ರನ ಸಾಹಸಕ್ಕೆ ಸಾಕ್ಷಿಯಾಗಿ ನಿಂತಿದ್ದ– ನಡಗುವ ಎದೆ ಹಿಡಿದು; ನಡೆಯುತ್ತಿರುವ ಘಟನೆಯಿಂದ ಗರ ಬಡಿದು.

* * *

ಶಬರಿ ಓಡಿಬಂದಳು.

ನಿದ್ದೆ ಮಾಡಿದ ಊರಿನ ಬೀದಿಗಳಲ್ಲಿ, ಗಾಳಿಗೆ ತರೆಪರಗುಟ್ಟುವ ಮರಗಿಡಗಳ ನಡುವಿನಲ್ಲಿ, ಹಳ್ಳಕೊಳ್ಳಗಳ ಹಾದಿಯಲ್ಲಿ, ಹಟ್ಟಿಗೆ ಓಡಿಬಂದಳು. ಬಂದು ನಿಂತವಳೇ 'ಯಪ್ಪೊ ಯಪ್ಪೊ' ಎಂದು ಕೂಗಿದಳು.

ಹಟ್ಟಿ ಬೆಚ್ಚಿಬಿದ್ದಿತು.

ನಿದ್ದೆಯ ಅಮಲು ಹರಿದು ಹೋಯಿತು.

ತಿಮ್ಮರಾಯಿ, ಪೂಜಾರಪ್ಪ, ಗೌರಿ– ಹೀಗೆ ಎಚ್ಚರವಾದವರೆಲ್ಲ ಎದ್ದು ಬಂದರು. ತಿಮ್ಮರಾಯಿ ಮಗಳನ್ನು ನೋಡಿದ.

ಬಿರುಗಾಳಿಯ ನಡುವೆ ಬೆದರಿನಿಂತ ಹಸಿರು ಮರ!

"ಮಗಳೆ, ಏನವ್ವ ಇದು? ಯಾಕಿಂಗ್ ಬಂದೆ ಮಗಳೆ?"

–ಎಂದು ತಿಮ್ಮರಾಯಿ ಕೇಳುತ್ತಲೇ ಶಬರಿ ಗಳಗಳನೆ ಅತ್ತಳು.

ಗೌರಿ ಹತ್ತಿರ ಬಂದು ಹಿಡಿದುಕೊಂಡಳು.

ಪೂಜಾರಪ್ಪ ತಾಳ್ಮೆ ಕಳೆದುಕೊಂಡಿದ್ದ. ಶಬರಿಯ ಅಳುವಿನಲ್ಲಿ ಅವನಿಗೆ ಉತ್ತರವಿರಲಿಲ್ಲ.

"ಅದೇನಂಗಳ್ತೀಯ? ದ್ಯಾವ್ರ್‌ಗುಡಿ ಬಿಟ್ಟು ಯಾಕ್ ಬಂದೆ? ಬೊಗಳು." ಎಂದು ಅಬ್ಬರಿಸಿದ. ಆದರೆ ತಿಮ್ಮರಾಯಿಗೆ ಇದು ಸರಿಕಾಣಲಿಲ್ಲ.

"ಅದ್ಯಾಕಂಗಾಡ್ತೀಯ ಪೂಜಾರಪ್ಪ? ಎದ್ನೋ ಬಿದ್ನೋ ಅಂಬ್ತ ಓಡ್ ಬಂದಂಗೈತೆ ಈ ಮಗ. ಸುಮ್ಕೆ ಎಗ್ರಾಡಿರಾತ?" ಎಂದು ಬೇಸರಪಟ್ಟು ಶಬರಿಯನ್ನು ಮತ್ತೆ ಕೇಳಿದ– "ಏನಾತು ಯೇಳವ್ವ. ಅದೇನೇ ಇದ್ರು ನಾನು ನನ್ನ ಮಗ್ಳನ್ನ ಬಿಟ್ ಕೊಡಾಕಿಲ್ಲ. ಯೇಳವ್ವ ಏನಾತು?"

"ಕತ್ಲಾಗ್ ದ್ಯಾವ್ರ್ ಬಂದಂಗ್ ಆತು ಕಣಪ್ಪ. ಆಟ್ರಾಗೆ ಇನ್ಯಾರೊ ಬಂದು ದ್ಯಾವ್ರ್ ಮ್ಯಾಲೆ ಬಿದ್ದಂಗಾತು. ಆಮ್ಯಾಕ್ ನಂಗೊಂದೂ ತೋಚ್ದೆ ಹೆದ್ರಿಕಂಡ್ ಓಡ್ ಬಂದೆ ಕಣಪ್ಪ."

"ಓಡ್ ಬರಾಕ್ ಮೊದ್ಲು ಏನಾತು? ಒಸಿ ಬಿಡ್ಸೇಳು" ಎಂದು ಪೂಜಾರಪ್ಪ ಮತ್ತೆ ಒತ್ತಾಯಿಸಿದ.

"ಕತ್ಲಾಗ್ ಅದೇನೇನಾತೊ ನಂಗೊಂದು ತಿಳೀಲಿಲ್ಲ. ಪ್ರಾಣಾನೇ ವೋದಂಗಾತು. ಓಡ್ ಬಂದೆ"– ಶಬರಿ ಹೇಳಿ ಅಳತೊಡಗಿದಳು.

"ಅಂಗಾರ್ ಬಾಗ್ಲು ತಗ್‌ದಿತ್ತಾ?"– ಪೂಜಾರಪ್ಪ ಮತ್ತೆ ಪ್ರಶ್ನಿಸಿದ.

ಶಬರಿ ಹೌದೆಂಬಂತೆ ತಲೆಯಾಡಿಸಿದಳು.

ಪೂಜಾರಪ್ಪ ಒಂದು ಕ್ಷಣ ಯೋಚಿಸಿದ.

"ಚಂದ್ರ ಎಲ್ಲಿ ಕಾಣುಸ್ತಿಲ್ಲ?" ಎಂದು ಕೇಳಿದ.

ಆಗ ಎಲ್ಲರಿಗೂ ಚಂದ್ರನ ನೆನಪು ಬಂತು. ತಿಮ್ಮರಾಯಿ ಒಳ ಹೊರಗೆಲ್ಲ ನೋಡಿದ. 'ಚಂದ್ರ, ಚಂದ್ರ' ಎಂದು ಮೂರ್‍ನಾಲ್ಕು ಸಾರಿ ಕೂಗಿದ. ಇಲ್ಲ! ಚಂದ್ರ ಇರಲಿಲ್ಲ.

ಹಟ್ಟಿಯಲ್ಲೂ ಇಲ್ಲ; ಆಕಾಶದಲ್ಲೂ ಇಲ್ಲ.

ಕಪ್ಪಿಟ್ಟ ಮೋಡದ ಮರೆ; ಎಲ್ಲಿದ್ದಾನೋ ಗೊತ್ತಾಗುತ್ತಿಲ್ಲ.

ಪೂಜಾರಪ್ಪ ಸುಮ್ಮನಿರಲಿಲ್ಲ.

"ಏನೋ ಅನಾವ್ತ ಆಗೈತೆ ತಿಮ್ಮರಾಯಿ. ನಿನ್‌ಮಗಳು ಇಂಗೆಲ್ಲ ಅರ್ಧಕ್ಕೆ ಎದ್ ಬಂದಿರಾದು ಹಟ್ಟೀಗೊಳ್ಳೇದಾಗಾಕಿಲ್ಲ. ಬರ್‍ರಿ ಗುಡಿತಾವೋಗಾನ" ಎಂದು ಹೊರಟುಬಿಟ್ಟ. ವಿಧಿಯಿಲ್ಲದೆ ಉಳಿದವರೆಲ್ಲ ಹಿಂಬಾಲಿಸಿದರು.

* * *

ಊರಿನ ಬೀದಿಗಳಲ್ಲಿ ಹಟ್ಟಿಯ ದಂಡು ಬಂದಾಗ ತಾನಾಗೇ ಊರಿಗೆ ಎಚ್ಚರವಾಯಿತು. ಬೆಚ್ಚನೆ ನಿದ್ದೆಯನ್ನು ಕೆಡಿಸಿದ ಇವರನ್ನು ಇರಿಯುವಂತೆ ನೋಡುತ್ತಲೇ ಎದ್ದ ಊರವರು ಕಡೆಗೆ ಕುತೂಹಲಿಗಳಾಗಿ ಇವರ ಜತೆ ಸೇರಿ ಬಂದರು– ಸುಂಟರಗಾಳಿಯಂತೆ.

ದೇವರಗುಡಿಯ ಹತ್ತಿರ ಬಂದಾಗ ಗಾಳಿ ಉಸಿರುಕಟ್ಟಿ ನಿಂತಿತು. ಗುಡಿಯ ಬಾಗಿಲಲ್ಲಿ ಚಂದ್ರ ರಕ್ತಕಾರಿ ಬಿದ್ದಿದ್ದ!

ಶಬರಿ ಹತ್ತಿರ ಬಂದು ನೋಡಿ ಬೆಂದ ಹಗ್ಗದಂತೆ ಬಿದ್ದಳು. ಗೌರಿ ಹಿಡಿದುಕೊಂಡಳು.

ಶಬರಿಯ ಅಳು ಹಗ್ಗ ನೇದಂತೆ ಜೀವ ಸಂಚಾರವಾಯಿತು.

ಜನರಲ್ಲಿ ಗುಸುಗುಸು ಆರಂಭವಾಯಿತು. ಎಲ್ಲೋ ಇದ್ದ ಹುಚ್ಚೀರ ಮೆಲ್ಲಗೆ ಬಂದು ಜನರ ಮಧ್ಯೆ ಸೇರಿಕೊಂಡ.

ಪೂಜಾರಪ್ಪ ಚಂದ್ರನ ಮೈಮುಟ್ಟಿ ಘೋಷಿಸಿದ– "ಜೀವ ಇಲ್ಲ. ಯಾವಾಗ್ಲೊ ಸತ್ತೋಗವ್ನೆ. ದ್ಯಾವ್ರ ಜತೆ ಚಲ್ಲಾಟ ಆಡಿದ್ರೆ ಇನ್ನೇನಾಗ್ತೈತೆ"

ಅಷ್ಟರಲ್ಲಿ ಊರ ಒಡೆಯರು ಬಂದರು.

ಹುಚ್ಚೀರ ಹೆದರಿ ಮರೆಗೆ ಸರಿದ.

ನರಸಿಂಹರಾಯಪ್ಪ ಮತ್ತು ರಾಮಾಜೋಯಿಸರು ಚಂದ್ರನ ಹೆಣ ನೋಡಿದರು. ನರಸಿಂಹರಾಯಪ್ಪ "ಇದಕ್ಕೇನಂಬ್ತೀರ ಜೋಯಿಸ್ರೆ" ಎಂದು ಕೇಳಿದ. "ಇನ್ನೇನ್ ಹೇಳೋದು, ಎಲ್ಲಾ ಆ ದೇವರಲೀಲೆ. ಸಂಪ್ರದಾಯಕ್ಕೆ ಸೆಡ್ಡು ಹೊಡೀತೀನಿ ಅಂದ್ರೆ ಆಗೋದೆಲ್ಲ ಹೀಗೆ. ಅರ್ಧಂಬರ್ಧ ವಿದ್ಯೆ ಕಲ್ತು ಅಡ್ಡಾದಿಡ್ಡಿ ಆಡಿದ್ರೆ ಇದೇ ಗತಿ ನೋಡಿ." ಎಂದು ಜೋಯಿಸರು ಹೇಳಿದ್ದಕ್ಕೆ ನರಸಿಂಹರಾಯಪ್ಪ ತನ್ನ ಮಾತನ್ನೂ ಸೇರಿಸಿದ–

"ನಮ್ತಾವ್ ನಿಗಿರ್‌ದಂಗೇ ಆ ದ್ಯಾವ್ರತಾವ್ಲು ನಿಗರವ್ನೆ ಅನ್ನುಸ್ತೈತೆ. ಪಾಪ! ಸುಮ್ಕೆ ಜೀವ ಕಳ್ಕಂಡ. ಈ ಶಬರೀಗೆ ವೊತ್ತಾರೆ ತಾಳಿಕಟ್ಟಿ ಸರವೋತ್ನಾಗೆ ಕಿತ್ಕಂಡ್ ಬಿಟ್ಟ."

"ಎಲ್ಲಾ ದೈವಲೀಲೆ" ಎಂದ ಜೋಯಿಸರು "ನೋಡಿ ಸುಮ್ಕೆ ಶವ ಸಂಸ್ಕಾರ ಮಾಡಿ ಮುಗಿಸ್ಬಿಡಿ. ಸದ್ದುಗದ್ದಲ ಇಲ್ದೆ ಎಲ್ಲಾ ನಡೆದೋದ್ರೆ ದೇವರ ಸಿಟ್ಟು ಶಮನ ಆಗುತ್ತೆ. ಇದೆಲ್ಲ ಸುದ್ದಿಗಿದ್ದಿ ಆದ್ರೆ ಹಟ್ಟಿ ಹರಾಜಾಗುತ್ತೆ ಅಷ್ಟೆ" ಎಂದು ಅಪ್ಪಣೆ ಕೊಡಿಸಿದರು.

"ಅವ್ರ್ ಮಾಡಿದ್ದು ಅವ್ರಿಗೇ ತಟ್ತೈತೆ ಬಿಡಿ ಜೋಯಿಸ್ರೆ" ಎಂದು

ನರಸಿಂಹರಾಯಪ್ಪ ಹೇಳಿದ್ದೇ ತಡ, ಹಟ್ಟಿಯ ಪೂಜಾರಪ್ಪ "ನಾವ್ ನಿಮ್ಮನ್ ಬಿಟ್ ಬಾಳಾದುಂಟಾ ದಣೇರ? ಎಲ್ಲಾ ನೀವೇಳ್ದಂಗೇ ಮಾಡ್ತೀವಿ" ಎಂದು ಹೇಳಿ "ಮದ್ಲು ಇಲ್ಲಿಂದ ಶವ ಸಾಗ್ಸಾನ ಬರ್ರಿ. ಏ ಹುಚ್ಚೀರ, ಎಲ್ಲೊ ಆಳಾಗೋದೆ, ಬಾರ್ಲ ಒಂದ್ ಕೈಯ್ಯಾಕು" ಎಂದು ಕೂಗಿದ.

ಅಳುತ್ತಿದ್ದ ಶಬರಿಯನ್ನು ಗೌರಿ ಏಳಿಸಿಕೊಂಡು ಬಂದಳು.

ಹುಚ್ಚೀರ ಮತ್ತು ಇತರರು ಬಂದು ಚಂದ್ರನ ಹೆಣಕ್ಕೆ ಕೈಹಾಕಿದರು. ಆಗ ಜೋಯಿಸರು ಹೇಳಿದರು–"ನಾಳೆ ಮೊದ್ಲು ಗುಡೀನೆಲ್ಲ ತೊಳೆದು ಶುದ್ಧಿ ಮಾಡ್ಬೇಕು. ಹೀಗೆಲ್ಲ ಆಗಿರೋದುಕ್ಕೆ ಪ್ರಾಯಶ್ಚಿತ್ತ ಮಾಡ್ಕೊಬೇಕು. ಪೂಜೆಗೀಜೆ ಎಲ್ಲಾ ಇರುತ್ತೆ. ಶವ ಸಂಸ್ಕಾರ ಮುಗ್ಸಿ ಶಬರೀನ ಕರ್ಕೊಂಡ್ ಬನ್ನಿ." ಇಲ್ಲೀವರೆಗೆ ಅಳುವಿನಲ್ಲಿ ಮುಳುಗಿದ ಶಬರಿ "ಇಲ್ಲ ನಾನಲ್ಲಿಗ್ ತಿರ್ಗಾ ಬರಾಕಿಲ್ಲ. ನಾನ್ ಸತ್ರೂ ಬರಾಕಿಲ್ಲ" ಎಂದು ಕಿರುಚಿದಳು. ಆಗ ಪೂಜಾರಪ್ಪ ಗದರಿದ – "ಆಯ್ತಾಯ್ತು ನಡಿ ಮದ್ಲು. ದ್ಯಾವ್ರ ಗುಡೀತಾವ ದೆವ್ವ ಕಂಡಂಗಾಡ್ ಬ್ಯಾಡ. ನಡ್‌ನಡಿ."

ಚಂದ್ರನ ಹೆಣ ಹಟ್ಟಿಗೆ ಬಂತು.

ಅಲ್ಲಲ್ಲೆ ಏಟು ಬಿದ್ದ ಗುರುತು ಕಾಣುತ್ತಿತ್ತು. ಆ ಬಗ್ಗೆ ಯಾರೂ ಮಾತಾಡದಿದ್ದರೂ ಪೂಜಾರಪ್ಪನೇ ಹೇಳಿದ– "ದ್ಯಾವ್ರನ್ನೇ ಪರೀಕ್ಷೆ ಮಾಡಾಕೋಗಿ ರಕ್ತ ಕಾರ್ ಬಿದ್ದ ನೋಡ್ರಿ. ಅದಕ್ಕೇ ಗಾಯ ಆಗಿರ್ಬೇಕು."

ಚಂದ್ರನ ತಾಯಿಯ ಅಳು ಹಟ್ಟಿ ತುಂಬ ಹಬ್ಬಿತು.

"ಇವೆಲ್ಲ ಬ್ಯಾಡ ಕಣೋ ಅಂದೆ. ಒಡೇರ್ಗೇ ಸೆಡ್ ವೊಡೀತೀನಿ ಅಂದ. ದ್ಯಾವ್ರು ದಿಂಡ್ರು ಅಂಬ್ತ ಸುಟ್ಟು ಸುಣ್ಣ ಆಗ್‌ಬ್ಯಾಡ್ರಿ ಅಂಬ್ತ ನಮ್ಗೇ ಬುದ್ದಿಯೇಳ್ತಿದ್ದ ಈ ಬುದ್ದಿಗೇಡಿ ನನ್ ಮಗ; ಇವಾಗ್ ನೋಡ್ರಪ್ಪ, ಅಗಲಾಗಿದ್ದಾನು ರಾತ್ರಿ ಇಲ್ದಂಗಾದ" ಎಂದು ರೋಧಿಸುತ್ತಿದ್ದ ಚಂದ್ರನ ತಾಯಿಯನ್ನು ಹೆಂಗಸರು ಒತ್ತಾಯವಾಗಿ ಒಳಗೆ ಕರೆದೊಯ್ದರು.

ಪೂಜಾರಪ್ಪ, ತಾಯಿ ಮತ್ತು ತಿಮ್ಮರಾಯಿ–ಇಬ್ಬರನ್ನೂ ಒಪ್ಪಿಸಿ ಹೊತ್ತು ಹುಟ್ಟೋ ವೇಳೆ ಹೆಣವನ್ನು ಹೂತುಬಿಡಲು ಸಜ್ಜಾದ.

ಚಂದ್ರನ ಹೆಣಕ್ಕೆ ಸ್ನಾನ ಮಾಡಿಸಿದರು; ಕೂಡಿಸಿದರು. ಪೂಜೆ ಮಾಡಿದರು. ಎಲ್ಲರೂ ಸೇರಿ ಕೊಂಡೊಯ್ದರು.

ಅಳುವನ್ನು ನುಂಗಿ ನಡೆದ ಶಬರಿ; ಜೊತೆಗೆ ಗೌರಿ.

ಹೆಣ ಹೂಳಿದ್ದಾಯಿತು–ವಿವಾಹವನ್ನೇ ಹೂತಂತೆ.

ಈಗ ಶಬರಿಯ ಸರದಿ.

ಭೋರೆಂದು ಆಳುವ ಶಬರಿಯ ಬಳೆಗಳನ್ನು ಒಡೆದರು.
ಹಣೆಯ ಕುಂಕುಮವನ್ನು ಅಳಿಸಿ ಖಾಲಿ ಮಾಡಿದರು.
ಚಂದ್ರನಿಲ್ಲದೆ ಬೆಳದಿಂಗಳು ವಿಧವೆ!
ಕಾಡುವ ಅಮಾವಾಸ್ಯೆಗೆ ಬರವೆ?

ಒಡೆಯ ನರಸಿಂಹರಾಯಪ್ಪ ಅಮಾವಾಸ್ಯೆಯಂತೆ ಕಾಡಿದ. ಹೇಗಿದ್ದರೂ ಮದುವೆಯಾದ ಗಂಡನಿಲ್ಲ; ಒಂದು ದಿನವೂ ಆತನೊಂದಿಗೆ ಬಾಳುವೆ ಮಾಡಲಿಲ್ಲ. ಶ್ರೀಮಂತರು, ಭೂಮಾಲೀಕರು ಹಣ ನೀಡಿ ಹೆಣ್ಣಿನ ಕೂಡಿಕೆ ಮಾಡಿಕೊಳ್ಳುವ ಪ್ರವೃತ್ತಿ ಒಂದು ಪದ್ಧತಿಯೇ ಆಗಿಬಿಟ್ಟಿದೆ. ಅದರಂತೆ ತಾನೇಕೆ ಶಬರಿಯನ್ನು ಪಡೆಯಬಾರದು? ಹೀಗೆ ಅನ್ನಿಸಿದ್ದೇ ತಡ ಒಡೆಯ ನರಸಿಂಹರಾಯಪ್ಪ ತಿಮ್ಮರಾಯಿಗೆ ಹೇಳಿ ಕಳಿಸಿದ್ದ. ಜಮೀನಿನ ಬಳಿ ಆರಾಮವಾಗಿ ಕೂತಿದ್ದ ಒಡೆಯನ ಬಳಿಗೆ ಬಂದ ತಿಮ್ಮರಾಯಿ ನಡು ಬಗ್ಗಿಸಿ ನಿಂತ. ಒಡೆಯ ಮಾತು ಆರಂಭಿಸಿದ.

"ಎಂಗಿದ್ದೀಯ?"

"ಸಾಯ್ಲಿಲ್ಲ ಬದುಕ್ಲಿಲ್ಲ ಇಂಗೇ ಇವ್ನಿ ದಣೇರ."

"ಮಗಳು ಎಂಗವ್ಳೆ?"

"ನಾನಿದ್ದಂಗೆ ಅವ್ಳೂನು."

"ಅರೇದ್ ಉಡುಗೀನ ಇಂಗೇ ಬಿಡ್ ಬಾರ್ದು ಕಣೋ."

"ಇನ್ನೇನ್ ಮಾಡಾಕಾಯ್ತದೆ ದಣಿ? ಎಲ್ಲಾ ಅಣೇಬರಾ"

"ಅಣೇಬರಾ ಅಂದ್ಕಂಡಿದ್ರೆ ಹೊಟ್ಟೆ ತುಂಬ್ತೈತೇನೊ?"

"ಎಂಗೋ ನಡ್ಕಂಡ್ ಬಂದೈತಲ್ಲ ದಣಿ. ಉಪಾಸಾನೊ ವನವಾಸಾನೊ ಜೀವ ಇರಾಗಂಟ ಇರಾದು."

"ನೀನ್ ಮನಸ್ ಮಾಡಿದ್ರೆ, ನಿಂಗೆ ನಿನ್ ಮಗಳಿಗೆ ಹೊಲ ಮನೆ ಎಲ್ಲಾ ಮಾಡ್ಕೊಡ್ತೀನಿ."

ತಿಮ್ಮರಾಯಿಗೆ ಅರ್ಥವಾಗಲಿಲ್ಲ. ಸುಮ್ಮನೆ ನೋಡಿದ.

"ಯಾಕ್ಲ ಅಂಗ್ ನೋಡ್ತೀಯ? ಸುತ್ತು ಬಳಸು ಯಾಕೆ? ಯೇಳ್ತೀನ್ ಕೇಳು. ನಿನ್ ಮಗಳನ್ನ ನಾನ್ ಕೂಡಿಕೆ ಮಾಡ್ಕಂಬ್ತೀನಿ. ಹೆಂಡ್ತಿ ತರಾನೇ ನೋಡ್ಕಂಬ್ತೀನಿ."

ತಿಮ್ಮರಾಯಿ ಬೆಚ್ಚಿದ.

ಹಿಂದೆ ಹಟ್ಟಿಯಲ್ಲಿ ಇಂಥ ಘಟನೆಗಳು ನಡೆದಿದ್ದವು.

ಕೆಲವು ಹೆಣ್ಣುಮಕ್ಕಳು ಶ್ರೀಮಂತರ ಹಾಸಿಗೆಯಲ್ಲಿ ಹೂವಾಗಲು ಹೋಗಿ ಹಾವಿನ ಸಂಗ ಮಾಡಿದಂತಾಗಿದ್ದವು. ಶ್ರೀಮಂತರಲ್ಲಿ ಕೆಲವರು ನಿಯತ್ತಿನಿಂದಲೂ ನಡೆದುಕೊಂಡಿದ್ದರು. ಕಡೆಯವರೆಗೂ ಸಾಕಿದ್ದರು. ಆದರೆ ಎಲ್ಲರೂ ಹಾಗಿರಲಿಲ್ಲ. ಆದರೆ ಇತ್ತೀಚೆಗೆ ಈ ಪದ್ಧತಿ ಕಡಿಮೆಯಾಗಿತ್ತು. ಒಡೆಯನು ಈ ಬಗ್ಗೆ ಆಸಕ್ತಿ ತೋರಿಸಿರಲಿಲ್ಲ. ಇವತ್ತು ಇದ್ದಕ್ಕಿದ್ದಂತೆ 'ಕೂಡಿಕೆ' ಬಗ್ಗೆ ಕೇಳಿದಾಗ ಏನೂ ತೋಚಲಿಲ್ಲ. ಈತನನ್ನು ಗಂಡನಂತೆಯೇ ಒಪ್ಪಿ ಮೀಸಲಾಗಬೇಕು; ಪ್ರತಿಫಲವಾಗಿ ಬದುಕಿಗೆ ಭದ್ರತೆ–ಇದು ಕೂಡಿಕೆಯ ವಾಡಿಕೆ. ಇದನ್ನು ತನ್ನ ಮನೆಯಲ್ಲೇ ಜಾರಿಗೆ ತರಬೇಕೆಂಬ ಒತ್ತಡ ಹುಲಿಯಂತೆ ನಿಂತಿದೆ. ಹಿಂದಿನಿಂದ ಬಂದ ಪದ್ಧತಿಯಾದರೂ ತನ್ನ ಮಗಳಿಗೆ ಇದನ್ನು ಹೇಳುವುದು ಹೇಗೆ? ವಾಡಿಕೆಗೆ ಆಕೆಯನ್ನು ಒಪ್ಪಿಸುವುದು ಹೇಗೆ? ಒಡೆಯರಿಗೆ ಇಲ್ಲವೆನ್ನುವುದು ಹೇಗೆ? ತಿಮ್ಮರಾಯಿ ಗೊಂದಲದಲ್ಲಿ ಬಿದ್ದಿದ್ದ. ಮಾತು ಬರಲಿಲ್ಲ.

"ಯಾಕ್ಲ ಸುಮ್ಕೆ ನಿಂತ್ಕಂಡೆ? ನಾನೇನ್ ಕೇಳ್‌ಬಾರದ್ ಕೇಳಿದ್ನೇನ್ಲ?"

ಒಡೆಯನ ಗಡಸು ಮಾತಿಗೆ ಬೆಚ್ಚಿದ ತಿಮ್ಮರಾಯಿ "ಅಂಗೇನಿಲ್ಲ ಒಡೆಯ" ಎಂದು ತಡವರಿಸುತ್ತ ನಿಂತ.

"ಮತ್ತಿನ್ಯಾಕ್ಲ ತಡ?"

"ಅದೂ..... ಅದೂ....."

"ದೂಸರ ಮಾತಾಡ್‌ಬ್ಯಾಡ; ನಮ್ಮಪ್ಪ ಮೂರ್ ಜನ ಇಟ್ಕಂಡಿದ್ದ. ಗೊತ್ತೇನ್ಲ?"

ತಿಮ್ಮರಾಯಿ ಸುಮ್ಮನೆ ನಿಂತು ನೆಲ ನೋಡುತ್ತಿದ್ದ.

"ಅದೆಲ್ಲ ನಂಗೊತ್ತಿಲ್ಲ; ನಾಳೀಕ್ ಬಂದು ಒಪ್ಪಿಗೆ ಅಂಬ್ತ ಯೇಳ್‌ಬೇಕು."

"ಬತ್ತೀನ್ ದಣೇರ."

ತಿಮ್ಮರಾಯಿ ದಾರಿ ಕಾಣದ ಮನಸ್ಸಲ್ಲಿ ಹಟ್ಟಿಯ ಹಾದಿ ಹಿಡಿದ. ನಿಜ; ಇದಕ್ಕೆ ಊರವರ ವಿರೋಧವೂ ಇರಲಿಲ್ಲ. ಒಡೆಯನ ಮನೆಯಲ್ಲಿ ಗದರಿದರೆ ಒಡತಿ ಸಾವಿತ್ರಮ್ಮನೂ ಸುಮ್ಮನಿರಬೇಕು. ಊರ ಒಡೆಯನಿಗೆ ಎದುರಾರು? ಆದರೆ ತನ್ನ ಮಗಳು ಇದಕ್ಕೆ ಒಪ್ಪುತ್ತಾಳೆಯೆ? ಅವರವರೇ ಇಷ್ಟಪಟ್ಟು ಕೂಡಿಕೆ ಮಾಡಿಕೊಂಡವರು ಇದ್ದಾರೆ. ಶ್ರೀಮಂತನೊ ಬಡವನೊ ಒಪ್ಪಿಗೆ ಇದ್ದಾಗ ಬೇರೆ ಮಾತು. ತನ್ನ ಮಗಳಿಗೆ ಈ ವಿಷಯ ತಿಳಿಸುವುದಕ್ಕೆ ನಾಲಗೆ ಅಲುಗಾಡುವುದೇ ಇಲ್ಲ. ತಿಳಿಸದೆ ಇರುವುದೂ ಸಾಧ್ಯವಿಲ್ಲ. ಯಾಕೆಂದರೆ ಒಡೆಯನಿಗೆ ಎದುರಾಗಿ ನಿಲ್ಲುವಂತಿಲ್ಲ; ನಿಲ್ಲಲಾಗುವುದಿಲ್ಲ.

ರಾತ್ರಿ ಚಿಂತೆಯಲ್ಲಿ ಮುಳುಗಿದ ತಿಮ್ಮರಾಯಿ ಚಡಪಡಿಸುತ್ತಿರುವುದನ್ನು ಕಂಡ ಶಬರಿ ತಾನೇ ಕೇಳಿದಳು.

"ಯಾಕಪ್ಪೊ ಒಂತರಾ ಇದ್ದೀಯ? ಏನಾತು?"

ತಿಮ್ಮರಾಯಿ ಮಗಳ ಮುಖ ನೋಡಿದ.

"ನನ್ ಬಾಳ್ವೇವ್ ಇಂಗಾತು ಅಂಬ್ತ ಸಂಕಟಾನೇನಪ್ಪ? ನೀನ್ ಯಾತ್ರುದು ಸಿಂತೆ ಮಾಡ್‌ಬ್ಯಾಡ. ಗಂಡ್‌ಮಗ ಇದ್ದಂಗಿರ್ತೀನಿ."

ತಿಮ್ಮರಾಯಿ ಮೆಲ್ಲಗೆ ಮಾತು ಶುರುಮಾಡಿದ.

"ಬಾಯಾಗೇಳ್ದಂಗೆಲ್ಲ ಇರಾಕಾಯ್ತದ ಮಗ್ಳೆ?"

"ಯಾಕಪ್ಪ ಆಗಾಕಿಲ್ಲ? ನಾನಿಲ್ ಇರಾದ್ ನಿಂಗ್ ಸರ್‌ಬರಾಕಿಲ್ವ? ಯೇಳು"

"ಎಲ್ಲಾನ ಉಂಟಾ ಮಗ್ಳೆ? ಕಣ್ಣೆದ್ರಿಗೇ ಮಗಳಿದ್ರೆ ಬ್ಯಾಡ ಅಂಬಾಕಾಯ್ತದ? ಆದ್ರೆ ಸಾಯಾಗಂಟ ಇಂಗೇ ಇರಾಕಾಯ್ತದ ಯೇಳು ಮತ್ತೆ. ಅದ್ಕೆ ಒಂದ್ ವಿಸ್ಯ ಯೇಳಾನ ಅಂಬ್ತ ಇವ್ನಿ."

"ಏನಪ್ಪ?"

"ಅದೇ..... ಅದೇ... ಒಡೇರ್ ಕರಿಸ್ಕಂಡಿದ್ರು"

"ಯಾಕಂತೆ?"

"ನಿನ್ನ.... ನಿನ್ನ... ಕೂಡಿಕೆ ಮಾಡ್ಕಂಬ್ತಾರಂತೆ."

ಶಬರಿ ಸಿಟ್ಟಾಗಲಿಲ್ಲ. ಸ್ವಲ್ಪ ಹೊತ್ತುಸುಮ್ಮನಿದ್ದು ಕೇಳಿದಳು.

"ಅದಕ್ ನೀನೇನಂದೆ?"

"ನಿನ್ನನ್ನ ಕೇಳಿ ಯೇಳ್ತೀನಿ ಅಂದೆ."

"ನನ್ನೇನ್ ಇದ್ರಾಗ್ ಕೇಳಾದು?"

ತಿಮ್ಮರಾಯಿಗೆ ಅಚ್ಚರಿ. ಮಗಳ ಮುಖ ನೋಡಿದ.

ಶಬರಿ ಮಾತು ಮುಂದುವರೆಸಿದಳು.

"ನನ್ ಕೇಳ್ತೀನಿ ಅಂಬಾದ್ಕಿಂತ ಅಲ್ಲೇ ಯೇಳ್ ಬರ್‌ಬೇಕಿತ್ತು. ಇದು ಆಗಾವೋಗೊ ಮಾತಲ್ಲ, ನನ್ ಮಗಳು ಒಪ್ಪಾಕಿಲ್ಲ ಅಂಬ್ತ"

"ಒಡೇರ್ಗೆ ಅಂಗೇಳಾಕಾಯ್ತದ ಮಗ್ಳೆ?"

"ಮಗಳಿಗೆ ಇಂಗೇಳಾಕಾಯ್ತದೆ. ಅಲ್ವೇನಪ್ಪ?"

ಶಬರಿ ವ್ಯಂಗ್ಯ–ವೇದನೆಗಳಿಂದ ಕೇಳಿದ ಮಾತಿಗೆ ತಿಮ್ಮರಾಯಿ ಮೌನವಾದ ಮುಂದೆ ಮಾತಾಡಲಿಲ್ಲ.

ಒಡೆಯರಿಗೆ ಉತ್ತರ ಕೊಡುವುದು ಹೇಗೆಂಬ ತಳಮಳದಲ್ಲಿ ಕಂಗಾಲಾಗಿದ್ದ

ಆದರೆ ಹೇಳಲೇಬೇಕಿತ್ತು.

ಮಾರನೇ ದಿನ ತಿಮ್ಮರಾಯಿ ಒಡೆಯನ ಬಳಿ ಬಂದವನೇ ಕಾಲು ಹಿಡಿದುಕೊಂಡ.

“ನನ್ ಮಗ್ಳು ಬ್ಯಾಡ ಅಂಬ್ತಾಳೆ ದಣಿ. ಬ್ಯಾಸ್ರ ಮಾಡ್ಕಬ್ಯಾಡ್ರಿ” ಎಂದ

“ಯಾಕೆ? ಅವ್ಳ್ಗೇನ್ ಕೊಬ್ಬಾ?” ಎಂದು ಕೇಳಿದ ಒಡೆಯ.

“ಅಂಗಲ್ಲ ದಣೇರ. ಮನ್ ಮನ್ನೆ ಗಂಡನ್ ಕಳ್ಕಂಡವ್ಳೆ. ಮನಸ್ನಾಗ್ ಅದೇ ಇರ್ತೈತೆ. ದಿನ ಕಳ್ದಂಗೆ ಸರ್ಯಾಗ್ತಾಳೆ ದಣಿ”– ತಿಮ್ಮರಾಯಿ ಸಮಾಧಾನಿಸಲು ಯತ್ನಿಸಿದ.

“ಆಯ್ತು. ಇವತ್ತಿಗ್ ಬಿಟ್ಟಿವ್ನಿ. ಅವ್ಳ್ ಬ್ಯಾರೆ ಯಾರ್ಗೂ ಸಿಗ್‌ಬಾರ್ದು. ಅಂಗೇನಾರ ಇದ್ರೆ ನಂಗೇ ಮೊದ್ಲು ಮೀಸಲು. ತಿಳೀತೇನ್ಲ?”

“ಆಯ್ತು ದಣೇರ”– ತಿಮ್ಮರಾಯಿ ನಿರಾಳವಾದಂತೆ ಥಟ್ಟನೆ ಹೇಳಿದ. ಸದ್ಯ, ಒಡೆಯ ಒದೆಯಲಿಲ್ಲವೆಂದು ಸಂತೋಷಗೊಂಡು ಹಿಂತಿರುಗಿದ.

ಮತ್ತೆ ಮಗಳ ಬಳಿ ಈ ವಿಷಯ ಎತ್ತಲಿಲ್ಲ.
ಮಗಳು ಏನಾಯಿತೆಂದು ಕೇಳಲಿಲ್ಲ.
ಆ ಬಗ್ಗೆ ಮಾತಾಡುವುದೇ ಅಸಹ್ಯವೆನಿಸಿತ್ತು.

ನರನಾಡಿಗಳಲ್ಲಿ ಹರಿಯುವ ನೋವಿನ ಹಾವು.
ಮತ್ತದೇ–
ಚಂದ್ರನಿಲ್ಲದೆ ಬೆಳದಿಂಗಳು ವಿಧವೆ!
ಸೂರ್ಯ, ನೀನೆಂದು ಬರುವೆ?

* * *

ಹೌದು; ಎಲ್ಲ ನೆನಪುಗಳ ನಡುವೆ ಈಗ ಶಬರಿಯ ಮುಂದಿರುವ ಪ್ರಶ್ನೆ–

‘ಸೂರ್ಯ ನೀನೆಂದು ಬರುವೆ?’

ಚಂದ್ರನನ್ನು ಕಳೆದುಕೊಂಡವಳು ಈಗ ಸೂರ್ಯನಿಗಾಗಿ ಹಂಬಲಿಸುತ್ತಿದ್ದಾಳೆ. ಇಲ್ಲೀವರೆಗೆ ಬಂದ ನೆನಪುಗಳಲ್ಲಿ ಚಂದ್ರನ ಶವ ಕಂಡ ಶಬರಿ ಬೆಚ್ಚಿಬಿದ್ದು ನೋಡುತ್ತಾಳೆ–

ಅದೇ ಕತ್ತಲು: ಅದೇ ಬಿರುಗಾಳಿ; ಗುಡುಗು ಮಿಂಚುಗಳ ಸಂಚಿನಾಟ!
ಮಿಂಚಿನ ಚಳಕಿನಲ್ಲಿ ತೇಲಿಬರುವ ಚಂದ್ರನ ಹೆಣ.
ಗುಡುಗಿನ ಸದ್ದಿಗೆ ನಡುಗಿ ನಿಂತು ಹೋದ ಜೀವ.

ಕತ್ತಲ ಕಣಿವೆಯಲ್ಲಿ ನೆನಪಿನ ನೆತ್ತರ ಕಲೆಗಳು!

ಬೆತ್ತಲಾದ ಮನಸಲ್ಲಿ ಸತ್ತೂ ಸಾಯದ ಸೆಳೆತಗಳು!

ಶಬರಿ ಹೊಟ್ಟೆಯನ್ನು ನೋಡಿದಳು. ಅಯಾಚಿತವಾಗಿ ಅಂದುಕೊಂಡಳು. "ತೇಜ, ತೇಜ". ಮಗನಿಗೆ ಮಾತಿಲ್ಲ.

ಹೊಟ್ಟೆಯೊಳಗಿನ ಜೀವ. ಭ್ರೂಣಗಟ್ಟಿದ ಭಾವ. ಶಬರಿಗೆ ಸಂಕಟ. ಅಲ್ಲೇ ಇದ್ದ ಹುಚ್ಚೀರನ ಕಣ್ಣಲ್ಲಿ ನೀರು.

ಶಬರಿಯನ್ನು ಕಾಡುವ ಸಾವಿನ ಸರ್ಪ!

ಅಂದು ಗಂಡ ಚಂದ್ರನ ಸಾವು; ಇಂದು ತಂದೆ ತಿಮ್ಮರಾಯಿ ಸಾವು.

ಹಾಗಾದರೆ ಸೂರ್ಯ?

ಸೂರ್ಯ ಯಾಕೆ ಇಷ್ಟು ದಿನಗಳಾದರೂ ಬರಲಿಲ್ಲ.

ಇನ್ನೆಷ್ಟು ದಿನ ಕಾಯುವುದು? ಶಬರಜ್ಜಿಯಾಗಬೇಕೆ? ಕಾಯುತ್ತಲೇ ಕಾಯಿಪಲ್ಲೆಗಳನ್ನು ಕೂಡಿಡಬೇಕೆ? ಕಣ್ಣಿಗೆ ಎಣ್ಣೆ ಹಾಕಿಕೊಂಡು ಹಾದಿ ನೋಡುತ್ತಲೇ ಇರಬೇಕೆ?

ಎದ್ದ ಪ್ರಶ್ನೆಗಳನ್ನು ಬಡಿದು ಬೀಳಿಸುವಂತೆ ಬಿರುಗಾಳಿ ಬೀಸಿತು.

ನೋಡು ನೋಡುತ್ತಿದ್ದಂತೆಯೇ ಗಾಳಿಯ ಬಿರುಸು ಕಡಿಮೆಯಾಗಿ ಮಳೆ ಶುರುವಾಯಿತು. ಇದ್ದಕ್ಕಿದ್ದಂತೆ ಜೋರು ಮಳೆ. ಹೊರಗೆ ಇದ್ದ ಶಬರಿ ಎದ್ದು ಒಳ ಹೋದಳು. ಜೊತೆಗೆ ಹುಚ್ಚೀರನೂ ಹೋದ. ಒಳಗೆ ಬಾಗಿಲ ಬಳಿಯೇ ಕೂತ.

ತಿಮ್ಮರಾಯಿಯನ್ನು ಮಣ್ಣುಮಾಡಿ ಬಂದ ಮೇಲೆ ಗೂಡಲ್ಲಿ ಇಟ್ಟಿದ್ದ ದೀಪ ಹಾಗೇ ಉರಿಯುತ್ತಿತ್ತು.

ಹೊರಗೆ ಮಿಂಚು; ಮಳೆ.

ಶಬರಿ ಹೊರಗೆ ಬಂದಳು; ದಿಟ್ಟಿಸಿದಳು.

ಕರದರಲ ಕಣಿವೆಯಲ್ಲಿ ಬೆಳಕಿನ ನೀರು.

ಮತ್ತೆ ನೆನಪಿನ ನೆತ್ತರನದಿ....

# ೪

ಅಂದು ಇದೇ ರೀತಿಯ ರಾತ್ರಿ ; ಗುಡುಗು–ಮಿಂಚುಗಳ ಮಧ್ಯೆ ಸೀಳಿಬರುವ ಬಿರುಗಾಳಿ. ಇವುಗಳ ಅಬ್ಬರ ಕಡಿಮೆಯಾದಂತೆ ರೊಯ್ಯೆಂದು ಸುರಿದ ಮಳೆ. ಮಳೆಯ ಮಧ್ಯೆ ಮಲಗಿದ ಹಟ್ಟಿ. ಸುತ್ತ ಬೆಟ್ಟದ ಮೇಲಿಂದ ಹರಿಯುವ ಝರಿಯ ಸದ್ದು. ಮಳೆ ಕಡಿಮೆಯಾದ ಸೂಚನೆ. ಎಚ್ಚರವಾಗೇ ಇದ್ದ ಶಬರಿ. ಮೂಲೆಯಲ್ಲಿ ಮುದುರಿಕೊಂಡಿದ್ದ ತಿಮ್ಮರಾಯಿ.

ಯಾರೋ ನಡೆದು ಬಂದ ಸಪ್ಪಳ.

ಶಬರಿ ಕೇಳಿಸಿಕೊಂಡಳು. ಯಾರಿರಬಹುದು? ಮಳೆ ಕಡಿಮೆಯಾಯಿತೆಂದು ಹುಚ್ಚೀರ ತನ್ನ ಗುಡಿಸಲಿಂದ ಇಲ್ಲಿಗೆ ಬರುತ್ತಿರಬಹುದೆ?

ಕಾಲ ಸಪ್ಪಳ ಬಾಗಿಲ ಬಳಿ ನಿಂತಿತು.

ಕ್ಷಣಹೊತ್ತು ಸದ್ದೇ ಇಲ್ಲ.

ಶಬರಿ ಕಿವಿ ನಿಮಿರಿ ಕೂತಳು.

ಸ್ವಲ್ಪ ಹೊತ್ತಿನ ನಂತರದಲ್ಲಿ ಬಾಗಿಲು ಬಡಿದ ಸದ್ದು.

“ಯಾರು?” – ಶಬರಿ ಕೇಳಿದಳು.

ಉತ್ತರವಿಲ್ಲ.

“ಯಾರದು?”– ಮತ್ತೆ ಕೇಳಿದಳು– ಸ್ವಲ್ಪ ಜೋರಾಗಿ. ಮಾತಿಲ್ಲ, ಕತೆಯಿಲ್ಲ.

ಶಬರಿಗೆ ಸ್ವಲ್ಪ ಗಾಬರಿ. ಅಪ್ಪ ತಿಮ್ಮರಾಯೀನ ಏಳಿಸಿದಳು. “ಯಾರೊ ಬಾಗಿಲು ಬಡೀತಾ ಅವ್ರೆ–ಕೇಳಿದ್ರೆ ಮಾತೇ ಆಡ್ತಿಲ್ಲ”– ಎಂದಳು. “ಅಂಗಾರೆ ಆ ಮೂಗ, ಹುಚ್ಚೀರ್ನೆ ಇರ್ಬೇಕು. ಮಾತು ಬಂದ್ರಲ್ವ ಮಾತಾಡಾದು. ಬಾಗ್ಲು ತಗಿ” ಎಂದ ತಿಮ್ಮರಾಯಿ.

ಶಬರಿಗೆ ಇದು ಸರಿ ಅನ್ನಿಸಿತು. ಬಂದು ಬಾಗಿಲು ತೆಗೆದಳು.

ಆಶ್ಚರ್ಯ! ಬಾಗಿಲಲ್ಲಿ ನಿಂತ ವ್ಯಕ್ತಿ ಹುಚ್ಚೀರನಲ್ಲ! ಯಾರೋ ಗೊತ್ತಿಲ್ಲ! ಹೊಸ ಮುಖ. ಯುವಕ; ಷರಟು ಪ್ಯಾಂಟು ಹಾಕಿದ್ದ. ಬಗಲಲ್ಲಿ ಒಂದು ಚೀಲ. ಥೇಟ್ ಚಂದ್ರನ ಇನ್ನೊಂದು ರೂಪ. ಚಂದ್ರನಿಗಿಂತ ಹೊಳಪು ಮುಖ.

ಶಬರಿಗೆ ಏನು ಮಾಡಬೇಕೆಂದು ಗೊತ್ತಾಗದೆ “ಯಪ್ಪೊ ಯಪ್ಪೊ” ಎಂದು ಕೂಗಿದಳು.

"ಏನವ್ವ ಅದು" ಎಂದು ತಿಮ್ಮರಾಯಿ ಎದ್ದು ಬಂದು ನೋಡಿದ; ಆತನಿಗೂ ಅಚ್ಚರಿ. ಬಂದಿದ್ದ ವ್ಯಕ್ತಿ ಕೇಳಿದ – "ಒಳಗೆ ಬರಬಹುದೆ?"

"ಅಲ್ಲಪ್ಪ, ಇಂಗ್ ಸರ್‌ವೊತ್ನಾಗೆ ಬಂದು ಬರ್‌ಬವ್ದೆ ಅಂದ್ರೆ? ಈಟಕ್ಕೂ ನೀನ್ ಯಾರು, ಏನ್ಕತೆ?" – ತಿಮ್ಮರಾಯಿ ಕೇಳಿದ.

"ಗಾಬರಿ ಆಗ್‌ಬೇಡಿ. ನಾನು ನಿಮ್ಮ ಆಶ್ರಯ ಕೇಳಿ ಬಂದಿದ್ದೀನಿ."

–ಆತ ನಸುನಗುತ್ತ ಹೇಳಿದ. ಮತ್ತೆ "ಒಳಗ್ ಬರ್ಲಾ?" ಎಂದ.

"ಇದೊಳ್ಳೆ ಚಂದಾಗೈತೆ! ಇಂಗ್ ಇದ್‌ಕಿದ್ದಂಗೆ ಕೇಳಿರೆ ಏನಪ್ಪ ಯೇಳಾದು? ಒಳ್ಳೆ ಕಾರ್ ಕತ್ತಲಿನಾಗೆ ಸೂರ್ಯ ವುಟ್ದಂಗಾತು ನೋಡು" ಎಂದ ತಿಮ್ಮರಾಯಿ.

ಕೂಡಲೇ ಆ ಯುವಕ ಹೇಳಿದ – "ನನ್ ಹೆಸರು ಸೂರ್ಯ."

ಶಬರಿಯಲ್ಲಿ ಮಿಂಚು.

ಚಂದ್ರ, ಮದುವೆಯ ದಿನ ಈತನಿಗಾಗಿಯೇ ಕಾದಿದ್ದು. ಆಗ ಕಡೆಗೂ ಬಾರದ ಈತ ಈಗ ಬಂದಿದ್ದಾನೆ. ಶಬರಿ ಈತನನ್ನು ಒಳಗೆ ಕರೆಯಬೇಕೆಂದು ಕೊಂಡಾಗಲೇ ಆತ ಮತ್ತೆ ಹೇಳಿದ– "ನಾನು ಚಂದ್ರನ್ ಗೆಳೆಯ".

"ಗೊತ್ತಾತು, ಗೊತ್ತಾತು, ಒಳೀಕ್ ಬರ್ರಿ" ಎಂದು ಶಬರಿ ಕರೆದಳು. ಇಷ್ಟು ಹೊತ್ತು ಹೊರಗೆ ನಿಲ್ಲಿಸಿ ತಪ್ಪು ಮಾಡಿದ ಭಾವ ಅವಳಲ್ಲಿತ್ತು. ಸೂರ್ಯ ಒಳಬರುತ್ತ ಹೇಳಿದ– " ನಂಗೆ ಎಲ್ಲಾ ವಿಷಯ ಗೊತ್ತಾತು. ನಿಮ್ಗೆ ಹೀಗಾಗ್‌ಬಾರ್ದಿತ್ತು."

ಆಗ ತಿಮ್ಮರಾಯಿ "ಅಯ್ಯೊ ಅವೆಲ್ಲ ಇವಾಗ್ಯಾಕಪ್ಪ ಮಾತು. ಬಾ ಕುಂತ್ಕ" ಎಂದು ಆ ಮಾತು ಮರೆಸಿ "ಶಬರವ್ವ, ಒಸಿ ವಲ್ಲಿ ಬಟ್ಟೆ ತಂದ್ಕೊಡವ್ವ, ನೆಂದ್ ಬಂದವ್ರೆ ನೆತ್ತಿ ಒರಿಸ್ಕಂಬ್ಲಿ" ಎಂದ.

ಶಬರಿ ವಲ್ಲಿಬಟ್ಟೆಯನ್ನು ತಂದುಕೊಟ್ಟಳು.

"ವಲ್ಲಿ ಬಟ್ಟೆ ಅಂದ್ರೆ ಏನೋ ಅಂದ್ಕೊಂಡಿದ್ದೆ. ಟವಲ್ಲಾ?" ಎಂದು ಸೂರ್ಯ ನಗುತ್ತ ಅದರಲ್ಲಿ ತಲೆ ಒರೆಸಿಕೊಂಡ.

"ಬಟ್ಟೆ ಎಲ್ಲ ನೆಂದ್ಯೈತೆ, ಆಕಡೆ ವೋಗ್ ಬಿಚ್ಚಾಕಪ್ಪ, ಪರವಾಗಿಲ್ಲ" ಎಂದ ತಿಮ್ಮರಾಯಿ.

ಸೂರ್ಯ, ರೂಮಿನಂತಿದ್ದ ಜಾಗಕ್ಕೆ ಹೋಗಿ ಬಟ್ಟೆ ತೆಗೆದ. ತಲೆ ಮೈ ಒರೆಸಿಕೊಳ್ಳತೊಡಗಿದ. ಶಬರಿ ಅಲ್ಲಿಗೇ ಬಂದಳು. ಸೂರ್ಯ ಮೈಮೇಲೆ ಟವಲನ್ನು ಹಾಕಿಕೊಂಡ.

"ಏನಾರ ತಿನ್ನಾಕ್ ಕೊಡ್ಲ" ಎಂದು ಕೇಳಿದಳು.

"ಹಸಿವಂತೂ ಆಗಿದೆ. ಏನಾದ್ರು ಕೊಟ್ರೆ ನಿನಿಗ್ ಪುಣ್ಯ ಬರುತ್ತೆ ಶಬರಿ" ಎಂದು ಸೂರ್ಯ ನಸುನಕ್ಕ.

"ಓ..... ನನ್ ಯೆಸ್ರೂನು ಗೊತ್ತ ನಿಮ್ಗೆ?"

"ಚಂದ್ರ ನನ್ನ ಗೆಳೆಯ ಅಂದಮೇಲೆ ಎಲ್ಲಾ ಗೊತ್ತಿರಬೇಕಲ್ಲ?"

"ಚಂದ್ರ ನಿಮಿಗ್ ತುಂಬಾ ದಿನದಿಂದ ಗೊತ್ತಾ?"

"ಹಾಗೇನಿಲ್ಲ; ತೀರಾ ಇತ್ತೀಚಿನ ಪರಿಚಯ."

ಅಷ್ಟರಲ್ಲಿ ತಿಮ್ಮರಾಯಿ "ಬರೀ ಮಾತ್ನಾಗೇ ವೊಟ್ಟೆ ತುಂಬಿಸ್‌ಬ್ಯಾಡ. ಏನಾರ ಹಿಟ್ಟೋ, ರೊಟ್ಟೀನೋ ಮಾಡವ್ವ ಬ್ಯಾಗ್ ಬ್ಯಾಗ" ಎಂದ.

ಶಬರಿ "ಆಯ್ತಪ್ಪ" ಎಂದು ಒಲೆ ಮುಂದಕ್ಕೆ ಬಂದಳು.

ಅಷ್ಟರಲ್ಲಿ ಹುಚ್ಚೀರ ಮೆಲ್ಲನೆ ಒಳಗೆ ಬಂದ. ತಿಮ್ಮರಾಯಿ ಆತನ ಪರಿಚಯ ಹೇಳಿದ.

"ಇವ್ನು ಹುಚ್ಚೀರ ಅಂಬ್ತ. ಮಾತ್ ಬರಲ್ಲ. ಮೂಗ."

ಸೂರ್ಯ, ಹುಚ್ಚೀರನ ಹತ್ತಿರಬಂದು ಆತನ ಬೆನ್ನು ತಟ್ಟಿದ. ಹುಚ್ಚೀರನಿಗೆ ಖುಷಿಯಾಯಿತು. ಈ ಸ್ಪರ್ಶದಲ್ಲಿ ಏನೋ ಸುಖ ಇತ್ತು. ಯಾಕೆಂದರೆ ಅದರ ಹಿಂದೆ ಪ್ರೀತಿಯಿತ್ತು. ಸೂರ್ಯ "ಚನ್ನಾಗಿದ್ದೀಯೇನಪ್ಪ?" ಎಂದು ಕೇಳಿದಾಗ ಹುಚ್ಚೀರನ ಕಣ್ಣು ತುಂಬಿ ಬಂತು. ಈ ಮನುಷ್ಯ ಎಷ್ಟು ಒಳ್ಳೆಯವನು ಅಂತ ಒಳಗೇ ಆನಂದಪಟ್ಟ. ಸೂರ್ಯ ಕೂತುಕೊಳ್ಳುತ್ತ ತಿಮ್ಮರಾಯೀನ ಕೇಳಿದ–

"ಅಲ್ಲಜ್ಜ, ನಿನ್ ಮಗಳಿಗೆ ಶಬರಿ ಅಂತ ಯಾಕ್ ಹೆಸರಿಟ್ಟೆ?"

"ಅಯ್ಯೊ ಯೆಸರಿಡಾಕೆಲ್ಲ ಏನಾರ ನೆವ ಏನಿರ್‌ತೈತಪ್ಪ, ಆ ಸ್ಯಬರಜ್ಜೀನೂ ನಮ್ಮಂಗೆ ಗುಡುಸ್ಲಾಗಿದ್ದಲು; ಕಾಡು ಮೇಡು, ಬೆಟ್ಟ ಗುಡ್ಡ ಅಲ್ಕಂಡಿದ್ಲು. ಅವಳೂ ನಮ್ಮೋಳೆ. ಅದ್ಕೆ ಅದೇ ಯೆಸರಿನಾಗ್ ಕರ್‍ಯಾಕ್ ಸುರುಮಾಡ್ದೆ; ಎಲ್ಲಾರೂ ಅಂಗೇ ರೂಡಿ ಮಾಡ್ಕಂಡ್ರು. ಆಟೇಯ" ಎಂದು ತಿಮ್ಮರಾಯಿ ಹೇಳುವ ವೇಳೆಗೆ ಶಬರಿ ತಿನ್ನಲು ತಂದುಕೊಟ್ಟಳು.

ಸೂರ್ಯನಿಗೆ ಹಸಿವಾಗಿತ್ತು. ಚನ್ನಾಗಿ ತಿಂದು ತೇಗಿದ. ಆನಂತರ ಅತ್ತಿತ್ತ ದೃಷ್ಟಿ ಹಾಯಿಸಿ "ನಾನು ಒಂದಷ್ಟು ದಿನ ಇಲ್ಲೇ ಇರಾನ ಅಂತ ಬಂದಿದ್ದೀನಿ. ಆಗಬಹುದಾ?" ಎಂದು ಕೇಳಿದ.

ತಿಮ್ಮರಾಯಿಗೆ ತಕ್ಷಣ ಉತ್ತರ ಕೊಡಲಾಗಲಿಲ್ಲ. ಶಬರಿಯ ಕಡೆ ನೋಡಿದ. ಶಬರಿಗೂ ಮಾತು ಹೊರಡಲಿಲ್ಲ. ಇಂತಹ ವಿಷಯಗಳಲ್ಲಿ ಅಪ್ಪನೇ ಒಂದು ತೀರ್ಮಾನಕ್ಕೆ ಬರಬೇಕು ಅಂತ ಅವಳು ಅಂದುಕೊಂಡು ಸುಮ್ಮನೆ ನಿಂತಿದ್ದಳು.

ಹುಚ್ಚೀರ ಏನು ತಾನೆ ಹೇಳಬಲ್ಲ? ಮಿಕಿ ಮಿಕಿ ನೋಡುತ್ತಿದ್ದ. ಸ್ವಲ್ಪ ಸಾವರಿಸಿಕೊಂಡು ತಿಮ್ಮರಾಯಿ ಕೇಳಿದ–

"ಅಲ್ಲಪ್ಪ, ನೀನೂ ನಮ್ ಚಂದ್ರ ಗೆಣೆಕಾರ್ರು ಅಂಬಾದ್ನ ಸುಮ್ ಸುಮ್ಕೆ ಯಂಗಪ್ಪ ನಂಬಾದು?"

ಈ ಮಾತಿನಿಂದ ಸೂರ್ಯನಿಗೆ ಬೇಸರವಾಗಬಹುದೆಂದು ಶಬರಿ ಭಾವಿಸಿದಳು. ಆದರೆ ಸೂರ್ಯ ನಸುನಗ್ತಾ ತನ್ನ ಬಗಲು ಚೀಲದೊಳಗೆ ಏನೋ ಹುಡುಕಿದ. ಕಡೆಗೆ ಒಂದು ಫೋಟೋ ತೆಗೆದು ತಿಮ್ಮರಾಯಿಗೆ ತೋರಿಸಿದ.

"ಇಲ್ನೋಡಜ್ಜ, ಈ ಫೋಟೊ ನೋಡು, ನಿಮ್ ಚಂದ್ರ–ನಾನು ಒಟ್ಟಿಗೆ ಇದ್ದೀವಿ." ಎಂದು ಹೇಳುತ್ತಿದ್ದಂತೆ ತಿಮ್ಮರಾಯಿ ಅದನ್ನು ನೊಡಿ "ಸುಮ್ಕೆ ಅಂಗಂದೆ ಕಣಪ್ಪ, ಬ್ಯಾಸ್ರ ಮಾಡ್ಕಬ್ಯಾಡ" ಎಂದ.

"ಇದ್ಕೆಲ್ಲ ಬ್ಯಾಸ್ರ ಮಾಡ್ಕಂಡ್ರೆ ನಮ್ ಕೆಲ್ಸ ಮಾಡಾಕಾಗುತ್ತೇನಜ್ಜ?" ಎಂದು ಸೂರ್ಯ ಫೋಟೋನ ಮತ್ತೆ ಬಗಲು ಚೀಲಕ್ಕೆ ಸೇರಿಸಿದ.

"ನಿನ್ ಕೆಲ್ಸ ಏನಪ್ಪ?"– ತಿಮ್ಮರಾಯಿ ಕೇಳಿದ.

"ಹೀಗೇ ಜನಗಳ ಜೊತೆ ಬೆರೆಯೋದು, ಅವರಿಗಾಗಿ ದುಡ್ಯೋದು."

"ಅದೂ ಒಂದ್ ಕೆಲ್ಸಾನ?"– ತಿಮ್ಮರಾಯಿ ಚಕಿತನಾಗಿ ರಾಗ ಎಳೆದ.

"ನಮಗೆ ಇದೇ ಮುಖ್ಯವಾದ ಕೆಲ್ಸ ಕಣಜ್ಜ. ನಿಮ್ಗೆಲ್ಲ ಒಳ್ಳೇದಾದ್ರೆ ಅದ್ಕಿಂತ ಬೇರೆ ಭಾಗ್ಯ ಯಾವುದಿದೆ ಹೇಳು. ಬಡವರ ಬಾಳಿಗ್ ಬೆಳಕು ಬರ್ಬೇಕು ಕಣಜ್ಜ ಬೆಳಕು. ಈಗ ನೋಡು, ನೀವು ಬುಡಕಟ್ನೋರು ಬೆವರು ಬಸೀತೀರಿ; ಎರಡು ಹೊತ್ತಿಗೆ ತಿನ್ನೋಕ್ ಸಿಕ್ಕಿದ್ರೆ ಸಾಕು ಅಂತ ಜೀವನ ಇಡೀ ದುಡೀತಾನೇ ಇರ್ತೀರಿ. ಇನ್ನೂ ಒಳ್ಳೇ ದಿನ ಬರುತ್ತೆ ಅಂತ ಸಾಯೋವರ್ಗೂ ಕಾಯ್ತಾನೇ ಇರ್ತೀರಿ..."

"ಆ ಸ್ಯಾಬರಜ್ಜೀನೂ ಕಾಯ್ತಾನೇ ಇದ್ಲಲ್ಲ. ಕಡೆಗೆ ಆಯಪ್ಪ ಸೀರಾಮ ಬಂದೇ ಬಿಟ್ನಲ್ಲ!"

"ಈಗ ಒಳ್ಳೇದಿನ ತನಗೆ ತಾನೇ ಬರಲ್ಲಜ್ಜ. ನಾವು ಬರೋಹಾಗ್ ಮಾಡ್‌ಬೇಕು. ನಿನ್ ಮಗಳು ಶಬರಿ ಅಜ್ಜಿ ಆಗೋಕ್ ಮುಂಚೆ ಒಳ್ಳೇ ದಿನ ಬರ್ಬೇಕು ಗೊತ್ತಾ?"

"ನಮ್ಗೂ ಅವ್ರಿವ್ರ್ ಕಾಲ್‌ಕಟ್ಟಿ ಸಾಕಾಗೋಗೈತೆ ಕಣಪ್ಪ. ನೋಡಾನ ಯಾವತ್ತು ಒಳ್ಳೇದಿನ ಕಾಣ್ತೀವೊ ಅಂಬ್ತ. ಇವಾಗೇನಪ್ಪ, ನೀನಿಲ್ಲೆ ಎಲ್ಡ್ ದಿನ ಇರ್ತೀಯ; ಆಟೆ ತಾನೆ?"

"ಎರಡು ದಿನಾನೇ ಇರ್ತೀನೊ ಎಷ್ಟು ದಿನ ಇರ್ತೀನೊ ಗೊತ್ತಿಲ್ಲ ಕಣಜ್ಜ. ನಿಮ್ ಚಂದ್ರ ಬುಡಕಟ್ಟಿನೋರ್‍ಗೆ ಒಳ್ಳೇದು ಮಾಡ್ಬೇಕು ಅಂತ ನನ್ ಹತ್ರ ಹೇಳ್ತಾನೇ ಇದ್ದ. ಈಗ ಅವ್ನ್ ಆಸೆ ಈಡೇರ್‍ಸೋಕೆ ಏನಾದ್ರು ಮಾಡೋಣ ಅಂತಿದ್ದೀನಿ."

"ಏನ್ ಮಾಡ್ತೀಯೊ ಏನ್ ಕತೆಯೊ ಎಲ್ದ್ ದಿನ ನಮ್ಮ ಜೋಪಡೀನಾಗೇ ಇರು. ಆಮ್ಯಾಕ್ ನೋಡಾನ."

ಆಗ ಹುಚ್ಚೀರ ತನ್ನ ಗುಡಿಸಲಲ್ಲೇ ಇರಲೆಂದು ಸನ್ನೆ ಮಾಡಿ ತಿಳಿಸಿದ.

ಶಬರಿ ಕೂಡಲೇ ಹೇಳಿದಳು–

"ಏನು? ನಿನ್ನ ಜೋಪಡಿನಾಗಿರ್‍ಬೇಕ? ಮದ್ಲೇ ಮುರುದೋಗ್ಯೆತೆ. ಅಲ್ಲೇನು ಬ್ಯಾಡ. ಅಪ್ಪಯ್ಯ ಯೇಳ್ದಂಗೆ ಇಲ್ಲೇ ಇರ್‍ಲಿ. ಆಮ್ಯಾಕ್ ನೋಡಾನ."

ಹುಚ್ಚೀರ ನಿರಾಶೆಯಿಂದ ಸುಮ್ಮನಾದ. ಸೂರ್ಯ ಸಮಾಧಾನ ಹೇಳಿದ. "ನಿನ್ ಗುಡಿಸ್ಲೀಗೂ ಬರ್‍ತೀನಿ ಹುಚ್ಚೀರ. ನಂಗೇನ್ ಸ್ವಂತ ಮನೆ ಇಲ್ಲ. ಮಠ ಇಲ್ಲ. ಎಲ್ಲರ ಮನೇನೂ ನನ್ ಮನೆ ಅಂದ್ಕಂಡ್ರಾಯ್ತು. ಎರಡು ದಿನ ಈ ಗುಡಿಸ್ಲು. ಆಮೇಲೆರಡು ದಿನ ನಿನ್ ಗುಡಿಸ್ಲು. ಇಲ್ಲ ಅಂದ್ರೆ ಆ ಕಡೆ ದೇವರ ಕಟ್ಟೆ ಇದ್ಯಲ್ಲ ಅದ್ರ ಮೇಲೆ ಆರಾಮವಾಗ್ ಮಲಗ್ತೀನಿ. ಆ ದೇವ್ರೇ ನನ್ ಕಾವಲು ಕಾಯ್ಬೇಕು" ಎಂದು ಸೂರ್ಯ ನಕ್ಕ.

ತಿಮ್ಮರಾಯಿಗೆ ದೇವರ ಬಗ್ಗೆ ಹಗುರವಾಗಿ ಮಾತಾಡಿದ್ದು ಸರಿಬರಲಿಲ್ಲ. "ಅಂಗಾರ್ ನೀನೇನು ದ್ಯಾವ್ರಿಗಿಂತ ದೊಡ್ಡಾನ? ದ್ಯಾವ್ರು ನಿನಗ್ ಕಾವಲಿರ್‍ಬೇಕು ಅಂದ್ರೇನು ಉಡುಗಾಟಾನ? ಯಾಕೊ ನಿನ್ ಮಾತು ಸರ್ ಬರಾಕಿಲ್ಲ ಬಿಡು" ಎಂದು ಹೇಳೇಬಿಟ್ಟ.

"ಇಷ್ಟಕ್ಕೆಲ್ಲ ಬೇಜಾರಾದ್ರೆ ಹೇಗಜ್ಜ? ಸುಮ್ನೆ ತಮಾಷೇಗ್ ಹಾಗಂದೆ. ನಾನು ಯಾರ್‍ಗೂ ದೊಡ್ಡೋನಲ್ಲ. ಚಿಕ್ಕೋನೂ ಅಲ್ಲ. ನಾನು, ನೀನೂ ಈ ಹುಚ್ಚೀರ ಎಲ್ಲಾ ಒಂದೇ ಕಣಜ್ಜ," ಎಂದು ಸೂರ್ಯ ಸಮಜಾಯಿಷಿ ನೀಡಿದಾಗ, ಇನ್ನು ಮಾತು ಮುಂದುವರೆಯುವುದು ಬೇಡವೆಂದು ತಿಳಿದ ಶಬರಿ "ಏಟೋತ್ನಿಂದ ನಡ್ಕಂಡ್ ಬಂದ್ರೊ ಏನೋ; ಅದೂ ಈ ಗಾಳಿಮಳೇನಾಗ ಒಬ್ರೇ ದಣಿದು ಬಂದಿವ್ರಿ, ಬರ್‍ರಿ ಮಲೀಕಳ್ರಿ" ಎಂದಳು.

"ಮಾತಿಗ್ ಮದ್ಲು ಇರ್‍ತೈತೇ ವೊರ್‍ತು ಕೊನೆ ಇರಾಕಿಲ್ಲ. ವೋಗಪ್ಪ ಅಲ್ ಮಲೀಕ. ಇನ್‌ಮ್ಯಾಕೆ ಆ ಜಾಗಾನೇ ನಿಂದು ಅಂಬ್ತ ತಿಳ್ಕ" ಎಂದು ತಿಮ್ಮರಾಯಿ ರೂಮಿನಂತಿದ್ದ ಭಾಗವನ್ನು ತೋರಿಸಿದ. ಅದು ಗುಡಿಸಲಿನ ಪಡಸಾಲೆಗೆ

ಹೊಂದಿಕೊಂಡಿದ್ದ ಪ್ರತ್ಯೇಕ ಭಾಗ. ಆ ಕಡೆಗೆ ಹೋಗಲು ಏಳುತ್ತ ಸೂರ್ಯ ಹೇಳಿದ–

"ಊರಿನ ಜನ ಹೀಗೆಲ್ಲ ಒಳ್ಗಡೆ ಜಾಗ ಕೊಡ್ತಿದ್ರೇನಜ್ಜ! ಹೊರ್ಗಡೆ ಅಂಗಳದಾಗೊ ಹಜಾರ್‌ದಾಗೊ ಮಲಗು ಅನ್ನೋರು."

"ನಿಂದೊಳ್ಳೆ ಮಾತಾತು. ನಮ್‌ತಾವೇನೈತೆ ನೀನ್ ವೊತ್ಕಂಡೋಗ ಅಂತಾದು. ಈಟಕ್ಕೂ ನೀನು ನಮ್ಮಂಗೇ ಒಬ್ ಮನ್ಸ" ಎಂದು ತಿಮ್ಮರಾಯಿ ಸರಳವಾಗಿ ತನ್ನ ತತ್ವವನ್ನು ಹೇಳಿದ.

"ಈ ಸಮಾಜ ನಿಮ್ಮನ್ನೂ ಮನುಷ್ಯರು ಅಂತ ತಿಳ್ಕೊಂಡ್ರೆ ಎಷ್ಟು ಚೆನ್ನಾಗಿರುತ್ತೆ" ಎಂದು ಸೂರ್ಯ ಶಬರಿಯ ಕಡೆ ನೋಡಿದ.

ಶಬರಿಯಲ್ಲಿದ್ದ ಸಂಕಟ ಸಿಟ್ಟಾಗಿ ಹೊರಬಂತು.

"ನಮ್ಮನ್ನ ಮನುಸ್ರು ಅಂಬ್ತ ತಿಳ್ಕಮಾಕೆ ಮದ್ಲು ಆ ದೊಡ್‌ಜನ ಮನುಸ್ರಾಗಿರ್ಬೇಕಲ್ಲ? ಅವ್ರಿಗೆ ನಾವ್ ಕಾಲಕಸಕ್ಕಿಂತ ಕಡೆ. ಆ ಚಂದ್ರ ಸತ್ತಾಗ ಈ ಹುಚ್ಚೀರನ್ನ ದನಕ್ ಬಡ್ದಂಗ್ ಬಡುದ್ರು."

ಶಬರಿಗೆ ಇಷ್ಟು ತಿಳುವಳಿಕೆ ಇದೆ ಅಂತ ಸೂರ್ಯನಿಗೆ ಅನ್ನಿಸಿರಲಿಲ್ಲ. ಆಕೆ ಹೀಗೆಲ್ಲ ಮಾತಾಡಬಹುದು ಅಂತ ತಿಮ್ಮರಾಯಿಗೂ ತಿಳಿದಿರಲಿಲ್ಲ. ಆತ ಕೂಡಲೇ ಪ್ರತಿಕ್ರಿಯಿಸಿದ.

"ಯೇ ಆ ವಿಸ್ಯ ಇವಗ್ಯಾತುಕ್ ಬಿಡವ್ವ. ದೊಡ್ಡಾರ್ ಮಾತೆಲ್ಲ ನಮಗ್ಯಾಕೆ?"

"ದೊಡ್ಡೋರು ಅಂಬ್ತ ಕೊಪ್ಪರಿಗೆ ಎಣ್ಣೆ ಕಾಯ್ಸಿ ತಲೆವ್ಯಾಲ್ ಸುರ್ಕಮಾಕಾಗ್ತೈತಾ? ಚಂದ್ರ ದ್ಯಾವರ್ ಗುಡೀತಾವ ಯಾಕ್ ಸತ್ನೋ ಏನ್ ಕತ್ನೊ ಅದಕ್ಕೆ ಈ ಹುಚ್ಚೀರನ್ನ ಹುಚ್‌ನಾಯಿ ತರಾ ಅಟ್ಟಿಸ್ಕಂಡ್ ಹೊಡೀಬೇಕಾ?"

ಹುಚ್ಚೀರ ಮೈಮುದುಡಿಕೊಂಡು ಕೂತಿದ್ದ.

ನಿಜ; ಚಂದ್ರ ಸತ್ತ ಮೇಲೆ ಹುಚ್ಚೀರನಿಗೆ ಒದೆ ಬಿದ್ದದ್ದು ನಿಜ. ಚಂದ್ರನ ಜೊತೆ ಹುಚ್ಚೀರನೂ ಗುಡಿಯ ಬಳಿ ಬಂದಿದ್ದ ಎಂಬುದೇ ಇದಕ್ಕೆ ಕಾರಣ. ಊರ ಒಡೆಯರು ಈ ಆರೋಪ ಮಾಡಿ ಹಟ್ಟಿಯಲ್ಲಿ ಅಟ್ಟಿಸಿಕೊಂಡು ಹೊಡೆದಿದ್ದರು. "ಯಾಕ್ ಗುಡಿ ಹತ್ರ ಬಂದಿದ್ದೆ?" ಎಂದೆಲ್ಲ ಪ್ರಶ್ನೆಗಳ ಸುರಿಮಳೆ. ಹುಚ್ಚೀರ ಮಾತು ಬಾರದೆ ಏನೆಲ್ಲ ಸದ್ದು ಮಾಡಿ ತಿಳಿಸಿದರೂ ಯಾರೂ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಆತ ಏನು ಹೇಳುತ್ತಾನೆಂಬುದು ಯಾರಿಗೂ ಬೇಕಿರಲಿಲ್ಲ. ಹಟ್ಟಿಗೆ ಬಂದ ಊರ ಒಡೆಯರು "ಹುಚ್ಚೀರನ್ನ ಹಿಡ್ಕಂಡ್ ಬರ್ರಿ" ಎಂದಾಗ ಮರಗಿಡಗಳ ಮಧ್ಯೆ ಓಡಿದ್ದ. ಆದರೆ

ತಪ್ಪಿಸಿಕೊಳ್ಳಲಾಗಲಿಲ್ಲ. ಒಡೆಯರ ಭಂಟರು ಹಿಡಿದು ತಂದರು. ಒಡೆಯರು ಒದ್ದರು; ಪೂಜಾರಪ್ಪನೂ ಎರಡು ಕೊಟ್ಟ. ತಿಮ್ಮರಾಯಿ ರೇಗಾಡಿದ.

ಶಬರಿಯೊಳಗೆ ಸಂಕಟದ ಸರೋವರ.
ಅಲ್ಲಿರುವ ನೀರಿಗೆ ಬೆಂಕಿಯ ಬಿಸಿ.
ಬಿಸಿಯಲ್ಲಿ ಬೆಂದ ಹೂಗಳು.
ಕರುಕಲಾಗಿ ಕಂಗೆಟ್ಟ ಎಲೆಗಳು.
ಇದ್ದಲ್ಲೇ ಇರುವ ಕುದಿವ ಸರೋವರ.

ಶಬರಿ ಮಾತಾಡಲಿಲ್ಲ. ಚಲಿಸಿದ ನಾಲಗೆ, ಅದುರಿದ ತುಟಿ ಮಾತಾಗಿ ಮೂಡಲಿಲ್ಲ.

ಸರೋವರ ತಣ್ಣಗಾಯಿತು.
ಹೂಗಳು ಅರಳುವುದು ಮುದುಡುವುದು ನಡೆದೇ ಇತ್ತು.
ಮಾತಾಗಿ ಮೂಡಲು ಇಷ್ಟು ಕಾಲ ಬೇಕಾಗಿತ್ತು.

ಸೂರ್ಯ ಒತ್ತಾಯಿಸಿ ವಿವರಗಳನ್ನು ಪಡೆದ. ತಿಮ್ಮರಾಯಿಗೆ ಆ ಮಾತು ಮುಂದುವರೆಸುವುದು ಬೇಕಿರಲಿಲ್ಲವಾದ್ದರಿಂದ ಒತ್ತಾಯ ಅನಿವಾರ್ಯವಾಗಿತ್ತು. ಶಬರಿ ಅಳುತ್ತಲೇ ತನಗೆ ತಿಳಿದಷ್ಟು ಹೇಳಿದಳು. ಗುಡಿ ಒಳಗಡೆ ದೇವರ ಕಿರೀಟ ಕಾಣಿಸಿದ್ದು ಬಿಟ್ಟರೆ ಬೇರೇನೂ ಗೊತ್ತಿಲ್ಲ ಎಂದಳು. ಏನೋ ಗದ್ದಲವಾದಂತಾಗಿ ಮೊದಲೇ ಬೆದರಿ ಕೂತಿದ್ದ ತಾನು ಓಡಿಬಂದ ಸಂಗತಿ ವಿವರಿಸಿದಳು.

"ಅದ್ಸರೀ, ಹುಚ್ಚೀರ ಚಂದ್ರನ ಜೊತೆ ಗುಡಿ ಹತ್ರ ಹೋಗಿದ್ದ ಅನ್ನೋದ್ಕೆ ಸಾಕ್ಷಿ ಏನು? ಯಾರ್ ನೋಡಿದ್ರು?"– ಸೂರ್ಯ ಕೇಳಿದ.

"ಸಾಕ್ಷಿ ಕೇಳಾಕ್ ಯಾರವ್ರೆ ಇಲ್ಲಿ. ಒಡೇರ್ ಯೇಳಿದ್ ಮ್ಯಾಗೆ ಅದೇ ದ್ಯಾವ್ರ್ ಮಾತಿದ್ದಂಗೆ"–ಶಬರಿ ಅದೇ ಸಂಕಟದಲ್ಲಿ ಹೇಳಿದಳು.

"ಹುಚ್ಚೀರ ಏನ್ ಹೇಳ್ತಾನೆ?"

"ಚಂದ್ರ ಸತ್ತಾಗ್ನಿಂದ ಮಂಕ್ ಬಡ್ದ್ ಕುಂತವ್ನೆ. ಅದೇನೊ ಸನ್ನೆ ಮಾಡ್ತಾನೆ. ಒಂದು ತಿಳ್ಯಾಕಿಲ್ಲ. ಅವ್ನೂ ಸರ್ಯಾಗ್ ಸನ್ನೆ ಮಾಡಾಕಿಲ್ಲ. ಒಟ್ನಾಗೆ ಅವ್ನು ಮದಿಲ್‌ನಂಗಿಲ್ಲ."

ಹುಚ್ಚೀರ ಮಂಕು ಬಡಿದಂತೆ ಇದ್ದದ್ದು ನಿಜ. ಆತನಿಗೆ ಏನೋ ಹೇಳುವುದಕ್ಕೆ ಇತ್ತು ಎಂದೆನ್ನಿಸಿದರೂ ಆಗುತ್ತಿಲ್ಲ. ಮಾತಂತು ಮೊದಲೇ ಇಲ್ಲ.

ಇಷ್ಟೆಲ್ಲ ಮಾತುಕತೆ ಆಗುವ ವೇಳೆಗೆ ತಿಮ್ಮರಾಯಿಯ ತಾಳ್ಮೆ ತಪ್ಪಿತು. "ಸುಮ್ಕೆ ಮಲೀಕಂಡ್ರಾಗಾಕಿಲ್ವ? ಬಂದ್ ಬಂದಾನೆ ಏನೇನೊ ಕೇಳ್ತಿದ್ದೀಯಲ್ಲಪ್ಪ. ನಾವೇನ್ ಮರ್ವಾದೆ ಇಟ್ಕಂಡ್ ಬಾಳ್ವೆ ಮಾಡಾದ್ ಬ್ಯಾಡ್ವ?" ಎಂದು ಕೇಳಿಯೇ ಬಿಟ್ಟ.

ಸೂರ್ಯನಿಗೆ ಕಸಿವಿಸಿಯಾಯಿತು. ತಿಮ್ಮರಾಯಿ ಹತ್ತಿರ ಬಂದು ಕೂತು ಹೇಳಿದ–

"ತಪ್ಪಾಯ್ತು ಅಜ್ಜ. ಏನೋ ಮಾತಿಗ್ ಮಾತು ಬಂತು ಅಂತ ಇಷ್ಟೆಲ್ಲ ಕೇಳಿ ತಿಳ್ಕೊಂಡೆ. ನಿಮ್ ಮರ್‍ಯಾದೆ ಕಳ್ಯೊ ಕೆಲ್ಸ ನಾನ್ ಮಾಡಲ್ಲ. ಬೇಸರ ಮಾಡ್ಕೋಬೇಡ."

"ಆಯ್ತಾಯ್ತು. ಮಲಕಳ್ರಿ"– ಎಂದು ತಿಮ್ಮರಾಯಿ ಶಬರಿಯ ಕಡೆ ನೋಡಿದ.

ಶಬರಿ ಒಂದು ಈಚಲು ಚಾಪೇನ ಸೂರ್ಯನು ಮಲಗಬೇಕಾದ ಜಾಗಕ್ಕೆ ಹಾಕಿದಳು. ಜೊತೆಗೆ ಒಂದು ಹಳೇ ಕಂಬಳಿ ಇಟ್ಟಳು. ಸೂರ್ಯ ಮಲಗಲು ಹೋದ. ಹುಚ್ಚೀರ ತನ್ನಾರಕ್ಕೆ ತಾನು ಎದ್ದು ಹೋದ.

ರಾತ್ರಿ ಎಷ್ಟು ಹೊತ್ತಾದರೂ ಶಬರಿಗೆ ನಿದ್ದೆ ಬರಲಿಲ್ಲ.

ಇವತ್ತು ಎಷ್ಟೆಲ್ಲ ಮಾತಾಡಿದೆ ಎನ್ನಿಸಿತು. ಗೌರಿಯ ಜೊತೆ ಅಷ್ಟಿಷ್ಟು ಹಂಚಿಕೊಂಡು ಅತ್ತದ್ದು ಬಿಟ್ಟರೆ ಸಿಟ್ಟಾಗಿ ನುಡಿದದ್ದು ಈಗಲೇ. ಒಳಗಿನ ಉರಿ ಹೊರಗೆ ಹರಿದದ್ದರಿಂದಲೋ ಏನೊ ಸ್ವಲ್ಪ ನಿರಾಳ ಎನಿಸಿತ್ತು. ಆದರೆ ಇವತ್ತು ತಾನೆ ನೋಡಿದ ಹೊಸ ಮನುಷ್ಯನ ಎದುರು ಇಷ್ಟೆಲ್ಲ ಮಾತಾಡಬೇಕಿತ್ತೆ ಅಂತ ಒಮ್ಮೊಮ್ಮೆ ಅನ್ನಿಸಿತು. ಕಡೆಗೆ ಅದರಲ್ಲಿ ತಪ್ಪೇನು ಅಂತ ಸಮಾಧಾನವೂ ಆಯಿತು. ಮಾತು ಬಾರದ ಹುಚ್ಚೀರನನ್ನು ಹೊಡೆದು ಬಡಿದು ನೋಯಿಸಿದ್ದು ತನ್ನೊಳಗೆ ಅದೆಷ್ಟು ದಿನದಿಂದ ಕೆಂಡವಾಗಿ ಕೂತಿತ್ತು! ಒಳಗೇ ಸುಡ್ತಾ ಇದ್ದದ್ದನ್ನ ಬೂದಿ ಆಗೋಕೆ ಮುಂಚೆ ಹೊರಗಾಕಿದ್ದು ತಪ್ಪೇನಲ್ಲ ಎಂದು ತನಗೆ ತಾನೇ ಸಮರ್ಥಿಸಿ ಕೊಂಡಳು–ಮೌನವಾಗಿ.

ಮೌನವೇ ಹೀಗೆ.
ಮಾತಿಗೆ–ಆಡಿದಷ್ಟೇ ಸಾಲುಗಳು.
ಮೌನಕ್ಕೆ–ಲೆಕ್ಕವಿಲ್ಲದಷ್ಟು ಸಾಲುಗಳು.
ಮಾತು–ಆಕಾರ; ಮೌನ–ನಿರಾಕಾರ.
ನಿರಾಕಾರ ಆಕಾರವಾಗಲು ನಡೆಸುವ ಸೆಣಸೇ ಒಂದು ಚರಿತ್ರೆ.

ಶಬರಿಗೆ ಇಷ್ಟೆಲ್ಲ ತಿಳುವಳಿಕೆ ಹೇಗೆ ಬಂದೀತು? ಆದರೆ ಯಾತನೆಯ ಅನುಭವ ಅವಳಿಗಿಂತ ಬೇರೆ ಯಾರಿಗೆ ಅಷ್ಟು ಇದ್ದೀತು!

ಶಬರಿ, ಮಾತಾಗುವ ಮೌನ.
ಹುಚ್ಚೀರ, ಮಾತಾಗದ ಮೌನ
ಶಬರಿಯದು ಮೌನದ ಮಾತು.
ಹುಚ್ಚೀರನದು ಮಾತಿನ ಮೌನ
ಹಾಗಾದರೆ ಸೂರ್ಯ?

ಬಂದ ದಿನವೇ ಕಾಡಿಸಿದ ಸೂರ್ಯನ ನೆನಪಲ್ಲಿ ಶಬರಿ ನಿದ್ದೆ ಹೋದಳು. ಎಂದಿನಂತೆ ಹೊತ್ತಿಗೆ ಮುಂಚೆ ಎದ್ದಳು. ಸೀದಾ ಸೂರ್ಯನಿದ್ದ ಜಾಗಕ್ಕೆ ಬಂದು ನೋಡಿದಳು.

ಅಲ್ಲಿ ಸೂರ್ಯ ಇಲ್ಲ!
ಮಡಿಚಿದ ಕಂಬಳಿ, ಸುತ್ತಿಟ್ಟ ಚಾಪೆ.
ಸೂರ್ಯನೂ ಇಲ್ಲ; ಬಗಲು ಚೀಲವೂ ಇಲ್ಲ!

ಗಾಬರಿಯಾಯಿತು. ಒಳಗೆಲ್ಲೂ ಇಲ್ಲ. ಹೊರಗೆ ಬಂದಳು. ಸುತ್ತೆಲ್ಲ ನೋಡಿದಳು. ಹಟ್ಟಿಯ ಹೊರಬಂದು ದಿಟ್ಟಿಸಿದಳು. ಕಾಣಿಸಲಿಲ್ಲ. ಹಟ್ಟಿಯ ಒಳಗೆ ಬರುವಾಗ ಪೂಜಾರಪ್ಪ ಬೀಡಿ ಸೇದುತ್ತ ಕೂತಿದ್ದ.

"ಗೌರಿ ಏನಾರ ಕೊಡವ್ವ ಕುಡ್ಯಾಕೆ" ಎಂದು ಕೂಗಿ ಹೇಳುತ್ತಿದ್ದ.

ಗೌರಿ, ಪೂಜಾರಪ್ಪನ ಮಗಳು. ಅವಳದೊಂದು ಕತೆ. ಪೂಜಾರಪ್ಪನ ಕಾಟ ತಾಳಲಾರದೆ ಇವಳ ತಾಯಿ ಮನೆಯನ್ನೇ ಬಿಟ್ಟು ಹೋಗಿದ್ದಳು. ಅದಕ್ಕೆ ಮುಂಚೆ ನಿತ್ಯ ಜಗಳ; ಪೂಜಾರಪ್ಪ ಹೆಂಡತಿಗೆ ಹೊಡೆಯದ, ಬಯ್ಯದ ದಿನಗಳೇ ಇರಲಿಲ್ಲ. ಕುಡಿಯೋದು, ಬಡಿಯೋದು. ಕಡೆಗೆ ರೋಸಿ ಹೋದ ಗೌರಿಯ ತಾಯಿ ತವರು ಮನೆಗೆ ಹೋದಳು. ಬೇರೊಬ್ಬನ ಜೊತೆ ಕೂಡಿಕೆ ಮಾಡಿಕೊಂಡು ಸಂಸಾರ ನಡೆಸತೊಡಗಿದಳು. ಗೌರಿ ಆಗಾಗ್ಗೆ ತಾಯಿಯನ್ನ ನೋಡಲು ಹೋಗುತ್ತಿದ್ದಳು. ಆದರೆ ಪೂಜಾರಪ್ಪ ಅದಕ್ಕೂ ಹರಕತ್ತು ಮಾಡಿದ. "ಅವ್ನ ಗಾಳಿ ಸೋಕಿದ್ರೆ ನಿನ್ ಗ್ವಾಮಾಳೆ ಕಿತ್ತಾಕ್ ಬಿಡ್ತೇನಿ" ಎಂದು ಹೆದರಿಸಿದ. ಒಂದೆರಡು ಸಾರಿ ಹೊಡೆದ. ಕಡೆಗೆ ಗೌರಿ, ಕದ್ದೂ ಮುಚ್ಚೆ ತಾಯಿ ಕಡೆ ಹೋಗಿ ಬರುತ್ತಿದ್ದಳು–ಅದೂ ತುಂಬಾ ಅಪರೂಪವಾಗಿ. ಇದಕ್ಕೆ ಶಬರಿಯ ಸಹಾಯ ಇತ್ತು. ಶಬರಿ ಹೇಳಿದಾಗೆಲ್ಲ ಹುಚ್ಚೀರ ಗೌರೀನ ಕರ್ಕೊಂಡು

ತಾಯಿ ತೋರಿಸ್ಕಂಡು ಬರ್‍ತಿದ್ದ. ಇತ್ತೀಚೆಗೆ ಇದೆಲ್ಲ ಇಲ್ಲವೇ ಇಲ್ಲ ಅನ್ನೋವಷ್ಟು ಅಪರೂಪವಾಗಿದೆ.

ಸೂರ್ಯನ ವಿಷಯವನ್ನ ಈಗಲೇ ಗೌರಿಗೆ ಹೇಳಲೆ ಎಂದುಕೊಂಡಳು– ಶಬರಿ. ಪೂಜಾರಪ್ಪ ಇರುವಾಗ ಬೇಡ ಎಂದುಕೊಂಡು ಹುಚ್ಚೀರನ ಬಳಿ ಬಂದಳು. ಆತನನ್ನು ಸನ್ನೆಯ ಮೂಲಕವೇ ಕೇಳಿದಳು. ಆತನಿಗೆ ಪೂರ್ಣ ಅರಿವಾಗಲಿಲ್ಲ. ಕರಕೊಂಡು ಬಂದಳು. ಸೂರ್ಯ ಮಲಗಿದ್ದ ಜಾಗ ತೋರಿಸಿ– ಈತ ಎಲ್ಲಿ ಹೋದ–ಎಂಬಂತೆ ಸನ್ನೆ ಮೂಲಕ ಕೇಳಿದಳು. ಆತ ತಿಳಿಯದೆಂದು ತನ್ನದೇ ಹಾವಭಾವದಿಂದ ಸ್ಪಷ್ಟಪಡಿಸಿದ.

ಅಷ್ಟರಲ್ಲಿ ತಿಮ್ಮರಾಯಿ ಎದ್ದು ಕೂತಿದ್ದ. ಶಬರಿ ತಕ್ಷಣವೇ ಹೇಳಿದಳು.

"ಯಪ್ಪ, ಸೂರ್ಯ ಕಾಣುಸ್ತಿಲ್ಲ."

"ನೀರ್ಕಡೀಕೆಲ್ಲೊ ವೋಗಿರ್ಬೇಕು ಬಿಡು."

"ನೀರ್ಕಡೀಕ್ ಈಟೊತ್ತೋಗ್ತಾರ? ಅವ್ರ್ ತಗಂಡ್ ಬಂದಿದ್ರಲ್ಲ ಬಗಲು ಚೀಲ, ಅದೂ ಇಲ್ಲ ಕಣಪ್ಪೊ."

"ಅದಕ್ ನಾನೇನವ್ವ ಮಾಡ್ಲಿ? ಅವ್ನೇನು ಯಾರ್‍ನಾರ ಕೇಳ್ ಬಂದಿದ್ನ? ಇವಾಗ್ಲೂ ಆಟೇ; ಯಾರ್‍ನೂ ಕೇಳ್ ವೋಗಿಲ್ಲ. ಅದಕ್ಯಾಕ್ ತಲೆ ಕೆಡಿಸ್ಕಂಬ್ತೀಯ."

ಶಬರಿಗೆ ಈ ಮಾತು ಸರಿಬರಲಿಲ್ಲ.

"ನೀನು ರಾತ್ರಿ ಬ್ಯಾಸ್ರ ಮಾಡ್ಕಂಡ್ ಮಾತಾಡ್ದೆ ನೋಡು. ಅದುಕ್ ಅವ್ರಿಗೆ ಬ್ಯಾಸ್ರ ಆಗಿ ವೊಂಟೋದ್ರೊ ಏನೊ"– ಎಂದಳು.

"ಅದೇನವ್ವ ನಾನ್ ಅನ್‌ಬಾರದ್ದಂದೆ. ನಿಂದೊಳ್ಳೆ ಕತೆಯಾತು" ಎನ್ನುತ್ತಾ ತಿಮ್ಮರಾಯಿ ಹೊರಹೋದ.

ಶಬರಿಗೆ ಸಮಾಧಾನವಾಗಲಿಲ್ಲ. ಬಗಲು ಚೀಲ ಇಲ್ಲದೆ ಇದ್ದುದು ಆಕೆಯ ಆತಂಕಕ್ಕೆ ಕಾರಣವಾಗಿತ್ತು. ಇಲ್ಲೇ ಎಲ್ಲೊ ಹೋಗಿದ್ದರೆ ಚೀಲವನ್ನು ಯಾಕೆ ತೆಗೆದುಕೊಂಡು ಹೋಗುತ್ತಿದ್ದ– ಎಂಬ ಪ್ರಶ್ನೆ ಕೆಣಕುತ್ತಿತ್ತು. ಒಮ್ಮೊಮ್ಮೆ ತಾನ್ಯಾಕೆ ಇಷ್ಟೊಂದು ಆತಂಕಗೊಳ್ಳಬೇಕೆಂದು ಕೇಳಿಕೊಂಡದ್ದೂ ಉಂಟು.

ಕಾರಣಗಳು ಕ್ಷಣಕ್ಷಣಕ್ಕೂ ಸ್ಪಷ್ಟವಾಗುತ್ತಿದ್ದರೆ ಬದುಕು ಎಷ್ಟು ನಿರಾಳವಾಗುತ್ತಿತ್ತು! ಗುಬ್ಬಚ್ಚಿಗೂಡಿನ ಎಳೆಗಳನ್ನು ಸ್ಪಷ್ಟವಾಗಿ ಬಿಡಿಸಲಾದೀತೆ? ನಾರು ಬೇರುಗಳೆಲ್ಲ ಒಂದರೊಳಗೊಂದು ಸೇರುತ್ತ ಪ್ರತ್ಯೇಕತೆಯನ್ನು ಕಳೆದುಕೊಳ್ಳುತ್ತ ಒಟ್ಟು ಒಂದು ಗೂಡಾಗಿ ರೂಪುಗೊಂಡ ಪರಿಯನ್ನು ನಿಂತ ನಿಲುವಿನಲ್ಲೇ ವಿವರಿಸಲಾದೀತೆ?

ಶಬರಿಯ ಮನಸ್ಸಿನಲ್ಲೊಂದು ಗುಬ್ಬಚ್ಚಿಗೂಡು.
ನಾರು ಬೇರುಗಳು ಹೆಣೆದುಕೊಂಡ ಹಣತೆ ಬೀಡು.
ಗಾಳಿಗೆ ತುಯ್ದಾಡುವ ಬೆಳ್ಳಿ ಬೆಳಕು–ಗುಬ್ಬಚ್ಚಿದನಿ.
ಬೆಳಕು ಆರಬಾರದು.
ಆದರೆ ಗೂಡಿಗೆ ಗೂಡೇ ಭಗ್ಗೆಂದರೆ?
ನಾರು ಬೇರುಗಳು ಸುಟ್ಟು ಬೂದಿಯಾದರೆ?

ಇಲ್ಲ, ಹಾಗಾಗಬಾರದು. ಒಮ್ಮೆ ಕಂಡ ಸೂರ್ಯನ ಶಾಖಕ್ಕೆ ಸುಟ್ಟು ಹೋಗಬಾರದು......

ಶಬರಿ ಒಲೆ ಹಚ್ಚಿದಳು. ಹಿಟ್ಟು ಮಾಡಿದಳು. ಆನಂತರ ಹುಚ್ಚೀರನ ಜೊತೆ ಊರ ಒಡೆಯನ ಹೊಲಕ್ಕೆ ಕೂಲಿ ಕೆಲಸಕ್ಕೆ ಹೋದಳು. ಜೊತೆಗೆ ಗೌರಿಯೂ ಇದ್ದಳು.

ಸಾಯಂಕಾಲ ಹಟ್ಟಿಗೆ ಬಂದವಳೆ ಒಳಗೆಲ್ಲ ಕಣ್ಣು ಹಾಯಿಸಿದಳು. ತಿಮ್ಮರಾಯಿ ತನಗೇನೂ ಸಂಬಂಧವಿಲ್ಲವೆಂಬಂತೆ ಕೂತು ಸೇಂದಿ ಕುಡಿಯುತ್ತಿರುವುದನ್ನು ಕಂಡಳು.

"ಈಟೋತ್ಗೇ ಸುರು ಮಾಡ್ಕಂಡ?" ಎಂದು ಕುಟುಕಿದಳು. "ಆ ಪೂಜಾರಪ್ಪ ತಂದ್ ಕೊಟ್ಟ ಕಣವ್ವ" ಎಂದ ತಿಮ್ಮರಾಯಿ.

"ಪೂಜಾರಪ್ಗೇನು, ಒಡೇರ ಗಡಂಗ್‌ನಾಗೆ ಬಿಟ್ಟಿ ಕೊಡ್ತಾರೆ."

"ನಂಗೂ ಬಿಟ್ಟೀನೆ ಕೊಟ್ಟ ಕಣವ್ವ."

ತಿಮ್ಮರಾಯಿ ಜೊತೆ ಇನ್ನು ಮಾತಾಡಿ ಪ್ರಯೋಜನವಿಲ್ಲ ಎಂದುಕೊಂಡಳು. ಹೊರಗೆ ಬಂದಳು.

ಆಕಾಶದಲ್ಲಿ ಕಪ್ಪು ಮೋಡಗಳು ದಟ್ಟವಾಗುತ್ತಿದ್ದವು.

ಸೂರ್ಯನ ಸುಳಿವಿಲ್ಲ.

* * * *

ಶಬರಿಗೆ ನಿದ್ದೆ ಬರಲಿಲ್ಲ. ಈ ಕಡೆ ಹುಚ್ಚೀರನಿಗೂ ನಿದ್ದೆಯಿಲ್ಲ. ಆತ ಹಟ್ಟಿಯಲ್ಲಿ ಅತ್ತಿಂದಿತ್ತ ಓಡಾಡುತ್ತಿದ್ದ. ಒಳಗಿನ ತಳಮಳಕ್ಕೆ ಹೊರಗಿನ ಕಳವಳ.

ಕಪ್ಪು ಮೋಡಗಳು; ಕಗ್ಗತ್ತಲು.

ಶಬರಿಯ ಗುಡಿಸಲಲ್ಲಿ ಮಾತ್ರ ಮಿಣುಕು ದೀಪ.

ಹುಚ್ಚೀರ ಕಿಟಕಿಯಂಥಾ ಒಂದು ಕಂಡಿ ಮೂಲಕ ನೋಡುತ್ತಾನೆ.

ಶಬರಿ ನಿದ್ದೆ ಮಾಡುತ್ತಿಲ್ಲ.

ತನ್ನದೇ ಸಂಜ್ಞೆ ಮೂಲಕ ಗಮನ ಸೆಳೆಯುತ್ತಾನೆ. ಆಕೆ ಬೆಚ್ಚಿ ನೋಡುತ್ತಾಳೆ.

"ನಿಂಗೇನೊ ಬಂತು ಕೆಟ್ಟಾಪತ್ತು? ವೋಗ್ ಮಲೀಕ ಸುಮ್ಕೆ" ಎನ್ನುತ್ತಾಳೆ. ಆತ–ನೀನು ಮೊದಲು ಮಲಗು–ಎಂದು ಸಂಜ್ಞೆ ಮಾಡುತ್ತಾನೆ.

ಈಕೆ ಆಯಿತು ಎಂದ ಮೇಲೆ ಆತ ಒತ್ತಾಯಕ್ಕೆ ಹೋಗುತ್ತಾನೆ.

ಶಬರಿಯು ಒತ್ತಾಯಪೂರ್ವಕವಾಗಿ ಮಲಗಲು ಯತ್ನಿಸುತ್ತಾಳೆ.

ಅಪರಿಚಿತನೊಬ್ಬ ಬಂದು ಇಲ್ಲೇ ಇರುತ್ತೇನೆಂದು ಹೀಗೆ ಒಂದೇ ರಾತ್ರಿಯಲ್ಲಿ ಹೇಳದೆ ಕೇಳದೆ ಹೋದರೆ ಏನೆಂದುಕೊಳ್ಳಬೇಕು. ಯಾಕೆ ಬಂದ, ಯಾಕೆ ಹೋದ? ಇರುವಷ್ಟು ಸಮಯದಲ್ಲೇ ಹತ್ತಿರವಾದಂತೆ ಯಾಕೆ ಕಾಣಿಸಿಕೊಂಡ? ಶಬರಿಗೆ ಯಾವುದೂ ನಿಖರವಾಗಲಿಲ್ಲ.

ಶಬರಿ ಎದ್ದು ಬಂದು ಹೊರಗೆ ಇಣುಕಿ ನೋಡಿದಳು. ಹುಚ್ಚೀರ ಇರಲಿಲ್ಲ. ಇದ್ದಕ್ಕಿದ್ದಂತೆ ಸೆಳೆಮಿಂಚು; ಶಬರಿ ಬೆದರಿದಳು. ಹಿಂದೆ ಬಂದು ಅಪ್ಪನ ಕಡೆ ನೋಡಿದಳು. ತಿಮ್ಮರಾಯಿ ಮಲಗಿದ್ದ. ತಾನೂ ಹೋಗಿ ಮಲಗಿದಳು.

ಎಲ್ಲ ಕಡೆ ನಿಶ್ಶಬ್ದ. ಗಾಳಿಯಾಡುತ್ತಿಲ್ಲ ಅಕಸ್ಮಾತ್ ಸಣ್ಣದಾಗಿ ಗಾಳಿ ಬೀಸಿದರೂ ಮರದೆಲೆಗಳ ಸದ್ದು ಕೇಳಿಸುವಂಥ ವಾತಾವರಣ. ಇದ್ದಕ್ಕಿದ್ದಂತೆ ಯಾರೋ ನಡೆದು ಬರುವ ಸದ್ದು ಕೇಳಿಸಿತು. ಕಿವಿ ನಿಮಿರಿ ಕೇಳಿಸಿಕೊಂಡಳು. ಹೆಜ್ಜೆ ಸಪ್ಪಳ ಹತ್ತಿರಕ್ಕೆ ಬಂದು ನಿಂತಿತು. ಶಬರಿ ಕೂತುಕೊಂಡಳು.

ಸಪ್ಪಳವಿಲ್ಲ!

ಹುಚ್ಚೀರನ ಓಡಾಟವಿರಬಹುದೇ ಎಂದುಕೊಳ್ಳುವ ವೇಳೆಗೆ ಬಾಗಿಲು ಬಡಿದ ಸದ್ದು.

ಶಬರಿ ಬಾಗಿಲು ಬಳಿ ಬಂದು "ಯಾರು?" ಎಂದು ಕೇಳಿದಳು. "ನಾನು ಸೂರ್ಯ" ಎಂಬ ಉತ್ತರ ಕೇಳಿ ಹಿಂದೆ ಮುಂದೆ ನೋಡದೆ ಬಾಗಿಲು ತೆಗೆದಳು. ಎದುರಿಗೆ ಸೂರ್ಯ ನಿಂತಿದ್ದ!

ಒಳಗೆ ಕರೆದಳು. ಬಂದ; ಉಸ್ಸೆಂದು ಬಗಲು ಚೀಲ ತೆಗೆದಿಟ್ಟ.

"ಇಂಗ್ ಬಂದು ಅಂಗ್ ವೋಗ್‌ಬಿಟ್ರೆ ನಾವೇನಂಬ್ತ ತಿಳ್ಕಮಾದು" ಎಂದು ಶಬರಿ ನೇರವಾಗಿ ಕೇಳಿದಳು.

"ಅದೆಲ್ಲ ಬೆಳಗ್ಗೆ ಹೇಳ್ತೀನಿ. ಈಗ ನಾನ್ ಮಲಗ್‌ಬೇಕು" ಎಂದು ಸೂರ್ಯ ಚಾಪೆ ಹಾಸಿಕೊಂಡ.

ಎಲಾ ಇವ್ನ! ನಾನು ಇಷ್ಟು ಹೊತ್ತು ಮಲಗದೆ ಎಲ್ಲಿ ಹೋದ್ನೊ ಏನಾದ್ನೊ

ಅಂತ ಸಂಕಟದಲ್ಲಿ ಸುಟ್ಟುಕೊಳ್ತಾ ಇದ್ರೆ ಇವಯ್ಯ ಬಂದೋನೆ ಮಲಗ್ತೀನಿ ಅಂತಾನಲ್ಲ– ಎಂದು ಶಬರಿ ತನ್ನೊಳಗೇ ಗೊಣಗಿಕೊಂಡಳಾದರೂ ಹೊರಗೆ ತೋರಗೊಡದೆ "ಉಂಬಾಕಿಲ್ವ?" ಎಂದು ಕೇಳಿದಳು.

"ಊಟ ಮಾಡ್ಕೊಂಡೆ ಬಂದಿದೀನಿ." ಎಂದು ಷರಟು ಬಿಚ್ಚಿ ಮಲಗಲನುವಾದ.

ಶಬರಿ ಅಲ್ಲಿಂದ ಹೊರಟಳು.

'ಮಲಗ್ಬೇಕು' ಎಂದು ಹೇಳಿದರೂ ಸೂರ್ಯ ನಿದ್ದೆ ಮಾಡಲಿಲ್ಲ. ಒಂದು ಕಿಲೋಮೀಟರ್ ದೂರ ನಡೆದು ಬಂದಿದ್ದ. ಅದರ ಆಯಾಸವೇನೂ ಇರಲಿಲ್ಲ. ಒಂದು ಕಿಲೋಮೀಟರ್ ದೂರದವರೆಗೆ ಗೆಳೆಯನೊಬ್ಬ ಬಿಟ್ಟುಹೋಗಿದ್ದ. ಈಗ ಇಲ್ಲಿ ಏನೇನು ಮಾಡಬೇಕೆಂಬ ಬಗ್ಗೆ ಯೋಚನೆ ಶುರುವಾಗಿ ಸೂರ್ಯನಿಗೆ ನಿದ್ದೆ ಹತ್ತಿರಲಿಲ್ಲ. ಶಬರಿಗಂತೂ ಅತ್ತ ಇತ್ತ ಹೊರಳಿ ಸಾಕಾಗಿತ್ತು.

ಈ ಮಧ್ಯೆ ಹುಚ್ಚೀರ ಬಂದು ಇಣುಕಿ ನೋಡಿ ಹೋಗಿದ್ದ.

ಒಟ್ಟಾರೆ ಎಲ್ಲರೂ ಬೆಳಗಾಗೋದನ್ನ ಕಾಯ್ತಾ ಇದ್ದಂತಿತ್ತು.

ತಿಮ್ಮರಾಯಿ ಎದ್ದವನೇ ಸೂರ್ಯನನ್ನು ನೋಡಿ ನಿಟ್ಟುಸಿರುಬಿಟ್ಟ.

"ಸದ್ಯ ಬಂದೆಲ್ಲ ಮಾರಾಯ. ಇದ್ಕಿದ್ದಂಗೆ ಮಂಗಮಾಯ ಆಗಿ ನಂಗೆ ದಿಗಲುಟ್ಟಿಸ್ಬಿಟ್ಟಿದ್ದೆಲ್ಲಪ್ಪ ನೀನು, ನಾನ್ ಒರಟಾಗ್ ಮಾತಾಡ್ದೆ ಅಂದ್ಕಂಡು ನೀನ್ ಮನೆ ಬಿಟ್ಹೋಗಿದ್ದೀಯಾಂಬ್ತ ನಮ್ ಸ್ಯಬರಿ ನಂಗ್ ಉಗ್ಯೋದೊಂದ್ ಬಾಕಿ ನೋಡು. ಅದ್ಕೆ ನಾನು ವೊತ್ತು ಮುಳ್ಗಾಕ್ ಮುಂಚೇನೇ ಬುಂಡೆ ಯೆಂಡ ತಂದು ಗಡದ್ದಾಗ್ ಕುಡ್ದು ಮಲೀಕಂಡ್ ಬಿಟ್ಟೆ" ಎಂದು ತಿಮ್ಮರಾಯಿ ಒಂದೇ ಉಸಿರಿಗೆ ಹೇಳಿದಾಗ ಶಬರಿ, ಸೂರ್ಯ, ಹುಚ್ಚೀರ ಎಲ್ಲರೂ ನಕ್ಕರು.

ಈ ವೇಳೆಗೆ ಪೂಜಾರಪ್ಪ ಒಳಗೆ ಬರುತ್ತ "ಏನ್ ತಿಮ್ಮರಾಯಿ ಯಾರೋ ನೆಂಟ್ರು ಬಂದಂಗೈತೆ" ಎಂದು ಕೇಳಿದ.

"ಬಾರಪ್ಪ ಬಾ ಕುಂತ್ಕ" ಎಂದು ಪೂಜಾರಪ್ಪನನ್ನು ಕರೆದು "ಒಂತರಾ ನೆಂಟ್ರೇ, ಅದೇ ನಮ್ ಚಂದ್ರ ಇದ್ನಲ್ಲ ಅವ್ನ್ ಗೆಣಕಾರ ಇವಪ್ಪ, ಸೂರ್ಯ ಅಂಬ್ತ" ಎಂದು ಪರಿಚಯಿಸಿದ.

ಸೂರ್ಯ ಪೂಜಾರಪ್ಪನಿಗೆ ನಮಸ್ಕರಿಸಿದ.

"ಅವ್ನು ಚಂದ್ರ, ನೀನು ಸೂರ್ಯ, ನೀನೂ ಅವ್ನಂಗೇ ಅದೇನು ಇದೇನು ಅಂಬ್ತ ಕೊಶ್ಚನ್ ಮಾಡ್ತೀಯೆನು?" – ಪೂಜಾರಪ್ಪ ಕೇಳಿದ.

"ಏನ್ ಮಾಡ್ತೀನಿ ಅಂತ ಈಗ್ಲೇ ಹೇಗ್ ಹೇಳೋದು? ಏನಾದ್ರು ಒಳ್ಳೆ ಕೆಲ್ಸ ಮಾಡೋಣಾಂತ ಇದ್ದೀನಿ"– ಸೂರ್ಯ ಲೋಕಾಭಿರಾಮವಾಗಿ ಹೇಳಿದ.

"ಈ ವೊಟ್ಟೆ ಮುಂದೆ ಯಾವ್ದು ಒಳ್ಳೇದೊ ಯಾವ್ದು ಕೆಟ್ಟುದ್ದೊ ಯಾರಿಗ್ಗೊತ್ತು? ವೊಟ್ಟೇಗ್ ಇಟ್ಟು ಉಟ್ಟಂಗಿದ್ರೆ ಅದೇ ಒಳ್ಳೇದು. ನಾನ್ ಯೇಳಾದಂತೂ ಈಟೆ ನೋಡಪ್ಪ." ಎಂದು ತನ್ನ ದೃಷ್ಟಿ ಧೋರಣೇನ ಮಂಡಿಸಿದ ಮೇಲೆ ಪೂಜಾರಪ್ಪ "ಬತ್ತೀನಿ ಒಡೇರ್ನ ನೋಡ್ಬೇಕು. ವೊತ್ತು ವುಟ್ಟಿದ್ಮೇಲೆ ಒಂದ್ ಕಿತ ಒಡೇರ್ನ ನೋಡಿದ್ರೆ ಈ ವೊಟ್ಟೇಗೇನು ಬರ ಬರಾಕಿಲ್ಲ. ಬತ್ತೀನ್ ತಿಮ್ಮರಾಯಿ. ಆಮ್ಯಾಕೆಲ್ಲ ಮಾತಾಡವ" ಎಂದು ಹೊರಟೇಬಿಟ್ಟ. ಆತನ ದಾರಿ ನೋಡುತ್ತಿದ್ದ ತಿಮ್ಮರಾಯಿ, ಅನಂತರ ಸೂರ್ಯನಿಗೆ "ನಮ್ ಅಟ್ಟೀನಾಗೆ ಈವಯ್ಯಂದೆ ಎಲ್ಲ ನಡ್ಯಾದು. ಊರ್ ಒಡೇರ್ಗೆ ಈ ಪೂಜಾರಪ್ಪನ್ ಮ್ಯಾಲೆ ಪಿರೀತಿ ಜಾಸ್ತಿ" ಎಂದು ಪರಿಚಯಿಸಿದ.

ಮೊದಲ ದಿನವೇ ವಿರೋಧಿಯ ಪರಿಚಯ ಆಯ್ತಲ್ಲ ಎಂದುಕೊಂಡು ಸೂರ್ಯ ಒಳಗೇ ನಕ್ಕ.

"ಹುಚ್ಚೀರನ್ ಕರ್ಕೊಂಡು ಬೆಟ್ಟದ ಕಡೆ ಹೋಗ್ ಬರ್ತೀನಿ" ಎಂದು ಸೂರ್ಯ ಹೊರಟು ನಿಂತ. "ಬಾ ಹುಚ್ಚೀರ" ಎಂದು ಹೆಗಲ ಮೇಲೆ ಕೈಹಾಕಿದ. ಹುಚ್ಚೀರನಿಗೆ ರೋಮಾಂಚನವಾಯ್ತು. ಖುಷಿಯಾಗಿ ಹೊರಟ.

ಸೂರ್ಯ ಹುಚ್ಚೀರನ ಜೊತೆ ಹೋದದ್ದನ್ನು ಗಮನಿಸಿದ ಹಟ್ಟಿಯವರಿಗೆ ಕುತೂಹಲ. ಇತರೆ ಹೆಂಗಸರು ಗೌರಿ ಬಳಿ ಬಂದು "ಯಾರವ್ವ ಈಯಪ್ಪ? ಸ್ಯಬರಿ ಮನೇಗ್ ಬಂದ್ಮ್ಯಾಗೆ ನಿಂಗೊತ್ತಿರ್ಬೇಕಲ್ವ" ಎಂದು ಕೇಳಿದರು. ಗೌರಿ, "ನಂಗೇನೂ ಗೊತ್ತಿಲ್ಲಮ್ಮ ಸರವೊತ್ನಾಗೆಲ್ಲೊ ಬಂದಂಗೈತೆ ಆಯಪ್ಪ, ಇವಾಗ ನಮ್ಮಪ್ಪಯ್ಯ ವೋಗಿ ಇಚಾರಿಸ್ಕಂಡ್ ಬಂದ್ರು. ಚಂದ್ರನ್ ಗೆಣೆಕಾರ ಅಂತೆ" ಎಂದಳು. ಆ ಹೆಂಗಸರು "ಪಾಪ! ಚಂದ್ರ ಸತ್ ಮ್ಯಾಲ್ ಬಂದವ್ನೆ ಈಯಪ್ಪ" ಎಂದು ನೊಂದುಕೊಂಡರು.

ತಿಮ್ಮರಾಯಿ ಹೊರಗೆ ಹೋಗುವುದನ್ನೇ ಕಾಯುತ್ತಿದ್ದ ಗೌರಿ ಸರಕ್ಕನೆ ಶಬರಿಯ ಬಳಿಗೆ ಹೋದಳು. "ಆಯಪ್ಪ ಯಾರೇ ಶಬರಿ" ಎಂದು ವಿಚಾರಿಸಿದಳು. ಶಬರಿ ಏನನ್ನೂ ಮುಚ್ಚಿಡದೆ ಎಲ್ಲವನ್ನೂ ವಿವರಿಸಿದಳು. "ಎಲ್ರಿಗೂ ನೀನೇ ಯೇಳ್ಬಿಟ್ರೆ ನನ್ನ ಕಷ್ಟ ತಪ್ತೈತೆ ನೋಡು" ಎಂದು ಶಬರಿ ನಕ್ಕಾಗ "ಯೇಳ್ದೆ ಇರಾಕಾಯ್ತದ? ಈಯಪ್ಪ ನಮ್ಮೋನೆ ನಮ್ಮೊಳ್ಳೇದಕ್ಕೇ ಬಂದವ್ನೆ ಅಂಬ್ತೀನಿ ಬ್ಯಾಗ್ ಬ್ಯಾಗ ಬಂದ್ ಬಿಡು. ಕೂಲಿ ಕೆಲ್ಸಕ್ ವೋಗ್‌ಬೇಕಲ್ಲ" ಎಂದು ಜ್ಞಾಪಿಸಿದಳು. ಶಬರಿ "ಆಯ್ತು" ಅಂತ ಹೇಳಿ ಬೇಗ ಹಿಟ್ಟು ಮಾಡಲು ಹೋದಳು.

ಸಂಜೆ ತಿಮ್ಮರಾಯಿ ಹೆಂಡದ ಬುಂಡೆ ಎತ್ತಿದಾಗ ಶಬರಿ ತಡೆದಳು.

"ನಿಂಗೇಟ್‌ಸಾರಿನಪ್ಪ ಯೇಳಾದು? ಕುಡ್ದೂ ಕುಡ್ದೂ ಕಳ್ ಸುಟ್ಹೋಗ್ತೈತೆ. ಆಟೇಯ" ಎಂದು ಬೇಸರದಿಂದ ಹೇಳಿದಳು.

"ನಿನ್ನವ್ವ ದ್ಯಾವ್ರ್ ಪಾದ ಸೇರಿದ್ ಮ್ಯಾಗಿಂದ ಇದೇ ನಿನ್ನವ್ವ ಆಗೈತೆ ಕಣವ್ವ" ಎಂದ ತಿಮ್ಮರಾಯಿ.

"ಏನಪ್ಪೊ ಇಂಗೆ ಮಾತಾಡ್ತೀಯ ನೀನು. ನನ್ನವ್ವನ್ನ ಈ ಯೆಂಡ ಅಂಬ್ತ ಕರೀತೀಯ? ಯೆಣ್ಣೆಂಗಸ್ರು ಅಂದ್ರೆ ಆಟಂದ್ ಸದ್ರ ಆಗೋತೇನು?"–ಗದರುವ ದಾಟಿಯಲ್ಲಿ ಹೇಳಿದಳು ಶಬರಿ.

ತಿಮ್ಮರಾಯಿ ತಬ್ಬಿಬ್ಬಾದ. "ಎಲ್ಲಾನ ಉಂಟೇನವ್ವ. ಈ ಯೆಂಡ ಎಲ್ಲಿ, ಆ ನಿನ್ನವ್ವ ಎಲ್ಲಿ... ಛೆ! ಛೆ! ಏನೋ ಅಂಗಂದೆ. ನಿನ್ನವ್ವ ಇಲ್ವಲ್ಲ ಆ ಸಂಕಟ ಇನ್ನೂ ವೋಗಿಲ್ಲ ಕಣವ್ವ. ಎದೇನಾಗೆ ಉರಿ ಅತ್ಕಂಡ್ ಭಗಭಗ ಅಂದಾಗ ವೊಟ್ಟೆ ಒಳೀಕೆ ಈ ಯೆಂಡ–ಸಾರಾಯಿ ಸೇರುಸ್ತೀನಿ. ಆಟೇಯ" ಎಂದು ಸಂಕಟದಿಂದ ಸಮಜಾಯಿಷಿ ನೀಡಿದ.

"ಸರ್ ಸರಿ, ನನ್ನವ್ವನ್ ನೆಪ್ತಿನಾಗೆ ಎದೆ ಉರೀತೈತೆ, ಯೆಂಡ ಸಾರಾಯ್ ಕುಡ್ದು ವೊಟ್ಟೆ ಉರ್ದು ಸುಟ್‌ವೋಗ್ತೈತೆ. ಕಡ್ಗೆ ನೋಡ್ ನೋಡ್ತಾ ಇದ್ದಂಗೆ ನೀನೇ ಸುಟ್ ಬೂದಿ ಆಗ್ತೀಯ ಆಟೇಯ" ಎಂದು ಶಬರಿ ದುಃಖಪಟ್ಟಳು.

ಆ ವೇಳೆಗೆ ಸೂರ್ಯ, ಹುಚ್ಚೀರನ ಜೊತೆ ಬಂದ.

ಶಬರಿ ಕಣ್ಣೀರು ಒರೆಸಿಕೊಂಡಳು. ಸೂರ್ಯ ಗಮನಿಸಿದ.

"ಯಾಕೆ, ಏನಾಯ್ತು?" ಎಂದ.

ಶಬರಿ, ತಿಮ್ಮರಾಯಿಯ ಕಡೆ ನೋಡಿ ಹೇಳಿದಳು– "ಈಯಪ್ಪಂಗೆ ವೊತ್ ಮುಳಗಾಕ್ ಸರ್ಯಾಗ್ ಯೆಂಡ ಸಾರಾಯಿ ಬೇಕು. ಅದ್ಕೇನ್ ಇಟೂ ಆಟು ಅಂಬ್ತ ಇಲ್ಲ. ಸುರ್ಕಂಬ್ತಾ ಇರಾದೆ ಆಯ್ತು."

ತಿಮ್ಮರಾಯಿಗೆ ಅವಮಾನವಾಯಿತು– "ನಿಂದೂ ಆಟೇ ಕಣವ್ವ. ಈಟು ಆಟು ಅಂಬ್ತ ಏನೂ ಇಲ್ಲ. ಬಾಯೋದಂಗ್ ಮಾತಾಡ್ತೀಯ. ನಿನ್ನವ್ವ ಬದ್ಕಿದ್ರೆ ಯಾಕಿಂಗಾಗಾದು." ಎಂದು ಕಣ್ಣಲ್ಲಿ ನೀರು ತುಂಬಿಕೊಂಡ.

ಸೂರ್ಯನಿಗೆ, ಇವರ ಮುಚ್ಚುಮರೆಯಿಲ್ಲದ ಸ್ವಭಾವ ವಿಸ್ಮಯ ಮೂಡಿಸಿತು. ತಾನು ಹೊಸಬ ಅಂತ ಭಾವಿಸಿ ಆಡೋ ಮಾತನ್ನ ಅರ್ಥಕ್ಕೇ ನುಂಗೋ ಸ್ವಭಾವ ಇವರದಲ್ಲ. ಎಲ್ಲವೂ ನೇರ; ಸ್ಪಷ್ಟ; ಸಾಚ. ಎಂಥ ಮನುಷ್ಯರು!

ಅಪ್ಪ–ಮಗಳ ನಡುವಿನ ಮುನಿಸಿನ ಮಧ್ಯೆ ತನ್ನ ಮಾತಿನ ಅಗತ್ಯ ಇದೆ

ಅನ್ನಿಸಿ ಸೂರ್ಯ ಹೇಳಿದ–

"ಅಷ್ಟೊಂದ್ ಬೇಜಾರ್ ಮಾಡ್ಕೊಂಡ್ರೆ ಹೇಗೆ ಶಬರಿ. ನಿಮ್ಮಪ್ಪಂಗೆ ಈ ವಯಸ್ನಲ್ಲಿ ಬೇರೆ ಯಾರಿದಾರೆ ಹೇಳು. ಜೊತೆಗೆ ಹಟ್ಟಿನಾಗೆ ಇವ್ರೊಬ್ರೇ ಕುಡ್ಯಲ್ವಲ್ಲ? ಅಭ್ಯಾಸಬಲ. ಬೇಗ ಬಿಡೋಕ್ಕಾಗೊಲ್ಲ."

ಸೂರ್ಯನ ಮಾತಿನಿಂದ ತಿಮ್ಮರಾಯಿ ಉತ್ತೇಜಿತನಾದ.

"ಯಾವ್ ಗಂಡಸ್ ಕುಡ್ಯಲ್ಲ ಈ ಅಟ್ಟಿನಾಗೆ ಯೇಳು ಮತ್ತೆ. ಲಾಗಾಯ್ತಿಂದ ನಡಿಸ್ಕಂಡ್ ಬಂದು ಇವಾಗ್ ಬಿಟ್‌ಬಿಡು ಅಂದ್ರೆ ಅದೆಂಗಾಯ್ತದೆ ನೀನೇ ಯೇಳಪ್ಪ ಇವ್ಳ್‌ಗೆ" ಎಂದು ಹೆಂಡದ ಬುಂಡೆಗೆ ಕೈ ಹಾಕಿದ.

ಸೂರ್ಯ ತಿಮ್ಮರಾಯಿಯ ಹತ್ತಿರಬಂದು ತಡೆದು ಹೇಳಿದ– "ಶಬರೀಗೆ ನಾನು ಹಾಗೇಳ್ದೆ ಅಂದ್‌ಕೂಡ್ಲೆ ನೀನು ಸದಾ ಕುಡ್ಕಂಡೇ ಇರ್ಬೇಕು ಅಂತ ಅಲ್ಲಪ್ಪ. ನಿಂಗೂ ವಯಸ್ಸಾಯ್ತು. ನಿನ್ ಮಗಳು ಜೀವನಕ್ಕೆ ಇನ್ನೂ ಒಂದ್ ದಾರಿ ತೋರುಸ್ಬೇಕು. ಇಚ್ಚಾಪಟ್ಟೆ ಕುಡ್ದು ತೊಂದ್ರೆ ಮಡ್ಕೊಬಾರ್ದು. ಅಲ್ವಾ?"

ಮಗಳ ಜೀವನದ ನೆನಪು ತಿಮ್ಮರಾಯಿಯ ಹೊಟ್ಟೆಗೆ ಕೆಂಡ ಸುರಿಯಿತು. ಇದ್ದಕ್ಕಿದ್ದಂತೆ ಮುಖ ಮುಚ್ಚಿಕೊಂಡ. ಒತ್ತಿ ಬರುವ ದುಃಖವನ್ನು ತಡೆಯಲು ಯತ್ನಿಸಿದ. ಸೂರ್ಯ ಆತನ ಕೈಹಿಡಿದು "ಇಂಗೆಲ್ಲ ಸಂಕಟ ಪಡಬೇಡಜ್ಜ. ನಿನ್ ಮಗಳಿಗೆ ಇವತ್ತಲ್ಲ ನಾಳೆ ಒಳ್ಳೇದಾಗುತ್ತೆ. ಈಗ ಕುಡೀಲೆ ಬೇಕು ಅಂತಿದ್ರೆ ಕುಡಿ; ಬರ್‍ತಾ ಬರ್‍ತ ಕಡಿಮೆ ಮಾಡು. ಆದ್ರೆ ಅಪ್ಪ– ಮಗಳು ಹೀಗ್ ಮುನಿಸ್ಕೊಬೇಡಿ" ಎಂದು ಸಮಾಧಾನಿಸಿದ.

ತಿಮ್ಮರಾಯಿ ಸೂರ್ಯನ ಕೈಯ್ಯನ್ನು ಭದ್ರವಾಗಿ ಹಿಡಿದುಕೊಂಡ. ದುಃಖ ನುಂಗಿಕೊಂಡ. ಆನಂತರ ಹೆಂಡದ ಬುಂಡೆ ಎತ್ತಿಕೊಂಡು ಹೊರ ನಡೆದ.

ಒಂದು ಕ್ಷಣ ಮೌನ.
ಹುಚ್ಚೀರ ಬೆಪ್ಪಾಗಿ ನಿಂತಿದ್ದ.
ಸೂರ್ಯ ಶಬರಿಯ ಕಡೆ ನೋಡಿದ.
ಶಬರಿ–ಹೆಪ್ಪುಗಟ್ಟಿದ ನದಿ.
ಅಲುಗದ ಎಲೆಗಳು; ಅರಳದ ಹೂಗಳು.

ಸೂರ್ಯ ಹತ್ತಿರ ಬಂದ.

"ಸಣ್ ಸಣ್ ವಿಷ್ಯಕ್ಕೆಲ್ಲ ಸಂಕಟ ಪಡಬಾರ್ದು ಶಬರಿ. ನೀನೂ ಒಂಟಿ;

ನಿಮ್ಮಪ್ಪನೂ ಒಂಟಿ. ಕಡೇಪಕ್ಷ ನೀವಿಬ್ರೂ ಮಾತಾಡ್ಕೊಂಡು ಮನಸ್ನ ಹಗುರ ಮಾಡ್ಕೋತೀರಿ. ಆದ್ರೆ ಈ ಹುಚ್ಚೀರನ್ ನೋಡು. ಅವ್ನೂ ಒಂಟಿ. ಆದ್ರೆ ಅವ್ನ್ ಮನಸ್ಸನ್ನ ಯಾರ್ ಜೊತೆ ಹಂಚ್ಕೊಳ್ಳಾಕೆ ಆಗುತ್ತೆ ಹೇಳು. ಸುಮ್ನೆ ಸಂಕಟಪಡೋಬದ್ಲು ನಾನೂ ನೀನೂ ಸೇರಿ ಹಟ್ಟೀನ ಒಂದ್ ಹದಕ್ ತರೋಣ" ಎಂದು ಹೇಳಿದಾಗ ಶಬರಿಗೆ ಅಚ್ಚರಿ.

ಇದೆಂಥ ಮಾತು! " ನಾನೂ ನೀನೂ ಸೇರಿ ಹಟ್ಟೀನ ಒಂದ್ ಹದಕ್ ತರೋಣ?" ಅದೆಲ್ಲ ತನಗೆ ಹೇಗೆ ಸಾಧ್ಯ? ಈ ಮಾತಿನ ಮರ್ಮ ಏನು?

"ಯಾಕ್ ಸುಮ್ನೆ ನಿಂತ್ಕೊಂಡೆ? ನಾನ್ ಏನ್ ಹೇಳ್ದೆ ಗೊತ್ತಾ? ಹೇಗಿದ್ರೂ ನಾನು ಸ್ವಲ್ಪ ದಿನ ಇಲ್ಲೇ ಇರ್ತೀನಲ್ವ–ಆದ್ರಿಂದ ನಿಮ್ಮಪ್ಪನ್ನೂ ಸೇರ್ದಂಗೆ ಎಲ್ರಿಗೂ ಬುದ್ಧಿ ಹೇಳಿದ್ರಾಯ್ತಲ್ವ– ಅಂತ ಹಾಗಂದೆ"–ಸೂರ್ಯ ವಿವರಣೆ ನೀಡಿದ. ಹೆಪ್ಪುಗಟ್ಟಿದ ನದಿ, ಸೂರ್ಯನ ಶಾಖಕ್ಕೆ ಕರಗತೊಡಗಿತು.

ಎಲೆಗಳು ಅಲುಗಾಡತೊಡಗಿದಂತೆ ಹೂಮೊಗ್ಗು ಬಿರಿಯತೊಡಗಿದವು.

ಶಬರಿಯ ಮುಖದಲ್ಲಿ ಮುಗುಳ್ನಗೆ. ಮಾತು ಹೊರ ಬಂತು.

"ಇಲ್ಲೇ ಇರ್ಬೇಕು ಅನ್ನೋರು ಯೇಳ್ದೆ ಯಾಕ್ ಹೋಗ್‌ಬೇಕಾಗಿತ್ತು. ಅದೂ ನಮ್‌ಚಂದ್ರನ್ ಗೆಣೆಕಾರ್ರು ಇಂಗ್ ಬಂದು ಅಂಗ್ ವೋದ್ರು ಅಂಬ್ತ ನಂಗೆ ಎಂಗಾಗಿತ್ತು ಗೊತ್ತಾ?"

"ತಪ್ಪಾಯ್ತು ಶಬರಿ. ನಾನು ಇಲ್ಲೇ ಇರೋ ವಿಷ್ಯಾನ ನನ್ ಸ್ನೇಹಿತ್ರಿಗೆ ತಿಳ್ಸಿ ಒಂದಷ್ಟು ಮಾತಾಡ್ಕೊಂಡ್ ಬರಬೇಕಿತ್ತು. ಜೊತೆಗೆ ನಾನ್ ಬಂದಿರೊ ವಿಷ್ಯ ತಕ್ಷಣ ಎಲ್ರಿಗೂ ಗೊತ್ತಾಗೋದು ಬೇಡ ಅನ್ಸಿತ್ತು. ಅದಕ್ಕೆಂತ ಹಾಗ್ ಮಾಡ್ದೆ. ಬೇಸರ ಮಾಡ್ಕೊಬೇಡ."

ಸೂರ್ಯನ ಮಾತು ಕೇಳಿ ಶಬರಿ ಸಂತೋಷದಿಂದ ಹೇಳಿದಳು– "ಅದೇನೊ ನಂಗೊತ್ತಿಲ್ಲ. ಯೇಳ್ದೆ ಕೇಳ್ದೆ ವೋಗ್‌ಬಾರ್ದು. ಆಟೇಯ."

"ಇನ್ ಹೋಗೋದೆಲ್ ಬಂತು. ನಾನು ಒಂದಷ್ಟು ದಿನ ದೂರ ಇರ್ಲೇಬೇಕು, ಅದ್ಕೇ ಈ ಜಾಗ ಹುಡಿಕ್ಕೊಂಡ್ ಬಂದೆ."

"ಅಂಗಂದ್ರೆ? ದೂರ ಯಾಕಿರ್‌ಬೇಕು? ಏನಂತಾ ಕೆಲ್ಸ ಮಾಡಿದ್ದೀರ?" – ಶಬರಿ ಥಟ್ಟನೆ ಕೇಳಿದಳು.

"ಛೆ! ಛೆ! ಅಂಥಾದ್ದೇನೂ ಇಲ್ಲ. ಹೇಳ್‌ಬೇಕಾದಾಗ ಎಲ್ಲಾ ಹೇಳ್ತೀನಿ."

"ಇವಾಗ್ಲೆ ಯಾಕ್ ಹೇಳ್‌ಬಾರ್ದು ಅಂಬ್ತ?"–ಶಬರಿ ಅನುಮಾನದಿಂದ ಕೇಳಿದಳು.

"ಅದೂ..... ಅದೂ..... ನೋಡು ಶಬರಿ..." ಎಂದು ಸೂರ್ಯ ತಡವರಿಸುತ್ತ ಇರುವ ವೇಳೆಗೆ ತಿಮ್ಮರಾಯಿ ಒಳಬಂದ. ಸೂರ್ಯ ಕೂಡಲೇ ಮಾತು ತಿರುಗಿಸಿ "ಏನಜ್ಜ ಎಲ್ಲಾ ಖಾಲಿ ಮಾಡ್‌ಬಂದ್ಯಾ?" ಎಂದು ಕೇಳಿದ.

"ಖಾಲಿ ಮಾಡಾದೆಲ್ಲಪ್ಪ ಬಂತು" ಎನ್ನುತ್ತ ತಿಮ್ಮರಾಯಿ ಉಸ್ಸೆಂದು ಕೂತುಕೊಂಡು ಮಾತು ಮುಂದುವರೆಸಿದ– "ಇಲ್ಲಿಂದ ಎದ್ದ ಹೋದ್ನ? ಅದ್ಯಾಕೊ ಕುಡೀಬೇಕು ಅನ್ನುಸ್ಲಿಲ್ಲ. ಕಟ್ಟೆಮ್ಯಾಲ್ ದ್ಯಾವ್ರ್ ಆಯ್ತಲ್ಲ, ಅದ್ರ್ ಮುಂದಿಟ್‌ಬಿಟ್ಟು ಸೀದಾ ಬಂದ್‌ಬಿಟ್ಟೆ. ನಮ್ ಸ್ಯಬರೀಗೆ ಇವತ್ತೊಂದ್ ದಿನಾನಾರು ಸಂತೋಸ ಆಗ್ಲಿ ಬಿಡಪ್ಪ."

ಶಬರಿಗೆ ಕೊರಳುಬ್ಬಿ ಬಂತು.

ತಿಮ್ಮರಾಯಿ ಮತ್ತೆ ಮಾತು ಮುಂದುವರೆಸಿದ. "ನೀನ್ ಬ್ಯಾರೆ ವೊಸದಾಗ್ ಬಂದಿದ್ದೀಯಲ್ಲ ಸೂರ್ಯಪ್ಪ. ನಿನ್ ಎದ್ರಿಗೆ ಸುಮ್‌ಸುಮ್ಕೆ ನಾವ್ ಮುನಿಸ್ಕಮಾದು ಯಾಕೊ ಸರ್‌ಬರ್‍ಲಿಲ್ಲ ನಂಗೆ."

ಸೂರ್ಯನಿಗೆ ತಿಮ್ಮರಾಯಿಯ ಔಚಿತ್ಯ ದೊಡ್ಡದೆನಿಸಿತು.

"ಇದ್ಕಿಂತ ಇನ್ನೇನ್ ಬೇಕು ಶಬರಿ. ಎಂಥಾ ಅಪ್ಪ, ಎಂಥಾ ಮಗಳು! ಬೇಗ ಅಡುಗೆ ಮಾಡ್‌ಬಿಡು. ಹೊಟ್ಟೆ ತುಂಬಾ ಉಂಡು ಬಾಯ್ತುಂಬ ಮಾತಾಡೋಣ" ಎಂದು ಸೂರ್ಯ ಹೇಳಿದಾಗ ಶಬರಿ 'ಆಯ್ತು' ಎನ್ನುತ್ತ ಅಡುಗೆ ಮಾಡಲು ಹೊರಟು, ತಕ್ಷಣ ನಿಂತು "ಬಾಯ್ತುಂಬ ಮಾತಾಡ್ವಾಗ ಒಂದಷ್ಟು ದಿನ ನೀವ್ಯಾಕ್ ದೂರ ಇರಾಕ್ ಬಂದಿದ್ದು ಅಂಬಾದ್ನ ಯೇಳ್‌ಬೇಕು" ಎಂದಳು.

ಸೂರ್ಯನಿಗೆ ಒಂದು ಕ್ಷಣ ತಬ್ಬಿಬ್ಬು. ಈಕೆ ಸೂಕ್ಷ್ಮಳೂ ಹೌದು ಎನ್ನಿಸಿತು. ವಿದ್ಯಾವಂತಳಲ್ಲದಿದ್ದರೂ ವಿವೇಕವಂತಳು ಎಂಬ ಭಾವನೆ ಬಂತು.

ವಿದ್ಯಾವಂತರೆಲ್ಲ ವಿವೇಕಿಗಳಲ್ಲ;
ಅವಿದ್ಯಾವಂತರೆಲ್ಲ ಅವಿವೇಕಿಗಳಲ್ಲ.

ಇದು ತನ್ನ ಅನುಭವದ ಮಾತಲ್ಲವೆ ಎಂದು ನೆನಪಿಸಿಕೊಂಡ ಸೂರ್ಯ. "ಯಾಕ್ ಸುಮ್ಕೆ ನಿಂತ್ಕಂಡ್ರಿ?"– ಶಬರಿ ಮತ್ತೆ ಕೇಳಿದಳು–

"ಇಂಗೆಲ್ಲ ಯಾಕ್ ಕೇಳ್ತಾ ಇವ್ನಿ ಗೊತ್ತಾ? ಗೊತ್ತು ಗುರ್ತು ಇಲ್ದೆ ಇರೋರು ಮನೇಗ್ ಬಂದ್ ಇರ್ವಾಗ ಹಿಂದೆ ಮುಂದೆ ತಿಳ್ಕಾಬೇಕು ಅಲ್ವಾ?"

"ಅದ್ಸರಿ ಶಬರಿ, ಬರ್ತಾ ಬರ್ತಾ ನಿಂಗೆಲ್ಲ ಗೊತ್ತಾಗುತ್ತೆ. ಒಂದು ವೇಳೆ

ನನ್ ಮೇಲೆ ನಂಬಿಕೆ ಇಲ್ದೆ ಇದ್ರೆ ಈಗ್ಲೆ ಜಾಗ ಖಾಲಿ ಮಾಡ್ತೀನಿ" ಎಂದು ಸೂರ್ಯ ನೇರವಾಗಿ ಹೇಳಿದ.

ಹುಚ್ಚೀರನ ಮುಖದಲ್ಲಿ ಆತಂಕ.

ಶಬರಿಗೆ ನಿರೀಕ್ಷಿಸದೆ ಇರುವ ಉತ್ತರ.

ತಕ್ಷಣ ತಿಮ್ಮರಾಯಿ "ಅದ್ಯಾಕಪ್ಪ ಅಂಗಬ್ತೀಯ. ನಾವು ನಾಲ್ಗೆ ನಂಬಾ ಜನ. ನಿನ್ ಮಾತಿನ್ ಮ್ಯಾಲೆ ನಾನು ನಂಬ್ಕೆ ಮಡುಗ್ತೀನಿ" ಎಂದು ಸೂರ್ಯನಿಗೆ ಹೇಳಿ ಆನಂತರ ಶಬರಿಗೆ "ಬ್ಯಾಗ್ ಅಡುಗೆ ಮಾಡವ್ವ. ಆಮ್ಯಾಕ್ ಮಾತಾಡದಿದ್ದೇ ಐತೆ" ಎಂದ.

ಶಬರಿ ಹೆಚ್ಚು ಮಾತಾಡದೆ ಅಡುಗೆ ಮಡಲು ಹೋದಳು.

ಒಲೆ ಹಚ್ಚಿ ಬೆಂಕಿಯ ಬೆಳಕಲ್ಲಿ ಕೂತಳು.

ಮುಖದ ಮೇಲೆ ಬೆಂಕಿಯಲೆಗಳ ಬೀಸಣಿಗೆ.

ಮನಸಲ್ಲಿ ನಿಖರವಾಗದ ಭಾವ ನಡಿಗೆ.

ಇಲ್ಲಿ ತಿಮ್ಮರಾಯಿ ತನ್ನ ಮತ್ತು ಹಟ್ಟಿಯ ಅನೇಕ ವಿಷಯಗಳನ್ನು ಸೂರ್ಯನಿಗೆ ಹೇಳತೊಡಗಿದ. ಯಾವುದೇ ಬದಲಾವಣೆಯಿಲ್ಲದೆ ನಂಬಿಕೆಗಳ ಮೇಲೆ ನಡೆಯುವ ಬದುಕು. ಹೊಟ್ಟೆಪಾಡಿಗಾಗಿ ದುಡಿಮೆ. ಪ್ರಶ್ನೆಗಳಿದ್ದರೂ ಎದ್ದು ನಿಲ್ಲದ ಅಸಹಾಯಕತೆ. ಹೀಗಾಗಿ ಇಲ್ಲಿ ಉತ್ತರ ಹುಡುಕುವ ಪ್ರಶ್ನೆಯೇ ಇಲ್ಲ. ಹಿಂದೆ ಇದ್ದದ್ದೇ ಇಂದು, ಮುಂದು, ಎಂದೆಂದು. ಊರ ಒಡೆಯರ ಒಡನಾಟದಲ್ಲಿ ಅಷ್ಟಿಷ್ಟು ಹೊರಜಗತ್ತು ನೊಡಿದವನೆಂದರೆ ಪೂಜಾರಪ್ಪ ಒಬ್ಬನೆ. ಊರ ಒಡೆಯರ ಪರವಾಗಿ ಇಲ್ಲಿನ ಕಾವಲುಗಾರ. ಇಲ್ಲಿನವರಿಗೆ ವಕ್ತಾರ– ಇದಿಷ್ಟು ಇಲ್ಲಿನ ಬದುಕಿನ ಸಾರ ಅಂತ ತಿಮ್ಮರಾಯಿ ತನ್ನದೇ ರೀತಿಯಲ್ಲಿ ವರ್ಣಿಸಿದ. ನಡನಡುವೆ ಪ್ರಶ್ನೆಗಳನ್ನು ಹಾಕುತ್ತ, ಕೆದಕುತ್ತ, ಸೂರ್ಯ ಸ್ಪಷ್ಟ ಚಿತ್ರವೊಂದನ್ನು ಪಡೆದ.

ಈ ವೇಳೆಗೆ ಅಡುಗೆ ಮುಗಿದಿತ್ತು. ಶಬರಿ "ಉಂಬಾಕ್ ಬರ್ರಿ" ಎಂದಳು. ಗಂಗಳಗಳಲ್ಲಿ ಮುದ್ದೆ, ಸೊಪ್ಪಿನ ಸಾರು ಹಾಕಿ ತಂದಿಟ್ಟಳು. ಗಂಗಳಗಳನ್ನು ನೋಡಿದ ತಿಮ್ಮರಾಯಿ "ಈ ಗಂಗಳಾನು ಇರ್ಲಿಲ್ಲಪ್ಪ ನಮ್ ಮನ್ಯಾಗೆ. ಮದ್ವೆ ಬಂತಲ್ಲ. ಅವಾಗ ಚಂದ್ರಾನೇ ಬಲವಂತ ಮಾಡಿ ತಂದ್ಕೊಟ್ಟಿದ್ದ" ಎಂದ.

ಶಬರಿಗೆ ಮತ್ತೆ ಮತ್ತೆ ಚಂದ್ರನ ನೆನಪು ರಾಚುವಂಥ ಮಾತುಕತೆ. ಹೀಗಾಗಿ ಆಕೆ ಮಾತು ತಿರುಗಿಸಲು "ನೀವು ಇದ್ಯಾವಂತ್ರು, ಮುದ್ದೆ ಸೊಪ್ಪಿನ್ ಸಾರು ಇಡುಸ್ತೈತೊ ಇಲ್ವೊ" ಎಂದು ಕೇಳಿದಳು.

"ನಂಗೆಲ್ಲ ಹಿಡ್ಸುತ್ತೆ, ಹೊಲದಾಗಿರೊ ಸೊಪ್ಪು ತಿಂದು ಬದ್ಕೋಕು ಸಿದ್ಧ ನಾನು. ಎಷ್ಟೋ ದಿನ ಬೆಟ್ಟ ಗುಡ್ಡ ಅಲೀತಾ ಸಿಕ್ಕಿದ್ದೇ ಸಿರಿ ಅಂದ್ಕೊಂಡ್ ತಿಂದಿದ್ದೀನಿ" ಎಂದು ಸೂರ್ಯ ಉತ್ಸಾಹದಲ್ಲಿ ಹೇಳಿದ. ಶಬರಿಯ ಮರುಪ್ರಶ್ನೆಯನ್ನು ಆತ ನಿರೀಕ್ಷಿಸಿರಲಿಲ್ಲ.

"ಬೆಟ್ಟ ಗುಡ್ಡ ಯಾಕ್ ಅಲೀತಾ ಇದ್ರಿ? ಅಲ್ಲೇನ್ ಕೆಲ್ಸ ನಿಮ್ಗೆ?"– ಶಬರಿಯ ಪ್ರಶ್ನೆ. ಸೂರ್ಯನಿಗೆ ತಕ್ಷಣ ಏನು ಸಮಜಾಯಿಷಿ ನೀಡಬೇಕೆಂದು ತೋರದೆ "ಅದೂ...... ಅದೂ....." ಎಂದು ತಡವರಿಸಿ ಆಮೇಲೆ "ಅದು ಯಾಕೆ ಗೊತ್ತ? ನಾನು ಒಂಥರಾ ಬುಡಕಟ್ಟಿನೋನೇ. ನೀವಾದ್ರು ಒಂದ್ ಕಡೆ ನೆಲೆ ಕಂಡ್ಕೊಂಡಿದ್ದೀರಿ. ನಾನಾದ್ರೆ ಅಲೆಮಾರಿ ಬುಡಕಟ್ಟು" ಎಂದು ಇಲ್ಲದ ನಗೆಯಲ್ಲಿ ಮಾತು ತೇಲಿಸಿದ.

"ಅಲೆಮಾರಿ ಅಂದ್ರೆ... ಒಂದ್ ಕಡೆ ಇದ್ದು ಗೊತ್ತೇ ಇಲ್ಲ ಅಂಗಾರೆ"– ಮತ್ತೆ ಶಬರಿ ಕೇಳಿದಳು.

ಆಗ ತಿಮ್ಮರಾಯಿ "ಅಯಪ್ಪಂಗೆ ಒಸಿ ಊಟ ಮಾಡಾಕಾನ ಬಿಡವ್ವ. ಆಮ್ಯಾಕೆಲ್ಲ ಕೇಳಿದ್ರಾತು" ಎಂದ.

ಶಬರಿ ಸುಮ್ಮನಾದಳು.

ಸೂರ್ಯ ಊಟ ಮಾಡುತ್ತ ಯೋಚಿಸಿದ– ತನ್ನ ಆಗಮನದ ಉದ್ದೇಶವನ್ನು ಈಗಲೇ ಸ್ಪಷ್ಟಪಡಿಸಬೇಕು, ಅನುಮಾನಾನ ಬೆಳೆಯೋಕೆ ಬಿಡೋದು ಯಾವಾಗ್ಲು ಒಳ್ಳೆಯದಲ್ಲ. ಇಷ್ಟಕ್ಕೂ ಈಗ ಸಂದರ್ಭ ಹದವಾಗುತ್ತಿದೆ.

ಊಟವಾದ ಮೇಲೆ ಇನ್ನೇನು ನಡೆದೀತೊ ಎಂಬಂತೆ ಹುಚ್ಚೀರ ಕೂತೇ ಇದ್ದ. ಶಬರಿ ಇನ್ನೇನು ಕೇಳುವಳೊ ಸೂರ್ಯ ಏನೇನು ಹೇಳುವನೊ, ಈ ಹೊಸ ಮನುಷ್ಯ ಒಂದು ಥರಾ ಖುಷಿ ಕೊಡ್ತಿದಾನೆ– ಎಂದು ಉತ್ಸಾಹದಲ್ಲಿದ್ದ.

ಸೂರ್ಯ ಯಾರಿಗೂ ಕಾಯದೆ ತಾನೇ ಮಾತಿಗೆ ಮುಂದಾದ.

"ನೋಡಿ, ನಾನಿಲ್ಲಿಗೆ ಚಂದ್ರನ ಆಸೆ ಈಡೇರ್ಸೋಕ್ ಬಂದಿದ್ದೀನಿ. ಚಂದ್ರನ ಪರಿಚಯ ತೀರ ಇತ್ತೀಚೆಗೆ ಆಗಿದ್ದು ಅನ್ನೋದ್ ನಿಜ. ಆದ್ರೆ ಕೆಲವೇ ದಿನ್ದಲ್ಲಿ ಆತ ನನಗೆ ತುಂಬಾ ಇಷ್ಟವಾದ. ಆಗಾಗ್ಗೆ ಶಬರಿ ವಿಷಯ ಹೇಳ್ತಾ ಇದ್ದ."– ಹೀಗೆ ಸೂರ್ಯ ಮಾತು ಶುರು ಮಾಡಿದಾಗ ಭಾವುಕ ವಾತಾವರಣ ಉಂಟಾಯಿತು–"ಚಂದ್ರನಿಗೆ ಬುಡಕಟ್ಟಿನವರಿಗೆ ವಿದ್ಯೆ ಕಲುಸ್ಬೇಕು. ಬಡತನ ಹೋಗಲಾಡುಸ್ಬೇಕು. ಸ್ವಾಭಿಮಾನ ಬೆಳುಸ್ಬೇಕು ಅಂತ ಏನೇನೊ ಕನಸುಗಳಿದ್ದವು. ಇಂಥ ಕನಸು ಕಾಣೋಕೆ ನಮ್ ಸಂಘ ಕಾರಣ ಆಗಿತ್ತು" ಎಂದು ಸೂರ್ಯ

ಹೇಳಿ ಕ್ಷಣಕಾಲ ಸುಮ್ಮನಾದ.

ಯಾರೂ ಮಾತಾಡಲಿಲ್ಲ.

ಕಡೆಗೆ ತಾನೆ ಹೇಳತೊಡಗಿದ:

"ನಾವು ಯುವಕರು ಸೇರಿ ಒಂದು ಸಂಘ ಮಾಡ್ಕೊಂಡಿದ್ದೇವೆ. ಸಮಾನತೆ ಇರ್ಬೇಕು ಅನ್ನೋದು ನಮ್ಮ ಆದರ್ಶ. ಸಮಾನತೆ ಅಂದ್ರೆ ಅರ್ಥ ಆಯ್ತ? ಈಗ ನೋಡಿ, ಬಡವ– ಬಲ್ಲಿದ ಅಂತ ವ್ಯತ್ಯಾಸ ಇರಬಾರದು. ಸಾಹುಕಾರ್ರು, ಜಮೀನ್ದಾರ್ರು, ಒಡೆಯರು ಎಲ್ಲಾರೂ ಇದಾರಲ್ಲ ಇವ್ರು ಬಡವರನ್ನ, ನಿಮ್ಮಂಥ ಬುಡಕಟ್ಟಿನೋರ್ನ ಗುಲಾಮ್ರಂತೆ ನೋಡ್‌ಬಾರ್ದು. ಜಾತಿ ಹೆಸರು ತೆಗ್ದು ಕೆಳಜಾತಿ ಜನರನ್ನು, ಹಿಂದುಳಿದೋರ್ನ ತುಳೀಬಾರ್ದು. ಹೀಗೆ ಒಬ್ಬರಿಗೊಬ್ಬರು ಗೌರವ ಕೊಡೋದು, ಎಲ್ಲರಿಗೂ ಅನ್ನ, ಬಟ್ಟೆ, ಮನೆ ಒದ್ಗೊ ಹಾಗ್ ಮಾಡೋದು ಬಹಳ ಮುಖ್ಯ. ಇದನ್ನು ಸಮಾನತೆ ಅಂತೀವಿ. ಅದ್ಕಾಗಿ ನಿಮ್ಮಂತೋರಲ್ಲಿ ಎಚ್ಚರ ಮೂಡ್‌ಬೇಕು."

ಸೂರ್ಯ ಒಂದು ಪುಟ್ಟ ಭಾಷಣಾನೇ ಮಾಡಿದ.

ಆದರೂ ಅವರ್‍ಯಾರೂ ಪ್ರತಿಕ್ರಿಯಿಸಲಿಲ್ಲ. ಮತ್ತೆ ಚಂದ್ರನ ಹೆಸರು ತೆಗೆದ.

"ಹೀಗೆಲ್ಲ ಮಾಡ್‌ಬೇಕು ಅನ್ನೋದು ಚಂದ್ರನ ಕನಸಾಗಿತ್ತು. ಆ ಕನಸು ನನಸಾಗಬೇಕು. ಅದ್ಕಾಗಿ ನಾನಿಲ್ಲಿಗ್ ಬಂದೆ."

"ನಮಿಗ್ ಕನಸೇ ಬೀಳಾಕಿಲ್ಲ"– ಎಂದು ತಿಮ್ಮರಾಯಿ ಪ್ರತಿಕ್ರಿಯಿಸಿದ.

"ನಮಗೆಂದೂ ಒಳ್ಳೇದಾಗಲ್ಲ, ನಮ್ಮದಿಷ್ಟೇ ಬದುಕು, ಅಂದ್ಕೊಂಡ್ರೆ ಹಾಗಾಗುತ್ತೆ. ನೀನೇ ಹೇಳ್ತಾ ಇದ್ಯಲ್ಲ ತಿಮ್ಮರಾಯಿ–ಒಳ್ಳೆ ದಿನಕ್ಕೆ ಶಬರಿ ಥರಾ ಕಾಯಬೇಕು ಅಂತ?" – ಸೂರ್ಯ ಕೆದಕಿದ.

"ಅದೇನೊ ಸರ್‍ಯಪ್ಪ, ನಾವಂದ್ಕಂಡಂಗೇ ಒಳ್ಳೇದಾಗ್ಬೇಕಲ್ಲ?"

"ಒಳ್ಳೇದಾಗಲ್ಲ ಅಂತ ಏನೂ ಮಾಡ್ದೆ ಇದ್ರೆ ಒಳ್ಳೇದ್ ಹೇಗ್ ಆಗುತ್ತೆ. ಸುಮ್ನೆ ಇದ್ರೆ ಏನೂ ಆಗಲ್ಲ"– ಸೂರ್ಯ ಸ್ಪಷ್ಟಪಡಿಸಿದ.

ಸರೋವರದಲ್ಲಿ ಕಲ್ಲು ಒಗೆದ ಅನುಭವ.

ಅಲೆಗಳ ಕೋಲಾಹಲ.

ಹೂ ದಳಗಳು ಉದುರುವಂಥ ಬಿಸಿಗಾಳಿ.

ಶಬರಿ ಚಡಪಡಿಸುತ್ತಲೇ ಕೇಳಿದಳು–

"ಅಂಗಾರಿವಾಗೇನ್ ಮಾಡ್ಬೇಕು ಅಂಬ್ತೀರ?"

"ಮೊದ್ಲು ನೀವೆಲ್ಲ ವಿದ್ಯೆ ಕಲೀಬೇಕು, ನಿಮ್ ನಿಮ್ ಕೆಲ್ಸ ಮಾಡಿದ್ ಮ್ಯಾಲೆ ರಾತ್ರಿ ಹೊತ್ತು ನಾನೂ ನನ್ನ ಗೆಳೆಯರು ನಿಮಿಗೆ ವಿದ್ಯೆ ಕಲುಸ್ತೀವಿ. ಓದು ಬರಹ ಬಂದ್ರೆ ಅದರ ಜೊತೇನೆ ಉಳಿದ ಕೆಲ್ಸ ಮಾಡ್‌ಬಹುದು"– ಸೂರ್ಯ ವಿವರಿಸಿದ.

"ಉಳಿದ ಕೆಲ್ಸ ಅಂದ್ರೆ ಮುಂದೆ ನಿಮ್ ಒಳ್ಳೇದಕ್ಕೆ ಏನೇನ್ ಬೇಕೊ ಅದನ್ ಮಾಡಾದು ಅಂತ."

"ಅದ್ಸರಿ, ನೀವಿಂಗೆಲ್ಲ ಏನೇನೊ ಮಾಡಾದ್ಕೆ ಊರು ಒಡೇರ್ ಒಪ್ಪಬೇಕಲ್ಲ?"

"ಎಲ್ಲಾದ್ಕು ಒಡೇರ್ ಅಪ್ಪಣೆ ಕೇಳಾದೆ ಸರ್‍ಯಲ್ಲ ಕಣಜ್ಜ."

"ಅಂಗಾರಿಲ್ಲೇನೂ ಆಗಾಕಿಲ್ಲ ಬಿಡು."

"ಹಾಗಂದ್ರೆ ಹೇಗಜ್ಜ. ಈಗ ನೋಡು, ನಾವು ಮಾಡೊ ಎಷ್ಟೋ ಕೆಲ್ಸಗಳು ಸರ್ಕಾರ್ದೋರ್‍ಗ್ಗ ಸರಿಬರೊಲ್ಲ. ಆಗ ಪೋಲಿಸ್ನೋರ್‍ನ ಛೂ ಬಿಡ್ತಾರೆ ನಮ್ ಮೇಲೆ. ಹಗಂತ ನಾವ್ ಸುಮ್ನೆ ಇದ್ರೆ ಬಡವರ ಕಷ್ಟ ಕೇಳೋರ್ ಯಾರು? ನೀನೇ ಹೇಳು."

"ಅದೆಲ್ಲ ಸರ್‍ಯಪ್ಪ. ಆದ್ರೆ ಒಂದೋಗಿನ್ನೊಂದಾಗಾದು ಸರ್ ಬರಲ್ಲ ಆಟೇ" ಇಲ್ಲೀವರೆಗೆ ಸುಮ್ಮನಿದ್ದ ಶಬರಿ ಮಾತನಾಡಿದಳು–

"ಒಂದೋಗಿನ್ನೊಂದಾಗ್ತೈತೆ ಅಂಬ್ತ ಬುದ್ದಿ ಕಲ್ಯಾದು ಬ್ಯಾಡ ಅಂದ್ರೆ ಯೆಂಗಪ್ಪ? ಬರೀ ಊರ್‍ನಾರೇ ಅದನ್ ಕಲೀಬೇಕೇನು? ನಮ್ಮ ಹಟ್ಟಿ ಮಕ್ಕಳೇನ್ ಪಾಪ ಮಾಡವ್ರ? ನಾವೇನ್ ಪಾಪ ಮಾಡಿದ್ದೀವ?"

"ಪುಣ್ಣೇವ್ ಮಾಡಿದ್ರೆ ಇಲ್ ಯಾಕ್ ವುಟ್‌ತಿದ್ವಿ" ಸುಮ್ಕಿರವ್ವ ನೀನು" – ತಿಮ್ಮರಾಯಿ ಗದರಿದ.

"ನಿಂದೊಳ್ಳೆ ಕತೆಯಾತಲ್ಲ; ನಾನ್ಯಾಕ್ ಸುಮ್ಕಿರ್‍ಲಿ. ಈಗ್ ನೀನೇ ಯೇಳು. ಆ ಸ್ರೀರಾಮ್ ದ್ಯಾವ್ರು ಬರೀ ಅರಮನೇನಾಗೆ ಇದ್ನ? ಕಾಡ್‌ನಾಗಿರಾ ಸ್ಯಬರಿತಾವ ಬರ್‍ಲಿಲ್ವ? ಅಂಗೇ ಇದ್ದೇ ಬುದ್ದೀನೂ ನಮ್ತಾವ್ ಬರ್‍ಬೇಕು ತಿಳೀತಾ?"– ಎಂದು ಶಬರಿ ಕಟುವಾಗಿ, ದಿಟ್ಟವಾಗಿ ಹೇಳಿದಾಗ ತಿಮ್ಮರಾಯಿಯ ಬಾಯಿ ಕಟ್ಟಿತು. ಕಡೆಗೆ ಒಂದು ಮಾತು ಹೇಳಿದ–"ನಮ್ ಸ್ಯಬರವ್ವ ಚಂದ್ರನ್ನಂತೂ ಕಳ್ಕಂಡ್ಳು. ಅವ್ನ್ ಯೆಸ್ರಿನಾಗೇನಾರ ಮಾಡ್ತೀನಿ ಅಂಬ್ತ ನೀನ್ ಯೇಳಿರೆ ನಾನ್ಯಾಕಪ್ಪ ಅಡ್ಡ ಬರ್‍ಲಿ. ಅದ್ರೆ ಯಾವ್ದುಕ್ಕು ಪೂಜಾರಪ್ಪನ್ ಒಂದ್ ಮಾತು ಕೇಳ್ಬೇಕು ನೋಡು."

"ನೀವಂಗಂತೀರ ಅಂತ ಮೊದ್ಲೇ ಗೊತ್ತಿತ್ತು"– ಸೂರ್ಯ ನಸುನಗುತ್ತ ಹೇಳಿದ. ಎಲ್ಲರೂ ಸುಮ್ಮನೆ ನೋಡಿದರು.

"ಪೂಜಾರಪ್ಪ ಹೇಳ್ದೆ ದೇವರು ವರ ಕೊಡಲ್ವಲ್ಲ. ಅದಕ್ ಹಾಗಂದೆ" ಎಂದು ಸೂರ್ಯ ನಿರಾಳವಾಗಿ ನಕ್ಕಾಗ ಎಲ್ಲರೂ ನಕ್ಕರು.

ಆನಂತರ ಅದೂ ಇದೂ ಮಾತಾಡುತ್ತ ಕೂತರು. ಸೂರ್ಯ ಸಾಕಷ್ಟು ಲೋಕಾಭಿರಾಮವಾಗಿ ಮಾತಾಡಿದ.

ಮಲಗಿದ ಮೇಲೆ ಶಬರಿಗೆ ನಿದ್ದೆ ಬರಲಿಲ್ಲ.

ಚಂದ್ರ–ಸೂರ್ಯರ ಆಕಾಶವೊಂದು ಕನ್ನಡಿ
ಅದರಲ್ಲಿ ಭೂಮಿಯ ಬಿಂಬ ಕಂಡೀತೆ?
ಭೂಮಿ ಮೇಲಿರುವ ತನ್ನ ರೂಪ ಮೂಡೀತೆ?
ಅದರ ಬದಲು ಭೂಮಿಯೆ ಕನ್ನಡಿಯಾದರೆ,
ಅದರಲ್ಲಿ ಚಂದ್ರ ಸೂರ್ಯದ ಬಿಂಬ–ಬೆಳಕು.
ಇದು ಸಮೀಪದ ಸತ್ಯ, ಸಂತೋಷದ ಸತ್ಯ.

ಶಬರಿ ನಕ್ಕಳು.

ಎದ್ದು ಬಂದು ಕದ್ದು ನೋಡಿದಳು.

ಸೂರ್ಯ ನಿದ್ದೆ ಮಾಡುತ್ತಿರಲಿಲ್ಲ.

ಪುಸ್ತಕವೊಂದನ್ನು ಓದುತ್ತ ಕೂತಿದ್ದ.

ಶಬರಿ ಕುಡಿಕೆಯಲ್ಲಿ ನೀರು ತುಂಬಿಕೊಂಡು ಸೂರ್ಯನ ಬಳಿಗೆ ಬಂದಳು.

"ನೀವೆದ್ದೇ ಇದ್ರಿ. ಅದ್ಕೆ ಕುಡ್ಯಾಕ್ ನೀರ್ ಬೇಕೇನೊ ಅಂಬ್ತ ತಂದೆ."

"ಕೊಡು ಇಲ್ಲಿ" ಎಂದು ಕುಡಿಕೆಯನ್ನು ಈಸಿಕೊಂಡ. "ನಿದ್ದೆ ಬರ್ಲಿಲ್ವ?" ಎಂದು ಕೇಳಿದ.

"ನೀವು ಆಟೆಲ್ಲ ಯೇಳಿದ್ ಮ್ಯಾಗೆ ನಿದ್ದೆ ಎಂಗ್ ಬಂದಾತು. ಸುಮ್ಕೆ ನಿಂತಿದ್ ನೀರಿಗೆ ಕಲ್ ಒಗೆದಂಗಾಗ್ಯೆತೆ"– ಎಂದಳು ಶಬರಿ.

"ಹಾಗಾದ್ರೆ ನನ್ ಗುರಿ ಸರ್ಯಾಗಿದೆ"

"ಅಂಗಂದ್ರೆ ನಂಗಿಂಗ್ ಕಷ್ಟ ಕೊಡಾಕೇ ಆಟೆಲ್ಲ ಯೇಳಿದ್ರಾ?"

"ಛೆ! ಛೆ! ಹಾಗಲ್ಲ ಶಬರಿ; ಏನಾದ್ರು ಹೊಸವಿಷ್ಯ ಗೊತ್ತಾದಾಗ ಮನಸ್ನಲ್ಲಿ ಸರ್ಯೊ ತಪ್ಪೊ ಅಂತ ಯೋಚ್ನೆ ಬರ್ಬೇಕು. ನಿನ್ನ ಮನಸ್ಗೆ, ಈಗ, ಈ ವಿಷ್ಯ ಹೊಕ್ಕಿದೆ. ಅದು ಸರಿ ಅಲ್ವ?"

ಶಬರಿ ಹೌದೆಂಬಂತೆ ಸುಮ್ಮನಾದಳು. ಅನಂತರ ಹೇಳಿದಳು.

"ನಮ್ಮನ್ಯಾಗೆ ಈಟೊತ್ ದೀಪ ಉರ್ದಿದ್ದೇ ಇಲ್ಲ."

"ಹಾಗಾದ್ರೆ ದೀಪ ಆರ್ಸಿ ಮಲಗ್ಲಾ?"

"ಅಂಗಲ್ಲ; ಇಂಗೆಲ್ಲ ಪುಸ್ಕ ಗಿಸ್ಕ ಓದಾರ್ ಯಾರವ್ರೆ ನಮ್ ಮನ್ಯಾಗೆ. ಅದಕ್ಕಾಗಂದೆ."

"ನೀನೇ ಹೀಗ್ ಓದೋ ಥರಾ ಆಗ್ಬೇಕು. ಚಂದ್ರ ಇದ್ದಿದ್ರೆ ನಿನಗೆ ಓದು ಬರಹ ಕಲುಸ್ತಾ ಇದ್ದ."

"ಯಾಕೆ? ಸೂರ್ಯ ಕಲುಸ್ಬಾರ್ದ?"

–ಶಬರಿ ತನಗೇ ಗೊತ್ತಿಲ್ಲದಂತೆ ಕೇಳಿಬಿಟ್ಟಳು.

ಸೂರ್ಯ ನಸುನಕ್ಕು ಹೇಳಿದ– "ಅದುಕ್ಕೇಂತ್ಲೆ ಬಂದಿದ್ದೀನಲ್ಲ"?

ಶಬರಿ ನಿಂತೇ ಇದ್ದಳು.

ಇಷ್ಟು ಬೇಗ ಸಲಿಗೆ ಬೆಳೆದೀತೆಂದು ಸೂರ್ಯ ಭಾವಿಸಿರಲಿಲ್ಲ. ಅನುಮಾನಕ್ಕೆ ಆಸ್ಪದವಿಲ್ಲದಂತೆ ಮೊದಲ ದಿನವೇ ಸಾಕಷ್ಟು ವಿಷಯ ಹೇಳಿದ್ದು ಒಳ್ಳೆಯದಾಯಿತೆಂದು ಕೊಂಡ. ಮುಂದಿನ ಕಾರ್ಯಾಚರಣೆಗೆ ಶಬರಿಯೇ ಕೇಂದ್ರ ಶಕ್ತಿಯಾಗಬೇಕೆಂದು ಚಿಂತಿಸಿದ. ಈಕೆಯ ಮೂಲಕ ತನ್ನ ಅಪೇಕ್ಷಿತ ಕ್ರಿಯೆಗೆ ಪ್ರಾರಂಭಿಕ ಗಟ್ಟಿನೆಲೆ ಒದಗಿಸಬಹುದೆಂದುಕೊಂಡ.

ಸೂರ್ಯ ತನ್ನೊಳಗೆ ತಾನು ಚಿಂತಿಸುತ್ತಿರುವುದನ್ನು ನೋಡಿದ ಶಬರಿ "ಬತ್ತೀನಿ. ನಿಮ್ ಪಾಡಿಗೆ ನೀವ್ ಓದ್ಕಳ್ಳಿ ಪಾಪ!" ಎಂದು ಹೇಳಿ ಹೊರಟಳು.

ತಿಳಿಗೊಂಡ ಕೊಳ.

ಕೊಳವೇ ಕನ್ನಡಿ.

ಮುಖ ಬಿಂಬದಲ್ಲೇ ಮುನ್ನುಡಿ.

ಶಬರಿ ನಿದ್ದೆ ಮಾಡಿದಳು.

## ೫

ಬೆಳಗ್ಗೆ ಎದ್ದಾಗ ಅವಳು ಮೊದಲು ನೋಡಿದ್ದು–ಸೂರ್ಯ ಮಲಗಿದ್ದ ಜಾಗ. ಸೂರ್ಯ ಇರಲಿಲ್ಲ. ಆದರೆ ಬಗಲು ಚೀಲವಿತ್ತು. ಗಾಬರಿಯಾಗಲಿಲ್ಲ. ಹೊರಗೆ ಬಂದು ನೋಡಿದರೆ, ಸೂರ್ಯ ಕಟ್ಟೆಯ ಮೇಲೆ ಕೂತಿದ್ದಾನೆ. ಜೊತೆಗೆ ಹುಚ್ಚೀರ ಮತ್ತು ಐದಾರು ಜನರಿದ್ದಾರೆ. ಅವರೊಂದಿಗೆ ನಗು ನಗುತ್ತಾ ಮಾತನಾಡುತ್ತಿದ್ದಾನೆ.

ಈ ಕಡೆ ಒಬ್ಬ ಚಿಕ್ಕ ಹುಡುಗ ಕಸದ ತಟ್ಟೆಯನ್ನು ಎತ್ತಲು ಕಷ್ಟಪಡುತ್ತಿರುವುದನ್ನು ನೋಡಿದ ಸೂರ್ಯ ತಾನೇ ಎದ್ದು ಹೋಗಿ ಹೊರೆಸುತ್ತಾನೆ. ಅಲ್ಲಿದ್ದ ಜನರಿಗೆ ಆಶ್ಚರ್ಯ. ಆಗ ಸೂರ್ಯ ಹೇಳುತ್ತಾನೆ– "ದೊಡ್ಡೋರು–ಚಿಕ್ಕೋರು ಅಂತ ಭಾವಿಸೋದ್ಯಾಕ್ರಪ್ಪ. ನೀವ್ ಚಿಕ್ಕೋರೂ ಅಲ್ಲ, ನಾನ್ ದೊಡ್ಡೋನೂ ಅಲ್ಲ. ನನ್ ಕಾಳಜಿ ಏನ್ ಗೊತ್ತ? ಓದೋ ವಯಸ್ಸಿನ್ ಹುಡುಗ ಕಸ ಬಾಚ್ಕೊಂಡು ದನ ಕಾಯ್ಕೊಂಡು ಬಾಳ್ ಮಾಡಂಗ್ ಆಯ್ತಲ್ಲ. ಅದು ನನ್ ಚಿಂತೆ."

ಆಗ ಒಬ್ಬಾತ ಹೇಳಿದ– "ಒಡೇರ ಕೊಡ್ಸವ್ರೆ ದನಾನ. ಅವ್ರ್ ಒಲ್ದಾಗ್ ದುಡೀಬೇಕು, ತಿನ್‌ಬೇಕು.

ಅಷ್ಟರಲ್ಲಿ ಇನ್ನೊಬ್ಬ "ಒಂದು ಬೀಡಿ ಸೇದಂಗಾಯ್ತದೆ. ನಿಮ್ ಎದ್ರಿಗೇ ಒಂದ್ ದಮ್ ಒಡೀಲೇನಣ್ಣ" ಎಂದು ಕೇಳಿದ.

"ಇವ್ನ್ ಅಣೇಬರಾನೇ ಈಟು ನೋಡ್ರಿ ಮತ್ತೆ. ದಿನಕ್ ಒಂದ್‌ಕಟ್ ಬೀಡಿ ಸೇದ್ಲೇಬೇಕು. ಯಾರೆದ್ರಿಗಿದ್ರೂ ಚಟಾ ತಡ್ಯಾಕಿಲ್ಲ" ಎಂದ ಇನ್ನೊಬ್ಬ.

"ಊರ ಒಡೆಯರ ಎದ್ರುಗೂ ಚಟ ತಡ್ಯಾಕಿಲ್ವ?" ಸೂರ್ಯ ನಗುತ್ತ ಕೇಳಿದ.

"ಎಲ್ಲಾನ ಉಂಟಾ? ಅವ್ರ ನೆಪ್ತಿ ಬಂದ್ರೇನೆ ಎದೆ ಧಸಕ್ ಅಂಬ್ತೈತೆ."

"ಮುಂದೊಂದ್ ದಿನ ನೀನು ಅವ್ರ್ ಎದ್ರಿಗೆ ಎದೆ ಸೆಟ್ಕಂಡ್ ನಿಲ್ತೀಯ ಅಂದ್ಕಂಡು ನಿನ್ ಬೀಡೀಗೆ ನಾನೇ ಬೆಂಕಿ ಕಡ್ಡಿ ಗೀರ್ತಿನಿ. ಎಲ್ಲಿ ಕೊಡು ಕಡ್ಡೀನ" ಎಂದು ಸೂರ್ಯ ಕೇಳಿದ.

ಆಗ ಅಲ್ಲಿದ್ದಾತನೊಬ್ಬ "ಇವ್ನ್‌ತಾವ ಬೆಂಕಿಪಟ್ಟಣ ಎಲ್ಲಿದ್ದಾತು" ಎಂದು ತಮಾಷೆ ಮಾಡಿ "ಲೇ ಅಮ್ಮಣ್ಣಿ, ಒಂದ್ ಕೊಳ್ಳಿ ತಗಂಡ್ ಬಾರವ್ವ" ಎಂದು ಕೂಗಿದ. ಗುಡಿಸಲೊಳಗಿಂದ ಒಬ್ಬ ಹುಡುಗಿ ಕೊಳ್ಳಿ ತಂದಳು. ಉರಿಯುವ ಒಲೆಯಿಂದ ತಂದ ಕೊಳ್ಳಿ. ಅದನ್ನು ತೆಗೆದುಕೊಂಡ ಸೂರ್ಯ, ಬೀಡಿಯ ತುದಿಗೆ ಅದನ್ನು ಇಡುತ್ತ ಹೇಳಿದ– "ಬಳಪ. ಹಿಡೀಬೇಕಾಗಿರೊ ಈ ಹುಡುಗಿ ಕೈಯ್ನಾಗೆ ಬೀಡಿ ಹಚ್ಚಾಕೆ ಅಂತ ಕೊಳ್ಳಿ ತರುಸ್ತೀರಿ. ಪೆನ್ನು ಹಿಡೀಬೇಕಾಗಿರೊ ನಿಮ್ಮ ಕೈಯ್ನಾಗೆ ಬೀಡಿ ಹಿಡೀತೀರಿ. ಹ್ಞೂಂ..... ಸೇದಿ..... ಸೇದಿ".

ತಕ್ಷಣ ಬೀಡಿಯನ್ನು ಬಾಯಿಯಲ್ಲಿಟ್ಟುಕೊಂಡಿದ್ದಾತ–ಸಣ್ಣೀರ– ಸ್ತಂಭಿತನಾಗಿ ನೋಡಿದ. ಬಾಯಿಂದ ಬೀಡಿ ತೆಗೆದ.

"ನಿಮ್ಮೆದ್ರಿಗಿನ್ ಸೇದಾಕಾಗಕಿಲ್ಲ ಬಿಡಣ್ಣ. ಆಮ್ಯಾಲ್ಯಾವಾಗಾನ ನಾನ್ ದಮ್ ಒಡ್ಕಂತೀನಿ" ಎಂದ.

"ಓ ಇವತ್ ಯಾವ್ ದಿಕ್ಕನಾಗುಟ್ಟವ್ನಪ್ಪ ಸೂರ್ಯ" ಎಂದು ಒಬ್ಬಾತ ಗೇಲಿ ಮಾಡಿದ.

ಎಲ್ಲವನ್ನೂ ನೋಡುತ್ತ ನಿಂತಿದ್ದ ಶಬರಿ–"ನಿಮ್ಮೆದ್ರಿಗೇ ಉಟ್ಟಿಲ್ವ" ಎಂದಳು. ಕೂತಿದ್ದವರು ತಬ್ಬಿಬ್ಬಾಗಿ ನೋಡಿದರು. ಮತ್ತೆ ಶಬರಿ ಹೇಳಿದಳು–'ಯೇ ನಿಮ್ಮೆದ್ರಿಗೇ ಸೂರ್ಯಪ್ಪ ಕುಂತಿಲ್ವ?"

ಆಗ ಅವರಿಗೆಲ್ಲ ಅರಿವಾಗಿ 'ಓ ಸರ್‌ಸರಿ' ಎಂದು ಸಂಭ್ರಮಿಸಿದರು.

"ಇನ್ಮ್ಯಾಕೆ ಸೂರ್ಯ ನಮ್ ಅಟ್ಟೀನಾಗೇ ಉಟ್ಟಾದು"– ಶಬರಿ ಸಹಜವಾಗಿ ಹೇಳಿದರು

ಮುಖದಲ್ಲಿ ಮಿಂಚು!
ಬೆಚ್ಚನೆಯ ಬೆಳಕು.
ಎಲ್ಲರೂ ಸೂರ್ಯನ ಕಡೆ ನೋಡಿದರು.
ಸೂರ್ಯ ಮುಜುಗರದಿಂದ ಮೇಲೆದ್ದ.
ಶಬರಿ ಒಳಹೋದಳು.

* * *

ರಾತ್ರಿ ಗುಡಿಸಲಿಗೆ ಬರುವಾಗ ತಿಮ್ಮರಾಯಿ ಕುಡಿದೇ ಬಂದಿದ್ದ.

"ಏನೂ ತಿಳ್ಕಾಬ್ಯಾಡ ಸೂರ್ಯಪ್ಪ, ಪೂಜಾರಪ್ಪ ಸಿಕ್ದ. ಒಸಿ ಆಕ್ಕಳಜ್ಜ ಅಂದ. ಪೂಜಾರಪ್ಪ ಯೇಳಿದ್ ಕೇಳ್ದಿದ್ರೆ ದ್ಯಾವ್ರಿಗ್ ಬ್ಯಾಸ್ರ ಆಗ್ತೈತೆ ಅಲ್ವ? ಆಕ್ಕಂಡ್ ಬಂದ್ ಬಿಟ್ಟೆ" ಎಂದು ಸಮಜಾಯಿಷಿ ನೀಡಿದ.

"ಇರ್ಲಿ ಬಿಡಜ್ಜ. ಆದ್ರೆ ಆರೋಗ್ಯ ಕೆಡಿಸ್ಕಳಂಗ್ ಕುಡೀಬಾರ್ದು. ನಿಂಗೂ ವಯಸ್ಸಾಯ್ತು ನೋಡು."

"ವಯಸ್ನ ನಾವ್ ಇಡಕಂಡ್ರೆ ನಿಂತ್ಕಂಬ್ತೈತಾ? ಅದ್ರ್ ಪಾಡಿಗ್ ಅದು ಅರೀತಾನೇ ಇರ್ತೈತೆ ನದಿ ತರಾ." ಎಂದು ನಿರಾಳವಾಗಿ ನುಡಿದ ತಿಮ್ಮರಾಯಿ "ಅದ್ಸರಿ ಕಣಪ್ಪ, ನೀನು ಪೂಜಾರಪ್ಪಂತಾವೇನೂ ಮಾತಾಡಿಲ್ವಂತೆ" ಎಂದು ಕೇಳಿದ.

"ನಿಂಗ್ ಯಾರೇಳಿದ್ರಜ್ಜ?"

"ಗಡಂಗಿಂತಾವ್ ಸಿಕ್ಕಿದ್ನಲ್ಲ; ಅವಾಗ ಅವ್ನೆ ಕೇಳ್ದ–ಎಲ್ಲಪ್ಪ ವೊಸಾಮನ್ಸ ಅಂದ. ಅವಾಗ್ಲೊತ್ತಾತು ನೀನ್ ಅವ್ನಿಗೆ ಸಿಕ್ಕಿಲ್ಲ ಅಂಬ್ತ."

"ನೀನೇ ಹೇಳಂಗೆ ಯಾವುಕ್ಕೂ ಆತುರ ಮಾಡ್‌ಬಾರ್ದು ಅಲ್ವಾ? ಅವ್ನ್ ಹತ್ರ ಮಾತಾಡೋಕೆ ಮುಂಚೆ ನನ್ ಕೆಲ್ಸ ಬೇರೆ ಇದೆ."

"ಅದೇನ್ ಕೆಲ್ಸಾನೊ ಏನ್ ಕತ್ಯೊ. ಎಲ್ಲಾ ಒಳ್ಳೇದಾದ್ರೆ ಆತು. ಆಟೇಯ" ಅಲ್ಲೀವರೆಗೆ ಸುಮ್ಮನಿದ್ದ ಶಬರಿ–" ದಿನಾ ಇಂಗ್ ಕುಡುದ್‌ಬಾ ಒಳ್ಳೇದಾಗ್ತೈತೆ" ಎಂದು ಬೇಸರದಿಂದ ಹೇಳಿದಳು.

"ನಾನ್ ಕುಡೀದೆ ಇದ್ರೆ ಒಳ್ಳೇದಾಗ್ ಬಿಡ್ತೈತಾ, ಯೇಳೆ ವುಚ್ಚವ್ವ? ನಿಂಗೆ ಅನ್ಬವ ಕಡ್ಮೆ, ಸುಮ್ಕೆ ಇರು" ಎಂದು ತಿಮ್ಮರಾಯಿ ಗದರಿದ.

ಸೂರ್ಯ ಶಬರಿಗೆ ಸನ್ನೆ ಮಾಡಿದ. ಆಕೆ ಸುಮ್ಮನಾದಳು. ಆದರೆ ಅಲ್ಲಿ ನಿಲ್ಲದೆ ಹೊರಗೆ ಬಂದಳು. ಸೂರ್ಯ ಹಿಂದೆಯೇ ಬಂದು ಹೇಳಿದ.

"ಕಬ್ಬಿಣ ಕಾದಾಗ ಬಡೀಬೇಕು ಶಬರಿ. ಬೇಜಾರ್ ಮಾಡ್ಕೊಬೇಡ."

"ಇಲ್ಲ" ಎಂದ ಶಬರಿ, ಗೌರಿಯ ಬಳಿ ಹೋಗಿ ಬರುವುದಾಗಿ ಹೇಳಿ ಹೊರಟಳು.

ಇಡೀ ದಿನ ಗೌರಿಯ ಜೊತೆ ಮಾತನಾಡಲು ಆಗಿರಲಿಲ್ಲ. ಸೂರ್ಯ ಬಂದ ವಿಷಯದ ವಿವರಗಳನ್ನು ತಾನಾಗಿ ತಿಳಿಸಿರಲಿಲ್ಲ. ಇದರಿಂದ ಗೌರಿಗೆ ಬೇಸರವಾಗಿರುತ್ತದೆಯೆಂದು ಗೊತ್ತು. ಪೂಜರಪ್ಪ ಗಡಂಗಿನ ಬಳಿಯೇ ಇರುವುದು. ತಿಮ್ಮರಾಯಿಯಿಂದ ಗ್ಯಾರಂಟಿಯಾದ ಮೇಲೆ, ಗೌರಿ ಒಬ್ಬಳೇ ಇರುವುದರಿಂದ ಮಾತಾಡಲು ತಕ್ಕ ಸಮಯವೆಂದು ಭಾವಿಸಿ ಶಬರಿ ಬಂದಳು.

ನಿರೀಕ್ಷಿಸಿದಂತೆ–"ಏನಮ್ಮ ಇವಾಗ ನಮ್ಮಂತಾರೆಲ್ಲ ಕಣ್ಣಿಗ್ ಬೀಳಲ್ವ? ಪ್ಯಾಟೆ ಜನ ಬಂದ್‌ಮ್ಯಾಗೆ ನಮ್ಮನ್ ಮಾತಾಡ್ಸಾಕೇನ್ ತೀಟೇನ ನಿಂಗೆ?"– ಎಂದು ಖಾರವಾಗಿ ಅಂದಳು– ಗೌರಿ.

ಶಬರಿಗೆ ತಡೆಯಲಾಗಲಿಲ್ಲ. ಕಣ್ಣಲ್ಲಿ ನೀರು ತುಂಬಿತು.

ಆಗ ಗೌರಿಯೆ "ನಗ್ಸಾರಕ್ ಅಂಗಂದೆ ಸುಮ್ಕಿರು" ಎಂದು ಸಮಾಧಾನ ಮಾಡಿದಳು. ಅನಂತರ ಇಬ್ಬರೂ ಕೂತು ಮಾತಾಡಿದರು. ಶಬರಿಯು ಏನನ್ನೂ ಮುಚ್ಚಿಡದೆ ಸೂರ್ಯ ಬಂದಾಗಿನಿಂದ ನಡೆದದ್ದನ್ನು ವಿವರವಾಗಿ ಹೇಳಿದಳು. ಗೌರಿ "ನಾವೆಲ್ಲ ಅವ್ರ್ ತರಾನೇ ಪುಸ್ಕ ಓದಂಗಾದ್ರೆ ಏಟ್ ಚಂದಾಗಿರ್ತೈತೆ ಅಲ್ವ" ಎಂದಳು. ಶಬರಿ "ಹ್ಞೂ ಮತ್ತೆ" ಎಂದು ದನಿಗೂಡಿಸಿದಳು.

ಸೂರ್ಯ ಗುಡಿಸಲ ಹೊರಗೇ ಇದ್ದ. ಶಬರಿ, ಗೌರಿಯನ್ನು ಕರೆತಂದು ಪರಿಚಯಿಸಿದಳು. "ನಿಮ್ ತಂದೆ ಹತ್ರ ಮಾತಾಡ್ಬೇಕು. ಸಮಯ ಕಾಯ್ತಾ ಇದ್ದೀನಿ" ಎಂದ.

ಆದರೆ ಸೂರ್ಯ ಬೇಕಾಗಿಯೇ ರಾತ್ರಿ ಶಾಲೆಯ ವಿಷಯವನ್ನು ಪೂಜಾರಪ್ಪನ ಬಳಿ ಪ್ರಸ್ತಾಪಿಸಲಿಲ್ಲ. ಪೂಜಾರಪ್ಪನ ಜೊತೆ ಅದು ಇದೂ ಲೋಕಾಭಿರಾಮವಾಗಿ ಮಾತನಾಡುತ್ತಿದ್ದ. ವಿದ್ಯೆ ಕಲಿಸುವ ಬಗ್ಗೆ, ಬುಡಕಟ್ಟು ಜನರ ಒಳಿತಿನ ಬಗ್ಗೆ ಆತನ ಬಳಿ ಪ್ರಸ್ತಾಪ ಮಾಡಲಿಲ್ಲ. ಶಬರಿ, ತಿಮ್ಮರಾಯಿ ಕೇಳಿದಾಗ "ಕೇಳ್ತೀನಿ, ಕೇಳ್ತೀನಿ" ಎಂದು ಕಾಲ ತಳ್ಳುತ್ತಿದ್ದ. ಹೆಚ್ಚು ಒತ್ತಾಯ ಮಾಡಿದರೆ "ಶಬರಿ ಥರಾ ಕಾಯ್ತಿದ್ದೀನಜ್ಜ" ಎಂದು ಬಾಯಿ ಮುಚ್ಚಿಸುತ್ತಿದ್ದ.

ಮೊದಲ ದಿನವೇ ಅಷ್ಟೆಲ್ಲ ಹೇಳಿದಾತ ಇಷ್ಟು ದಿನ ಸುಮ್ಮನೆ ಯಾಕಿದ್ದಾನೆ ಎಂಬ ಅನುಮಾನ ಬರಹತ್ತಿತು– ತಿಮ್ಮರಾಯಿಗೆ. ಹಾಗಾದರೆ ಈತ ಬಂದ ಉದ್ದೇಶ ಏನು?

ಸೂರ್ಯ, ಹುಚ್ಚೀರನ ಜೊತೆ ಹೆಚ್ಚು ಸುತ್ತುತ್ತಿದ್ದ. ಹೊಲದಲ್ಲಿ ಕೆಲಸ ಮಾಡುವವರನ್ನು ಮಾತಾಡಿಸುತ್ತಿದ್ದ. ಸಣ್ಣೀರ ಹೊಲದಲ್ಲಿ ನೇಗಿಲು ಹೊಡೆಯುತ್ತಿದ್ದಾಗ "ಇಲ್ ಕೊಡು ನಾನೂ ಹೊಡೀತೀನಿ" ಎಂದ. ಆತ "ಎಲ್ಲಾನ ಉಂಟೇನಣ್ಣ" ಎಂದು ಹಿಂಜರಿದರೂ ಕೇಳದೆ ಒತ್ತಾಯದಿಂದ ನೇಗಿಲ ಮೇಣಿ ಹಿಡಿದು ನೂರಾರು ಸಾಲು ಹೊಡೆದ. ಸಣ್ಣೀರ, ಹುಚ್ಚೀರನ ಜೊತೆ ಸಂಭ್ರಮಿಸಿದ.

ಸೌದೆ ಆಯುತ್ತಿದ್ದ ಬುಡಕಟ್ಟಿನ ಹೆಂಗಸರ ಹತ್ತಿರ ಬಂದು "ನಾನೂ ಕಡ್ಡಿ ಆಯ್ಕೊಡ್ತೀನಿ" ಎಂದು ಸಹಾಯ ಮಾಡಿದ. ಒಣಗಿದ ಕತ್ತಾಳೆ ಮಟ್ಟೆಗಳನ್ನು ಕಿತ್ತುಕೊಟ್ಟ. ಹೀಗೆ ಅವರೊಳಗೊಬ್ಬನಾಗುತ್ತ ಬಂದ.

ಕಪಿಲೆ ಹೊಡೆಯುತ್ತಿದ್ದವರ ಬಳಿ ಹೋದ. ಹೊಲದಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಬುಡಕಟ್ಟಿನ ಜನರು ಸೂರ್ಯನ ಬಗ್ಗೆ ಒಡೆಯರ ಆಳುಗಳಿಗೆ

ಹೇಳಿದರು. ಕಪಿಲೆ ಹೊಡೆಯುತ್ತಿದ್ದ ಈ ಆಳುಗಳು ಸೂರ್ಯನ ಅಪೇಕ್ಷೆ ಮೇರೆಗೆ ಈತನಿಗೆ ಸ್ವಲ್ಪ ಹೊತ್ತು ಬಿಟ್ಟುಕೊಟ್ಟರು. ಈತ ಕಪಿಲೆ ಹೊಡೆದದ್ದು ನೋಡಿ ಅಚ್ಚರಿಗೊಂಡರು.

ಹೀಗೆ ದುಡಿಮೆಗಾರರ ಜೊತೆ ಓಡಾಡ್ತ ಕಾಲ ತಳ್ಳಿದ ಸೂರ್ಯ ಆಗಾಗ್ಗೆ ವಿದ್ಯೆಬುದ್ಧಿಯ ಬಗ್ಗೆ ಪ್ರಸ್ತಾಪಿಸುತ್ತಿದ್ದ. ಒಮ್ಮೆ ಗಂಡಸರು ಮತ್ತು ಹೆಂಗಸರು ತೋಪಿನಲ್ಲಿ ಕೂತು ಹಿಟ್ಟು ತಿನ್ನುತ್ತಿದ್ದಾಗ ತಾನೂ ಸೇರಿಕೊಂಡ– "ಹಿಟ್ಟು ಕೊಡಿ" ಎಂದ. "ಇದು ತಂಗಳಿಟ್ಟು ಕಣಣ್ಣ" ಎಂದು ಹೆಂಗಸರು ಹಿಂಜರಿದರೂ ಒತ್ತಾಯದಿಂದ ಈಸಿಕೊಂಡ. ಎಲ್ಲರಿಗೂ–ಸೂರ್ಯ ಒಂದು ವಿಸ್ಮಯವಾಗಿದ್ದ.

ತೋಪಿನಲ್ಲಿ ಹಿಟ್ಟು ತಿನ್ನುತ್ತ ವಿದ್ಯೆಯ ಮಹತ್ವ ಹೇಳಿದ. ತಾನು, ತನ್ನ ಗೆಳೆಯರು ಸೇರಿ ವಿದ್ಯೆ ಕಲಿಸುವುದಾಗಿ ವಿವರಿಸಿದ. "ನಾವೇ ಸೇರಿ ಒಂದು ಜಾಗದಲ್ಲಿ ಶಾಲೆಗೇಂತ ಗುಡಿಸ್ಲು ಕಟ್ಟೋಣ" ಎಂದು ಹುರಿದುಂಬಿಸಿದ. "ಪೂಜಾರಪ್ಪನ್ ಕೇಳ್‌ಬೇಕಲ್ಲ" ಎಂದು ಸಣ್ಣೀರನೊಂದಿಗೆ ಎಲ್ಲರೂ ಹೇಳಿದಾಗ "ಅದನ್ನ ನಾನ್ ಕೇಳೋದಲ್ಲ. ನಿಮಿಗ್ ನಿಜವಾಗೂ ಅನ್ನಿಸಿದ್ರೆ ನೀವೇ ಕೇಳ್ಬೇಕು. ಆಗ ಇಲ್ಲ ಅನ್ನೋಕಾಗಲ್ಲ" ಎಂದು ಸೂರ್ಯ ಸ್ಪಷ್ಟಪಡಿಸಿದಾಗ ಸ್ವಲ್ಪ ಕಾಲ ಮೌನ ಆವರಿಸಿತು. ಆಗ ಹುಚ್ಚೀರ "ಯಾಕೆ ಕೇಳಬಾರದು, ನಾನೇ ಕೇಳ್ತೀನಿ" ಎಂದು ಆಂಗಿಕ ಸಂಜ್ಞೆಗಳಿಂದ ತಿಳಿಸಿದ. ಸಣ್ಣೀರ ಉತ್ತೇಜಿತನಾದ. "ನಾವೇನು ಕುಡ್ಯಾಕೆ ಗಡಂಗ್ ಬೇಕು ಅಂಬ್ತ ಕೇಳ್ತೀವ? ಅಕ್ಷರ ಕಲ್ಯಾಕೆ ಇಂದೆ ಮುಂದೆ ಯಾಕ್ ನೋಡ್‌ಬೇಕು? ಇವತ್ತು ಕೇಳೇ ಬಿಡಾವ" ಎಂದು ಘೋಷಿಸಿದಾಗ ಎಲ್ಲರೂ "ಅಂಗೇ ಆಗ್ಲಿ" ಎಂದರು.

ಕೆಲವರಂತೂ ಕೂತಲ್ಲೇ ಪುಸ್ತಕ ಪೆನ್ನು ಹಿಡಿದ ತಮ್ಮ ಜೀವಂತ ಚಿತ್ರವನ್ನು ಕಲ್ಪಿಸಿಕೊಂಡು ಸಂಭ್ರಮಿಸಿದರು.

ತೋಪಿನಲ್ಲಿ ಹೊಸ ಚೈತನ್ಯ ಸಂಚರಿಸಿದ ಅನುಭವ. ಅಲ್ಲಿ ಕೂತು ಹಿಟ್ಟು ತಿನ್ನುತ್ತಿದ್ದವರಿಗೆ ಹೊಸ ಗಾಳಿಯತಂಪು ಸೋಂಕಿದ ಪುಳಕ. ಹಿಟ್ಟು ತಿಂದು ಎದ್ದರು. ಹೋಗುವಾಗ ಒಬ್ಬೊಬ್ಬರೂ ಒಂದೊಂದು ಮರದ ಬಳಿಗೆ ಹೋಗಿ ಅಪ್ಪಿಕೊಂಡರು; ಕೈಯಿಂದ ಮುಟ್ಟಿ ಕಣ್ಣಿಗೆ ಒತ್ತಿಕೊಂಡರು.

ಬುಡಕಟ್ಟಿನ ಜನರು ತೋಪಿನಲ್ಲಿದ್ದ ಹೊಂಗೆ, ಹುಣಿಸೆ ಮರಗಳನ್ನು ಅಪ್ಪಿಕೊಳ್ಳುವುದು, ಕಣ್ಣಿಗೆ ಒತ್ತಿಕೊಳ್ಳುವುದು ಸೂರ್ಯನಿಗೆ ಕುತೂಹಲಕರವಾಗಿ ಕಾಣಿಸಿತು. ಸಣ್ಣೀರನಲ್ಲಿ ವಿಚಾರಿಸಿದ.

"ಯಾಕ್ ಎಲ್ರೂ ಹೀಗ್ ಮಾಡ್ತಿದ್ದೀರಿ?"

"ಅದಂಗೇ ಸೂರ್ಯಪ್ಪ, ನಮ್ಗೆ ಮರಗಳು ಅಂದ್ರೆ ದ್ಯಾವ್ರಿದ್ದಂಗೆ; ಮರ್ದಾಗೆ ಏನೋ ಸಕ್ತಿ ಇರ್ತೈತೆ ಅಂಬ್ತ ಲಾಗಾಯ್ತಿಂದ ನಂಬ್ಕಂಡ್ ಬಂದಿದ್ದೀವಿ. ಅದ್ಕೆ ನಮಿಗ್ ಮನ್ಸಾದಾಗೆಲ್ಲ ಅಪ್ಕಂಡು ನಮ್ಗೂ ಸಕ್ತಿ ಬರ್ಲಿ ಅಂಬ್ತ ಕೇಳ್ಕಂಬ್ತೀವಿ. ಕಣ್ಣಿಗ್ ಒತ್ಕಂಡು ಅದನ್ನೇ ಪೂಜೆ ಅದ್ಕಂಬ್ತೀವಿ. ಅಬ್ಬಗಿಬ್ಬ ಮಾಡ್ವಾಗಂತು ಎಲ್ಲಾರೂ ತೋಪಿಗ್ ಬಂದು ಒಬ್ಬೊಬ್ರು ಮರ ಅಪ್ಕಂಡು, ಕೈಮುಗೀತೀವಿ."

"ಓ ಹಾಗಾದ್ರೆ ಇದನ್ನ ಒಂದು ಆಚರಣೆ ಥರಾ ಮಾಡ್ತೀರಿ."

"ಆವಾಗ್ಲೆ ಹೇಳಿದ್ನಲ್ಲ. ನಂಬ್ಕಂಡ್ ಬಂದಿದ್ದೀವಿ; ಮಾಡ್ತೀವಿ. ನನಿಗ್ ಗೊತ್ತಿರಾದ್ ಆಟೇಯ."

ಸಣ್ಣೀರನ ಮಾತುಗಳಿಂದ ಈ ಜನಕ್ಕೂ ತೋಪಿಗೂ ಇರುವ ಸಂಬಂಧ ಸ್ಪಷ್ಟವಾಗಿತ್ತು. ಮರಗಿಡಗಳಲ್ಲಿ ಅವರು ಚೈತನ್ಯವನ್ನು ಕಾಣುತ್ತಿದ್ದಾರೆಂದು ಸೂರ್ಯ ಅರ್ಥಮಾಡಿಕೊಂಡ. ಎಷ್ಟೋ ಹಳ್ಳಿಗಳಲ್ಲಿ ಅಲ್ಲಿನ ಜನರು ಅರಳೀಮರ ಮತ್ತು ಬೇವಿನ ಮರಗಳನ್ನು ಅಕ್ಕಪಕ್ಕದಲ್ಲಿ ಬೆಳೆಸಿ ಮದುವೆ ಮಾಡುವುದನ್ನು ನೋಡಿದ್ದ. ಸಸ್ಯರಾಸಿಯಲ್ಲಿ ಚೈತನ್ಯದ ಕಾಣ್ಕೆ; ಜನರ ನಂಬಿಕೆ. ಈಗ ತನ್ನಿಂದ ಅವರಿಗೆ ಅಕ್ಷರ ಚೈತನ್ಯದ ತಿಳುವಳಿಕೆ. ಮನುಷ್ಯ, ಮರ, ಅಕ್ಷರ–ಎಲ್ಲವೂ ಚೈತನ್ಯ; ಅನುಭವ ಅನನ್ಯ;– ಸೂರ್ಯನ ಚಿಂತನೆ ತನ್ನಾರಕ್ಕೆ ತಾನು ಬೆಳೆಯುತ್ತಿತ್ತು.

ಶಾಲೆಗೆಂದು ಗುಡಿಸಲು ಕಟ್ಟಲು ತೋಪಿನಲ್ಲಿ ತೆಗೆದುಕೊಂಡ ತೀರ್ಮಾನ ಸಂತೋಷ ತಂದಿತ್ತು; ಮುಂದಿನ ಹೆಜ್ಜೆಗೆ ಚೈತನ್ಯ ನೀಡಿತ್ತು.

ಇಲ್ಲಿ ನಡೆದ ಘಟನೆ ಶಬರಿಗಾಗಲಿ, ತಿಮ್ಮರಾಯಿಗಾಗಲಿ ಗೊತ್ತಿರಲಿಲ್ಲ. ಸೂರ್ಯನಿಗೆ ಅವರಲ್ಲಿ ತಿಳುವಳಿಕೆ ಮೂಡಿಸಬೇಕಾದ ಅಗತ್ಯವಿರಲಿಲ್ಲ. ಅವರಲ್ಲಿ ಅಕ್ಷರ ಕಲಿಕೆ ಬಗ್ಗೆ ಆಸಕ್ತಿ ಬಂದಾಗಿತ್ತು. ಆದ್ದರಿಂದ ಅವರನ್ನು ಹೊರತುಪಡಿಸಿ ಉಳಿದ ಅನೇಕರ ವಿಶ್ವಾಸ ಗಳಿಸುವ ಪ್ರಯತ್ನದಲ್ಲಿ ನಿರತನಾಗಿ ಯಶಸ್ವಿಯೂ ಆಗಿದ್ದ.

ರಾತ್ರಿ, ಪೂಜಾರಪ್ಪ ಕಟ್ಟೆಯ ಮೇಲೆ ಕೂತಾಗ ಸಣ್ಣೀರನಾದಿಯಾಗಿ ಅನೇಕ ಗಂಡಸರು ಬಂದು ನಿಂತರು. ಹೆಂಗಸರು ಕೆಲವರು ಗುಡಸಲುಗಳ ಮುಂದೆ ಕೂತರು. ಶಬರಿ ಇದನ್ನು ಗಮನಿಸಿ ತಾನೂ ಹೊರಬಂದಳು. ಯಾಕೆ ಹೀಗೆ ಕಲೆಯುತ್ತಿದ್ದಾರೆಂದು ಆಕೆಗೆ ಆರಂಭದಲ್ಲಿ ಅರ್ಥವಾಗಲಿಲ್ಲ. ಹೊರ ಬಂದ ಗೌರಿಯನ್ನು ಕರೆದಳು. "ಯಾಕೆ ಯಾವ್ದಾನ ಅಬ್ಬಗಿಬ್ಬ ಬಂದೈತಾ? ಎಲ್ರೂ ನಿಮ್ಮಪ್ಪನ್ ಸುತ್ತ ಸೇರ್ತಾ ಅವ್ರೆ" ಎಂದು ಕೇಳಿದಳು. ಗೌರಿಗೂ ಗೊತ್ತಿರಲಿಲ್ಲ.

"ಅಬ್ಬಗಿಬ್ಬ ಬಂದ್ಯೆತೊ ಇಲ್ಲ ಯಾರ್ದಾನ ಮದ್ವೆಗಿದ್ವೆ ವಿಸ್ಯ ಮಾತಾಡಾದ್ಯೆತೊ ಯಾರಿಗ್ಗೊತ್ತು" ಎಂದ ಗೌರಿ, ಶಬರಿಯ ಜೊತೆಯಲ್ಲೇ ನಿಂತಳು.

ಪೂಜಾರಪ್ಪ, ತನ್ನ ಹತ್ತಿರ ಬಂದು ನಿಂತರವನ್ನು ನೋಡಿದ.

ಕೈಯ್ಯಲ್ಲಿದ್ದ ಬಂಗಿಸೊಪ್ಪಿನ ಕೊಳವೆಯನ್ನು ಬಾಯಿಗಿಟ್ಟುಕೊಂಡು ಸರಿಯಾಗಿ ಒಂದು ದಮ್ಮೆಳೆದ.

ಆಮೇಲೆ "ಏನ್ರೊ ಬಂದಿದ್ದು? ಯಾವ್ದನ ಹಸ ಅದುರಿಗ್ ಬಂದ್ಯೆತ? ಪೂಜೆ ಗೀಜೆ ಮಾಡಿ ಹೋರಿ ಆರುಸ್ಬೇಕಾ ಎಂಗೆ?" ಎಂದು ಗತ್ತಿನಿಂದ ಕೇಳಿದ.

"ನಿಂಗೊತ್ತಿಲ್ದೆ ಯಾವ್ ಅಸ ಅದುರಿಗ್ ಬತ್ತೈತೆ ಪೂಜಾರಪ್ಪ " ಎಂದ ಸಣ್ಣೀರ.

"ಅದ್ಸರಿ ಬಿಡು. ಅಂಗಾರ್ ಯಾವ್ದಾನ ಹುಡ್ಗಿ ಹೊಸ್ದಾಗ್ ಹೊರೀಕಾಗವ್ಳೇನು?"– ಪೂಜಾರಪ್ಪ ಮತ್ತೆ ಕೇಳಿದ.

'ಒಳ್ಳೆ ಪೂಜಾರಪ್ಪನ ಕತೆಯಾತಲ್ಲ. ಬರೀ ಇಂತವೇ ಕೇಳ್ತಾ ಅವ್ನೆ' ಎಂದು ಅಲ್ಲಿದ್ದವರಿಗೆಲ್ಲ ಅನ್ನಿಸಿದರೂ ಯಾರೂ ಬಾಯಿ ಬಿಡಲಿಲ್ಲ.

ಸಣ್ಣೀರನೇ ಗಂಟಲು ಸರಿಮಾಡಿಕೊಂಡು ಹೇಳತೊಡಗಿದ.

"ನೋಡ್ ಪೂಜಾರಪ್ಪ, ಯಾವ್ ಅಸಾನೂ ಅದುರಿಗ್ ಬಂದಿಲ್ಲ, ಯಾವ್ ಉಡ್ಗೀನೂ ಮೈನೆರ್ದಿಲ್ಲ. ನಾವೇ ಒಸಿ ಅದಿರಿಗ್ ಬಂದಂಗ್ ಆಡಾನ ಅಂಬ್ತಿದ್ದೀವಿ....."

ಪೂಜಾರಪ್ಪ ನಡುವೆಯೇ ತಡೆದು "ಅದೇನ್ಲ ಅಂತಾದ್ದಾಗೈತೆ ನಿಮ್ಗೆ ಅದುರಿಗ್ ಬರಾ ಅಂತಾದ್ದು" ಎಂದು ಕೇಳಿದ.

"ನೀನ್ ಅಂಗ್ ಕೇಳಿದ್ದಕ್ಕೆ ಅಂಗಂದೆ ಕಣಪ್ಪೊ. ನಾವೂ ಒಸಿ ಮೈ ಕೊಡವಿಕಳ್ಳಾನ ಅಂಬಾದ್ನ ಅಂಗಂದೆ ಆಟೇಯ. ಇವಾಗ ನಾವೆಲ್ಲ ಅಕ್ಸರ ಕಲ್ಯಾನ ಅಂಬ್ತ ಅಂದ್ಕಂಡಿದ್ದೀವಿ. ನಮ್ಗೂ ಓದು ಬರಾ ಬಂದ್ರೆ ಊರ್‌ನೋರ್‌ತಾವ ಮಾನ ಮರ್ವಾದೆ ಬತ್ತೈತೆ. ನೀನೇನೊ ಎಲ್ಡಕ್ಸರ ಕಲ್ತು ಅವ್ರ್‌ತಾವ ವ್ಯವಾರ ಮಾಡ್ತೀಯ. ನಾವು ಎಲ್ರಂಗಾಗ್ ಬೇಕೊ ಇಲ್ವೊ ಯೇಳು ಮತ್ತೆ. ನಾವೊಂತರಾ ಅವ್ರೊಂತರಾ ಇರಾದ್ನ ದ್ಯಾವ್ರ್ ಮೆಚ್ತಾನ; ನೀನೇ ಯೇಳು. ಅದುಕ್ಕೆ ನಾವು ಒಂದು ರಾತ್ರಿ ಸ್ಯಾಲೆ ಮಾಡ್ಕಂಡು ಓದು ಬರಾ ಕಲ್ಯಾನ ಅಂಬ್ತಿದ್ದೀವಿ. ನಿನ್ನೊಂದ್ ಮಾತ್ ಕೇಳ್ದೆ ಮುಂದುವರೀಬಾರ್ದು ಅಂಬ್ತ ಕೇಳ್ತಾ ಇದ್ದೀವಿ."

–ಸಣ್ಣೀರ ಉರು ಹೊಡೆದಂತೆ ಒಂದೇ ಉಸಿರಿಗೆ ಹೇಳಿದಾಗ ಪೂಜಾರಪ್ಪ ಅಷ್ಟೇ ಅಲ್ಲ, ಉಳಿದವರೂ ದಂಗಾದರು. ಈತ ಹೀಗೆ ಹೇಳುತ್ತಾನೆಂದು ಅವರೂ ನಿರೀಕ್ಷಿಸಿರಲಿಲ್ಲ.

ಪೂಜಾರಪ್ಪ ಸಾವರಿಸಿಕೊಂಡು ಕೇಳಿದ–

"ಇವಾಗ್ ಇದ್ದೆ ಬುದ್ದಿ ಕಲ್ತು ಏನೋ ಮಾಡ್ತೀರ? ನೀವೇನ್ ದುಪ್ಟಿ ಕಮೀಸನರ್ ಆಗ್ತೀರಾ?"

"ಓದು ಬರಾ ಕಲುತ್ರೆ ನಾವು ನಾಕ್ ಜನ್ರೆದ್ರಿಗೆ ತಲೆ ಎತ್ ನಡೀಬವ್ಟು" ಎಂದು ಮೊದಲೇ ಯೋಚಿಸಿದವನಂತೆ ಉತ್ತರಿಸಿದ–ಸಣ್ಣೀರ.

ಅಷ್ಟರಲ್ಲಿ ಮತ್ತೊಬ್ಬ "ನಮ್ ಮಕ್ಕಳು ಅಗಲೆಲ್ಲ ಕೂಲಿ ಮಾಡ್ತಾವೆ. ಅವ್ರೂ ಎಲ್ಡಕ್ಸರ ಕಲೀಲಿ ಬಿಡು ಪೂಜಾರಪ್ಪ" ಎಂದು ನಿರ್ಧಾರಕವಾಗಿ ನೋಡಿದ.

ಆಗ ಹೆಂಗಸರ ಗುಂಪಿಂದ ಎರಡು ಮೂರು ದನಿಗಳು ಕೇಳಿಸಿದವು–

"ಅಕ್ಸರ ಅದೆಂಗಿರ್ತೈತೊ ನಾವು ಒಸಿ ನೋಡ್ತೀವಪ್ಪ."

ಪೂಜಾರಪ್ಪನಿಗೆ ಮೊದಲ ಬಾರಿಗೆ ಬುಡಕಟ್ಟಿನ ಒಗ್ಗಟ್ಟು ಎದುರಾಗಿತ್ತು. ಯೋಚಿಸಿದ. ಈಗ ಇವರ ದನಿಯ ಹಿಂದಿನ ದಿಟ್ಟತೆಯನ್ನು ಎದುರು ಹಾಕಿಕೊಳ್ಳಬಾರದು ಎಂದುಕೊಂಡ.

"ಆಯ್ತಪ್ಪ, ಯಾರ್ ಕಲುಸ್ತಾರೆ ನಿಮ್ಗೆ. ನಂಗಂತೂ ಗೊತ್ತಿರಾ ಎಲ್ಡಕ್ಸರ ದ್ಯಾವ್ರ ಪೂಜೇಲೆ ವೊಲ್ಟೋಗ್ತವೆ" ಎಂದು ಪೂಜಾರಪ್ಪ ಕೇಳಿದಾಗ ಸಣ್ಣೀರ "ನೀನ್ ಹ್ಞೂ ಅಂದ್ರೆ ಕಲ್ಸಾರ್ ಇದ್ದೇ ಇರ್ತಾರೆ. ಯಾಕಿವಾಗ ಸೂರ್ಯಪ್ಪ ಅಂಬ್ತ ಬಂದಿಲ್ವ ಆಯಪ್ಪನೇ ಕಲುಸ್ತಾರೆ" ಎಂದು ಹೇಳುವ ವೇಳೆಗೆ ಒಳಗಿಂದ ಬಂದ ಸೂರ್ಯ "ಎಲ್ರೂ ಆಸೆ ಪಡ್ತಿರ್ವಾಗ ಇಲ್ಲ ಅನ್ನಬಾರದು ಪೂಜಾರಪ್ಪ. ಜನ್ರೆಲ್ಲ ಒಪ್ಪಿದ್ರೆ ನಾನು ರಾತ್ರಿ ಶಾಲೆ ನಡಿಸ್ಕೊಡ್ತೀನಿ. ಆದ್ರೆ ತೀರ್ಮಾನ ಜನಗಳ್ದೇ ಆಗಿರ್ಬೇಕು" ಎಂದು ಹೇಳಿದ.

ಪೂಜಾರಪ್ಪನಿಗೆ ಸನ್ನಿವೇಶ ಅರ್ಥವಾಯಿತು.

ಎಷ್ಟಾದರೂ ಪೂಜಾರಪ್ಪ ಅಲ್ಲವೆ?

"ನೀವೆಲ್ಲ ತೀರ್ಮಾನಕ್ ಬಂದ ಮ್ಯಾಗೆ ನಾನ್ ಕೊಚ್ಚನ್ ಮಾಡಾದೇನೈತೆ? ಆದ್ರೆ ಊರ ಒಡೇರು ನನ್ ಸುಮ್ಕೆ ಬಿಡ್ತಾರ? ಕೊಚ್ಚನ್ ಮಾಡ್ತಾರಪ್ಪ ಕೊಚ್ಚನ್ ಮಾಡ್ತಾರೆ"– ಎಂದ ಪೂಜಾರಪ್ಪ.

"ಅವ್ರಿಗ್ ನೀನೇ ಒಂದ್ ಮಾತ್ ಯೇಳ್ಬೇಕಪ್ಪ. ನಾವೇನ್ ಅವ್ರ ಆಸ್ತಿ ಬರ್ಕೊಡ್ರಿ ಅಂಬ್ತ ಕೇಳ್ತೀವ?"– ಸಣ್ಣೀರ ಕೇಳಿದ.

ಪೂಜಾರಪ್ಪನಿಗೆ ಆಶ್ಚರ್ಯವಾಯಿತು. ಎಂಥ ಪ್ರಶ್ನೆ? ಇಂಥ ಪ್ರಶ್ನೇನ ಚಂದ್ರ ಹಾಕ್ತಿದ್ದ. ಈಗ ಅಷ್ಟು ಧೈರ್ಯ ಮಾಡೋರು ಹುಟ್ತಾ ಇದಾರಲ್ಲ!ಒಂದು ಕಣ್ಣಿಟ್ಟಿರಬೇಕು– ಎಂದು ಚಿಂತಿಸಿದ,.

"ನಾನೇನೊ ಯೇಳ್ತೀನ್ರಪ್ಪ; ಆದ್ರೆ ನೋಡ್ರಿ, ನಾವಿವಾಗ್ಲೆ ತಪ್ ಮಾಡಿದ್ದೀವಿ. ಹಟ್ಟೀಗ್ ಹೊಸ ಮನ್ಸ ಬಂದಾಗ ಒಡೇರ್‍ಗೆ ಒಂದ್ ಮಾತು ಯೇಳ್ಬೇಕಿತ್ತು. ಏನೋ ಇಂಗ್ ಬಂದ್ ಅಂಗ್ ವೋಗ್ತಾನ್ ಈಯಪ್ಪ ಅಂಬ್ತ ಸುಮ್ಕಿದ್ದೆ. ಇವಾಗೇಳ್ಲೇ ಬೇಕು. ಅದುಕ್ಕೆ ಈ ಸೂರ್ಯಾನೇ ಒಡೇರ್‍ತಾವ್ ಬರ್‍ಬೇಕು." ಎಂದು ಪೂಜಾರಪ್ಪ ಷರತ್ತು ಹಾಕಿದ.

ಜನರ ಮಧ್ಯೆ ಗುಸು ಗುಸು ಶುರುವಾಯಿತು.

ಇದನ್ನು ಗಮನಿಸಿದ ಸೂರ್ಯ ತಾನೇ ಮುಂದೆ ಬಂದು ಹೇಳಿದ–

"ನೋಡಿ ಪೂಜಾರಪ್ಪ, ನಂಗೇನ್ ನಿಮ್ ಒಡೆಯರ ಹತ್ರ ಬರಬಾರ್‍ದು ಅಂತಿಲ್ಲ. ಆದ್ರೆ ಅಕ್ಸರ ಕಲ್ಸೋದ್ಕು ಅವ್ರ್ ಅಪ್ಪಣೆ ಕೇಳೋದು ನನ್ನಂತೋನ್ಗೆ ಕಷ್ಟ ಆಗುತ್ತೆ."

"ಅದ್ಕೆ ಕಣಪ್ಪ ನೀನ್ ಬರ್‍ಬೇಕು ಅನ್ನಾದು. ನಾಳೆ ಏನಾರ ವೆತ್ತಾಸ ಆದ್ರೆ ಎಲ್ಲಾ ನನ್ ತಲೇಗ್ ಬತ್ತೈತೆ. ಈಗ್ಲೇ ಕಷ್ಟ ಅಂಬಾನು ಆಮ್ಯಾಕ್ ಸುಮ್ಕೆ ಇರ್‍ತೀಯ?"– ಪೂಜಾರಪ್ಪ ದೃಢವಾಗಿ ಹೇಳಿದ.

"ಹಾಗಾದ್ರೆ ಬರ್‍ತೀನಿ. ಆದ್ರೆ ಅವರು ನನಗೆ ಅವ್ಮಾನ ಆಗೋಹಾಗ್ ನಡ್ಕೋಬಾರದು."

"ನೀನೂ ಆಟೇಯ–ಮಾನ–ಅವ್ಮಾನ ಅಂದ್ರೆ ಏನೂಂಬ್ತ ತಿಳ್ಕಂಡು ಅವ್ರ್ ತಾವ ಉಸಾರಾಗ್ ನಡ್ಕಬೇಕು. ನಡ ಬಗ್ಸಿದ್ರೆ ಬಡವರು ಬದುಕ್ತಾರೆ ಗೊತ್ತೇನಪ್ಪ?"

"ಅದೆಲ್ಲ ಆಮೇಲೆ ಗೊತ್ತಾಗುತ್ತೆ. ಈಗ ಮೊದ್ಲು ನೀನು ಊರ ಒಡೇರ್‍ನ ಸಿದ್ಧಮಾಡು. ಆಮೇಲೆ ನಾನ್ ಬರ್‍ತೀನಿ" ಎಂದು ಸೂರ್ಯ ಹೇಳಿದಾಗ ಉಳಿದವರು ಒಪ್ಪಿದರು. ಅಷ್ಟೇ ಅಲ್ಲ– "ನಮ್ಗೆ ಒಳ್ಳೇದ್ ಮಾಡಾಕ್ ಬಂದೋರ್‍ಗೆ ಅವ್ಮಾನ ಆಗ್‌ಬಾರ್‍ದು ಪೂಜಾರಪ್ಪ" ಎಂದು ಕಿವಿಮಾತು ಹೇಳಿದರು. ಪೂಜಾರಪ್ಪನಿಗೆ ಎಲ್ಲಾ ಹೊಸದಾಗಿತ್ತು.

"ನಂಗಾಟೂ ಗೊತ್ತಾಗಲ್ವೇನ್ರೊ" ಎಂದು ಹೇಳಿದ ಆತ ಸೂರ್ಯನ ಕಡೆ ತಿರುಗಿ "ಅಲ್ಲ, ಈಟೆಲ್ಲಾ ಮಾಡ್ತೀಯಲ್ಲ, ಸರ್ಕಾರದೋರು ನಿಂಗೇನಾರ ಕೊಡ್ತಾರ? ಅಂಗೇನಾರ ಇದ್ರೆ ಒಡೇರ್‍ನೂ ನಮ್ಮನ್ನೂ ಒಸಿ ನೋಡ್ಕಳಪ್ಪ" ಎಂದು ಕೇಳಿದ.

"ಇದಕ್ಕೆ ಸರ್ಕಾರದಿಂದ ನಾನೇನು ತಗೊಳ್ಳಲ್ಲ ಪೂಜಾರಪ್ಪ. ಇದು ನನ್ನ ಸಂತೋಷಕ್ ಮಾಡೊ ಕೆಲ್ಸ. ಇಲ್ಲಿಗೆ ನಾನು ಸರ್ಕಾರದ್ ಕೆಲ್ಸ ಮಾಡಾಕ್ ಬಂದಿಲ್ಲ. ಈ ಸಮುದಾಯದ್ ಕೆಲ್ಸಾ ಮಾಡಾಕ್ ಬಂದಿದ್ದೀನಿ"– ಸೂರ್ಯ

ನಿಖರವಾಗಿ ಹೇಳಿದ.

"ಏನೋ ನಂಗೆಲ್ಲ ವೊಸಾ ತರಾ ಕಾಣುಸ್ತಾ ಐತಪ್ಪ. ನಿನ್ತರಾನೂ ವುಚ್ರು ಇರ್ತಾರೆ ಅಂದಂಗಾತು. ಅಂಗಾರೆ ನೀನ್ ವೊಟ್ಟೆ ಪಾಡಿಗೇನ್ ಮಾಡ್ತೀಯ, ಇಲ್ಲಿದ್ಕಂಡು?"–ಪೂಜಾರಪ್ಪ ಸಹಜವಾಗೇ ಕೇಳಿದ.

"ಯಾಕೆ, ನಾವೆಲ್ಲ ಸತ್ತೋಗಿದ್ದೀವ?"–ಶಬರಿ ಥಟ್ಟನೆ ಹೇಳಿದಳು.

ಪೂಜಾರಪ್ಪ ತಡವರಿಸಿಕೊಳ್ಳುತ್ತಿರುವಂತೆ ಜನರೆಲ್ಲ "ಅವ್ದವ್ದು' ಎಂದರು.

ಒಬ್ಬ ಹೆಂಗಸು– 'ಒಬ್ಬೊಬ್ರು ಮನ್ಯಾಗೊಂದೊಂದ್ ದಿನ ಉಂಬಾಕಿಕ್ಕಿದ್ರಾತಪ್ಪ. ಆಯಪ್ಪೇನ್ ಬ್ಯಾರೇನ" ಎಂದು ಹೇಳಿದಾಗ ಸೂರ್ಯ ಕ್ಷಣಕಾಲ ಭಾವುಕನಾದ.

ಬಗ್ಗಡವಿಲ್ಲದ ಭಾವಪೂರ.
ಸುಗ್ಗಿ ತುಂಬಿದ ಸರೋವರ.

ಪೂಜಾರಪ್ಪ ಎದ್ದು ನಿಂತ. "ನಾಳೀಕೆ ಒಡೇರ್‌ತಾವ್ ಮಾತಾಡ್ತೀನಿ. ಆಮ್ಯಾಕ್ ಸೂರ್ಯಪ್ಪನ್ ಜತ್ಯಾಗೆ ಐದಾರ್ ಜನ ಬರ್ರಿ. ಈಟೆಲ್ಲ ಯಾಕೇಳ್ತೀನಪ್ಪ ಅಂದ್ರೆ, ನಿಮ್ಮನ್ ಬಿಟ್ಟು ನಾನಿರಾಕಾಯ್ತದ? ಏನಪ್ಪ, ಸೂರ್ಯಪ್ಪ ಏನಂಬ್ತೀಯ" ಎಂದ.

"ಜನರಿಲ್ದೆ ಯಾರು ಇಲ್ಲ ಬಿಡು ಪೂಜಾರಪ್ಪ" ಎಂದು ಹೇಳಿದ ಸೂರ್ಯ "ರಾತ್ರಿ ಶಾಲೆ ಶುರುವಾಗ್ಲಿ ಆಮೇಲೆ ಅಕ್ಷರಶಕ್ತಿ ಅಷ್ಟೇಅಲ್ಲ, ಜನರಶಕ್ತಿ ಏನೂ ಅಂತ ಗೊತ್ತಾಗುತ್ತೆ" ಎಂದು ತನ್ನೊಳಗೇ ಹೇಳಿಕೊಂಡ.

ಇಲ್ಲಿ ನಡೆದ ಘಟನೆಯಿಂದ ಸ್ವತಃ ಶಬರಿಗೆ ವಿಸ್ಮಯವಾಗಿತ್ತು.

ಸೂರ್ಯ ಪೂಜಾರಪ್ಪನ ಬಳಿ ಏನೂ ಮಾತಾಡದೆ ಓಡಾಡುತ್ತಿರುವುದನ್ನು ತಿಮ್ಮರಾಯಿ ಮತ್ತು ಶಬರಿ ಕೂಡಿಯೇ ಗಮನಿಸಿದ್ದರು. ಈತ ಯಾಕೆ ಹೀಗೆ ಓಡಾಡುತ್ತಾನೆಂದು ತಿಮ್ಮರಾಯಿಗೆ ಅನುಮಾನವೂ ಬಂದಿತ್ತು. ಇಂದಿನ ಘಟನೆ ಅನೇಕ ವಿಷಯಗಳನ್ನು ಅನಾವರಣಗೊಳಿಸಿತ್ತು.

"ನಮ್ ಅಟ್ಟಿ ಜನ್ರೆಲ್ಲ ಇಂಗ್ ಒಟ್ಗೇ ಕೇಳಿದ್ ಕಂಡು ನಂಗಂತೂ ಏಟೊಂದ್ ಸಂತೋಷ ಆತು ಗೊತ್ತ?" ಎಂದಳು. ಶಬರಿ.

ಸೂರ್ಯ ನಸುನಕ್ಕ.

"ನೀವು ಈ ಜನ್ರ್ ಇಂದೆ ಮುಂದೆ ಯಾಕ್ ಸುತ್ತಾಡ್ತಿದ್ರಿ ಅಂಬ್ತ ಇವತ್ತು

ಗೊತ್ತಾತು"– ಮತ್ತೆ ಹೇಳಿದಳು ಶಬರಿ.

"ಹೌದು ಶಬರಿ; ಯಾವ ಜನ್ರು ಜಾಗೃತರಾಗ್ಬೇಕೊ ಅವ್ರಲ್ಲೇ ಆಸಕ್ತಿ ಮೂಡುಸ್ಬೇಕು. ಅವ್ರೇ ಮಾತಾಡೊ ಹಾಗೆ ಮಾಡ್ಬೇಕು. ಹಾಗೆ ಆಗ್ಬೇಕು ಅನ್ನೋದಾದ್ರೆ ಮೊದ್ಲು ಅವ್ರಿಗೆ ನಮ್ ಮೇಲೆ ನಂಬಿಕೆ ಬರ್ಬೇಕು. ಅದುಕ್ಕಾಗಿ ನಾವು ಅವ್ರಲ್ಲಿ ಅವ್ರೇ ಆಗಿ ಬೆರೀಬೇಕು; ವಿಶ್ವಾಸ ಗಳುಸ್ಬೇಕು. ನಾನ್ ಮಾಡಿದ್ದು ಇದೇ ಕೆಲ್ಸ. ಅವರ ಜೊತೆ ನೇಗಿಲು ಹೊಡ್ದೆ; ಸೌದೆ ತಂದೆ; ಕಳೆ ಕಿತ್ತೆ, ತಂಗಳು ತಿಂದೆ. ಅವ್ರಲ್ ಒಬ್ಬ ಆದೆ. ಹಾಗೇ ವಿಚಾರ ತಿಳುಸ್ತಾಬಂದೆ. ಅವರಿಗೇ ಅರ್ಥ ಆಯ್ತು. ಧೈರ್ಯ ಬಂತು. ಪೂಜಾರಪ್ಪನ ಎದುರಿಗೆ ಮಾತು ಬಂತು. ಮುಂದೊಂದು ದಿನ ಒಡೆಯರ ಎದುರಿಗೂ ಮಾತು ಬರುತ್ತೆ."

–ಸೂರ್ಯ ಮೊದಲ ಹಂತದ ಯಶಸ್ಸಿನಲ್ಲಿ ಆಡಿದ ಮಾತು ಶಬರಿಯ ಮನಸ್ಸನ್ನು ಅಲುಗಾಡಿಸಿತು.

ಬತ್ತಿದ ಕೆರೆಗೆ ನೀರು ನುಗ್ಗಿ ಬಂದ ಅನುಭವ.

ಕಣ್ಣಲ್ಲಿ ಹೆಮ್ಮೆಯ ಹನಿ.

## ೬

ಪೂಜಾರಪ್ಪನಿಗೆ ತನ್ನ ಬುಡಕಟ್ಟಿನ ಜನರ ಮಾತಿನಿಂದ ಆನಂದವೇನೂ ಆಗಿರಲಿಲ್ಲ. ಆದರೆ ಅವರ ಅಪೇಕ್ಷೆಯನ್ನು ಅಲ್ಲಗಳೆಯುವಂತೆಯೂ ಇರಲಿಲ್ಲ. ಇಷ್ಟಕ್ಕೂ ಅವರು ಕೆಟ್ಟದನ್ನು ಕೇಳಿದ್ದರೆ ಬಿಲ್‌ಕುಲ್ ಆಗಲ್ಲ ಅನ್ನಬಹುದಿತ್ತು. ಈಗ ಹಾಗಿಲ್ಲ. ಹಾಗಂತ ತನ್ನ ಜನರನ್ನ ಅವರು ಹೋದತ್ತಲೇ ಬಿಡೋದೂ ಸರಿಯಲ್ಲ; ಸಮಯ ಸಂದರ್ಭಕ್ಕನುಗುಣವಾಗಿ ನಡಕೊಳ್ಳಾನೇ ನಿಯಂತ್ರಣ ಇಟ್ಟುಕೋಬೇಕು–ಹೀಗೆ ಯೋಚಿಸಿದ ಪೂಜಾರಪ್ಪ.

ನರಸಿಂಹರಾಯಪ್ಪ ಮತ್ತು ರಾಮಜೋಯಿಸರ ಬಳಿಗೆ ಬಂದು ಪೂಜಾರಪ್ಪ ಸಾದ್ಯಂತ ವಿವರಿಸಿದ. ಸೂರ್ಯ, ಚಂದ್ರನ ಸ್ನೇಹಿತ ಎಂದು ತಿಳಿದ ಮೇಲೆ ಇವರಿಬ್ಬರ ಹುಬ್ಬೇರಿತು. ಈತ ಇನ್ನೇನಾದ್ರೂ ಮಾಡೋಕೆ ಬಂದಿರಬಹುದೆ ಅಂತ ಚಿಂತಿಸಿದರು. ಹಾಗಂತ ಅಕ್ಷರ ಕಲಿಕೆಗೆ ಅವಕಾಶ ಕೊಡದೆ ಇರೋದೂ ಸರಿಯಲ್ಲ ಅಂತ ಜೋಯಿಸರು ಅಭಿಪ್ರಾಯಪಟ್ಟರು. ಸರ್ಕಾರವೇ ಇಂಥ ವಿಷಯಗಳಲ್ಲಿ ಯೋಜನೆ ರೂಪಿಸಿರೋವಾಗ ಅಡ್ಡಿ ಬರೋದು ಸಮಂಜಸವಾಗದು; ಅದಕ್ಕೆ ಬೇರೆ ಅರ್ಥವೇ ಬಂದೀತು–ಅನ್ನೋದು ಅವರ ವಾದ. ಆದರೆ ನರಸಿಂಹರಾಯಪ್ಪ– ಸರ್ಕಾರದ ಸಹಾಯದಿಂದ ಸೂರ್ಯ ಸಾಕ್ಷರತೆ ಕೆಲಸ ಮಾಡ್ತಾ ಇಲ್ಲವಾದ್ದರಿಂದ ಅನುಮಾನ–ಎಂದು ತಮ್ಮದೇ ಧಾಟಿಯಲ್ಲಿ ಹೇಳಿದರು. ಇವರು ಅಳೆದು ಸುರಿದು ಚಿಂತೆಯಲ್ಲೇ ಜಂತೆ ಎಣಿಸುತ್ತಿರುವಾಗ, ಒಳಗಿಂದ ಕಾಫಿ ತಂದ ನರಸಿಂಹರಾಯಪ್ಪನ ಹೆಂಡತಿ ಸಾವಿತ್ರಮ್ಮ ಒಂದು ಮಾತು ಹೇಳಿದಳು–

"ಯೇ ಇದ್ಯಾತ್ರುದು ಇದು? ಅವಾಗ್ನಿಂದ ವಾಡೆ ಬುಡ್ಡನಾಗಿರಾ ರಾಗೀನ ಪಾವು, ಚಟಾಕ್ನಾಗ್ ಅಳೆದಂಗೆ ಒಂದೇ ಸಮ ಸಿಂತೆ ಮಾಡ್ತಾ ಕುಂತಿವ್ರಿ. ನೀವೀಕಡೆ ನಮ್ಮಂತ ಯಣ್ ಮಕ್ಕಳಿಗೂ ನಮ್ಮಂಗಿರಾಕ್ ಬಿಡಲ್ಲ, ಆ ಕಡೆ ಅವ್ರ್ ಪಾಡಿಗ್ ಅವ್ರ್‌ನ ಬಿಡಲ್ಲ. ಅವ್ರಿಗ್ಯಾವನೊ ಬಂದ್ ಇದ್ದೆ ಬುದ್ದಿ ಕಲ್ಸಿದ್ರೆ ನಿಮ್ದೇನೋದಾತು ಓಬೀರಾಯನ ಗಂಟು. ಸುಮ್ಕೆ ಹ್ಞೂ ಅನ್ರಿ."

ನರಸಿಂಹರಾಯಪ್ಪ ಕ್ಷಣಕಾಲ ಸ್ತಂಭಿತರಾದರು. ತನ್ನ ಹೆಂಡತಿಯೇ ಹೀಗೆ ಮಾತಾಡಿದ್ದು? ಕೇಳಿಯೇ ಬಿಟ್ಟರು– "ಏನೇ ನೀನೇ ಇಂಗ್ ಮಾತಾಡ್ತೀಯ?"

"ಮಾತಾಡ್ದೆ ಇನ್ನೇನು? ದೊಡ್ಡೋರ್ ಮನೆ ಯೆಣ್ ಮಕ್ಕಳಿಗೇ ಸತ್ತೇವ್ ಚಂದಾಗ್ ಗೊತ್ತಿರಾದು."

ಕ್ಷಣಕಾಲ ಮೌನ. ಕಡೆಗೆ ಜೋಯಿಸರು ಗಾಢ ಚಿಂತನೆಯಿಂದ ಮಾತನ್ನು ಹೊರತೆಗೆದವರಂತೆ ಹೇಳಿದರು–"ಸಾವಿತ್ರಮ್ಮ ಯೇಳಾದ್ರಲ್ಲೂ ಸತ್ಯ ಇದೆ ಒಡೆಯರೆ. ಸುಮ್ನೆ ಎಲ್ಲಾದ್ಕು ವಿರೋಧ ಮಾಡ್ತಾ ಇದ್ರೆ ನಮಗೇ ಮುಳುವಾಗ್‌ಬಹುದು."

"ಇದೇನ್ ಜೋಯಿಸ್ರೆ, ನಾನ್ ಜೋರಾಗೇಳಿದ್ರೆ ನಂದ್ರಾಗು ಸತ್ತೇವೈತೆ ಅಂಬ್ತೀರ, ಸಾವಿತ್ರಿ ಜೋರಾಗೇಳಿದ್ರೆ ಅದ್ರಾಗೂ ಸತ್ತೇವೈತೆ ಅಂಬ್ತೀರ! ನಿಜವಾಗ್ಲು ಎಲ್ಲೈತೆ ಸತ್ತೇವು?"– ನರಸಿಂಹರಾಯಪ್ಪ ಬೇಸರದ ಧಾಟಿಯಲ್ಲಿ ಕೇಳಿದ.

"ಈ ಬಡ್ಡಿಮಗಂದು ಸತ್ಯ ಅನ್ನೋದೇ ಹೀಗೆ ಒಡೆಯರೆ. ಕಂಡ್ರೂ ಕಾಣ್ದಂತೆ ಇರುತ್ತೆ. ಸಿಕ್ಕಿದ್ರೂ ಸಿಕ್ಕದಂತೆ ಇರುತ್ತೆ. ಇಲ್ಲೂ ಇರುತ್ತೆ. ಅಲ್ಲೂ ಇರುತ್ತೆ."

"ಇಲ್ಲೂ ಅಲ್ಲೂ ಎಲ್ಲಾ ಕಡೀಕೂ ಇದ್ರೆ ಅದ್ಯಾವ್ ಸೀಮೆ ಸತ್ತೇವೊ ನಂಗಂತೂ ಗೊತ್ತಾಗಕಿಲ್ಲ. ಒಟ್ನಲ್ಲಿ ಅವ್ನು ರಾತ್ರಿಸಾಲೆ ನಡಿಸ್ಕಂಬ್ಲಿ ಬಿಡ್ರಿ ಮತ್ತೆ" ಎಂದ ನರಸಿಂಹರಾಯಪ್ಪ ಪೂಜಾರಪ್ಪನನ್ನು ಕುರಿತು– "ಆ ಮನ್ಸನ್ನ ಒಂದ್ ಕಿತ ಕರ್ಕಂಡ್ ಬಾರ್ಲ ನಮ್ತಾವ. ಅವ್ನ್‌ತಾವ್ ಮಾತಾಡಿ ಒಪ್ಗೆ ಕೊಡಾವ" ಎಂದರು

ಆಗ ರಾಮಾಜೋಯಿಸರು "ನೀನೇ ಒಪ್ಪಿಗೆ ಕೊಟ್‌ಬಿಟ್ಟೀಯ. ಸುಮ್ಕೆ ಇಲ್ಲಿಗ್ ಕರ್ಕಂಡ್ ಬಾ, ಅಲ್ಲೀತನಕ ವಿಷ್ಯ ಮಗುಮ್ಮಾಗೇ ಇರ್ಲಿ" ಎಂದು ಸೂಚಿಸಿದರು.

ನರಸಿಂಹರಾಯಪ್ಪ ಜೋಯಿಸರ ಮಾತಿಗೆ ಮೆಚ್ಚುಗೆ ಸೂಚಿಸಿದರು.

ಪೂಜಾರಪ್ಪ, ಸೂರ್ಯನ ಬಳಿ ಬಂದು–ತಾನು ಅವರ ಮನಸ್ಸನ್ನು ಸಿದ್ಧಪಡಿಸಿರುವುದಾಗಿಯೂ ಭೇಟಿಯೊಂದೇ ಬಾಕಿ–ಎಂದೂ ಹೇಳಿದ. ಸೂರ್ಯನಿಗೆ ಅವರ ಬಳಿ ಹೋಗಿ ಕೇಳಿಕೊಂಡು ಬುಡಕಟ್ಟಿನ ಬದಲಾವಣೆಗೆ ಪ್ರಯತ್ನಿಸುವುದು ಇರಿಸು ಮುರಿಸಿನ ವಿಷಯವಾಗಿತ್ತು. ಆದರೆ ಇದು ವೀರಾವೇಶದ ವಿಷಯವಲ್ಲವೆಂದೂ ಆತನಿಗೆ ತಿಳಿದಿತ್ತು. ಮೊದಲು ಇಲ್ಲಿ ನೆಲೆಕಂಡುಕೊಳ್ಳಬೇಕು; ಅದಕ್ಕಾಗಿ ಒಂದೆರಡು ಹೆಜ್ಜೆ ಹಿಂದಿಟ್ಟಂತೆ ಮಾಡಿ ಹತ್ತಾರು ಹೆಜ್ಜೆ ಮುನ್ನಡೆಯಬೇಕು– ಎಂದು ಚಿಂತಿಸಿದ ಸೂರ್ಯ ಒಡೆಯರ ಬಳಿಗೆ ಬರುವುದಾಗಿ ಹೇಳಿದ.

ಮಾರನೆ ದಿನವೇ ಪೂಜಾರಪ್ಪ, ಹುಚ್ಚೀರ, ಸಣ್ಣೀರ, ತಿಮ್ಮರಾಯಿ ಜೊತೆ ಸೂರ್ಯ ಊರೊಳಗೆ ಬಂದ.

ಈ ಊರು ತುಂಬಾ ಮುಂದುವರೆದ ಊರೇನು ಅಲ್ಲ. ಸಣ್ಣ ಪುಟ್ಟ ಓಣಿಗಳು. ಮಣ್ಣಿನ ಮನೆಗಳು. ಎತ್ತು ಹೊಡೆದುಕೊಂಡು ಹೊಲದ ಕಡೆ ಹೊರಟ ರೈತರು; ಬುತ್ತಿ ಕಟ್ಟಿಕೊಂಡು ಕೂಲಿಗೆ ಹೊರಟ ಜನರು. ಇದೊಂದು ಬಡವರ ತಾಣವೇ ಆಗಿತ್ತು. ಆದರೆ ಬುಡಕಟ್ಟಿನ ಜನರಿಗೆ ಹೋಲಿಸಿದರೆ ವಾಸಿ. ಒಂದು ಏಕೋಪಾಧ್ಯಾಯ ಪ್ರಾಥಮಿಕ ಶಾಲೆ ಬೇರೆ ಇದೆ. ಐದಾರು ದೊಡ್ಡ ಮನೆಗಳಿವೆ. ಅದರಲ್ಲಿ ಭೂ ಒಡೆಯರ ವಾಸ. ಕೆಲವು ಮಧ್ಯಮ ದರ್ಜೆಯ ಮನೆಗಳೂ ಇವೆ. ಊರಂಚಿನಲ್ಲಿ ಗುಡಿಸಲುಗಳೂ ಇವೆ. ಮಿಶ್ರ ಸ್ವರೂಪದ ಊರು. ಸೂರ್ಯ, ಎಲ್ಲವನ್ನೂ ಗಮನಿಸುತ್ತ ಬಂದ.

ಪೂಜಾರಪ್ಪ "ಅಗಾ ನೋಡಪ್ಪ ಅಲ್ಲೈತೆ ಒಡೇರ್ ಮನೆ" ಎಂದಾಗ ಆ ಕಡೆ ನೋಡಿದ. ದೊಡ್ಡಮನೆ; ದೊಡ್ಡ ಹಜಾರದಲ್ಲಿ ಎದ್ದು ಕಾಣೋ ಕಂಬಗಳು. ಅಲ್ಲಿ ನರಸಿಂಹರಾಯಪ್ಪ ಮತ್ತು ಜೋಯಿಸರು ಇದ್ದಾರೆ. ಜೊತೆಗೆ ಇಬ್ಬರು ಪೋಲಿಸರು, ಒಬ್ಬ ಸಬ್‌ಇನ್ಸ್‌ಪೆಕ್ಟರ್ ಕಾಣಿಸಿದರು.

ಸೂರ್ಯ ಥಟ್ಟನೆ ನಿಂತ.

ಪೂಜಾರಪ್ಪ "ಯಾಕಪ್ಪ ಅಂಗ್ ನಿಂತ್ಕಂಡೆ?" ಎಂದು ಕೇಳಿದ.

"ನಾನು ರೀಸಸ್‌ಗೆ ಹೋಗ್ಬೇಕಲ್ಲ?"–ಸೂರ್ಯ ಏನೋ ಒಂದು ಕಾರಣ ಹೇಳಿದ.

"ಅಂಗಂದ್ರೆ?"–ಪೂಜಾರಪ್ಪನಿಗೆ ಅರ್ಥವಾಗದೆ ಕೇಳಿದ.

ಆಗ ಸೂರ್ಯ ತೋರು ಬೆರಳೊಂದನ್ನು ತೋರಿಸಿ "ವಂದ. ವಂದ ಮಾಡ್‌ಬೇಕಪ್ಪ" ಎಂದ.

"ಓ ಉಚ್ಚೆ ವೊಯ್ಬೇಕಾ? ಎಂದು ರಾಗ ಎಳೆದ ಪೂಜಾರಪ್ಪ "ನಮ್ ಒಡೇರ್ ಮನೇತಾವ್ ಬಂದ್ ಕಿತಾನೆ ನಿಂಗೆ ಉಚ್ಚೆ ಕಿತ್ಕಂಡ್ ಬಂತು ನೋಡು" ಎಂದು ನಕ್ಕ.

ಸೂರ್ಯನಿಗೆ ಮುಜುಗರ; ಮಾತಾಡಲಿಲ್ಲ.

"ಉಚ್ಚೆ ವೊಯ್ಯಾಕ್ ಯಾಕ್ ಸಿಂತೆ ಮಾಡ್ತೀಯ. ಇಲ್ಲೇ ಯಾವ್ದಾನ ಮೋಟ್‌ಗೋಡೆ ತಾವ್ ವೊಡ್ಯಪ್ಪ ಯಾರ್ ನೋಡ್ತಾರೆ" ಎಂದ ಪೂಜಾರಪ್ಪ.

"ಈಗ ಬಂದೆ" ಎಂದು ಸೂರ್ಯ ಅಲ್ಲೇ ಸ್ವಲ್ಪ ದೂರ ಹೋದ. ಪೋಲಿಸ್ ಜೀಪು ಹೋದ ನಂತರ ಬಂದ. "ನಡೀರಿ ಹೋಗೋಣ" ಎಂದ.

ಸೂರ್ಯನನ್ನು ನರಸಿಂಹರಾಯಪ್ಪ ಮತ್ತು ಜೋಯಿಸರು ಆದರದಿಂದಲೇ ಮಾತಾಡಿಸಿದರು. ಯಾರು, ಏನು, ಎತ್ತ–ಎಂದೆಲ್ಲ ವಿಚಾರಿಸಿಕೊಂಡರು, ಸೂರ್ಯ

ಅವರು ನಂಬುವಂತಹ ಮಾಹಿತಿ ನೀಡಿ ಜನಸೇವೆಗಾಗಿ ತಾನು ಮುಡಿಪು ಎಂದು ಸ್ಪಷ್ಟಪಡಿಸಿದ. "ಮಾಡಪ್ಪ ಮಾಡು. ಇವಾಗ್ ನಾವೂ ಸೇವೆ ಮಾಡ್ತಿಲ್ವ? ಅಂಗೇ ನೀನೂ ಮಾಡು. ಆದ್ರೆ ಏನೂ ತರ್ಲೆ ತಕರಾರು ಆಗ್‌ಬಾರ್ದು ನೋಡು ಮತ್ತೆ" ಎಂದು ಹೇಳಿದ ನರಸಿಂಹರಾಯಪ್ಪ ತನ್ನ ವಂಶದ ಪ್ರತಿಷ್ಠೆ ಕುರಿತು ಮಾತನಾಡಿದ. ತನ್ನ ಅಪ್ಪಣೆ ಇಲ್ಲದೆ ಒಂದು ಹುಲ್ಲುಕಡ್ಡೀನೂ ಅಲುಗಾಡೊಲ್ಲ; ಅದಕ್ಕೆ ಪೋಲಿಸ್ ಗೀಲಿಸ್ ಎಲ್ಲಾ ತನ್ನ ಸುತ್ತ ತಿರುಗ್ತಾ ಇರ್ತಾರೆ– ಎಂದೆಲ್ಲ ಹೇಳಿದ. ಕಡೆಗೆ "ಒಸಿ ಉಸಾರಾಗಿರಪ್ಪ" ಎಂದು ಎಚ್ಚರಿಸಲು ಮರೆಯಲಿಲ್ಲ.

ಅಷ್ಟರಲ್ಲಿ ಸಾವಿತ್ರಮ್ಮ ಕಾಫಿ ತಂದರು. "ವೋಸದಾಗ್ ಬಂದಿರಾರ್ಗೆ ಯಾಕಂಗ್ ಬೈರಿಗೆ ಇಡೀತೀರ?" ಎಂದು ಛೇಡಿಸಿದಳು. ನರಸಿಂಹರಾಯಪ್ಪ "ನನ್ ಯೆಂಡ್ರು, ಇವ್ಳ್ ಯಾವಾಗ್ಲೂ ಇಂಗೇನೇ ಮಾತಾಡಾದು" ಎಂದು ಸೂರ್ಯನಿಗೆ ಪರಿಚಯಿಸಿದ. ಸೂರ್ಯ "ನಮಸ್ಕಾರನಮ್ಮ" ಎಂದು ಕೈಮುಗಿದ. ಸಾವಿತ್ರಮ್ಮ "ನಮ್ಗೆಲ್ಲ ಯಾಕಪ್ಪ ಕೈ ಮುಗೀತೀಯ. ಬೂಮ್ ತಾಯೀಗ್ ಮುಗುದ್ರೆ ಸಾಕಪ್ಪ. ಬೂಮ್‌ತಾಯಿ ಇಲ್ದೆ ನಾವ್ ಬದ್ಕಕಾಯ್ತದ ಯೇಳು ಮತ್ತೆ? ಏನೋ ಒಳ್ಳೆ ಕೆಲ್ಸ ಮಾಡಾಕ್ ಬಂದಿದ್ದೀಯ. ಆ ಬೂಮ್‌ತಾಯಿ ನಿಂಗೊಳ್ಳೇದ್ ಮಾಡ್ಲಪ್ಪ" ಎಂದಳು.

ಸೂರ್ಯನಿಗೆ ಆಕೆ ಇವರೆಲ್ಲರಿಗಿಂತ ಎತ್ತರವಾಗಿ ಕಾಣಿಸಿದಳು.

"ಒಳ್ಳೆ ಕೆಲ್ಸಕ್ಕೆ ನಿಮ್ಮಂಥ ಒಳ್ಳೇರ್ ಬೆಂಬಲ ಬೇಕು ತಾಯಿ" ಎಂದು ಕೇಳಿದ.

"ಎಂಥಾ ಮಾತಾಡ್ದೆ ಮಗ! ಒಳ್ಳೆ ಕೆಲ್ಸಕ್ ನಾವಾಗ್ದೇ ಇದ್ರೆ ಬಾಳ್ಳೇವ್ ಮಾಡೇನ್ ಬಂತು, ಯೇಳು ಮತ್ತೆ?" ಎಂದು ಸಾವಿತ್ರಮ್ಮ ಹೇಳಿದಾಗ ನರಸಿಂಹರಾಯಪ್ಪ "ವೋಗೋಗು ಒಳಗ್ ಕೆಲ್ಸ ನೋಡ್ಕ" ಎಂದು ಸ್ವಲ್ಪ ಗಡಸು ದನಿಯಲ್ಲಿ ಹೇಳಿದ. ಸಾವಿತ್ರಮ್ಮ "ಒಸಿ ಇಲ್ ನಿಂತಿದ್ರೆ ಒಳ್ಗೇನು ಅಡುಗೆ ಮನೆ ಅಳ್ತಾ ಕುಂತ್ಕಮಲ್ಲ" ಎಂದು ಗೊಣಗುತ್ತ ಒಳಹೋದಳು.

ರಾಮಾಜೋಯಿಸರು ಸುಮ್ಮನೆ ಕೂತಿರಲಿಲ್ಲ. ಸೂರ್ಯ ಈ ಊರಿನ ಬಳಿಯೇ ಬಂದದ್ದು ಯಾಕೆ; ಇಂತಹ ಕೆಲಸ ಎಷ್ಟು ದಿನದಿಂದ ಮಾಡ್ತಿದಾನೆ; ಏನು ಓದಿದಾನೆ– ಇತ್ಯಾದಿ ತನಿಖಾ ರೂಪದ ಪ್ರಶ್ನೆಗಳನ್ನು ಕೇಳಿದರು. ಸೂರ್ಯನಿಗೆ ಸಿಟ್ಟು ಬಂದರೂ ತೋರಗೊಡದೆ ಮಾತಾಡಿದ. ಕಡೆಗೆ ಜೋಯಿಸರು ಒಂದು ಮಾತು ಹೇಳಿದರು. "ಇಷ್ಟೆಲ್ಲ ಕೇಳ್ದೆ ಅಂತ ಬೇಸರ ಪಟ್ಕೋಬೇಡಪ್ಪ. ಇದೇತಾನೆ ಪೋಲಿಸ್ ಇನ್ಸ್‌ಪೆಕ್ಟರು ಬಂದಿದ್ರು. ಯುವಕ್ರು

ಬುಡಮೇಲು ಕೃತ್ಯಗಳಲ್ಲಿ ತೊಡಗ್ತಿರೊ ಬಗ್ಗೆ ಹೇಳ್ತಾ ಇದ್ರು. ಅದಕ್ಕೆ ಕೇಳ್ದೆ ಈಗ ನಿನ್ನಂಥ ಯುವಕ್ರು ಅಪರೂಪ ಅನ್ನುಸ್ತಾ ಇದೆ."

ಅಪರೂಪಾನೊ ನಿಜರೂಪಾನೊ ಬೇಗ ಮಾತು ಮುಗಿಸಿದರೆ ಸಾಕು–ಎಂದು ಒಳಗೆ ಅಂದುಕೊಂಡ ಸೂರ್ಯ "ನಾನಿನ್ ಬರ್ತೀನಿ" ಎಂದು ಎದ್ದು ನಿಂತ. ನರಸಿಂಹರಾಯಪ್ಪ "ಆಯ್ತು ವೋಗ್‌ಬಾ; ಉಸಾರು" ಎಂದ.

ದಾರಿಯಲ್ಲಿ ಬರುವಾಗ ಪೂಜಾರಪ್ಪ "ನಾನ್ ಯೇಳ್ತಾ ಇರ್ಲಿಲ್ವ; ಇವ್ರು ಬಲೇ ಕೊಚ್ಚನ್ ಮಾಡ್ತಾರೆ ಅಂಬ್ತ" ಎಂದು ಹೆಮ್ಮೆಯಿಂದ ನುಡಿದಾಗ ಸೂರ್ಯ "ಬರೀ ಅವರು ಕೊಶ್ಚನ್ ಮಾಡಿದ್ರೆ ಸಾಲ್ದು. ಬಡವರು, ಬುಡಕಟ್ನೋರು ಅವರ್‍ನ ಕೊಶ್ಚನ್ ಮಾಡ್‌ಬೇಕು" ಎಂದು ದೃಢವಾಗಿ ಹೇಳಿದ.

ಪೂಜಾರಪ್ಪ "ಯೇ ಅದೆಲ್ಲಾನ ಉಂಟಾ? ಅದಾಗಕಿಲ್ಲ ವೋಗಾಕಿಲ್ಲ ಬಿಡು" ಎಂದು ನಕ್ಕ.

ಸೂರ್ಯ ಪ್ರತಿಕ್ರಿಯಿಸಲಿಲ್ಲ. ಅಂತಹ ದಿನಗಳಿಗಾಗಿ ಕಾಯಬೇಕು; ಅದಕ್ಕಾಗಿ ಜನರು ಸಜ್ಜಾಗಬೇಕು–ಎಂದು ತನ್ನೊಳಗೆ ತಾನು ಚಿಂತನೆ ನಡೆಸಿದ.

ಇದು ಹೊರಗಿನ ಮಾತಲ್ಲ. ಒಳಗಿನ ಮಾತು.

ಹೊರಗಿನ ಮಾತು ಮಳೆಗಾಳಿಗಳಿಗೆ ಸಿಗುತ್ತದೆ. ಒಮ್ಮೊಮ್ಮೆ ತತ್ತರಿಸುತ್ತದೆ.

ಒಳಗಿನ ಮಾತು ಮೌನದಲ್ಲೇ ಗಟ್ಟಿಯಾಗುತ್ತದೆ. ಕಾಲ ಬಂದಾಗ ಉತ್ತರಿಸುತ್ತದೆ.

ಸೂರ್ಯನಿಂದ ವಿವರಗಳನ್ನು ಕೇಳಿದ ಶಬರಿ ಸಂಭ್ರಮಗೊಂಡಳು.

ಹಾಗೆ ನೋಡಿದರೆ, ಹುಚ್ಚೀರ ಮತ್ತು ಸಣ್ಣೀರ ಮತ್ತಷ್ಟು ಸಂಭ್ರಮದಲ್ಲಿದ್ದರು. ಸಣ್ಣೀರನಿಗೆ ಸೂರ್ಯ ಹೇಳಿದ– "ನೀನು ಪೂಜಾರಪ್ಪನ ಜತೆ ನೇರವಾಗಿ ಮಾತಾಡಿದ್ದು ಎಷ್ಟು ಒಳ್ಳೇದಾಯ್ತು ನೋಡು."

ಅದಕ್ಕೆ ಸಣ್ಣೀರ ಹೇಳಿದ–"ನೀನು ವಿಸ್ಯ ಯೇಳ್ತಾ ಯೇಳ್ತಾ ನಮ್ಗೇ ನಿಜ ಅನ್ನಾಕ್ ಸುರುವಾಯ್ತು. ಅದ್ಕೇ ಮಾತಾಡ್ದೆ"

"ಹೌದು; ನಾವು ಯಾವಾಗ್ಲೂ ನಿಜಕ್ಕೆ ನಾಲಗೆಯಾಗ್ಬೇಕು" ಎಂದು ಸೂರ್ಯ ನಿರ್ಧಾರಕವಾಗಿ ನುಡಿದ.

ಅಷ್ಟು ಹೊತ್ತು ಸುಮ್ಮನೆ ಇದ್ದ ತಿಮ್ಮರಾಯಿ "ನಾವು ನಾಲ್ಗೆ ನಂಬಾ ಜನ ಅಂಬ್ತ ಯೇಳ್ತಾನೆ ಬಂದಿವ್ನಿ. ನಿಂಗೊತ್ತೇನಪ್ಪ" ಎಂದ.

ಸೂರ್ಯ ನಗುತ್ತಾ "ಬಡವರೆಲ್ಲ ನಾಲ್ಗೆ ನಂಬೊ ಜನ. ಉಳಿದೋರೆಲ್ಲ ನಾಲ್ಗೆನುಂಗೊ ಜನ. ಅದುಕ್ಕೆ ನಮ್ ನಾಲ್ಗೆನಮ್ ಹತ್ರಾನೇ ಇರ್ಬೇಕು. ನಿಜಾನೇ

ನುಡೀತಾ ಇರ್ಬೇಕು" ಎಂದು ಸ್ಪಷ್ಟಪಡಿಸಿದ.

ಅದೂ ಇದೂ ಲೋಕಾಭಿರಾಮದ ಮಾತನಾಡಿದ ಮೇಲೆ ಸೂರ್ಯ "ಈಗ ರಾತ್ರಿ ಶಾಲೇಗೆ ಒಂದು ಗುಡಿಸಲು ಕಟ್ಬೇಕು. ಅದಕ್ಕೆ ಯಾವ ಜಾಗ ಅಂತ ಎಲ್ರೂ ಹೇಳ್ಬೇಕು" ಎಂದು ಕೇಳಿದ.

ಸಣ್ಣೀರ "ಯೇ ಕೋಳಿ ಕೇಳಿ ಕಾರ ಅರ್‍ಯಾಕಾಯ್ತದ? ನೀನೇ ಒಂದು ಜಾಗ ಯೇಳಿದ್ರೆ ವೊತ್ತು ಮುಳ್ಗಾದ್ರಾಗೆ ವೊದಿಕೆ ಆಕ್‌ಬಿಡ್ತೀವಿ" ಎಂದ. ಹುಚ್ಚೀರ ಹೌದೆಂದು ತಲೆಯಾಡಿಸಿದ.

ಆಗ ಸೂರ್ಯ ಹೇಳಿದ. "ತಪ್ಪು, ನಮಿಗ್ ನಾವೇ ತೀರ್ಮಾನ ತಗಳ್ಳೋ ಬದ್ಲು, ನೀವ್ ನಾಲ್ಕುಜನ ಕೂತು ತೀರ್ಮಾನ ಮಾಡಿ. ಎಲ್ಲಾ ಸೇರ್‍ಕೊಂಡು ಒಂದ್ ನಿರ್ಧಾರ ತಗೋಬೇಕು. ಯಾಕೇಂದ್ರೆ ಎಲ್ರೂ ಸೇರೇ ಗುಡಿಸ್ಲು ಕಟ್‌ಬೇಕು. ಅಲ್ವಾ?"

"ನೀನಂಗಂದ್ ಮ್ಯಾಗೆ ಅಂಗೇ ಆಗ್ಲಿ ಬಿಡು" ಎಂದು ಸಣ್ಣೀರ ಹೇಳುವಾಗ ಆತನಲ್ಲಿ ಹೊಸ ಹುರುಪು ಇತ್ತು. ತನ್ನಂಥವರ ಮಾತಿಗೆ ಮಹತ್ವ ಇದೆ ಎಂಬ ಭಾವನೆ ಅದೇ ತಾನೆ ಹುಟ್ಟತೊಡಗಿತ್ತು.

ಸೂರ್ಯನ ಅಪೇಕ್ಷೆಯಂತೆ ರಾತ್ರಿ ಎಲ್ಲರೂ ಸೇರಿ ಮಾತಾಡಿದರು. ಸ್ವಲ್ಪ ಹತ್ತಿರದ ಜಾಗವೊಂದನ್ನು ಗುರುತಿಸಿದರು. ಸೂರ್ಯ ಕಡೇವರೆಗೂ ಎಲ್ಲರ ಮಾತನ್ನೂ ಕೇಳಿದ. ಅವರಲ್ಲೇ ಒಮ್ಮತ ಮೂಡುವಂತೆ ಮಾಡಿದ. ಹಾಗೆ ನೋಡಿದರೆ ಇದೇನು ಅಗಾಧ ಚರ್ಚೆಯ ವಿಷಯವಲ್ಲ. ಅದ್ರೆ ಅವರವರ ಭಾವನೆಗಳನ್ನು ಹೇಳತೊಡಗಲಿ ಅನ್ನೊ ಉದ್ದೇಶವಿತ್ತು. ಹೆಣ್ಣುಮಕ್ಕಳು "ಈ ಹಟ್ಟಿಗೆ ಹತ್ತಿರವಾಗಿರ್‍ಲಿ. ಒಳ್ಳೆ ಜಾಗಾನೂ ಆಗಿರ್‍ಲಿ" ಎಂದು ಅಭಿಪ್ರಾಯಪಟ್ಟಾಗ ಅದಕ್ಕೇ ಮನ್ನಣೆ ಸಿಕ್ಕಿತು.

ಮಾರನೇ ದಿನವೇ ರಾತ್ರಿಶಾಲೆಯನ್ನು ಕಟ್ಟುವ ಕೆಲಸ ಶುರುವಾಯಿತು. ಬುಡಕಟ್ಟಿನವರೆಲ್ಲ ಒಟ್ಟಾಗಿ ಬಂದರು. ತಂತಮ್ಮಲ್ಲಿ ಇದ್ದ ಸಾಮಗ್ರಿ ತಂದರು. ಶಬರಿ ಹೆಣ್ಣು ಮಕ್ಕಳನ್ನು ಹುರಿದುಂಬಿಸಿ ಕರೆತಂದಿದ್ದಳು. ಸೂರ್ಯ ಇವರೊಳಗೊಬ್ಬನಾಗಿ ಕೆಲಸಕ್ಕೆ ನಿಂತ.

ಹುಚ್ಚೀರ ಸೂರ್ಯನ ಕೈ ಹಿಡಿದು ಎಳೆದೊಯ್ದು ಕೂಡಿಸಿ ಕೆಲಸ ಮಾಡದೆ ಕೂತಿರಲು ತಿಳಿಸಿದ. ಸಣ್ಣೀರನೂ ಒತ್ತಾಯಿಸಿದ. ಆದರೆ ಸೂರ್ಯ ಕೇಳಲಿಲ್ಲ. "ನಾನೂ ನಿಮ್ಮವನೇ. ನೀವು ನನ್ನನ್ನ ದೂರ ಮಾಡ್ಬೇಡಿ" ಎಂದ. ಎಲ್ಲರಂತೆ ಗುದ್ದಲಿ, ಸಲಿಕೆ ಹಿಡಿದ; ಅಗೆದ. ಹೆಣ್ಣು ಮಕ್ಕಳಿಗೆ ಮಣ್ಣು ಹೊರೆಸಿದ.

ಸೂರ್ಯನ ಸರಳತೆಗೆ ಶಬರಿಯಾದಿಯಾಗಿ ಎಲ್ಲರ ಕಣ್ಣು ತೇವಗೊಂಡವು.

ಸಂಜೆ ಎಲ್ಲರೂ ಹಟ್ಟಿಗೆ ಮರಳಿದಾಗ ಆಯಾಸಕ್ಕಿಂತ ಆನಂದ ಹೆಚ್ಚಾಗಿತ್ತು.

"ಇವತ್ತು ಒಂದು ಕೆಲ್ಸ ಮಾಡೋಣ"– ಸೂರ್ಯ ಮಾತು ಶುರುಮಾಡಿದ– "ಯಾರ್ಯಾರ್ ಮನೇಲ್ ಏನೇನ್ ಅಡುಗೆ ಮಾಡ್ತೀರೊ ಮಾಡಿ. ಅದನ್ನೆಲ್ಲ ತಂದು ಈ ಕಟ್ಟೆ ಹತ್ರ ಎಲ್ರೂ ಕೂತ್ಕೊಂಡು ಹಂಚ್ಕೊಂಡ್ ತಿನ್ನೋಣ." ಕೆಲವರು 'ಆಗಲಿ' ಎಂದರು. ಇನ್ನು ಕೆಲವರು ಮೌನವಾಗಿದ್ದರು. ಸೂರ್ಯ, ಮೌನವಾಗಿದ್ದವರ ಬಳಿ ಬಂದು ಮೆದುವಾಗಿ ಮೆಲುದನಿಯಲ್ಲಿ ಕೇಳಿದ. "ಯಾಕ್ರವ್ವ ಸುಮ್ಕೆ ಇದ್ದೀರ, ನಿಮ್ಗಿಷ್ಟ ಇಲ್ವಾ?"

"ಒಟ್ಟಿಗೇ ಉಂಬಾಕೆ ಯಾಕಿಷ್ಟ ಇರಲ್ಲ ಸೂರ್ಯಪ್ಪ." ಅವರಲ್ಲಿ ಒಬ್ಬಾಕೆ ಹೇಳಿದಳು– "ಆದ್ರೆ ಅಡುಗೆ ಮಾಡಾಕೆ ಏನೂ ಇಲ್ಲ. ಇವತ್ತು ಕೂಲೀಗ್ ವೋಗ್ಲಿಲ್ವಲ್ಲ. ಅದ್ಕೆ ಕಾಳುಕಡಿ ಏನೂ ತಂದಿಲ್ಲ."

ಆಕೆಯ ಕಣ್ಣಲ್ಲಿ ನೀರು ಬಂತು.

ಸೂರ್ಯನ ಮನಸ್ಸು ಕಲಕಿತು. "ಅಂಗೆಲ್ಲ ಸಂಕಟ ಪಡ್ಬೇಡ ಕಣವ್ವ. ಇರೋರು ಇಲ್ದೆ ಇರೋರ್ ಜತೆ ಹಂಚ್ಕೊಂಡ್ ತಿನ್ನಬೇಕು. ನೀವೆಲ್ಲ ಸುಮ್ನೆಬನ್ನಿ. ಎಲ್ರೂ ಒಟ್ಟಿಗೆ ಊಟ ಮಾಡೋಣ" ಎಂದು ಹೇಳುವಾಗ ಆತನ ಗಂಟಲು ಗದ್ಗದಿತವಾಗಿತ್ತು. ಆಮೇಲೆ ಸಾವರಿಸಿಕೊಂಡು ಎಲ್ಲರಿಗೂ ಹೇಳಿದ– "ನೋಡಿ, ಇವತ್ತು ಕೂಲಿನಾಲಿ ಬಿಟ್ಟು ಶಾಲೆ ಕೆಲ್ಸಕ್ ಬಂದಿದ್ರಿಂದ ಕೆಲವರಿಗೆ ಅಡುಗೆ ಮಾಡೋಕ್ ಆಗ್ತಿಲ್ಲ. ಅದುಕ್ಕೆ ಯಾರೂ ಚಿಂತೆ ಮಾಡ್ಬೇಡಿ. ಇರೋದನ್ನೇ ಎಲ್ರೂ ಹಂಚ್ಕೊಂಡ್ ತಿನ್ನೋಣ."

ಎಲ್ಲವನ್ನೂ ಗಮನಿಸುತ್ತಿದ್ದ ಶಬರಿ "ನಾನು ಯೆಚ್ಗೆ ಅಡುಗೆ ಮಾಡ್ತೀನಿ. ಇವತ್ತು ನಮ್ ಅಟ್ಟೀನಾಗ್ಯಾರೂ ಉಪಾಸ ಇರಂಗಿಲ್ಲ. ಅಡುಗೆ ಮಾಡಾಕೇನೂ ಇಲ್ಲ ಅಂಬ್ತ ಅಳಾದ್ ಬ್ಯಾಡ" ಎಂದು ಹೇಳಿ ಕಣ್ಣೀರು ಒರೆಸಿಕೊಳ್ಳುತ್ತಿದ್ದ ಹೆಂಗಸರ ಬಳಿ ಹೋಗಿ "ಯೇ ಯಾಕಂಗಳ್ತೀರ, ಬರ್ರಿ ನಮ್ಮನ್ಯಾಗೆ ಒಟ್ಟಿಗೇ ಅಡುಗೆ ಮಾಡಾನ" ಎಂದು ಕೈಹಿಡಿದು ಕರೆದೊಯ್ದಳು.

ಸೂರ್ಯ ಸಾರ್ಥಕ ಭಾವದಲ್ಲಿ ನಿಂತಿದ್ದ.

ಅನೇಕರ ಮನೆಗಳ ಒಲೆಗಳು ಹತ್ತಿದವು.
ಅಡುಗೆಯಾಗುತ್ತಿರುವಂತೆಯೇ ಭಾವನೆಗಳು ಬೆಸೆದವು.
ಎಲ್ಲರೂ ಒಟ್ಟಿಗೆ ಊಟಕ್ಕೆ ಕೂತರು.

ಹಬ್ಬ, ಮದುವೆ, ಬಿಟ್ಟರೆ ಹೀಗೆ ಒಟ್ಟಿಗೆ ಕೂತು ಊಟ ಮಾಡಿದ್ದಿಲ್ಲ. ಆದರೆ ಇಂದಿನ ವಿಶೇಷವೆಂದರೆ ಹಿಟ್ಟು ರೊಟ್ಟಿಗಳ ಹಬ್ಬ!

ಶಬರಿ ಅದನ್ನೇ ಹೇಳಿದಳು– "ಇಟ್ಟುರೊಟ್ಟಿ ತಿನ್ನಾದೇ ಒಂದು ಅಬ್ಬ ಆಗೈತೆ. ಯಾವಾಗ್ಲೂ ಇಂಗೇ ಇದ್ರೆ ಏಟ್ ಚಂದ!"

ಸೂರ್ಯ ಹೇಳಿದ– "ಯಾವಾಗ್ಲೂ ಹೀಗೇ ಇರೋದ್ನ ನಾವ್ ಕಲೀಬೇಕು. ಒಬ್ಬರ ಕಷ್ಟಕ್ಕೆ ಇನ್ನೊಬ್ರು ಆಗಬೇಕು. ಒಟ್ಟಿಗೆ ಬಾಳ್ವೆ ಮಾಡ್‌ಬೇಕು. ಆಗ ಕತ್ತಲಲ್ಲೂ ಬೆಳಕು ಬರುತ್ತೆ."

ಹೊಸಭಾವದಲ್ಲಿ ಕೂತವರನ್ನು ನೋಡ ನೋಡುತ್ತ ಸೂರ್ಯ ಹಾಡೊಂದನ್ನು ಹೇಳತೊಡಗಿದ. ಹೊಸ ಬದುಕಿನ ಹೊಸಬೆಳಕನ್ನು ಬಯಸುವ ವಸ್ತುವುಳ್ಳ ಹಾಡು. ಹಾಡಿಗೆ ಎಲ್ಲರೂ ಹೆಜ್ಜೆ ಹಾಕತೊಡಗಿದರು. ಕೆಲವು ಸಾಲುಗಳನ್ನು ತಾವೇ ಹೇಳತೊಡಗಿದರು.

ಕತ್ತಲ ಬಂಡೆ ಬಿರಿದು ಬೆಳಕಿನ ಬೀದಿ.
ನಾಲಗೆಯ ಮೇಲೆ ನಿಜದ ನದಿ.

ಸೂರ್ಯನಿಗೆ ಸಂತೋಷವಾಗಿತ್ತು. ಗುಡಿಸಲಿಗೆ ಬಂದು ಮಲಗಿದ ಮೇಲೂ ಈ ಸಂತೋಷ ಕಾಡಿಸುತ್ತಿತ್ತು. ಹೀಗಾಗಿ ನಿದ್ದೆ ಬರಲಿಲ್ಲ.

ಎಲ್ಲ ಕಡೆ ಮೌನ– ಸುಳಿಗಾಳಿಯನ್ನು ಹೊರತುಪಡಿಸಿ.

ಆಗ ಸೂರ್ಯ 'ಅಯ್ಯಪ್ಪ' ಎಂದು ನರಳಿದ. ಅಂಗೈ ಪಕ್ಕದ ಗೋಡೆಗೆ ತಗುಲಿ ನೋವಾಗಿತ್ತು. ಗುದ್ದಲಿ, ಸಲಿಕೆ ಹಿಡಿದ ಕಾರಣದಿಂದ ಎದ್ದ ಬೊಬ್ಬೆಗಳು ಒಡೆದು ಗಾಯವಾಗಿದ್ದವು.

ಸೂರ್ಯನಂತೆಯೇ ನಿದ್ದೆ ಮಾಡದೆ ಮೆಲುಕು ಹಾಕುತ್ತಿದ್ದ ಶಬರಿಗೆ ಸೂರ್ಯ ಸಂಕಟಪಟ್ಟದ್ದು ಕೇಳಿಸಿತು. ಮತ್ತೆ ಆತನ ಸಣ್ಣ ನರಳುವಿಕೆಯನ್ನು ಕೇಳಿಸಿಕೊಂಡು ಎದ್ದು ಬಂದಳು, ನೋಡಿದಳು. ಸೂರ್ಯ ಅಂಗೈ ಚಾಚಿ ಕಣ್ಣು ಮುಚ್ಚಿಕೊಂಡು ಮಲಗಿದ್ದ.

ಮುಖದಲ್ಲಿ ನೋವಿನ ಛಾಯೆಯಿತ್ತು.

ಶಬರಿ, ಸೂರ್ಯನ ಸಮೀಪ ಬಂದು ಕೂತು ಅಂಗೈಯನ್ನು ನೋಡಿದಳು. ಬೊಬ್ಬೆ ಒಡೆದ ಸ್ಥಿತಿಯಿಂದ ಸಂಕಟಿತಳಾದಳು. ಮೆಲ್ಲಗೆ ಆತನ ಅಂಗೈಯನ್ನು ಸವರಿದಳು.

ಸೂರ್ಯ ಥಟ್ಟನೆ ಕಣ್ಣುಬಿಟ್ಟ. ಎದುರಿಗೆ ಶಬರಿ! ಅಚ್ಚರಿ!

"ಶಬರಿ" ಎನ್ನುತ್ತ ಎದ್ದು ಕೂತ.

"ಇದೇನ್ ಸೂರ್ಯ? ಈಟೆಲ್ಲ ಆಗಿದ್ರು ನಂಗೇಳೇ ಇಲ್ಲ"– ತೀರಾ ಸಹಜವಾಗಿ ಸಂಕಟದಿಂದ ಕೇಳಿದಳು.

"ನಂಗ್ ಇಲ್ಲೀವರ್ಗೂ ಇದ್ರ ನೋವೇ ಗೊತ್ತಾಗ್ಲಿಲ್ಲ ಶಬರಿ. ಈಗಷ್ಟೇ ನೋವು ಕಾಣುಸ್ತಾ ಇದೆ"

"ಇಂಗಾದ್ರೆಂಗಪ್ಪ ನೀನು"– ತನಗರಿವಿಲ್ಲದಂತೆ ನೀನು ತಾನೆಂದು ಕರೆದು ಹಾಗೇ ಅವಡುಗಚ್ಚಿಕೊಂಡಳು. ಆನಂತರ "ತಡಿ, ಮುಲಾಮ್ ತಂದು ಅಚ್ತೀನಿ" ಎಂದು ಎದ್ದು ಹೋದಳು.

ಸೂರ್ಯ ಆಕೆ ಹೋದ ಕಡೆ ನೋಡುತ್ತಿರುವಂತೆಯೇ ಶಬರಿ ತಿರುಗಿ ಬಂದಳು. ಸಣ್ಣ ಕುಡಿಕೆಯೊಂದರಲ್ಲಿದ್ದ ಮುಲಾಮನ್ನು ಬೆರಳಿಂದ ತೆಗೆದು "ಇದನ್ನ ಅಪ್ಪಯ್ಯ ತಂದಿಟ್ಟೈತೆ. ಗಾಯಗೀಯ ಆದಾಗ ನಾವಿದನ್ನೇ ಅಚ್ಕಮಾದು. ಎಲ್ಲಿ ಇಂಗ್ ಕೊಡು ಕೈನ" ಎಂದು ಸೂರ್ಯನ ಕೈ ಹಿಡಿದು ಅಂಗೈಗೆ ಮುಲಾಮು ಹಚ್ಚಿದಳು. ಆಕೆ ಹಚ್ಚುವಾಗ ಅಂಗೈಯನ್ನೇ ನೋಡುತ್ತಿದ್ದರೆ, ಸೂರ್ಯ ಅವಳ ಮುಖವನ್ನೇ ನೋಡುತ್ತಿದ್ದ. ಮುಲಾಮು ಹಚ್ಚಿದ್ದಾದ ಮೇಲೆ ಶಬರಿ "ಇನ್ ಮಲೀಕ. ವೊತ್ತಾರೆ ಏಳದ್ರಾಗೆ ಎಲ್ಲಾ ಸರ್ಯಾಗ್ತೈತೆ. ತಿರ್ಗಾ ನಾಳೀಕು ಗುದ್ಲಿ ಸಲಿಕೆ ಅಂಬ್ತ ಇಡ್ಕಬ್ಯಾಡ" ಎಂದು ಸೂಚನೆ ನೀಡಿದಳು.

ಸೂರ್ಯನಿಗೆ ಮಾತು ಹೊರಬರಲಿಲ್ಲ. ಸುಮ್ಮನೆ ನೋಡುತ್ತಿದ್ದ.

ಆಗ ಶಬರಿಗೆ ಸಂಕೋಚ ಶುರುವಾಯಿತು.

"ಯಾಕೆ, ನಾನಿಂಗೆಲ್ಲ ಮಾತಾಡ್‌ಬಾರ್ದ?"–ಕೇಳಿದಳು.

"ಛೆ! ಛೆ! ಅಂಗೇನಿಲ್ಲ" ಸೂರ್ಯ ಹೇಳಿದ– "ನಿಂಗೆ ಹೇಗ್ ಸರಿ ಬರುತ್ತೊ ಹಾಗೇ ಮಾತಾಡು. ನನಗೆ ಅದ್ರಲ್ಲೇ ಸಂತೋಷ."

"ಅಂಗಾರ್ ಗಾಯ ಎಲ್ಲ ಮಾಯ ಆಗ್ತೈತೆ ಮಲೀಕ"

ಎಂದು ಹೇಳಿದ ಶಬರಿ ಅಲ್ಲಿಂದ ಹೋದಳು.

ಸೂರ್ಯ ಮಲಗಲು ಪ್ರಯತ್ನಿಸಿದ. ಯಾಕೊ ನಿದ್ದೆ ಹತ್ತಲಿಲ್ಲ. ಸ್ವಲ್ಪ ಹೊತ್ತಿನ ನಂತರ ಶಬರಿ ಮತ್ತೆ ಬಂದಳು. ಸೂರ್ಯ ಎದ್ದು ಕೂತ–

"ಮಲೀಕ ಅಂದ್ರೆ ಎದ್ದೇ ಇದ್ದೀಯಲ್ಲ. ಇದೇನ್ ಅಗಲೊತ್ತ? ರಾತ್ರಿ... ರಾತ್ರಿ ಆಗೈತೆ" ಎಂದು ಬೇಸರದಿಂದ ಹೇಳಿದಳು.

"ಸೂರ್ಯಂಗೆ ಎಲ್ಲಾ ಹಗಲೇ ಅಲ್ವಾ?"–ಸೂರ್ಯ ನಗುತ್ತ ನುಡಿದ.

"ಸೂರ್ಯನೇ ಚಂದ್ರ ಆದ್ರೆ ಎಲ್ಲ ಮುಗೀತಪ್ಪ"– ಶಬರಿ ಸಹಜವಾಗಿ, ಸರಾಗವಾಗಿ, ಹೇಳಿದ ಈ ಮಾತಿಗೆ ಸೂರ್ಯ ಅಚ್ಚರಿಯಿಂದ ನೋಡಿದ.

ಸೂರ್ಯನೇ ಚಂದ್ರನಾಗುವುದು? ಅಂದರೆ?...

"ಯಾಕಂಗ್ ನೋಡ್ತೀಯ? ಸೂರ್ಯನೇ ಚಂದ್ರ ಆಗಾಕಾಗಲ್ವ? ನಂಗೇನೊ ಅನ್ನುಸ್ತೈತೆ. ಸೂರ್ಯ ಮುಳುಗ್ದಂಗ್ ಮಾಡಿ ಚಂದ್ರ ಆಗ್‌ಬತ್ತಾನೆ. ಆಮ್ಯಾಕ್ ಆ ಚಂದ್ರ ವೋದಂಗ್ ಮಾಡಿ ಸೂರ್ಯ ಆಗ ಬತ್ತಾನೆ. ಅಗಲೂ ಅವ್ನೆ, ಕತ್ತಲೂ ಅವ್ನೇ. ಎಲ್ಲಾ ಆಟ! ನಿಜ ಅಂಬ್ತೀಯೊ ಇಲ್ವೊ ಯೇಳು" ಎಂದು ಶಬರಿ ತನ್ನದೇ ರೀತಿಯಲ್ಲಿ ಬಾಳಿನ ತಿಳುವಳಿಕೆಯನ ತೆರೆದಿಟ್ಟಾಗ ಸೂರ್ಯ ಮತ್ತಷ್ಟು ಮೌನವಾದ.

"ಅಂಗೈನಾಗ್ ಬೊಬ್ಬೆ ವೊಡುದ್ರೆ ಇಂಗೇ ಆಗಾದು. ನೋವ್ ತಿಂದೂ ತಿಂದೂ ಮಾತೇ ನಿಂತೋಗ್ತೈತೆ. ಅದ್ಕೆ ನಾನ್ ಯೇಳಾದು, ಸುಮ್ಕೆ ಮಲೀಕ" ಎಂದು ಆತನ ತೋಳು ಹಿಡಿದು, ಶಬರಿ, ಒತ್ತಾಯಪೂರ್ವಕವಾಗಿ ಮಲಗಿಸಿದಳು.

ಅನಂತರ ತಲೆಯ ಬಳಿಯಿದ್ದ ಬಗಲು ಚೀಲವನ್ನು ತೆಗೆದುಕೊಳ್ಳಲು ಕೈ ಹಾಕಿದಳು—" ಇದನ್ನ ನಾನೇ ಜ್ವಾಪಾನ ಮಾಡಿರ್ತೀನಿ. ಅದ್ರಾಗಿರಾ ಬಟ್ಟೆ ಬರೆ ತಗ್ದು ವೋಗುದ್ ಕೊಡ್ತೀನಿ."

ಸೂರ್ಯ ತಕ್ಷಣ ಆಕೆಯ ಕೈ ಹಿಡಿದು "ಬೇಡ, ಬೇಡ ಅದನ್ ಮುಟ್ ಬೇಡ" ಎಂದ.

"ಅದ್ಯಾಕಂಗ್ ಮುಟ್‌ಬ್ಯಾಡ ಅಂಬ್ತೀಯ? ಅದೇನ್ ಮುಟ್ಟಾಗೈತಾ?"– ಶಬರಿ ಜಗ್ಗಿಸಿದಳು.

ಅರೆ! ಇದೆಂಥ ಮಾತು? ಸೂರ್ಯ ತಬ್ಬಿಬ್ಬಾದ.

"ಹಾಗಲ್ಲ ಶಬರಿ. ಬಟ್ಟೆ ಬರೆ ನಾನೇ ಒಗ್ದು ನಾನೇ ಒಣಗುಸ್ತೀನಿ. ಇಷ್ಟಕ್ಕೂ ಅದ್ರಲ್ಲಿರೋದು ಒಂದೇ ಜೊತೆ. ನಾನು ನಾಳೆ ನಾಡಿದ್ದು ಊರಿಗೆ ಹೋಗಿ ನನ್ ಗೆಳೆಯನ್ನೂ ಕರ್ಕೊಂಡು ಎಲ್ಲಾ ಬಟ್ಟೆ ಬರೆ ತಗೊಂಡ್ ಬರ್ತೀನಿ. ಈಗ ಇವನ್ ಒಗೆಯೋದೂ ಬೇಡ. ಜೋಪಾನ ಮಡೋದೂ ಬೇಡ. ಈ ಚೀಲ ನನ್ ಹತ್ರಾನೇ ಇರ್ಬೇಕು" ಎಂದು ಸೂರ್ಯ ಹೇಳಿದಾಗ ಶಬರಿ "ನಿನ್ ಚೀಲ ನೀನೇ ಇಟ್ಕಳಪ್ಪ, ಇವಾಗ ಎಂಗಾನ ಮಾಡಿ ಮಲೀಕ ಆಟೇಯ" ಎಂದು ಹೇಳಿ ಹೊರಟುಹೋದಳು.

ಆದರೆ ಬಗಲು ಚೀಲ ಮುಟ್ಟಲು ಹೋದಾಗ ಸೂರ್ಯ ವರ್ತಿಸಿದ ರೀತಿ, ಅವನ ಮುಖಭಾವ ಶಬರಿಗೆ ಅರ್ಥವಾಗಲಿಲ್ಲ. ಯಾಕೆ ಹಾಗೆ ಹೇಳಿದ?

ತಾನು ಸಲೀಸಾಗಿ ಮನೆ ಮನುಷ್ಯನ ರೀತಿ ಮಾತಾಡಿಸಿದರೂ ಹೀಗೆಲ್ಲ ಹೇಳಬಹುದೆ? ಕಲಿತ ಮನುಷ್ಯ; ಏನ್ ಗುಟ್ಟೊ ಏನ್ ಕತೆಯೊ!– ಯೋಚಿಸುತ್ತ ಶಬರಿ ನಿದ್ದೆ ಹೋದಳು.

ಎರಡು ದಿನಗಳ ನಂತರ ಸೂರ್ಯ ಊರಿಗೆ ಹೋಗಿ ಬರುತ್ತೇನೆಂದು ಹೊರಟು ನಿಂತ. ಜೊತೆಗೆ ಗೆಳೆಯನೊಬ್ಬನನ್ನು ಕರೆತರುವ ವಿಷಯವನ್ನೂ ಹೇಳಿದ. ಆತ ಹುಚ್ಚೀರನ ಗುಡಿಸಲಲ್ಲಿ ಇರಬಹುದೆಂದು ಸಲಹೆ ಬಂತು. ಆಗ ಸೂರ್ಯ ತನ್ನ ಗೆಳೆಯನ ಜೊತೆ ರಾತ್ರಿ ಶಾಲೇಲೇ ವಾಸ ಮಾಡಿದರೆ ಹೇಗೆಂದು ಕೇಳಿದ. ಯಾರೂ ಒಪ್ಪಲಿಲ್ಲ. ಇಲ್ಲೇ ತಮ್ಮ ಜೊತೇಲೆ ಇರಬೇಕು ಎಂದರು. ಸೂರ್ಯ ಹೊರಟು ನಿಂತಾಗ "ಯಾಕೆ ಏನಾರ ಬ್ಯಾಸ್ರ ಮಾಡಿದ್ನ? ನಮ್ಮನೆ ಬಿಡಾ ವಿಸ್ಯ ಮಾತಾಡ್ತೀಯಲ್ಲ? ಎಂದು ಕೇಳಿಯೇಬಿಟ್ಟಳು. "ಹಾಗೇನಿಲ್ಲ ಶಬರಿ; ಹೇಗಿದ್ರೂ ರಾತ್ರಿ ಶಾಲೆ ಇದ್ಯಲ್ಲ. ಅದಕ್ಕೇ ಹಾಗಂದೆ. ನೋಡೋಣ ಮುಂದೆ" ಎಂದು ಸಮಾಧಾನಿಸಿ ಹೊರಟ.

ಬಸ್ಸನ್ನು ಹಿಡಿಯಲು ಮೂರು ಕಿಲೋಮೀಟರ್ ದೂರ ಹೋಗಬೇಕಿತ್ತು. ಬಂಡಿಜಾಡಿನ ಹಾದಿ ಜೊತೆಗೆ ಹುಚ್ಚೀರ ಮತ್ತು ಸಣ್ಣೀರ. ಅವರ ಜೊತೆ ಮಾತನಾಡ್ತ ಬಸ್ಸಿನ ರಸ್ತೆಗೆ ಬಂದ ಸೂರ್ಯ.

"ನೀವಿನ್ ಹೋಗ್ರಪ್ಪ"– ಇಬ್ಬರಿಗೂ ಸೂರ್ಯ ಹೇಳಿದ.

"ಇಲ್ಲ, ಬಸ್ ಬರಾಗಂಟ ನಾವಿಲ್ಲೇ ಇರ್ತೀವಿ" ಎಂದ ಸಣ್ಣೀರ.

ಸೂರ್ಯ ಸುಮ್ಮನಾಗಲಿಲ್ಲ. ಒತ್ತಾಯಿಸಿದ. ಅವರು 'ಸರಿ' ಅಂತ ಒಪ್ಪಿಕೊಂಡು ಹಟ್ಟಿ ಕಡೆಗೆ ಹೊರಟರು. ಸ್ವಲ್ಪ ದೂರ ಹೋಗಿ ತಿರುಗಿ ನೋಡಿದರು.

ಒಂದು ಮೋಟಾರು ಬೈಕು ಬಂದು ಸೂರ್ಯನ ಹತ್ತಿರ ನಿಂತಿತು.

ಸೂರ್ಯ ಮರುಮಾತಾಡದೆ ಹಿಂದೆ ಕೂತುಕೊಂಡ.

ಮೋಟಾರ್‌ಬೈಕನ್ನು ಒಬ್ಬ ಗಡ್ಡಧಾರಿ ಯುವಕ ಓಡಿಸುತ್ತಿದ್ದ.

ಬೈಕ್ ವೇಗವಾಗಿ ಹೋಯಿತು.

ನೋಡು ನೋಡುತ್ತಿದ್ದಂತೆ ರಸ್ತೆಯನ್ನು ಬಿಟ್ಟು ಬೇರೆ ಹಾದಿ ಹಿಡಿಯಿತು.

ಅದು ಕಲ್ಲು ಮಣ್ಣುಗಳ ಹಾದಿ; ಮುಳ್ಳು ಬೇಲಿಗಳ ಹಾದಿ.

ಸಣ್ಣೀರ ಮತ್ತು ಹುಚ್ಚೀರ ಇಬ್ಬರೂ ಆಶ್ಚರ್ಯದಿಂದ ನೋಡಿದರು. ಕುತೂಹಲ ಕೆರಳಿತ್ತು.

ಸೂರ್ಯ ವಾಪಸ್ ಬಂದಾಗ ಜೊತೆಗೆ ಇನ್ನೊಬ್ಬ ಯುವಕನಿದ್ದ. ಸಣ್ಣೀರ ಮತ್ತು ಹುಚ್ಚೀರ ಕಣ್ಣಲ್ಲಿ ಕಣ್ಣಿಟ್ಟು ನೋಡಿದರು. ಈತ ಆ ಮೋಟರ್‌ಬೈಕಿನ

ಆಸಾಮಿಯಲ್ಲ; ಆತನಿಗೆ ಗಡ್ಡವಿತ್ತು. ಈತನಿಗೆ ಇಲ್ಲ. "ಈತ ನನ್ನ ಗೆಳೆಯ; ನವಾಬ್ ಅಂತ" ಎಂದು ಸೂರ್ಯ ಪರಿಚಯಿಸಿದ. ಅರೆ! ಮುಸಲ್ಮಾನ! ಆದರೆ ಗಡ್ಡ ಇಲ್ಲ!– ಎಂದುಕೊಂಡ ಸಣ್ಣೀರ.

ಹಾಗಾದರೆ ಅವತ್ತು ಮೋಟಾರ್‌ಬೈಕಿನಲ್ಲಿ ಕರೆದೊಯ್ದವರು ಯಾರು? ಸಣ್ಣೀರನ ಕುತೂಹಲ ತಣಿಯಲಿಲ್ಲ; ಆತ ತಡೆಯಲೂ ಇಲ್ಲ.

"ನವಾಬಣ್ಣ, ನಿಂಗ್ ಮದ್ಲು ಗಡ್ಡ ಇತ್ತ?" ಎಂದು ಕೇಳಿಯೇ ಬಿಟ್ಟ.

"ಇಲ್ಲ, ಯಾಕೆ?"–ನವಾಬ್ ಕೇಳಿದ.

"ಯಾಕೂ ಇಲ್ಲ, ನವಾಬ್ರು ಗಡ್ಡ ಬಿಡ್ತಾರೆ ಅಂಬ್ತ ಯಾರೊ ಯೇಳಿದ್ ಕೇಳಿದ್ದೆ. ಅದುಕ್ಕೆ ಸುಮ್ಕೆ ಅಂಗಂದೆ."

ಸೂರ್ಯನಿಗೆ ಸಣ್ಣೀರ 'ಜಾಣ' ಎನ್ನಿಸಿತು. ತಾನು ಉತ್ತರ ಕೊಡಬೇಕೆನ್ನುವಷ್ಟರಲ್ಲೇ ನವಾಬ್ ನಗುತ್ತಾ ಹೇಳಿದ– " ಅವ್ರು ಅರಮನೇಲಿರೊ ನವಾಬ್ರು. ನಾನು ನಿಮ್ಮನೇಲಿರೊ ನವಾಬ. ಹೆಸ್ರಷ್ಟೇ ನವಾಬ. ನಿಜವಾಗಿ ನಾನ್ ಗರೀಬ." ಶಬರಿಯಾದಿಯಾಗಿ ಅನೇಕರ ಮುಖ ಅರಳಿತು.

"ಎಷ್ಟು ಚನ್ನಾಗ್ ಯೇಳ್ದ ಅಯಪ್ಪ ಅಲ್ವೇನೆ ಗೌರಿ?" ಎಂದಳು.

"ಈ ಸಣ್ಣೀರ ಯಾಕ್ ಇಂಗ್ ಕೇಳ್ತಾನೆ" ಎಂದು ಗೊಣಗಿದಳು ಗೌರಿ.

ಅಷ್ಟರಲ್ಲಿ ಸಣ್ಣೀರ "ಏನೊ ಸುಮ್ಕೆ ಇಂಗ್ ಕೇಳ್ದೆ, ತೆಪ್ ತಿಳ್ಕಾಬ್ಯಾಡ್ರಿ ನವಾಬ್ರ" ಎಂದ. ನವಾಬ "ಹಂಗೇನಿಲ್ಲ ಬಿಡಪ್ಪ" ಎಂದರೂ ಸೂರ್ಯ ಸುಮ್ಮನಿರಲಿಲ್ಲ. ಗಡ್ಡದ ವಿಷಯವನ್ನೇ ಯಾಕೆ ಕೇಳಿರಬಹುದು ಅನ್ನೊ ಕುತೂಹಲದಿಂದ ಸಣ್ಣೀರನನ್ನು ಪ್ರಶ್ನೆ ಮಾಡಿದ. ಆಗ ಸಣ್ಣೀರ, ಸೂರ್ಯನನ್ನು ಗಡ್ಡಧಾರಿಯೊಬ್ಬ ಮೋಟರು ಬೈಕಿನಲ್ಲಿ ಕರೆದೊಯ್ದ ವಿಷಯ ತಿಳಿಸಿದ.

"ಓ ಅದಾ ಸಣ್ಣೀರ, ಅಲ್ ನಿಂತಿದ್ದೆ ನೋಡು; ಒಬ್ಬ ಮೋಟರ್ ಬೈಕ್‌ನಲ್ಲಿ ಬಂದ. ನೋಡಿದ್ರೆ ಆತ ಪರಿಚಯದ್ದೋನು. ಬಿಡ್ತೀನ್ ಬಾ ಅಂತ ಕರ್ಕೊಂಡ್ ಹೋದ" ಎಂದು ಸೂರ್ಯ ವಿವರಿಸಿದಾಗ ಸಣ್ಣೀರ "ರಸ್ತೆ ಬಿಟ್ಟು ಬ್ಯಾರೆ ದಾರಿ ಇಡುದ್ರಲ್ಲ, ನಂಗೊಂದ್ ಕಿತ ಯೋಚ್ನೆ ಅತ್ಕಂಡ್ತು. ಅವ್ನ್ ಯಾವ್ದಾನ ಬ್ಯಾರೆ ಹಾದಿ ಬೀಳ್ಸಿದ್ನೊ ಏನೋ ಅಂಬ್ತ" ಎಂದು ಮತ್ತೆ ಮುಗ್ಧನಂತೆ ವಿವರಿಸಿದ. ಸೂರ್ಯ "ಅದೇನೊ ಹತ್ತಿರದ ದಾರಿ ಅಂತ ಕರ್ಕೊಂಡ್ ಹೋದ. ಅದೇನ್ ದೊಡ್ಡ ವಿಷಯಾನ? ಈಗ ಶಾಲೆ ಆರಂಭ ಮಾಡೋದ್ರ ಬಗ್ಗೆ ಮಾತಾಡೋಣ" ಎಂದು ಮಾತು ಬದಲಾಯಿಸಿದ.

"ನಮ್ದೇನೈತಪ್ಪ, ಎಲ್ಲಾ ನೀನ್ ಯೇಳ್ದಂಗೆ" ಎಂದು ಸಣ್ಣೀರ ಸಟ್ಟನೆ

ಹೇಳಿದ.

ಶಬರಿಯೂ ಅದನ್ನೆ ಹೇಳಿದಳು. ಆದರೆ ತಿಮ್ಮರಾಯಿ "ಆ ಪೂಜಾರಪ್ಪನ್ ಮರೀಬ್ಯಾಡ್ರಿ ಮಕ್ಕಳ. ಒಂದ್ ವೋಗಿ ಇನ್ನೊಂದಾದಾತು" ಎಂದು ಎಚ್ಚರದ ಮಾತು ನುಡಿದ.

ಸೂರ್ಯ ಈ ಮಾತು ಒಪ್ಪಿಕೊಂಡೇ ಒಂದು ಸಲಹೆ ಮುಂದಿಟ್ಟ–

"ತಿಮ್ಮರಾಯಿ ಹೇಳೋದು ಸರಿ –ಆ ಪೂಜಾರಪ್ಪಂಗೆ ಎಲ್ಲಾ ಹೇಳೋಣ. ಆದ್ರೆ ನನ್ನದು ಒಂದ್ ಸಲಹೆ ಇದೆ. ನರಸಿಂಹರಾಯಪ್ಪನೋರ ಹೆಂಡ್ತಿ ಇದಾರಲ್ಲ, ಅವ್ರಿಗೆ ನೀವೆಲ್ಲ ಓದು ಬರಹ ಕಲೀಬೇಕು ಅಂತ ಆಸೆ ಇದ್ದಂತಿದೆ. ಅವ್ರನ್ನ ಮೊದಲ್ನೇ ದಿನ ಕರ್ಯೋಣ. ಅವ್ರೇ ಆರಂಭ ಮಾಡ್ಲಿ."

"ನಂಗೇನೊ ಇದು ಸರಿ ಅನ್ನಿಸ್ತೈತೆ"– ಶಬರಿ ತಕ್ಷಣ ಹೇಳಿದಳು.

"ಎಲ್ರೂ ಒಪ್ಪೋದಾದ್ರೆ ಹಟ್ಟಿ ಹೆಂಗುಸ್ರೆಲ್ಲ ಹೋಗಿ ಅವ್ರನ್ನ ಕರೀಬೇಕು."– ಸೂರ್ಯ ಮತ್ತೊಂದು ಸಲಹೆ ನೀಡಿದ.

"ಯಾಕೆ ನಾವ್ ಗಂಡಸ್ರು ವೋಗಾದ್ ಬ್ಯಾಡ್ವ?"– ಸಣ್ಣೀರ ಸಣ್ಣಗೆ ದನಿ ಮಾಡಿದ. ಸೂರ್ಯ ಕೂಡಲೇ ಸ್ಪಷ್ಟಪಡಿಸಿದ–"ನೀವೂ ಹೋಗ್ರಿ, ಆದ್ರೆ ಹೆಣ್ ಮಕ್ಕಳು ಮುಂದಾಳತ್ವ ತಗೊಳ್ಳಲಿ. ತಪ್ಪೇನು?"

"ಇದ್ರಾಗ್ ತಪ್ಪು ಗೆಪ್ಪು ಏನ್ಬಂತು? ಅಂಗ್ ಬಂದ್ ಮಾತ್ನ ಇಂಗ್ ಒಗದೆ. ಆಟೇ"– ಸಣ್ಣೀರ ಮುಚ್ಚುಮರೆಯಿಲ್ಲದೆ ಮಾತನಾಡಿದ.

ಶಬರಿಗೆ ಸುಮ್ಮನಿರಲಾಗಲಿಲ್ಲ. "ಯಾಕೊ ಒಸಿ ಜಾಸ್ತಿ ಮಾತಾಡ್ತೀಯಪ್ಪ ನೀನು" ಎಂದು ಸಣ್ಣೀರನನ್ನು ಛೇಡಿಸಿದಳು. ಸೂರ್ಯ ಇದು ಮುಂದುವರೆಯಲು ಅವಕಾಶ ಕೊಡದೆ "ಸಣ್ಣೀರಂಗೆ ಕುತೂಹಲ ಸ್ವಲ್ಪ ಜಾಸ್ತಿ ಇದೆ. ಜೊತೆಗೆ ಮಾತಡೊ ಅವಕಾಶ ಸಿಕ್ಕಿದಾಗ ಅನ್ನಿದ್ದನ್ನ ಹೇಳ್ಬೇಕು ಅನ್ನೋ ಧೈರ್ಯ ಬರುತ್ತೆ. ಮುಚ್ಚಿಟ್ಕೊಳ್ದೆ ಮಾತಾಡೋದು ಯಾವಾಗ್ಲೂ ಒಳ್ಳೇದು ಶಬರಿ" ಎಂದು ಸಣ್ಣೀರನನ್ನು ಸಮರ್ಥಿಸಿದ. ಸಣ್ಣೀರ ಸಂತೋಷಗೊಂಡು ಸುಮ್ಮನಾದ.

ಕಡೆಗೆ ಶಬರಿ ನೇತೃತ್ವದಲ್ಲಿ ಹೆಂಗಸರು ಸಾವಿತ್ರಮ್ಮನವರನ್ನ ಕೇಳೋದೆಂದು ತೀರ್ಮಾನವಾಯ್ತು.

ಮಾರನೇ ದಿನ ಒಡೆಯರ ಜಮೀನಿಗೆ ಕೂಲಿಗೆ ಹೋದ ಹೆಂಗಸರು, ಅಲ್ಲಿಗೆ ಸಾವಿತ್ರಮ್ಮ ಬರೋದನ್ನೆ ಕಾಯ್ತಾ ಇದ್ದರು. ಸಾವಿತ್ರಮ್ಮ ಹೊಲದ ಕಡೆ ಬಂದರು. "ಎಲ್ಲಾ ಕೆಲ್ಸ ಚಂದಾಗ್ ನಡೀತ ಐತಾ?" ಎಂದು ಶಬರಿಯನ್ನು ಕೇಳಿದರು.

"ನೋಡ್ರವ್ವ, ಮಾಡ್ತಾ ಇದ್ದೀವಿ. ಈವಾಗಿನ್ನ ಕಳೆ ತಗ್ಯಾಕ್ ಸುರು

ಮಾಡಿದ್ದೀವಿ"– ಶಬರಿ ಉತ್ತರಿಸಿದಳು.

"ಕಳೆ ಚಂದಾಗ್ ತೆಗೀಬೇಕು. ಇಲ್ದಿದ್ರೆ ಪೈರ್ ಚಂದಾಗ್ ಬೆಳ್ಯಾಕಿಲ್ಲ"

"ಹೂಂಕಣ್ರವ್ವ ಕಳೆ ತಗದ್ ಮ್ಯಾಲೇನೆ ಬೆಳೇಗ್ ಒಂದ್ ಕಳೆ ಬರಾದು."

–ಶಬರಿಯ ಈ ಮಾತು ಸಾವಿತ್ರಮ್ಮನಿಗೆ ಇಷ್ಟವಾಯಿತು.

"ಬೋಲ್ ಚಂದಾಗ್ ಮಾತಾಡ್ತೀಯ ಕಣೇ" ಎಂದರು.

"ಇನ್ನೂ ಒಂದ್ ಮಾತಾಡಾದೈತೆ ಕಣ್ರವ್ವ ನಿಮ್ತಾವ. ಈಗ್ಲೇ ಬರ್ಲಾ?" ಎಂದು ಶಬರಿ ಕೇಳಿದಳು.

"ಬದುವಿನ್ ಮ್ಯಾಕ್ ಬಾ ಅದೇನ್ ಯೇಳು" ಎಂದು ಸಾವಿತ್ರಮ್ಮ ಹೇಳಿದ್ದೇ ತಡ ಶಬರಿ ಸಮೇತ ಎಲ್ಲರೂ ಬಂದರು.

ಶಬರಿ ರಾತ್ರಿ ಶಾಲೆಯ ವಿಷಯ ತಿಳಿಸಿ "ನೀವೇ ಬಂದು ಒಂದಕ್ಸರಾನ ಬೋರ್ಡ್ ಮ್ಯಾಲ್ ಬರ್ದು ಸುರು ಮಾಡ್‌ಬೇಕಂತೆ ಕಣ್ರವ್ವ. ನೀವ್ ಬಂದ್ರೆ ನಮ್ಗೆಲ್ಲ ಒಳ್ಳೇದಾಗ್ತೈತೆ ಕಣ್ರವ್ವ ಇಲ್ಲ ಅನ್‌ಬ್ಯಾಡ್ರಿ" ಎಂದು ಬೇಡುವ ದನಿಯಲ್ಲಿ ಕೇಳಿದಳು.

ಸಾವಿತ್ರಮ್ಮ ಫಕ್ಕನೆ ನಕ್ಕರು. "ನಂಗೇ ಒಂದಕ್ಸರ ಓದುಬರ ಬರಾಕಿಲ್ಲ ನನೇನ್ ಬರ್ಯಾನ ಬಂದು" ಎಂದರು.

"ಅಂಗಾರೆ ಸೂರ್ಯಪ್ಪಂತಾವ ಒಂದಕ್ಸರ ಬರಿಸ್ಕಂಡ್ ಬತ್ತೀನಿ; ಅದನ್ ನೋಡ್ಕೊಂಡು ಅಲ್ ಬಂದ್ ಬರುದ್ ಬಿಡ್ರವ್ವ"– ಶಬರಿ ಪರಿಹಾರವನ್ನು ಸೂಚಿಸಿದಳು. ಇವರ ಒತ್ತಾಯಕ್ಕೆ ಸಾವಿತ್ರಮ್ಮ ಆಗಲಿ ಎಂದು ಒಪ್ಪಿದ್ದಾಯಿತು.

ಆದರೆ ನರಸಿಂಹರಾಯಪ್ಪನಿಗೆ ಇದನ್ನು ತಕ್ಷಣ ಅರಗಿಸಿಕೊಳ್ಳಲು ಆಗಲಿಲ್ಲ. ಸೂರ್ಯನ ಉದ್ದೇಶವೂ ಇದೇ ಆಗಿತ್ತು. ವ್ಯವಸ್ಥೆಯ ಒಳಗೇ ಒಂದು ಕಿಡಿ ಹುಟ್ಟು ಹಾಕಬೇಕು. ಅದು ಬರುಬರ್ತಾ ವ್ಯವಸ್ಥೇನ ಸುಡುತ್ತೆ. ಹೊರಗಿಂದ ನಡ್ಯೊ ಕ್ರಿಯೆ ಕೆಂಡವಾಗಿ ಕಾಡುಸ್ಬೇಕು. ಒಳಗೆ–ಹೊರಗೆ ಎರಡೂಕಡೆ ಸಂಘರ್ಷದ ಸ್ಫೋಟ ಆಗಬೇಕು; ಬೇರೆ ಬೇರೆ ಸ್ತರ; ಬೇರೆ ಬೇರೆ ವಿಧಾನ. ತನ್ನೊಳಗಿನ ದೌರ್ಬಲ್ಯಗಳಿಂದ ಕುಸಿಯೋ ವ್ಯವಸ್ಥೆಗೆ ಕ್ರಿಯೆ ಚಾಲಕ ಶಕ್ತಿ – ಹೀಗೆಲ್ಲ ನವಾಬನ ಜೊತೆ ತನ್ನ ವಿಚಾರ ಹಂಚಿಕೊಂಡಿದ್ದ– ಸೂರ್ಯ. ನವಾಬನಿಗೇನು ಇದು ಹೊಸ ವಿಚಾರವಲ್ಲ. ಆಲೋಚನೆಗಳನ್ನು ಹಂಚಿಕೊಳ್ಳೋ ಮೂಲಕ ಮತ್ತಷ್ಟು ನಿಖರವಾಗೊ ಪ್ರಕ್ರಿಯೆಯಲ್ಲಿ ಇವರಿಗೆ ನಂಬಿಕೆ.

ಇವರು ಯೋಚಿಸಿದಂತೆ ನರಸಿಂಹರಾಯಪ್ಪ ಮತ್ತು ಸಾವಿತ್ರಮ್ಮನ ನಡುವೆ ಸಣ್ಣ ಜಗಳಾನೇ ಆಯ್ತು.

"ಆ ಬಡ್ಡೆತ್‌ಗಳು ನನ್ನನ್ನ ಕೇಳ್ದೆ ನಿನ್ ಕೇಳವ್ರಲ್ಲ. ಈಗ್ಲೇ ಈಟಂದ್ ನಿಗರು ಬಂದ್ರೆ ಮುಂದ್ ಎಂಗೆ ಅಂಬ್ತ?"– ಒಡೆಯರು ಜೋರು ಮಾಡಿದರು.

"ಹೆಣ್ಣೆಂಗ್ಸು ಅಂದ್ರೆ ಎಲ್ರಿಗೂ ತಾತ್ಸಾರ. ಒಳಗೇ ಇಟ್ ಪೂಜೆ ಮಾಡ್ತೀರ. ವೋರೀಕ್ ವೊಗ್ತೀನಿ ಅಂದ್ರೆ ಇಂಗ್ ವೊಟ್ಟೆ ಉರ್ಕಂಡ್ ಸಾಯ್ತೀರ"– ಸಾವಿತ್ರಮ್ಮ ಝಾಡಿಸಿದಳು.

"ನಂಗ್ಯಾಕೆ ವೊಟ್ಟೆ ಉರಿ. ಅವ್ರ್ ಪೊಗ್ರು ಎಷ್ಟು ಬೆಳೆದೈತೆ ಅಂಬ್ತ ಯೇಳ್ತಾ ಇವ್ನಿ."

"ನಿಮ್ಮನ್ನ ಮದ್ಲೆ ಕೇಳಿದ್ರಲ್ಲ ಅವ್ರು. ಇವಾಗೇನೊ ನನ್ ಕರೀತಾ ಅವ್ರೆ ಮುತ್ತೈದೆ ಮುಂದಿಟ್ಕಂಡ್ ಒಳ್ಳೆ ಕೆಲ್ಸ ಮಾಡಾನ ಅಂಬ್ತ. ಇವಾಗೇನ್ ನೀವು ಸುಮ್ಕೆ ಇರ್ತೀರೊ ಇಲ್ಲ ನಾನೆ ಊರಾಗೆಲ್ಲ ಡಂಗೂರ ವೊಡ್ಕಂಡ್ ವೋಗ್ ಬರ್ಲೊ".

–ಎಂದು ಸಾವಿತ್ರಮ್ಮ ಹೇಳಿದಾಗ ನರಸಿಂಹರಾಯಪ್ಪ "ಎಲ್ಲಾನ ಆಳಾಗೋಗು. ಒಸಿ ಉಸಾರು; ನಮ್ ಬುಡಕ್ಕೇ ತಂದ್ ಬಿಟ್ಟೀಯ. ಆಟೇ" ಎಂದು ಚಡಪಡಿಸುತ್ತ ಎದ್ದು ಹೋದ.

ರಾಮಾಜೋಯಿಸರ ಮನೆಗೆ ಬಂದ– ನರಸಿಂಹರಾಯಪ್ಪ, ಜೋಯಿಸರು ಆತನಿಗೆ ಸಮಾಧಾನ ಮಾಡಿದರು. ಕಾಲಕ್ಕೆ ತಕ್ಕಂತೆ ಅಷ್ಟೊ ಇಷ್ಟೊ ಹೊಂದಾಣಿಕೆ ಮಾಡಿಕೊಳ್ಳದೇ ಇದ್ರೆ ಸಂಪೂರ್ಣ ಪಲ್ಲಟ ಆಗಿ ನಾಶ ಆಗ್ ಬಿಡ್ತೀವಿ– ಎಂದು ಕಿವಿ ಮಾತು ಹೇಳಿದರು. ಆದರೂ ನಮ್ ಎಚ್ಚರ ನಮಗಿರಲಿ– ಎಂಬ ಮಾತನ್ನೂ ಸೇರಿಸಿದರು.

ಇತ್ತ ಶಬರಿ ಒಂದು ಸ್ಲೇಟಿನಲ್ಲಿ 'ಅ, ಆ" ಎಂದು ಸೂರ್ಯನಿಂದ ಬರೆಸಿಕೊಂಡು ಬಂದಳು. ಅದರ ಜೊತೆಗೆ ಇನ್ನೊಂದು ಖಾಲಿ ಸ್ಲೇಟನ್ನು ಸಾವಿತ್ರಮ್ಮನಿಗೆ ಕೊಟ್ಟಳು. ಸಾವಿತ್ರಮ್ಮ ಹೊಲದ ಬದುವಿನ ಮೇಲಿದ್ದ ಮರದ ಕೆಳಗೆ ಕೂತು ನೋಡಿಕೊಂಡು ಬರೆಯತೊಡಗಿದಳು. ಆಗದೆ ಶಬರಿಯನ್ನು ಕರೆದಳು. ಮೊದಲು ಶಬರಿ ನೋಡಿಕೊಂಡು ಬರೆದಳು. "ಬಂತು ಬಂತು" ಎಂದು ಕಿರುಚಿದಳು.

ರೆಕ್ಕೆ ಬಿಚ್ಚಿದ ನವಿಲು.
ಅವುಗಳಲ್ಲಿ ಹೊಳೆಯುವ ಕಣ್ಣುಗಳು.
ಬಣ್ಣ ಬಣ್ಣಗಳಲ್ಲಿ ನೆರೆದ ನೋಟ.

ಶಬರಿಯ ಕೂಗಿಗೆ ಹೆಂಗಸರೆಲ್ಲ ಓಡಿ ಬಂದರು. ಆಕೆ ಬರೆದ ಅಕ್ಷರಗಳನ್ನು ನೋಡಿ ಆನಂದಿಸಿದರು. ಶಬರಿಯಂತೂ ಕುಣಿದು ಕುಪ್ಪಳಿಸಿದಳು. ಸಡಗರ ಮುಗಿದ ಮೇಲೆ "ಕುತ್ಕಳ್ರವ್ವ ಕಲುಸ್ತೀನಿ" ಎಂದು ಸಾವಿತ್ರಮ್ಮನ ಕೈ ಹಿಡಿದು ಬರೆಸತೊಡಗಿದಳು. ಸ್ವಲ್ಪ ಹೊತ್ತಿನಲ್ಲೇ ಸಾವಿತ್ರಮ್ಮ ಕಲಿತುಬಿಟ್ಟರು. ಮತ್ತೆ ಹೆಂಗಸರೆಲ್ಲ ಕೇಕೆ ಹಾಕಿದರು.

ಅಷ್ಟರಲ್ಲಿ ಅಲ್ಲಿಗೆ ಬಂದ ನರಸಿಂಹರಾಯಪ್ಪ ಗದರಿಕೊಂಡ. "ಕೂಲಿ ಮಾಡಾಕ್ ಬಂದಿದ್ದೀರೊ, ಓದು ಬರಾ ಕಲ್ಯಾಕ್ ಬಂದಿದ್ದೀರೊ" ಎಂದು ಸಿಡುಕಿದ. ಸಾವಿತ್ರಮ್ಮ "ಒಂದೀಟೊತ್ ಕೆಲ್ಸ ನಿಂತೊದ್ರೆ ಆಕಾಸ ಕಳಚ್ಕಂಡ್ ಬೀಳಾಕಿಲ್ಲ. ನಮ್ ಬೂಮಿತಾಯಿ ನಮ್ ಮ್ಯಾಕ್ ಸಿಟ್ಟಾಗಕಿಲ್ಲ. ಸುಮ್ಕಿರ್ರಿ ಸಾಕು" ಎಂದು ಅಷ್ಟೇ ಸಿಡುಕಿನಿಂದ ಹೇಳಿದಾಗ ಆತ ಮರುಮಾತಾಡದೆ ಚಡಪಡಿಸುತ್ತ ಹೋದ.

# ೭

ಶಾಲೆ ಆರಂಭವಾಗುವ ದಿನ ಆಶ್ಚರ್ಯವೊಂದು ಕಾದಿತ್ತು. ಬೆಟ್ಟದ ಬುಡದಲ್ಲಿ ಹಟ್ಟಿ; ಅಲ್ಲಲ್ಲೇ ಗುಡ್ಡಗಳು, ಮರಗಿಡಗಳು; ಹಟ್ಟಿಗೆ ಸ್ವಲ್ಪ ಹತ್ತಿರದಲ್ಲಿ ಶಾಲೆ. ಸಾಯಂಕಾಲದ ವಾತಾವರಣ. ಸುತ್ತಮುತ್ತ ಬೆಟ್ಟ ಗುಡ್ಡಗಳನ್ನು ಮೀರಿ ಬೀಳುತ್ತಿರುವ ಸೂರ್ಯನ ಕೆಂಪು ಕಿರಣಗಳಲ್ಲಿ ಹೊಳೆಯುತ್ತ ನಿಂತ ಶಾಲೆಯ ಗುಡಿಸಲು. ಮಾವಿನಸೊಪ್ಪಿನ ಅಲಂಕಾರ. ಒಳಗೆ ಹಣತೆಗಳ ಸಾಲುಸಾಲು. ಎಲ್ಲರ ಮುಖದಲ್ಲೂ ಗೆಲುವು. ಸಾವಿತ್ರಮ್ಮ ಬೋರ್ಡಿನ ಮೇಲೆ ಅಕ್ಷರ ಬರೆದು ಶಾಲೆಗೆ ನಾಂದಿ ಹಾಡಬೇಕು. ಅನಂತರ ಸೂರ್ಯ ಹೇಳುವ ಹಾಡಿಗೆ ಎಲ್ಲರೂ ದನಿಗೂಡಿಸಬೇಕು– ಇದು ಕಾರ್ಯಕ್ರಮದ ಆರಂಭದ ಹಂತ.

ಆದರೆ ಸಾವಿತ್ರಮ್ಮ ಆಶ್ಚರ್ಯಕ್ಕೆ ಕಾರಣವಾದರು; ಅವರು ಹೇಳಿದರು– "ನಾನು ಅಕ್ಸರ ಕಲಿಯೋಕೆ ಮುಂಚೆ ಶಬರಿ ಕಲ್ತು, ಆಮ್ಯಾಕ್ ನನಿಗ್ ಕಲ್ಸವ್ಳೆ. ಈಗ ಶಬರಿ ನನ್ ಗುರು ಇದ್ದಂಗೆ. ಆದ್ರಿಂದ ಶಬರೀನೆ ಮದ್ಲು ಬರೀಬೇಕು. ಆಕೇನೇ ಆರಂಭ ಮಾಡ್‌ಬೇಕು."

ಸೂರ್ಯ ಚಪ್ಪಾಳೆ ಹೊಡೆದ ಕೂಡಲೇ ಎಲ್ಲರೂ ಕೈಕೂಡಿಸಿದರು.

ಶಬರಿ ತಬ್ಬಿಬ್ಬಾದಳು. ಕಣ್ಣಲ್ಲಿ ನೀರು, ಒಂದು ರೀತಿಯ ಭಾವಾವೇಶ. ನಿರೂಪಣೆ ಮಾಡುತ್ತಿದ್ದ ನವಾಬ ಕರೆದರೂ ಆಕೆ ಏಳಲಿಲ್ಲ. ಕಡೆಗೆ ಎಲ್ಲರ ಒತ್ತಾಯಕ್ಕೆ ಎದ್ದು ಬಂದಳು. ಕಣ್ಣೀರು ಒರೆಸಿಕೊಂಡು ಬೋರ್ಡಿನ ಮೇಲೆ 'ಅ, ಆ' ಎಂದು ಬರೆದಳು.

ಮತ್ತೆ ಚಪ್ಪಾಳೆ; ಹುಚ್ಚೀರನ ಕಣ್ಣು ತುಂಬಿ ಬಂದವು. ತಿಮ್ಮರಾಯಿ ಧನ್ಯನಾದಂತೆ ಕೂತಿದ್ದ. ಪೂಜಾರಪ್ಪ ಬೆಪ್ಪಾದಂತೆ ನೋಡುತ್ತಿದ್ದ.

ಶಾಲೆ ವಿಧ್ಯುಕ್ತವಾಗಿ ಆರಂಭವಾಯಿತು. ಸೂರ್ಯ ಹೇಳಿದ: "ಇದನ್ನ ರಾತ್ರಿ ಶಾಲೆ ಅಂತ ಕರುದ್ರೂ ನಿಜ ಹೇಳಬೇಕೂಂದ್ರೆ ಇದು ಬಿಡುವಿನ ಶಾಲೆ. ನಿಮಗೆ ಬಿಡುವು ಇದ್ದಾಗೆಲ್ಲ ಕಲುಸ್ತೇವೆ. ಮಕ್ಕಳು ಕೂಲಿ ಮಾಡೋದ್ ತಪ್ಪಿಸಿ ಇಲ್ಲಿ ವಿದ್ಯೆ ಹೇಳಿಕೊಡ್ತೇವೆ."

ಸರಳ ಸಮಾರಂಭ ಮುಗಿಸಿ ಹಟ್ಟಿಗೆ ಮರಳಿ ಬಂದ ಮೇಲೆ, ಸಣ್ಣೀರ,

ಹುಚ್ಚೀರ, ತಿಮ್ಮರಾಯಿ ಯಾರೂ ಕಾಣಿಸಲಿಲ್ಲ. ಸೂರ್ಯ ಶಬರಿಯನ್ನು ಕೇಳಿದ– "ಇವ್ರ್ ಎಲ್ ಹೋದ್ರು?"

"ಈಟೋತ್ನಾಗ್ ಇನ್ನೆಲ್ ವೋಗಿರ್ತಾರೆ. ಸಂತೋಷ ಜಾಸ್ತಿ ಆತು ಅಂಬ್ತ ಕುಡ್ಯಾಕೋಗಿರ್ತಾವೆ" ಎಂದು ನೇರವಾಗಿ ಹೇಳಿದಳು.

ಸೂರ್ಯ ಕ್ಷಣಕಾಲ ಸುಮ್ಮನಾದ. ಆನಂತರ ನವಾಬನನ್ನು ಕರೆದುಕೊಂಡು ಹೊರಗೆ ಹೋದ.

ಇಬ್ಬರೂ ಕತ್ತಲಲ್ಲಿ ಮೌನವಾಗಿ ನಡೆದರು. ಒಂದು ಕಡೆ ನಿಂತರು. ಸ್ವಲ್ಪ ಗಾಳಿ ಬೀಸತೊಡಗಿತು. ನವಾಬ ಕೇಳಿದ. "ಇಲ್ಲಿ ಎಷ್ಟು ದಿನ ಇರ್ಬೇಕು ಅಂದ್ಕೊಂಡಿದ್ದೀಯ?"

"ಎಷ್ಟು ದಿನ ಸಾಧ್ಯವೋ ಅಷ್ಟು ದಿನ"– ಸೂರ್ಯ ಉತ್ತರಿಸಿದ.

"ಅರ್ಧಕ್ಕೆ ಇವ್ರನ್ನ ಕೈ ಬಿಡ್ತೀಯ?"

"ಎಲ್ಲಾದ್ರೂ ಉಂಟಾ? ನಾನು ಒಂದು ವೇಳೆ ಹೋಗ್ಲೇಬೇಕಾದ್ರೆ ನೀನು ಇಲ್ಲಿ ಕೆಲ್ಸ ಮುಂದುವರೆಸ್ಬೇಕು."

"ಬೇಗ ನಿನ್ ಮೇಲಿರೊ ಕೊಲೆ ಕೇಸ್ ತೀರ್ಮಾನ ಆಗಿದ್ರೆ ಚನ್ನಾಗಿತ್ತು. ತಪ್ಪಿಸ್ಕೊಂಡು ತಿರ್ಗೋದು ಎಷ್ಟು ದಿನ?"

ಹೌದು; ಸೂರ್ಯನ ಮೇಲೆ ಒಂದು ಕೊಲೆ ಕೇಸು ಇತ್ತು. ಈತ ಭೂ ಒಡೆಯರೊಬ್ಬರ ಕೊಲೆಗೆ ಸಂಚು ರೂಪಿಸಿದನೆಂದು ಹಿಡಿಯಲು ಬಲೆ ಬೀಸಿತ್ತು ಸರ್ಕಾರ. ಆ ಭೂ ಒಡೆಯರು ರಾಜಕಾರಣಿಯೂ ಆಗಿದ್ದರು. ಅವರ ಹತ್ಯೆಯೂ ಆಗಿತ್ತು. ಇದು ಆಸ್ತಿ ಅಧಿಕಾರಗಳ ಕಾರಣಕ್ಕೆ ಆದ ಹತ್ಯೆ. ಆದರೆ ಅನೇಕ ಹೋರಾಟಗಳಲ್ಲಿ ಭಾಗಿಯಾಗಿದ್ದ ಸೂರ್ಯನ ಮೇಲೆ ಕೊಲೆ ಸಂಚಿನ ಆರೋಪವಿತ್ತು. ವಕೀಲರಿಗೆ ತಿಳಿಸಿ ಈತ ಭೂಗತನಾಗಿದ್ದ. ಜಾಮೀನಿಗಾಗಿ ಯತ್ನ ಸಾಗಿತ್ತು. ಈ ವಿಷಯವನ್ನು ನವಾಬ್ ಪ್ರಸ್ತಾಪಿಸಿದಾಗ ಸೂರ್ಯ ಬಿಗುಭಾವದಿಂದ ನೋಡಿದ.

"ಹೌದು; ಅದು ಬೇಗ ಇತ್ಯರ್ಥ ಆಗ್ಬೇಕು. ಆ ಕೇಸು ಇದ್ದದ್ದರಿಂದ ನಾವ್ಯಾರೂ ಚಂದ್ರನ ಮದ್ವೇಗೆ ಬರಲಿಲ್ಲ. ಮುಂದೇನು ಅಂತ ಗುಟ್ಟಾಗಿ ಚರ್ಚೆ ನಡೆಸೋದಕ್ ಸಂಗಾತಿಗಳ ಜೊತೆ ಹೋದ್ವಿ. ಈಗ ಇಲ್ಲಿಗೇ ಬರಬೇಕಾಯ್ತು ಸರ್ಕಾರದ ಸಂಚಿಗೆ ನಾನು ಬಲಿಪಶು."

"ವ್ಯವಸ್ಥೆಗೆ ಸಮಾಜವೇ ಒಂದು ಬಲಿಪಶು ಅಲ್ವಾ? ಅದ್ರಲ್ಲಿ ನಾನು, ನೀನೂ ಎಲ್ಲಾ ಇದೀವಿ."

"ಆದರೆ ಹೋರಾಟ ಹತ್ತಿಕ್ಕೋದುಕ್ಕೇಂತ ನನ್ ಮೇಲೆ ಈ ಕೇಸು ಅಲ್ವಾ?"

"ಅದನ್ನ ನನಗೆ ಬಿಡ್ಸಿ ಹೇಳ್ಬೇಕಾ? ನಾನು ಹೇಳ್ತಿರೋದು ನಮ್ಮ ದಾರಿ ಸ್ಪಷ್ಟವಾಗಿರಬೇಕು. ಇಲ್ಲಿ ಹಿಡಿದ ಕೆಲ್ಸಾನ ಅರ್ಧಕ್ಕೇ ಬಿಟ್ ಹೋಗಬಾರದು. ಬೇಗ ನಿನ್ ಕೇಸು ತೀರ್ಮಾನ ಆಗ್ಬೇಕು. ಇದು ನನ್ನ ಆಸೆ ಅಂತ ಹೇಳ್ತಿದೀನಿ ಅಷ್ಟೆ."

"ನಾವು ಗಟ್ಟಿ ಆರಂಭ ಮಾಡಿದ್ರೆ ಇಲ್ಲಿರೊ ಜನಾನೇ ಹೋರಾಟ ಮುಂದುವರಿಸ್ಕೊಂಡ್ ಹೋಗ್ತಾರೆ. ಅದು ಆಗೇ ಆಗುತ್ತೆ. ನನ್ ಕೇಸಿನ ಬಗ್ಗೆ ನಾನು–ನೀನು ಆಗಾಗ್ಗೆ ಹೋಗಿ ವಿಚಾರಿಸ್ಕೊಂಡ್ ಬರೋಣ. ಹೇಗೊ ಎಲ್ಲಾ ಮೇನೇಜ್ ಮಾಡೋಣ, ಆಮೇಲಿದ್ದೇ ಇದೆ."

"ಆಮೇಲ್ ಈ ಸರ್ಕಾರಕ್ಕೆ ಸರ್‍ಯಾಗ್ ಬುದ್ಧಿ ಕಲುಸ್ಬೇಕು. ಇದು ಹೊಲಸು ವ್ಯವಸ್ಥೆ"– ನವಾಬ ಸಿಟ್ಟಿನಿಂದ ಹೇಳಿದ.

"ಸರ್ಕಾರ ವ್ಯವಸ್ಥೆಯ ಒಂದು ಅಂಗ ಮಾತ್ರ ನವಾಬ್. ಸರ್ಕಾರವೇ ಇಡೀ ವ್ಯವಸ್ಥೆ ಅಲ್ಲ. ಕೆಟ್ಟ ವ್ಯವಸ್ಥೇಲಿ ಸರ್ಕಾರವಷ್ಟೇ ಅಲ್ಲ, ಜಾತಿ, ವರ್ಣ, ವರ್ಗ, ಧರ್ಮ, ಆಸ್ತಿ, ಹಣ– ಎಲ್ಲಾ ಸೇರಿವೆ. ಇವೆಲ್ಲ ಸೇರಿದ್ದೇ ನಮ್ಮ ಸಾಮಾಜಿಕ ಆರ್ಥಿಕ ವ್ಯವಸ್ಥೆ. ಆದ್ರಿಂದ ಸರ್ಕಾರ ಒಂದು ಬದಲಾದ್ರೆ ಇಡೀ ವ್ಯವಸ್ಥೇನೇ ಬದಲಾಯ್ತು ಅಂತ ಅಲ್ಲ. ನಮ್ಮ ಸಮಾಜದ ಜನವಿರೋಧಿ ತಳಪಾಯ ಮತ್ತು ತಾತ್ವಿಕತೇನೇ ಬದಲಾಗಬೇಕು. ಅದಕ್ಕೆ ಸಮುದಾಯಾನ ಸಿದ್ಧಗೊಳಿಸಬೇಕು. ಈ ದಿಕ್ಕಿನಲ್ಲಿ ನಮ್ಮದೂ ಒಂದು ಹಾದಿ. ಇದು ನನಗೆ–ನಿನಗೆ ಸ್ಪಷ್ಟವಾಗಿರ್‍ಲಿ"

ನವಾಬ ಸೂರ್ಯನ ಮಾತನ್ನು ಕೇಳುತ್ತಿದ್ದ.
ಗಾಳಿಯ ಬಿರುಸು ಸ್ವಲ್ಪ ಹೆಚ್ಚಾಯಿತು.

"ನೋಡು ನವಾಬ್, ಸರ್ಕಾರಿ ಹಿಂಸೇನ ಯಾರೂ ಹಿಂಸೆ ಅನ್ನೊಲ್ಲ. ಪೋಲಿಸರು ಕೊಂದರೆ–ಅದೂ ವಿನಾಕಾರಣ ಅಮಾಯಕರನ್ನು ಕೊಂದರೂ ಸಹ–ಕಾನೂನಿನ ಸಂರಕ್ಷಣೆ ಅಂತ ಆಗುತ್ತೆ. ಜನರನ್ನ ಹಿಂಡಿ ಹಿಪ್ಪೆ ಮಾಡೊ ನೀಚರನ್ನ ಜನರು ಸಂಘಟಿತರಾಗಿ ಸಾಯಿಸಿದರೆ ಅದು 'ಹಿಂಸೆ' 'ಕೊಲೆ' ಅಂತ ಕರಿಸ್ಕೊಳ್ಳುತ್ತೆ. ಹಾಗೆ ನೋಡಿದ್ರೆ ಅಸಮಾನತೇನೆ ಸಮಾಜದ ಒಂದು ಹಿಂಸೆ.

ಈ ಜಗತ್ತಿನಲ್ಲಿ ಯಾವುದು ಹಿಂಸೆ ಯಾವುದು ಹಿಂಸೆ ಅಲ್ಲ, ಅನ್ನೋದೆ ದೊಡ್ಡ ಚರ್ಚೆ ವಿಷಯ. ಯಾರು ಭಯೋತ್ಪಾದಕರು, ಯಾರು ಅಲ್ಲ ಅನ್ನೋದೂ ಅಷ್ಟೆ. ವಿನಾಕಾರಣ ಯುದ್ಧ ಮಾಡ್ನೋ 'ಮುತ್ಸದ್ದಿ'ಗಳು ಭಯೋತ್ಪಾದಕರಲ್ವ? ಆದ್ರಿಂದ ನಂಗನ್ಸುತ್ತೆ ಹಿಂಸೆ–ಅಹಿಂಸೆ, ಭಯೋತ್ಪಾದಕತೆ–ಯುದ್ಧೋತ್ಪಾದಕತೆ, ಧರ್ಮ–ಅಧರ್ಮ, ಯುದ್ಧ–ಶಾಂತಿ, ಜಾತಿವಾದ, ಕೋಮುವಾದ–ಎಲ್ಲದರ ಬಗ್ಗೇನೂ ಸೈದ್ಧಾಂತಿಕ ಸ್ಪಷ್ಟತೆ ಇರ್ಬೇಕು."

ನವಾಬ ಸುಮ್ಮನೆ ಕೇಳುತ್ತಿದ್ದ. ಸೂರ್ಯ ಹೇಳುತ್ತಲೇ ಇದ್ದ.

"ನಿನಗೆ ಈ ಮಾತುಗಳು ಗೊತ್ತಿಲ್ಲ ಅಂತ ಅಲ್ಲ ಗೆಳೆಯ. ಈ ಹೋರಾಟಕ್ಕೆ ನೀನು ನನ್ನಷ್ಟು ಹಳಬ ಅಲ್ಲ. ಆದ್ರೆ ನೀನು ಎಲ್ಲ ಸಂಪ್ರದಾಯಗಳ ಸಂಕೋಲೆ ಬಿಟ್ಟು ಸಿದ್ಧಾಂತದ ಕಡೆ ಬಂದಿದ್ದೀಯ. ನನ್ನ ನಂತರ ಇಲ್ಲಿ ನೀನೆ ಕೆಲ್ಸ ಮುಂದುವರೆಸ್ಬೇಕು. ಅದಕ್ಕಾಗಿ ಹೇಳ್ತಿದ್ದೀನಿ. ನಮಗೆ ಸೈದ್ಧಾಂತಿಕ ಸ್ಪಷ್ಟತೇನೂ ಬೇಕು. ಸೈದ್ಧಾಂತಿಕ ಸೃಜನಶೀಲತೇನೂ ಬೇಕು."

"ಸೈದ್ಧಾಂತಿಕ ಸೃಜನಶೀಲತೆ ಅಂದ್ರೆ?"

"ಅದು ಹೀಗೆ ಗೆಳೆಯ; ಒಂದು ಪ್ರಗತಿಪರ ಸಿದ್ಧಾಂತಕ್ಕೆ ಈಗ ನಾವು ಬದ್ಧವಾಗಿದ್ದೀವಿ. ಹಾಗಂತ ಆ ಸಿದ್ಧಾಂತದ ಒಂದೊಂದು ಸಾಲಿಗೂ ನಾವು ಕೊರಳು ಕೊಡ್ಬೇಕು ಅಂತ ಅಲ್ಲ. ಅದರ ಕೇಂದ್ರ ಆಶಯಕ್ಕೆ ಬದ್ಧವಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಸಿದ್ಧಾಂತಾನ ಬೆಳುಸ್ಬೇಕು; ಸಿದ್ಧಾಂತ ಜಡವಾಗ್ದೆ ಸದಾ ಸೃಜನಶೀಲವಾಗಿರೊ ಹಾಗೆ ನಾವು ಕ್ರಿಯಾಶೀಲರಾಗಿರ್ಬೇಕು."

ನವಾಬ ಸೂರ್ಯನ ಮಾತನ್ನು ಕಿವಿಗೊಟ್ಟು ಕೇಳಿದ. ಎದುರಿಗೆ ನಿಂತು ಒಂದು ಪ್ರಶ್ನೆ ಹಾಕಿದ.

"ಸೂರ್ಯ, ನೀನೇ ಹೇಳಿದ ಹಾಗೆ ನಾನು ನಿಮ್ಮ ತಂಡಕ್ಕೆ ಹೊಸಬ. ಆದ್ರೆ ಸಮಾಜ ಬದಲಾವಣೆ ಮತ್ತು ಜನಪರ ಹೋರಾಟಕ್ಕೆ ಸದಾ ಬದ್ಧ. ಒಮ್ಮೊಮ್ಮೆ ನಮ್ಮ ಹೋರಾಟದ ಹಾದೀನೆ ತಪ್ಪಿ ಎಲ್ಲೆಲ್ಲೊ ಹೋಗುತ್ತೇನೊ ಅಂತ ಆತಂಕ ಆಗುತ್ತೆ. ವ್ಯವಸ್ಥೆ ವಿರುದ್ಧ ಹೋರಾಟ ಮಾಡೋರಲ್ಲೇ ಪರಸ್ಪರ ಹೋರಾಟ ಇದ್ಯಲ್ಲ. ಇದಕ್ಕೇನಂತೀಯ ನೀನು? ಇದು ಹೋರಾಟಗಳ ಬಗ್ಗೇನೇ ಅಪನಂಬಿಕೆ ಮೂಡ್ಸಲ್ವೆ?"

"ನಿಜ ಗೆಳೆಯ. ನೀನು ಹೇಳೋದು ನಿಜ. ಮೊದಲು 'ವ್ಯವಸ್ಥೆ' ಅಂದ್ರೆ ಏನು ಅನ್ನೋದನ್ನ ಹೋರಾಟಗಾರರು ಸ್ಪಷ್ಟ ಪಡಿಸ್ಕೊಳ್ಬೇಕು. ತಮಗೆ ಇಷ್ಟವಾಗದ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದ್ರೆ ಅದೇ 'ವ್ಯವಸ್ಥೆ' ಅಂದ್ಕೊಂಡ

ಬುದ್ಧಿವಂತ್ರೂ ನಮ್ಮಲ್ಲಿದಾರೆ. ನಾನ್ ಆಗ್ಲೇ ಹೇಳಿದ ಹಾಗೆ ಜನವಿರೋಧಿ ಸರ್ಕಾರವೂ ವ್ಯವಸ್ಥೆಯ ಒಂದು ಅಂಗ, ಅದೇ ಇಡೀ ವ್ಯವಸ್ಥೆ ಅಲ್ಲ; ಎಲ್ಲ ಜನ ವಿರೋಧಿ ಅಂಗಗಳು ಸೇರಿ 'ವ್ಯವಸ್ಥೆ' ಆಗುತ್ತೆ ಅನ್ನೋ ಅರ್ಥ ಅನೇಕರಿಗೆ ಗೊತ್ತಿಲ್ಲ–ಗೊತ್ತಿದ್ರೂ ಕೆಲವರಿಗೆ ಬೇಕಾಗಿಲ್ಲ. ಇನ್ನು ಹೋರಾಟಗಳ ನಡುವಿನ ಹೋರಾಟ ಇದ್ಯಲ್ಲ. ಒಂದಕ್ಕಿಂತ ಹೆಚ್ಚು ಪ್ರಗತಿಪರ ಸಿದ್ಧಾಂತಗಳು ಇರೋಕಡೆ ಹೀಗಾಗುತ್ತೆ. ಹಾಗಂತ ಸಮಾನ ಶತ್ರುವನ್ನ ಮರೆತು ಪ್ರಗತಿಪರ ಸಿದ್ಧಾಂತದವರು ದಾಯಾದಿ ಕಲಹದಲ್ಲಿ ತೊಡಗೋದು ಖಂಡಿತ ಸರಿಯಲ್ಲ. ಈ ದಾಯಾದಿ ಕಲಹ ಶತ್ರುವಿಗೆ ಸಹಕಾರಿ ಅಷ್ಟೇ ಅಲ್ಲ ಸಿದ್ಧಾಂತದ ಸೃಜನಶೀಲತೆ, ಪ್ರಗತಿಪರತೆ ಎರಡನ್ನೂ ಹಾಳ್ ಮಾಡುತ್ತೆ. ಹಾಳು ಮಾಡ್ತ ಬಂದಿದೆ."

"ಇದಕ್ಕೆ ಕೊನೇನೇ ಇಲ್ವೆ?"

"ಇವತ್ತಲ್ಲ ನಾಳೆ ಇರುತ್ತೆ. ಜನರೇ ಉತ್ತರ ಕೊಡ್ತಾ ಹೋಗ್ತಾರೆ. ಪ್ರಗತಿಪರರಲ್ಲೇ ಕೆಲವರನ್ನು ಕಡೆಗಣಿಸ್ತಾರೆ; ಕೆಲವರನ್ನ ಮುನ್ನಡುಸ್ತಾರೆ. ಉದಾಹರಣೆಗೆ ನೋಡು, ಸಂಭಾವಿತರು, ಹೋರಾಟಗಾರರು ಅನ್ನಿಸ್ಕೊಂಡು ಕೋಮುವಾದಿ ಶಕ್ತಿಗಳಿಗೆ ಪೂರಕವಾಗಿ ಕೆಲ್ಸ ಮಾಡೋ ಮುಖವಾಡದೋರ್ಗೆ ಜನರು ಸರಿಯಾದ ಜಾಗ ತೋರುಸ್ತಾ ಇದಾರೆ. ನಿಜವಾದ ಬದಲಾವಣೆಗೆ ಕಾಯಬೇಕಾಗುತ್ತೆ."

"ಕಾಯ್ತಾನೇ ಇದ್ರೆ ಕ್ರಾಂತಿ ಆಗುತ್ತಾ?"

"ಯಾವ ಕ್ರಾಂತೀನೂ ದಿಢೀರ್ ಅಂತ ಆಗಿಲ್ಲ ಗೆಳೆಯ. ಕ್ಷಿಪ್ರ ಕ್ರಾಂತಿಗಳೆಲ್ಲ ಅಧಿಕಾರ ಹಿಡ್ಯೋಕೆ ನಡೆದ ಮಿಲಿಟರಿ ಕ್ರಾಂತಿಗಳು. ಇಲ್ಲದಿದ್ರೆ 'ದಾಯಾದಿ ಕಲಹ'ದ ಕ್ರಾಂತಿಗಳು. ಹಾಗೆ ನೋಡಿದ್ರೆ ಅವು ಕ್ರಾಂತಿಗಳೇ ಅಲ್ಲ. ಇನ್ನೊಂದು ಮಾತು, ನಾನು ಕಾಯ್ಬೇಕು ಅಂದಾಗ ಒಳ್ಳೇ ದಿನ ಬರುತ್ತೆ ಅನ್ನೋ ಆಶಾವಾದವನ್ನು ಹೇಳ್ತಿದ್ದೀನಿ. ಕ್ರಿಯೆ ಇಲ್ದೆ ಕಾಯ್ಬೇಕು ಅಂತ ಹೇಳ್ತಿಲ್ಲ."

ನವಾಬ್ ಇನ್ನೇನೋ ಕೇಳಬೇಕು ಎಂದುಕೊಳ್ಳುವಲ್ಲಿ ದೂರದಲ್ಲಿ ಯಾರೊ ಬರುತ್ತಿರುವುದು ಅಸ್ಪಷ್ಟವಾಗಿ ಕಾಣಿಸಿತು. ಅಸ್ಪಷ್ಟವಾದ ಮಾತುಗಳು ಕೇಳಿಸಿದವು.

"ಯಾರೊ ಬರ್ತಾ ಇದ್ದಂಗಿದೆ. ಆದ್ರೂ ಒಂದು ಪ್ರಶ್ನೆ ಕೇಳ್ತೀನಿ. ನೀನು ಇವತ್ತು ಎಲ್ಲಾ ಹೇಳೊ ಮೂಡಲ್ಲಿದ್ದೀಯ, ಅದಕ್ಕೇ ಕೇಳ್ ಬಿಡ್ತೀನಿ. ಕ್ರಾಂತಿ ಅಂದ್ರೆ ಕೊಲೆ ಮಾಡ್ಲೇಬೇಕಾ?–" ಎಂದು ನವಾಬ ಆತುರದಲ್ಲೇ ಕೇಳಿದ.

ಸೂರ್ಯ ಫಕ್ಕನೆ ನಕ್ಕ. ಆಮೇಲೆ ಹೇಳಿದ–

"ಕ್ರಾಂತಿ ಕೊಲೆಪಾತಕವೂ ಅಲ್ಲ; ಭಯೋತ್ಪಾದಕವೂ ಅಲ್ಲ;

ಯುದ್ಧೋತ್ಪಾದಕವೂ ಅಲ್ಲ. ಕ್ರಾಂತಿ ಅನ್ನೋದು ಒಂದು ಕನಸು. ಈ ಕನಸನ್ನ ಕರ್ಮಠಗೊಳಿಸ್ಬಾರದು; ಜೀವಂತವಾಗಿಡ್ಬೇಕು. ಆಗ ಒಂದಲ್ಲ ಒಂದು ದಿನ ಕನಸು. ನನಸಾಗುತ್ತೆ..."

ಅಷ್ಟರಲ್ಲಿ ನವಾಬ "ಅವ್ರ್ ಯಾರೊ ಹತ್ರ ಬರ್‍ತಿದಾರೆ" ಅಂದ.

ಅಲ್ಲೀವರೆಗೆ ಬೌದ್ಧಿಕಾವೇಶಕ್ಕೆ ಒಳಗಾಗಿ ಮಾತನಾಡುತ್ತಿದ್ದ ಸೂರ್ಯ ದಿಟ್ಟಿಸಿ ನೊಡಿದ. ಹುಚ್ಚೀರ, ಸಣ್ಣೀರ, ತಿಮ್ಮರಾಯಿ ಬರುತ್ತಿರುವುದು ಕಾಣಿಸಿತು.

"ಒಂದು ಮಾತು ಕೊನೇದಾಗಿ ಹೇಳ್ತೀನಿ ಗೆಳೆಯ. ನಾನು ಹೇಳಿದ್ದೆಲ್ಲ ಸಿದ್ಧಾಂತದ ಮಾತುಗಳು, ತತ್ವಜ್ಞಾನದ ಮಾತುಗಳು; ನಿಜ. ಸಿದ್ಧಾಂತದ ಮಾತುಗಳು ಆಯಾ ಸಂದರ್ಭಗಳಲ್ಲಿ ಸ್ಪಷ್ಟವಾಗುತ್ತೆ; ಸ್ಫುಟವಾಗುತ್ವೆ. ಅನುಭವ ಇನ್ನಷ್ಟು ಕಲ್ಸುತ್ತೆ. ಆದ್ರಿಂದ ನಮ್ಮ ಸಿದ್ಧಾಂತಗಳು ಮಠವೂ ಆಗಬಾರದು; ಕರ್ಮಠವೂ ಆಗಬಾರದು."

ಸೂರ್ಯ ಇಷ್ಟು ಮಾತನಾಡುವ ವೇಳೆಗೆ ಹುಚ್ಚೀರ, ಸಣ್ಣೀರ, ತಿಮ್ಮರಾಯಿ ಮತ್ತೆ ಮೂರ್‍ನಾಲ್ಕು ಜನರು ಹತ್ತಿರ ಬಂದರು. "ಯಾರಪ್ಪೊ ಕತ್ಲಾಗ್ ನಿಂತ್ ಮಾತಾಡಾರು" ಎಂದ ಸಣ್ಣೀರ. ಸೂರ್ಯ "ನಾನು ಸಣ್ಣೀರ ನಾನು" ಎಂದಾಗ "ಓ ಸೂರ್ಯಪ್ಪ;...... ವೊತ್ತಾರೆ... ವೊತ್ತಾರೆ ಸಿಗ್ತೀವಿ..... ಬತ್ತೀವಿ.... ಕತ್ಲಾಗೆ ಕೆಟ್‌ವುಳಾ ಓಡಾಡ್ತವೆ, ಜ್ವಾಪಾನ ಕಣಪ್ಪೊ.... ಬತ್ತೀವಿ" ಎಂದು ಹೊರಟೇಬಿಟ್ಟ.

ಆತನ ಜೊತೆ ಇತರರೂ ಹೊರಟರು.

"ನಾವು ಹೋಗೋಣ ನಡಿ" ಎಂದ ಸೂರ್ಯ.

ನಡೆಯುತ್ತಿರುವಾಗ ಮತ್ತೆ ಮೌನ. ಇವತ್ತೇ ತನ್ನ ಕೊನೆಯ ದಿನವೇನೊ ಎಂಬಂತೆ ಮಾತನಾಡಿದೆ ಎನ್ನಿಸತೊಡಗಿತು. ಮಾತೆಲ್ಲ ಮುಗಿದ ಮೇಲೆ ಕಳವಳ ಕಾಡಿಸತೊಡಗಿತು.

"ಜಾಸ್ತಿ ಮಾತಾಡಿದ್ನ ಗೆಳೆಯ"– ನವಾಬನನ್ನು ಕೇಳಿದ.

"ಹಾಗೇನಿಲ್ಲ. ನನಗೂ ಇಷ್ಟು ಮಾತು ಬೇಕಾಗಿತ್ತು. ಇಲ್ದಿದ್ರೆ ಬದಲಾವಣೆ ಮತ್ತು ಭ್ರಮೆ ನಡುವಿನ ವ್ಯತ್ಯಾಸಾನೇ ಗೊತ್ತಾಗಲ್ಲ. ಬಾಯಿಪಾಠ ಮಾಡಿದ್ದನ್ನ ಹೇಳ್ತಾ ಹೇಳ್ತಾ 'ಮಂತ್ರ' ವಾದಿಗಳಾಗಬಾರ್‍ದಲ್ಲ ನಾವು" ಎಂದು ನವಾಬ ನಸುನಕ್ಕ.

"ಮಂತ್ರವಾದಿ!"– ಸೂರ್ಯ ಮೆಲುಕು ಹಾಕ್ತಾ "ಮಾತುಗಳನ್ನೆಲ್ಲ ಮಂತ್ರವಾಗ್ಸೊ ವಾದಿ "ಮಂತ್ರವಾದಿ' ಅಂದ್ರೆ ಉರು ಹೊಡೆದ ಮಂತ್ರ ಹೇಳೊ ಪುರೋಹಿತರ ಥರಅನ್ನು. ನಿಜ, ನಿಜ, ನಾವು ಎರಡು ರೀತೀನೂ ಮಂತ್ರವಾದಿ ಆಗಬಾರದು; ಮಂತ್ರದಂಡಾನೂ ಹಿಡೀಬಾರ್‍ದು; ಮಾತನ್ನೇ ಮಂತ್ರ ಮಾಡಬಾರ್‍ದು.

ಎಷ್ಟು ಚನ್ನಾಗ್ ಹೇಳ್ದೆ ಗೆಳೆಯ" ಎಂದು ಮೆಚ್ಚುಗೆ ಸೂಚಿಸಿದ. ಜೊತೆಗೆ "ಈ ಎರಡರಲ್ಲಿ ನಾನು ಯಾವುದು ಅಂತ ಈಗ್ಲೇ ಹೇಳಿಬಿಡು" ಎಂದು ನಸುನಗುತ್ತಾ ಕೇಳಿದ. "ಯಾಕೆಂದ್ರೆ ಕಲಿಯೋದು, ತಿದ್ದಿಕೊಳ್ಳೋದು ಯಾವಾಗ್ಲೂ ಇದ್ದೇ ಇರುತ್ತೆ. ಅಲ್ವಾ?"– ಎಂಬ ಸಹಜ ವಿನಯದ ಮಾತನ್ನು ಸೇರಿಸಿದ.

"ನೀನು ಎರಡು ಥರಾ ಮಂತ್ರವಾದೀನೂ ಅಲ್ಲ. ನಿನ್ನ ಮುಖಸ್ತುತೀಗ್ ನಾನ್ ಹೇಳ್ತಿಲ್ಲ. ನಾವು ವಿಮರ್ಶೆ – ಸ್ವವಿಮರ್ಶೆಗೆ ಬದ್ಧವಾಗಿರ್ಬೇಕು ಅನ್ನೋ ತಿಳುವಳಿಕೇಗೆ ಬದ್ಧವಾದೋರಲ್ವ? ನಿನ್ನನ್ನ ಏನಾದ್ರೂ ಕರೀಲೇಬೇಕು ಅಂದ್ರೆ ವಾಸ್ತವವಾದಿ ಅಂತೀನಿ; ಅದೂ ಹೋರಾಟಗಳ ನಡುವೆ ಇರೊ ವಾಸ್ತವವಾದಿ." –ನವಾಬ್ ನಿಖರವಾಗಿ ಹೇಳಿದ.

"ಒಟ್ನಲ್ಲಿ ನನ್ ಮಾತು ಮನುಷ್ಯನ್ ಮಾತಾಗಿತ್ತು ತಾನೆ?"

"ಅಪ್ಪಟ ಮನುಷ್ಯನ್ ಮಾತು. ಯಾಕ್ ಅನ್ಮಾನ ಗೆಳೆಯ?"

"ಒಂದೇ ಸಮ ಮಾತಾಡ್ದೆ. ಅದಕ್ಕೆ ಒಂದ್ಸಾರಿ ನನ್ನನ್ನ ನಾನು ನೋಡ್ಕೊಬೇಕಲ್ವ?"

"ನನ್ ಮುಖ ನೋಡು ಸೂರ್ಯ; ನನ್ ಮುಖದಲ್ಲಿ ನೀನ್ ಕಾಣುಸ್ತೀಯ. ಅಷ್ಟು ಸಾಕು ಅಲ್ವ?"

ಗೆಳೆಯ ನವಾಬನ ಮಾತಿನಿಂದ ಸೂರ್ಯನಿಗೆ ಸಮಾಧಾನವಾಯಿತು.

ಇಬ್ಬರೂ ಮೌನದಲ್ಲೇ ನಡೆದರು. ಹಟ್ಟಿ ಹತ್ತಿರಕ್ಕೆ ಬಂದಾಗ ನವಾಬ್ ಹೇಳಿದ– "ಜಾಸ್ತಿ ಮಾತಾಡ್ತೀಯ ಅಂದ್ಕೊಂಡು ಸುಮ್ನೆ ಇರಬೇಡ ಸೂರ್ಯ. ಆಗಾಗ್ಗೆ ನಿನ್ನ ವಿಚಾರ ನನಗೆ ಹೇಳ್ತಾ ಇರ್ಬೇಕು. ನಾನೂ ಬೆಳೀತೀನಿ"

"ಇಬ್ಬರೂ ಬೆಳೀತೀವಿ"

ಸೂರ್ಯ ಸೌಜನ್ಯದ ಮಾತಷ್ಟೇ ಅಲ್ಲ, ಸತ್ಯವನ್ನೇ ಹೇಳಿದ್ದ.

ಹಟ್ಟಿಯಲ್ಲಿ ಶಬರಿ ಕಾಯುತ್ತಾ ನಿಂತಿದ್ದಳು. ಅವಳಲ್ಲಿ ಆತಂಕವಿತ್ತು.

"ಈಟೊತ್ ಎಲ್ಲೋಗಿದ್ರಿ? ಮದ್ಲೇ ಕತ್ಲು, ವುಳ ವುಪ್ಪಟೆ ಓಡಾಡ್ತ ಇರ್ತಾವೆ. ನಂಗಂತೂ ಕುಂತ್ಕಡೆ ಕುಂತ್ಕಮಾಕಾಗ್ಲಿಲ್ಲ. ಅಪ್ಪಯ್ಯ ಬಂದ್ ಯೇಳ್ದಿದ್ರೆ ನಾನೇ ವುಡಿಕ್ಕಂಡ್ ಬರ್ತಾ ಇದ್ದೆ"– ಶಬರಿ ಗಾಬರಿಯಿಂದ ಮಾತಾಡಿದಳು.

ಸೂರ್ಯ ಏನೂ ಮಾತಾಡಲಿಲ್ಲ. ಆದ್ದರಿಂದ ನವಾಬನೂ ಸುಮ್ಮನಿದ್ದ.

ಶಬರಿ ಒಳಹೋದಳು. ಇಬ್ಬರೂ ಹಿಂಬಾಲಿಸಿದರು. ತಿಮ್ಮರಾಯಿ ಆಗಲೇ ಉಣ್ಣುತ್ತಾ ಕೂತಿದ್ದ. ಇವರನ್ನು ನೋಡಿ ನಕ್ಕು ತಲೆ ತಗ್ಗಿಸಿ ಮುದ್ದೆ ಉಣ್ಣತೊಡಗಿದ.

"ನಿಮ್ಗೂ ಉಂಬಾಕಿಕ್ತೀನಿ. ಕುಂತ್ಕಳ್ಳಿ" ಎಂದಳು ಶಬರಿ.

ಇಬ್ಬರೂ ಮೌನವಾಗಿ ಊಟ ಮಾಡಿದರು. ಆನಂತರ ನವಾಬನನ್ನು ಹುಚ್ಚೀರನ ಮನೆಗೆ ಬಿಡಬೇಕಾಗಿತ್ತು. ಆದರೆ ಸೂರ್ಯ "ಇವತ್ತಿಲ್ಲೇ ಮಲಗು. ನಾಳೆ ಅಲ್ಲಿಗೆ ಹೋದ್ರಾಯ್ತು" ಎಂದ. ಶಬರಿಯೂ ಅದನ್ನೇ ಹೇಳಿದಳು. ನವಾಬ "ಪರ್ವಾಗಿಲ್ಲ; ಹುಚ್ಚೀರನ ಗುಡಿಸ್ಲೀಗೆ ಹೋಗ್ತೀನಿ" ಎಂದು ಹೊರಟ.

ಸೂರ್ಯನ ಮನಸ್ಸು ಭಾರವಾಗಿತ್ತು.

ಹೋರಾಟಗಳು; ಆರೋಪಗಳು; ನಿರೀಕ್ಷೆಗಳು; ನಿರಾಶೆಗಳು–ಎಲ್ಲಾ ಒಟ್ಟಿಗೆ ಸೇರಿದ ನೆನಪುಗಳು. ಒಳಗೆ ಜಗ್ಗಿಸುವ ಭಾವಗಳು.

ಗೆಳೆಯನ ಜೊತೆ ಇಷ್ಟು ಹೊತ್ತು ಆಡಿದ ಗಂಭೀರ ಮಾತುಗಳು ಮೌನವನ್ನು ಬಯಸುವಂತೆ ಮಾಡಿದ್ದವು.

ಮಾತಿನ ನಂತರದ ಮೌನದಲ್ಲಿ,
ಮೌನದೊಳಗೆ ಬಂದು ಸೇರುವ ಮಾತು.
ಆಡಿದ ಮಾತು ಮೌನದಲ್ಲಿ ಮಲಗಬೇಕು.
ಮತ್ತೆ ಎಚ್ಚರಗೊಂಡು ಬೆಳಕಾಗಬೇಕು.

ಎಷ್ಟು ಹೊತ್ತಾದರೂ ನಿದ್ದೆ ಬಾರದೆ ಎದ್ದು ಕೂತ. ಸಣ್ಣ ಸೂಟ್‌ಕೇಸಿನ ಜಿಪ್ ತೆಗೆದು ಏನೋ ಹುಡುಕಿದ. ಆನಂತರ ಬಗಲು ಚೀಲ ತೆಗೆದುಕೊಂಡ. ಕೈ ಹಾಕಿದ; ತಡಕಿದ.

ಅಷ್ಟರಲ್ಲಿ ಶಬರಿ ಬಂದಳು. ಗಡಿಬಿಡಿಯಿಂದ ಚೀಲವನ್ನು ಪಕ್ಕಕ್ಕೆ ಇಟ್ಟು "ಬಾ ಬಾ ಇದೇನು ಇಷ್ಟು ಹೊತ್ನಲ್ಲಿ?" ಎಂದು ಕೇಳಿದ.

"ನಿಂದೊಳ್ಳೆ ಮಾತಾತಲ್ಲ; ಗುಬ್ಬಚ್ಚಿ ಅದ್ರ ಗೂಡ್ನಾಗ್ ಅಡ್ಡಾಡಾಕೆ ವೊತ್ತು ಗೊತ್ತು ಇರ್‍ತೈತಾ? ಇದು ನನ್ ಮನೆ" ಎಂದು ಗಡುಸಾಗಿ ಹೇಳಿದಳು.

"ಅದು ಗೊತ್ತು ಮಾರಾಯ್ತಿ. ಇದು ನಿನ್ ಮನೆ. ನಾನ್ ನಿನ್ ಮನೇಲಿರೊ ಒಬ್ಬ ದಾರಿಹೋಕ. ಇರು ಅಂದ್ರೆ ಇರ್ಬೇಕು, ಹೋಗು ಅಂದ್ರೆ ಹೋಗ್ಬೇಕು. ಸರೀನಾ?"– ಸೂರ್ಯ ತಮಾಷೆಯ ದಾಟಿಯಲ್ಲಿ ಮಾತನಾಡಿದ.

ಆದರೆ ಶಬರಿ ಈ ಮಾತುಗಳನ್ನು ತಮಾಷೆಯಾಗಿ ಸ್ವೀಕರಿಸಲಿಲ್ಲ ಸೂರ್ಯನಿಗೆ "ಇದು ನನ್ನ ಮನೆ" ಎಂದು ಹೇಳಿದ್ದರಿಂದ ನೋವಾಗಿದ್ದು ಅದಕ್ಕಾಗಿ ಆತ ಹೀಗೆ ಹೇಳುತ್ತಿದ್ದಾನೆಂದು ಗ್ರಹಿಸಿದ್ದಳು.

"ತೆಪ್ ತಿಳ್ಕಬ್ಯಾಡ. ನೀನು ನನ್ನೊಬ್ಬಳನ್ನೇ ಬಿಟ್ಟು ಆಟೋತ್ತೆಲ್ಲೊ ವೋಗ್ ಬಿಟ್ಟಿದ್ದೆ ನೋಡು ಆ ನವಾಬಣ್ಣನ್ ಜತ್ಯಾಗೆ. ಅದ್ಕೆ ಬ್ಯಾಸ್ರ ಬಂದಿತ್ತು. ಗಡಸಾಗಂದೆ. ತೆಪ್ಪಾತು" ಎಂದು ನೋವಿನಿಂದ ನುಡಿದಳು.

"ನಾನ್ಯಾಕ್ ತಪ್ ತಿಳ್ಕೊಳ್ಳಾನ? ನವಾಬನ ಜೊತೆ ಏನೋ ಮಾತಾಡೋದಿತ್ತು ಅದಕ್ಕೇಂತ ಕರ್ಕಂಡೋಗಿದ್ದೆ"–

"ಇಲ್ಲೇ ಮಾತಾಡಕಾಯ್ತಿರ್ಲಿಲ್ವ? ನಾನೇನ್ ಬ್ಯಾರೇಳ?"

"ಹಾಗಲ್ಲ ಶಬರಿ. ನಾವೇನೊ ಮಾತಾಡ್ತ ಕುಂತು ನಿನ್ ಕೆಲ್ಸ ಕೆಡ್ಸೋದ್ ಯಾಕೇಂತ...."

"ಅದೇನೋ ಯೇಳ್ತಾರಲ್ಲ, ಕಳ್ಳಂಗೊಂದ್ ಪುಳ್ಳೆ ನೆವ ಅಂಬ್ತ, ಅಂಗಾತು ನೋಡು ಮತ್ತೆ."

"ಈಗಾಗಿದ್ದಾಗೋತು; ಬೇಸರ ಮಾಡ್ಕೋಬೇಡ ಕೂತ್ಕೊ."

ಶಬರಿ ಕೂತಳು. ಬಗಲು ಚೀಲದ ಕಡೆಗೇ ನೋಡುತ್ತಾ ಕೇಳಿದಳು.

"ಆ ಚೀಲ್ದಾಗೇನೈತೆ?"

"ಅದ್ರಾಗೆ...ಅದ್ರಾಗೆ..... ಯಾಕಂಗ್ ಕೇಳ್ತಿದ್ದೀಯ?'– ಸೂರ್ಯ–ಈಕೆಗೆ ಬೇಡದ ಕುತೂಹಲ ಯಾಕೆ ಎಂಬಂತೆ ಕೇಳಿದ.

"ಯಾಕೆ ಅಂದ್ರೆ? ಸುಮ್ಕೆ ಕೇಳಿದ್ನಪ್ಪ. ಅದ್ರಾಗೇನೊ ತಾತನ ಆಸ್ತಿ ಐತೆ ಅನ್ನಾ ತರಾ ಯಾವಾಗ್ಲೂ ನೇತಾಡಿಸ್ಕಂಡೇ ವೋಗ್ತೀಯಲ್ಲ ಅದಕ್ಕೇ ಕೇಳ್ದೆ. ಯೇಳಂಗಿದ್ರೆ ಯೇಳು ಬಿಡಂಗಿದ್ರೆ ಬಿಡು, ನಂದೇನ್ ವೋಗ್ತೈತೆ ಗಂಟು!"

"ಅರೆ! ಸಣ್ಣ ಸಣ್ಣದ್ದಕ್ಕೆಲ್ಲ ಸಿಡುಕಿದ್ರೆ ಹೇಗೆ?.... ಅದಿರ್ಲಿ. ಶಾಲೆ ಚನ್ನಾಗ್ ಶುರುವಾಯ್ತು ಅಲ್ವ?"– ಮಾತು ಬದಲಿಸಿದ ಸೂರ್ಯ.

"ಹ್ಞೂ ಮತ್ತೆ, ಒಡತಿ–ಅದೇ ಸಾವಿತ್ರಕ್ಕ, ನನ್ನೇ ಕರ್ದು ಅಕ್ಸರ ಬರಿಸ್ದಾಗ ಯೇಟಂದ್ ಆನಂದ ಆತು ಗೊತ್ತಾ?"– ಶಬರಿ ಸಂಭ್ರಮಿಸಿದಳು.

"ನನಗೂ ಅಷ್ಟೆ. ಬೇಗ ಎಲ್ರೂ ಓದು ಬರಹ ಕಲೀಬೇಕು. ಓದು ಬರಹ ಕಲೀತಾನೆ ಮಾಡೋ ಕೆಲ್ಸ ಬೇಕಾದಷ್ಟಿದೆ."

"ಅಂಗಂಬ್ತೀಯ? ಅಂಗಾರೆ ನಮ್ ಕೆಲ್ಸ ಇಲ್ಲೇ ನಿಲ್ಲಾಕಿಲ್ಲ?"

"ಇದು ಆರಂಭ. ಇದು ನಿಲ್ಲೊ ಕೆಲ್ಸ ಅಲ್ಲ; ನಡ್ಯೋ ಕೆಲ್ಸ."

"ನಾನು ಅ ಆ ಅಂಬ್ತ ಬೋರ್ಡ್ ಮ್ಯಾಲ್ ಬರುದ್ ಮ್ಯಾಲೆ ಎಲ್ಲಾ ವೊಸಾ ತರಾ ಕಾಣಸ್ತಾ ಐತೆ. ಒಳ್ಳೇ ಕೆಲ್ಸ ಏನ್ ಬೇಕಾರೂ ಮಾಡಾನ."

"ಅದಪ್ಪ ಮಾತು ಅಂದ್ರೆ"– ಸೂರ್ಯ ಶಭಾಷ್‌ಗಿರಿ ನೀಡಿದ.

"ಅದೆಲ್ಲ ನಂಗೇನು ಉಬ್ಬುಸ್ ಬ್ಯಾಡ; ಮದ್ಲು ನಿನ್ ಅಂಗೈ ಎಂಗೈತೆ ತೋರ್ಸು" ಎಂದಳು ಶಬರಿ.

"ನೋಡು ಎರಡೇ ದಿನಕ್ ವಾಸಿ ಆಗಿದೆ" ಎಂದು ಸೂರ್ಯ ಅಂಗೈ ತೋರಿಸಿದ.

ಶಬರಿ ನೋಡಿದಳು. ಸವರಿದಳು. ಸೂರ್ಯನಿಗೆ ಆಕೆಯ ಮುಗ್ಧಪ್ರೀತಿ ಕೈಮುಖಾಂತರ ನರದೊಳಗೆ ಸೇರಿ ಸರಸರ ಹರಿದಂತಾಯಿತು.

ಮಾತಿಗೆ ತಡಕಾಡಿದರೂ ಸಿಗದ ಪದಗಳು.
ಹನಿಬಿದ್ದ ಕೊಳದಲ್ಲಿ ಉಂಗುರುಂಗುರ ಅಲೆಗಳು.
ಆಕಾರ ಪಡೆಯುತ್ತಲೇ ಅಳಿಯುವ ಭಾವಗಳು.
ಭಾವಕ್ಕೆ ಸಿಗದ ಭಾಷೆ.

ಕಡೆಗೆ ಶಬರಿಯೇ ಮಾತಾಡಿದಳು.
"ನಿನ್ನೇನೊ ಒಂದು ಕೇಳಾನ ಅಂಬ್ತ ಇವ್ನಿ."
ಸೂರ್ಯ ಅಪರೂಪಕ್ಕೆ ಉದ್ವಿಗ್ನಗೊಂಡ.
"ಏನು? ಏನದು?" ಎಂದ.

"ಏನಿಲ್ಲ; ನಿನ್ತಾವ ಚಂದ್ರ–ನೀನೂ ಇಬ್ರೂ ಇರಾ ಪಟ ಐತಲ್ಲ, ಒಸಿ ಕೊಡ್ತೀಯ ನಂಗೆ."

"ಅಷ್ಟೇನಾ" ನಿರೀಕ್ಷಿಸಿದ್ದು ಕೇಳದೆ ನಿರಾಳವಾದಂತೆ ಪ್ರತಿಕ್ರಿಯಿಸಿದ ಸೂರ್ಯ "ಕೊಟ್ಟೆ ಇರು" ಎಂದು ಬಗಲುಚೀಲಕ್ಕೆ ಕೈಹಾಕಿ ನೋಡಿ ಹೊರ ತೆಗೆದ ಫೋಟೊವನ್ನು ಶಬರಿಯ ಕೈಗೆ ಕೊಟ್ಟ.

ಫೋಟೋ ನೋಡುತ್ತ ಕೂತ ಶಬರಿಯ ಮುಖದಲ್ಲಿ ಅಲೆಗಳು.
ಅರೆಬರೆ ಹರಡಿದ ದೀಪದ ಬೆಳಕು.
ಕಪ್ಪು ದೀಪಕ್ಕೆ ಬೆಳಕಿನ ಬಾಣ.
ಎಲ್ಲಿಂದ ಹೊರಟಿತೊ ಎಲ್ಲಿ ಸೇರಿವುದೊ!
ಇದ್ದಲ್ಲೆ ಇರುವುದೊ ಸುತ್ತೆಲ್ಲ ಸುಡುವುದೊ!

ಶಬರಿಯ ಮುಖದಲ್ಲಿ ಕತ್ತಲೆ ಬೆಳಕಿನಾಟ.
ಗಾಳಿಗೆ ತುಯ್ದಾಡುವ ಬಿರುಸಿನ ಬಾಣ.

ಕಡೆಗೆ ಸೂರ್ಯನೇ ಕೇಳಿದ–"ಯಾಕ್ ಸುಮ್ನೆ ನೋಡ್ತಾ ಕೂತೆ? ಅದು ನಿನಿಗ್ ಬೇಕಾ?"

ಶಬರಿ ಸೂರ್ಯನ ಮುಖ ನೋಡಿದಳು. ಒತ್ತಿ ಬರುವ ಭಾವನೆಗಳನ್ನು ಒಳಗೆ ಹತ್ತಿಕ್ಕುವಂತೆ ಉಗುಳು ನುಂಗಿಕೊಂಡಳು. ಗಂಟಲು ಅಲುಗಿತು. ಸೂರ್ಯ ಚಂದ್ರರಿದ್ದ ಭಾವಚಿತ್ರವನ್ನು ಎರಡಾಗಿ ಹರಿದಳು.

ಸೂರ್ಯ ಬೇರೆ; ಚಂದ್ರ ಬೇರೆ!

ಸೂರ್ಯ "ಅರೆ! ಏನ್ ಮಾಡ್ದೆ. ಅದಿರೋದ್ ಒಂದೇ ಫೋಟೊ" ಎಂದ ಗಾಬರಿಯಿಂದ.

"ಈಗ ಎಲ್ಡಾಯ್ತಲ್ಲ ತಗಾ", ಎಂದಳು ಸೂರ್ಯನಿದ್ದ ಫೋಟೊ ಭಾಗವನ್ನು ನೆಲದ ಮೇಲಿಟ್ಟು"ಅದು ನಿಂಗೆ" ಎಂದು ಹೇಳಿ ಚಂದ್ರನಿದ್ದ ಫೋಟೊ ಭಾಗವನ್ನು ತನ್ನಲ್ಲಿಟ್ಟುಕೊಂಡು "ಇದು ನಂಗೆ" ಎಂದು ಹೊರಟೇಹೋದಳು.

ಸೂರ್ಯ ಬೆಪ್ಪಾದ. ಆಕೆ ಹರಿದದ್ದು ಯಾಕೆ? ಅರ್ಥವಾಗಲಿಲ್ಲ.
ತನ್ನ ಭಾವಚಿತ್ರವನ್ನು ತಾನೇ ನೋಡುತ್ತ ಕೂತ!
ಹರಿದಾಡಿದ ಭಾವನೆಗಳನ್ನು ಹರಿಯಲಾಯಿತೆ?

# ೮

ರಾತ್ರಿ ಶಾಲೆ ಚೆನ್ನಾಗಿಯೇ ನಡೆಯತೊಡಗಿತು. ಶಬರಿಯ ನೇತೃತ್ವದಲ್ಲಿ ಹೆಂಗಸರು ಹೆಚ್ಚಾಗಿಯೇ ಬರುತ್ತಿದ್ದರು; ಸಣ್ಣೀರ, ಹುಚ್ಚೀರ ಸೇರಿ ಗಂಡಸರನ್ನೂ ಕರೆತರುತ್ತಿದ್ದರು. ನವಾಬನನ್ನು ಎಲ್ಲರೂ "ನವಾಬಣ್ಣ' ಎನ್ನುವುದಕ್ಕೆ ಆರಂಭಿಸಿದರು. ಸೂರ್ಯ ಕೆಲಸವಿದೆಯೆಂದು ಹಟ್ಟಿ ಬಿಟ್ಟು ಹೋಗುವುದೂ ಬರುವುದೂ ಜಾಸ್ತಿಯಾದಾಗ ನವಾಬನೇ ಎಲ್ಲ ಜವಾಬ್ದಾರಿಯನ್ನೂ ನಿರ್ವಹಿಸುತ್ತಿದ್ದ. ಹೀಗಾಗಿ ಸಲಿಗೆ ಜಾಸ್ತಿಯಾಗಿತ್ತು. ಸೂರ್ಯನ ಬಗ್ಗೆ ಗೌರವ ಜಾಸ್ತಿಯಿತ್ತು. ಸೂರ್ಯನ ಜೊತೆಗೆ ನವಾಬನೂ ಸೇರಿ ಕೆಲವು ಹಾಡುಗಳನ್ನು ಹೇಳಿಕೊಡುತ್ತಿದ್ದರು. ಹಾಡುಗಳು ಭೂಮಿ, ನೀರು, ಬೆಟ್ಟ, ಗುಡ್ಡ, ಮರ, ಗಿಡಗಳ ಮಹತ್ವದಿಂದ ಆರಂಭವಾಗಿ ಬುಡಕಟ್ಟು ಜನರ ಹಕ್ಕು ಮತ್ತು ಹೋರಾಟಗಳತ್ತ ಹೊರಳಿದ್ದವು.

ಶಬರಿಗೆ ಭೂಮಿ ಮೇಲಿನ ಹಾಡುಗಳೆಂದರೆ ತುಂಬಾ ಇಷ್ಟ. ಈ ಭೂಮಿಯನ್ನು ಕಂಡರೆ ಅವಳಲ್ಲಿ ಅದಮ್ಯ ಭಾವುಕತೆ. ಒಡೆಯರ ಹೊಲದ ಕೆಲಸಕ್ಕೆ ಹೋಗುವಾಗ ಆಕೆ ತೋರುವ ಉತ್ಸಾಹ ನೋಡಿ ಸೂರ್ಯನಿಗೆ ಅಚ್ಚರಿಯಾಗಿತ್ತು.

ಒಮ್ಮೆ ಸೂರ್ಯ ಕೇಳಿದ–

"ಶಬರಿ, ಆ ಒಡೆಯರ ಭೂಮೀಲ್ ಕೆಲ್ಸ ಮಾಡೋಕೆ ನಿನಗ್ಯಾಕೆ ಅಷ್ಟು ಉತ್ಸಾಹ?"

"ಬೂಮ್‌ತಾಯಿ ನಮ್ತಾವಿಲ್ವಲ್ಲ ಅದುಕ್ಕೆ"– ಶಬರಿ ಥಟ್ಟನೆ ಉತ್ತರಿಸಿದಳು.

"ಹಾಗಂತ ಕಂಡೋರ ಭೂಮಿಗೆ ಬೆವರು ಹರಿಸಿ ಅವರ ಸಂಪತ್ತನ್ನ ಹೆಚ್ಚುಸ್ಬೇಕಾ?"

"ಅದೆಲ್ಲ ನಂಗೊತ್ತಿಲ್ಲಪ್ಪ. ಈ ಬೂಮ್‌ತಾಯಿ ಏಟೊಂದ್ ದೊಡ್ಡೋಳು ಗೊತ್ತಾ? ನಮ್ಮನ್ನೆಲ್ಲ ವೊತ್ಕಂಡವ್ಳೆ. ಬೆಟ್ಟ ಗುಡ್ಡ, ಮನೆ ಮಠ ಎಲ್ಲಾ ವೊತ್ಕೊಂಡು ನಮ್ಮನ್ನ ಪಾತಾಳಕ್ ವೋಗ್ದಂಗೆ ತಡದವ್ಳೆ. ಇಂತಾ ಬೂಮ್‌ತಾಯೀಗೆ ನಾವು ಬೆವರು ಬಸುದ್ರೆ ಅದೇ ಪೂಜೆ ಮಾಡ್ದಂಗಲ್ವ? ಅವ್ಳನ್ನ ಹಸನ್ ಮಾಡಾದು, ಸಸಿ ನೆಡಾದು, ಕಳೆ ತಗ್ಯಾದು ಎಲ್ಲಾ ಮಾಡಿ ಚಂದಾಗಿಡ್ಬೇಕು ಅಲ್ವ?"– ಶಬರಿ

ತನ್ನದೇ ರೀತಿಯಲ್ಲಿ ಭಾವನೆಗಳನ್ನು ನಿರೂಪಿಸಿದಳು.

"ಅದೆಲ್ಲ ಸರಿ ಶಬರಿ. ಭೂಮಿ ಎಲ್ಲದಕ್ಕೂ ದೊಡ್ಡದು ಅಂತ್ಲೇ ಇಟ್ಕೊಳ್ಳೋಣ. ನಾವು ಹುಟ್ಟೋದು ಭೂಮಿ ಮೇಲೆ, ಬದುಕೋದು ಭೂಮಿ ಮೇಲೆ, ಸಾಯೋದು ಭೂಮಿ ಮೇಲೆ. ಈ ಭೂಮೀಲಿ ನಮ್ ಬೆವರು ಸೇರಿದೆ. ಈ ಬೆವರು ಮನೆ ಕಟ್ಟಿದೆ; ಹೊಲ ಉತ್ತಿದೆ; ಕೆರೆ, ಕುಂಟೆ ಎಲ್ಲಾ ಮಾಡಿದೆ. ಅದ್ರೆ ನಿಮ್ ಒಡೆಯರಿಗೆ ಇರೊ ಮನೆ, ಭೂಮಿ, ನಿಮಗ್ಯಾಕ್ ಇಲ್ಲ?"–ಸೂರ್ಯ ವಿಷಯಕ್ಕೆ ಬಂದ.

"ನಂಗೊತ್ತಿಲ್ಲ. ಅದಕ್ಕೆ ನಾನ್ಯಾಕ್ ತಲೆ ಕೆಡಿಸ್ಕಮಾನ? ಅವ್ರಿಗೆ ಬೂಮ್‌ತಾಯಿ ಒಲ್ದವ್ಳೆ. ಅಲ್ಲೇ ವೋಗ್ ಪೂಜೆ ಅಂದ್ಕಂಡ್ ಕೆಲ್ಸ ಮಾಡ್ತೀನಿ."

"ಅದೇ ಭೂಮಿತಾಯೀನ ನೀನು ಯಾಕ್ ಒಲಿಸ್ಕೊಬಾರದು?"

"ಅದೆಂಗಾಯ್ತದೆ ಯೇಳು? ನಮ್ಗೆ ಆಟಂದ್ ಪುಣ್ಣೇವೆಲ್ ಐತೆ?"

"ಪಾಪ–ಪುಣ್ಯ ಅಂತ ಆಕಾಶ ತೋರ್‍ಸಿ ನಿಮ್ಮಿಂದ ಭೂಮಿ ಕಸ್ಕಂಡಿದಾರೆ ಈ ಭೂಮಾಲೀಕ್ರು. ನೀವು ನಿಜವಾದ ಭೂಮಿತಾಯಿ ಮಕ್ಕಳು. ಅವರು ಮಾಲೀಕ್ರು; ಮಕ್ಕಳಲ್ಲ. ಮಾಲೀಕರಿಂದ ಮಕ್ಕಳು ಭೂಮಿತಾಯೀನ ಬಿಡುಗಡೆ ಮಾಡುಸ್ಬೇಕು."

"ಅದೆಲ್ಲ ಎಂಗಾಯ್ತದೆ ಸೂರ್ಯ. ನಾವ್ ಪಡ್ಕಂಡ್ ಬಂದಿದ್ದು ಈಟೇ ಅಂಬ್ತ ಬೆವರು ಬಸ್ದು ಬಾಳ್ವೇವ್ ಮಾಡ್ತೀವಿ. ಆಟೇಯ"

"ಇದೇ ತಪ್ಪು. ಆಗ ಚಂದ್ರ ಸತ್ತಾಗ್ಲು ಅಷ್ಟೆ. ಯಾಕ್ ಸತ್ತ ಏನ್ಕತೆ ಅಂತ ಯಾರೂ ಯೋಚಿಸ್ಲಿಲ್ಲ. ಅವ್ರ್ ಹೇಳಿದ್ರು; ನೀವ್ ನಂಬಿದ್ರಿ. ನಿಮ್ ನಂಬಿಕೇನ ಅವ್ರು ಬಳಸ್ಕೊಂಡು ಬದುಕ್ತಾ ಇದಾರೆ."

ಚಂದ್ರನ ವಿಷಯ ಪ್ರಸ್ತಾಪವಾದ್ದರಿಂದ ಶಬರಿಗೆ ತಕ್ಷಣ ಮಾತು ಹೊರಡಲಿಲ್ಲ.

"ಯಾಕೆ ಬೇಜಾರಾಯ್ತು?"– ಸೂರ್ಯ ಕೇಳಿದ.

"ಚಂದ್ರನ್ ಕಳ್ಕಂಡೋಳ್ಗೆ ಸಂತೋಷ ಆಗಿರ್‍ತೈತಾ?"–ಶಬರಿಯ ತೀಕ್ಷ್ಣ ಮಾತು.

ಸೂರ್ಯ ಬೆಚ್ಚಿದ. "ಹಾಗಲ್ಲ ಶಬರಿ......"

"ಚಂದ್ರ ಸತ್ತಿದ್ರಾಗೆ ಏನೋ ಐತೆ ಅಂಬ್ತ ನಂಗೂ ಒಂದೊಂದ್ ಕಿತ ಅನ್ನುಸ್ತೈತೆ. ಆದ್ರೆ ಏನೂ ಅಂಬ್ತ ಎಂಗೇಳಾದು. ಆವತ್ತು...... ಏನೇನೊ ಆಗೋಯ್ತು...... ಯಾರೋ ಬಂದಂಗೆ, ಬಿದ್ದಂಗೆ... ಈ ದ್ಯಾವ್ರ್ ಸವಾಸ ಬ್ಯಾಡ ಅಂಬ್ತ ವೋಡೋಡ್ ಬಂದೆ....."

ಶಬರಿಗೆ ನೆನಪುಕ್ಕಿ ಬಂದಂತೆ ಭೋರ್ಗರೆವ ಭಾಗ.

ಜಲಪಾತಕ್ಕೆ ಬಿದ್ದ ಮಾತು.

ಮತ್ತೆ ಮೇಲೇಳುವ ಸಾಹಸ ಸಂಘರ್ಷ.
ಜಲಪಾತದ ವೇಗೋತ್ಕರ್ಷಕ್ಕೆ ಹುಟ್ಟಿದ ವಿದ್ಯುತ್ತು.
ತಂತಿ ಮುಟ್ಟಿದ ತಂತು. ನಡುಗಿದ ನುಡಿಗುಂಪು.

ಶಬರಿ ತತ್ತರಿಸಿದಳು. ಒತ್ತಿ ಬಂದ ದುಃಖದಲ್ಲಿ ಹೊರಟುಹೋದಳು.

ಸೂರ್ಯ ತನ್ನ ಬಗ್ಗೆಯೇ ಬೇಸರಿಸಿಕೊಂಡ. ಭೂಮಿಯ ಬಗ್ಗೆ ಮಾತು ನಡೆಯುವಾಗ ಚಂದ್ರನ ವಿಷಯ ತೆಗೆದು ತಪ್ಪು ಮಾಡಿದೆ ಎಂದುಕೊಂಡ. ಮತ್ತೆ ಸಮಯ ನೋಡಿ ಸಜ್ಜುಗೊಳಿಸಬೇಕು. ಸೂಕ್ತ ತಿಳುವಳಿಕೆ ನೀಡಿ ಸರಿದಾರಿಗೆ ಹಚ್ಚಬೇಕು. "ಈ ಭೂಮಿ ನಮ್ಮದು" ಎಂದು ಇವರೆಲ್ಲ ಸೆಟೆದು ನಿಲ್ಲಬೇಕು– ಹೀಗೆಲ್ಲ ಯೋಚಿಸುತ್ತ ಮತ್ತೆ ಚಂದ್ರನ ವಿಷಯದ ನೆನಪು ಕಾಡಿತು.

ಸೂರ್ಯ ಹುಚ್ಚೀರನ ಬಳಿಗೆ ಹೋದ. ಆತನನ್ನು ಕರೆದುಕೊಂಡು ಬೆಟ್ಟದ ಬಳಿಗೆ ಬಂದ. ಚಂದ್ರನ ವಿಷಯ ಕೇಳಿದ.

"ಚಂದ್ರ ಸತ್ತ ದಿನ ನೀನೂ ಗುಡಿ ಹತ್ರ ಹೋಗಿದ್ದೆ ಅಂತ ಹೇಳ್ತಾರೆ. ನೀನು ಅಲ್ಲಿ ಏನ್ ನೋಡ್ದೆ ಹೇಳ್ತೀಯ" ಎಂದು ಕೇಳಿದ. ಹುಚ್ಚೀರನಿಗೆ ತನ್ನ ಮಾತಿನ ಅಂತರಾರ್ಥವನ್ನು ಸರಿಯಾಗಿ ಮನವರಿಕೆ ಮಾಡಿಕೊಟ್ಟ.

ಹುಚ್ಚೀರ ಇದ್ದಕ್ಕಿದ್ದಂತೆ ಅಳತೊಡಗಿದ. ನೆನಪುಗಳಲ್ಲಿ ನಡುಗಿದ. ಕಡೆಗೆ ಸೂರ್ಯನ ಸಾಂತ್ವನದಿಂದ ಸಹಜಸ್ಥಿತಿಗೆ ಬಂದ.

ತಾನು ದೇವಸ್ಥಾನದ ಒಳಗೆ ನೋಡಿದ್ದನ್ನು ಸಂಜ್ಞೆಗಳಲ್ಲಿ ವಿವರಿಸಲು ಪ್ರಯತ್ನ ಮಾಡಿದ. ಮೊದಲೆ ಭಯ; ಜೊತೆಗೆ ಶಾರೀರಿಕ ಸಂಜ್ಞೆಗಳಲ್ಲಿ ಸರಿಯಾಗಿ ಸ್ಪಷ್ಟಪಡಿಸಲಾಗದ ಗೊಂದಲ. ಸೂರ್ಯನಿಗೆ ಪೂರ್ಣ ಅರ್ಥವಾಗಲಿಲ್ಲ. ನಿರಾಶೆಯಾದರೂ ತೋರಗೊಡದೆ ಹುಚ್ಚೀರನ ಜೊತೆ ಹಟ್ಟಿಗೆ ಬಂದ.

ಸೂರ್ಯನಿಗೆ ಚಡಪಡಿಕೆ.
ಕತ್ತಲ ಕೋಣೆಯಲ್ಲಿ ಕಟ್ಟಿದ ಜೇಡರಬಲೆ.
ಅತ್ತಿತ್ತ ಹಾರಾಡುವ ಬಾವಲಿಗಳು.
ನೆಲೆ ನಿಲ್ಲದ ಹಾರಾಟ; ಪಟ ಪಟ ಸದ್ದು.
ಹೊತ್ತಾದಂತೆ ನಿಶ್ಶಬ್ದ: ನೀರವ ಭಾವ.

ಸೂರ್ಯ ಎದ್ದ. ಪೂಜಾರಪ್ಪನ ಬಳಿಗೆ ಬಂದ. ಸೂರ್ಯ ತಾನಾಗಿಯೇ ಹುಡುಕಿಕೊಂಡು ತನ್ನ ಬಳಿಗೆ ಬಂದದ್ದು ಪೂಜಾರಪ್ಪನಿಗೆ ಖುಷಿ ಕೊಟ್ಟಿತು.

"ಏನಪ್ಪ ಮೇಷ್ಟ್ರೇ ಬಾ ಬಾ" ಎಂದು ಕೂತುಕೊಳ್ಳಲು ಹೇಳಿದ. ಮಗಳು ಗೌರಿಗೆ "ಉರ್ದಿರಾ ಕಳ್ಳೇಕಾಯಿದ್ರೆ ಕೊಡವ್ವ ನಿನ್ ಮೇಷ್ಟ್ರು ಬಂದವ್ರೆ" ಎಂದು ಕೂಗಿ ಹೇಳಿದ. ಗೌರಿ ಸಡಗರದಿಂದ ಕಡ್ಲೆಕಾಯಿ ತಂದು ಕೊಟ್ಟಳು. ಸೂರ್ಯ ಕಡ್ಲೆಕಾಯಿ ತಿನ್ನುತ್ತ ದೇವಸ್ಥಾನದ ವಿಷಯ ಎತ್ತಿದ. ಮದುವೆಯಾದ ಬುಡಕಟ್ಟಿನ ಹೆಣ್ಣು ಮೊದಲರಾತ್ರಿಯನ್ನು ದೇವರಜೊತೆ ಕಳೆಯಬೇಕೆಂಬ ನಂಬಿಕೆಯನ್ನು ಕೆದಕಿದ.

"ಊರಿನ ಹೆಣ್‌ಮಕ್ಕಳಿಗೆ ಇದು ಯಾಕ್ ಅನ್ವಯಿಸೊಲ್ಲ?"–ಸೂರ್ಯನ ಪ್ರಶ್ನೆ.

"ಅವ್ರಿಗೆ ಆ ಪುಣ್ಣೇವ್ ಇಲ್ಲ ಕಣಪ್ಪ"– ಹೆಮ್ಮೆಯಿಂದ ಹೇಳಿದ ಪೂಜಾರಪ್ಪ, ನಾನು ಒಂದ್ಸಾರಿ ದೇವಸ್ಥಾನಕ್ ಹೋಗ್ಬೇಕಲ್ಲ?– ಸೂರ್ಯ ಕೇಳಿಕೊಂಡ.

"ಅದ್ಕೇನಪ್ಪ, ಜೋಯಿಸ್ರಿಗೇಳ್ತೀನಿ. ನಾಳೀಕೇ ಕರ್ಕಂಡ್‌ವೋಗ್ತೀನಿ"– ಎಂದು ಪೂಜಾರಪ್ಪ ಹೇಳಿದಾಗ ಸೂರ್ಯ ನಾಳೆಗಾಗಿ ಕಾದ.

ಜೋಯಿಸರು ಸೂರ್ಯನಿಗೆ ದೇವಸ್ಥಾನದ ಪ್ರತಿಯೊಂದನ್ನೂ ತೋರಿಸಿದರು. ಗರ್ಭಗುಡಿಯೊಳಗೆ ಮಾತ್ರ ಬಿಡಲಿಲ್ಲ. ಅಲ್ಲಿಗೆ ತಾನು ಮತ್ತು ನರಸಿಂಹರಾಯಪ್ಪ ಬಿಟ್ಟರೆ ಬೇರಾರೂ ಕಾಲಿಡುವಂತಿಲ್ಲ ಎಂದರು. ಗರ್ಭಗುಡಿಯ ವಿಶೇಷವನ್ನು ವಿವರಿಸುತ್ತ ಅಲ್ಲೊಂದು ನೆಲಮಾಳಿಗೆಯೂ ಇದೆಯೆಂದು ಹೇಳಿದರು. ಹಿಂದೆ ಯಾರೊ ಋಷಿವರ್ಯರು ಈ ನೆಲಮಾಳಿಗೆಯಲ್ಲಿ ತಪಸ್ಸು ಮಾಡುತ್ತಿದ್ದರಂತೆ, ಹೆಸರು ಮರೆತು ಹೋಗಿದೆ ಎಂದು ತಲೆ ಕೆರೆದುಕೊಂಡರು. ಸೂರ್ಯ "ಅವರ ಹೆಸರೇನೂ ಬೇಡ. ಆ ನೆಲಮಾಳಿಗೆ ಯಾವ ಜಾಗದಲ್ಲಿದೆ?" ಎಂದು ಕೇಳಿದ. "ಆ ದೇವರ ವಿಗ್ರಹ ಇದೆಯಲ್ಲ. ಅದರ ಹಿಂದೇನೇ ಇದೆ" ಎಂದರು ಜೋಯಿಸರು.

ದೇವರ ವಿಗ್ರಹ ದೊಡ್ಡದಲ್ಲ. ತೀರಾ ಚಿಕ್ಕದಾದ ಒರಟಾದ ಒಂದು ಬಂಡೆ, ಅದರ ಮೇಲೆ ದೇವರ ಕೆತ್ತನೆ. ಜೋಯಿಸರು ಹೇಳುವಂತೆ ಅದರ ಹಿಂದೆಯೇ ನೆಲಮಾಳಿಗೆ.

ಸೂರ್ಯ, ಗರ್ಭಗುಡಿಯ ಬಾಗಿಲಲ್ಲಿ ನಿಂತು ಇಣುಕಿ ಅವಲೋಕಿಸಿದ. ಆನಂತರ ಮದುವೆಯಾದ ಹೆಣ್ಣು ಮೊದಲ ರಾತ್ರಿ ಕಳೆಯಬೇಕಾದ 'ಶಯ್ಯಾಗೃಹ' ಯಾವುದೆಂದು ಕೇಳಿದಾಗ ಜೋಯಿಸರು ಗರ್ಭಗುಡಿಯ ಮುಂದೆ ಎಡಭಾಗದಲ್ಲಿ ಇದ್ದ ಕಲ್ಲಿನ ಕೋಣೆಯೊಂದನ್ನು ತೋರಿಸಿದರು. ಅದು ವಿಶಾಲವಾಗಿತ್ತು. ಬಹುಶಃ ಹಿಂದೆಂದೋ ಇಲ್ಲೊಂದು ದೇವರ ವಿಗ್ರಹವಿದ್ದಿರಬಹುದೆಂದು ಸೂರ್ಯ

ಊಹಿಸಿದ. ಯಾಕೆಂದರೆ ಅದರ ಎದುರಿಗೆ ಹೆಚ್ಚು ಕಡಿಮೆ ಅದೇ ರೀತಿಯ ಕೋಣೆಯೊಂದಿತ್ತು. ಅದರಲ್ಲಿ ದೇವರ ವಿಗ್ರಹವಿತ್ತು. ಎಲ್ಲ ನೋಡಿದ್ದಾದ ಮೇಲೆ "ಚಂದ್ರ ಎಲ್ ಸತ್ತು ಬಿದ್ದಿದ್ದ ಜೋಯಿಸರೆ" ಎಂದು ಕೇಳಿದ. ಜೋಯಿಸರು ಅದಕ್ಕೆ ಪೀಠಿಕೆಯಾಗಿ– ದೇವರು ಮೊದಲ ರಾತ್ರಿ ಅನುಭವದಲ್ಲಿರುವಾಗ ಈ ದೇವಸ್ಥಾನದ ಆಸುಪಾಸಿನಲ್ಲಿ ಯಾರೂ ಸುಳಿಯಬಾರದೆಂಬ ಬಗ್ಗೆ ಅನೇಕ ನಿದರ್ಶನಗಳನ್ನು ನೀಡಿ ವಿವರಿಸಿದರು. ರಾಜರ ಕಾಲದಲ್ಲಿ ನಿಯಮೋಲ್ಲಂಘನೆ ಮಾಡಿ ಸತ್ತವರ ವಿಷಯ ಹೇಳಿದರು. ಆನಂತರ ಚಂದ್ರ ಸತ್ತು ಬಿದ್ದದ್ದ– ಮುಖ್ಯ ದ್ವಾರದ ಹೊಸ್ತಿಲನ್ನು ತೋರಿಸಿ "ಅವ್ನ ತಲೆ ಈ ಹೊಸ್ತಿಲ ಮೇಲಿತ್ತು. ಮೈಪೂರ್ತಿ ಹೊರ್ಗಡೆ ಇತ್ತು" ಎಂದು ವಿವರಣೆ ಕೊಟ್ಟರು. ಮತ್ತೆ ದೇವಾಲಯದ ಮಹಿಮೆಯನ್ನು ಹೇಳಲು ಮರೆಯಲಿಲ್ಲ. ಇಷ್ಟೆಲ್ಲ ಪುರಾತನವಾದ ದೇವಾಲಯಕ್ಕೆ ತಕ್ಕ ಪ್ರಚಾರ ಇಲ್ಲ ಎಂದು ಕೊರಗುತ್ತ "ಚಂದ್ರನ ವಿಷ್ಯಾನೂ ಸೇರಿಸ್ಕೊಂಡು ನೀನಾದ್ರು ಈ ದೇವಸ್ಥಾನದ ಮಹಿಮೇನ ಬರೀಬೇಕಪ್ಪ. ದೊಡ್ ದೊಡ್ಡ ಪೇಪರ್‌ಗಳಲ್ಲಿ ಹಾಕುಸ್ಬೇಕು" ಎಂದು ಒತ್ತಾಯಿಸಿದರು. ಸೂರ್ಯ ನಸುನಕ್ಕ.

ಸೂರ್ಯ ಒಬ್ಬನೇ ರಾತ್ರಿ ಶಾಲೆಯ ಕಡೆ ಹೊರಟ. ಎಂದಿನಂತೆ ಶಬರಿ, ಗೌರಿ, ಹುಚ್ಚೀರ, ಸಣ್ಣೀರ ಮತ್ತಿತರರು ಜೊತೆಗಿರಲಿಲ್ಲ. ಯಾಕೆಂದರೆ, ದೇವಸ್ಥಾನದಿಂದ ಹೊರಟವನು ಬೆಟ್ಟದ ಬಳಿಗೆ ಬಂದಿದ್ದ– ಒಂಟಿಯಾಗಿ. ಈಗ ಒಂಟಿಯಾಗಿಯೇ ಶಾಲೆಯ ಕಡೆಗೆ ಹೊರಟಿದ್ದ.

ಮುರಿದು ಬಿದ್ದ ಕೋಟೆಯ ಗೋಡೆಗಳು.
ಭಾವ ಭಗ್ನತೆಯಂತಿದ್ದ ಬುರುಜುಗಳು
ಅರೆಬರೆ ಉಳಿದಿದ್ದ ಮೆಟ್ಟಿಲ ಹಾದಿಗಳು.
ಅಲ್ಲೊಂದು ಗುಹೆ–ಇಲ್ಲೊಂದು ಪೊದೆ.
ಅವಶೇಷಗಳ ಪರಿಸೆ; ಆದರೂ ಆಳುವ ವರಸೆ.

ಖಿನ್ನನಾದ ಸೂರ್ಯನ ಹೆಜ್ಜೆಗಳು ಎಂದಿಗಿಂತ ಭಾರ.
ಮೂರು ಕಾಲಗಳ ಮುಖಾಮುಖಿಯ ಮಹಾಪೂರ.
ಅಂದು–ಇಂದುಗಳ ನಾನಾ ಘಟನೆಗಳು. ಮುಂದಿನ ಹಾದಿಗಳು.
ಒಟ್ಟಿಗೆ ಒತ್ತರಿಸಿ ಬಂದು ಕಡೆಗೆ ಕಡೆಗೋಲಿನ ಕೆಲಸ.
ಒಂಟಿತನದ ಅನುಭವ ಎಷ್ಟು ಘೋರ ಎನ್ನಿಸಿತು.

ಕಾಲದ ಕಂತುಗಳಲ್ಲಿ ಬಂದು ಕಂಗೆಡಿಸುವ ಒಂಟಿತನ.
ಆಗ ಅನ್ನಿಸಿತು – ಒಂಟಿತನ ಬಾಳಿನ ಬಂಜೆತನವಾಗಬಾರದು.

ಹೋರಾಟಗಳ ಹುಮ್ಮಸ್ಸಿನಲ್ಲಿರುವ ತನಗೇ ಇಂತಹ ಖಿನ್ನತೆ–ಒಂಟಿತನ ಕಾಡಿಸುತ್ತಿರುವಾಗ 'ಶ್ರಮಕುಲದ ಶಬರಿ' ಅದೆಂಥ ಒಂಟಿತನದಲ್ಲಿ ನರಳಿರಬಹುದು? ಕಾಯುವುದೇ ಕುಲವಾಗಿ, ಶ್ರಮವೇ ಶಬರಿಯಾಗಿ ಎಂಥ ಸಂಕಟವನ್ನು ಅನುಭವಿಸಿರಬಹುದು?

ಭೂಮಿತಾಯಿಯ ಮಕ್ಕಳು ಇಲ್ಲಿ ಪರಕೀಯರಾಗಿ, ಒಳಗೊಳಗೇ ಒಂಟಿಯಾಗಿ, ಚಿಂತಾರಣ್ಯದ ಸಂತರಾಗಿಬಿಟ್ಟರೆ? ಶ್ರಮಜೀವಿಗಳೆಲ್ಲ ಸೇರಿ ಶಬರಿಯಾದರೆ? ಪ್ರಶ್ನೆಗಳ ಮೇಲೆ ಪ್ರಶ್ನೆ.

ಉತ್ತರ ಹುಡುಕುತ್ತ ಹೋದಂತೆ ಅದು ಉತ್ತರದ ಹಿಮಾಲಯದಷ್ಟು ಎತ್ತರ.

ಮೂರು ದಿಕ್ಕುಗಳಲ್ಲಿ ಹಬ್ಬಿದ ಕಡಲ ವಿಸ್ತಾರ.
ಸೂರ್ಯನ ಎದೆಯಾಳದಲ್ಲಿ ರೊಯ್ಯನೆ ಸುತ್ತುವ ಸುಳಿ.
ಕಣ್ಣುಗಳಲ್ಲಿ ಖಿನ್ನತೆ; ಕಾಡಿಸುವ ಪರಕೀಯತೆ.
ಆಗ ಅವನಿಗೆ ಅನ್ನಿಸುತ್ತದೆ–
'ನನ್ನ ಈ ನಾಡಿನಲ್ಲಿ ಭವ್ಯ ನಾಮ ಬೀಡಿನಲ್ಲಿ
ಬೇಗೆಯೇ ಬೆಟ್ಟವಾಗಿ ಉತ್ತರಕ್ಕೆ ಕಾವಲು;
ಬೆವರೆಲ್ಲ ನದಿಗಳಾಗಿ ಮೂರು ದಿಕ್ಕು ಕಡಲು!'

ಬೇಗೆ ಬೆವರುಗಳ ಸಂರಕ್ಷಣೆಯಲ್ಲಿ ಸ್ವತಂತ್ರಭಾರತ.
ಶಬರಿಕುಲದ ಸಮಸ್ತರಿಗೆ ಚಂಡ ಮಾರುತ.
ಆದರೆ ಇವರೆಲ್ಲ ಸೇರಿ ಚಂಡ ಮಾರುತವಾಗಬೇಕು.
ಅದು ಯಾವಾಗ?
ಪರಕೀಯ ಪ್ರಜ್ಞೆಯಿಂದ ಹೊರಬಂದು ಹೋರಾಟಕ್ಕಿಳಿದಾಗ.

ನಿಜ; ಇವರ ಒಂಟಿತನ, ಪರಕೀಯತೆ, ಮುಗ್ಧತೆ ಎಲ್ಲವೂ ಅಳೆಯಲಾಗದ ಆಳ. ಭೂಮಿ ಹಸನಾಗಲೆಂದು ಬೆವರು ಹರಿಸುತ್ತಾರೆ. ಆದರೆ ಈ ಭೂಮಿ ಅವರದಲ್ಲ, ಭೂಮಿಯ ಮೇಲೆ ಸ್ವತಃ ಬೆಳೆದ ಬೆಳೆ ಅವರದಲ್ಲ. ದುಡಿಮೆಯ ಫಲ ಪಡೆದವನು ಒಡೆಯ; ದುಡಿದವನು ಆಳು. ತಾನು ಉತ್ಪನ್ನ ಮಾಡಿದ

ಫಸಲು ತನ್ನದಲ್ಲ. ತನ್ನ ಫಸಲಿಗೆ ತಾನೇ ಪರಕೀಯ– ಹೀಗೆ ಅನ್ನಿಸಿ, ಅನುಭವಿಸುವ ಕ್ಷಣದ ಅನಾಥಭಾವವನ್ನು ಅಳೆಯಲಾದೀತೆ?

ಸೂರ್ಯನ ಸ್ವಭಾವವೇ ಹೀಗೆ. ಒಂದು ವಿಷಯ ಒಳಹೊಕ್ಕರೆ ಅದು ತೊಲೆಯನ್ನು ಕೊರೆಯುವ ಗುಂಗರಿ ಹುಳದಂತೆ, ಗುಯ್ಯೆಂದು ಒಳ ಸೇರುತ್ತಲೇ ಹೋಗುತ್ತದೆ.

ಗಂಡು–ಹೆಣ್ಣಿನ ನಗು ಚಿಮ್ಮಿದಂತಾಗಿ ಸೂರ್ಯ ನೋಡಿದ.

ಶಾಲೆಯ ಹತ್ತಿರಕ್ಕೆ ಬಂದಿದ್ದ.

ಶಾಲೆಯ ಒಂದು ಬದಿಯಲ್ಲಿ ನವಾಬ್ ಮತ್ತು ಗೌರಿಯ ಕಿಲಕಿಲ ನಗು. ಸಡಗರದಲ್ಲಿದ್ದಾರೆ. ಬೇರಾರೂ ಕಾಣಿಸುತ್ತಿಲ್ಲ. ಎಲ್ಲರಿಗಿಂತ ಮುಂಚೆ ಇವರಿಬ್ಬರೇ ಬಂದಂತಿದೆ. ಅವರಿಬ್ಬರ ಮಾತುಕತೆಯ ಆನಂದಕ್ಕೆ ಯಾಕೆ ಅಡ್ಡಿಯಾಗಲಿ ಎಂದು ಒಂದು ಕ್ಷಣ ಯೋಚಿಸಿದ. ನಿಂತಲ್ಲೇ ನಿಂತ. ದೂರದಲ್ಲಿ ಶಬರಿ ಮುಂತಾದವರೆಲ್ಲ ಬರುವುದು ಕಾಣಿಸಿತು. ಅವರ ಜೊತೆ ಒಟ್ಟಾಗಿ ಹೋಗೋಣವೆಂದು ಒಂದು ಬಂಡೆಯ ಮೇಲೆ ಕೂತ. ಆನಂತರ ಶಾಲೆಯ ಕಡೆ ನೋಡಿದ.

ಗೌರಿ ಮತ್ತು ನವಾಬ ಶಾಲೆಯ ಒಳಗೆ ಹೋದರು.

ಇನ್ನು ಇಲ್ಲಿ ಕೂತಿರುವುದೇಕೆ, ತರವಲ್ಲದ ಶಂಕೆ ತನಗೇಕೆ, ಎಂದು ಸಹಜ ಸ್ಥಿತಿಗೆ ಬಂದು ಶಾಲೆಯ ಕಡೆ ಹೊರಟ. ಬಂದು ನೋಡಿದಾಗ ನವಾಬ್ ಗೌರಿಯ ಕೈಹಿಡಿದು ಬರೆಸುತ್ತಿದ್ದ. ಕೆಲವು ಪದಗಳನ್ನು ಹೇಳಿಕೊಡುತ್ತಿದ್ದ.

"ಎಲ್ಲಿಗ್ ಬಂತು ಗೌರಿ ಓದು"– ಎನ್ನುತ್ತ ಸೂರ್ಯ ಒಳಬಂದ.

ಗೌರಿ ದಡಬಡನೆ ಎದ್ದಳು. ನವಾಬ್ ಸಹಜವಾಗೇ ಇದ್ದ. "ಸ್ವಲ್ಪ ಹಿಂದ್ ಬಿದ್ದಿದಾಳೆ. ಅದುಕ್ಕೇ ಮುಂಚೆ ಬಂದು ಹೇಳಿಸ್ಕೋತೀನಿ ಅಂದಿದ್ಲು" ಎಂದು ಆತ ಹೇಳ ತೊಡಗಿದಾಗ ಸೂರ್ಯ "ಒಳ್ಳೇದಾಯ್ತು ಮುಂದುವರ್ಸು. ಕೂತ್ಕೊ ಗೌರಿ. ಪಾಠ ಹೇಳಿಸ್ಕೊ" ಎಂದ. ಗೌರಿ ಕೂತುಕೊಂಡಳು. ನವಾಬ್ ಪಾಠ ಮುಂದುವರೆಸಿದ.

ಸ್ವಲ್ಪ ಹೊತ್ತಿನಲ್ಲೇ ಶಬರಿ ಮತ್ತು ಇತರರೆಲ್ಲ ಬಂದರು. ಗೌರಿಯನ್ನು ಕಂಡ ಶಬರಿ "ನಾನ್ ಅಲ್ಲೆಲ್ಲ ವುಡ್ಕಾಡ್ತಿದ್ದೆ. ಯಾವ್ದೊ ಮಾಯ್ದಾಗ್ ಇಲ್ಲಿಗ್ ಬಂದ್ ಬಿಟ್ಟಿದ್ದೀಯ?" ಎಂದು ಗೌರಿಯ ಉತ್ತರಕ್ಕೂ ಕಾಯದೆ ಸೂರ್ಯನ ಕಡೆ ತಿರುಗಿ "ನಾವ್ ಅಟ್ಟಿನಾಗ್ ಕಾಯ್ತಾ ಇದ್ರೆ ಎಲ್ಲಿಂದಾನೊ ಸೀದಾ ಇಲ್ಲಿಗ್ ಬಂದ್ರೆ ಎಂಗೆ? ಯಾವಾಗ್ಲೂ ಜತೇಗ್ ಬತ್ತಿದ್ವಿ ಎಲ್ಲಾರು. ಯಾಕೊ ಯಾವತ್ನಂಗಿಲ್ಲ

ಇವತ್ತು" ಎಂದಳು.

ನಿಜ; ಇವತ್ತು ಯಾವೊತ್ತಿನಂತೆ ಇಲ್ಲ– ಎಂದುಕೊಂಡ ಸೂರ್ಯ. ಮಾತು ಬೆಳೆಸದೆ "ಬನ್ನಿ ಬನ್ನಿ ಪಾಠ ಶುರು ಮಾಡೋಣ" ಎಂದ.

ಯಾಕೊ ಮನಸ್ಸು ಹಿಡಿತಕ್ಕೆ ಸಿಗುತ್ತಿಲ್ಲ. ಮಾತಿನಲ್ಲಿ ಸರಾಗವಿಲ್ಲ. ಬೋರ್ಡಿನ ಮೇಲೆ ಕೆಲವು ಪದಗಳನ್ನು ಬರೆದು ಅದೇ ರೀತಿ ಬರೆಯಲು ಹೇಳಿದ. ನೋಡಿಕೊಳ್ಳುವಂತೆ ಗೆಳೆಯ ನವಾಬನಿಗೆ ತಿಳಿಸಿದ. ತಾನು ಕೂತು ಒಮ್ಮೆ ಕಣ್ಣು ಹಾಯಿಸಿದ. ಸಣ್ಣೀರನನ್ನೂ ಒಳಗೊಂಡಂತೆ ಗಂಡಸರ ಸಂಖ್ಯೆ ಕಡಿಮೆಯಾಗಿದೆ. ಆಮೇಲೆ ವಿಚಾರಿಸಿಕೊಳ್ಳೋಣವೆಂದುಕೊಂಡ. ತಡೆದುಕೊಳ್ಳಲು ಆಗಲಿಲ್ಲ. "ಯಾಕೆ ಗಂಡಸ್ರು ಕಡ್ಮೆ ಬಂದಿದಾರೆ?" ಎಂದು ಕೇಳಿದ.

"ಇನ್ ಯಾಕೆ? ಇವತ್ತು ಒಡೇರು ಬಟವಾಡೆ ಮಾಡವ್ರೆ. ದುಡ್‌ಸಿಗ್ತು ಅಂಬ್ತ ಗಡಂಗಿನ್ ಕಡೀಕ್ ವೋಗವ್ರೆ–ಕುಡ್ದು ಕಾಲಿ ಮಾಡ್ಕಮಾಕೆ"– ಎಂದು ಥಟ್ಟನೆ ಬೇಸರದಿಂದ ಹೇಳಿದಳು ಶಬರಿ.

"ಹೀಗೆಲ್ಲ ದುಡ್ ಕಳೀಬೇಡಿ ಅಂತ ನೀವ್ ಹೆಂಗಸ್ರೆಲ್ಲ ಯಾಕ್ ಹೇಳ್‌ಬಾರದು?"– ಸೂರ್ಯ ಪ್ರಶ್ನೆಯೊಂದನ್ನು ಎಸೆದ.

"ಎಂಗುಸ್ರು ಮಾತ್ ಕೇಳಂಗಿದ್ರೆ ಅವ್ರ್‌ನ ಗಂಡುಸ್ರು ಅಂಬ್ತ ಯಾರ್ ಕರೀತಾರೆ?"– ಶಬರಿ ಗೊಣಗಿದಳು.

ಒಂದು ಕ್ಷಣ ನಿಶ್ಶಬ್ಧ. ಮತ್ತೆ ಶಬರಿಯೇ ಮಾತಾಡಿದಳು.

"ಇವ್ವ್ಯಾಗ್ಯಾರಾನ ಉಸ್ರು ಬಿಡ್ತಾ ಅವ್ರ ನಮ್ಮೆಂಗುಸ್ರು ನೋಡಿ ಮತ್ತೆ. ಇದೇ ನಮ್ ಅಟ್ಟಿ ಅಣೇಬರಾ."

"ನಿಮ್ ಹಣೆಬರ ಅಂತ ಸುಮ್ನೆ ಇದ್ರಾಗೊಲ್ಲ. ಈಗ ನೀವು ಬರೀತಾ ಇದ್ದೀರಲ್ಲ ಇದು ನಿಮ್ಮ ಬರಹ. ನೀವೇ ನಿಮ್ಮ ಬರಹ ಬರೀಬೇಕು. ಅಂದ್ರೆ ವಿವರುಸ್ತೀನಿ ಕೇಳಿ. ನಿಮ್ಮ ಬಾಳನ್ನ ನೀವೇ ರೂಪಿಸ್ಕೊಬಹುದು. ಎಲ್ಲಾ ನಿಮ್ ಕೈಯ್ಯಲ್ಲಿದೆ– ನೀವೂ ಗಂಡಸರಂತೆ ದುಡೀತೀರಿ. ದುಡ್ ತರ್ತೀರಿ, ಭೂಮಿಕೆಲ್ಸಾನೂ ಮಾಡ್ತೀರಿ; ಮನೇಗ್ ಬಂದು ಅಡುಗೆ ಕೆಲ್ಸಾನೂ ಮಾಡ್ತೀರಿ. ಆದ್ರಿಂದ ನಿಮ್ ನಿಮ್ ಗಂಡಸರಿಗೆ ತಿಳುವಳಿಕೆ ಹೇಳೋದ್ರಲ್ಲೇನೂ ತಪ್ಪಿಲ್ಲ. ದುಡಿದಿದ್ ದುಡ್ಡನ್ನ ಕುಡ್ಯೋದ್ಕೇ ಖರ್ಚು ಮಾಡಿದ್ರೆ ಹೇಗೆ ಅಂತ ಒಂದ್ಸಾರಿ ಸರ್‍ಯಾಗ್ ಕೇಳಿ. ನಾನ್ ನಿಮ್ ಜೊತೆಯಾಗಿರ್ತೀನಿ"– ಸೂರ್ಯ ತಿಳಿಹೇಳಿದ.

"ನೀನಿರಾದಾದ್ರೆ ನಾವೆಂಗೊ ಮಾಡಿ ಕೇಳ್‌ಬಿಡ್ತೀವಪ್ಪ" ಎಂದಳು ಒಬ್ಬ ಹೆಂಗಸು.

"ಹಾಗಿರ್‌ಬೇಕು. ನಾನೂ ನವಾಬು ಇಬ್ರೂ ಹೇಳ್‌ನೋಡ್ತೀವಿ. ಆಮೇಲ್ ನೀವು ಎಲ್ಲ ಹೆಂಗುಸ್ರೂ ಒಟ್ಟಿಗೇ ಹೇಳಬೇಕು. ಆಗ ಬಲ ಬರುತ್ತೆ. ಇಲ್ಲಿ ನೋಡಿ, ಈಗ ಬಂದ್ ಕೂತಿದಾರಲ್ಲ ಎಷ್ಟು ಒಳ್ಳೇ ಗಂಡಸ್ರು. ಇವ್ರೂ ನೀವೂ ಎಲ್ಲಾ ಒಟ್ಟಿಗೇ ಸೇರಿ ತಿಳಿಹೇಳಿದ್ರೆ ಕೇಳ್ತಾರೆ. ಹಾಗಂತ ಜಗಳ ಆಡಬೇಡಿ. ಆಮೇಲ್ ಗಂಡ–ಹೆಂಡ್ತಿ ನಡುವೆ ಜಗಳ ತಂದಿಟ್ಟ ಅಂತ ನನ್ನ ಕೆಟ್ಟೋನ್ ಮಾಡ್‌ಬೇಡಿ" ಎಂದು ನಗುತ್ತಾ ನುಡಿದ.

"ಎಲ್ಲಾನ ಉಂಟಾ? ನೀನ್ ಯೇಳಾದು ನಮ್ ಒಳ್ಳೇದುಕ್ಕೆ" ಎಂದು ಒಬ್ಬ ಗಂಡಸು ದೃಢವಾಗಿ ಹೇಳಿದ.

"ಹಾಳಾದ್ದು ಆ ಸೇಂದಿ ಅಂಗಡಿ, ಅದೇ ದ್ಯಾವ್ರ ಗುಡಿ ತರಾ ಆಗ್‌ಬಿಟ್ಟೈತೆ" ಎಂದು ಇನ್ನೊಬ್ಬ ಗೊಣಗಿದ.

ಸೂರ್ಯ ಕೂಡಲೇ ಹೇಳಿದ– "ಎಲ್ಲಾ ಸೇರಿ ಆ ಸೇಂದಿ ಅಂಗಡೀನೇ ಮುಚ್ಚುಸ್ಬೇಕು."

"ಅದೆಂಗಾದಾತಪ್ಪ. ಅದು ಒಡೇರ್ ಅಂಗಡಿ. ಅವ್ರೇ ಕಂತ್ರಾಟ್ ತಗಂಡು ಸುತ್ತಮುತ್ತೆಲ್ಲ ಸೇಂದಿ ಸಾರಾಯಿ ಅಂಗಡಿ ಶುರು ಮಾಡವ್ರೆ"– ಒಬ್ಬಾತ ವಿವರಿಸಿದ.

"ಒಡೇರ್‌ದಾದ್ರೇನಂತೆ. ಅಂಗಡಿ ಮುಚ್ಚಸ್ಬೇಕು ಅಂಬ್ತ ಅನ್ನಿದ್ರೆ ಅಂಗೇ ಮಾಡ್‌ಬೇಕಪ್ಪ"– ಶಬರಿಯ ಬಾಯಲ್ಲಿ ಸಹಜವಾಗಿ ಬಂದ ಈ ಮಾತಿನಿಂದ ಉತ್ತೇಜಿತನಾದ ಸೂರ್ಯ ಅದೇ ದಿಕ್ಕಿನಲ್ಲಿ ಮಾತುಕತೆಯನ್ನು ಕೊಂಡೊಯ್ದ. ಆತ್ಮವಿಶ್ವಾಸದ ಬೀಜ ಬಿತ್ತೋಡಗಿದ. ಸ್ವತಃ ರಾಜರ ವಂಶಸ್ಥರೆಂದು ಹೇಳಿಕೊಳ್ಳುವ ನರಸಿಂಹರಾಯಪ್ಪನವರು ಈಗ ಲಾಭಕೋರತನಕ್ಕಾಗಿ ಸೇಂದಿ ಸಾರಾಯಿ ಅಂಗಡಿ ತೆಗೆದು ಬಡವರ ಸಂಸಾರಗಳನ್ನು ಹಾಳು ಮಾಡುತ್ತಿದ್ದಾರೆಂದು ಮನಮುಟ್ಟುವಂತೆ ವಿವರಿಸಿದ. ಅಲ್ಲೀವರೆಗಿನ ಖಿನ್ನತೆ ಕಳೆದು ಸೂರ್ಯ ತನಗೆ ಸಹಜವಾದ ಸಾಮಾನ್ಯಸ್ಥಿತಿಗೆ ಬಂದಿದ್ದ. ಇಲ್ಲೀವರೆಗೆ ಒಳ ಸಂಘರ್ಷದಲ್ಲಿದ್ದಾತ, ಒಳ ಪ್ರೇರಣೆಯಿಂದಲೇ ಹೊಸಸಂಘರ್ಷಕ್ಕೆ ಪ್ರೇರಣೆ ನೀಡತೊಡಗಿದ.

ಯಾವುದು ಒಳಗು? ಯಾವುದು ಹೊರಗು?
ಒಂದರೊಳಗೊಂದಾಗುವ ಬೆರಗು!
ಬೆರಗಿನ ಭಾವಕ್ಕೆ ಬೆಳಗಿನ ಭಾಷೆ.

ಸೂರ್ಯ ಉತ್ಸಾಹದಿಂದ ಮಾತಾಡುತ್ತಲೇ ಹೋದ. ಆದರೆ ಒಂದೇ ದಿನಕ್ಕೆ ಖಾಲಿಯಾಗದ ಎಚ್ಚರವಿತ್ತು. ಸಂದರ್ಭಕ್ಕನುಗುಣವಾಗಿ ಸಜ್ಜು ಮಾಡುವ ಕ್ರಮಬದ್ಧತೆಯಿತ್ತು.

ಈಗ ಚಿಂತನೆಯ ಸರದಿ ಕೂತಿದ್ದ ಜನರದು.

ಕ್ಷಣಕಾಲದ ಮೌನ: ನಿಧಾನವಾಗಿ ಪರಸ್ಪರ ಗುಸುಗುಸು ಮಾತು.

"ಎಲ್ಲಾ ಕೂತ್‌ಕಡೇನೇ ತೀರ್ಮಾನ ಆಗ್‌ಬೇಕಾಗಿಲ್ಲ. ನಾನ್ ಹೇಳಿದ ವಿಷ್ಯ ಯೋಚ್ನೆ ಮಾಡಿ. ಸಮಯ ಬಂದಾಗ ಒಂದು ನಿರ್ಧಾರ ಮಾಡಿದ್ರಾಯ್ತು. ಏಳಿ; ಹೋಗೋಣ" ಎಂದು ಸೂರ್ಯ ಎಲ್ಲರನ್ನೂ ಏಳಿಸಿದ.

ಎಲ್ಲರೂ ಒಟ್ಟಿಗೇ ಹೊರಟರು. ಹಟ್ಟಿಗೆ ಹೋಗುವಾಗ ಸೇಂದಿ ಅಂಗಡಿಯ ಸಮೀಪದಲ್ಲೇ ಹೋಗಬೇಕು. ಸೂರ್ಯನ ಕಣ್ಣಿಗೆ ತಿಮ್ಮರಾಯಿ, ಪೂಜಾರಪ್ಪ, ಸಣ್ಣೀರ, ಹುಚ್ಚೀರ ಮುಂತಾದವರೆಲ್ಲ ಸೇಂದಿ ಅಂಗಡಿಯಲ್ಲಿರುವುದು ಕಾಣಿಸಿತು. ಅವರೂ ಈತನನ್ನು ನೋಡಿದರು. ಪೂಜಾರಪ್ಪನಂತೂ "ನೀನು ಬಾರಪ್ಪ ಸೂರ್ಯ; ಒಸಿ ಸೇಂದಿ ಸಾರಾಯ್ ರುಚಿ ನೋಡು" ಎಂದು ಮತ್ತೇರಿದ ಮಾತನಾಡಿದ. ಹುಚ್ಚೀರ, ಸಣ್ಣೀರ ಮರೆಗೆ ಹೋಗಿ ನಿಂತರು.

ಪೂಜಾರಪ್ಪ ಮತ್ತೆ "ಬಾರಯ್ಯ ಓಚಯ್ಯ ಗುಂಡಿಗೆ ಇದ್ರೆ ಗಡಂಗಿಗ್ ಬಾ" ಎಂದು ಅರಚಿದ. ಸೂರ್ಯ ಅಲ್ಲಿಗೆ ಹೋಗಿ ಬುದ್ಧಿ ಹೇಳಬೇಕೆಂದುಕೊಂಡ. ಆದರೆ ಶಬರಿ, ಗೌರಿ ಮತ್ತಿತರರು ತಡೆದರು. ಅಲ್ಲಿ ಹೋಗಿ ಮಾತಿಗೆ ಮಾತು ಬೆಳೆದು ಬೇರೇನಾದರೂ ಆದೀತೆಂಬ ಆತಂಕ ಅವರಿಗೆ. ಆದ್ದರಿಂದ ಆಮೇಲೆ ಇನ್ನೊಂದು ದಿನ ಸಮಯನೋಡಿ ಎಲ್ಲ ಮಾತಾಡೋಣ ಎಂದರು. ಅವರ ಬಾಯಿಂದಲೇ ಸರಿಯಾದ ಮಾತು ಬಂದದ್ದು ಕೇಳಿ ಸೂರ್ಯನಿಗೆ ಸಂತೋಷವಾಯಿತು. ಎಲ್ಲರೂ ಒಟ್ಟಾಗಿ ಹಟ್ಟಿ ಕಡೆಗೆ ಹೆಜ್ಜೆ ಹಾಕಿದರು.

# ೬

ಹಟ್ಟಿ ಸೇರಿದ ಮೇಲೆ ಹೆಂಗಸರಿಗೆ ಅಡಿಗೆ ಕೆಲಸ; ಸೂರ್ಯ, ನವಾಬ್ ಇಬ್ಬರೂ ಕಟ್ಟೆಯ ಮೇಲೆ ಕೂತರು. ದೇಶ ವಿದೇಶಗಳ ಸ್ಥಿತಿಗತಿ ಕುರಿತು ಮಾತನಾಡತೊಗಿದರು. ಇವರ ಮಾತುಗಳು ಪೂರ್ಣ ತಾತ್ವಿಕ ಚರ್ಚೆಯ ಸ್ವರೂಪ ಪಡೆದದ್ದರಿಂದ ಅಕ್ಕಪಕ್ಕ ಕೂತಿದ್ದ ಮೂರ್‍ನಾಲ್ಕು ಜನರು ಮಿಕಮಿಕ ನೋಡುತ್ತಿದ್ದರು. ಇವರು ಅವರನ್ನು ಉದ್ದೇಶಿಸಿ ಮಾತಾಡುತ್ತಿರಲಿಲ್ಲವಾದ್ದರಿಂದ ಮಾತಿಗೆ ಗಂಭೀರ ತಾತ್ವಿಕ ಸ್ವರೂಪ ಬಂದಿತ್ತು. ಜತೆಗೆ ಕೂತಿದ್ದವರ ಮುಖವನ್ನು ಗಮನಿಸಿದ ಸೂರ್ಯ ಕೂಡಲೇ ತನ್ನ ಮಾತಿನ ವಿಧಾನವನ್ನು ಬದಲಾಯಿಸಿದ. "ನಾವಿಬ್ರೇ ಮಾತಾಡ್ಕೊಳ್ತಾ ಇದ್ವಿ. ನಿಮಿಗ್ ಬೇಜಾರಾಯ್ತೇನೋ" ಎಂದು ಆರಂಭಿಸಿ ಅದೇ ವಿಷಯಗಳನ್ನು ಉದಾಹರಣೆಗಳ ಸಮೇತ ವಿವರಿಸಿದ. ಬೇರೆ ಬೇರೆ ಕಡೆ ಇರುವ ಸಾಮಾಜಿಕ-ಆರ್ಥಿಕ ಪದ್ಧತಿಯ ಕೆಲವಂಶಗಳನ್ನು ಸರಳವಾಗಿ ಮನವರಿಕೆ ಮಾಡಿಸಲು ಯತ್ನಿಸಿದ. ಹಾಗಂತ ಮಾತಿನ ಗಾಂಭೀರ್ಯಕ್ಕೆ ಧಕ್ಕೆ ತಂದುಕೊಳ್ಳಲಿಲ್ಲ. ವಿಷಯಕ್ಕೆ ಲಘುತ್ವ ತರಲಿಲ್ಲ. ಗಂಭೀರ ವಿಷಯವನ್ನು ಅರ್ಥಮಾಡಿಸಿ ಕೊಡುವ ಸರಳ ವಿಧಾನವನ್ನಷ್ಟೇ ಅನುಸರಿಸಿದ್ದ. ಅವರಿಗೆ ಅಷ್ಟಿಷ್ಟು ಅರ್ಥವಾಗ್ತಾ ಹೋದಂತೆ 'ಆ ದೇಸ್ದಾಗೆ ನಮ್ತರ ಜನಾ ಎಂಗವ್ರೆ?... ಬ್ಯಾಸಾಯ ಎಂಗ್ ನಡೀತೈತೆ? ಅಲ್ಲೀರಾರೆಲ್ಲಾರ್‍ಗೂ ವಾದಾಕೆ ಬರ್‍ಯಾಕೆ ಬರ್‍ತೈತಾ?'– ಮುಂತಾದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತಿದ್ದರು.

ಅಷ್ಟರಲ್ಲಿ ಶಬರಿ ಸೂರ್ಯ ಮತ್ತು ನವಾಬನನ್ನು ಊಟಕ್ಕೆ ಕರೆದಳು. "ಅದೇನಂಗೆ ಗಂಡುಸ್ರನ್ ಕುಂದ್ರಿಸ್ಕಂಡು ಯೇಳ್ತಾ ಇದ್ದೀರ. ನಮ್ಗೂ ಒಸಿ ಯೇಳ್ರಿ. ರಾತ್ರಿ ಸಾಲೆ ನಡೀವಾಗ ಎಲ್ರು ಮುಂದೂ ಯೇಳಿರೆ ಚಂದಾಗಿರಾಕಿಲ್ವ?" ಎಂದು ಶಬರಿ ಕೂಗಿ ಹೇಳಿ ಜೊತೆಗೆ "ಇವಾಗ್ ಉಂಬಾಕ್ ಬರ್‍ರಿ" ಎಂದು ಕರೆದಳು. ಶಬರಿ ಹೇಳಿದ್ದರಲ್ಲೂ ಅರ್ಥವಿದೆಯೆನ್ನಿಸಿ ಸೂರ್ಯ ಹೇಳಿದ– "ನೀನ್ ಹೇಳಿದ್ದೂ ಸರ್‍ಯಾಗಿದೆ ಶಬರಿ. ಆದ್ರೆ ಇಲ್ ಮಾತಾಡಿದ್ದ ವಿಷ್ಯಾನ ಯಾವಾಗ್ಲಾದ್ರು ನಿಮ್ಗೂ ಹೇಳ್ತೀವಿ. ನಾವು ಕೂತ್ರೆ ನಿಂತ್ರೆ ಎಲ್ಲಾ ಕಡೆ ಹೀಗ್ ಮಾತಾಡ್ತ ಇರಬೇಕು ಗೊತ್ತಾ?"

"ಅಂಗಂಬ್ತ ಇಟ್ಟುಂಬಾದೆ ಮರ್ತು ಮಾತ್ನಾಗೇ ವೊಟ್ಟೆ ತುಂಬಿಸ್ಕಂಬ್ತೀರಾ?" ಬಿರ್ರನ್ ಬರ್ರಿ"– ಎಂದು ಶಬರಿ ಒತ್ತಾಯಿಸಿದಾಗ ಇವರು ಏಳಲು ಸಿದ್ಧರಾದರು.

ಅಷ್ಟರಲ್ಲಿ ಗೌರಿ ತನ್ನ ಗುಡಿಸಲಿಂದ ಹೊರಬಂದು ಬಿರಬಿರನೆ ಶಬರಿಯ ಗುಡಿಸಲಿಗೆ ಹೋದಳು.

"ಶಬರಿ, ಇವತ್ತು ನಂದೊಂದ್ ಮಾತ್ ನಡಿಸ್ಕೊಡು"– ಸರ್ರನೆ ಕೇಳಿದಳು.

"ಇದ್ಯಾತ್ರುದೆ ಇಂಗ್ ಕೇಳ್ತಿದ್ದೀಯ? ಅದೇನ್ ಯೇಳು" ಎಂದಳು ಶಬರಿ.

"ಇವತ್ತು ನವಾಬ್ ಸಾಬ್ರುನ್ನ ನನ್ ಮನೇಗ್ ಕರ್ದು ಉಂಬಾಕಿಕ್ಕಾನ ಅಂಬ್ತಾ ಇವ್ನಿ. ಆವ್ರಿಗೆ ಸಾಲೆತಾವ್ಲೆ ಯೇಳಿದ್ದೆ."

"ಆಟೇನಾ? ಯಾರ್ ಬ್ಯಾಡ ಅಂದ್ರು ಕರ್ಕಂಡೋಗು."

"ಅವ್ರ್ ಯಾಕೊ ಸುಮ್ಕೆ ಅವ್ರೆ ನೀನೇ ಒಸಿ ಯೇಳ್ಬಿಡು"

"ಸುಮ್ಕೆ ಅವ್ರೆ ಅಂಬ್ತ ಯಾಕಂಬ್ತೀಯ? ನೀನ್ ಕರ್ದಿದ್ರೆ ಬಂದೇ ಬರ್ತಾರೆ ಬಿಡು."

"ಅಂಗಲ್ಲ; ದಿನಾ ನಿನ್ ಮನ್ಯಾಗ್ ಉಂಬ್ತಾ ಇದ್ರಲ್ಲ... ಅದುಕ್ಕೆ....."

"ನವಾಬಣ್ಣಂಗ್ ಮಾಡಿರಾ ಮುದ್ದೇನ ಅಂಗೇ ಇಡ್ತೀನಿ. ವೊತ್ತಾರೆ ಎದ್ದಾಗ ತಂಗಳು ತಿನ್ನಪ್ಪ ಅಂಬ್ತ ಕೊಡ್ತೀನಿ; ಇಲ್ದಿದ್ರೆ ತಂಗಳಿಟ್ಟನ್ನ ನಿನ್ ತಲೇಗ್ ಕಟ್ತೀನಿ" ಎಂದು ಮುಗುಳ್ನಗುತ್ತ ಶಬರಿ ಹೊರಬಂದು ಹೇಳಿದಳು–

"ಇವತ್ತು ನವಾಬಣ್ಣ ಉಂಬಾದು ಗೌರಿ ಮನ್ಯಾಗೆ. ಸೂರ್ಯ ಉಂಬಾದು ನಮ್ಮನ್ಯಾಗೆ."

"ಯಾಕೆ ಇಬ್ರನ್ನೂ ಬೇರೆ ಮಾಡ್ತಿದ್ದೀರೇನು?" ಎಂದು ನಗುತ್ತ ಕೇಳಿದ ಸೂರ್ಯ.

"ನಾನ್ಯಾಕ್ ಬ್ಯಾರೆ ಮಾಡ್ಲಿ? ನಾವೇನಿದ್ರೂ ಒಂದ್ ಮಾಡಾರು" ಎಂದು ಶಬರಿ ಅದೇ ದಾಟಿಯಲ್ಲಿ "ಬರ್ ಬರ್ರಿ. ಯಾರ್ಯಾರ್ ಎಲ್ಲೆಲ್ ಬರ್ಬೇಕೊ ಅಲ್ಲಿಗ್ ಬರ್ರಿ" ಎಂದು ಹೇಳಿ ಒಳಗೆ ಹೋದಳು.

ಗೌರಿಯ ಗುಡಿಸಲಿಗೆ ನವಾಬ್ ಬಂದ.

"ಏನೋ ಬಡವರ್ ಮನೆ..... ಬ್ಯಾಸ್ರ ಮಾಡ್ಕ ಬ್ಯಾಡಿ"– ಗೌರಿ ಮಾತಿಗೆ ಶುರು ಮಾಡಿದಳು.

"ಈ ಥರಾ ಮಾತಾಡಿದ್ರೆ ಬೇಸರ ಆಗುತ್ತೆ. ನಾನ್ ಆವತ್ತೇ ಹೇಳಿದ್ದೀನಿ. ಹೆಸರು ಮಾತ್ರ ನವಾಬ, ಆದ್ರೆ ನಾನು ಗರೀಬ–ಅಂತ"– ನವಾಬ್ ಸ್ಪಷ್ಟವಾಗಿ

ನುಡಿದು "ಇಷ್ಟಕ್ಕೂ ಹೀಗೆಲ್ಲ ಪಟ್ಟಣದೋರ್ ಥರಾ ವಿನಯ ತೋರುಸ್‌ಬೇಡಿ" ಎಂಬ ಮಾತನ್ನೂ ಸೇರಿಸಿದ.

"ಯಾಕೆ ನಾವೂ ಪಟ್ಟಣ್‌ದೋರ್ ಥರ ಆಗಬಾರ್ದ? ಮತ್ತೆ ಓದುಬರಾ ಅಂಬ್ತ ಯಾಕ್ ಕಲುಸ್ತೀರಿ?"– ಗೌರಿ ಮುಗ್ಧವಾಗಿ, ದೃಢವಾಗಿ ಕೇಳಿದಳು.

"ಹಾಗಲ್ಲ ಗೌರಿ ನಾನ್ ಹೇಳಿದ್ದು. ಪಟ್ಟಣದ ವಿದ್ಯಾವಂತ್ರು, ಅನೇಕ್ರು ಎಲ್ಲದಕ್ಕೂ ಹೀಗೆ ನಯವಾದ ಮಾತಾಡೋದನ್ನ ಅಭ್ಯಾಸ ಮಾಡ್ಕೊಂಡು, ಅದನ್ನ 'ಮ್ಯಾನರ್ರು ಗೆಸ್ಚರ್ರು' ಅಂತ ಏನೇನೊ ಕರೀತಾರೆ. ಹೊರಗಡೆ ಹೀಗೆಲ್ಲ ಒಂದು ನಯ ವಿನಯದ ಮಾತುಗಳನ್ನೇ ನಿಜ ಮಾಡ್ಕೊಂಡು ಒಳಗೆ ಇಷ್ಟಿಷ್ಟೇ ಖಾಲಿ ಆಗ್ತಾರೆ. ಇದು ನಮ್ಗಿಂತ ವಿದೇಶದಲ್ಲಿ ಜಾಸ್ತಿ....." ಹೀಗೆ ನವಾಬ ವಿವರಣೆ ಕೊಡಲು ಆರಂಭಿಸಿದಾಗ ಗೌರಿ ಮಧ್ಯದಲ್ಲೇ ಬಾಯಿ ಹಾಕಿ "ಉಂಬಾಕ್ ಬಂದಾಗ್ಲೂ ಈಟೊಂದ್ ಬಿಗಿಯಾಗ್ ಮಾತಾಡಿದ್ರೆ ನಾವ್ಯಂಗ್ ಸಲಿಗೇನಾಗ್ ಮಾತಾಡಾಕಾಯ್ತದೆ? ಒಸಿ ನಮ್ತರಾ ಆಗಿ" ಎಂದು ಛೇಡಿಸಿದಳು.

"ನಾನು ನಿಮ್ತರಾ ಆಗ್ತಾ ಇರ್‍ವಾಗ ನೀವು ನಮ್ತರಾ ಆಗ್ಬಿಟ್ರೆ?"–ನವಾಬ ತುಂಟತನದಿಂದ ಕೇಳಿದ.

"ಆವಾಗ್ ಸರ್‍ಯಾತಲ್ಲ? ಇಬ್ರೂ ಒಂದೇ ಥರಾ ಆದಂಗಾತಲ್ಲ?" ಎಂದಳು ಗೌರಿ.

"ನಿಜ ನಿಜ, ನೀವು ನಮಗೆ ಹತ್ರಾ, ನಾವು ನಿಮಗೆ ಹತ್ರಾ ಆಗ್ತಾ ಹೋದ್ರೆ ಇಬ್ರಿಗೂ ಒಂದು ಮೀಟಿಂಗ್ ಪಾಯಿಂಟ್ ಇರುತ್ತೆ. ಆಗ ಒಂದೇ ಆಗ್ತೀವಿ"– ನವಾಬ ಹೀಗೆ ಹೇಳಿದಾಗ "ಅದೇನೊ ಟಿಂಗ್ ಟಿಂಗ್ ಅಂಬ್ತ ಯೇಳ್‌ಬ್ಯಾಡ್ರಿ. ನಮಿಗ್ ತಿಳ್ಯಂಗೇಳ್ರಿ" ಎಂದು ಮುಖ ಸಿಂಡರಿಸಿಕೊಂಡು ಕೇಳಿದಳು.

"ನೀನ್ ಕೇಳಿದ್ದು ಸರ್‍ಯಾಗಿದೆ. ನಾನ್ ಹೇಳಿದ ಅರ್ಥ. ನಾವು ನಿಮಗೆ ಒಂದು ವಿಷ್ಯಾನ ಅರ್ಥ ಮಾಡ್ಕೊಡೋಕೆ ನಿಮ್ಮ ಮಟ್ಟಕ್ಕೆ ಬರ್‍ತಾ ಇರ್‍ಬೇಕು. ನೀವು ತಿಳುವಳಿಕೆ ಪಡೀತಾ ನಮ್ಮ ಮಟ್ಟಕ್ಕೆ ಬರ್‍ತಾ ಇರ್‍ಬೇಕು. ಆಗ ಇಬ್ಬರೂ ಒಂದು ಜಾಗ್ದಲ್ಲಿ ಸೇರ್‍ತೀವಿ. ಅಂದ್ರೆ ಒಂದೇ ಥರಾ ಆಗ್ತೀವಿ. ಇದು ನಾನ್ ಹೇಳಿದ್ದು"– ನವಾಬ ವಿವರಿಸಿದ.

"ಆಯ್ತು ನವಾಬ್ರೆ ಆಯ್ತು. ನೀವೂ ಸೂರ್ಯಪ್ನಂಗೆ ಮಾತಾಡ್ತೀರ. ಕುಂತ್ರೆ ನಿಂತ್ರೆ ಅದೇ ಕುಣಿತ. ಇವಾಗ ಅದೆಲ್ಲ ಗಂಟು ಮೂಟೆ ಕಟ್ಟಿ ನಗ್ ನಗ್ತಾ ಉಂಬಾನ ಬರ್‍ರಿ." ಎಂದು ಹೇಳಿದ ಗೌರಿ ಗಂಗಳವನ್ನು ತಂದಿಟ್ಟಳು. ತನಗಾಗಿ ಇನ್ನೊಂದು ಗಂಗಳವನ್ನು ಇಟ್ಟುಕೊಂಡಳು.

"ಇಲ್ಲಿ ಗಂಡುಸ್ರಿಗ್ ಉಂಬಾಕಿಕ್ವಾಗ ಯೆಂಗುಸ್ರು ಜತ್ಯಾಗ್ ಕುಂತ್ಕಂಬಂಗಿಲ್ಲ. ಬ್ಯಾರೆ ಗಂಡುಸ್ರು ಜತೇಗಂತೂ ಉಂಬಂಗೇ ಇಲ್ಲ. ಇವತ್ತದೇನಾಯ್ತದೊ ನೋಡೇಬಿಡ್ತೀನಿ. ನಿಮ್ ಜತ್ಯಾಗ್ ಉಂಡೇಬಿಡ್ತೀನಿ. ನಿಮ್ ಜತ್ಯಾಗುಣ್ಬೇಕು ಅಂಬ್ತ ಆವತ್ನಿಂದ ಅಂದ್ಕಂಡು ಬರೀ ಕನಸ್ನಾಗೇ ಉಂಡಿದ್ದೆ. ಇವತ್ತು ನಿಜವಾಗ್ಲೂ ಉಂಡ್ ಬಿಡ್ತೀನಿ" ಎಂದು ಸಂಭ್ರಮದಿಂದ ಹೇಳುತ್ತಲೇ ಅನ್ನ ತಂದು ಬಡಿಸಿದಳು. ತಾನೂ ಬಡಿಸಿಕೊಂಡಳು.

"ಇದೇನು ಅನ್ನ?"–ನವಾಬ ಅಚ್ಚರಿಯಿಂದ ಕೇಳಿದ.

"ಮನೇಗ್ ನೆಂಟ್ರು ತರಾ ಕರ್ದು ಅದೆ ರಾಗಿ ಇಟ್ ಇಡಾಕಾಯ್ತದ? ನಾನೇ ಊರಾಕೋಗಿ ಅಕ್ಕಿ ತಗಂಡ್ ಬಂದು ಬಚ್ಚಿಟ್ಕಂಡಿದ್ದೆ. ಬಿರ್‌ಬಿರ್ನ ತಿನ್ನು"– ಗೌರಿ ಸಡಗರ ಸಂತೋಷಗಳಿಂದ ಹೇಳಿದಳು.

ನವಾಬನಿಗೆ ಭಾವವುಕ್ಕಿ ಬಂತು. ಎಂಥ ಮುಗ್ಧ ಪ್ರೀತಿ ಎಂದುಕೊಂಡ ಕ್ಷಣಕಾಲ ಅನ್ನಕ್ಕೆ ಕೈ ಹಾಕದೆ ಆಕೆಯನ್ನೇ ನೋಡಿದ.

"ಯೇ ಯಾಕಂಗ್ ನುಂಗಾ ತರಾ ನೋಡ್ತೀಯ? ನನ್ನ ಮಕದಾಗೇನ್ ದೆವ್ವ ಕುಣಿತೈತ?"– ಗೌರಿ ಕೆಣಕಿದಳು.

"ಇಲ್ಲ, ಹಕ್ಕಿ ಹಾರ್ತಾ ಇದೆ."

"ಇದೊಳ್ಳೆ ಚಂದಾಗಾತು. ನನ್ ಮಕ ನೋಡಿರೆ ವೊಟ್ಟೆ ತುಂಬಾಕಿಲ್ಲ. ಬಿರ್‌ಬಿರ್ನ ತಿನ್ನು. ಆಮ್ಯಾಕ್ ನಮ್ಮಪ್ಪ ಬಂದ್‌ಬಿಟ್ಟಾನು."

"ನಿಮ್ಮಪ್ಪ ಬಂದ್ರೇನ್ ಮಾಡ್ತಾನೆ?"

"ಏನ್ ಮಾಡ್ತಾನೆ? ಯೇಳ್ದೆ ಕೇಳ್ದೆ ನಿನ್ನ ಯಾಕ್ ಕರ್ದಿದ್ದು ಅಂಬ್ತ ಮಕಮಾರೆ ನೋಡ್ದೆ ಜಾಡುಸ್ತಾನೆ. ಅದ್ಕೇ ಬ್ಯಾಗುಂಬಾನ. ಈಟಕ್ಕೂ ನಮ್ಮಪ್ಪಂಗೆ ಅನ್ನ ಮಾಡೇ ಇಲ್ಲ. ನಿಂಗೇ ಅಂಬ್ತಾನೇ ಮಾಡಿವ್ನಿ" ಎಂದು ಒಂದೇ ಸಮ ಹೇಳಿದಳು.

ಬಹುವಚನದ ಬಟ್ಟೆ ಕಳಚಿದ ಏಕವಚನದ ಬೆತ್ತಲು;
ನಾಚಿದ ಮುಖದಲ್ಲಿ ಹೊಳೆದ ಕಣ್ಣುಗಳು,
ಮಾತಿಗೆ ಹತ್ತಾರು ಬಣ್ಣಗಳು.

ನವಾಬ್ ಮೌನವಾದ. ಊಟ ಮಾಡತೊಡಗಿದ. ಆಗ ಗೌರಿ ಕೆಣಕಿದಳು– "ಇದೇನು ಮೂಗ್ ಬಸವಣ್ಣನ್ ತರಾ ಉಂಬ್ತಾ ಕುಂತೆ. ಒಸಿ ಮಾತಾಡು. ಏನಾರ ಮಾತಾಡು."

ನವಾಬ "ಮಾತಾಡ್ತ ಊಟ ಮಾಡಾದ್ ತಡ ಆಗಿ ನಿಮ್ಮಪ್ಪ ಬಂದ್ರೆ?" ಎಂದ.

ಗೌರಿ "ಅಂಗಾರ್ ಮದ್ಲು ಉಂಡ್‌ಬಿಡಾನ; ಆಮ್ಯಾಕ್ ಮಾತುಗೀತು" ಎನ್ನುತ್ತಾ ಗಬಗಬನೆ ತಿನ್ನತೊಡಗಿದಳು. ನವಾಬ ಮುಗುಳ್ನಗುತ್ತ ಆಕೆಯನ್ನು ನೋಡುತ್ತ ಊಟ ಮಾಡಿದ.

ನೋಟವೇ ಊಟವಾದ ಸನ್ನಿವೇಶ.
ರಾತ್ರಿಗೆ ಹೊದಿಸಿದ ಹಗಲು ವೇಷ.
ಹೊರಗೆ ಕತ್ತಲು, ಒಳಗೆ ಹಗಲು.

ಇಲ್ಲಿ ಶಬರಿಯ ಮನೆಯಲ್ಲಿ ಊಟ ಮಾಡುತ್ತಲೇ ಆರಂಭವಾದ ಮಾತು. ಊಟವಾದ ಮೇಲೂ ಮುಗಿದಿರಲಿಲ್ಲ; ಮುಂದುವರೆದಿತ್ತು. ಕಟ್ಟೆ ಮೇಲೆ ಕೂತು ಆಡುತ್ತಿದ್ದ ಮಾತುಗಳನ್ನು ಮುಂದುವರೆಸಿದ್ದ–ಸೂರ್ಯ.

"ನೋಡು ಶಬರಿ, ನೀವು ಪ್ರಪಂಚದ ಇದ್ಯಾವುದೋ ಮೂಲೇಲಿ ವಾಸಮಾಡ್ತ ಇದ್ದೀರ. ಆದ್ರೆ ನಿಮ್ ಬಾಳುವೆ ಮೇಲೆ ಈ ದೇಶದೋರಷ್ಟೇ ಅಲ್ಲ, ಬೇರೆ ದೇಶದವರೂ ಪರಿಣಾಮ ಉಂಟುಮಾಡ್ತಾರೆ. ನಮ್ಮ ಸರ್ಕಾರಕ್ಕೆ, ಈ ದೇಶದಲ್ಲಿರೊ ಶ್ರೀಮಂತರಿಗೆ ಸಹಾಯ ಮಾಡ್ತಾರೆ ಆ ದೇಶದವರು. ಇಲ್ಲೆಲ್ಲ ಬಂಡವಾಳ ಹಾಕ್ತೀವಿ ಅಂತ ಹಣ ಸುರೀತಾರೆ. ಸರ್ಕಾರ ತಾವು ಹೇಳೊ ಹಾಗೆ ಕೇಳ್ಬೇಕು, ಹಾಗ್ ಮಾಡ್ಕೋತಾರೆ. ಇನ್ನು ಇಲ್ಲಿದಾರಲ್ಲ ಈ ಒಡೆಯರು, ಜೋಯಿಸ್ರು– ಇವ್ರು ತಂತಮ್ಮ ಸ್ವಾರ್ಥ ನೋಡ್ಕೋತಾರೆ. ಸಂಪತ್ತು ಎಲ್ಲಾ ಅವ್ರ್ ಹತ್ರಾನೇ ಇರ್ಬೇಕು, ನೀವೆಲ್ಲ ಹೀಗೇ ಕಷ್ಟದಲ್ಲೇ ಬದುಕಬೇಕು. ಒಡೆಯನಿಗೆ ಭೂಮಿ, ಜೋಯಿಸನಿಗೆ ಬುದ್ಧಿ, ಭೂಮಿ ಬುದ್ಧಿ ಎರಡೂ ಅವ್ರಿಗೆ ಬಲ ನೀಡುತ್ವೆ. ಅವರು ನಿಮ್ ಮೇಲೆ ಸವಾರಿ ಮಾಡ್ತಾರೆ"– ಹೀಗೆ ಸೂರ್ಯ ಉತ್ಕಟವಾಗಿ ವಿವರಿಸಿತೊಡಗಿದ.

"ಅಲ್ಲ, ನಂದೊಂದ್ ಅನ್ಮಾನ"–ಶಬರಿ ಮಾತು ಆರಂಭಿಸಿದಳು.

"ಏನು? ಏನದು ಕೇಳು"– ಸೂರ್ಯ ಅದಕ್ಕಾಗಿ ಕಾದವನಂತೆ ಹೇಳಿದ.

"ಅವಾಗ–ನಮ್ ಶಬರಜ್ಜಿ, ಕಾಡ್ನಾಗೆ ಗುಡಿಸ್ಲು ಕಟ್ಕಂಡು ರಾಮ್‌ದ್ಯಾವ್ರನ್ನ ಕಾಯ್ವಾಗ–ಅವ್ಳು ಅಣ್ಣು ಅಂಪ್ಲ ಬೆಳೀತಿದ್ಲು. ರಾಮಂಗೆ ಅಂಬ್ತ ಇಟ್ಕಂಡ್ ಕಾಯ್ತಾ ಇದ್ಲು– ಅಂಬ್ತ ಯೇಳ್ತಾರೆ. ಶಬರಜ್ಜೀಗೆ ಬೆಳೆ ಬೆಳ್ಯಾಕೆ ಬೂಮಿ ಇತ್ತು. ಆ ಬೂಮಿ ತಾಯಿ ಶಬರಜ್ಜೀಗೆ ವರ ಕೊಡ್ತಿದ್ಲು. ಅಣ್ಣು ಅಂಪ್ಲು, ಗೆಡ್ಡೆ, ಗೆಣಸು,

ಎಲ್ಲಾ ಕೊಡ್ತಿದ್ಲು. ಇವಾಗ ನಮಗೆ ನಮ್ದೇ ಅಂಬ್ತ ಒಂದಂಗೈ ಅಗ್ಲಾನೂ ಬೂಮಿ ಇಲ್ಲ; ಬೆವರು ಮಾತ್ರ ಐತೆ. ಯಾಕಿಂಗ್ ಅಂಬ್ತ?"–ನೋವನ್ನು ಕುದಿಸಿ ಮಾತಿನ ಮುದ್ದೆ ಮಾಡುವಂತೆ ಕೇಳಿದಳು, ಶಬರಿ.

ಸೂರ್ಯ ಉತ್ತೇಜಿತನಾದ; ಹೇಳತೊಡಗಿದ.

"ನೋಡು ಶಬರಿ, ಹಿಂದೆ, ಅದೇ ನಿಮ್ಮ ಶಬರಜ್ಜಿ ಕಾಲ ಬೇರೆ ಥರಾ ಇತ್ತು. ಒಂದ್ ಕಾಲ್ದಲ್ಲಿ ಭೂಮಿ ಯಾರ್ಗೂ ಸೇರಿರ್ಲಿಲ್ಲ ಅಥವಾ ಎಲ್ರಿಗೂ ಸೇರಿತ್ತು. ಕಾಡುಗಳಲ್ಲಿ, ಬೆಟ್ಟಗುಡ್ಡಗಳಲ್ಲಿ ಬಾಳ್ವೆ ಮಾಡ್ತಿದ್ದ ಮನುಷ್ಯರು ಎಲ್ರೂ ತಮತಮಗೆ ಬೇಕಾದಂತೆ ಭೂಮೀನ ಬಳಸ್ಕೋತಿದ್ರು. ಭೂಮೀನ ಹದಮಾಡ್ತಾ ಇದ್ರು. ಆದ್ರೆ ಬರ್ತಾ ಬರ್ತಾ ಬಲ ಇರೋರು ಬುದ್ಧಿ ಇರೋರು ಮಾಲೀಕರಾದ್ರು; ಬೆವರು ಬಸಿಯೋ ಜನರನ್ನ ಗುಲಾಮರ ಥರಾ ಮಾಡ್ಕೊಂಡ್ರು. ಬಲ ಇದ್ದೋರ್ಗೆ, ಬುದ್ಧಿ ಇದ್ದೋರ್ಗೆ ಬೆಂಬಲ ಸಿಗ್ತಾ ಹೊಯ್ತು. ಅವ್ರು ರಾಜರಾದ್ರು; ಮಂತ್ರಿಗಳಾದ್ರು. ಅವರೇ ಒಡೆಯರು. ಉಳಿದೋರು ಹೇಳಿದಂತೆ ಕೇಳೋರು. ಇವರ ಬೆಂಬಲಿಗರಿಗೆ–ಸಣ್ಣಪುಟ್ಟ ಬಲಶಾಲಿಗಳಿಗೆ, ಬುದ್ಧಿಶಾಲಿಗಳಿಗೆ ಇದೇ ಒಡೆಯರಿಂದ ಅಷ್ಟು ಇಷ್ಟು ಭೂಮಿ ಸಿಗ್ತು. ಬರ್ತಾ ಬರ್ತಾ ಏನಾಯ್ತಪ್ಪ ಅಂದ್ರೆ–ರಾಜರ ಕಾಲ ಮುಗೀತು; ರಾಜಕಾರಣಿಗಳ ಕಾಲ ಬಂತು. ಇವ್ರಲ್ಲೂ ಬಲ–ಬುದ್ಧಿ ಇರೋರೆ ಭೂಮಾಲೀಕರಾದ್ರು, ಪಟೇಲರಾದ್ರು, ಶಾನುಭೋಗರಾದ್ರು. ಉಳಿದವರು ಅವ್ರವ್ರ ಕುಲಕಸುಬು ಅಂತ ಇದ್ದಲ್ಲೇ ಇದ್ರು. ಬಲಶಾಲಿಗಳಿಗೆ ಬುದ್ಧಿಶಾಲಿಗಳಿಗೆ ಬೆವರು ಕೊಟ್ರು. ಆದ್ರೆ ಆರಂಭದಲ್ಲಿ ಈ ಬೆವರು ಕೊಟ್ಟೋರ್ಗೆ ಅವರು ಭೂಮೀನೂ ಕೊಡ್ಲಿಲ್ಲ. ಬುದ್ಧೀನೂ ಕೊಡ್ಲಿಲ್ಲ. ಆದ್ರೆ ಈಗ ಕಾಲ ಬದಲಾಗ್ತಿದೆ. ಭೂಮಿ, ಬುದ್ಧಿ, ಯಾರೊಬ್ಬರ ಸೊತ್ತೂ ಅಲ್ಲ ಅಂತ ಗೊತ್ತಾಗ್ತಾ ಇದೆ. ಯಾರು ಭೂಮೀಗೆ ಬೆವರು ಕೊಟ್ಟು ಬೆಳೆ ಬೆಳ್ಯೋಹಾಗ್ ಮಾಡ್ತಾರೊ ಅವ್ರಿಗೂ ಭೂಮಿ ಸಿಗ್ಬೇಕು ಅಂತ ಕೆಲವು ಕಾನೂನುಗಳೂ ಇವೆ. ಅಂದ್ರೆ 'ಉಳೋನೆ ಹೊಲದೊಡೆಯ' ಅನ್ನೊ ಮಾತಿಗೆ ಬೆಲೆ ಬಂದಿದೆ. ಆದ್ರೆ ನೀವೆಲ್ಲ ಒಟ್ಟಿಗೇ ಸೇರಿ ಜಗ್ಗಿಸಿ ಕೇಳ್ದಿದ್ರೆ ಕೆಲ್ಸ ಆಗೊಲ್ಲ......"

"ಒಂದ್ ಮಾತು"– ಶಬರಿ ಮಧ್ಯದಲ್ಲೇ ತಡೆದಳು.

"ಅದೇನೊ ಅಂದೆಲ್ಲ ಉಳೋನೇ....."

"ಹೊಲದೊಡೆಯ"

"ಸರ್ಯಪ್ಪ, ಉಳೋನೇ ಹೊಲದೊಡೆಯ ಅನ್ನಾದ್ ಬ್ಯಾಡ ಅಂಬಲ್ಲ ನಾನು. ಗಂಡುಸ್ರು ಉಳ್ತಾರೆ; ನಾವ್ ಯೆಣ್ ಯೆಂಗುಸ್ರು ಹೊಲ ಉಳಾಕಿಲ್ಲ.

ಆದ್ರೆ ನಾವು ಬೀಜ ಬಿತ್ತನೆ ಮಾಡ್ತೀವಿ; ಸಸಿ ಆಕ್ತೀವಿ; ಕಳೆ ತಗೀತೀವಿ; ಫಸಲು ಬಂದಾಗ ಕೊಯ್ಲು ಮಾಡ್ತೀವಿ. ಈಟೆಲ್ಲ ಮಾಡೀರು ನವ್ ಒಡೇರಾಗಂಗಿಲ್ವ?" ಶಬರಿ ತೀರ ಸಹಜವಾಗಿ ಪ್ರಶ್ನಿಸಿದಳು.

ಸೂರ್ಯನಿಗೆ ಅಚ್ಚರಿಯಾಯಿತು; ಸಂತೋಷವೂ ಆಯಿತು.

"ಸರ್ಯಾದ ಪ್ರಶ್ನೆ ಕೇಳ್ದೆ ಶಬರಿ. ಇದೇ ನೋಡು ನಮ್ಮ ಸಮಾಜದಲ್ಲಿರೊ ದೋಷ. ಗಂಡುಸ್ರಿಗೆ ಆಸ್ತಿ ಒಡೆತನ ಕೊಡ್ತಾ ಬಂದಿದಾರೆ. ಸಂಸಾರದಲ್ಲಿ ಗಂಡಸರೇ ಒಡೆಯರು. ಹೀಗಾಗಿ ಹೆಂಗಸರಿಗೆ ಅನ್ಯಾಯ ಆಗ್ತಾ ಬಂದಿದೆ......" ಎಂದು ಸೂರ್ಯ ಹೇಳುತ್ತಿದ್ದಾಗ ಶಬರಿ ಥಟ್ಟನೆ–"ನಮ್ಮ ಶಬರಜ್ಜೀಗೆ ಯಾವ್ ಗಂಡುಸ್ರು ಯಾಕ್ ಎದರಾಡ್ಲಿಲ್ಲ. ಅವ್ಳ್ ಬೆಳೀತಿದ್ದ ಬೂಮೀನ ಯಾಕ್ ಕಿತ್ಕಂಬ್ಲಿಲ್ಲ? ಕಾಡ್ನಾಗೆ ಯೆಣ್ಣೆಂಗ್ಸು ಒಬ್ಬಳೇ ಒಂಟಿ ಜೀವ್ನ ಮಾಡಿದ್ಲಲ್ಲ. ಇವಾಗಿದೆಲ್ಲ ಯಾಕಿಲ್ಲ?" ಎಂದು ಪ್ರಶ್ನಿಸಿದಳು.

"ಶಬರಜ್ಜಿ ಕತೆ ಇದ್ಯಲ್ಲ, ಆ ಕಾಲ್ದಲ್ಲಿ, ಆಗ ಆಸ್ತಿ ಅನ್ನೋದು ಇವತ್ತಿನ ಥರಾ ಇರ್ಲಿಲ್ಲ. ಕಾಡು ಅನ್ನೋದು ಆಳೋರಿಗೆ ಸೇರಿರ್ಲಿಲ್ಲ ಅಂತ ಕಾಣುತ್ತೆ. ಅದು ಸರ್ಯೋ ತಪ್ಪೊ ಈಗ ಬೇಡ. ಆದ್ರೆ ನಾನ್ ಆಗ್ಲೆ ಹೇಳ್ದಾಗೆ ಬರ್ ಬರ್ತಾ ಬಲಶಾಲಿಗಳು ಬುದ್ಧಿಶಾಲಿಗಳು..." ಎಂದು ಸೂರ್ಯ ಹೇಳುತ್ತಿರುವಾಗಲೇ ಶಬರಿ "ಅದು ನಂಗೊತ್ತಾತು ನಾನ್ ಕೇಳಾದು ಅದಲ್ಲ; ಆ ಶಬರಜ್ಜೀಗೆ ಬೂಮಿ ಇತ್ತು; ನಂಗ್ಯಾಕಿಲ್ಲ? ಉಳೋನೇ ವೊಲದೊಡ್ಯ ಅಂಬಾದು ಸರಿ ಅಂದ್ಕಮಾನ, ಆದ್ರೆ ವೊಲ್ದಾಗೆ ಆಟಂದೆಲ್ಲ ಕೆಲ್ಸ ಮಾಡ್ತೀವಲ್ಲ ಯೆಂಗುಸ್ರು ನಮಗ್ಯಾಕ್ ಒಡೆತನ ಕೊಡಾಕಿಲ್ಲ?" ಎಂದು ಹೇಳುತ್ತಿರುವಾಗಲೇ ಸೂರ್ಯ "ಅದನ್ನೇ ನಾನ್ ಹೇಳೋಕ್ ಹೊರಟಿದ್ದು" ಎಂದು ಮಾತಾಡಲು ಹೋದಾಗ ಶಬರಿ ಬಿಡಲಿಲ್ಲ,

"ನನ್ ಮಾತ್ ಕೇಳು. ನಂಗೆಲ್ಲಾ ಕೇಳಿದ್‌ಮ್ಯಾಗೆ ಏನನ್ನುಸ್ತುತೆ ಗೊತ್ತಾ? ಬೂಮ್‌ತಾಯಿ ನಮ್ ಗಂಡುಸ್ರಿಗ್ ಸಿಕ್ಕಿದ ಮ್ಯಾಗೂ ಯೆಣ್ಣೆಂಗುಸ್ರಿಗ ಸುಕ ಏನ್ ಸಿಗಾಕಿಲ್ವೇನೊ ಅನ್ನುಸ್ತೈತೆ. ನಿಂಗಂಗನ್ನಾಸಿಲ್ವ?"– ಎಂದು ಕೇಳಿದಳು.

"ಯಾಕ್ ಅನ್ನೊಲ್ಲ? ನನ್ ಪ್ರಶ್ನೇನೂ ಅದೇ. ಆಸ್ತಿ, ಅಧಿಕಾರ ಎಲ್ಲದ್ರಲ್ಲೂ ಹೆಂಗಸರು–ಗಂಡಸರು ಸಮಾನ ಅಂತ ಆಗ್ಬೇಕು"– ಸೂರ್ಯ ನಿರ್ಧಾರಕವಾಗಿ ಹೇಳಿದ. ಆಗ ಶಬರಿ ದೃಢವಾಗಿ ಹೇಳಿದಳು– "ಅದುಕ್ಕೆ ನಾನ್ ಏನ್ ಯೇಳ್ತೀನಿ ಗೊತ್ತ? ಇನ್‌ಮ್ಯಾಕೆ 'ಉಳೋನೇ ವೊಲದೊಡ್ಯ" ಅನ್ನಾ ಬದ್ಲು 'ದುಡ್ಯೋರೇ ಒಡೇರು' ಅಂಬ್ತ ಯೇಳ್ಬೇಕು."

ಶಬರಿಯ ಈ ಮಾತಿನಿಂದ ರೋಮಾಂಚಿತನಾದ. "ನವಾಬ್, ನವಾಬ್, ಬಾ ಇಲ್ಲಿ, ಬೇಗ ಬೇಗ....." ಎಂದು ಕೂಗುತ್ತ ಹೊರಬಂದ.

ಗೌರಿ ಗುಡಿಸಲಿನಲ್ಲಿದ್ದ ನವಾಬ್ ಏನಾಯಿತೊ ಎಂಬಂತೆ ದಡಬಡನೆ ಬಂದ. "ಏನಾಯ್ತು, ಏನಾಯ್ತು ಸೂರ್ಯ" ಎಂದು ಕೇಳಿದ. ಆ ವೇಳೆಗೆ ಶಬರಿಯೂ ಹೊರಬಂದಿದ್ದಳು. ಇತರರೂ ಗುಡಿಸಲಿನಿಂದ ಹೊರಬಂದರು. ಸೂರ್ಯ ಬಂದವರ ಕಡೆ ನೋಡುತ್ತಿದ್ದ. ನವಾಬ್ ಮತ್ತೆ ಕೇಳಿದ– "ಯಾಕಂಗ್ ಕೂಗ್ದೆ? ಏನಾಯ್ತು?"

ಸೂರ್ಯ ಸಮಸ್ಥಿತಿಗೆ ಬಂದು ಹೇಳಿದ– "ಶಬರಿ ಎಂಥಾ ಒಳ್ಳೆ ಮಾತ್ ಹೇಳಿದ್ಲು ಗೊತ್ತ? ನಾನು 'ಉಳುವವನೇ ಹೊಲದೊಡೆಯ' ಅನ್ನೊ ವಿಷ್ಯ ವಿವರಿಸ್ತಾ ಇದ್ದೆ. ಆಕೆ ಎಲ್ಲಾ ಕೇಳಿ ಒಂದು ಪ್ರಶ್ನೆ ಹಾಕಿದ್ಲು. ಇದನ್ನ ಎಲ್ರೂ ಹಾಕ್ಬೇಕು. ಶಬರಿ ಕೇಳಿದ್ಲು–ಅಲ್ಲ ಹೊಲದಲ್ಲಿ ದುಡ್ಯೋರು ಬರೀ ಗಂಡುಸ್ರಲ್ಲ; ಹೆಂಗಸ್ರು ಇನ್ನೂ ಹೆಚ್ಚು ಕೆಲ್ಸ ಮಾಡ್ತೀವಿ. ಆದ್ರೆ ನಮಗ್ಯಾಕೆ ಒಡೆಯರು ಅಂತ ಹೇಳಿಲ್ಲ ಅಂತ ಕೇಳಿದ್ಲು..."

ನವಾಬ ಥಟ್ಟನೆ "ಆಸ್ತಿ ಹಕ್ಕು ಹೆಂಗಸರಿಗೂ ಇದೆಯಲ್ಲ" ಎಂದ. "ಅದು ಬೇರೆ ವಿಷ್ಯ ಕಣಯ್ಯ. ಶಬರಿ ಕೇಳಿದ್ದು ಅದಲ್ಲ. ಈಗ ಭೂಮೀನೇ ಇಲ್ಲ. ಬೇರೆಯವರ ಭೂಮೀನ್ ಉಳೋರ್‍ಗೆ ಒಡೆತನ ಕೊಡ್ಬೇಕು ಅಂತ ಗೇಣಿದಾರರ ಪರವಾಗಿ ಕಾನೂನಿದೆ. ಇದು ಮೊದಲನೇ ಹಂತ. ಹೆಂಗಸರಿಗೂ ಆಸ್ತಿ ಹಕ್ಕು ಇದೆ ಇದೆ ಅಂದ್ರೆ ಅದು ಒಬ್ಬ ಪ್ರಜೆಯಾಗಿ ಇರೊ ಹಕ್ಕು. ಆದ್ರೆ ಶಬರಿ ಪ್ರಶ್ನೆ– ಹೊಲದಲ್ಲಿ ಕೆಲ್ಸ ಮಾಡೋ ಗಂಡುಸ್ರು–ಹೆಂಗಸ್ರ ಇಬ್ಬರು ಗೇಣಿದಾರರಲ್ವೆ?– ಅಂತ. ಆಕೆ ಮಾತಿನ ಆಳ್ದಲ್ಲಿ ಈ ಅಂಶ ಅಡಗಿದೆ. ಅದಷ್ಟೇ ಅಲ್ಲ; ಈ ತತ್ವಕ್ಕೆ ಒಂದು ಘೋಷಣೆನೂ ಕೊಟ್ಟಿದಾಳೆ. ತೀರಾ ಸಹಜವಾಗಿ ಆಕೆ ಅದನ್ನ ಹೇಳ್ದಾಗ ಎಷ್ಟು ಸಂತೋಷ ಆಯ್ತು ಗೊತ್ತಾ? ಅದಕ್ಕೇ ನಿನ್ನನ್ನ ಕರ್ದಿದ್ದು....." ಎಂದು ಸೂರ್ಯ ವಿವರಿಸಿದ.

"ಸರ್‍ಯಪ್ಪ. ಅದೇನ್ ಘೋಷಣೆ ಅದನ್ ಹೇಳು"– ನವಾಬ ಒತ್ತಾಯದಿಂದ ಕೇಳಿದ.

"ಉಳುವವನೇ ಹೊಲದೊಡೆಯ ಅನ್ನೋದು ಆಗ ಸರಿ. ಆದ್ರೆ ಈಗ 'ದುಡಿಯೋರೇ ಒಡೆಯರು' ಅನ್ಬೇಕು ಅನ್ನೋದು ಶಬರಿ ಕೊಟ್ಟಿರೊ ಘೋಷಣೆ. ಹೇಗಿದೆ?"– ಸೂರ್ಯ ಸಡಗರದಿಂದ ಹೇಳಿದ.

ನವಾಬ್ ಪ್ರತಿಕ್ರಿಯಿಸುವುದಕ್ಕೆ ಮುಂಚೆಯೇ ಗೌರಿ "ತುಂಬಾ ಚಂದಾಗೈತೆ"

ಎಂದಳು.

"ಯಾಕ್ ಚನ್ನಾಗಿದೆ?'– ಸೂರ್ಯ ಕೇಳಿದ.

"ಯಾಕೆ ಅಂದ್ರೆ? ದುಡ್ಯೋರು ಗಂಡಸ್ರಾನ ಆಗ್ಲಿ ಯೆಂಗುಸ್ರಾನ ಆಗ್ಲಿ ಒಡೆತನ ಬರಾದಾದ್ರೆ ಇಬ್ರಿಗೂ ಬರ್ಲಿ. ಒಂದ್ ಕಣ್ಣಿಗ್ ಸುಣ್ಣ, ಒಂದ್ ಕಣ್ಣಿಗ್ ಬೆಣ್ಣೆ ಯಾಕೆ?"– ಗೌರಿ ಹಿಂಜರಿಯದೆ ಉತ್ತರಿಸಿದಳು. ಆಗ ಶಬರಿ ಉತ್ಸಾಹಿತಳಾದಳು. "ಹ್ದೂ ಮತ್ತೆ. ನಾನದುಕ್ಕೇ ಯೇಳಿದ್ದು. ಮದ್ಲು ನೋಡಿರೇ ಒಡೇರೇ ಎಲ್ಲಾ ಬೂಮಿ ಇಟ್ಕಂಡು ನಮ್ ಗಂಡುಸ್ರಿಗೂ ಸಿಗ್ದಂಗ್ ಮಾಡಿದ್ರು; ಯೆಂಗುಸ್ರೀಗೂ ಸಿಗ್ದಂಗ್ ಮಾಡಿದ್ರು. ಉಳೋರೇ ಒಡೇರಾಗ್ಬಾಗ ನಮ್ಮಂತೋರು –ಬೂಮ್‌ತಾಯೀಗೆ ಅಂಬ್ತ ಬೆವರು ಸುರಿಸ್ದೋರು ಯೆಣ್ಣೆಂಗುಸ್ರು–ಏನ್ ತೆಪ್ ಮಾಡಿದ್ರು ಕಣ್ಣಿಗ್ ಸುಣ್ಣ ಅಚ್ಚೆಸ್ಕಮಾಕೆ? ಆಟೇ ಅಲ್ಲ, ಯಾರೆಲ್ಲಾನ ದುಡ್ಮೆ ಮಾಡ್ಲಿ, ದುಡಿಮೆ ಮಾಡಿದ್ಕೆಲ್ಲ ಅವ್ರೇ ಒಡೇರಾಗ್ಬೇಕು ಅಲ್ವಾ? ಯೇಳ್ರಿ ಮತ್ತೆ ಎಲ್ಲಾ?" ಎಂದು ಶಬರಿ ಸ್ಪಷ್ಟವಾಗಿ ಹೇಳಿದಾಗ ಸೂರ್ಯನಿಗೆ ಇಮ್ಮಡಿಸಿದ ಸಂತೋಷ–ಸಡಗರ.

"ಮಾತು ಅಂದ್ರೆ ಇದು. ಒಬ್ರೇ ಕೂತ್ಕಂಡು ಯೋಚ್ನೆ ಮಾಡ್ತಾ ಹೋದ್ರೆ. ಇದೆಲ್ಲ ಹೊಳಿಯುತ್ತೆ. ಯೋಚ್ನೆ ಮಾಡಿ. ಎಲ್ರೂ ಚನ್ನಾಗ್ ಯೋಚ್ನೆ ಮಾಡಿ" ಎಂದು ಪ್ರೇರೇಪಿಸಿತೊಡಗಿದ.

"ಇನ್ನೇನ್ ಕುಂತ್ಕಂಡ್ ಯೋಚ್ನೆ ಮಾಡಾದು, ಈಗ ನಿಂತ್ಕಂಡಂಗೇ ಸತ್ತ್ಯೆವ್ ಗೊತ್ತಾತಲ್ಲ"– ಎಂದಳು ಗೌರಿ.

ಆಗ ನವಾಬ ಉತ್ಸಾಹದಿಂದ – "ಏನ್ರಮ್ಮ ನಿಮ್ಗೇನನ್ಸುತ್ತೆ? ಏನಪ್ಪ, ಗಂಡುಸ್ರು ನೀವೂ ಹೇಳ್ರಿ ಶಬರಿ ಹೆಳಿದ್ದು ಸರ್‍ಯಾಗಿದೆ ಅಲ್ವಾ?" ಎಂದು ಕೇಳಿದ.

ಆಗ ಸೂರ್ಯ "ನಿಂತ ನಿಲುವಿಗೆ ಒತ್ತಾಯ ಮಾಡೋದ್ ಬೇಡ ಗೆಳೆಯ. ಅವ್ರ ಮನಸ್ಸಿಗೆ – ಇದು ನಿಜ ಅನ್ನಿಸ್ಬೇಕು" ಎಂದ. ಜೊತೆಗೆ "ಒಂದು ಮಾತ್ ಹೇಳ್ತೀನಿ. ಹೆಂಗಸರ ಪರ ಮಾತಾಡ್ತಿದಾರೆ ಅಂತ ಗಂಡಸ್ರು ತಿಳ್ಕೋಬಾರ್ದು. ಇಡಿಯಾಗಿ ಬುಡಕಟ್ನೋರ್ ಪರ, ಬಡವರ ಪರ ನಾವ್ ಹೀಗಂತ ಹೇಳ್ತಿರೋದು" ಎಂದು ಸ್ಪಷ್ಟಪಡಿಸಿದ.

"ಯೇ ಅದ್ಯಾಕಪ್ಪ ಅಂಗಂಬ್ತೀಯ?" ಒಬ್ಬ ಗಂಡಸು ಹೇಳಿದ – "ಇವಾಗೇನ್ ನಮಿಗೆ ಬೂಮಿ ಐತಾ? ಬೆಳೆ ಐತಾ? ಬರಂಗಿದ್ರೆ ಗಂಡುಸ್ರಿಗಾನ ಬರ್ಲಿ, ಯೆಂಗುಸ್ರಿಗಾನ ಬರ್ಲಿ. ಒಟ್ಗೇ ಇಬ್ರಿಗಾನ ಬರ್ಲಿ. ಮದ್ಲು ಬರ್ಲಿ."

ಇನ್ನೊಬ್ಬ "ಸರ್‍ಯಾಗೇಳ್ದೆ ಕಣಯ್ಯ" ಎಂದ ಮೆತ್ತಗೆ.

ಆಗ ಸೂರ್ಯ ಹೇಳಿದ– “ನಿಜ; ಈಗ ನಿಮಿಗೆ ಭೂಮಿ ಇಲ್ಲ. ಬರೋದಕ್ಕೆ ಬೇಕಾದ ಕೆಲ್ಸಾನೂ ಆಗಿಲ್ಲ. ಆದ್ರೆ ಮುಂದೆ ಭೂಮಿ ಬಂದ್ರೆ ನಿಮ್ ನಿಮ್ಮಲ್ಲೇ ವ್ಯತ್ಯಾಸ ಇರಬಾರದು ಅಲ್ವಾ?”

ಆಗ ಮೊದಲು ಮಾತನಾಡಿದವ ಹೇಳಿದ– “ವೆತ್ತಾಸ ಏನಿದ್ರು ಇರೋರ್ಗೆ ಕಣಪ್ಪ. ಇಲ್ದೋರ್ಗಲ್ಲ.”

ಎಂಥ ಸೊಗಸಾದ ಮಾತು ಎನ್ನಿಸಿತು ಸೂರ್ಯನಿಗೆ. ನವಾಬನಲ್ಲೂ ಮಂದಹಾಸ ಮೂಡಿತು.

ಈ ವೇಳೆಗೆ ಹೆಂಗಸರಲ್ಲೂ ದನಿ ಮೂಡತೊಡಗಿತು. ಒಬ್ಬ ಹೆಂಗಸು “ಸ್ಯಬರಿ ಯೇಳಾದು ಸರ್ಯಾಗೇ ಐತೆ. ಅಂಗೇನೆ ನಮ್ ಗಂಡುಸ್ರು ಯೇಳಾದೂ ಚಂದಾಗೆ ಐತೆ. ಯೆಂಗಾರ ನಮ್ಗೂ ಒಸಿ ಬೂಮಿಕಾಣಿ ಬರಂಗ್ ಮಾಡಪ್ಪ ಮಾರಾಯ” ಎಂದಳು.

ಸೂರ್ಯ ಮತ್ತು ನವಾಬ ಒಟ್ಟಿಗೇ “ಖಂಡಿತ ಮಾಡ್ತೀವಿ” ಎಂದರು.

ಆಗ ಶಬರಿ ಹೇಳಿದಳು– “ಮಾತಾಡಿದ್ವಿ ಅಂದ್ರೆ ಮನೆ ಬಾಗ್ಲಿಗ್ ಬಂದೇ ಬಿಡ್ತಾಳ ಬೂಮ್‌ತಾಯಿ. ಅದ್ಕೂ ಏನೇನ್ ಮಾಡ್ಬೇಕೊ ಏನ್ಕತೆಯೊ.”

ಗಂಡಸೊಬ್ಬ– “ ಸರ್ಯಾಗೇ ಯೇಳ್ದೆ ಕಣವ್ವ. ಆ ಒಡೇರ್ತಾವಿರಾ ಬೂಮಿ ನಮಿಗ್ ಬರಾದೆಲ್ಲಾನ ಉಂಟಾ! ಏಟಾದ್ರೂ ಅವ್ರ್ ಒಡೇರು” ಎಂದು ರಾಗ ಎಳೆದ.

ಈಗ ಮೂಡಿದ ಭಾವನೆಗಳ ದಿಕ್ಕು ಬದಲಾಗಬಾರದೆಂದು ಬುದ್ಧಿಪೂರ್ವಕವಾಗಿ ಯೋಚಿಸಿದ ಸೂರ್ಯ “ಅದೆಲ್ಲ ಒಂದೇ ದಿನದಲ್ಲ್ ಆಗೋದಿಲ್ಲ, ಯಾರು ಯಾರ್ನೂ ತುಳಿದು ಜೀವನ ಮಾಡ್‌ಬಾರದು ಅನ್ನೊ ತಿಳುವಳಿಕೆ ನಿಮಿಗ್ ಬಂದ್ರೆ ಮುಂದೆ ಏನ್ ಮಾಡ್ಬೇಕು ಅಂತ ಗೊತ್ತಾಗ್ತ ಹೋಗುತ್ತೆ. ಈ ಭೂಮಿತಾಯಿ ಮೇಲೆ ನಿಮಿಗೆ ಎಷ್ಟೊಂದು ಭಯಭಕ್ತಿ ಎಲ್ಲಾ ಇದೆ. ಇಂಥಾ ಭೂಮಿತಾಯೀನ ಒಬ್ರೇ ಗುತ್ತಿಗೆ ಹಿಡ್ಕೊಂಡು ಅವ್ರ್ ಸಂಸಾರ ಸಾಕೋಕೆ ಸೇವಕಿ ಥರ–ಅಂದ್ರೆ ಮನೆ ಆಳಿನ ಥರಾ ನಡಿಸ್ಕೊಳ್ಳೋದು ಸರ್ಯಾ? ನೀವ್ ನೀವೇ ಕೂತ್ಕೊಂಡು ಯೋಚ್ನೆ ಮಾಡ್ತಾ ಹೋಗಿ. ಆಮೇಲ್ ಒಂದು ದಿನ ಎಲ್ಲಾ ಸೇರಿ ಯಾವ್ದಾದ್ರೂ ದಾರಿ ಕಂಡ್ಕೊಂಡ್ರಾಯ್ತು. ಒಟ್ನಲ್ಲಿ ಇವತ್ತು ಶಬರಿ ಹೇಳಿದ್ದು ಸರಿ. ಅದ್ರ ಬಗ್ಗೆ ತಕರಾರಿಲ್ಲ ಅಲ್ವಾ?” ಎಂದು ಮತ್ತಷ್ಟು ಮಾತು ಹೇಳಿದಾಗ ಅನೇಕರು “ತಕರಾರೇನೈತಪ್ಪ ನಿನ್ ದರ್ಮ, ಒಳ್ಳೆ ಮಾತ್ಯಾರೇಳೀರೇನು?” ಎಂದರು. ಕೆಲವರು “ಸ್ಯಬರಿ, ನಮ್ ಹುಡುಗಿ ಏನೇಳೀರು ಚೆಂದ” ಎಂದರು.

ಆಗ ಸೂರ್ಯ "ಆಯ್ತು ಹೋಗಿ" ಎಂದು ಕೈಮುಗಿದ. ಆಗ "ನೀನ್ಯಾತಕ್ ನಮಿಗ್ ಕೈಮುಗೀತೀಯ? ಎದೆ ಸೀಳೀರ್ ಒಂದಕ್ಸರ ಬರಾಕಿಲ್ಲ ಇನ್ನೂವೇ" ಎಂದಳು ಒಬ್ಬ ಹೆಂಗಸು. ಇತರರೂ ಹೌದೆಂಬಂತೆ ನೋಡಿದರು.

"ಹಾಗೆಲ್ಲ ಹೇಳ್‌ಬೇಡಿ. ನೀವೆಲ್ಲ ನನ್ನ ಅಕ್ಕಂದ್ರು, ಅಣ್ಣಂದ್ರು ಇದ್‌ಹಾಗೆ. ಒಂದ್ ಮಾತ್ ಹೇಳ್ತೀನಿ– ವಿದ್ಯಾವಂತರೆಲ್ಲ ವಿವೇಕಿಗಳಲ್ಲ; ಅವಿದ್ಯಾವಂತರೆಲ್ಲ ಅವಿವೇಕಿಗಳಲ್ಲ– ನಿಮ್ಮನ್ನ ನೋಡ್ದಾಗ ಈ ಸತ್ಯ ಗೊತ್ತಾಗುತ್ತೆ"– ಸೂರ್ಯ ಎದೆಯಾಳದಿಂದ ಹೇಳಿದ. "ದೊಡ್ಮನ್ಸ ದೊಡ್ ಮನ್ಸು" ಎಂದು ತಂತಮ್ಮಲ್ಲೇ ಮಾತಾಡ್ತಾ ತಂತಮ್ಮ ಗುಡಿಸಲುಗಳಿಗೆ ಹೋದರು.

ಸೂರ್ಯ, ನವಾಬನನ್ನು ಕರೆದುಕೊಂಡು ಹೊರಗಡೆಹೊರಟ. ಶಬರಿ ಆಶ್ಚರ್ಯದಿಂದ ಕೇಳಿದಳು–"ಈಟೋತ್ನಾಗ್ ಎಲ್ಲಿಗೋಯ್ತೀರ?" ಸೂರ್ಯ– "ಬೆಳದಿಂಗಳೈತಲ್ಲ ಶಬರಿ. ಹೀಗೆ ಅಡ್ಡಾಡ್ಕಂಡ್ ಬರ್ತೀವಿ" ಎಂದು ಹೇಳಿ "ಬಾರೊ ಗೆಳೆಯ" ಎಂದು ಕರೆದೊಯ್ದ.

ಬೆಟ್ಟ ಗುಡ್ಡ ಬಯಲು ತುಂಬ ಬೆಳದಿಂಗಳು.
ಅದು ಹೊರಗಿನ ಬೆಳದಿಂಗಳಷ್ಟೆ ಅಲ್ಲ;
ಭಾವದ ಬೆಳದಿಂಗಳು.

ಇಲ್ಲಿ ಶಬರಿ ಗುಡಿಸಲು ಮುಂದೆ ನಿಂತು ಆಕಾಶದತ್ತ ನೋಡಿದಳು. ಮೇಲೆ ಬೆಳಗುವ ಚಂದ್ರ. ಬೆಳದಿಂಗಳೆಂದು ಹೊರಟ ಸೂರ್ಯ.

ಚಂದ್ರನ ಬೆಳಕಲ್ಲಿ ಸೂರ್ಯನ ಪಯಣ.

ಹಟ್ಟಿ ತುಂಬಿದ ತಿಂಗಳ ಬೆಳಕಲ್ಲಿ ಶಬರಿ ನಿಂತಿದ್ದಳು. ಇಲ್ಲೀವರೆಗೆ ನಡೆದ ಘಟನೆ ಅವಳಲ್ಲಿ ಹೇಳಲಾಗದ ಅನುಭವವನ್ನು ತುಂಬಿಕೊಟ್ಟಿತ್ತು. ಎಲ್ಲವೂ ತಾನೇತಾನಾಗಿ ನಡೆದಂತೆ; ಮನಸ್ಸಿಗೆ ಮಾತು ಬಂದಂತೆ.

ತಿಂಗಳ ಬೆಳಕನ್ನು ತುಂಬಿಕೊಳ್ಳುತ್ತ ಒಳಗೆ ಹೋದಳು. ತನ್ನಲ್ಲೇ ಇಟ್ಟು ಕೊಂಡಿದ್ದ ಚಂದ್ರನ ಫೋಟೋವನ್ನು ನೋಡತೊಡಗಿದಳು. ಇದು ಹರಿದುಕೊಂಡ ಫೋಟೋ, ಅಂದು ಸೂರ್ಯ ಚಂದ್ರರಿಬ್ಬರೂ ಇದ್ದ ಚಿತ್ರವನ್ನು ಅರ್ಧಕ್ಕೆ ಹರಿದದ್ದು, ಇದನ್ನು ತನ್ನಲ್ಲೇ ಇಟ್ಟುಕೊಂಡದ್ದು, ಆಗಾಗ್ಗೆ ನೋಡಿಕೊಂಡದ್ದು– ಎಲ್ಲ ಭಗ್ಗೆಂದು ತುಂಬಿ ಬರುತ್ತದೆ.

ಬೆಳದಿಂಗಳಿಗೆ ಲಗ್ಗೆಯಿಟ್ಟ ಉರಿ ಬಿಸಿಲು!

ತಿಂಗಳ ಹಾದಿಯಲ್ಲಿ ಬಿಸಿಲು ಬಂಡಿಯ ಪಯಣ.

ಹಿಡಿದುಕೊಂಡಿದ್ದ ಚಂದ್ರನ ಚಿತ್ರ ಸುಡುತ್ತಿರುವ ಸಂಕಟ. ಸೂರ್ಯನ ಚಿತ್ರ ಹೇಗಿದೆಯೊ?

ಬಗಲು ಚೀಲದ ಬಳಿಗೆ ಬಂದಳು. ಪುಸ್ತಕವೊಂದು ಹೊರಗೇ ಇತ್ತು. ಅದು ಕೆಂಪು ಪುಸ್ತಕ!

ಪುಸ್ತಕವನ್ನು ತೆಗೆದುಕೊಂಡು ತಿರುವಿ ಹಾಕಿದಳು. ಸೂರ್ಯನ ಚಿತ್ರ ಸಿಕ್ಕಿತು. ಅದನ್ನು ತೆಗೆದುಕೊಂಡು ಚಂದ್ರನ ಚಿತ್ರದ ಪಕ್ಕದಲ್ಲಿಟ್ಟಳು. ಯಾಕೊ ಸರಿಬರಲಿಲ್ಲ. ಸೂರ್ಯನ ಚಿತ್ರವನ್ನು ಕೈಗೆತ್ತಿಕೊಂಡಳು.

ಸೂರ್ಯನ ಚಿತ್ರಕ್ಕೆ ಬಿಸಿಲಿನ ಬೇಗೆಯಿಲ್ಲ; ಬೆಳದಿಂಗಳ ತಂಪು.

ನೋಡುತ್ತಲೇ ಇದ್ದ ಶಬರಿಗೆ ಬಗಲು ಚೀಲದ ಬಗ್ಗೆ ಕುತೂಹಲ ಕೆರಳಿತು. ತನ್ನನ್ನು ನೋಡಿದ ಕೂಡಲೇ ಚೀಲವನ್ನು ಸೂರ್ಯ ಮರೆಮಾಡಿದ್ದು ನೆನಪಿಗೆ ಬಂದು ಕುತೂಹಲ ಮತ್ತಷ್ಟು ಹೆಚ್ಚಿತು. ಸೂರ್ಯನ ಚಿತ್ರವನ್ನು ಪುಸ್ತಕದ ಒಳಗಿಟ್ಟು ಚೀಲದೊಳಗೆ ಕೈಇಟ್ಟಳು. ಅದರಲ್ಲೂ ಪುಸ್ತಕಗಳಿದ್ದವು. ತೆಗೆದುನೋಡಿದಳು. ಕೆಂಪು ರಟ್ಟಿನ ಎರಡು ಪುಸ್ತಕಗಳು. ಎರಡು ಸಾದಾ ಪುಸ್ತಕಗಳು; ಒಂದೆರಡು ಬಟ್ಟೆ ಇಷ್ಟೆಲ್ಲ ಈ ಬಗಲು ಚೀಲದಲ್ಲಿ. ಮತ್ತೆ ಒಳಗೆ ಕೈ ಇಟ್ಟ ಶಬರಿಯ ಮುಖದಲ್ಲಿ ಆಶ್ಚರ್ಯ, ಕುತೂಹಲ ಹೆಚ್ಚುತ್ತ ಹೋದಂತೆ ಕೈ ಹೊರತೆಗೆದಳು.

ಪಿಸ್ತೂಲು!

ಎಂದೊ ಪೋಲಿಸರ ಕೈಯ್ಯಲ್ಲಿ ಕಂಡಿದ್ದಳು. ಈಗ ಸೂರ್ಯನ ಬಗಲು ಚೀಲದಲ್ಲಿ! ಹಾಗಾದರೆ ಸೂರ್ಯ ಯಾರು? ಸರಿಯಾಗಿ ತಿಳಿಯದೆ ಪಿಸ್ತೂಲು ಸಮೇತ ನಿಂತುಕೊಂಡಳು. ಯೋಚಿಸತೊಡಗಿದಳು.

ಬಿಸಿಲು ಬಡಿದು ಬೆಳದಿಂಗಳು ಚೂರಾಗುವ ಅನುಭವ.

ಬಿಸಿಲೇ ಬೆಳದಿಂಗಳಾಗುವುದೊ ಬೆಳದಿಂಗಳು ಬಿಸಿಲಾಗುವುದೊ!

ಸರಸರನೆ ಹರಿವ ತಳಮಳ.

ಅಷ್ಟರಲ್ಲಿ ಸೂರ್ಯ "ಶಬರಿ" ಎಂದು ಕೂಗುತ್ತ ಬಂದ.

ಶಬರಿ ತಕ್ಷಣ ಪಿಸ್ತೂಲನ್ನು ಚಂದ್ರನ ಚಿತ್ರ ಸಮೇತ ಸೆರಗಿನಲ್ಲಿ ಮುಚ್ಚಿಕೊಂಡಳು.

ಸೂರ್ಯ "ಇವತ್ತು ತುಂಬಾ ಆನಂದವಾಯ್ತು ಶಬರಿ. ನೀನು ನಿಜಕ್ಕೂ

ಒಂದು ಶಕ್ತಿ ಆಗ್ತೀಯ; ಉಳಿದೋರಲ್ಲೂ ಶಕ್ತಿ ತುಂಬ್ತೀಯ. ಇಷ್ಟು ಹೊತ್ತೂ ಗೆಳೆಯನ ಹತ್ರ ಇದೇ ಮಾತಾಡ್ತಾ ಇದ್ದೆ" ಎಂದು ಹೇಳತೊಡಗಿದ. ಶಬರಿ ಮಾತಾಡದೆ ನಿಂತಿದ್ದಳು. ಸೂರ್ಯ ಮಾತು ನಿಲ್ಲಿಸಲಿಲ್ಲ. "ಬೆಳದಿಂಗಳು ತುಂಬಾ ಹಾಯಾಗಿತ್ತು. ತೋಪಿನ ಹತ್ರ ಹೋದ್ವಿ. ಮರಗಳ ಮಧ್ಯೆ ತೂರ್ ಬಂದು ಭೂಮಿ ಮೇಲೆ ಬಿದ್ದಿರೊ ಬೆಳದಿಂಗಳು ನೋಡೋದೇ ಒಂದು ಅಂದ; ಅಲ್ಲಿ ನಿನ್ ವಿಷ್ಯ ಮಾತಾಡೋದೇ ಒಂದ್ ಆನಂದ. ಒಳ್ಳೇ ಅನುಭವ"– ಸೂರ್ಯ ಹೇಳುತ್ತಲೇ ಇದ್ದ. ಶಬರಿಗೆ ಏನು ಹೇಳಬೇಕೆಂದು ತೋಚಲಿಲ್ಲ.

ಬಿಸಿಲಿನ ಬಾಯಲ್ಲಿ ಬೆಳದಿಂಗಳ ಮಾತು!
ಯಾವುದು ಬೆಳದಿಂಗಳು, ಯಾವುದು ಬಿಸಿಲು?
ಸೂರ್ಯನ ಜರಡಿಯಲ್ಲಿ ಬೆಳದಿಂಗಳ ಬೆಳಕು!
ಯಾವುದು ದಿಟ? ಯಾವುದು ಅಲ್ಲ?

ಪಿಸ್ತೂಲು ಸೆರಗಿನಲ್ಲಿ ಸಿಡಿಮಿಡಿಯೆನ್ನತೊಡಗಿತು. ಶಬರಿ ಸೆರಗನ್ನು ಬಿಗಿಯಾಗಿ ಹಿಡಿದುಕೊಂಡಳು. ನಕ್ಕಂತೆ ಮಾಡಿ ಅಲ್ಲಿಂದ ಹೊರಟಳು.

ಸೂರ್ಯನಿಗೆ ಅರ್ಥವಾಗಲಿಲ್ಲ. ಹಾಗಂತ ಅಪಾರ್ಥವನ್ನೂ ಮಾಡಿಕೊಳ್ಳಲಿಲ್ಲ. ಹೊಗಳಿಕೆಯಿಂದ ನಾಚಿಕೆಯಾಗಿರಬೇಕು ಎಂದುಕೊಂಡು ತನ್ನ ಜಾಗಕ್ಕೆ ಬಂದ; ಕೂತ.

ಪುಸ್ತಕಗಳನ್ನು ನೋಡಿದಾಗ ಏನೋ ವ್ಯತ್ಯಾಸ ಕಾಣಿಸಿತು. ಬಗಲು ಚೀಲ ಅಸ್ತವ್ಯಸ್ತವಾಗಿ ಬಿದ್ದಿತ್ತು. ಸೂರ್ಯ ತೆಗೆದುಕೊಂಡ. ಒಳಗೆ ಕೈ ಇಟ್ಟು ನೋಡಿದ.

ಪಿಸ್ತೂಲು ಇಲ್ಲ!

ಕಿಟ್‌ಬ್ಯಾಗಿನಲ್ಲಿ ಹುಡುಕಿದ. ಅಲ್ಲೂ ಇರಲಿಲ್ಲ. ತಲೆದಿಂಬಿನ ಕೆಳಗೂ ಇಲ್ಲ. ಗಾಬರಿಗೊಂಡ. ಆದರೂ ಆತುರಪಡದೆ ಸ್ವಲ್ಪ ಹೊತ್ತು ಸುಮ್ಮನೆ ಕೂತ. ಆದರೆ ಚಡಪಡಿಕೆ ನಿಲ್ಲಲಿಲ್ಲ. "ಶಬರಿ" ಎಂದು ಕೂಗಿದ.

ಶಬರಿ ಬಂದಳು. ಮಾತಾಡದೆ ನಿಂತಳು. "ಯಾಕಂಗ್ ಸುಮ್ನೆ ನಿಂತ್ಕಂಡೆ?' ಎಂದು ಕೇಳಿದ. "ಕರ್ದಿದ್ದು ನೀನಲ್ವ? ಅದೇನ್ ಕೇಳು" ಎಂದು ಶಬರಿ ನೇರವಾಗಿ ಹೇಳಿದಳು. ಅವಳಲ್ಲಿ ಮೊದಲಿನ ತಳಮಳ ಇದ್ದಂತಿರಲಿಲ್ಲ.

"ನನ್ ಚೀಲ್ದೊಳ್ಗೆ ಕೈ ಹಾಕಿದ್ಯ ನೀನು?"– ಸೂರ್ಯ ಅಷ್ಟೇ ನೇರವಾಗಿ ಕೇಳಿದ.

"ಯಾಕೆ? ಅದ್ರಾಗೇನಾರ ದುಡ್‌ಗಿಡ್ ಮಡಗಿದ್ಯ?"

"ದುಡ್ ಕಳ್ದೋಗಿದ್ರೆ ನಾನ್ ಚಿಂತೇನೆ ಮಾಡ್ತಿರ್ಲಿಲ್ಲ. ಪೀಡೆ ತೊಲಗ್ತು ಅಂದ್ಕೋತಿದ್ದೆ."

"ಅಂಗಾರದೇನಪ್ಪ ಅಂತಾ ಸಾಮಾನು ಕಳ್ದೋಗಿರಾದು? ಚಿನ್ನ ಬೆಳ್ಳಿ ಏನಾರ ಬಚ್ಚಿಟ್ಕಂಡಿದ್ದಾ?"

"ನಿನ್ನ ತಲೆ? ಚಿನ್ನಾನೂ ಇಲ್ಲ, ಬೆಳ್ಳೀನೂ ಇಲ್ಲ.... ಅದೆಲ್ಲ ನಂಗೆ ಕಂಡ್ರೆ ಆಗೋದಿಲ್ಲ"– ಸೂರ್ಯ ಸಿಡಿಮಿಡಿಗೊಂಡು ಹೇಳಿದ.

ಮೌನವಾಗಿ ಶಬರಿ ಸೂರ್ಯನ ಹತ್ತಿರ ಬಂದು ಸೆರಗಿನಿಂದ ಪಿಸ್ತೂಲು ತೆಗೆದು "ತಗಾ" ಎಂದು ಕೊಡ ಹೋದಳು. ಸೂರ್ಯ ದಿಟ್ಟಿಸಿದ.

"ಯಾಕಂಗ್ ನುಂಗಾ ತರಾ ನೋಡ್ತೀಯಾ? ನೀನೇ ಯೇಳ್ದಲ್ಲ ವೊರಗೆ ಬೆಳದಿಂಗಳು ಚಂದಾಗಿತ್ತು ಅಂಬ್ತ. ಇಲ್ಲಿ ಒಳ್ಗೆ ಬಿಸ್ಲು ಬಡೀತಾ ಇತ್ತು. ಅದ್ಕೇ ನಿನ್ ಪಟ ನೋಡಾನಾಂಬ್ತ ಚೀಲ್ದಾಗ್ ಕೈ ಇಟ್ರೇ– ಮಿಡಿನಾಗರ ಸಿಕ್ದಂಗೆ ಇದು ಸಿಕ್ ಬಿಡ್ತು. ತಗಾ" ಎಂದು ಹೇಳುತ್ತ ಕೊಟ್ಟಳು.

ಸೂರ್ಯ ಪಿಸ್ತೂಲನ್ನು ತೆಗೆದುಕೊಳ್ಳುತ್ತ "ಸದ್ಯ ಇಲ್ಲೇ ಇತ್ತಲ್ಲ. ಎಲ್ಲಾದ್ರು ಕಳ್ಕಂಡ್ ಬಂದ್ನೇನೊ ಅಂದ್ಕೊಂಡಿದ್ದೆ" ಎಂದು ಸಮಾಧಾನದಿಂದ ನುಡಿದ.

ಸ್ವಲ್ಪ ಹೊತ್ತು ಮೌನ.
ಎರಡು ದಡಗಳ ನಡುವೆ ಹರಿವ ನದಿ
ತೇಲಿ ಮುಳುಗುವ ಹತ್ತಾರು ತುಂಡು ಗಿಡಗಳು

ಗಂಟಲು ಸರಿಪಡಿಸಿಕೊಂಡ ಶಬರಿ ಕೇಳಿಯೇಬಿಟ್ಟಳು–ಗಂಭೀರ ಗಡಸು ದನಿಯಲ್ಲಿ.

"ನಂಗೊಂದ್ ದಿಟ ಗೊತ್ತಾಗ್ಬೇಕು."

"ಏನು?"

"ನೀನು ಯಾರು? ದಿಟವಾಗಿ ನೀನ್ ಯಾರು?"

"ಯಾಕಿಂಗ್ ಕೇಳ್ತಿದ್ದೀಯ?"

"ಗುಬ್ಬಚ್ಚಿ ಗೂಡ್ನಾಗೆ ಗಿಡುಗ ಇರ್‌ಬಾರ್ದಲ್ಲ; ಅದುಕ್ಕೆ"

"ಅಂಗಂದ್ರೆ?"

"ಸುತ್ತೇಳಳ್ಳಿ ನೀರ್ ಕುಡ್ದಿರಾ ನಿಂಗೆ ಬಿಡ್ಸೇಳ್ ಬೇಕಾ?"

"ಇವತ್ತು ಹಾಗೇ ಅನ್ನುಸ್ತಾ ಇದೆ"

"ಅಂಗಾರೆ ಯೇಳ್ತೀನ್ ಕೇಳು. ನೀನು ಇದುನ್ನೆಲ್ಲ ಇಟ್ಕಂಡಿರ್ ಬೇಕಾರೆ ಪೋಲಿಸ್ನಾನಿರ್ಬೇಕು ಇಲ್ದಿದ್ರೆ ಕಳ್ಳ ಇರ್ಬೇಕು...."– ಶಬರಿ ಅನ್ನಿಸಿದ್ದನ್ನು ಹಾಗೇ ಹೇಳಿಬಿಟ್ಟಳು.

"ಪೋಲಿಸು, ಕಳ್ಳ ಬಿಟ್ರೆ ಬೇರೆ ಯಾರೂ ಪಿಸ್ತೂಲು ಇಟ್ಕೊಳ್ಳೋದಿಲ್ವ?" – ಎಂದು ಸೂರ್ಯ ಕೇಳಿದಾಗ ಶಬರಿ ಕ್ಷಣಕಾಲ ಯೋಚಿಸಿದಳು.

"ಕೊಲೆ ಮಾಡಾರು.... ಅವ್ರ್ ಇಟ್ಕಂಬ್ತಾರೆ."

ಸೂರ್ಯನಿಗೆ ಗಾಬರಿಯಾಯಿತು. ಇದೇನಿವಳು ಹೀಗೆ ಮಾತಾಡುತ್ತಿದ್ದಾಳೆ? ಕೇಳಿದ–

"ಯಾಕೆ? ಊರ್ ಒಡೆಯರು ಪಿಸ್ತೂಲು, ಬಂದೂಕು ಎಲ್ಲಾ ಇಟ್ಕೊಂಡಿಲ್ವ?"

"ಅದ್‌ಬ್ಯಾರೆ ವಿಸ್ಯ. ಅಂಗಂಬ್ತ ನಾವೆಲ್ಲ ಇಟ್ಕಮಾಕಾಯ್ತದ?"

"ಯಾಕಿಟ್ಕೊಬಾರ್ದು?" ಸೂರ್ಯ ಪ್ರಶ್ನಾರ್ಥಕವಾಗಿ ಕೇಳುತ್ತಲೇ ಉತ್ತರ ಕೊಟ್ಟಿದ್ದ. ಅದನ್ನೇ ವಿವರಿಸಿದ– "ಬೇರೆಯವರು ನಮ್ ಮೇಲೆ ಬಿದ್ರೆ ನಮ್ ಪ್ರಾಣ ಉಳಿಸ್ಕೋಬೇಕೊ ಇಲ್ವೊ ಹೇಳು. ಅದಕ್ಕಾಗಿ ಇದನ್ನ ಇಟ್ಕೊಂಡಿದ್ದೀನಿ."

"ಇವಾಗ್ ನಿನ್ ಮೇಲೆ ಯಾರ್ ಬೀಳ್ತಾರೆ? ಅಂತಾದ್ದೇನ್ ಮಾಡಿದ್ದೀಯ ನೀನು? ನಂಗೇನೊ ಅನ್ಮಾನಪ್ಪ."

"ಯಾಕಿಂಗ್ ಮಾತಾಡ್ತೀಯ ಶಬರಿ? ಈಗ ನೋಡು, ನಿಮ್ಗೆಲ್ಲ ಭೂಮಿ ಕೊಡ್ಸೋಕೆ ನಾನ್ ಪ್ರಯತ್ನ ಮಾಡ್ತೀನಿ ಅಂತಿಟ್ಕೊ. ಆಗ ಭೂಮಿ ಇಟ್ಕೊಂಡಿರೋರು ನನ್ ಮೇಲೆ ಹಗೆ ಸಾಧಿಸ್‌ಬಹುದು. ಕೊಲ್ಲೋದಕ್ಕೂ ಪ್ರಯತ್ನ ಮಾಡ್‌ಬಹುದು..." –ಹೀಗೆ ಸೂರ್ಯ ಹೇಳುತ್ತಿರುವಾಗಲೇ ಶಬರಿ ಥಟಕ್ಕನೆ ಕೇಳಿದಳು– "ಅಂಗೆಲ್ಲ ಆಗಾದುಂಟಾ? ನಿನ್ ಜೀವಾನೇ ತಗುದ್ ಬಿಡ್ತಾರ? ಆಮ್ಯಾಕ್ ನಮ್ ಗತಿ?" ಸೂರ್ಯನಿಗೆ ಇಷ್ಟು ಸಾಕಾಗಿತ್ತು. ತಕ್ಷಣವೇ ಅದೇ ಭಾವವನ್ನು ಮುಂದುವರಿಸಿ ಹೇಳಿದ– "ಅದಕ್ಕೇ ನಾನ್ ಹೇಳೋದು. ನಿಮ್ ಜೊತೆ ನಾನಿರಬೇಕು ಅನ್ನೊ ಹಾಗಿದ್ರೆ ಇದೂ ನನ್ ಜೊತೆ ಇರ್ಬೇಕು."

"ಇದ್ರಾಗ್ ನೀನ್ ಯಾರ್ನೂ ಕೊಂದಾಕಾಕಿಲ್ಲ, ಅಲ್ವಾ?"

"ಇದು ಕೊಲ್ಲೋಕಲ್ಲ. ಕೊಲ್ಲೋಕ್ ಬಂದೋರಿಂದ ಬದುಕೋಕೆ. ನಿಂಗ್ ಯಾವ ಭಯಾನೂ ಬೇಡ ಶಬರಿ"

"ನಾನ್ಯಾಕ್ ಬಯ ಪಡ್ಲಿ? ನಂಗ್ ಬಯ ಇರಾದು ನಿಂಗೇನಾರ ಆಗ್‌ಬಿಟ್ರೆ ಅಂಬ್ತ?"

"ನಂಗೇನೂ ಆಗಲ್ಲ. ನೀನ್ ಇರೋವರ್ಗೂ ನಂಗೇನೂ ಆಗಲ್ಲ ಯಾಕ್ ಗೊತ್ತಾ ಶಬರಿ? ಈ ಪಿಸ್ತೂಲ್‌ಗಿಂತ ನಿನ್ ಶಕ್ತಿ ದೊಡ್ಡದು" ಎಂದು ಸೂರ್ಯ ಹೇಳಿದಾಗ ಹೇಗೆ ಪ್ರತಿಕ್ರಿಯಿಸಬೇಕೆಂದು ಗೊತ್ತಾಗದೆ ಸ್ವಲ್ಪ ಭಾವುಕವಾಗತೊಡಗಿದಳು ಶಬರಿ. ಸೂರ್ಯ ಶಬರಿಯ ಭಾವ ವಲಯವನ್ನು ಮತ್ತಷ್ಟು ಗಟ್ಟಿಗೊಳಿಸುವಂತೆ ಮಾತು ಮುಂದುವರೆಸಿದ.

"ಆ ಶಬರಜ್ಜಿ ಅಷ್ಟು ವರ್ಷ ಒಬ್ಬಳೇ ಕಾಡ್ನಲ್ ಕಾಯ್ಬೇಕಾದ್ರೆ ಎಷ್ಟು ಶಕ್ತಿ ಇರ್ಬೇಕು, ಎಷ್ಟು ಸ್ಥೈರ್ಯ ಇರ್ಬೇಕು, ಯೋಚ್ನೆ ಮಾಡು. ಚನ್ನಾಗ್ ತಿಳ್ಕೊ, ನನ್ ದೃಷ್ಟೀಲಿ ಶಬರಿ– ಒಂದು ಶಕ್ತಿ. ಈ ಶಕ್ತಿ ನಿನಗೆ ಅರ್ಥವಾಗ್ತಾ ಹೋಗ್‌ಬೇಕು."

ಶಬರಿ ಸಹಜವಾಗಿ "ಅದುಕ್ಕೆಲ್ಲ ನೀನಿದ್ದೀಯಲ್ಲ" ಎಂದು ಮುಗುಳ್ನಕ್ಕಳು.

ಸೂರ್ಯ ಉತ್ಸಾಹಿತನಾಗಿ ಅವಳ ಕೈ ಹಿಡಿದು ಅದುಮಿದ. ಅಷ್ಟರಲ್ಲಿ ತಿಮ್ಮರಾಯಿ 'ಶಬರಿ' ಎನ್ನುತ್ತಾ ಬಂದ. "ಬಾ ಅಪ್ಪಯ್ಯ ಉಂಬಾಕಿಕ್ತೀನಿ" ಎಂದು ಶಬರಿ ಅಡುಗೆ ಮನೆಗೆ ಹೋದಳು.

ತಿಮ್ಮರಾಯಿ ಮಾತನಾಡಲಿಲ್ಲ. ಕುಡಿದು ಬಂದದ್ದರಿಂದ ಸೂರ್ಯನ ಎದುರು ಸಂಕೋಚ ಉಂಟಾಗಿತ್ತು. ಸೂರ್ಯ ತಾನಾಗಿ ಹೊರಗೆ ಬಂದು ಕೂತ.

ಆತನೊಳಗೆ–ನಡೆದ ಘಟನೆಗಳ ಮರು ಸಂಯೋಜನೆ ಸಾಗಿತ್ತು.

# ೧೦

ಮಾರನೇ ದಿನ ಹುಚ್ಚೀರ ಮತ್ತು ಸಣ್ಣೀರ ಸೂರ್ಯನಿಗೆ ಮುಖ ತೋರಿಸದೆ ಓಡಾಡುತ್ತಿದ್ದರು. ಇತ್ತೀಚೆಗೆ ರಾತ್ರಿ ಶಾಲೆಗೆ ಹೋಗುವುದು ಕಡಿಮೆಯಾಗಿದ್ದು, ಈ ಬಗ್ಗೆ ಸೂರ್ಯ ಇತರರೊಂದಿಗೆ ಚರ್ಚಿಸಿದ್ದು, ಈ ವಿಷಯ ಇವರ ಕಿವಿ ಮೇಲೆ ಬಿದ್ದದ್ದು, ಇದಕ್ಕೆ ಕಾರಣವಾಗಿತ್ತು. ಕಂಡರೂ ಕಾಣದಂತೆ ಓಡಾಡುವ ಇವರನ್ನು ಗಮನಿಸಿದ ಸೂರ್ಯ ಒಳಗೇ ನಕ್ಕ. ಅವರಲ್ಲೇ ಅಳುಕು ಮೂಡಿರುವಾಗ ಸರಿದಾರಿಗೆ ಬಂದೇ ಬರುತ್ತಾರೆಂದು ಭಾವಿಸಿದ. "ಸಣ್ಣೀರ ನಿನ್ ಜೊತೆ ಮಾತಾಡ್ ಬೇಕಾಗಿತ್ತು" ಎಂದಾಗ ಆತ "ಈಗ್ ಬಂದೆ ಕಣಣ್ಣ" ಎಂದು ಹೋದವನು ಎಷ್ಟು ಹೊತ್ತಾದರೂ ಬರಲಿಲ್ಲ. ಆದರೆ ಹುಚ್ಚೀರ, ತೋಪಿನ ಬಳಿ ಸಿಕ್ಕಿಯೇಬಿಟ್ಟ.

"ಏನ್ ಹುಚ್ಚೀರ, ನನ್ ಮೇಲೆ ಸಿಟ್ಟು ಬಂದಿದ್ಯಾ ನಿಂಗೆ" ಎಂದು ಸೂರ್ಯ ಕೇಳಿದಾಗ ಹುಚ್ಚೀರ ತಬ್ಬಿಬ್ಬಾದ. ಎಲ್ಲಾದ್ರು ಉಂಟಾ ಎಂಬಂತೆ ಸನ್ನೆ ಮೂಲಕ ತಿಳಿಸಿದ. ಸೂರ್ಯ, ಹುಚ್ಚೀರನ ಕೈ ಹಿಡಿದು ಹೇಳಿದ– "ನೋಡು, ನಿನಗೆ ನನ್ನ ಅಣ್ಣನ ವಯಸ್ಸಾಗಿದೆ. ನಾನಾದ್ರೂ ಹಿಡ್ದಿರೊ ಕೆಲ್ಸ ಬಿಡ್‌ಬಾರ್ದು ಅಂತ ಬಂಧು ಬಳಗ ಎಲ್ಲಾ ಬಿಟ್ ಬಂದಿದ್ದೀನಿ. ನೀನೇ ನನ್ನ ಅಣ್ಣ ಅಂದ್ಕೊಂಡ್ ಕೇಳ್ತಿದ್ದೀನಿ. ದಯವಿಟ್ಟು ಈ ಕುಡಿತ ಗಿಡಿತ ಎಲ್ಲಾ ಬಿಟ್ಟು ಓದು ಬರಹ ಕಲ್ಯೋಕ್ ಬಾ. ನನ್ ಮಾತ್ ನಡಿಸ್ ಕೊಡ್ತೀಯಾ?"

ಹುಚ್ಚೀರ ಗದ್ಗದಿತನಾದ. ಸೂರ್ಯನ ಕೈಯ್ಯನ್ನು ಕಣ್ಣಿಗೊತ್ತಿಕೊಂಡ. ಕಣ್ಣೀರು ಹರಿದು ಸೂರ್ಯನ ಕೈ ತೊಳೆಯಿತು. ಅದೇ ಕೈಹಿಡಿದು ಭಾಷೆ ಕೊಟ್ಟ– "ನಾನ್ ಇನ್ ಮ್ಯಾಕ್ ಕುಡ್ಯಾಕಿಲ್ಲ" ಎಂದು ಆತನ ಮನಸ್ಸು ಮಾತಾಡಿತ್ತು.

ಹುಚ್ಚೀರನನ್ನು ಸಾಂತ್ವನಗೊಳಿಸಿದ ಸೂರ್ಯ, ಅಂದು ರಾತ್ರಿ ದೇವಾಸ್ಥಾನದಲ್ಲಿ ಚಂದ್ರ, ರಕ್ತಕಾರಿ ಸತ್ತ ವಿಷಯವನ್ನು ನೆನಪಿಸಿದ. ನನಗೆ ಸತ್ಯ ಗೊತ್ತಾಗಬೇಕು– ಎಂದು ಒತ್ತಾಯಪೂರ್ವಕವಾಗಿ ಹೇಳಿದ. ಅಂದಿನ ನೆನಪು ನುಗ್ಗಿದ ಕೂಡಲೇ ಹುಚ್ಚೀರನ ತುಟಿ ಅದುರಿದವು. ಕಣ್ಣು ಚಡಪಡಿಸಿದವು. ನಾಲಗೆ ಏನೋ ಹೇಳಲು ಒದ್ದಾಡಿತು. ಮುಖದ ತುಂಬ ಬೆವರು, ಕಳವಳದ ತವರು. ಆದರೆ ಒಳಗಿನ ಭಾವ ಹೊರಗಿನ ಭಾಷೆಯಾಗಲಿಲ್ಲ. ಆಗುವಂತಿರಲಿಲ್ಲ.

ಕಡೆಗೆ ಸೂರ್ಯ ತನ್ನಲ್ಲಿ ತಾನೇ ಸಮಾಧಾನ ಮಾಡಿಕೊಂಡ. ಹುಚ್ಚೀರನನ್ನೂ ಸಂತೈಸಿದ. ಒಂದಲ್ಲ ಒಂದು ದಿನ ಸತ್ಯ ಹೊರಬರಲೇಬೇಕು– ಎಂಬ ನಿರೀಕ್ಷೆ, ವಿಶ್ವಾಸ ಆತನಲ್ಲಿತ್ತು.

ಸಣ್ಣೀರನಿಗೆ ಸೂರ್ಯನನ್ನು ಮಾತನಾಡಿಸುವ ಧೈರ್ಯವಾಗದೆ ನವಾಬ್ ಬಳಿಗೆ ಬಂದ. "ನವಾಬಣ್ಣ, ಸೂರ್ಯಪ್ಪ ಸಿಟ್ ಮಾಡ್ಕಂಡಿರ್‌ಬೇಕಲ್ವ?" ಎಂದು ಕೇಳಿದ. "ನೀನು ಶಾಲೇಗ್ ಬರೋದ್ ಕಡ್ಮೆ ಆಯ್ತಲ್ಲ ಸಣ್ಣೀರ. ಅದಕ್ಕೆ ಬೇಸರ ಆಗಿದೆ ಅಷ್ಟೆ. ಅದೇನ್ ಸಿಟ್ಟಲ್ಲ" ಎಂದು ನವಾಬ್ ಸಮಾಧಾನದಿಂದ ಮಾತಾಡಿದ. ಮತ್ತೆ ಶಾಲೆಗೆ ಸರಿಯಾಗಿ ಬಂದರೆ ಎಲ್ಲವೂ ಸರಿಹೋಗುವುದೆಂದು ಬುದ್ಧಿ ಹೇಳಿದ.

ರಾತ್ರಿ, ಹುಚ್ಚೀರ ಮತ್ತು ಸಣ್ಣೀರ ಇಬ್ಬರೂ ಶಾಲೆಗೆ ಬಂದರು. ಸೂರ್ಯನಿಗೆ ಸಂತೋಷವಾಯಿತು. ಕುಡಿತದ ವಿಷಯವನ್ನು ಪ್ರಸ್ತಾಪಿಸಲಿಲ್ಲ. ಅದರ ಬದಲು ಮೂಢನಂಬಿಕೆಯ ಬಗ್ಗೆ ಮಾತನಾಡಿದ. ಬುಡಕಟ್ಟಿನ ಹೆಣ್ಣುಮಕ್ಕಳು ದೇವಸ್ಥಾನಕ್ಕೆ ಹೋಗಿ ಮದುವೆಯ ಮೊದಲರಾತ್ರಿ ಕಳೆಯುವುದು ಸರಿಯಲ್ಲವೆಂದೂ ಇದರ ಹಿಂದೆ ಏನೋ ರಹಸ್ಯವಿದೆಯೆಂದೂ ತಿಳಿಸಿದ. ಯಾರೂ ಮಾತಾಡಲಿಲ್ಲ. ಆಗ ಸೂರ್ಯ ಈ ವಿಷಯವನ್ನು ಹೆಚ್ಚು ಲಂಬಿಸುವುದು ಸರಿಯಲ್ಲವೆಂದು ಭಾವಿಸಿ "ನವಾಬ್, ನೀನು ಪಾಠ ಮುಂದುವರ್‍ಸು. ನಾನಿಲ್ಲೆ ಹೊರ್ಗಡೆ ಇರ್ತೀನಿ" ಎಂದು ಹೇಳಿ ಹೊರಬಂದ. ಸೂರ್ಯನಿಗೆ ಬೇಸರವಾಗಿ ಹೊರಹೋಗಿರಬೇಕೆಂದು ಭಾವಿಸಿದ್ದಳು– ಶಬರಿ. ಆಕೆಯ ಮನಸ್ಸು ಆತನ ಹಿಂದೆಯೇ ಹೋಯಿತು.

ನವಾಬ್ ಜೊತೆ ಜನರು ತುಂಬಾ ಸಲಿಗೆಯಿಂದ ಬೆರೆಯುತ್ತಿದ್ದರು. ಸೂರ್ಯ ಎಷ್ಟೇ ಸಲಿಗೆಯಿಂದ ಸಮೀಪವಾದರೂ ಇವರಿಗೆ ಆತನ ಬಗ್ಗೆ ಭಯಮಿಶ್ರಿತ ಗೌರವವಿತ್ತು. 'ತುಂಬಾ ತಿಳಿದೋನು. ಆತನೇ ಶಾಲೆ ಮುಖ್ಯಸ್ಥ' ಎಂಬಂಥ ಭಾವನೆಯಲ್ಲಿ ಏನೆಂದರೆ ಅದನ್ನು ಆತನ ಬಳಿ ಮಾತನಾಡುತ್ತಿರಲಿಲ್ಲ. ಆದರೆ ನವಾಬನ ವಿಷಯದಲ್ಲಿ ಹಾಗಲ್ಲ. ಸೂರ್ಯನಿಗಿಂತ ಈತ ಕಿರಿಯ; ಆತನಂತೆ ಮುಖ್ಯಸ್ಥನಲ್ಲ– ಎಂಬ ಭಾವನೆ ಇವರದು. ಹೀಗಾಗಿ ಎಲ್ಲರೂ 'ನವಾಬಣ್ಣ ನವಾಬಣ್ಣ' ಎಂದು ಈತನ ಹತ್ತಿರ ಸುಳಿದಾಡುತ್ತಿದ್ದರು. ತಪ್ಪು–ಸರಿಗಳ ಬಗ್ಗೆ ಮಾತಾಡಿ ಅಕ್ಷರ ಮತ್ತು ಪದಗಳನ್ನು ತಿದ್ದಿಸಿಕೊಳ್ಳುತ್ತಿದ್ದರು. ಗೌರಿಗಂತೂ ನವಾಬನ ಹತ್ತಿರ ಬರಲು ಸದಾ ತವಕ. ಹೀಗಾಗಿ ಕೆಲವರ ತಮಷೆಗೂ ತುತ್ತಾಗಿದ್ದಳು. ಕೆಲವು ಹೆಂಗಸರು "ನವಾಬಣ್ಣೊ ಉಸಾರು ಗೌರಿ ಗಾಳಿ ಬೀಸ್ ಬಿಟ್ಟು ಏನೇನೊ ಆಗ್‌ಬಿಟ್ಟಾತು" ಎಂದು ಗೌರಿಯ ಎದುರೇ

ತಮಾಷೆ ಮಾಡಿದ್ದರು. ಗೌರಿ "ಯೇ ನಗ್ಸಾರಾಟ ಆಡ್ ಬ್ಯಾಡ್ರಿ" ಎಂದು ನಾಚಿಕೊಂಡಿದ್ದಳು. ಒಟ್ಟಾರೆ ಹೆಂಗಸರಿಗಂತೂ ನವಾಬ್ ಅಕ್ಕರೆಯ 'ಅಣ್ಣ' ಆಗಿಬಿಟ್ಟಿದ್ದ. ಹಿರಿಯರೂ ಈತನನ್ನು "ನವಾಬಣ್ಣ" ಎಂದೇ ಕರೆಯುತ್ತಿದ್ದರು.

ಹೀಗಾಗಿ, ಸೂರ್ಯ ಸೀರಿಯಸ್ಸಾಗಿ ಮಾತನಾಡಿ ಹೊರಹೋದಮೇಲೆ ನವಾಬನ ಜೊತೆ "ಅದು ಯಂಗೆ ಇದು ಯಂಗೆ" ಎಂದು ಸಲೀಸಾಗಿ ಕೇಳುತ್ತ ಮಾತಾಡತೊಡಗಿದರು. ನವಾಬ ಪ್ರತಿಯೊಬ್ಬರ ಬಳಿಯೂ ಹೋಗಿ ಅವರವರ ಸಮಸ್ಯೆ ತಿಳಿದುಕೊಂಡು ತಿಳಿಹೇಳಿದ. ತಿದ್ದಿದ. ಒಳಗೆ ನವಾಬ ಎಲ್ಲರ ಬಳಿ ಬೆರೆತು ಪಾಠ ಹೇಳುತ್ತಿದ್ದಾಗ ಸೂರ್ಯ ಹೊರಗೆ ಏಕಾಂಗಿಯಾಗಿದ್ದ.

ಕಾಡುವ ನೆನಪುಗಳು; ಕಷ್ಟದ ಹಾದಿಗಳು.

ತಾನು ಮನೆಬಿಟ್ಟು ಬಂದದ್ದು; ಅರೆಬರೆ ಹೊಟ್ಟೆಯಲ್ಲೇ ಓದಿದ್ದು; ಸಮಾಜ ಬದಲಾವಣೆಯ ಬದ್ಧತೆಗೆ ಒಳಗಾದದ್ದು, ಹೋರಾಟಗಳನ್ನು ಕಟ್ಟಿದ್ದು; ಸುಳ್ಳು ಆಪಾದನೆಗೆ ಒಳಗಾಗಿ ಜಾಮೀನು ಸಿಗದೆ ಈ ಕಡೆಗೆ ಬಂದದ್ದು... ಇಲ್ಲಿ ಚಂದ್ರನ ಸಾವು... ಶಬರಿಯ ಸ್ನೇಹ...

ತಲೆ ಚಿಟ್ಟು ಹಿಡಿದಂತಾಯಿತು.

ಹಾಗಾದರೆ ಇಲ್ಲಿ ಇರುವುದು ತಾತ್ಕಾಲಿಕವೆ? ಇದು ಕೇವಲ ನಿಲ್ದಾಣವೆ? ಹಾಗೆ ನೋಡಿದರೆ ಬದುಕಿನ ಎಲ್ಲ ಘಟ್ಟಗಳು ನಿಲ್ದಾಣಗಳೇ. ತನ್ನ ಮೇಲಿರುವ ಕೇಸು ಕೊನೆಯಾದ ಮೇಲೂ ಈ ಜಾಗವನ್ನು ಬಿಡಬಾರದು. ನಡುವೆಯೇ ಕೈಬಿಟ್ಟು ಹೇಗೆ ಹೋಗಲು ಸಾಧ್ಯ? ಆದರೆ, ತಾನೇ ಸದಾ ಪ್ರೇರಕಶಕ್ತಿಯಾಗುವ ಬದಲು ಜನರೇ ಶಕ್ತಿ ಪಡೆದು ನಾಯಕತ್ವಕ್ಕೆ ಸಿದ್ಧರಾಗಬೇಕು. ಹಾಗೆ ಆದಮೇಲೆ ಮುಂದಿನ ಪಯಣ. ಈ ಜನಗಳ ಭಾವಕೋಶದ ಭಾಗವಾಗಿ ಬೆಳೆದುಬಂದ ದೇವಸ್ಥಾನದ ಮೊದಲ ರಾತ್ರಿಯ ರಹಸ್ಯವನ್ನು ಬಯಲು ಮಾಡಿದರೆ ಇವರಿಗೆ ವಿರೋಧಿಗಳು ನಿಚ್ಚಳವಾಗುತ್ತಾರೆ. ಆಗ ಹಾದಿ ಸುಗಮವಾದೀತು. ಭೂಮಿ ನಮ್ಮದೆಂದು ಗಟ್ಟಿಯಾಗಿ ಹೇಳುವ ಮನಸ್ಸು ಮೂಡೀತು.

ಭೂಮಿಗೆ ಆಕಾಶದ ನಂಟು.
ಬೆವರನ್ನು ಕುಡಿದು ಭೂಮಿಗೆ ಆಕಾಶದ ಪ್ರಸಾದ ಬೇಕು.
ಕೊಡುವುದು ಭೂಮಿ; ಆಳುವುದು ಆಕಾಶ!
ಆಳುವ ಆಕಾಶಕ್ಕೆ ಆಳಾಗುವ ಭೂಮಿ! ಎಂಥ ವಿಪರ್ಯಾಸ!
ಆರ್ಥಿಕ ಸಮಸ್ಯೆಗೆ ಆಧ್ಯಾತ್ಮಿಕ ಲೇಪ;
ನಿರುತ್ತರ ನಂಬಿಕೆಗಳ ಕತ್ತಲ ಕೂಪ!

ಸೂರ್ಯ ಚಿಂತಿಸಿದ–ತನಗೆ ಕತ್ತಲ ಕೂಪವೆನ್ನಿಸಿದ್ದು ಅನೇಕರಿಗೆ ಬೆಳಕಿನ ರೂಪ! ಸಮಸ್ಯೆ ಇರುವುದೇ ಇಲ್ಲಿ. ನಂಬಿಕೆ, ಅಪನಂಬಿಕೆ, ಮೂಢನಂಬಿಕೆ– ಇವುಗಳ ವ್ಯತ್ಯಾಸದ ಗೆರೆ ಎಷ್ಟು ಸೂಕ್ಷ್ಮ! ನಮ್ಮ ಸಂದರ್ಭದ ಇಂಥ ಸೂಕ್ಷ್ಮಗಳನ್ನು ತಿಳಿಯದೆ, ಜನರೊಂದಿಗೆ ಬೆರೆಯದೆ ನಕಾರಾತ್ಮಕ 'ಹೀರೊ' ಆಗುವುದು ಇಲ್ಲಿ ಬಹು ಸುಲಭ. ಇಲ್ಲಿ ಹೀರೊ ಮತ್ತು ವಿಲನ್‌ಗಳ ನಡುವಿನ ಕಾದಾಟ ಮುಖ್ಯವೊ? ಜನರು ಮತ್ತು ಜನವಿರೋಧಿಗಳ ನಡುವಿನ ಹೋರಾಟ ಮುಖ್ಯವೊ?– ಸೂರ್ಯ ಸ್ಪಷ್ಟವಾಗುತ್ತ ಹೋದ.

ನಾಯಕತ್ವ ಬೇರೆ, ಹೀರೋಯಿಸಂ ಬೇರೆ.

ನಾಯಕ ಕೆಲವೊಮ್ಮೆ ಹೀರೊ ರೀತಿ ಕಾಣಿಸಬಹುದು. ಆದರೆ ಹೀರೊಗಳೆಲ್ಲ ನಾಯಕರಲ್ಲ. ನಾಯಕರು ಹೀರೊಗಳೇ ಆಗಬೇಕಿಲ್ಲ.

ಈ ಒಳಸಂಘರ್ಷವನ್ನು ಉಳಿಸಿಕೊಂಡರೆ ಉತ್ತಮ ನಾಯಕತ್ವ ಕೊಡಲು ಸಾಧ್ಯವಾದೀತು. ಅದಕ್ಕಾಗಿ ಕ್ಷಣಕ್ಷಣಕ್ಕೂ ಕಣ್ಣಾಗಿ, ಕಿವಿಯಾಗಿ, ಕಡೆಗೆ ಕರುಳಾಗಿ, ಕ್ರಿಯಾಶೀಲವಾಗುವುದು ಮುಖ್ಯ.

ಸೂರ್ಯ ತನ್ನೊಳಗೆ ತಾನು ಇಳಿಯುತ್ತಲೇ ಹೋದ. ಪಂಚೇಂದ್ರಿಯಗಳಲ್ಲಿ ಯಾವುದು ಅತಿರೇಕವಾದರೂ ಸರಿಯಲ್ಲವಲ್ಲವೆ ಎಂದು ಪ್ರಶ್ನಿಸಿಕೊಂಡ. ಕಣ್ಣು ಕಿವಿಗಳನ್ನು ಹಿಂದೆ ಹಾಕಿ ನಾಲಗೆ ಅತಿಯಾದರೆ ಸೂಕ್ಷ್ಮತೆ ಹೇಗೆ ಸಾಧ್ಯ? ನಾಲಗೆ ಮತ್ತು ಕಿವಿಗೆ ಸಂಬಂಧವಿಲ್ಲದಿದ್ದರೆ ಹೇಳುವ ಮತ್ತು ಕೇಳುವ ಕ್ರಿಯೆಯ ಸಮತೋಲನ ಹೇಗೆ ಲಭ್ಯ? ವಾಸನೆ ಹಿಡಿಯುವ ಮೂಗಿಗೆ ಮೌಢ್ಯ ಆವರಿಸಿದರೆ ಮುಗ್ಧತೆ ಎನ್ನುವುದು ಶೂನ್ಯ. ಚರ್ಮ ಕೆಲವರಿಗೆ ಸಮೀಪ, ಅನೇಕರಿಗೆ ದೂರವಾದರೆ ಈ ಅಂತರ ಎಷ್ಟು ಘೋರ!

ಹೋರಾಟ ಆರಂಭವಾಗಬೇಕಾದ್ದು ಇಲ್ಲಿ–ಈ ಪಂಚೇಂದ್ರಿಯಗಳ ಪ್ರತೀಕದಲ್ಲಿ. ಪೊರೆ ಕಟ್ಟಿದ ಪಂಚೇಂದ್ರಿಯಗಳು! ಹುಟ್ಟಿದ ಗಳಿಗೆಯಿಂದಲೇ ಕಟ್ಟುವ ಪೊರೆ. ಹೀಗೆ ನೋಡಬೇಕು, ಹೀಗೆ ನುಡಿಯಬೇಕು, ಹೀಗೆ ಕೇಳಬೇಕು, ಇದು ಸುವಾಸನೆ, ಅದು ದುರ್ವಾಸನೆ, ಈತ ಸ್ಪರ್ಶಯೋಗ್ಯ, ಆತ ಅಲ್ಲ– ಹೀಗೆ ಸಿದ್ಧ ಮಾದರಿಯ ಪೊರೆ. ಪಂಚೇಂದ್ರಿಯಗಳ ಪೊರೆ ಕಳಚಿಕೊಂಡು ಸ್ವತಂತ್ರವಾಗುವುದೇ ಪ್ರಥಮ ಹೋರಾಟ. ಕಡೆಗೆ ಅದೇ ಅಂತಿಮ ಹೋರಾಟ. ವಿವಿಧ ಹೋರಾಟಗಳ ಮತ್ತು ವಿವೇಕಗಳ ಮೂಲಕ ಪೊರೆ ಕಳಚಿಕೊಳ್ಳುವ ಕ್ರಿಯೆ– ನಿರಂತರ ಪ್ರಕ್ರಿಯೆ.

ಸೂರ್ಯನ ಒಳಹಾದಿಯಲ್ಲಿ ಚಿಂತನೆಯ ಬೆಳ್ಳಿರೇಖೆ.
ಹೆಕ್ಕಿತೆಗೆಯುವ ಉತ್ಕಟತೆ.
ಈ ಶಬರಿಯ ಕಾರಣಕ್ಕೆ ಕಾಡುವ ಆ ಶಬರಿ.
ಆ ಶಬರಿ–ಪುರಾಣ. ಈ ಶಬರಿ– ಚರಿತ್ರೆ.
ಚರಿತ್ರೆಯೊಳಗೊಂದು ಪುರಾಣ ಸೇರುವುದು ಎಂಥ ವಿಚಿತ್ರ!

ಯೋಚಿಸುತ್ತ ಹೋದಂತೆ ಆ ಶಬರಜ್ಜಿ ಸೂರ್ಯನನ್ನು ಆವರಿಸಿಕೊಳ್ಳ ತೊಡಗಿದಳು. ಎಂತ ಅಂತಃಶಕ್ತಿ ಆಕೆಯದು!

ಶ್ರೀರಾಮನ ಕಾಯುವಿಕೆ; ಕಾಯುವುದರಲ್ಲೇ ಬಾಳುವಿಕೆ;
ಸಂಕಲ್ಪವೇ ಶಕ್ತಿಯಾದ ಶಬರಿ.
ಶ್ರೀರಾಮನಿಗೆ ಗುಡಿಕಟ್ಟಲಿಲ್ಲ; ತನಗಾಗಿ ಗುಡಿಸಲು ಕಟ್ಟಿಕೊಂಡಳು.
ಶ್ರೀರಾಮನಿಗೆ ಮಂತ್ರಪೂಜೆ ಮಾಡಲಿಲ್ಲ. ಹೂಬಿಡುವ ಗಿಡಬಳ್ಳಿ ಬೆಳೆದಳು.
ಶ್ರೀರಾಮನಿಗೆ ಭಕ್ಷಭೋಜ್ಯದ ಎಡೆಯಿಡಲಿಲ್ಲ. ಹಣ್ಣುಹಂಪಲು ತಿನ್ನಿಸಿದಳು.
ಶ್ರೀರಾಮನಿಗೆ ಕಣ್ಣು ಮುಚ್ಚಿ ತಪಸ್ಸು ಮಾಡಲಿಲ್ಲ; ಕಣ್ತೆರೆದು ಕಾಯುವ ಮನಸ್ಸಾದಳು.
ಶ್ರೀರಾಮನಿಗೆ ಪೂಜಾರಿಯಾಗಲಿಲ್ಲ; ತಾಯಿಯಾದಳು.
ಶಬರಿ ಸಿದ್ಧಮಾದರಿಗಳನ್ನು ಮೀರಿದಳು.
ಪಂಚೇಂದ್ರಿಯಗಳ ಪೊರೆ ಕಳಚಿದಳು.
ಈ ಶಬರಿ? ಶಬರಿ ಸಮೂಹ?
ಸಿದ್ಧವಾಗಬೇಕು; ಶಬರಜ್ಜಿ ಹೊಸದಾಗಿ ಒಳಗೆ ಹುಟ್ಟಬೇಕು.

ಸೂರ್ಯನಲ್ಲಿ ಉತ್ಸಾಹ ಚಿಮ್ಮಿತು.
ಸೀದಾ ಶಾಲೆಯ ಒಳಗೆ ಬಂದ.

ಪರಸ್ಪರ ಮಾತಾಡುತ್ತ ನವಾಬನೊಂದಿಗೆ ನಗುತ್ತ ಅಕ್ಷರ ಕಲಿಯುವ ಸಂತೊಷದಲ್ಲಿದ್ದವರು ಸೂರ್ಯನನ್ನು ನೋಡಿ ಗಪ್‌ಚುಪ್ಪಾದರು.

"ಯಾಕೆ? ಯಾಕ್ ಸುಮ್ನಾದ್ರಿ? ಮಾತಾಡಿ. ಮಾತಾಡ್ತ ಕಲುತ್ರಾಯ್ತು"

ಎಂದು ಸೂರ್ಯ ಹುರಿದುಂಬಿಸಿದ. ಯಾರೂ ಮೊದಲಿನಂತೆ ಮಾತಾಡಲಿಲ್ಲ, ಶಬರಿ "ಮಾತಾಡ್ರಿ ಅಂಬ್ತ ಯೇಳಿರ್ ಮಾತಾಡಕೆಲ್ಲಾನ ಆಯ್ತದಾ? ಮಾತು ಅದ್ರಟ್ಟಕದೇ ಬರ್ಬೇಕು" ಎಂದಳು. ಎಷ್ಟು ಒಳ್ಳೆಯ ಮಾತು– ಎನ್ನಿಸಿತು ಸೂರ್ಯನಿಗೆ.

"ಆಯ್ತು. ಈಗ ನಾನೇ ಮಾತಾಡ್ತೀನಿ. ನಿಮ್ ಶಬರಜ್ಜಿ ಕತೆ ಹೇಳ್ತೀನಿ" ಎಂದು ಸೂರ್ಯ ಗಂಟಲು ಸರಿಪಡಿಸಿಕೊಂಡ.

ಕೂತಿದ್ದವರಿಗೆಲ್ಲ ಖುಷಿಯಾಯಿತು. "ಕತೆ ಅಂದ್ರೆ ಬಿಟ್ಟೇವಾ. ಬ್ಯಾಗ್ ಸುರು ಮಾಡಣ್ಣ" ಎಂದರು ಕೆಲವರು.

ಸ್ಲೇಟು, ಬಳಪ, ಪುಸ್ತಕಗಳನ್ನು ಎತ್ತಿಟ್ಟು ಕತೆ ಕೇಳಲು ಸಿದ್ಧರಾದರು.

ಸೂರ್ಯ, ಇಲ್ಲೀವರೆಗಿನ ತನ್ನ ಚಿಂತನೆಗೆ ಕತೆಯ ರೂಪ ಕೊಟ್ಟ. ಶಬರಿ ಗುಡಿಯನ್ನು ಕಟ್ಟದೇ ಕಾದದ್ದು; ಕಾಡಿನಲ್ಲಿ ಒಬ್ಬಳೇ ಇದ್ದರೂ ಎದೆಗುಂದದೆ ಬಾಳು ಸಾಗಿಸಿದ್ದು; ತಪಸ್ಸು ಮಾಡದೆ ತಪಸ್ವಿಯಂತಾದದ್ದು– ಎಲ್ಲವನ್ನೂ ರಂಜಕವಾಗಿ ಕತೆಯಾಗಿಸಿದ. ಕತೆಯಲ್ಲಿ ಪ್ರಾಣಿ, ಪಕ್ಷಿಗಳನ್ನು ತಂದು ಅವುಗಳ ಜೊತೆ ಶಬರಿಯ ಸ್ನೇಹ ಹೇಗಿತ್ತು ಎಂಬುದನ್ನು ಉತ್ಸಾಹದಿಂದ ವಿವರಿಸಿದ.

ಕಡೆಗೆ ಶಬರಿಯ ಬಗ್ಗೆ ಒಂದು ಹಾಡು ಕಟ್ಟಿ ಹೇಳಿದ; ಹೇಳಿಸಿದ

"ಗುಡಿಯ ಕಟ್ಟಲಿಲ್ಲ ಮುಡಿಯ ಕಟ್ಟಲಿಲ್ಲ
ಮಡಿ ಮೈಲಿಗೆಯ ಮನಸು ಮೊದಲೇ ಇಲ್ಲ.
ಶಬರಜ್ಜಿ ನಮ್ಮ ಶಬರಜ್ಜಿ
ಸ್ವಾಭಿಮಾನದ ಅಜ್ಜಿ; ಸಾವಿಲ್ಲದ ಅಜ್ಜಿ...."

–ಹೀಗೆ ಸಾಗಿತ್ತು ಹಾಡು. ಎಲ್ಲರೂ ಹಾಡುತ್ತ ಎದ್ದರು; ಕುಣಿತದ ಹೆಜ್ಜೆ ಹಾಕಿದರು. ಮನಸ್ಸಿಗೆ ತುಂಬಿಕೊಂಡರು.

ಸೂರ್ಯ, ಶಬರಜ್ಜಿ– ಇಬ್ಬರೂ ಸಮೀಪವಾಗಿದ್ದರು.

ಶಾಲೆ ಮುಗಿಸಿಕೊಂಡು ಹೋಗುವಾಗ ಎಲ್ಲರಿಗೂ ಅದೇ ಗುಂಗು.

'ಗುಡಿಯ ಕಟ್ಟಲಿಲ್ಲ ಮುಡಿಯ ಕಟ್ಟಲಿಲ್ಲ....."

ಎಂದು ಗುನುಗುತ್ತಲೇ ಇದ್ದರು.

ನವಾಬ್ ಸೂರ್ಯನನ್ನು ಕೇಳಿದ–"ಶಬರೀನ ನೀನು ಅರ್ಥ ಮಾಡಿಕೊಟ್ಟಿದ್ದು ನಿಜಕ್ಕೂ ಚನ್ನಾಗಿತ್ತು. ಅದ್ರೆ ನನಗೊಂದು ಅನುಮಾನ?'

"ಏನ್ ಗೆಳೆಯ ಅಂಥ ಅನ್ಮಾನ?"– ಸಡಗರದ ಭಾವದಲ್ಲಿದ್ದ ಸೂರ್ಯ ಅದೇ ಧಾಟಿಯಲ್ಲಿ ಕೇಳಿದ.

"ಶಬರಜ್ಜಿ ಜೀವನ ನಿಜವಾಗೂ ದೊಡ್ಡದು. ಗುಡಿ, ಮಡಿ, ಮಂತ್ರ,

ಮೈಲಿಗೆ ಏನೂ ಇಲ್ದೆ ಶ್ರೀರಾಮನಿಗಾಗಿ ಕಾದದ್ದು, ಅದಕ್ಕೆ ನೀನ್ ಅರ್ಥ ಕೊಟ್ಟದ್ದು ಎಲ್ಲಾ ಸರಿ. ಆದ್ರೆ ನಾನೂ-ನೀನೂ ಸಂಘರ್ಷದಲ್ಲಿ, ಅದ್ರಲ್ಲೂ ಸೈದ್ಧಾಂತಿಕ ಸಂಘರ್ಷದಲ್ಲಿ ನಂಬಿಕೆ ಇರೋರು. ಅಂಥಾದ್ರಲ್ಲಿ ಶಬರಿ ನಮ್ ಆದರ್ಶ ಆಗೋದು ಹೇಗೆ ಸಾಧ್ಯ?"- ನವಾಬ್ ತನ್ನ ಪ್ರಶ್ನೆಯನ್ನು ಮುಂದಿಟ್ಟ.

"ಒಳ್ಳೆ ಪ್ರಶ್ನೆ ಗೆಳೆಯ"- ಸೂರ್ಯ ವಿವರಿಸಲು ಸಿದ್ಧನಾದ-"ಸಂಘರ್ಷ ಅನ್ನೋದು ಆರಂಭ ಅಲ್ಲ; ಅಂತಿಮವಾದ ಹಂತ. ನನ್ನ ಚಿಂತನೆ ಏನ್ ಗೊತ್ತ? ಸಂಘರ್ಷಕ್ಕೆ ಮೊದಲು ಶಬರಿಯಾಗ್ಬೇಕು. ಶಬರಿಯಾಗದೆ ಸಂಘರ್ಷ ಸಾಧ್ಯವಿಲ್ಲ."

ನವಾಬ ತಕ್ಷಣ ಪ್ರತಿಕ್ರಿಯಿಸಲಿಲ್ಲ. ಸೂರ್ಯನ ಜೊತೆ ನಡೆಯುತ್ತಲೇ ಚಿಂತಿಸಿದ. ಸೂರ್ಯನೂ ಸುಮ್ಮನಿದ್ದ. ತಾನಾಗಿ ಒತ್ತಾಯದ ಉತ್ತರ ಪಡೆಯುವುದು ಸರಿಯಲ್ಲವೆಂದು ಭಾವಿಸಿದ.

ಸ್ವಲ್ಪ ಹೊತ್ತಿನ ನಂತರ ನವಾಬ ಸೂರ್ಯನ ಕೈಹಿಡಿದು ಒತ್ತಿ ಹೇಳಿ- "ಸೂರ್ಯ, ಯೂ ಆರ್ ಗ್ರೇಟ್."

"ಛೇ! ಹಾಗೆಲ್ಲ ಅನ್ನಬೇಡ. ನನ್ನ-ನಿನ್ನ ನಡುವೆ ಅಂಥ ಮಾತು ಬರಬಾರದು" - ಸೂರ್ಯ ವಿನಯದಿಂದ ಸ್ಪಷ್ಟವಾಗಿ ನುಡಿದ.

"ಹಾಗಲ್ಲ ಸೂರ್ಯ, ನೀನು ಎಷ್ಟು ಆಳವಾಗಿ ಯೋಚಿಸಿದ್ದೀಯ! ಶಬರಿಯಾಗದೆ ಸಂಘರ್ಷ ಸಾಧ್ಯವಿಲ್ಲ-ಸತ್ಯ ಸೂರ್ಯ ಸತ್ಯ." ಸೂರ್ಯ ನವಾಬನ ಮುಖ ನೋಡಿದ.

ಅದರಲ್ಲಿ ಆನಂದವಿತ್ತು; ಕಣ್ಣಲ್ಲಿ ಬೆಳಕಿತ್ತು.

ಜೊತೆಯಲ್ಲಿದ್ದವರು ಹಾಡುತ್ತಿದ್ದರು- "ಸಾವಿಲ್ಲದ ಅಜ್ಜಿ ಸ್ವಾಭಿಮಾನದ ಅಜ್ಜಿ."

ಸೂರ್ಯ ಅಂದುಕೊಂಡ-'ಶಬರಿಗೂ ಸಾವಿಲ್ಲ; ಸಂಘರ್ಷಕ್ಕೂ ಸಾವಿಲ್ಲ'

* * *

ಹೊಲದ ಕೆಲಸ ಮಾಡುವಾಗ ಹೆಂಗಸರು ಶಬರಜ್ಜಿಯ ಹಾಡು ಹೇಳುತ್ತ ಆನಂದಿಸುತ್ತಿದ್ದರು. ರಾತ್ರಿಶಾಲೆಯಿಂದ ಬಂದ ಮೇಲೆ ಸೂರ್ಯನಿಂದ ಮತ್ತೊಮ್ಮೆ ಹಾಡು ಹೇಳಿಸಿಕೊಂಡಿದ್ದರು. ನವಾಬ್ ಹಾಡನ್ನು ಬರೆದುಕೊಂಡು ತಾನೂ ಹೇಳಿಕೊಟ್ಟಿದ್ದ. ಹೀಗಾಗಿ ಸಾಕಷ್ಟು ಬಾಯಿಪಾಠವಾಗಿದ್ದ ಹಾಡನ್ನು ಹೇಳುವುದರಲ್ಲಿ ಹೆಂಗಸರಿಗೆ ಆನಂದ. ಕೂಲಿ ಕೆಲಸದ ಅನಿವಾರ್ಯತೆಯ ನಡುವೆ ಹೊಸ ಆಸೆ ಚಿಗುರಿದಂತೆ ಹಾಡು ಅನುಭವವಾಗುತ್ತಿತ್ತು. ಕೆಲವು ಪದಗಳೊ, ಒಂದೆರಡು

ಸಾಲೊ ತಪ್ಪಿದಾಗ ರಾಗಕ್ಕೆ ಹೊಂದುವಂತೆ ತಾವೇ ಸೇರಿಸಿ ಹಾಡುವಷ್ಟರ ಮಟ್ಟಿಗೆ ಅವರ ಉತ್ಸಾಹ ಚಿಮ್ಮುತ್ತಿತ್ತು.

ಒಡೆಯರ ಹೆಂಡತಿ ಸಾವಿತ್ರಮ್ಮ ಹೊಲದ ಕಡೆ ಬಂದಾಗ ಕೂಲಿ ಹೆಂಗಸರ ಹಾಡು ಕೇಳಿ ಅಚ್ಚರಿಯಿಂದ ಆಲಿಸಿದಳು. "ಏನ್ರೇ ಓದು ಬರಾ ಚಂದಾಗೇ ಕಲ್ತಂಗೈತೆ" ಎಂದು ಕೇಳಿದಳು. ಆಗ ಶಬರಿ "ಇದನ್ ಯೇಳಾಕೆ ಓದು ಬರಾ ಯಾಕವ್ವ; ಅಂಗೇ ಬತ್ತೈತೆ ಸರ್ಯಾಗ್ ಕಲ್ತ್‌ಕಂಡ್ರೆ" ಎಂದಳು. ಸಾವಿತ್ರಮ್ಮ "ಅದೂ ಸರಿ ಅನ್ನು. ಆದ್ರೂನೂವೆ ಸ್ಯಾಲೆ ಸುರುವಾಗಿದ್ಕೇ ಅಲ್ವ ಈ ಹಾಡ್ ಬಂದಿರಾದು" ಎಂದು ತನ್ನ ಮಾತಿಗೆ ಸಮರ್ಥನೆ ನೀಡಿದಳು.

"ಬರೀ ಆಡ್ ಬಂದ್ರೇನಾತವ್ವ. ನಮ್ಗೇನ್ ಸ್ಯಬರಜ್ಜಿ ತರಾ ಸ್ವಂತಕ್ ಬೂಮಿ ಐತಾ? ಅಣ್ಣು ಅಂಪ್ಲ ಬೆಳ್ಯಾಕಾಯ್ತದ?" ಎಂದು ಶಬರಿ ಸಹಜವಾಗಿ ಕೇಳಿದಳು.

ಸಾವಿತ್ರಮ್ಮ ಮಾತಾಡಲಿಲ್ಲ.

ಶಬರಿ ಅಲ್ಲಿಗೇ ಬಿಡಲಿಲ್ಲ.

"ಯಾಕ್ರವ್ವ ಸುಮ್ಕೆ ನಿಂತ್ಕಂಡ್ರಿ? ನಾವು ಉಟ್ದಾಗಿಂದ ನಿಮ್ ವೊಲ್ದಾಗ್ ಕೆಲ್ಸ ಮಾಡ್ತಿದ್ದೀವಿ. ಕೂಲಿ ಕೆಲ್ಸಾನೆ ಬೂಮ್‌ತಾಯಿ ಪೂಜೆ ಅಂದ್ಕಂಡ್ ಬಂದಿದ್ದೀವಿ. ನಮ್ದು ಅಂಬ್ತ ಅಂಗೈಯಗಲ ಬೂಮಿಕಾಣಿ ಏನೂ ಇಲ್ಲ. ಯಾಕ್ರವ್ವ ಇಂಗೆ?"– ಶಬರಿ ಕೇಳಿದಳು.

"ಯಾಕೆ ಅಂದ್ರೆ ಏನೇಳಾನೇ ಸ್ಯಬರಿ. ಈ ಬೂಮೀಗೆ ಮದ್ಲಿಂದ ನಾವೇ ಒಡೇರು"– ಹೀಗೆ ಸಾವಿತ್ರಮ್ಮ ಹೇಳಿದ ಮಾತು ಕೇಳಿ ಶಬರಿ ತಣ್ಣಗಾಗಲಿಲ್ಲ.

"ಈಗದೇನೊ ಬಂದೈತಂತ್ರಲ್ಲವ್ವ ಉಳೋರ್ಗೆ ಒಡೆತನ ಕೊಡಾ ಕಾನೂನು....." ಎಂದು ಶಬರಿ ಹೇಳುವ ವೇಳೆಗೆ ನರಸಿಂಹರಾಯಪ್ಪ ಬರುವುದು ಕಾಣಿಸಿ ಸಾವಿತ್ರಮ್ಮ "ಅವ್ರ್ ಬತ್ತಾ ಅವ್ರೆ" ಎಂದಳು. ಆದರೆ ಶಬರಿಯೊಳಗೆ ಹಾಡಿನ ಹುಮ್ಮಸ್ಸು ಬತ್ತಿರಲಿಲ್ಲ. ಹೀಗಾಗಿ ಹಿಂಜರಿಯಲಿಲ್ಲ. "ಒಡೇರ್ನ ಕೇಳ್ತೀನಿ. ಏನೋ ನಮ್ಗು ಒಸಿ ಬೂಮಿ ಸಿಗಂಗಿದ್ರೆ ಯಾಕ್ ಬ್ಯಾಡ ಅಂತೀರವ್ವ" ಎಂದಳು. ಸಾವಿತ್ರಮ್ಮ "ನಿಂದ್ ಒಳ್ಳೇ ಕತ್ಯಾತಲ್ಲ. ನಾನ್ಯಾಕೆ ಬ್ಯಾಡ ಅಂಬ್ಲಿ. ಎಲ್ಲಾ ಈ ಗಂಡುಸ್ರುದೇ ವ್ಯವಾರ. ಈಟಕ್ಕೂ ನಾನೇನ್ ಕೊಡಾಳ ತಗಂಬಾಳ?" ಎಂದು ಸಮಜಾಯಿಷಿ ನೀಡಿದಳು. ಶಬರಿಗೆ ಅದೇನನ್ನಿಸಿತೊ "ಅಂಗಂಬ್ತ ನೀವೇನ್ ನಮ್ಮಂಗ್ ಕೂಲಿ ಮಾಡಾಕಿಲ್ವಲ್ಲ" ಎಂದುಬಿಟ್ಟಳು. ಸಾವಿತ್ರಮ್ಮನಿಗೆ ಸಿಟ್ಟು ಬಂತು, "ಯಾಕೆ ಆಟಂದ್ ಸದ್ರ ತಗಂಡ್ ಮಾತಾಡ್ತೀಯ. ಕಾನೂನ್ ಗೀನೂನು ಇದ್ರೆ

ಅವ್ರತಾವ್ ಕೇಳು" ಎಂದು ಸಿಡುಕಿದಳು.

ಅಷ್ಟರಲ್ಲಿ ಅಲ್ಲಿಗೆ ಬಂದ ನರಸಿಂಹರಾಯಪ್ಪ "ಯಾತ್ರುದದು–ಕಾನೂನ್ ಗೀನೂನು ಅಂಬ್ತ ಹೊಸಾ ಮಾತ್ ಬರ್ತಾ ಐತೆ" ಎಂದು ಕೇಳಿದ. ಸಾವಿತ್ರಮ್ಮ "ಏನೋ ಈ ಸ್ಯಬರಿ ಕೇಳ್ತಾ ಇದ್ದಳು. ಇವ್ರಿಗೇನೊ ಬೂಮಿ ಬೇಕಂತೆ. ಕಾನೂನ್ ಐತಂತೆ" ಎಂದು ರಾಗ ಎಳೆದಳು. ನರಸಿಂಹರಾಯಪ್ಪ ದಿಗ್ಭ್ರಾಂತನಾದ. ಇವರ ಬಾಯಲ್ಲಿ ಕಾನೂನಿನ ಮಾತು! ದಿಗ್ಭ್ರಾಂತಿ ಸಿಟ್ಟಿಗೆ ತಿರುಗಿತು.

"ಏನ್ರೇ, ನೀವೇನ್ ಕೂಲಿ ಮಾಡಾಕ್ ಬಂದಿದ್ದೀರೊ ಕಾನೂನ್ ಕೇಳಾಕ್ ಬಂದಿದ್ದೀರೊ?" ಎಂದು ಅವಡುಗಚ್ಚಿ ಕೇಳಿದ.

ಯಾಕೋ ಆಯತಪ್ಪುತ್ತಿದೆಯೆಂಬ ಅಳುಕು ಕೂಲಿ ಹೆಂಗಸರಿಗೆ. ಬೆವರುತ್ತ ಶಬರಿಯ ಕಡೆ ನೋಡಿದರು.

"ಯಾರೊ ಅಂಗಂಬ್ತಿದ್ರು ಒಡೇರ, ದಿಟಾನೊ ಸಟೇನೊ ತಿಳ್ಕಮಾನ ಅಂಬ್ತ ಕೇಳ್ದೆ. ಆಟೇಯ"– ಶಬರಿ ಅಳುಕದೆ ಹೇಳಿದಳು.

"ಯಾವ್ ಬೋಳಿಮಗ ಇಂಗೇಳಿದ್ದು?"– ಒಡೆಯ ಕಿರುಚಿದ.

"ಅಂಗೆಲ್ಲ ವೊಲುಸ್ ಮಾತಾಡ್‌ಬ್ಯಾಡ್ರಿ ಒಡೇರ. ಒಳ್ಳೆ ಮನುಸ್ರು ಬಾಯಾಗ್ ಒಳ್ಳೆ ಮಾತ್ ಕೇಳಿದ್ದೀವಿ ನಾವು. ಅಂತೋರ್‍ನ ಬಾಯೋದಂಗ್ ಅನ್‌ಬ್ಯಾಡ್ರಿ"– ಶಬರಿ ನೇರವಾಗಿ ಹೇಳಿದಳು.

ಆಕೆಯ ದಿಟ್ಟತೆ ನೋಡಿ ಉಳಿದವರಿಗೆ ಅಚ್ಚರಿ; ಅವರಲ್ಲೂ ಆತ್ಮವಿಶ್ವಾಸ ಚಿಗುರತೊಡಗಿತು. ಆದರೆ ಒಡೆಯನಿಗೆ ಉರಿಹತ್ತಿತು.

"ನೀನ್ಯಾವಳೆ ಬೋಸುಡಿ ನನಿಗ್ ಬುದ್ದಿಯೇಳಾಕೆ? ಬಾಯೋದಂಗ್ ಮಾತಾಡಿರೆ ಸೀರೆ ಕಿತ್ತಾಕ್ ಬಿಡ್ತೀನಿ" ಎಂದು ಗರ್ಜಿಸಿದ. ತಕ್ಷಣ ಸಾವಿತ್ರಮ್ಮ ಮಧ್ಯೆ ಪ್ರವೇಶಿಸಿದಳು. "ಕೂಲೇರತ್ರೆಲ್ಲ ಜಗಳಾಡಿದ್ರೆ ನಿಮ್ದೇನುಳೀತೈತೆ. ನಡ್‌ನಡಿರಿ ಸುಮ್ಕೆ" ಎಂದು ಒತ್ತಾಯಪೂರ್ವಕವಾಗಿ ಕರೆದೊಯ್ದಳು.

ಒಡೆಯ ನರಸಿಂಹರಾಯಪ್ಪ ಬುಸುಗುಡುತ್ತ ಹೋದ.

ಶಬರಿ, ಉಳಿದ ಹೆಂಗಸರಿಗೆ ಹೊಸದಾಗಿ ಕಂಡಳು.

ರಾತ್ರಿಶಾಲೆಯಲ್ಲಿ ಇದೇ ಮಾತು. ಸೂರ್ಯ ಸಂದರ್ಭಕ್ಕೆ ತಕ್ಕಂತೆ ಮಾತನಾಡಿದ. "ಭೂಮಿಗೆ ಬೆವರು ಹರ್‍ಸೋ ಜನರು ನೀವು. ಆ ಭೂಮಿ ನಿಮಗೇ ಸೇರ್‍ಬೇಕು. ನಿಮ್ ಪಾಲನ್ನ ನೀವ್ ಕೇಳ್ಲೇಬೇಕು. ಶಬರಿ ಒಬ್ಬಳು ಕೇಳಿದ್ರೆ ಸಾಲ್ದು, ಎಲ್ರೂ ಕೇಳ್ಬೇಕು."

ಆಗ ನವಾಬ ಅತ್ಯುತ್ಸಾಹದಲ್ಲಿ ಕರೆನೀಡಿದ–"ಒಟ್ಟಿಗೇ ಜಗ್ಗಿಸ್ ಕೇಳ್ಬೇಕು.

ಏನ್ ಬಂದ್ರೂ ಎದುರಿಸೋದಿಕ್ಕೆ ಸಿದ್ಧ ಆಗ್ಬೇಕು...."

ಸೂರ್ಯ ತಡೆದು ಹೇಳಿದ– "ಅದಕ್ಕೂ ಕಾಲ ಬರ್ಬೇಕು ಗೆಳೆಯ. ಕಾಲ ಬರ್ಬೇಕು ಅಂದ್ರೆ ಎಲ್ಲಾ ಪಕ್ವ ಆಗ್ಬೇಕು ಅಂತ. ಆತುರ ಮಾಡಿ ಹಾಳ್‌ಮಾಡ್ಕೋಬಾರ್ದು."

ನವಾಬನಿಗೆ ತನ್ನ ಉತ್ಸಾಹದಲ್ಲಿದ್ದ ಆತುರ ಅರ್ಥವಾಯ್ತು. "ನಿಜ. ನೀನ್ ಎಷ್ಟಾದ್ರೂ ನನಗಿಂತ ಅನುಭವ ಇರೋನು. ನನಗೆ ಒಂಥರ ಥ್ರಿಲ್ ಆಯ್ತು. ಅದಕ್ಕೇ ಹಾಗೇಳ್‌ಬಿಟ್ಟೆ, ಸಾರಿ" ಎಂದು ವಿಷಾದಿಸಿದ.

"ಅದು ತಪ್ಪೇನಿಲ್ಲ ಬಿಡು. ತುಂಬಾ ಲೆಕ್ಕಾಚಾರನೂ ಹಾಕ್‌ಬಾರದು. ಥ್ರಿಲ್ ತಗೊಳ್ಳೊ ಮನೋಭಾವಾನೂ ಇರಬಾರದು. ಬದಲಾವಣೆ ಪರವಾಗಿ ಬದ್ಧತೆ ಇರ್ಬೇಕು. ನಿನ್ನ ಬದ್ಧತೇನ ಯಾರೂ ಪ್ರಶ್ನೆ ಮಾಡೋಹಾಗಿಲ್ಲ. ಆದ್ರಿಂದ ನೀನು ಸಾರಿಗೀರಿ ಅಂತ ಹೇಳ್‌ಬಾರದು ಗೆಳೆಯ" ಎಂದು ಸೂರ್ಯ ಹೇಳಿದಾಗ ನವಾಬನ ಮನಸ್ಸು ತುಂಬಿ ಬಂತು.

ಆದರೂ ಶಬರಿ ಹೇಳಿದಳು–"ನವಾಬಣ್ಣ ಯೇಳಾದ್ರಗೇನೂ ತಪ್ಪಿಲ್ಲ".

ಸೂರ್ಯ ಹೇಳಿದ–" ತಪ್ಪು ಅಂತ ನಾನೆಲ್ ಹೇಳ್ದೆ. ಯಾರ್ಗೂ ಆತುರ ಬೇಡ ಅಂದೆ. ಅಷ್ಟೆ."

"ಹಂಗಂಬ್ತ ಸುಮ್ಕೆ ಇರಾಕಾಯ್ತದ? ಕಬ್ಬಿಣ ಕಾದಾಗ್ಲೆ ಕುಟ್‌ಬೇಕು" ಎಂದಳು ಶಬರಿ. ಆಕೆಯ ಮನಸ್ಸಿನಲ್ಲಿ ಒಡೆಯನ ಬಯ್ಗಳು ಘಾಸಿಮಾಡಿತ್ತು.

ಇಲ್ಲೀವರೆಗೆ ಸುಮ್ಮನಿದ್ದ ಸಣ್ಣೀರ ಬಾಯಿಬಿಟ್ಟ–"ಕಬ್ಬಿಣ ಕಾದಾಗ್ಲೇ ಕುಟ್ಬೇಕು ಅಂಬಾದೇನೊ ನಿಜ ಕಣವ್ವ. ಆದ್ರೆ ಏಳ್‌ತಿಂಗಳೀಗ್ ವುಟ್ಟೋರ್ ತರ ಆಡ್‌ಬಾರ್ದು. ಎತ್ತ್ ಏರ್‌ಗೆಳೀತು ಕ್ವಾಣ ನೀರ್‌ಗೆಳೀತು ಅನ್ನಂಗಾದ್ರೆ ಏನ್ ಮಾಡಾದು?" ಎಂದು ಕೇಳಿದ.

"ಅಂಗಂಬ್ತ ಎಲ್ರೆದ್ರಿಗೂ ಬೋಸುಡಿ ಗೀಸುಡಿ ಅಂಬ್ತ ಬಯ್ಯಿಸ್ಕಬೇಕಾ? ಯೆಣ್ ಯೆಂಗುಸ್ರು ಅಂದ್ರೇನ್ ಬಿಟ್ಟಿ ಸಿಕ್ಕವ್ರಾ?" – ಶಬರಿಯ ಪ್ರಶ್ನೆ. ಬೇಸರದಿಂದ ಬಂದ ಪ್ರಶ್ನೆ.

ಆಗ ಕೂತಿದ್ದವರೆಲ್ಲ ಮಾತಾಡತೊಡಗಿದರು. ತಮತಮಗೆ ಅನ್ನಿಸಿದ್ದನ್ನು ಹೇಳತೊಡಗಿದರು. ಒಬ್ಬಾತ ಕೇಳಿದ – "ನಾವು ಕಾನೂನು ಅಂಬ್ತ ವೋದ್ರೆ ಒಡೇರ್ ನಮ್ ವೊಟ್ಟೆ ಮ್ಯಾಲ್ ಬಡೀತಾರೆ. ಕೂಲಿ ಮಾಡಕ್ ಬರ್ ಬ್ಯಾಡ್ರೋ ಬಡ್ಡಿಮಕ್ಕಳ ಅಂಬ್ತಾರೆ. ಆವಾಗ್ ಈ ಸ್ಯಬರಿ ಉಂಬಾಕಿಕ್ತಾಳ ನಮ್ಗೆಲ್ಲ?"

ಇನ್ನೊಬ್ಬ ಹೆಂಗಸು ಹೇಳಿದಳು – "ಇಂಗೆಲ್ಲ ಬಯ್ಯಿಸ್ಕಮಾದು ನಮ್ಗೇನ್

ವೊಸ್ದಾ? ಇವಾಗ್ಯಾಕ್ ಸುಮ್ಕೆ ಇಲ್ಲದ್ ರಗಳೆ?"

ನವಾಬ ತಕ್ಷಣ ಮಧ್ಯೆ ಪ್ರವೇಶಿಸಿದ– "ಶಬರೀನ ಏನೂ ಅನ್ಬೇಡಿ. ನಾಳೆ ನಿಮ್ಗೂ ಶಬರಿ ಥರಾನೇ ಅನ್ಸುತ್ತೆ" ಎಂದು ತಿಳಿಹೇಳಿದ.

ಆಗ ಗೌರಿ, ಶಬರಿಯ ಸಹಾಯಕ್ಕೆ ಬಂದಳು. "ಶಬರಿಗಂದ್ರೇನು, ನಮಗಂದ್ರೇನು ಎಲ್ಲ ಒಂದೇಯ. ಶಬರೀನ್ ಬೋಸುಡಿ ಅಂದ್ರೆ ನಮ್ಮನ್ನೂ ಅಂದಂಗೆ. ಶಬರಿ ಸೀರೇನ್ ಕಿತ್ತಾಕ್ತೀನಿ ಅಂದ್ರೆ ನಮ್ ಸೀರೇಗೂ ಕಯ್ಯಾಕ್ದಂಗೆ. ಇವತ್ತವ್ಳ್ಗೆ ನಾಳೆ ನಮ್ಗೆ. ಸುಮ್ಕೆ ಏನೇನೊ ಮಾತಾಡ್ಬ್ಯಾಡ್ರಿ" ಎಂದು ಮನಮುಟ್ಟುವಂತೆ ನೇರವಾಗಿ ನುಡಿದಳು.

ಆಗ ಮಾತಿಲ್ಲ, ಕತೆಯಿಲ್ಲ, ಮೌನ; ಒಳಗೆ ಮಂಥನ.

ನಿಧಾನವಾಗಿ ಒಬ್ಬಾಕೆ ಹೇಳಿದಳು– "ನೀನ್ ಯೇಳಾದು ಸರ್ಯಾಗೈತೆ ಕಣವ್ವ. ನಮ್ಗೂ ಮಾನ ಮರ್ವಾದೆ ಇರಾಕಿಲ್ವ? ನಮ್ ಸೀರೆ ಸೆಳೀತೀನಿ ಅಂದಾಗ ಸುಮ್ಕಿದ್ರೆ ಇವ್ರೆಲ್ಲ ಗಂಡುಸ್ರು ಅನ್ನಿಸ್ಕಂಬ್ತಾರ?'

ಶಬರಿಗೆ ಮಾತು ಕಟ್ಟಿತು. ಇನ್ನೊಂದು ನೆಲೆಗೆ ಕರೆದೊಯ್ದಿತು.

"ದಿಟ ಕಣವ್ವ. ನಂಗೆ ತಾಳಿ ಕಟ್ಟೋನ್ ಒಬ್ ಇದ್ದಿದ್ರೆ ಇಂಗ್ ಸುಮ್ಕೆ ಕುಂತಿರ್ತಿದ್ನಾ? ದಿಕ್ಕಿಲ್ಲ ದೆಸೆಯಿಲ್ಲ ಅಂಬ್ತ ಯಾರೇನ್ ಬೇಕಾರೂ ಅನ್ಬವ್ದಾ?" ಎಂದು ಹೇಳುತ್ತಾ ಶಬರಿಯ ಕಣ್ಣಲ್ಲಿ ನೀರು ಬಂತು. ಸೆರಗು ಮುಚ್ಚಿಕೊಂಡು ಅಳತೊಡಗಿದಳು.

ಸೂರ್ಯ "ಶಬರಿ..... ಸುಮ್ನಿರು ಶಬರಿ" ಎಂದರೂ ಸುಮ್ಮನಾಗಲಿಲ್ಲ. ಆಗ ನವಾಬ್ "ಶಬರೀಗ್ ಅವ್ಮಾನ ಆದ್ರೆ ಅದು ಎಲ್ರಿಗೂ ಆದಂಗೆ. ಏನ್ರಪ್ಪ ಏನಂತಿರಾ? ಎಲ್ರೂ ಹೌದು ಅಂತೀರ ಅಲ್ವಾ?" ಎಂದು ಕೇಳಿ ಒಗ್ಗಟ್ಟಿನ ಮಾತು ತರಲು ಯತ್ನಿಸಿದ.

ಹುಚ್ಚೀರ ಕಣ್ಣಲ್ಲಿ ನೀರು ತುಂಬಿಕೊಂಡು ಬೆಪ್ಪಾಗಿ ನೋಡುತ್ತಿದ್ದ. ಸಣ್ಣೀರ "ಎಲ್ಲಾನ ಉಂಟಾ? ನಾವ್ ಸ್ಯಬರೀನ್ ಬಿಟ್ಕೊಡಾಕಾಯ್ತದ? ಒಸಿ ಕಾದ್ ನೋಡಾನ ಅಂದ್ವಪ್ಪ ಆಟೇಯ" ಎಂದಾಗ, ಎಲ್ಲರೂ "ಊಂಕಣಪ್ಪೊ; ಊಂಕಣಪ್ಪೊ" ಎಂದು ಕೂಗಿದರು.

ಇದ್ದಕ್ಕಿದ್ದಂತೆ ಹೊಸ ವಾತಾವರಣ ಮೂಡಿತು. ಹಾಗೆ ನೋಡಿದರೆ ಸೂರ್ಯನೇ ಶಬರಿಯ ಮಾತುಗಳಿಂದ ಘಾಸಿಗೊಳಗಾಗಿದ್ದ. ಚಂದ್ರನನ್ನು ಕಳೆದುಕೊಂಡ ಶಬರಿಯ ಸಂಕಟ ಸೂರ್ಯನಲ್ಲಿ ಸುಳಿಯಾಗಿತ್ತು.

ನವಾಬ್ ಹೊಸ ವಾತಾವರಣದ ಜಾಡು ಹಿಡಿದ. "ಈಗ ಎಲ್ರೂ

ಹಾಡ್‌ಹೇಳೋಣ" ಎಂದು ಶಬರಿಯ ಹಾಡು ಶುರು ಮಾಡಿದ:

'ಗುಡಿಯ ಕಟ್ಟಲಿಲ್ಲ ಮುಡಿಯ ಕಟ್ಟಲಿಲ್ಲ
ಮಡಿ ಮೈಲಿಗೆಯ ಮನಸು ಮೊದಲೇ ಇಲ್ಲ.
ಶಬರಜ್ಜಿ ನಮ್ಮ ಶಬರಜ್ಜಿ
ಸಾವಿಲ್ಲದ ಅಜ್ಜಿ; ಸ್ವಾಭಿಮಾನದ ಅಜ್ಜಿ..."
ಎಲ್ಲರೂ ಹೇಳತೊಡಗಿದರು. ನವಾಬ ಮುಂದುವರೆಸಿದ–

"ಭೂಮಿತಾಯಿಯ ಮಗಳು ಶಬರಜ್ಜಿ
ಆಕಾಶದ ನೆರಳು ಶಬರಜ್ಜಿ
ಭೂಮಿಗೆ ಬಾಗಿಲು ಬಾಳಿಗೆ ನೇಗಿಲು
ಸ್ವಾಭಿಮಾನದ ಅಜ್ಜಿ ಶಬರಜ್ಜಿ
ಸಾವಿಲ್ಲದ ಅಜ್ಜಿ ಶಬರಜ್ಜಿ...."

–ನವಾಬನ ಬಾಯಲ್ಲಿ ಅಲೆಯಲೆಯಾಗಿ ಹೊಮ್ಮುವ ಹಾಡು. ಎಲ್ಲರೂ ಹಾಡುತ್ತ ಹಳೆಯದನ್ನು ಹೂತು ಹೊಸದಾಗಿ ಅರಳುತ್ತಿರುವಂತೆ ಕಂಡರು.

ಹಾಡಿನ ಉತ್ಸಾಹದ ನಡುವೆ ಸೂರ್ಯನಲ್ಲಿ ಒಂಟಿವೇದನೆ.

ಚಂದ್ರನ ಬೆಳಕಲ್ಲಿ ಸೂರ್ಯ ಸಂವೇದನೆ!

* * *

ಎಲ್ಲರೂ ಹಟ್ಟಿ ತಲುಪಿದರು. ಕೆಲವರು ಕಟ್ಟೆ ಮೇಲೆ ಕೂತರು. ಗೌರಿ, ಶಬರಿ ಮುಂತಾದ ಹೆಂಗಸರೆಲ್ಲ ಗುಡಿಸಲು ಸೇರಿದರು. ಸೂರ್ಯ, ನವಾಬ್, ಸಣ್ಣೀರ, ಹುಚ್ಚೀರ ಮುಂತಾದ ಗಂಡಸರು ಕಟ್ಟೆಯಲ್ಲಿ ಅದೂ ಇದೂ ಮಾತಾಡುತ್ತಿರುವಾಗ ಪೂಜಾರಪ್ಪ ಬಂದ.

"ಏನ್ ಎಲ್ರೂ ಬಾಳ ಮಾತಾಡ್ತ ಕುಂತಿದ್ರಿ? ಏನ್ ಸಮಾಸಾರ?" ಎಂದು ಗಡದ್ದಾಗಿ ಕೇಳಿದ.

"ನಮ್ದೇನಿರ್ತೈತೆ ಸಮಾಸಾರ? ಒಡೇರ್ ಸವಾಸ್ದಾಗಿರಾ ನಿಂದಪ್ಪ ಎಲ್ಲ ಸಮಾಸಾರ" ಎಂದ ಒಬ್ಬಾತ.

"ಸರ್ಯಾಗೇಳ್ದೆ ಕಣ್ಲಾ. ಈಟ್ ಬುದ್ಧಿ ಎಲ್ಲಾರ್ಗೂ ಇದ್ರೆ ಗಾಳಿಗಂಟ್ಲೇ ಇರಾಕಿಲ್ಲ ನೋಡು. ನೀನೇಳ್ದಲ್ಲ ಒಡೇರ್ ಸವಾಸ ಅಂಬ್ತ, ಯಾಕ್ ನಂಬ್ತಾರೆ ಯೇಳು ಅವ್ರು? ಈ ಅಟ್ಟಿ ಜುಟ್ಟೆಲ್ಲ ನನ್ನ ಕೈಯ್ಯಾಗ್ಐತೆ ಅಂಬ್ತ ಗೊತ್ತು ಅವ್ರ್ಗೆ. ಅದ್ಕೇ

ನಂಗೆ ಗೋರ್ವ ಕೊಡ್ತಾರೆ ಗೋರ್ವ. ಈಗ್ ನೋಡು ನಿಂತ್ ನಿಲುವಿಗೇ ಬಾ ಅಂಬ್ತ ಯೇಳ್ಕಳ್ಸವ್ರೆ. ಇಟ್ಟುಂಡ್ ವೋಗಾವ ಅಂಬ್ತ ಬಂದೆ. ಪಾಪ! ಒಡೇರ್ಗೇನ್ ಕಷ್ಟ ಬಂತ್ಯೆತೊ ಏನೋ" ಎಂದು ಪೂಜಾರಪ್ಪ ಯಾರ ಮಾತಿಗೂ ಅವಕಾಶ ಕೊಡದೆ ಒಂದೇ ಸಮ ಒದರಿ ಮನೆಯೊಳಗೆ ಹೋದ.

ಕೂತವರೆಲ್ಲ ಮುಸಿಮುಸಿ ನಕ್ಕರು.

ಮಾತುಕತೆ ಮುಂದುವರೆಯಿತು. ಸೂರ್ಯ ತನ್ನಾರಕ್ಕೆ ತಾನು ಕೂತಿದ್ದ. ನವಾಬನೇ ಅವರೊಂದಿಗೆ ಸರಸ ಸಂಭಾಷಣೆಯಲ್ಲಿ ತೊಡಗಿದ್ದ.

ತನ್ನೊಳಗೆ ತಾನು ಕಳೆದುಹೋದಂತಿದ್ದ ಸೂರ್ಯ ಇದ್ದಕ್ಕಿದ್ದಂತೆ ಎದ್ದ. "ನೀನ್ ಮಾತಾಡ್ತ ಇರು ಗೆಳೆಯ" ಎಂದು ಗುಡಿಸಲು ಕಡೆಗೆ ಬಂದ.

ಒಳಗೆ ಶಬರಿಯ ಸಂಕಟ. ಆ ಒಡೆಯ ಸೀರೆ ಸೆಳೀತೀನಿ ಅಂದದ್ದು ಅದರ ಬಗ್ಗೆ ಶಾಲೆಯಲ್ಲಿ ಮಾತುಕತೆಯಾದದ್ದು, ತಾನು ಗಂಡ ಅಂತ ಒಬ್ಬ ಇದ್ದಿದ್ದರೆ... ಎಂದೆಲ್ಲ ಮಾತಾಡಿದ್ದು–ನೆನಪುಗಳು ನುಂಗುತ್ತ ಹೋದಂತೆ ಶಬರಿ ಕುಸಿದಳು. ಚಂದ್ರನ ಫೋಟೋವನ್ನು ದಿಟ್ಟಿಸಿದಳು. ಚಂದ್ರನೇ ಇಲ್ಲದ ಮೇಲೆ ಇದು ಯಾಕೆ? ಈ ಚಿತ್ರ ನೆನಪಿನ ಪಾತ್ರ ವಹಿಸುತ್ತೇ; ಒಳಗೆಲ್ಲ ದಹಿಸುತ್ತೆ.

ಬೇಡ, ಬಿಸಿಲು ಬೆಳದಿಂಗಳ ಕುಂಟೆಬಿಲ್ಲೆಯಾಟ ಬೇಡ.

ಕುಂಟೆಬಿಲ್ಲೆಯಾಟದ ಕೊನೆಯ ಮನೆ ಸೇರಲು ತೊಡರುಗಾಲು ಬೇಡ.

ನೆನಪುಗಳ ಕಾಡಲ್ಲಿ ಕಿಚ್ಚು ಹತ್ತಿ ಹುಚ್ಚಾಗುವುದೆ?

ನೆನಪುಗಳ ಕಿಚ್ಚು ಹಚ್ಚಿ ಕಾಡಲ್ಲಿ ಹಾದಿ ಹುಡುಕುವುದೆ?

ಚಂದ್ರನ ಚಿತ್ರವನ್ನು ಉರಿಯುವ ಒಲೆಗೆ ಹಾಕಿದಳು.

ನೋಡುತ್ತ ನಿಂತಿದ್ದ ಸೂರ್ಯ ಅರಿವಿಲ್ಲದ ಆತಂಕದಲ್ಲಿ "ಶಬರಿ" ಎಂದು ಕೂಗಿದ. ಶಬರಿ ತಿರುಗಿ ನೋಡಿದಳು.

ಉರಿಯುವ ಒಲೆ.

ನೇಯುತ್ತಿರುವ ಬಲೆ.

ಕಿತ್ತೆಸೆದು ಬರುವಂತೆ ಎದ್ದಳು. ಸೂರ್ಯನ ಬಳಿಬಂದು ಹಿಡಿದು ಎದೆಮೇಲೆ ತಲೆಯಿಟ್ಟು ಅಳತೊಡಗಿದಳು.

ಸೂರ್ಯ ದಿಗ್ಭ್ರಾಂತನಾಗಿ ನಿಂತಿದ್ದ. ನಿಧಾನವಾಗಿ ಶಬರಿಯ ತಲೆ ನೇವರಿಸಿದ. ಹಾಗೇ ಒತ್ತಿ ಹಿಡಿದ. "ಅಳ್‌ಬೇಡ ಶಬರಿ ಅಳ್‌ಬೇಡ" ಎಂದ.

ಅವಳು ಒತ್ತಿ ಬರುವ ಅಳುವನ್ನು ತಡೆಯುತ್ತ "ನಾನ್ ಒಬ್ಬಂಟಿ.... ಒಬ್ಬಂಟಿ' ಎಂದು ತಡವರಿಸುತ್ತ ಹೇಳಿದಳು.

ಸೂರ್ಯ ಹೇಳಿದ – "ಇಲ್ಲ ಶಬರಿ, ನಾನ್ ಇದ್ದೀನಿ. ಅಳ್‌ಬೇಡ" ಎಂದು ಸಮಾಧಾನಿಸಿದ. ಹಾಗೆಯೇ ಅಪ್ಪಿ ಹಿಡಿದ.

ಭಾರ ಇಳಿದಂಥ ಅನುಭವದಲ್ಲಿ ಇಬ್ಬರೂ ಹಗುರವಾದರು.

"ಉಂಬಾಕಿಡ್ಲಾ?" ಎಂದು ಕೇಳಿದಳು. ಶಬರಿ.

"ಬೇಗ ಊಟ ಮಾಡಿ ನಾನ್ ಹೋಗ್‌ಬೇಕು."– ಸೂರ್ಯ ಹೇಳಿದ.

ಶಬರಿಗೆ ಅಚ್ಚರಿ, "ಎಲ್ಲಿಗೆ" ಎಂದಳು.

"ಕೆಲ್ಸ ಇದೆ. ನಾಳೆ ಬಿಟ್ಟು ನಾಡಿದ್ ಬರ್‍ತೀನಿ."

"ಇವಾಗ ಕತ್ತಲೊತ್ನಾಗ್ ವೋಗ್ಬೇಕಾ?"

"ಅಲ್ಲಿ ರಸ್ತೇಗೆ ಇನ್ನೊಬ್ ಗೆಳೆಯ ಬಂದಿರ್‍ತಾನೆ."

"ಇದ್ಯಾಕ್ ನೀನು ಕತ್ತಲೊತ್ನಾಗೇ ವೋಗ್ತೀಯ, ಕತ್ತಲೊತ್ನಾಗೇ ಬತ್ತೀಯ?'

"ಕತ್ತಲಾದ್ರೇನು ಹಗಲಾದ್ರೇನು ನಂಗೆರಡೂ ಒಂದೇ."

"ಎಲ್ಡೂ ಒಂದೇ ಅಂದ್‌ಮ್ಯಾಗೆ ಅಗಲುವೊತ್ನಾಗೇ ವೋದ್ರಾಗಕಿಲ್ವ?"

"ನೀನೂ ಬಹಳ ಜಾಣೆ ಆಗ್‌ಬಿಟ್ಟೆ!"– ಸೂರ್ಯ ಹಗುರವಾಗಿ ನಕ್ಕ.

"ಎಲ್ಲಾ ನಿನ್ ಸವಾಸ"– ನಾಚಿಕೆಯ ನಸುನಗೆಯಲ್ಲಿ ಹೇಳಿದಳು.

"ಏ ಕಳ್ಳಿ" ಎಂದು ಕೆನ್ನೆ ಚಿವುಟಿದ ಸೂರ್ಯ.

ಈ ವೇಳೆಗೆ ಸರಿಯಾಗಿ ನವಾಬ ಬಂದ.

"ಏನಪ್ಪ, ಹೊರಡಲ್ವ? ರಸ್ತೆವರ್‍ಗೂ ಬಿಟ್‌ಬರ್‍ತೀನಿ" ಎಂದ.

"ಊಟಮಾಡು. ಒಟ್ಟಿಗೇ ಹೋಗೋಣ" ಎಂದು ಸೂರ್ಯ ಹೇಳಿದಾಗ ನವಾಬ ನಗುತ್ತ "ಆ ಪೂಜಾರಪ್ಪ ಹೋಗೋವರ್‍ಗೂ ನಂಗಿವತ್ತು ಊಟ ಇಲ್ಲ" ಎಂದ.

"ಯಾಕೆ?"–ಸೂರ್ಯನ ಪ್ರಶ್ನೆ.

"ಇವತ್ತು ನನಗೆ ಗೌರಿ ಆತಿಥ್ಯ. ಪೂಜಾರಪ್ಪ ಜಾಗ ಖಾಲಿ ಮಾಡಿದ್ ಮೇಲೇ ಅವ್ರ್‌ಮನೆಗೆ ನನ್ ಪ್ರವೇಶ. ಇದು ಗೌರಿ ಆದೇಶ."

ಸೂರ್ಯ ಮೌನವಾದ. ತಾನೆತ್ತ ಸಾಗಿದ್ದೇನೆ, ನವಾಬ ಎತ್ತ ಸಾಗಿದ್ದಾನೆ, ಯಾಕೆ ಹೀಗಾಗುತ್ತಿದೆ– ಎಂಬ ಪ್ರಶ್ನೆ ತಲೆಹೊಕ್ಕು ಕೊರೆಯತೊಡಗಿತು. ಸಮಾಜ ಬದಲಾವಣೆಯ ಆಸೆ ಹೊತ್ತವರು ಪ್ರೀತಿಪ್ರೇಮದಲ್ಲಿ ಮುಳುಗುತ್ತಿದ್ದೇವೆಯೆ? ಇದು ಸರಿಯೆ?.....

ಶಬರಿ ಊಟಕ್ಕೆ ಕರೆದಳು.

ಸೂರ್ಯ ಮೌನವಾಗಿ ಕೂತ. ಊಟ ಮುಗಿಸಿದ. ಬಗಲು ಚೀಲವನ್ನು ಹೆಗಲಿಗೇರಿಸಿದ. "ಬರ್‍ತೀನಿ ಶಬರಿ" ಎಂದು ಹೊರಟ.

ದಾರಿಯಲ್ಲಿ ಸೂರ್ಯ–ನವಾಬ ಇಬ್ಬರೇ. ಉಳಿದವರು ಬರುತ್ತೇವೆಂದರೂ ಸೂರ್ಯ 'ಬೇಡ' ಎಂದ. ಬೆಳದಿಂಗಳು ಇರುವುದರಿಂದ ನವಾಬನಿಗೆ ಅಂಜಿಕೆಯಿಲ್ಲ ಎಂದು ಸಮಜಾಯಿಷಿ ನೀಡಿದ. ವಾಸ್ತವವಾಗಿ ತಾವಿಬ್ಬರೇ ಮಾತನಾಡಬೇಕಿತ್ತು. ತನ್ನ ಮೇಲಿರುವ ಕೇಸಿನ ಬಗ್ಗೆ ಮಾತುಕತೆಗಾಗಿ ಹೊರಟಿದ್ದ ಸೂರ್ಯನ ಜೊತೆ ನವಾಬ ಮೌನವಾಗಿ ನಡೆದಿದ್ದ. ಕಡೆಗೆ ಮೌನ ಮುರಿದು ಹೇಳಿದ– "ಸೂರ್ಯ, ಈ ಸಾರಿ ಹೇಗಾದ್ರೂ ಜಾಮೀನ್ ಸಿಗೋ ಹಾಗೆ ಮಾಡ್ಬೇಕು. ನಮ್ ಗೆಳೆಯರಿಗೆ, ವಕೀಲರಿಗೆ ಸರ್ಯಾಗ್ ಹೇಳು. ಹೀಗೆ ಎಷ್ಟು ದಿನಾಂತ ಇರೋದು? ಪೂರ್ತಿ ಕಾಡು ಸೇರಿ ಕಾರ್ಯಾಚರಣೆ ಮಾಡ್ಬೇಕಾ, ಊರಲ್ಲಿದ್ದೇ ಹೋರಾಟ ನಡುಸ್ಬೇಕಾ– ನಿನ್ ಕೇಸಲ್ಲಿ ಒಂದ್ ತೀರ್ಮಾನ ಆಗ್ಲಿ."

"ಅದ್ಸರಿ ಗೆಳೆಯ. ಊರಲ್ಲಿದ್ದು ಹೋರಾಟ ಮಾಡೋಕೆ ಅಧಿಕಾರಶಾಹಿ ಅವ್ಕಾಶ ಕೊಡುತ್ತ? ಹಾಗಿದ್ದಿದ್ರೆ ನನ್ ಮೇಲೆ ಸುಳ್ಳು ಕೇಸ್ ಹಾಕ್ತಾ ಇತ್ತ? ನಾನು ಎಲ್ಲರ ಹಾಗೆ ಮೆರವಣಿಗೇಲಿ ಘೋಷಣೆ ಕೂಗೋಕ್ ಬಂದೋನು; ಧರಣಿ ಕೂತೋನು. ಸತ್ಯಾಗ್ರಹ ನಡಿಸ್ದೋನು. ಆದ್ರೆ ನನ್ನನ್ನ ನಾನೇ ಮೀರೋ ಹಾಗೆ ಮಾಡಿದ್ದು ಯಾರು? ವ್ಯವಸ್ಥೆ ಗೆಳೆಯ ಈ ವ್ಯವಸ್ಥೆ. ಹೋರಾಟದ ಒಂದೊಂದು ಹಂತಾನೂ ಮೀರಿ ಮುಂದಿನ ಹಾದಿ ಹಿಡ್ಯೋ ಒತ್ತಡ ತಂತು. ಈಗ ನೋಡು ಕೊಲೆ ಕೇಸು. ಇದೆಂಥ ಪ್ರಜಾಪ್ರಭುತ್ವ?" ಸೂರ್ಯನ ಭಾವ ವಲಯ ಬುದ್ಧಿಯೊಡನೆ ಬೆರೆತು ಭಾಷೆಯಾಗತೊಡಗಿತ್ತು. ನವಾಬ ನಡುವೆ ಮಾತನಾಡಲಿಲ್ಲ. ಸೂರ್ಯ ಅಂತರಂಗಕ್ಕೆ ತಡೆಯಾಗದಿರಲೆಂದು ಮೌನವಾಗೇ ಇದ್ದ. ಆದರೆ ವಿಚಿತ್ರವೆಂಬಂತೆ ಸೂರ್ಯನೂ ಮೌನವಾದ. ನವಾಬನಿಂದ ಪ್ರತಿಕ್ರಿಯೆ ನಿರೀಕ್ಷಿಸಿದ.

ಮಾತಿಲ್ಲದ ಹಾದಿ.
ಬಿರುಗಾಳಿಯಿಲ್ಲದ ಬಯಲು.

ಸೂರ್ಯನೇ ಮತ್ತೆ ಮಾತಾಡಿದ. "ಅದಿರ್ಲಿ ಬಿಡು. ಈಗ ನನಗೊಂದು ಪ್ರಶ್ನೆ ಕಾಡ್ತಿದೆ. ಹೋರಾಟದ ಹಾದಿ ಹಿಡಿದೋರ್ಗೆ, ಪ್ರೀತಿ–ಪ್ರೇಮ ಅಡ್ಡ ಆಗುತ್ತಾ?"

ನವಾಬನಿಗೆ ಏನು ಹೇಳಬೇಕೆಂದು ತೋಚಲಿಲ್ಲ. ಯಾಕೆ ಹೀಗೆ ಕೇಳುತ್ತಿದ್ದಾನೆ? ಈ ಪ್ರಶ್ನೆ ಯಾರಿಗೆ ಸಂಬಂಧಿಸಿದ್ದು? ಸ್ವಲ್ಪದರಲ್ಲೇ ಸುಧಾರಿಸಿಕೊಂಡು "ನಿನಗೆ ನನಗಿಂತ ಅನುಭವ ಜಾಸ್ತಿ. ನೀನೇ ಹೇಳ್‌ಬೇಕಪ್ಪ" ಎಂದ.

ಸೂರ್ಯ ಗಂಭೀರವಾಗಿ "ಒಬ್ಬೊಬ್ಬರಿಗೆ ಒಂದೊಂದ್ರಲ್ಲಿ ಅನುಭವ ಜಾಸ್ತಿ" ಎಂದ.

"ನಿನ್ ಮಾತೇ ನಂಗರ್ಥ ಆಗ್ತಿಲ್ಲ?"–ನವಾಬ ಪ್ರಶ್ನಾರ್ಥಕವಾದ.

""ನಿಜವಾಗ್ಲೂ ನನ್ನದು ಮುಗ್ಧಪ್ರಶ್ನೆ. ನಿನಗೇನ್ ಅನ್ಸುತ್ತೊ ಅದನ್ನ ಹೇಳು"–ಸೂರ್ಯ ಒತ್ತಾಯಿಸಿದ.

ಗಾಢವಾದ ನವಾಬ್ ಕಡೆಗೆ ಹೇಳಿದ– "ಪ್ರೀತಿ–ಪ್ರೇಮ ಅನ್ನೋ ಭಾವನೇನ ಕಿತ್ತುಹಾಕಿ ಬದ್ಕೋಕಾಗುತ್ತ? ವಿವೇಕ, ಔಚಿತ್ಯ ಎರಡನ್ನೂ ಉಳಿಸ್ಕೊಂಡಿದ್ರೆ ಪ್ರೀತಿ–ಪ್ರೇಮ ಯಾವತ್ತೂ ಹೋರಾಟಕ್ಕೆ ವಿರೋಧಿ ಆಗೋಲ್ಲ. ಇಷ್ಟಕ್ಕೂ ಹೋರಾಟದ ಬಗ್ಗೇನೂ ಪ್ರೀತಿ ಭಾವ ಇರಬೇಕಲ್ವ?"

ಸೂರ್ಯ ಹಾದಿಯಲ್ಲಿ ಹೆಜ್ಜೆ ಹಾಕಿದ.

ನವಾಬ್ ಪ್ರತಿಕ್ರಿಯೆ ನಿರೀಕ್ಷಿಸುತ್ತ ನಡೆದ.

"ನಿನ್ ಮಾತು ಸರ್ಯಾಗಿದೆ ಗೆಳೆಯ" ಸೂರ್ಯ ಮಾತು ಆರಂಭಿಸಿದ– "ಮಿಲಿಟರಿ ಮನೋಧರ್ಮ ಮೇಲುಗೈ ಪಡೀಬಾರ್ದು. ನಾವು ಕವಾಯತ್ತುಗಳಲ್ಲಿ ಕಳೆದು ಹೋಗಬಾರದು. ಹೋರಾಟದ ಮನೋಧರ್ಮ ಅಂದ್ರೆ ಮಿಲಿಟರಿ ಮನೋಧರ್ಮ ಅಲ್ಲ. ಯಾಕೇಂದ್ರೆ ಮಿಲಿಟರಿ ಮನೋಧರ್ಮಕ್ಕೂ ಮೂಲಭೂತವಾದಕ್ಕೂ ಸಂಬಂಧ ಇದೆ. ಅಲ್ವಾ?"

"ನಿಜ ಗೆಳೆಯ. ನಮ್ಮದು ಮಿಲಿಟರಿ ಮನೋಧರ್ಮವೂ ಆಗಬಾರ್ದು. ಮಾರುಕಟ್ಟೆ ಮನೋಧರ್ಮವೂ ಆಗ್‌ಬಾರ್ದು. ಇವತ್ತು ಆರ್ಥಿಕ ಸುಧಾರಣೆ ಅಂತ ಇಡೀ ಸಮಾಜವನ್ನೇ ಒಂದು ಮಾರುಕಟ್ಟೆ ಮಾಡ್ತಾ ಇದಾರೆ.... ಮನಸ್ಸು–ಮೆದುಳು ಮಾರುಕಟ್ಟೆ ಆಗ್ತಾ ಇವೆ. ಅಲ್ಲಿರಬೇಕಾದ್ದೆಲ್ಲ ಮಾರಾಟ ಮಾಡೋ ಸರಕು ಅನ್ನೋ ಸ್ಥಿತಿ ಬಂದ್ರೆ ಏನ್‌ಗತಿ?" ಎಂದು ವಿಷಾದದಿಂದ ನುಡಿದ.

"ಇಂಥ ಸಂದರ್ಭದಲ್ಲೂ ನಾವು ನಮ್ಮ ಕ್ರಿಯೆ ಬಿಟ್ಟಿಲ್ಲ. ಸೋಲುಗೆಲುವು ಬೇರೆ, ಪ್ರಮಾಣದ ವಿಷಯ ಬೇರೆ. ಆದ್ರೆ ಕ್ರಿಯೇನ ಜೀವಂತವಾಗ್ ಇಟ್ಟಿದ್ದೀವಲ್ಲ; ನಮ್ ನಮ್ ವ್ಯಾಪ್ತೀಲಿ ನಾವೂ ಜೀವಂತಿಕೆ ಉಳಿಸ್ಕಂಡಿದ್ದೀವಲ್ಲ; ವಿಷಾದ ಯಾಕೆ ಗೆಳೆಯ?... ನಿನ್ನ ಕೊಲೆ ಕೇಸಿನ ವಿಷಯ ಬಂದಾಗೆಲ್ಲ ಹೀಗೆ ವಿಷಾದ ಉಕ್ಕುತ್ತೆ ನಿನಗೆ..." ನವಾಬ್ ಪ್ರೀತಿಯೊತ್ತಾಯದಲ್ಲಿ ನಿಜ ನುಡಿದ.

"ನವಾಬ್, ಶಬರಿ ಇವತ್ತು ಗಂಡನ ಆಸರೆ ಬಗ್ಗೆ ಮಾತಾಡ್ದಾಗ ಚಂದ್ರನ ಸಾವು ನೆನಪಿಗೆ ಬಂತು. ನನಗೀಗ್ಲೂ ಅನ್ಸುತ್ತೆ. ಚಂದ್ರ ಕೊಲೆಯಾಗಿದಾನೆ. ಯಾರೊ ಕೊಲೆ ಮಾಡಿದಾರೆ; ಮೂಢನಂಬಿಕೇಲಿ ಮರೆಮಾಡಿದಾರೆ. ಇಲ್

ನೋಡಿದ್ರೆ ನನ್ ಬೆನ್ನ ಹಿಂದೆ ಕೊಲೆ ಕೇಸು ಹಿಂಬಾಲಿಸ್ತ ಇದೆ. ಇದೂ ಒಂಥರಾ ಸಾವು ಬೆನ್ನಟ್ಟಿ ಬಂದಂತೆ ಗೆಳೆಯ. ಸಾವು ಸಮೀಪ ಆಗ್ತಿದೆ ಅನ್ನಿಸಿದ್ರೆ ಮನುಷ್ಯ ತನಗೆ ತಾನೆ ಒಳಗಡೆ ಇಳೀತಾನೆ. ಸತ್ಯಾನಷ್ಟೇ ಹೊರ್ಗಡೆ ತಗೀತಾನೆ. ಸಾವಿಗೆ ಸತ್ಯದ ಶಕ್ತಿ ಇದೆ ಗೆಳೆಯ. ಆಗ ನಮ್ಮನ್ನ ಸತ್ಯ ನಡ್ಸುತ್ತೆ; ಸಂಬಂಧ ಕಾಡ್ಸುತ್ತೆ..."

ಮಾತಾಡುತ್ತ ನಿಟ್ಟುಸಿರುಬಿಟ್ಟು ಮೌನದಲ್ಲಿ ನಡೆದ.

"ಇವತ್ತು ಯಾಕೊ ತುಂಬಾ ಅಂತರ್ಮುಖಿಯಾಗ್ತಾ ಇದ್ದೀಯ ಸೂರ್ಯ"– ನವಾಬ್ ನೆಲೆಯನ್ನು ಗುರುತಿಸಿದ

"ಹಾಗಾದ್ರೆ. ಹೋರಾಟಗಾರರು ಅಂತರ್ಮುಖಿಗಳಲ್ಲ ಅನ್ನೊ ಆರೋಪ ಸುಳ್ಳಾಯ್ತು ಬಿಡು" ಎನ್ನುತ್ತ ಸೂರ್ಯ ನಕ್ಕುಬಿಟ್ಟ.

"ಅದು ಬರೀ ಆರೋಪ. ಅವತ್ತೊಂದು ದಿನ ಬಹಿರ್ಮುಖಿ ಥರಾ ಮಾತಾಡ್ದೆ. ಇವತ್ತು ನೋಡಿದ್ರೆ ಅಂತರ್ಮುಖಿಯಾಗಿದ್ದೀಯ. ಇದ್ರಲ್ಲಿ ಒಂದು ಮಾತ್ರ ನಿಜ ಅಂತ ಹೇಳೋಕಾಗುತ್ತ?"–ನವಾಬ ಪ್ರಶ್ನೆಯಲ್ಲೇ ಉತ್ತರ ಹೇಳಿದ.

"ಅಂತರ್ಮುಖ, ಬಹಿರ್ಮುಖ ಎರಡೂ ಒಂದಾಗೋದೇ ಒಂದು ಹೋರಾಟ ಅಲ್ವಾ?"– ಸೂರ್ಯನೂ ಅದೇ ಧಾಟಿಯಲ್ಲಿ ಉತ್ತರವುಳ್ಳ ಪ್ರಶ್ನೆ ಹಾಕಿದ.

"ಈಗ ಇಷ್ಟು ಮಾಡು. ಮನಸ್ಸನ್ನ ಭಾರ ಮಾಡ್ಕೊಂಡ್ ಹೋಗ್‌ಬೇಡ. ಹೋದವನು ಬೇಗ ಒಂದು ತೀರ್ಮಾನ ಮಾಡ್ಬೇಕು ಅಂತ ಹೇಳಿಬಾ"– ನವಾಬ್ ಮಾತು ಬದಲಾಯಿಸಿದ.

ಆ ವೇಳೆಗೆ ಮುಖ್ಯರಸ್ತೆಗೆ ಬಂದಾಗಿತ್ತು. ಗೆಳೆಯನೊಬ್ಬ ಮೋಟಾರುಬೈಕಿನಲ್ಲಿ ಬಂದು ಕಾದಿದ್ದ. ಸೂರ್ಯ ಆತನೊಂದಿಗೆ ಹೊರಟ.

ನವಾಬ ಹಿಂತಿರುಗುತ್ತಿರುವಾಗ ಸೂರ್ಯನೊಂದಿಗೆ ನಡೆದ ಮಾತುಕತೆ ಕಡೆಗೋಲಾಗಿತ್ತು.

ಕಡೆಗೋಲು ತಡೆಗೋಲಲ್ಲ.

# ೧೧

ಪೂಜಾರಪ್ಪ ಒಡೆಯರ ಮನೆ ಬಳಿಗೆ ಬಂದಾಗ ಅವರು ಜೋಯಿಸರ ಜೊತೆ ಮಾತಾಡುತ್ತ, ಅಡಿಕೆಲೆ ಜಗಿಯುತ್ತ ಕೂತಿದ್ದರು. ಪೂಜಾರಪ್ಪ "ಅಡ್ ಬಿದ್ದೆ ದಣೇರ" ಎಂದು ಹೇಳಿ ಹಜಾರದ ತುದಿಯಲ್ಲಿ ನಿಂತುಕೊಂಡ.

"ಕುಂತ್ಕಳಯ್ಯ" ಎಂದರು ಒಡೆಯರು. ಕೂತುಕೊಂಡ.

"ಏನು, ನಿಮ್ ಅಟ್ಟಿ ಭಾಳ ಬದ್ಲಾಗ್ತ ಇದ್ದಂಗೈತಲ್ಲ?"– ಒಡೆಯರು ಬಿಗುವಾಗಿಯೇ ಕೇಳಿದರು.

"ನಿಮ್ಮನ್ ಕೇಳ್ದೆ ಅದೆಂಗ್ ಬದ್ಲಾಗ್ತೈತೆ ದಣೇರ"– ಪೂಜಾರಪ್ಪ ಉತ್ತರಿಸಿದ. ಉತ್ತರದಲ್ಲೇ ಒಡೆಯರನ್ನು ಎತ್ತರಿಸಿದ.

"ಅದೆಲ್ಲ ಕಂತೆ ಪುರಾಣ ಬಿಚ್‌ಬ್ಯಾಡ ಕಣಯ್ಯ ಇವಾಗ. ನಿಮ್ ಅಟ್ಟಿ ಯೆಂಗುಸ್ರೇ ಎಂಗೆಂಗೊ ಮಾತಾಡ್ತವೆ. ಕಾನೂನು ಗೀನೂನು ಅಂಬ್ತ ಕಿಸೀತವೆ. ಉಟ್ ಬಟ್ಟೆ ಕಿತ್ತು ನಡು ಬೀದಿನಾಗ್ ನಿಲ್ಲಿಸ್ ಬಿಡ್ತೀನಿ. ಒಸಿ ಉಸಾರಾಗಿರಾ ಕೇಳು."

ಒಡೆಯನ ಮಾತು ಕೇಳಿ ಪೂಜಾರಪ್ಪ ಕಂಗಾಲಾದ. ಹಟ್ಟಿಯಲ್ಲಿ ಒಂದು ಕಡ್ಡಿ ಅಲುಗಾಡಿದರೂ ತನಗೆ ಗೊತ್ತಾಗುತ್ತಿತ್ತು. ಈಗ ಇದೇನೊ ಆದಂತೆ ಕಾಣುತ್ತಿದೆಯಲ್ಲ! ಆಶ್ಚರ್ಯ, ಆತಂಕಗಳಿಂದ ಕೇಳಿದ– "ಅಂತಾದ್ದೇನಾತು ದಣೇರ. ನೀವು ಅಪ್ಪಣೆ ಕೊಡ್ಸಿ. ನಡು ಬೀದೀಗೆ ನಾನೇ ಕರ್‌ಕಂಡ್ ಬತ್ತೀನಿ."

ಒಡೆಯ ಅಡಿಕೆಲೆ ಉಗುಳಿದ. ಗಂಟಲು ಸರಿಮಾಡಿಕೊಂಡ. ಆನಂತರ ಜೋಯಿಸರ ಕಡೆ ತಿರುಗಿ "ನೀವೇ ಒಸಿ ಸರ್‍ಯಾಗ್ ಯೇಳ್ರಿ ಸಾಮೇರ" ಎಂದ. ಜೋಯಿಸರು ಜುಟ್ಟು ಸರಿಮಾಡಿಕೊಂಡು ಮಾತಿಗೆ ಶುರು ಮಾಡಿದರು.

"ನೋಡಯ್ಯ ಪೂಜಾರಪ್ಪ, ಕೂಲಿ ಮಾಡಾಕ್ ಬಂದಾಗ ಆ ಶಬರಿ ಭೂಮಿನಾಗೆ ಪಾಲ್ ಬರ್ಬೇಕು. ಉಳುವವನೇ ಹೊಲದೊಡೆಯ ಅಂತ ಕಾನೂನು ಇದೆಯಂತೆ– ಅಂತೆಲ್ಲ ಜಗ್ಗಿಸಿ ಮಾತಾಡ್ತ ಇದ್ಲಂತೆ. ನಿನ್ ಮಗಳು ಗೌರೀನೂ ಇದ್ಲಂತಪ್ಪ. ಹೀಗೆಲ್ಲ ಕಾನೂನು ಅಂತ ಹೋದ್ರೆ ನಿಮ್ ಹಟ್ಟೀನೋರ್ ಹೊಟ್ಟೆ ಖಾಲೀನೇ ಇರ್‌ಬೇಕಾಗುತ್ತೆ. ಆದ್ರಿಂದ ಮುಂದೆ ಏನಾದ್ರೂ ಆಗೋಕ್ ಮುಂಚೇನ ಚಿವುಟ್‌ಬೇಕು. ತಿಳೀತೇನಯ್ಯ?"

ಪೂಜಾರಪ್ಪನಿಗೂ ಬೇಸರವಾಯಿತು. ತನ್ನ ಗಮನಕ್ಕೆ ಬಾರದೆ ಏನೆಲ್ಲ ನಡೆಯುತ್ತಿರಬಹುದೆಂದು ಯೋಚಿಸಿದ. ಅದೇ ಬೇಸರದಲ್ಲಿ "ಅದೆಂಗಾಯ್ತದೆ ಬುದ್ದೇರ ಭೂಮಿ ಕೇಳಾಕೆ? ಒಡೇರ್ ನೀವ್ ಕೊಡ್ಬೇಕು ನಾವು ಬದುಕ್ಬೇಕು. ಇದೆಲ್ಲ ಆ ಸೂರ್ಯಂದೇ ಕೆಲ್ಸ ಅನ್ನುಸ್ತೈತೆ. ಅಕ್ಸರ ಕಲ್ಸಯ್ಯ ಅಂದ್ರೆ ಅದ್ರ್ ಜತ್ಗೆ ಬ್ಯಾರೆ ಏನೇನೊ ಮಾಡ್ತಾ ಇದ್ದಂಗೈತೆ. ಇವತ್ತೇ ಓಡಿಸ್ಬಿಡ್ತೀನಿ ಆ ಕಳ್‌ನನ್ ಮಗನ್ನ" ಎಂದು ಅಬ್ಬರಿಸಿದ.

ಒಡೆಯನಿಗೆ ಪೂಜಾರಪ್ಪನ ನಿಷ್ಠೆ ಇಷ್ಟವಾದರೂ ತನ್ನಂತೆ ಅಬ್ಬರಿಸಿದ್ದು ಪಥ್ಯವಾಗಲಿಲ್ಲ.

"ಯಾಕ್ಲ ಅಂಗ್ ಒದ್ರುತ್ತೀಯ ಅದುರಿಗ್ ಬಂದ್ ಅಸು ಕಂಡಾನಂಗೆ. ಆ ಸೂರ್ಯಂಗೇನ್ ಮಾಡ್ಬೇಕು, ಎಂಗ್ ನಡ್ಕಾಬೇಕು ಅಂಬಾದೆಲ್ಲ ನಾವ್ ಯೇಳ್ತೀವಿ. ಎಲ್ಲಾ ನೀನೆ ಮಾಡಾದಾದ್ರೆ ನಾವ್ಯಾಕಿರ್ಬೇಕು" ಎಂದು ಬೇಸರದಿಂದ ಹೇಳಿದರು.

ಒಡೆಯುನನ್ನು ಮೆಚ್ಚಿಸಲೆಂದು ಆಡಿದ ಮಾತುಗಳು ತನಗೇ ತಿರುಗುಬಾಣವಾದದ್ದು ಕಂಡು ಪೂಜಾರಪ್ಪ ಪೆಚ್ಚಾದ. "ನೀವೆಂಗೇಳಿರಂಗೆ ದಣೇರ" ಎಂದು ಮೆಲ್ಲಗೆ ಉಸುರಿದ.

ಜೋಯಿಸರಿಗೆ ಪರಿಸ್ಥಿತಿ ಅರ್ಥವಾಯಿತು. ಸಮಾಧಾನಪಡಿಸುವ ರೀತಿಯಲ್ಲಿ ಹೇಳತೊಡಗಿದರು– "ನರಸಿಂಹರಾಯಪ್ಪ ಹೀಗಂದ್ರೂ ಅಂತ ಬೇಸರ ಮಾಡ್ಕೋ ಬೇಡ ಕಣಯ್ಯ. ಇದು ಸೂಕ್ಷ್ಮವಾದ ವಿಷ್ಯ. ಆತುರ ಬೀಳ್‌ಬಾರದು ಅಂತ ಅವ್ರು ಹಾಗಂದ್ರು. ಈಗ ನೋಡು, ನಿಮ್ ಹಟ್ಟಿ ಜನ ಅಷ್ಟೂ ಇಷ್ಟೂ ಓದೋದು ಬರ್ಯೋದು ಕಲ್ತು ಒಂಥರಾ ವಿಶ್ವಾಸ ಮೂಡಿಸ್ಕೊಂಡಿದಾರೆ. ಅವ್ರನ್ನ ಈಗ ಒರಟಾಗಿ ದಾರಿಗೆ ತರೋ ಪ್ರಯತ್ನಬೇಡ. ಇಷ್ಟಕ್ಕೂ ಆ ಸೂರ್ಯನ ಹಿಂದೆ ಏನೇನ್ ಇದ್ಯೋ ಗೊತ್ತಿಲ್ಲ. ನನಗನ್ಸುತ್ತೆ– ಅದ್ಯಾವನೋ ನವಾಬ ಅಂತ ಸಾಬರೋನ್ ಬಂದವ್ನಂತಲ್ಲ, ಯಾಕ್ ಬಂದಿರ್‌ಬಹುದು? ಮತಾಂತರ ಮಾಡೋ ಕೆಲ್ಸ ಏನಾದ್ರೂ ನಡೀತಿದ್ಯಾ ಅಂತ?"

"ಅಂಗಂದ್ರೇನ್ ಬುದ್ದೇರ?"– ಪೂಜಾರಪ್ಪನಿಗೆ ತಿಳಿಯದೆ ಕೇಳಿದ.

"ಮತಾಂತರ ಅಂದ್ರೆ ನಿಮ್ಮನ್ನೆಲ್ಲ ಅವ್ರ್ ಧರ್ಮಕ್ ಸೇರಿಸ್ಕೊಳ್ಳೋದು. ನನಗದೇ ಅನ್ಮಾನ. ಈ ಸೂರ್ಯಾನು ಯಾತಕ್ ಸೇರ್ದೋನೊ ಯಾರಿಗ್ಗೊತ್ತು? ಕ್ರೈಸ್ತರೋನಿರಬಹುದೆ ಅಂತ?" ಜೋಯಿಸರು ಹೀಗೆ ಅನುಮಾನದ ಮಾತಾಡುತ್ತಿರುವಾಗ ನರಸಿಂಹರಾಯಪ್ಪ "ಭೂಮಿ ವಿಸ್ಯ ಬಿಟ್ಟು ಇದೇನೊ

ಬ್ಯಾರೇನೆ ತೆಗೀತಿದ್ದಿರಲ್ಲ ಸಾಮೇರ. ನನ್ ವಿಸ್ಯಕ್ ಬರ್ರಿ ಮದ್ಲು" ಎಂದು ನೆನಪಿಸಿದ.

ಆಗ ಜೋಯಿಸರು "ನಿನ್ ವಿಷ್ಯ ಬೇರೆ ಅಲ್ಲ ಈ ವಿಷ್ಯ ಬೇರೆ ಅಲ್ಲ. ಭೂಮಿ ಕೊಡುಸ್ತೀವಿ, ಮನೆ ಕೊಡುಸ್ತೀವಿ ಅಂತ ಹೇಳ್ಕೊಂಡೇ ಮತಾಂತರ ಮಾಡ್ನೋಕೆ ಶುರು ಮಾಡ್ತಾರೆ ನರಸಿಂಹರಾಯಪ್ಪ. ಭೂಮಿಗೂ ಧರ್ಮಕ್ಕೂ ಸಂಬಂಧ ಇದೆ. ಈಗ ನೋಡು, ಹಿಂದಿನ ಜನ್ಮದ ಕರ್ಮಫಲದ ಮೇಲೆ ಇವತ್ತಿನ ಸ್ಥಿತಿಗತಿ ಇದೆ ಅಂತ ನಮ್ ಧರ್ಮ ಹೇಳುತ್ತೆ. ನಿನಗೆ ಇಷ್ಟೊಂದು ಭೂಮಿ ಯಾಕಿದೆ? ಹಿಂದಿನ ಜನ್ಮದ ಪುಣ್ಯಫಲ. ಈ ಹಟ್ಟಿ ಜನಕ್ಕೆ ಪುಣ್ಯ ಇಲ್ಲ; ಭೂಮಿ ಇಲ್ಲ. ಅಂದ್‌ಮೇಲೆ ಭೂಮಿಗೂ ಧರ್ಮಕ್ಕೂ ಸಂಬಂಧ ಇದೆ ಅಲ್ವಾ?" ಎಂದು ವಿವರಿಸಿದಾಗ ನರಸಿಂಹರಾಯಪ್ಪ ಬೆಳಕು ಕಂಡವನಂತೆ ಮುಖ ಅರಳಿಸಿ ಕೂತ. "ಬೋಪಸಂದಾಗೇಳಿದ್ರಿ ಸಾಮೇರ" ಎಂದು ಮೆಚ್ಚುಗೆ ಸೂಚಿಸಿದ.

ಜೋಯಿಸರು ಮತ್ತೆ ಮಾತು ಮುಂದುವರೆಸಿದರು.

"ಸೂರ್ಯ–ನವಾಬ ಇಬ್ರೂ ಸೇರಿ ಇದೇ ಕೆಲ್ಸ ಮಾಡ್ತಿರಬಹುದಾ ಅಂತ ನಂಗನ್ಮಾನ" ಎನ್ನುತ್ತಿರುವಾಗಲೇ ನರಸಿಂಹರಾಯಪ್ಪ "ನಂದೊಂದ್ ಅನ್ಮಾನ" ಎಂದ. ಜೋಯಿಸರು ಮುಖ ನೋಡಿದರು. ನರಸಿಂಹರಾಯಪ್ಪ ಅನುಮಾನವನ್ನು ಅನಾವರಣ ಮಾಡಿದ– "ಅಲ್ಲಾ ಅದ್ರಾಗ್ ಒಬ್ಬ ಸಾಬ್ರು, ಇನ್ನೊಬ್ಬ ನೀವೇಳ್ದಂಗೆ ಕಿಸ್ತರ ಮತದೋನಾದ್ರೆ ಅದೆಂಗ್ ಇಬ್ರೂ ಒಂದಾಗ್ ಈ ಕೆಲ್ಸ ಮಾಡ್ತಾರೆ?"

ಜೋಯಿಸರ ಉತ್ತರ ಸಿದ್ಧವಿತ್ತು. "ನಮ್ ಧರ್ಮ ಹಾಳ್ ಮಾಡಾಕೆ ಅವ್ರಿಬ್ರು ಒಂದಾಗ್ತಾರೆ. ಅಷ್ಟೆ."

ಒಡೆಯನಿಗೆ ತಲೆ ಬಿಸಿಯಾಯಿತು. "ಅದೇನೊ ಬ್ಯಾಗ್ ಮುಗಿಸ್ಬಿಡ್ರಿ. ಒಟ್ನಲ್ಲಿ ನನ್ ಎದ್ರಿಗೆ ಒಂದು ನರಪಿಳ್ಳೇನೂ ಕಮಕ್ ಕಿಮಕ್ ಅನ್ಬಾರ್ದು. ಅಂಗ್ ತಿಕಾ ಅದಿಮ್ಕಂಡ್ ಬಿದ್ದಿರ್ಬೇಕು. ಆಟೇಯ" ಎಂದ.

"ಅದೇ ಕೆಲ್ಸ ನಾನ್ ಮಾಡ್ತಾ ಇದ್ದೀನಿ." ಎಮದು ಜೋಯಿಸರು ಪೂಜಾರಪ್ಪನನ್ನು ಕುರಿತು ಹೇಳಿದರು: "ಆತುರ ಬೀಳ್ದೆ ಹದ್ದುಬಸ್ತಿಗ್ ತರಬೇಕು. ಆ ನವಾಬನ ಮೇಲೆ ಸರ್‍ರ್ಯಾಗ್ ಕಣ್ಣಿಟ್ಟಿರು. ಅವ್ನ್ ಇಲ್ಲಿ ಏನೋ ಕರಾಮತ್ ಮಾಡೋಕೆ ಬಂದಿದಾನೆ. ಸಮಯ ಬಂದ್ರೆ ನವಾಬ–ಸೂರ್ಯ ಇಬ್ರಲ್ಲೂ ಒಡಕುಂಟ್ ಮಾಡ್ಬೇಕು. ಹಾದಿ ತಪ್‌ಬೇಡಿ ಅಂತ ನಿಮ್ ಜನಕ್ಕೆ ಸರ್‍ರ್ಯಾಗಿ ಬುದ್ಧಿ ಹೇಳ್ಬೇಕು. ಏನೇನ್ ನಡ್ಯುತ್ತೆ ನಮ್ಗೆಲ್ಲ ಬಂದ್ ಹೇಳ್ಬೇಕು" ಜೋಯಿಸರ ಮಾತು

ಮುಗಿಯುತ್ತಿದ್ದಂತೆ "ತಿಳೀತೇನ್ಲ" ಎಂದ ನರಸಿಂಹರಾಯಪ್ಪ. "ಇನ್‌ಮ್ಯಾಲ್ ನಂಗ್ ಬಿಟ್‌ಬಿಡಿ ದಣೇರ. ಎಲ್ಲಾ ಅದ್‌ಬಸ್ತೀಗ್ ತತ್ತೀನಿ." ಎಂದು ಪೂಜಾರಪ್ಪ ಉತ್ಸಾಹದಲ್ಲಿ ನುಡಿಯುವ ವೇಳೆಗೆ ಹೊರಗೆ ಬಂದ ಸಾವಿತ್ರಮ್ಮ "ಅದ್‌ಬಸ್ತಿಗ್ ತತ್ತೀನಿ ಅಂಬ್ತ ಅಡ್ಡಾದಿಡ್ಡಿ ರಗಳೆ ಮಾಡ್‌ಬ್ಯಾಡ. ಒಂದೋಗಿನ್ನೊಂದಾಗಾದ್ ಬ್ಯಾಡ" ಎಂದು ಎಚ್ಚರಿಕೆಯ ಮಾತಾಡಿದಳು. ಜೊತೆಗೆ "ನನ್ನೆಸ್ರಿಗೇ ಭೂಮಿ ಬರ್ದಿಲ್ಲ ಇವ್ರು. ಇನ್ನು ಅಟ್ಟಿ ಯೆಂಗುಸ್ರಿಗ್ ಬರ್ಕೊಡಾದುಂಟಾ? ಅವ್ರಿಗ್ ಸರ್ಯಾಗ್ ತಿಳುವಳ್ಕೆ ಯೇಳು. ಆಗಲ್ಲ ವೋಗಲ್ಲ ಅಂತಾದ್ಕಾಸೆ ಪಟ್ಕಂಡು, ಆಮ್ಯಾಕ್ ವೊಟ್ಟೆ ಮ್ಯಾಲ್ ತಣ್ಣೀರ್ ಬಟ್ಟೆ ಆಕ್ಕಳಂಗಾಯ್ತದೆ. ಇವ್ರೇನ್ ಸುಮ್ಕೆ ಬಿಡಾಕಿಲ್ಲ ಆಮ್ಯಾಕೆ" ಎಂದು ವಿಸ್ತರಿಸಿದಳು.

"ಯೇ ಅದೆಲ್ಲ ನಂಗ್ ಬಿಟ್‌ಬಿಡ್ರವ್ವ, ಅಕ್ಷರ ಬಂತು ಅಂದ್ರೆ ಆಸ್ತೀನೂ ಬಂದ್ ಬಿಡ್ತೈತಾ? ಒದ್ದ್ ಬುದ್ಧಿ ಯೇಳಾಕೂ ಸೈ ನಾನು" ಎಂದು ಮೇಲೆದ್ದ.

ಸಂಪ್ರೀತನಾಗಿದ್ದ ನರಸಿಂಹರಾಯಪ್ಪ "ನಾನು ಗಡಂಗ್ನೋರ್ಗೇಳಿವ್ನಿ. ನೀನ್ ಎಷ್ಟಾನ ಕುಡಿ. ದುಡ್ ಕೊಡಂಗಿಲ್ಲ" ಎಂದು ವರ ನೀಡಿದ.

ಆಗ ಸಾವಿತ್ರಮ್ಮ "ಕುಡುದ್ರೇನ್ ವೊಟ್ಟೆ ತುಂಬ್ತೈತಾ. ಒಂದತ್ ಸೇರು ರಾಗಿ ಕೊಡ್ತೀನಿ ತಗಂಡೋಗು" ಎಂದು ಒಳಗಿಂದ ಖಾಲಿ ಗೋಣಿಚೀಲ ತಂದುಕೊಟ್ಟು ಆನಂತರ ಮೊರದಲ್ಲಿ ಎರಡುಸಾರಿ ರಾಗಿ ತಂದು ಹಾಕಿದಳು.

ಪೂಜಾರಪ್ಪ "ನಿಮ್ಮೊಟ್ಟೆ ತಣ್ಣಗಿರ್ಲವ್ವ" ಎಂದು ಹೇಳಿ ರಾಗಿ ಸಮೇತ ಹೊರಟ.

ಸರಿಯಾದ ಸಮಯವನ್ನು ನೋಡಿ ನವಾಬ ಮತ್ತು ಸೂರ್ಯನಿಗೆ ಬುದ್ಧಿ ಹೇಳಬೇಕೆಂದು ಲೆಕ್ಕ ಹಾಕಿಕೊಂಡ ಪೂಜಾರಪ್ಪ ಮಾರನೇ ದಿನ ಬೆಳಗ್ಗೆಯೇ ಮಗಳು ಗೌರಿ ಬಳಿ ನವಾಬನ ವಿಷಯ ಎತ್ತಿದ.

"ಆ ಸಾಬ್ರೋನು ಎಂಗೆ?"

"ಅಂಗಂದ್ರೆ?"

"ಅಲ್ಲ, ಅವ್ನು ನಿಮ್ಗೆಲ್ಲ ಸಾಬರಾಗ್ರಿ ಅಂಬ್ತ ಯೇಳಾಕಿಲ್ವ?"

"ಯಾಕೇಳ್ತಾರೆ? ನಮ್ಗೆ ಓದು ಬರಾ ಕಲುಸ್ತಾರೆ, ಆಟೇ"

"ಆಮ್ಯಾಕ್ ನೀವೆಲ್ಲ ಸಾಬುರು ಜಾತಿಗ್ ಸೇರ್ಬಿಟ್ಟೀರಾ ಅವ್ನ್ ಮಾತ್ ಕಟ್ಕಂಡು."

"ಆ ಇಸ್ಯಾನೇ ಯೇಳಿಲ್ಲ ಅಂದ್ನಲ್ಲ. ತೀರ್ಗಾ ಯಾಕಂಗಂಬ್ತೀಯ? ಅವ್ರು ಬೋಲ್ ಒಳ್ಳೇರು. ನಿಂಗೇನ್ ಗೊತ್ತು"

"ಬೋಲ್ ಒಳ್ಳೇರು ಅಂಬ್ತಾ ತೋರಿಸ್ಕಂಡೇ ಅಡ್ನಾಡಿ ಕೆಲ್ಸ ಮಾಡಾದು. ಉಸಾರು."

"ಯೇ ಅಂಗೆಲ್ಲ ಅನ್‌ಬ್ಯಾಡ ಕಣಪ್ಪೋ. ಅವ್ರು ನಮ್ಗೆಲ್ಲ ಏಟೊಂದ್ ಒಳ್ಳೆ ಇಸ್ಯ ಯೇಳ್ತಾರೆ ಗೊತ್ತ?"

"ಆಯ್ತಾಯ್ತು. ನಿನ್ ಬುದ್ದಿ ನಿನ್ ಕೈಯ್ಯಾಗಿರ್ಲಿ"– ಪೂಜಾರಪ್ಪ ಎಚ್ಚರಿಸಿದ.

ಗೌರಿ ಯೋಚನೆಗೀಡಾದಳು. ಅಪ್ಪನಿಗೆ ಅನುಮಾನ ಬಂದಿದೆಯೆ? ತನ್ನ ಮತ್ತು ನವಾಬನ ಬಗ್ಗೆ ಕೇಳುವ ಬದಲು ಹೀಗೆ ಸುತ್ತಿ ಬಳಸಿ ಕೇಳುತ್ತಿದ್ದಾನೆಯೆ? ಒಳಗೇ ಇಟ್ಟುಕೊಂಡು ನರಳುವುದು ಬೇಡವೆಂದು ಶಬರಿಯ ಹತ್ತಿರ ನಡೆದದ್ದೆಲ್ಲ ಬಿಚ್ಚಿಟ್ಟಳು. ಶಬರಿಯೂ ಯೋಚಿಸಿದಳು. ನವಾಬಣ್ಣನ ಬಗ್ಗೆ ಮಾತ್ರ ಯಾಕೆ ಕೇಳಿದ್ದಾನೆ ಎಂಬ ಪ್ರಶ್ನೆಯೂ ಆಕೆಗೆ ಎದುರಾಯಿತು. ಮುಂದೆ ಏನಾಗುತ್ತೊ ನೋಡೋಣ ಎಂಬ ತೀರ್ಮಾನಕ್ಕೆ ಬಂದರು. ಕಾದುನೋಡಿ ಸರಿಯಾಗಿ ನಡೆದುಕೊಳ್ಳುವ ನಿರ್ಧಾರ ಅವರದಾಗಿತ್ತು.

ಅಂದು ರಾತ್ರಿ ಶಾಲೆಯಲ್ಲಿ ನವಾಬನೊಬ್ಬನೇ ಪಾಠ ಮಾಡುತ್ತಿದ್ದ. ಸೂರ್ಯ ಬಂದಿರಲಿಲ್ಲ. ಎಲ್ಲರಿಗೂ ಪಾಠ ಹೇಳಿ, ಕೆಲವು ಪದಗಳನ್ನು ಬರೆಯಲು ಹೇಳಿದ. ಒಬ್ಬೊಬ್ಬರ ಬಳಿಯೂ ಹೋಗಿ ನೋಡಿ ತಿದ್ದಿ ಬರೆಸತೊಡಗಿದ. ಆನಂತರ "ಇವತ್ತು ಒಂದ್ ವಿಷ್ಯ ಹೇಳ್ತೀನಿ" ಎಂದು ಎಲ್ಲರೆದುರು ನಿಂತುಕೊಂಡು ಮಾತು ಶುರುಮಾಡಿದ. "ಈಗ ನಮ್ಮ ಪಾಠ ಒಂದು ಹಂತಕ್ ಬರ್‍ತಾ ಇದೆ. ನಿಮಿಗೆ ಕೆಲವು ಪದಗಳನ್ನ ಓದೋದು ಬರೆಯೋದು ಅಭ್ಯಾಸ ಆಗ್ತಾ ಇದೆ. ಹುಚ್ಚೀರಂಗೆ ಅಂತ ಪ್ರತ್ಯೇಕ ಗಮನಕೊಟ್ಟು ಆತನಿಗೆ ಬರವಣಿಗೆ ಕಲ್ಸಿದ್ದೀವಿ ಅಂದ್ ಮೇಲೆ ನಿಮ್ಗೆ ಎಲ್ಲ ಗೊತ್ತಾಗುತ್ತೆ. ಇನ್ ಮೇಲೆ ಪಾಠ ಮುಗುದ್ಮೇಲೆ ದಿನಾ ಯಾವ್‌ದಾದ್ರೂ ಒಂದು ವಿಷ್ಯದ ಮೇಲೆ ಮಾತಾಡ್ತೀನಿ. ಸೂರ್ಯಾನೂ ಮಾತಾಡ್ತಾನೆ. ನೀವು ಅದ್ರ ಮೇಲೆ ಏನೇನ್ ಅನ್ಸುತ್ತೊ ಅದೆಲ್ಲ ಕೇಳ್‌ಬಹುದು. ಇವತ್ತು ಮಾನವ ಧರ್ಮ ಅನ್ನೊ ವಿಷಯದ ಮೇಲೆ ಮಾತಾಡ್ತೀನಿ" ಎಂದು ಪೀಠಿಕೆ ಹಾಕಿದ. ಆನಂತರ ಮನುಷ್ಯ ಜಾತಿ ಒಂದೇ ಎಂದು ಸಾರಿದ ಸಾಧಕರ ವಿಷಯಗಳನ್ನು ಅವರಿಗೆ ತಿಳಿಯುವಂತೆ ಹೇಳತೊಡಗಿದ. ಯಾವ ಯಾವ ಧರ್ಮದಲ್ಲಿ ಏನೇನು ಒಳ್ಳೆಯ ಮಾತುಗಳಿವೆಯೆಂದು ವಿವರಿಸತೊಡಗಿದ.

ಚನ್ನಾಗಿ ಸಾರಾಯಿ ಸೇವಿಸಿದ್ದ ಪೂಜಾರಪ್ಪ ರಾತ್ರಿ ಶಾಲೆಯ ಬಳಿಬಂದು ನಿಂತಿದ್ದ. ಅದರ ಪರಿವೆಯಿಲ್ಲದೆ ನವಾಬನ ಮಾತು ಸಾಗಿತ್ತು. ಜೋಯಿಸರು ಹೇಳಿದ್ದಕ್ಕೂ ನವಾಬನು ಧರ್ಮದ ಬಗ್ಗೆ ಮಾತನಾಡುತ್ತಿರುವುದಕ್ಕೂ ತಾಳೆ ಹಾಕಿದ ಪೂಜಾರಪ್ಪನಿಗೆ ಪೈಗಂಬರ್ ಬಗ್ಗೆ ನವಾಬನು ಏನೋ ಹೇಳುತ್ತಿರುವುದು ಕೇಳಿಸಿತು. ವಾಸ್ತವವಾಗಿ ಆತ ಒಳ್ಳೆಯ ವಿಚಾರವನ್ನೇ ಹೇಳುತ್ತಿದ್ದ. ಬಡವರೆಲ್ಲ

ಒಂದೇ ಜಾತಿ, ಒಂದೇ ಧರ್ಮ ಎಂಬ ತರ್ಕಕ್ಕೆ ತೆಗೆದುಕೊಂಡು ಹೋಗುವುದು ಆತನ ಉದ್ದೇಶವಾಗಿತ್ತು. ಅದಕ್ಕಾಗಿ ಪೀಠಿಕೆಯನ್ನು ವಿಸ್ತರಿಸುತ್ತಿದ್ದ. ಆದರೆ ಜೋಯಿಸರು ಹೇಳಿದ್ದು ನಿಜವಿರಬೇಕೆಂದು ಅಮಲೇರಿದ ಪೂಜಾರಪ್ಪ ಭಾವಿಸಿದ. ಹಿಂದೆಮುಂದೆ ನೋಡದೆ "ನಿಲ್ಸಲೇ ನವಾಬ" ಎಂದು ಒಳಗೆ ನುಗ್ಗಿದ.

ಎಲ್ಲರಿಗೂ ದಿಗ್ಭ್ರಾಂತಿ!

ಅರ್ಥವಾದದ್ದೆಷ್ಟೊ ಆಗದ್ದೆಷ್ಟೊ ಏಕಾಗ್ರತೆಯಿಂದ ಒಂದಾಗಿ ಕೇಳುತ್ತ ಕೂತಿದ್ದವರು ಬೆಚ್ಚಿಬಿದ್ದರು; ನಿಧಾನವಾಗಿ ಎದ್ದರು.

ನವಾಬ ನಿರೀಕ್ಷಿಸದ ಘಟನೆಗೆ ಸಿದ್ಧನಾಗಿ ನಿಂತ.

"ಯಾಕೆ? ಯಾಕ್ ಪೂಜಾರಪ್ಪ? ಏನಾಗಿದೆ ನಿಂಗೆ?"– ಕೇಳಿದ.

ಪೂಜಾರಪ್ಪನಿಗೆ ಅಷ್ಟು ಸಾಕಾಗಿತ್ತು. ಅಬ್ಬರಿಸತೊಡಗಿದ.

"ನಂಗೇ ಏನಾಗೈತೆ ಅಂಬ್ತ ಕೇಳ್ತೀಯೇನ್ಲಾ ಸಾಬಣ್ಣ? ಒಂದ್ ಕೊಟ್ರೆ ಅಂದ್ರೆ ನಿಂತ್ಕಡೇನೇ ಉಚ್ಚೆ ವೊಯ್ಕಬೇಕು. ಗೊತ್ತೇನ್ಲ?'

ಪೂಜಾರಪ್ಪನ ಮಾತು ಯಾರಿಗೂ ಸರಿಬರಲಿಲ್ಲ. ಆದರೆ ಯಾರೂ ಪ್ರತಿಕ್ರಿಯಿಸಲಿಲ್ಲ. ನವಾಬನೇ ಉತ್ತರಿಸಿದ–

"ಹಾಗೆಲ್ಲ ಮಾತಾಡ್‌ಬೇಡಾ ಪೂಜಾರಪ್ಪ. ನಿನ್ ನೋಡಿದ್ರೆ ಕುಡಿದಿರೋ ಹಾಗಿದೆ. ಏನಿದ್ರೂ ಬೆಳಿಗ್ಗೆ ಮಾತಾಡೋಣ."

ಪೂಜಾರಪ್ಪನಿಗೆ ಮತ್ತಷ್ಟು ರೇಗಿತು.

"ನನ್ನೇ ಕುಡುಕ ಅಂಬ್ತಿಯೇನ್ಲ? ನನ್ನೇನಾರ ಕುಡುಕ ಅಂಬ್ತ ಇನ್ನೊಂದ್ಸಾರಿ ಅಂದ್ರೆ ನಿನ್ನ ಕಳ್ಳುಪಚ್ಚೆ ಕಿತ್ತು ತ್ವಾರಣ ಕಟ್‌ಬಿಡ್ತೀನಿ. ಉಸಾರೋ ಸಾಬಣ್ಣ ಉಸಾರು" ಎಂದು ಬಯ್ಗಳು ಮುಂದುವರಿಸಿದ.

ಶಬರಿಗೆ ತಡೆಯಲಾಗಲಿಲ್ಲ. ರಭಸವಾಗಿ ಹತ್ತಿರ ಬಂದಳು.

"ಅಂಗೆಲ್ಲ ಮಾತಾಡ್‌ಬ್ಯಾಡ ಪೂಜಾರಪ್ಪ. ನವಾಬಣ್ಣ ನಮ್ಗೆಲ್ಲ ಓದು ಬರಾ ಕಲ್ಸವ್ರೆ" ಎಂದಳು.

"ಓದು ಬರಾ ಕಲ್ಸವ್ನೊ. ಅವ್ನ್ ಜಾತೀಗ್ ಸೇರ್ಕಂಡ್ ಬಿಡ್ರಿ ಅಂಬ್ತ ಯೆಳ್ತಾ ಅವ್ನೊ? ಇವಾಗ್‌ತಾನೆ ಏನೇನೋ ಒದ್ರುತಾ ಇದ್ನಲ್ಲ. ಇಂಗೇ ಬಿಟ್ರೆ ನಿಮ್ಗೆಲ್ಲ ಕರೀಬಟ್ಟೆ ಆಕ್ ಬಿಡ್ತಾನೆ ಈ ಊಸರ್‌ವಳ್ಳಿ"– ಪೂಜಾರಪ್ಪ ಆರೋಪಿಸಿದ.

"ಬಾಯ್ಮುಚ್ಚು ಪೂಜಾರಪ್ಪ"– ಶಬರಿ ಸಿಡಿದಳು. "ದೊಡ್ಡೋನು ಅಂಬ್ತ ಸುಮ್ಕಿದ್ರೆ ಬಾಯೋದಂಗೆಲ್ಲ ಮಾತಾಡ್ತೀಯಲ್ಲ. ಏನಂದ್ಕಂಡೆ ನಮ್ ನವಾಬಣ್ಣನ್ನ? ಎಲ್ಲಾರೂ ಒಂದೇ ಅಂಬ್ತ ಈ ಅಣ್ಣ ಯೇಳ್ತಾ ಇದ್ದ. ಅದು ತಪ್ಪಾ?"

ಆಗ ನವಾಬ ಸ್ಪಷ್ಟಪಡಿಸಿದ. "ನೋಡು ಪೂಜಾರಪ್ಪ, ನಂಗೆ ಧರ್ಮ, ಜಾತಿ ಅಂತ ಯಾವ್ದು ಇಲ್ಲ. ಆದ್ರೆ ಕೆಲವರು ಜಾತಿ–ಧರ್ಮ ಅಂತ ಹೇಳ್ಕೊಂಡು ಹಾದಿ ತಪ್ಪುಸ್ತಾ ಇದಾರೆ; ಅದ್ಕಾಗಿ ಕೆಲವು ವಿಷಯ ಹೇಳ್ತಾ ಇದ್ದೆ. ಅಷ್ಟೆ."

"ಯೇ ಅದೆಲ್ಲ ನಂತಾವ್ ಕಂತೆ ಪುರಾಣ ಬಿಚ್‌ಬ್ಯಾಡ. ವೊತ್ತುಟ್ಟೊದ್ರೊಳ್ಗೆ ಗೊತ್ತುಗುರಿ ಒಂದೂ ಇಲ್ದಂಗ್ ಮಾಡ್‌ಬಿಡ್ತೀನಿ ನಿಂಗೆ. ಇನ್‌ಮ್ಯಾಗ್ ಅಟ್ಟಿ ಜನ ಏನಿದ್ರೂ ನಾನ್ ಆಕಿದ್ದ ಗೆರೆ ದಾಟ್ ಬಾರ್ದು"– ಪೂಜಾರಪ್ಪ ಅದೇ ಆವೇಶದಲ್ಲಿ ಹೇಳಿದ.

"ಅದೆಲ್ಲ ಆಗಾಕಿಲ್ಲ"–ಶಬರಿ ನೇರವಾಗಿ ನುಡಿದಾಗ ಪೂಜಾರಪ್ಪ ಬೆಚ್ಚಿದ.

"ಆಗಾಕಿಲ್ಲ ಅಂದ್ರೆ ನಾನ್ ಕೇಳಾಕಿಲ್ಲ. ನಾವೆಲ್ಲ ಒಡೇರ್ ಯೇಳ್ದಂಗೆ ಕೇಳ್ಕಂಡ್ ಬಿದ್ದಿರ್ಬೇಕು. ಪಾಟಗೀಟ ಬೇಕು ಅಂದ್ರೆ ಜೋಯಿಸ್ರನ್ ಕರ್ಕಂಡ್ ಬರ್‍ತೀನಿ" ಎಂದು ತನ್ನ ಮಾತಿನ ಬಿರುಸನ್ನು ಮುಂದುವರಿಸಿದ.

"ಜೋಯಿಸ್ರು ಈಟ್‌ದಿನ ಯಾಕ್ ಪಾಠ ಮಾಡಾಕ್ ಬರ್ಲಿಲ್ಲ? ಇವಾಗ್ ಇವ್ರು ಬಂದವ್ರೆ ಅಂಬ್ತ ವೊಟ್ಟೆ ವುರೀಗ್ ಬತ್ತಾರೇನು? ನೋಡು ಪೂಜಾರಪ್ಪ, ನಾವು ನಮ್ ನವಾಬಣ್ಣನ್ನ ಬಿಟ್‌ಕೊಡಾಕಿಲ್ಲ. ಅಣ್ಣನ್ ಥರಾ ಅ ಆ ಇ ಈ ಕಲ್ಸಿರಾ ನವಾಬಣ್ಣನ ನಡ್‌ನೀರ್‍ನಾಗ್ ಬಿಡಾಕ್ ನಾವೇನು ಮೂರೂ ಬಿಟ್ಟೋರಲ್ಲ" ಎಂದು ದೃಢವಾಗಿ ಹೇಳಿದ ಶಬರಿ ಎಲ್ಲರನ್ನು ಉದ್ದೇಶಿಸಿ "ಏನಂಬ್ತೀರ ಎಲ್ಲಾ" ಎಂದು ಕೇಳಿದಾಗ ಇದೇ ಸಂದರ್ಭಕ್ಕೆ ಕಾಯುತ್ತಿದ್ದವರಂತೆ "ಬಿಟ್‌ಕೊಡಾಕಿಲ್ಲ" ಎಂದರು. ಸಣ್ಣೀರ ಮುಂದೆ ಬಂದು "ಯಾಕ್ ಪೂಜಾರಪ್ಪ ಇಂಗೆಲ್ಲ ಮಾಡ್ತೀಯ? ನವಾಬಣ್ಣ ಎಂದೂ ಮೇಲುಕೀಳು ಮಾಡಿಲ್ಲ. ಜಾತಿ ವಿಸ್ಯ ಎತ್ತಿಲ್ಲ. ನಮ್ಗೆಲ್ಲ ಎಲ್ಡಕ್ಸರ ಕಲ್ಸಿ ಎದೆಗಾರಿಗೆ ಬರಂಗ್ ಮಾಡವ್ನೆ. ನೀನ್ ಸುಮ್ಕೆ ಇಲ್ಲಿಂದ ವೊಲ್ಟೋಗು. ಅವ್ರಿವ್ರ್ ಮಾತ್ ಕಟ್ಕಂಡು ಕಾಲ್ ಕೆರೀಬ್ಯಾಡ" ಎಂದು ಹೇಳಿದಾಗ ಉಳಿದವರಿಗೂ ಬಾಯಿ ಬಂದಂತಾಯಿತು. ಎಲ್ಲರೂ ಒಂದೊಂದು ಮಾತು ಬುದ್ಧಿ ಹೇಳಿದರು. ಹುಚ್ಚೀರನೂ ತನ್ನದೇ ರೀತಿಯಲ್ಲಿ ಪೂಜಾರಪ್ಪನಿಗೆ ಪ್ರತಿಕ್ರಿಯಿಸಿದ. ಗದ್ದಲ ಜಾಸ್ತಿಯಾಯಿತು. ಆಗ ನವಾಬನೇ ಪೂಜಾರಪ್ಪನನ್ನು ಕೈಹಿಡಿದು ಹೊರಗೆ ಕರೆತಂದು "ಬಾ ಹಟ್ಟೀಗ್ ಹೋಗೋಣ. ನಾಳೆ ನಿಧಾನವಾಗಿ ಎಲ್ಲಾ ಮಾತಾಡೋಣ" ಎಂದ. ಪೂಜಾರಪ್ಪ "ನಂಗೂ ದಾರಿಗೊತ್ತೈತೆ" ಎಂದು ಕೈಕೊಡವಿಕೊಂಡು ತೂರಾಡುತ್ತ ಹೋದ.

ಮಾರನೇ ದಿನ ಪೂಜಾರಪ್ಪನಿಂದ ಘಟನೆಯ ವಿವರಗಳನ್ನು ತಿಳಿದ ನರಸಿಂಹರಾಯಪ್ಪ ಕಿಡಿಕಿಡಿಯಾದ. "ಒಬ್ಬೊಬ್ರ ಗ್ವಾಮಾಳೆ ಕಿತ್ತು ಮರಕ್ ನೇಣ್

ಆಕ್‌ಬಿಡ್ತೀನಿ" ಎಂದೆಲ್ಲ ಕೂಗಾಡಿದ. ಜೋಯಿಸರು ಸಮಾಧಾನ ಮಾಡಿದರು. "ಸಂದರ್ಭಾನ ಅರ್ಥ ಮಾಡ್ಕೋಬೇಕು. ಹಟ್ಟಿ ಜನ್ರಲ್ಲಿ ಅರಿವು ಬರ್‍ತಾ ಇರ್‍ವಾಗ ನಾವ್ ಹುಷಾರಾಗ್ ಹೆಜ್ಜೆ ಹಾಕ್ಬೇಕು" ಎಂದು ಕಾರ್ಯಸಾಧ್ಯ ಸಂಗತಿಗಳತ್ತ ಗಮನ ಸೆಳೆದರು. ಒಡೆಯನಿಗೂ ಸರಿಯೆನ್ನಿಸಿತು.

ಪೂಜಾರಪ್ಪ ಘಾಸಿಗೊಂಡಿದ್ದ. ಮೊದಲು ಸಿಡಿದವಳು ಶಬರಿ ಎಂಬ ಚಿತ್ರ ಅಚ್ಚೊತ್ತಿತ್ತು. ತಿಮ್ಮರಾಯಿಯ ಬಳಿಗೆ ಬಂದ. "ನಿನಿಗ್ ಸೇಂದಿ ಸಾರಾಯ್ ಕುಡ್ಸಿದ್ದು ಸುಮ್ ಸುಮ್ಕೇನ? ನಿನ್ ಮಗಳಿಗೆ ಎಲ್ಡ್ ಕೊಟ್ಟು ಬುದ್ದಿ ಯೇಳು" ಎಂದು ಒತ್ತಾಯಿಸಿದ. ಹೇಳುವುದನ್ನೆಲ್ಲ ಸಾವಧಾನದಿಂದ ಕೇಳಿದ ತಿಮ್ಮರಾಯಿ ಒಂದೇ ಮಾತು ಹೇಳಿದ–

"ನಮ್ ಕಾಲ ವೋಗ್ತಾ ಐತೆ ಪೂಜಾರಪ್ಪ. ನಿನ್ ಉಸಾರ್‍ನಾಗ್ ನೀನ್ ಇರಾದ್ ಕಲ್ತ್‌ಕಳಪ್ಪ. ನಿಂಗೂ ಒಳ್ಳೇದು ಅಟ್ಟೀಗೂ ಒಳ್ಳೇದು."

ಪೂಜಾರಪ್ಪ ದಂಗು ಬಡಿದಂತೆ ಕೂತ.

* * *

ವಿಷಯ ಗೊತ್ತಾದ ಒಡೆಯ ಹೆಡೆಯೆತ್ತಿದ.

ಹೊಲದ ಬಳಿ ಬಂದು ಹರಿದಾಡಿದ;

ಉರಿಯಾಗಿ ಹೊರಟ. ತೋಪಿನ ಬಳಿ ಬಂದಾಗ ಅಲ್ಲಿ ಶಬರಿ ಕಂಡಳು.

ಮರವನ್ನು ತಬ್ಬಿಕೊಂಡವಳು ಕಣ್ಣಿಗೆ ಒತ್ತಿಕೊಂಡು ಬುಡದ ಬಳಿ ಕೂತಳು.

ಒಡೆಯ ನೋಡಿದ; ಬುಸ್ಸೆಂದು ಹತ್ತಿರ ಹೋದ.

"ಏನೇ ಬೋಸುಡಿ; ಬೋಲ್ ಜೋರ್ ಮಾಡ್ತೀಯಂತಲ್ಲ?"

ಶಬರಿ ನಿಂತುಕೊಂಡಳು. ನೋಡಿದಳು.

"ಏನೇ ಅಂಗ್ ನೋಡ್ತೀಯ? ಏನ್ ಎಲ್ಲಾ ಆ ನವಾಬನ್ನೇ ವಯಿಸ್ಕಂಡು ಪೂಜಾರಪ್ಪಂಗ್ ಮರ್‍ವಾದೆ ಕೊಡ್ಲಿಲ್ವಂತೆ. ಅವತ್ತೇ ನಿನ್ ಕೂಡಿಕೆ ಮಾಡ್ಕಂಡಿದ್ರೆ ಅದ್‌ಬಸ್ತ್‌ನಾಗಿರ್‍ತಿದ್ದೆ."

ಶಬರಿಗೆ ಸುಮ್ಮನಿರಲಾಗಲಿಲ್ಲ.

"ಕಂಡ್ ಕಂಡಾರೆಲ್ಲ ಕೂಡಿಕೆ ಮಾಡ್ಕಮಾಕೆ ನಾನೇನ್ ಬಿಟ್ಟಿ ಸಿಕ್ಕಿಲ್ಲ."

"ಈಗ್ಲೂ ಯೇಳ್ತಿವ್ನಿ. ನನ್ ಮಾತ್ ಕೇಳು. ಕೂಡಿಕೆ ಮಾಡ್ಕಂಡ್ರೆ ಹಟ್ಟಿನಾಗೇ ಇಟ್ಟಿಗೆ ಮನೆ ಕಟ್ಟಿಸ್ಕೊಡ್ತೀನಿ"– ಒಡೆಯ ಒತ್ತಾಯಿಸಿದ.

"ಇಟ್ಟಿಗೆ ಮನೆನಾಗೆ ನನ್ನ ಮೈಯ್ಯಿ ಮಾನ ಸುಟ್ಕಮಾಕೆ ನಾನೇನ್ ಅರಕೆ ಕಟ್ಕಂಡಿಲ್ಲ"– ಶಬರಿ ಸಿಡಿದಳು.

"ನಾನ್ ಆಕಿದ್ ಕಟ್ಟು ಕಟ್ಟಳೆ ಮೀರಿದ್ರೆ ಮಾನಾನು ಸುಟ್ಕಬೇಕು; ಮೈಯ್ಯೀನೂ ಸುಟ್ಕಬೇಕು. ಅಂಗಾಗ್ತೈತೆ."

"ಕನಸ್‌ಕಾಣ್ ಬ್ಯಾಡ್ರಿ ಒಡೇರ. ಕನಸ್ ಕಾಣ್ ಬ್ಯಾಡ್ರಿ. ಅದೆಲ್ಲ ಅವತ್ತಿನ್ ಕಾಲಕ್ಕೇ ವೋತು ಅಂಬ್ತ ತಿಳ್ಕಳಿ. ತಿರ್ಗಾ ಇನ್ನೊಂದ್ ಕಿತ ಕೂಡಿಕೆ ಗೀಡಿಕೆ ಅಂಬ್ತ ಕೇಳ್‌ಬ್ಯಾಡ್ರಿ" ಎಂದವಳೆ ಬಿರುಗಾಳಿಯಂತೆ ಹೋದಳು.

ಒಡೆಯನ ಒಡಲಲ್ಲಿ ಕೆಂಡದ ಮಳೆ.

ಬುಸುಗುಡುವ ಹೆಡೆಯಲ್ಲಿ ನಡಗುವ ನಾಲಗೆ.

ಏನು ಮಾತಾಡಿದನೊ ಆತನಿಗೇ ಗೊತ್ತಾಗಲಿಲ್ಲ.

ಆಡಿದ್ದೇ ಆಟವೆಂಬಂತೆ ಇದ್ದಕಾಲ ಬದಲಾಗುತ್ತಿದೆಯೆಂದು ಗೊತ್ತಾಯಿತು.

* * *

ನವಾಬ ಬೆಟ್ಟದ ಬಳಿಗೆ ಬಂದು ಒಬ್ಬನೇ ಕೂತಿದ್ದ. ಪೂಜಾರಪ್ಪ ಬಂದು ಗಲಾಟೆ ಮಾಡಿದಾಗ ಶಬರಿಯ ನೇತೃತ್ವದಲ್ಲಿ ಅಲ್ಲಿದ್ದವರೆಲ್ಲ ಒಗ್ಗಟ್ಟಾಗಿ ತನ್ನ ಪರ ನಿಂತದ್ದು ನವಾಬನನ್ನು ಭಾವುಕನನ್ನಾಗಿಸಿತ್ತು. ಎಲ್ಲಾ ಭಾವನೆಗಳನ್ನು ಸೂರ್ಯನ ಜೊತೆ ಹಂಚಿಕೊಳ್ಳುವ ಕಾತರದಿಂದ ಕಾಯುತ್ತಿದ್ದ. ಆದರೆ ಆತ ಬಂದಿರಲಿಲ್ಲ. ಅಲ್ಲಿ ಏನಾಯಿತೊ ಏನೊ ಎಂಬ ಆತಂಕ ಬೇರೆ. ಜಾಮೀನು ಸಿಗುವವರೆಗೆ ಸೂರ್ಯ ಆಕಡೆ ಹೋಗದಿರುವುದೇ ಉತ್ತಮ. ಆದರೇನು ಮಾಡುವುದು ಕೆಲವೊಮ್ಮೆ ಹೋಗಲೇಬೇಕಾಗುತ್ತದೆ. ಜೊತೆಗೆ ಸಂಘಟನೆಯ ಸ್ನೇಹಿತರನ್ನು ಭೇಟಿ ಮಾಡಬೇಕಲ್ಲ? ಒಟ್ಟಿನಲ್ಲಿ ಆತ ಹಿಂತಿರುಗಿದಾಗ ಭಾವನೆಗಳನ್ನು ಹಂಚಿಕೊಳ್ಳಬೇಕು; ಆಗಲೇ ಮನಸ್ಸು ಹಗುರವಾಗುವುದು– ಹೀಗೆಲ್ಲ ಒಬ್ಬನೇ ಯೋಚಿಸುತ್ತ ಕೂತಿರುವಾಗ ಗೌರಿ ಬಂದಳು.

"ಇದೇನ್ ಗೌರಿ, ಒಬ್ಬಳೇ?"

"ಯಾಕೆ ಒಬ್ಳೇ ಬರ್‌ಬಾರ್ದ?"

"ಛೆ! ನಾನೆಲ್ ಹಾಗಂದೆ? ಹೊತ್ತು ಮುಳುಗೋ ಸಮಯ. ಕೂಲಿ ಹೋದೋರೆಲ್ಲ ಒಟ್ಟಿಗೇ ಬರ್ಬೇಕಿತ್ತಲ್ಲ? ಅದಕ್ಕೇ ಹಾಗಂತ ಕೇಳ್ದೆ."

"ಅವ್ರನ್ನೆಲ್ಲ ಮುಂದಕ್ ಸಾಗಾಕ್ದೆ. ನೀನೊಬ್ನೆ ಕುಂತಿರಾದ್ ನೋಡಿ ಬಂದೆ."

"ಒಳ್ಳೇದಾಯ್ತು. ಕೂತ್ಕೊ."

ಗೌರಿ ಪಕ್ಕದಲ್ಲೇ ಕೂತಳು. ನವಾಬನ ಕೈ ಹಿಡಿದುಕೊಂಡಳು.

"ನಮ್ಮಪ್ಪಯ್ಯ ಅಂಗೆಲ್ಲ ಅಂದಿದ್ಕೆ ಬ್ಯಾಸ್ರ ಮಾಡ್ಕಬ್ಯಾಡ"– ಕೇಳಿಕೊಂಡಳು.

"ಬೇಸರ ಎಲ್ಲಾ ಆಗ್ಲೇ ಹೋಯ್ತುಲ್ಲ. ಎಲ್ರೂ ನನ್ ಪರ ನಿಂತ್ ಮೇಲೆ, ನವಾಬಣ್ಣ ನಮ್ಮಣ್ಣ ಅಂದ್ಮೇಲೆ ಇನ್ನೇನಿದೆ ಹೇಳು."

"ನಾನ್ ಮಾತ್ರ ಅಣ್ಣ ಅನ್ನಲ್ಲಪ್ಪ"– ನಾಚಿಕೆಯಿಂದ ಹೇಳಿದಳು ಗೌರಿ.

"ಮತ್ತೇನಂತೀಯ?"

"ನಾನ್ ಯೇಳಾಕಿಲ್ಲ" ಎಂದು ಕೈಯನ್ನು ಭದ್ರವಾಗಿ ಹಿಡಿದುಕೊಂಡಳು. ನವಾಬ ಮತ್ತಷ್ಟು ಭಾವುಕನಾದ. ಆಕೆಯ ತಲೆ ನೇವರಿಸಿದ. ಗೌರಿ "ನನ್ ಕೈ ಬಿಡ್‌ಬ್ಯಾಡ" ಎಂದಳು.

"ಈಗ ಕೈ ಭದ್ರವಾಗ್ ಹಿಡ್ಡಿರೋದು ನೀನು. ನಾನ್ ಬಿಡೋ ಪ್ರಶ್ನೆ ಬರೋದೇ ಇಲ್ಲ" ಎಂದು ನವಾಬ ನಕ್ಕಾಗ "ಎಲ್ಲಾ ನಗ್ಸಾರಾಟ ಆಡಬ್ಯಾಡ. ಸೂರ್ಯಣ್ಣ ಬಂದಾಗ ವಿಸ್ಯ ಯೇಳ್ಬೇಕು" ಎಂದಳು. "ಖಂಡಿತ. ನಾನೂ ಸೂರ್ಯಂಗೇ ಕಾಯ್ತಾ ಇದ್ದೀನಿ" ಎಂದು ನವಾಬ "ಹೊತ್ತಾಯ್ತು, ಶಾಲೆ ಶುರುಮಾಡ್‌ಬೇಕಲ್ಲ ನಡಿ" ಎಂದು ಮೇಲೆದ್ದ.

ಇಬ್ಬರೂ ಹಟ್ಟಿಗೆ ಹೋಗದೆ ಶಾಲೆಯ ಬಳಿ ಬಂದರು. ಇವರು ಬಂದು ಸ್ವಲ್ಪ ಹೊತ್ತಿನಲ್ಲಿ ಶಬರಿಯಾದಿಯಾಗಿ ಉಳಿದವರು ಬಂದರು. ಶಬರಿ ತಮಾಷೆ ಮಾಡಿದಳು– "ಏನಮ್ಮ ಗೌರಿ, ನಮ್ಮನ್ನೆಲ್ಲ ಬಿಟ್ಟು ಒಬ್ಳೇ ಬಂದಿದ್ದೀಯ? ಹೊಸ ಪಾಠಾನ?"

ಗೌರಿ ನಾಚಿಕೆಯಿಂದ "ಎಂತದೂ ಇಲ್ಲ" ಎಂದಳು.

ಅಲ್ಲಿದ್ದವರೆಲ್ಲ ತಮಾಷೆಯನ್ನು ಸಹಜವಾಗಿಯೇ ತೆಗೆದುಕೊಂಡರು.

ನವಾಬ "ಬನ್ನಿ ಬನ್ನಿ– ಪಾಠ ಶುರು ಮಾಡ್ಬೇಕು. ಹೊಸ್‌ಪಾಠ ಅಲ್ಲಿದೆ" ಎಂದು ಒಳಗೆ ಕರೆದೊಯ್ದ.

* * *

ದೀಪದ ಬೆಳಕಲ್ಲಿ ಕೂತು ಶಬರಿ ಓದಲು ಪ್ರಯತ್ನಿಸುತ್ತಿದ್ದಳು. ಆಕೆ ಒಂದೊಂದೇ ಪದಗಳನ್ನು ಉಚ್ಚರಿಸುತ್ತಿರುವಾಗ ತಿಮ್ಮರಾಯಿ ಅಚ್ಚರಿಯ ಭಾವದಲ್ಲಿ ಸವಿಯುತ್ತ ಕೂತಿದ್ದ.

"ಬಾಕ್ಕೇತ್ವ ಬೆ ಟಾಕ್ ಟಾವತ್ತು ಟ್ಟ– ಬೆಟ್ಟ
ಗ ಕ್ಕೊಂಬು ಗು ಡಾಕ್‌ಡಾವತ್ತು ಡ್ಡ – ಗುಡ್ಡ
ಭಾ ಕೊಂಬಿನ್ ದೀರ್ಘ ಭೂ ಮಾ ಗುಡ್ಸು ಮಿ – ಭೂಮಿ"

–ಹೀಗೆ ಸಾಗಿತ್ತು ಶಬರಿಯ ಓದು

ಗಲ್ಲದ ಮೇಲೆ ಕೈಯ್ಯಿಟ್ಟುಕೊಂಡು ಕೇಳಿಸಿಕೊಳ್ಳುತ್ತ ಕೂತಿದ್ದ ತಿಮ್ಮರಾಯಿ "ನಿನ್ನವ್ವ ಇವಾಗ್ ಜೀವ್‌ಸಯ್ತು ಇದ್ದಿದ್ರೆ ಏಟಂದ್ ಕುಣ್ದಾಡ್ತಿದ್ಲೊ ಕಣವ್ವ" ಎಂದ.

"ಯಾಕಪ್ಪ?"– ಶಬರಿ ಲೋಕಾಭಿರಾಮವಾಗಿ ಕೇಳಿದಳು.

"ಯಾಕ್ ಅಂದ್ರೆ? ಮಗ್ಳು ಇಂಗೆಲ್ಲ ಓದ್ ಕಲ್ತವ್ಳೆ ಅಂದ್ರೆ ಕುಣಿಬೇಕು ಅನ್ನಾಕಿಲ್ವ?"

ಶಬರಿಗೆ ಮಾತು ಹೊರಡಲಿಲ್ಲ. ಓದಲೂ ಸಾಧ್ಯವಾಗಲಿಲ್ಲ.

ಗಾಳಿಗೆ ತುಯ್ದಾಡುವ ದೀಪವನ್ನು ನೋಡುತ್ತ ಕೂತಳು.

ತಿಮ್ಮರಾಯಿಗೆ ಈ ಮೌನ ಅರ್ಥವಾಗಲಿಲ್ಲ. "ಯಾಕ್ ಮಗ್ಳೆ ಸುಮ್ಕೆ ಕುಂತ್ಕಂಡೆ?" ಎಂದು ಕೇಳಿದ. "ಯಾಕೂ ಇಲ್ಲ ಕಣಪ್ಪ ಇಲ್ಲಿ ಪುಸ್ತಕದಾಗೆ ಏನೋ ನೋಡ್ತಾ ಇದ್ದೆ" ಎಂದಳು. "ಅದೇನವ್ವ ಒಸಿ ಓದು. ಕೇಳಿಸ್ಕಮಾನ" ಎಂದು ಒತ್ತಾಯಿಸಿದ. ತಿಮ್ಮರಾಯಿ.

"ತಾಗ್ ದೀರ್ಘ ತಾ ಯ ಗುಡ್ಸು ಯಿ – ತಾಯಿ –ಅಂದ್ರೆ ಅಮ್ಮ ಅಂತ."

ಶಬರಿ ಹೇಳುತ್ತ ಕಣ್ಣು ಒರೆಸಿಕೊಂಡಳು. ತಿಮ್ಮರಾಯಿಗೆ ಅರ್ಥವಾಯಿತು. ಮಾತು ಬದಲಾಯಿಸಲು ಒಂದು ಪ್ರಶ್ನೆ ಹಾಕಿದ– "ಅಲ್ಲ ಈ ಸೂರ್ಯ ಬಂದು ಈಟ್‌ದಿನ ಆಯ್ತು, ಅವ್ನ್ ಅಪ್ಪ ಅಮ್ಮ ಎಲ್ಲವ್ರೆ ಏನ್ಕತೆ ಅಂಬ್ತ ಒಂದ್‌ಕಿತಾನಾರೂ ಕೇಳ್ಳಿಲ್ಲ ನೋಡವ್ವ, ನಿಂಗೇನಾರ ಗೊತ್ತ?"

"ಇಲ್ಲ ಕಣಪ್ಪ. ಸೂರ್ಯ ಒಂದ್‌ಕಿತಾನೂ ಅದೆಲ್ಲ ಯೇಳ್ಳಿಲ್ಲ. ಯೇಳ್ಬೇಕು ಅಂಬ್ತ ನಾವು ಕೇಳ್ಳಿಲ್ಲ."

"ಇವಾಗೋಗಿರಾದು ಅಪ್ಪ ಅಮ್ಮನ್ನೇ ನೋಡಾಕಿರ್‌ಬೋದು..."

"ಇರ್‌ಬೋದು ಕಣಪ್ಪ."

–ಶಬರಿಗೆ ಮಾತು ಬೆಳೆಸಲು ಆಸಕ್ತಿಯಿರಲಿಲ್ಲ.

"ಮಲೀಕಳಪ್ಪ. ನಾನಂಗೇ ಓದ್ಕಂಬ್ತೀನಿ" ಎಂದಳು.

"ಆತು ಕಣವ್ವ" ಎಂದು ತಿಮ್ಮರಾಯಿ ಹಳೆಯ ಗೋಣಿಚೀಲ ಹಾಸಿಕೊಂಡು ಮಲಗಿದ.

ದೀಪ ತುಯ್ದಾಡುತ್ತಿದೆ ಗಾಳಿಗೆ
ಎಣ್ಣೆ ಉಳಿಯುವುದೆ ಬಾಳಿಗೆ?
ಶಬರಿಯ ಮುಖದಲ್ಲಿ ಅಲೆಯ ಉಯ್ಯಾಲೆ;
ಮನಸ್ಸು ಬರೆದ ಓಲೆ.

ಎಷ್ಟು ಹೊತ್ತು ಕೂತಿದ್ದಳೋ ಹೀಗೆ. ಬಿರುಗಾಳಿಯ ಸದ್ದಿಗೆ ಎದ್ದಳು. ಹೊರಗೆ ನೋಡಿದಳು.

ಕಪ್ಪು ಮೋಡಗಳಲ್ಲಿ ಗೂಢವಾದ ಬಯಲು.
ದೂರದಲ್ಲೆಲ್ಲೋ ಗುಡುಗಿನ ಉಯಿಲು
ಹತ್ತಿರದಲ್ಲಿ ಮಾತಿನ ಮಿಂಚು.
ಯಾರ ದನಿ? ಒಂದಲ್ಲ ಎರಡು! ಗಂಡು–ಹೆಣ್ಣು!
ಕಿವಿ ನಿಮಿರಿತು–ಪಂಚೇಂದ್ರಿಯಗಳೆಲ್ಲ ಅಲ್ಲಿಗೇ ಬಂದು ನಿಂತಂತೆ.
ನವಾಬ–ಗೌರಿ!
ಬಿರುಗಾಳಿಯ ನಡುವಿನ ನಿಶ್ಶಬ್ಧದಲ್ಲಿ ಅಸ್ಪಷ್ಟ ದನಿಗಳು.
ಶಬರಿಯ ಮನಸ್ಸಿನಲ್ಲಿ ಏನೇನೋ ಭಾವನೆ.

ಕೇಳಿಸಿಕೊಳ್ಳುವ ಕುತೂಹಲವೇಕೆ ಎಂದು ಮತ್ತೆ ದೀಪದ ಬಳಿ ಕೂತು ಪುಸ್ತಕಕ್ಕೆ ಕೈ ಹಾಕಿದಳು. ಪುಟಗಳನ್ನು ತಿರುವಿದಳು– ಮನಸ್ಸಿನ ಪದರುಗಳಂತೆ.

ಹೊರಗೆ ಗಾಳಿ ಹೆಚ್ಚಾದಂತೆ ಒಳಗೆ ದೀಪಕ್ಕೆ ಗೂಳಿಭಯ.
ದಂಗುಬಡಿದ ದೀಪವನ್ನು ನೋಡದಾದಳು ಶಬರಿ.
ಆರಿಸಿದಳು. ಹೋಗಿ ಮಲಗಿದಳು–ನಿದ್ದೆಯಿಲ್ಲದೆ.
ಇದ್ದಕ್ಕಿದ್ದಂತೆ ಮಳೆ ಸುರಿಯತೊಡಗಿತು.
ದಪದಪ ಸದ್ದಿನ ಮಳೆಯಲ್ಲಿ ಬಾಯಿಲ್ಲದೆ ಬಿದ್ದ ಮನಸ್ಸು.
ಕತ್ತಲಲ್ಲಿ ತೂರಿಬರುವ ಸೂರ್ಯಕಿರಣ.
ಹೊದ್ದ ದುಪ್ಪಟಿಯಲ್ಲಿ ಬೆಚ್ಚನೆಯ ಭಾವ.

ನವಾಬ–ಗೌರಿಯು ಪಿಸುದನಿ ಹೀಗೆ ಗಾಳಿಯಾಗುವುದೆ? ಮಳೆಯಾಗುವುದೆ?

ಮಾಯೆಯಾಗುವುದೆ?
'ಪಿಸುಮಾತು ಆಡೋಣ ಬಾ ಕತ್ತಲೆ
ಬೆಳಕೆಂಬ ಮಾಯೆ ಬರಿಬೆತ್ತಲೆ'

–ಹೀಗೆ ಹೇಳಲುಬಾರದ ಏರಿಳಿತಗಳ ಶಬರಿ ಸುಖ–ಸಂಕಟಗಳ ನಡುವಿನ ಹೊಸದೊಂದು ಭಾವದಲ್ಲಿ ತತ್ತರಿಸುತ್ತಿರುವಾಗ ಮಳೆ–ನಿಸರ್ಗದ ನುಡಿಯನ್ನು ಬಿತ್ತರಿಸುತ್ತಿತ್ತು.

ಅದೆಷ್ಟು ಹೊತ್ತಾಯಿತೊ ಗೊತ್ತಾಗಲಿಲ್ಲ. ಮಳೆಯ ಅಬ್ಬರ ಕಡಿಮೆಯಾಗಿತ್ತು.

ನಿದ್ದೆ ಸದ್ದು ಮಾಡದೆ ಕಾದು ಕೂತಿತ್ತು.
ಹೊದ್ದ ದುಪ್ಪಟಿಯನ್ನು ಒಗೆದು ಹೊರಳಿದಳು ಶಬರಿ.
ಹೊಂಚು ಹಾಕುವ ನಿದ್ದೆ ನಿಬ್ಬೆರಗಾಗುವಂತೆ ಎದ್ದು ಕೂತಳು.
ಅವಳ ಕಿವಿಗಳಿಗೆ ಸದ್ದೊಂದು ಕೇಳಿಸುತ್ತಿತ್ತು.
ಮಳೆಯ ನೀರಲ್ಲಿ ಮನುಷ್ಯನ ನಡಿಗೆ.
ಕಾದು ಕೂತಳು. ಮನೆಯ ಬಾಗಿಲಿಗೇ ಬಂತು ನಡಿಗೆ.

ಬಾಗಿಲು ಬಡಿದ ಸದ್ದು. ಸರಸರನೆ ಎದ್ದು ಹೇಳದೆ ಕೇಳದೆ ಬಾಗಿಲು ತೆಗೆದಳು.

ಸೂರ್ಯ ಒಳಬಂದ.

ಬೆಂದ ಭಾವನೆಗಳ ಎದುರು ಮಳೆಯಲ್ಲಿ ನೆಂದ ಸೂರ್ಯ.

"ಇದ್ಯಾತ್ರುದು ಇಂಗ್ ನೆಂದ್ಕಂಡ್ ಬಂದಿದ್ದೀಯ. ಬಾ ಬಾ ವಲ್ಲೀಬಟ್ಟೆ ಕೊಡ್ತೀನಿ" ಎಂದು ಶಬರಿ ಒಳಗೆ ಕರೆದಳು.

ಸೂರ್ಯ ಒಳಬರುತ್ತ "ನನ್ ಗೆಳೆಯ ರಸ್ತೇಲ್ ಬಿಟ್ ಹೋಗಿದ್ದೇ ತಡ, ಮಳೆ ಶುರುವಾಯ್ತು. ಇಷ್ಟೊತ್ತೂ ಮಂಟಪ್‌ದಲ್ ನಿಂತಿದ್ದೆ. ಸ್ವಲ್ಪ ಕಡ್ಮೆ ಆಯ್ತಲ್ಲ. ಬಂದೆ" ಎಂದು ಹೇಳಿ ಒದ್ದೆಯಾದ ಷರಟನ್ನು ಬಿಚ್ಚಿದ.

"ಈಟೊತ್ತಿಗ್ ಬತ್ತೀನಿ ಅಂಬ್ತ ಮದ್ಲೇ ಯೇಳಿರ್ ಯಾರಾನ ಬರಾಕಿಲ್ವ? ನವಾಬಣ್ಣಾನೇ ಬತ್ತಿದ್ದ ಗೌರಿತಾವ್ ಮಾತಾಡಾದ್ ಬಿಟ್ಟು" ಎಂದಳು ಶಬರಿ.

ಸೂರ್ಯ, ಯಾಕೆ ಈರೀತಿಯ ಮಾತು ಎಂಬಂತೆ ನೋಡಿದ. ಶಬರಿ ಹಾಗೆ ಮಾತಾಡಿದ್ದು ಸರಿಯಲ್ಲವೇನೊ ಎನ್ನಿಸಿ ತುಟಿಕಚ್ಚಿಕೊಂಡಳು. ಟವಲನ್ನು ತಂದು "ಎಲ್ಲಿ ಕುಂತ್ಕ, ನಾನೇ ತಲೆ ಉಜ್‌ತೀನಿ" ಎಂದಳು. "ನಾನೇ ಒರಿಸ್ಕಂತೀನಿ. ಕೊಡು" ಎಂದು ಸೂರ್ಯ ಹೇಳಿದರೂ ಕೇಳದೆ ಶಬರಿ ಆತನ ಒದ್ದೆ ತಲೆಯನ್ನು ಒರೆಸಿದಳು. ಹಾಗೇ ಮೈಯನ್ನು ಒರೆಸುತ್ತ ಹೋದಂತೆ ಬೆಚ್ಚನೆಯ ಅನುಭವ.

ಹೊರಗೆ ಜಿಟಿಜಿಟಿ ಮಳೆ.
ಒಳಗೆ ಭಾವನೆಗಳ ಬೆಳೆ.
ತೆನೆಯೊಡೆದು ತೂಗಾಡುವ ಪೈರು.
ಕೆನೆಗಟ್ಟಿದ ಒಲೆಯ ಮೇಲಿನ ಹಾಲು.
ಸೂರ್ಯ–ಶಬರಿ ಒಂದಾಗಿದ್ದರು.

# ೧೨

ನೆನಪುಗಳು ನುಂಗಿ ನೊಣೆಯುತ್ತಿರುವಾಗ ಬೆಚ್ಚಿ ಎಚ್ಚೆತ್ತಳು ಶಬರಿ. ಹುಚ್ಚೀರ ಕಣ್ಣಲ್ಲಿ ಎಣ್ಣೆ ಹೊಯ್ದುಕೊಂಡಂತೆ ನೋಡುತ್ತ ಕೂತಿದ್ದಾನೆ.

ಅಂದು–ಒಂದಾದ ರಾತ್ರಿಯ ಕತ್ತಲು; ಒಳಗೆಲ್ಲ ಬೆತ್ತಲು.

ಇಂದು– ಅದೇರೀತಿಯ ಕತ್ತಲು; ಬಿರುಗಾಳಿ ಸುತ್ತಲು

ಆದರೆ ಒಂಟಿ ಜೀವದ ಬೆವರು.

ಮಣ್ಣಲ್ಲಿ ಸೇರಿಹೋದ ತಿಮ್ಮರಾಯಿ.

ಸಾವು ಸಹಜವೆಂಬಂತೆ ಸಮಾಧಾನ ಸ್ಥಿತಿಗೆ ಬಂದ ಹಟ್ಟಿಜನ.

ಕಳವಳದ ಕಾರ್ಗತ್ತಲು ಕಾಡಿಸುತ್ತಿದೆ ಈ ಮೂವರಿಗೆ.

ಹದ್ದಾಗಿ ನಿದ್ದೆ ಬಡಿದಿದೆ ಉಳಿದವರಿಗೆ.

ಕಳವಳ ಕಣ್ಣು ಮುಚ್ಚಿದೆ.

ಇಂಥದೇ ಆ ರಾತ್ರಿಯಲ್ಲಿ ಎಂಥ ಸುಖವಿತ್ತು; ಎಂಥ ಕನಸಿತ್ತು.

ಆದರೆ ಇಂದು–ಮದುವೆಯಾಗದೆ ಮಗುವಿನ ಜೀವ ಹೊಟ್ಟೆಯ ಒಳಗೆ;

ಸೂರ್ಯನ ಬರುವಿಗಾಗಿ ಕಾದ ಬಯಕೆಯ ಬುತ್ತಿ ಹಟ್ಟಿಯ ಹೊರಗೆ.

ಆ ಘಟನೆಗಳು ಹೇಗೆ ಜರುಗಿದವು! ಗೌರಿ–ನವಾಬ, ತಾನು–ಸೂರ್ಯ! ಈ ಸಂಬಂಧವೂ ಒಂದು ಬದಲಾವಣೆ.

ಆದರೆ... ಆದರೆ... ಬದಲಾವಣೆಯ ಬೆನ್ನ ಹಿಂದೆ ಏಳೆಡೆಯ ಸರ್ಪ!

ಹಿಂದೆ ಹಿಂದೆ ಬಂದ ಸೀಳು ನಾಲಗೆಯ ನೆರಳುಗಳು.

ಬಿಟ್ಟರೂ ಬಿಡದೆ ಕಾಡಿಸುವ ನೆನಪುಗಳು....

* * *

ಒಂದಾದ ಸುಖ, ಬಿರುಗಾಳಿಯ ತರಗೆಲೆಯಾಗಿ ನೆಲ ಮುಗಿಲ ನಡುವೆ ಹಾರಾಡಿತ್ತು. ನೆಲೆ ಕಂಡುಕೊಳ್ಳುವ ನಿರ್ಧಾರದಲ್ಲಿರುವಾಗಲೇ ಗೌರಿ ಮತ್ತು ನವಾಬರ ಪ್ರಸಂಗ ಎದುರಾಗಿತ್ತು.

ಗೌರಿ ಸಮಯ ಕಾದು ಶಬರಿಯ ಬಳಿ ನವಾಬ ಮತ್ತು ತನ್ನ ಪ್ರೇಮದ ವಿಷಯವನ್ನು ಪ್ರಸ್ತಾಪಿಸಿದಳು.

"ನಂಗೆ ಅವ್ರ್‌ನ್ ಕಂಡ್ರೆ ಇಷ್ಟ. ಅವ್ರ್‌ಗೂ ಆಟೇಯ. ಇಬ್ರೂ ಮದ್ವೆ

ಆಗಾದು ಅಂದ್ಕಂಡಿದ್ದೀವಿ. ಅಪ್ಪಯ್ಯ ಏನಾರ ಅಡ್ಡ ಬಂದ್ರೆ 'ಕೂಡಿಕೆ' ಮಾಡ್ಕಂಡ್ ಬಿಡ್ತೀವಿ" ಎಂದಳು. ಗೌರಿ.

ಕೆಲವು ಬುಡಕಟ್ಟು ಜನಾಂಗಗಳಲ್ಲಿ ಇಷ್ಟಪಟ್ಟವರ ಜೊತೆ ಸಂಸಾರ ಮಾಡುವ 'ಕೂಡಿಕೆ' ಪದ್ಧತಿ ಇದ್ದಂತೆ ಇವರಲ್ಲೂ ಇತ್ತು. ಎಷ್ಟೋ ಸಾರಿ ವಿಧವೆಯರೂ 'ಕೂಡಿಕೆ' ಮಾಡಿಕೊಳ್ಳುತ್ತಿದ್ದರು. ಆದರೆ ಕೂಡಿಕೆಗೂ ಹಿರಿಯರ ಅನುಮತಿ ಕೇಳಬೇಕಾಗಿತ್ತು. ಒಂದು ವೇಳೆ ಅವರು ಒಪ್ಪದಿದ್ದರೂ ಕೂಡಿಕೆ ನಿಷಿದ್ಧವಾಗಿರಲಿಲ್ಲ. ಇದೆಲ್ಲ ಶಬರಿಗೂ ಗೊತ್ತು; ಗೌರಿಗೂ ಗೊತ್ತು.

ಗೌರಿ ಮತ್ತು ನವಾಬನ ಸಂಬಂಧ ಗಾಢವಾಗುತ್ತಿರುವ ಸೂಚನೆ ಶಬರಿ ಮತ್ತು ಸೂರ್ಯನಿಗೆ ತಿಳಿದಿತ್ತು. ಈಗ ಗೌರಿ ತಾನಾಗಿಯೇ ಪ್ರಸ್ತಾಪಿಸಿದ್ದರಿಂದ ತೀವ್ರ ಗಮನ ಕೊಡಲು ನಿರ್ಧರಿಸಿದರು. ಸೂರ್ಯನೇ ಸೂಕ್ತ ಕಾಲದಲ್ಲಿ ಪೂಜಾರಪ್ಪನ ಜೊತೆ ಮಾತನಾಡಬೇಕೆಂದು ನಿರ್ಧರಿಸಲಾಯಿತು.

ಆದರೆ ನಡೆದ ಘಟನೆಯೊಂದರಿಂದ ಸೂಕ್ತ ಸಮಯಕ್ಕೆ ಕಾಯಬೇಕಾದ ಅನಿವಾರ್ಯತೆ ಉಂಟಾಗಲಿಲ್ಲ.

ಅಂದು ರಾತ್ರಿ ಗಡಂಗಿನಿಂದ ಪೂಜಾರಪ್ಪ ಬಂದ. ಕಂಠಪೂರ್ತಿ ಕುಡಿದಿದ್ದ. ತನ್ನ ಗುಡಿಸಿಲಿನ ಬಳಿ ಬಂದು ಒಳಗೆ ಬೆಳಕು ಇರುವುದನ್ನು ಕಂಡು "ಇನ್ನೂ ಬಿದ್ಕಂಡಿಲ್ವೇನೆ" ಎಂದು ಗೊಣಗುತ್ತ ಬಾಗಿಲು ಬಡಿದ. ತಕ್ಷಣ ಬಾಗಿಲು ತೆಗೆಯಲಿಲ್ಲ. ಸಿಟ್ಟು ನೆತ್ತಿಗೇರಿತು. ದಬದಬನೆ ಬಡಿದ. "ಏನ್ ದಬ್ಬಾಕ್ಕಂಡಿದ್ದೀಯೇನೆ ಒಳ್ಗೆ. ಏಯ್ ಗೌರಿ. ನಿನಗೇನ್ ಗಂಡಾನೊ ಮಿಂಡಾನೊ ಈಟೋತ್ ಬಾಗ್ಲು ಬಡ್ಕಮಾಕೆ. ತೆಗಿ ಮದ್ಲು" ಎಂದು ಕಿರುಚಿದ.

ವಿಧಿಯಿಲ್ಲವೆಂಬಂತೆ ಬಾಗಿಲು ತೆಗೆದುಕೊಂಡಿತು!

ನೋಡಿದರೆ–ಒಳಗೆ ಗೌರಿಯೊಬ್ಬಳೇ ಇಲ್ಲ. ಜೊತೆಗೆ ನವಾಬ!

ಪೂಜಾರಪ್ಪನ ಮೈ ಕೈ ರೋಮಗಳೆಲ್ಲ ನಿಗುರಿಕೊಂಡವು.

"ನಿಂಗೇನ್ಲ ಕೆಲ್ಸ ಇಲ್ಲಿ? ಏನ್ ಮಾಡ್ತಿದ್ರಿ ಇಬ್ರೂನು" ಎಂದು ಒಳನುಗ್ಗಿದ.

ನವಾಬ "ಸಮಾಧಾನ ಪೂಜಾರಪ್ಪ, ನಾನ್ ಯಾವ್ ಕೆಟ್ ಕೆಲ್ಸಾನೂ ಮಾಡಿಲ್ಲ. ಸ್ವಲ್ಪ ನನ್ ಮಾತ್ ಕೇಳು" ಎಂದು ಎಷ್ಟು ಹೇಳಿದರೂ ಆತ ಕೇಳುವ ಸ್ಥಿತಿಯಲ್ಲಿರಲಿಲ್ಲ.

"ಸರ್‌ವೊತ್ನಾಗ್ ಒಳುಗ್ ಸೇರ್ಕಂಡು ನಂಗೇ ಸಮಾಧಾನ ಯೇಳ್ತಿಯೇನ್ಲ? ಇಲ್ಲೇನ್ ಎಲ್ರೂದು ಜಾತಿ ಕೆಡ್ಸಾಕ್ ಬಂದಿದ್ದೀಯೇನ್ಲ" ಎಂದು ಗದರಿಸಿದ. ಆಗ ಗೌರಿ "ಅಂಗೆಲ್ಲ ಅನ್‌ಬ್ಯಾಡ. ವಿಸ್ಯ ಏನು ಅಂಬ್ತ ನಾನ್ ಯೇಳ್ತೀನಿ"

ಎಂದಳು.

ಪೂಜಾರಪ್ಪನಿಗೆ ಮತ್ತಷ್ಟು ರೇಗಿತು.

"ನೀನೇನೇ ನನ್ಗ್ ಯೇಳಾದು ವಿಸ್ಯಾನ. ಒಳಿಗ್ ಸೇರ್ಕಂಡ್ ಏನ್ ಮಾಡ್ತಿದ್ರಿ ಅಂಬ್ತ ಉಟ್ಸಿದಪ್ಪನ್ ಮುಂದೆ ಎಲ್ಲಾ ಬಿಚ್ಚಿಡ್ತೀಯೇನೆ ಬೋಸುಡಿ" ಎಂದು ಗೌರಿಯ ಮುಂದಲೆಯ ಕೂದಲು ಹಿಡಿದು ದರದರನೆ ಹೊರಗೆ ಎಳೆತಂದ ಪೂಜಾರಪ್ಪ "ಒಳ್ಗೇನಾರ ಕಾಲಿಟ್ರೆ ಮಾರಮ್ಮಂಗ್ ಬಲಿ ಕೊಟ್‌ಬಿಡ್ತೀನಿ" ಎಂದು ನೂಕಿದ.

ಗೌರಿ ಕಿರಚಿಕೊಂಡಳು. "ಕುಡ್ದ್ ಬಂದ್ ವೊಡೀತಾ ಅವ್ನೆ... ಶಬರಿ... ಶಬರಿ..."

ಈ ವೇಳೆಗೆ ಗದ್ದಲದಿಂದ ಎದ್ದಿದ್ದವರು ಹೊರಬರತೊಡಗಿದ್ದರು. ಶಬರಿ, ತಿಮ್ಮರಾಯಿ, ಸೂರ್ಯ–ಎಲ್ಲರೂ ಬಂದರು. ಇವರಿಗೆ ಪರಿಸ್ಥಿತಿ ಅರ್ಥವಾಯಿತು. ಆಗ ಪೂಜಾರಪ್ಪ ಅಬ್ಬರಿಸುತ್ತಿದ್ದ: "ಕುಡ್ದೋನು ಅಂದ್ರೆ ಕಡ್ದಾಕ್ ಬಿಡ್ತೀನಿ. ಈ ಬೋಳಿಮಗನ್ ಮಗ್ಗಲಾಗ ಬಿದ್ಕೊಂಡು ಇವಾಗ್ ನಂಗೇ ಎದ್ರಾಡ್ತೀಯೇನೆ"– ಮತ್ತೆ ಗೌರಿಯನ್ನು ಹೊಡೆಯಲು ಹೋದ.

ಸೂರ್ಯ ಮಾತನಾಡಲಿಲ್ಲ. ಶಬರಿಯ ಕಡೆ ನೋಡಿದ. ಶಬರಿ ಮುಂದೆ ಬಂದಳು. ಅಡ್ಡ ನಿಂತಳು.

"ಕುಡುದ್ ಬಂದು ಕಂಡಾಪಟ್ಟೆ ಕಿರಚಾಡ್ ಬ್ಯಾಡ. ಏನಿದ್ರೂ ವೊತ್ತಾರೆ ಮಾತಾಡಾನ" ಎಂದು ಗಟ್ಟಿಯಾಗಿ ಹೇಳಿದಳು.

"ನೀನೊಬ್ಳು ಆಸ್‌ಗೆಟ್ಟೋಳು"– ಪೂಜಾರಪ್ಪ ಶಬರಿಯನ್ನೇ ಬಯ್ಯಲು ಶುರುಮಾಡಿದ– "ವೊತ್ತಾರೆ ಮಾತಾಡ್ಬೇಕಂತೆ ವೊತ್ತಾರೆ. ಮಾಡಾ ಕೆಲ್ಸ ಎಲ್ಲಾ ವೊತ್ ಮುಳುಗಿದ್ ಮ್ಯಾಲ್ ಮಾಡಿ, ಮಾತಾಡಾಕ್ ಮಾತ್ರ ವೊತ್ತಾರಿಕೆ ಅಂದ್ರೆ ಅದ್ಯಾವ್ ಸೀಮೆ ನ್ಯಾಯ ಅಂಬ್ತೀನಿ. ಈ ನನ್ ಮಗ್ಳು ಬತಗೆಟ್ಟಾಳ್ ತರ ಏನ್ ಮಾಡಿದ್ಲು ಅದನ್ ಕೇಳು ಮದ್ಲು. ಇವ್ಳನಾ... ಇವ್ಳನಾ..... ಪಚಪಚ ತುಳ್ದು ವೊತಾಕ್ ಬಿಡ್ತೀನಿ" ಎಂದು ಶಬರಿಯನ್ನು ನೂಕಿ, ಗೌರಿಯನ್ನು ಬಡಿಯತೊಡಗಿದ.

ಆಗ ಸೂರ್ಯ ನುಗ್ಗಿಬಂದು ಪೂಜಾರಪ್ಪನನ್ನು ಹಿಡಿದುಕೊಂಡ.

"ಏನ್ ಮಾಡ್ತಿದ್ದೀಯ ಪೂಜಾರಪ್ಪ. ಹೆಣ್‌ಮಕ್ಕಳ ಮೇಲೆ ಕೈಮಾಡಾಕ್ ನಾಚ್ಗೆ ಆಗಲ್ವ ನಿಂಗೆ" ಎಂದು ಗದರಿದ.

"ಇವ್ರ್‌ಗೆಲ್ಲ ನಾಚ್ಗೆ ಯಾಕಾಗ್‌ತೈತೆ. ಕುಡ್ದು ಬತ್ತಾರೆ. ಯೆಂಗುಸ್ರು ಸಿಕ್ಕಿದ್ರೆ ಅಂಬ್ತ ಬಾರುಸ್ತಾರೆ. ಇನ್‌ಮ್ಯಾಕ್ ಯಾರಾನಾ ಕುಡ್ದು ಅಟ್ಟೀನಾಗ್ ಕಾಲಿಟ್ರೆ ನಾವ್ ಯೆಂಗುಸ್ರ್ ಯಾರು ಸುಮ್ಕಿರಾಕಿಲ್ಲ" ಎಂದು ಶಬರಿ ದೊಡ್ಡ ದನಿಯಲ್ಲಿ

ರೇಗಿದಳು. ಆಗ ಒಬ್ಬ ಹೆಂಗಸು "ಅಂಗೇ ಮಾಡ್‌ಬೇಕು. ಕುಡ್ದು ಕುಡ್ದೂ ಕಿಲುಬ್‌ಕಾಸೂ ಉಳ್ಳಾಕಿಲ್ಲ; ನಮ್ಮನ್ ಬಡ್ಯಾದು ಬಿಡಾಕಿಲ್ಲ. ಇನ್‌ಮ್ಯಾಕ್ ನಾವಿಂಗೇ ಸುಮ್ಕಿರಾದ್ ಸರ್ಯಾಗಾಕಿಲ್ಲ" ಎಂದು ಹೇಳಿದಳು. ವಾತಾವರಣವೇ ಬದಲಾಗ ತೊಡಗಿತು.

ಗೌರಿ– ನವಾಬನ ವಿಷಯ ಕುಡಿತಕ್ಕೆ ವರ್ಗಾಯಿಸಲ್ಪಟ್ಟಿತು. ಒಬ್ಬೊಬ್ಬ ಹೆಂಗಸೂ ಒಂದೊಂದು ಮಾತಾಡಿದರು. ಕಡೆಗೆ ಶಬರಿ ಹೇಳಿದಳು. "ಎಲ್ಲಾ ಯೆಂಗುಸ್ರು ಹೇಳಿದ್ ಕೇಳಿದ್ರಲ್ಲ. ಇನ್‌ಮಾಕ್ ನೀವ್ಯಾರಾನಾ ಕುಡ್ಕಂಡ್ ಬರ‍್ರಿ, ಯೆಂಗುಸ್ರೆಲ್ಲ ಸೇರಿ ಪೂಜೆ ಮಾಡ್ತೀವಿ."

ಮಾತಿಲ್ಲ. ಕತೆಯಿಲ್ಲ– ಎಲ್ಲಾ ಹುಚ್ಚೀರನ ಮನಸ್ಸು.

ಪೂಜಾರಪ್ಪ ಬುಸುಗುಡುತ್ತಾ ಕೂತ. ತಿಮ್ಮರಾಯಿ "ಇವಾಗ ವೋಗ್ ಮಲೀಕಳ್ರಿ. ವೊತ್ತಾರೆ ಮಾತಾಡಾನ" ಎಂದ. ಪೂಜಾರಪ್ಪನಿಗೆ ಮತ್ತೆ ಇದು ಸಹ್ಯವಾಗಲಿಲ್ಲ. "ಅದೆಂಗಾಯ್ತದೆ. ಈ ಜಾತಿ ಕೆಡ್ಸಾಕ್ ಬಂದಿರಾನ್ನ ಮದ್ಲು ಒದ್ ವೊರೀಕಾಕ್ರಿ. ಆಮ್ಯಾಕ್ ಉಳುದ್ ವಿಸ್ಯ" ಎಂದು ಹೆಡೆಯೆತ್ತಿದ.

"ನವಾಬಣ್ಣ ಇಲ್ಲಿಗ್ ಜಾತಿ ಕೆಡ್ಸಾಕ್ ಬಂದಿಲ್ಲ ಅಂಬ್ತ ಏಟ್‌ಸಾರಿಯೇಳಾದು. ಇವಾಗ ಗೌರಿವಿಸ್ಯ ಮಾತಾಡಾನ. ಗೌರೀಗೆ ನವಾಬ್‌ನ ಮದ್ವೆ ಆಗಾಕೆ ಆಸೆ ಐತೆ. ನವಾಬಣ್ಣಂಗೂ ಇಷ್ಟ ಐತೆ. ನಾವೆಲ್ಲ ಸೇರ‍್ಕಂಡು ಅವ್ರಿಬ್ರಿಗೂ ಮದ್ವೆ ಮಾಡ್ಬೇಕು"– ಎಂದು ಶಬರಿ ಆವೇಶದಿಂದ ಹೇಳಿದಾಗ ಎಲ್ಲರೂ ಸ್ತಬ್ಧರಾಗಿ ನಿಂತಿದ್ದರು– ಪೂಜಾರಪ್ಪನನ್ನು ಬಿಟ್ಟು. ಪೂಜಾರಪ್ಪ ಭಗ್ಗೆಂದು ಉರಿಯತೊಡಗಿದ್ದ.

"ಇದುನ್ನೇ ಇದುನ್ನೇ ನಾನ್ ಜಾತಿ ಕೆಡ್ಸಾದು ಅಂದಿದ್ದು. ಆ ಜೋಯಿಸ್ರು ಅವತ್ತೇ ಅಂದಿದ್ರು. ಈ ಬಡ್ಡೆತ್ತು ನನ್‌ಮನೇಗೇ ಒಕ್ರುಸ್ತಾನೆ ಅಂಬ್ತ ನಂಗೊತ್ತಿರ‍್ಲಿಲ್ಲ. ನನ್ ಮಗ್ಳು ನೆಗೆದ್ ಬಿದ್ದೋದ್ರೂ ಸರೀನೆ, ನಾನ್ ಇದ್ಕೆಲ್ಲ ಒಪ್ಪಾಕಿಲ್ಲ"– ಪೂಜಾರಪ್ಪನದು ಗಿಡುಗ ನುಡಿ,

ಆದರೆ ಗುಬ್ಬಚ್ಚಿ, ಗಿಡುಗರ ಗುಮ್ಮಕ್ಕೆ ಹೆದರಲಿಲ್ಲ.

ಗೌರಿ ನೇರವಾಗಿ ಹೇಳಿದಳು– "ನವಾಬು ಜಾತಿ ಕೆಡ್ಸಾಕ್ ಬಂದಿಲ್ಲ. ಮದ್ವೆ ಆಗ್ತೀಯ ಅಂಬ್ತ ನಾನೇ ಕೇಳಿದ್ದು."

"ವೊಟ್ಟೇಗೇನ್ ತಿಂತಿಯೇ ಲೌಡಿ. ನಿಂದೇನ್ ನಾಲ್ಗೇನೊ ಮೆಟ್ಟಿನ್ ಅಟ್ಟೇನೊ"– ಗಿಡುಗನ ಗುಡುಗು.

ಆಗ ನವಾಬ ಸುಮ್ಮನಿರಲಿಲ್ಲ. "ಯಾರೋ ಹೇಳಿದ್ರು ಅಂತ ಸುಳ್ಳು ಸುದ್ದಿ ನಂಬ್‌ಬೇಡಿ ಪೂಜಾರಪ್ಪ. ನಿಮ್ಮ ಮಗಳನ್ನ ನಾನು ಚನ್ನಾಗ್

ನೋಡ್ಕೋತೀನಿ" ಎಂದು ವಿನಯದಿಂದಲೇ ಹೇಳಿದ. ಸೂರ್ಯನೂ ತನ್ನ ಮಾತು ಸೇರಿಸಿದ– "ಪೂಜಾರಪ್ಪ, ನಾಳೆ ಸಮಾಧಾನ್ವಾಗಿ ಕೂತು ಮಾತಾಡೋಣ. ಈಗ್ ಸುಮ್ನೆ ರಂಪ ಮಾಡೋದ್ ಬೇಡ." "ತಿರ್‍ಗಾ ಅದನ್ನೇ ಬೊಗುಳ್ತೀರಲ್ಲ; ನಾನು ಕುಡ್ದು ಇಂಗೆಲ್ಲ ಮಾತಾಡ್ತಿವ್ನಿ ಅಂಬ್ತಾನಾ ನೀವಿಂಗಂಬಾದು. ನಾನ್ ಕುಡೀದೇ ಇದ್ರೂನು ಇಂಗೇ ಕಣಯ್ಯ ಮಾತಾಡಾದು. ಅದೇನಿದ್ರೂ ಇವಾಗ್ಲೇ ಆಗ್ಲಿ. ಎರಡ್ರಾಗೊಂದು"– ಪೂಜಾರಪ್ಪ ಹಿಡಿದ ಪಟ್ಟು ಬಿಡಲಿಲ್ಲ.

"ಅಂಗಾರ್ ನಾನೇ ಯೇಳ್ತೀನಿ" ಎಂದು ಶಬರಿ ಸಿದ್ಧವಾದಳು. ತಿಮ್ಮರಾಯಿ "ನೀನ್ಯಾಕಮ್ಮ ಎಲ್ಲಾ ತಲೆಮ್ಯಾಲಾಕ್ಕಂಬ್ತೀಯ. ಅವ್ರವ್ರ್ ಸಂಸಾರದ್ ವಿಸ್ಯ. ಸುಮ್ಕಿರು" ಎಂದು ಎಲ್ಲೋ ನೋಡುತ್ತಾ ಹೇಳಿದ.

"ಈ ಅಟ್ಟೀರೆಲ್ಲ ಒಂದೇ ಸಂಸಾರ ಕಣಪ್ಪ. ಅದ್ಕೇ ಎಲ್ರದ್ರಿಗೇ ಏನಾರ ಒಂದಾಗ್ಬೇಕು. ಈಗೇನಾರ ಮದ್ವೇಗ್ ಒಪ್‌ದಿದ್ರೆ ಗೌರಿ ನವಾಬನ್ನ ಕೂಡಿಕೆ ಮಾಡ್ಕಂಬ್ತಾಳೆ. ಅವಾಗೇನ್ ಮಾಡ್ತೀರ?" ಎಂದು ಶಬರಿ ಕೇಳಿದಳು.

ಪೂಜಾರಪ್ಪ ಒಲೆಗೆ ಬಿದ್ದ ಹುಂಜನಂತಾದ.

"ಕೂಡಿಕೆ ಮಾಡ್ಕಮಾಕೆ ಇವ್ನೇನ್ ಊರಿಗೊಡ್ಯಾನ? ನೂರ್ ಎಕ್ರೆ ಯಜಮಾನಾನ? ಪಿತಾರಿ ತುಂಬ್ಕಂಡಿರಾ ಸಾವ್ಕಾರಾನ?"– ಕೆಂಡದಲ್ಲಿ ಸುಟ್ಟು ಸಿಟ್ಟಾದ ಮಾತುಗಳು. ಪೂಜಾರಪ್ಪನ ಪ್ರಶ್ನೆಗಳು.

ನಿಜ; ಹಿಂದೆಲ್ಲ ಕೂಡಿಕೆಯ ಸಂದರ್ಭ ಒದಗಿದ್ದು–ಶ್ರೀಮಂತರು ಬುಡಕಟ್ಟಿನ ಸುಂದರ ಹುಡುಗಿ/ಹೆಂಗಸು ಬೇಕೆಂದಾಗ. ಆಗ ಮರುಮಾತಿಲ್ಲದೆ ಕೂಡಿಕೆಯ ಶಾಸ್ತ್ರ. ಹಟ್ಟಿ ಹಿರಿಯರ ಗಟ್ಟಿಮೌನದ ಒಪ್ಪಿಗೆ.

ಪೂಜಾರಪ್ಪನ ಮಂತ್ರವೇ ಮಾತು.

ಈಗ ಪೂಜಾರಪ್ಪನ ಅಂಗಳಕ್ಕೇ ಬಂದಿದೆ ಕೂಡಿಕೆಯ ಕುಣಿಕೆ. ಆತ ತಬ್ಬಿಬ್ಬಾದ. ತಿಮ್ಮರಾಯಿಗೆ ಸುಮ್ಮನಿರಲಾಗಲಿಲ್ಲ. "ಅಗೇವ್‌ನಾಗೆ ಅಳೇದೆಲ್ಲ ಬಿದ್ದೋಗೈತೆ. ಅದನ್ ಯಾಕವ್ವ ಇವಾಗ ಸುಮ್ ಸುಮ್ಕೆ ಅಗ್ದೂ ಅಗ್ದೂ ತಗೀತೀಯ? ಇವಾಗ್ಲೆ ಎಲ್ಲಾ ಆಕೈರಾಗ್ಬೇಕು ಅಂಬ್ತ ಅಟ ಮಾಡಾದೂ ಸರ್‍ಯಾಗಾಕಿಲ್ಲ. ನಾಳೀಕೆಲ್ಲ ಕುಂತ್ಕಂಡು ಮಾತಾಡವ. ಇವಾಗೆಲ್ರು ಸುಮ್ಕೆ ವೋಗ್ರಿ." ಎಂದು ಹಿರಿತನದ ಕಂಠದಲ್ಲಿ ಹೇಳಿದಾಗ ಸಣ್ಣೀರ ಮತ್ತಿತರರು "ಅದೇ ಸರಿ ಕಣಜ್ಜ" ಎಂದರು. ಹುಚ್ಚೀರ ತಲೆಯಾಡಿಸಿದ. ಸೂರ್ಯ "ಏನೇ ತೀರ್ಮಾನ ಆದ್ರೂ ಎಲ್ರೂ ಒಟ್ಟಿಗೇ ತಗೋಬೇಕು. ಅದು ಹಟ್ಟಿ ತೀರ್ಮಾನ ಆಗ್ಬೇಕು." ಎಂದ. ಪೂಜಾರಪ್ಪ "ನೀವೆಲ್ಲ ಏನ್ ಮಾಡ್ತೀರ ಅಂಬ್ತ ನಂಗೊತ್ತು. ಹಾಳಾಗೋಗ್ತೀನಿ ಅಂಬ್ತ ಹಟ ಹಿಡುದ್ರೆ ಹಾಳ್‌ಬಾವಿ

ತೋರ್ಸಿ ತೆಪ್ಪಗಾಗ್ತೀನಿ . ಆಟೇಯ" ಎಂದು ಸಿಡಿಮಿಡಿಯಿಂದ ಒಳಗೆ ಹೋಗಿ ಈಚಲು ಚಾಪೆ ತಂದು ಹಾಸಿ ಅದರ ಮೇಲೆ ಮಲಗಲು ಸಿದ್ಧನಾದ.

ಎಲ್ಲರೂ ಚದುರಿದರು.

ಗೌರಿ ಕಣ್ಣೀರು ಒರೆಸಿಕೊಳ್ಳುತ್ತ ಒಳಗೆ ಹೋದಳು.

* * *

ಬೆಳಗು ಬಿಗುವಾಗಿತ್ತು.

ಕೆಲವರು ಕೆಲಸಗಳಿಗೆ ಹೋದರು. ಕೆಲವರು ಹೋಗಲಿಲ್ಲ. ಗೌರಿ ಹೊರಗೆ ಬಾರದ್ದನ್ನು ನೊಡಿ ಶಬರಿಯೂ ಕೆಲಸಕ್ಕೆ ಹೋಗಲಿಲ್ಲ. ಇತರೆ ಹೆಂಗಸರು ಹೊರಟು ನಿಂತಿದ್ದಾಗ ಶಬರಿ "ನಾನಿವತ್ ಬರಾಕಿಲ್ಲ. ಅಂಗೇ ಒಸಿ ಯೇಳ್‌ಬಿಡ್ರಕ್ಕ" ಎಂದಳು. "ಯಾಕಕ್ಕ? ಎಂದು ಕೇಳಿದಳು ಒಬ್ಬಳು. ಇನ್ನೊಬ್ಬಾಕೆ "ಪಾಪ! ನಮ್ ಗೌರೀಗೆ ಏಟಂದ್ ಸಂಕಟ ಆಗಿರ್‍ತೈತೊ ಏನೋ. ಆಮ್ಯಾಕೇನಾರ ಮಾಡ್ಕಂಡ್ ಬಿಟ್ರೆ?" ಎಂದಳು. "ಹ್ಞೂಮತ್ತೆ. ಅರೇದುಡ್ಗಿ, ಏನಾರ ಆಗ್‌ಬಿಟ್ಟಾಳು. ನೀನಿಲ್ಲೆ ಇರು. ಬೇಕಾರ್ ನಮ್ ಕೂಲಿನಾಗೇ ನಿಂಗೂ ಒಸಿ ಕೊಡ್ತೀನಿ" ಎಂದು ಮತ್ತೊಬ್ಬಾಕೆ ಹೇಳಿದಳು. ಶಬರಿಗೆ ಕಣ್ತುಂಬಿ ಬಂತು. "ಏನಾರ ಆಗ್ಲಿ, ನಾವು ಗೌರೀನ್ ಬಿಟ್‌ಕೊಡಬಾರ್‍ದು ಕಣ್ರವ್. ಇದ್ದೆಬುದ್ದಿ ಇರಾರ್‍ನ ಕಟ್ಕಂಡು ಅವ್ಳ್ ಚಂದಾಗಿರ್‍ಲಿ. ಅಲ್ವಾ" ಎಂದು ಶಬರಿ ಹೇಳಿದಾಗ ಹೆಂಗಸರಲ್ಲಿ ಹಿರಿಯಾಕೆ ಅತ್ತಿತ್ತ ನೋಡಿ "ನಮ್ ಯೆಣ್ ಮಗ್ಳು ಸುಕ ಕಂಡ್ರೆ ನಮ್ಗೇನ್ ವೊಟ್ಟೆಕಿಚ್ಚಾ? ನೀನ್ ಒಸಿ ನಿಗಾ ಇಟ್ಕಂಡು ಇಲ್ಲೇ ಇರು. ಆಮ್ಯಾಕ್ ಸೂರ್ಯಪ್ಪನ್ ಮಕ ನೋಡ್ಕಂಡ್ ಮರ್‍ತ್ ಬಿಟ್ಟೀಯ!" ಎಂದು ತುಂಟ ನಗೆ ಚೆಲ್ಲಿ "ಬರ್ ಬರ್ರವ್ವ ವೊತ್ತಾಯ್ತದೆ" ಎಂದು ಉಳಿದವರನ್ನು ಕರೆದುಕೊಂಡು ಹೊರಟಳು. ಎಲ್ಲರ ಮುಖದಲ್ಲಿ ತುಂಟ ನಗೆ ಅಲೆಯಾಗಿ ಹರಿಯುತ್ತಿತ್ತು.

ಶಬರಿಗೆ ಚುರುಕು ಮುಟ್ಟಿಸಿದ ಸುಖ; ಆಕಾರವಿಲ್ಲದ ಆನಂದ.

ತನ್ನ ಮನೆಯ ಹೊರಗೇ ನಿಂತಿದ್ದಳು ಶಬರಿ.

ನೋಟವೆಲ್ಲ ಗೌರಿಯ ಮನೆಯ ಮೇಲೆ.

ಮರದ ಮೇಲೆ ಕೂತು ಕೂಗುವ ಕಾಗೆಗಳು.

ಹಟ್ಟಿಯಲ್ಲಿ ಮೂಸುತ್ತ ಓಡಾಡುವ ನಾಯಿಗಳು.

ಗೂಡೆಯಿಂದ ಹೊರಬರಲು ಹವಣಿಸುವ ಕೋಳಿಮರಿಗಳು.

ಅಂಗಳದಲ್ಲಿ ಹರಿದಾಡುವ ಹುಳಗಳನ್ನು ಕುಕ್ಕಿ ಹಿಡಿಯುವ ಹುಂಜಗಳು.

ಕಟ್ಟೆಯ ಮೇಲೆ–ಮಾರಮ್ಮನ ಮೂರ್ತಿ. ಅದರ ಮೇಲೆ ಬಿದ್ದ ಎಲೆಗಳು.

ಬೀಸುವ ಗಾಳಿಗೆ ಹೊಯ್ದಾಡುವ ರೆಂಬೆಗಳು.
ಅಲುಗಾಡುವ ಗುಡಿಸಲ ಗರಿಗಳು.
ಕಿಚಕಿಚ ಕೂಗುತ್ತಿದ್ದವು ಕೋಳಿಮರಿಗಳು–ಹಟ್ಟಿ ಮನಸ್ಸುಗಳು.

ಶಬರಿ ಗೌರಿಯ ಗುಡಿಸಲಿನ ಬಳಿಗೆ ಬಂದಳು. ಒಳಗೆ ಅಪ್ಪ–ಮಗಳ ನಡುವೆ ಮಾತುಕತೆ ನಡೆಯುತ್ತಿತ್ತು. ಪೂಜಾರಪ್ಪ "ನೀನ್ ಏನೇ ಯೇಳಿರೂ ನಂಗ್ ಸರ್‌ಬರಾಕಿಲ್ಲ. ಕೂಡಿಕೆ ಮಾಡ್ಕಂಡು ಅವ್ನ್ ಜತ್ಯಾಗೇ ಆಳಾಗೋಗು." ಎಂದು ಸಿಡಿಮಿಡಿಗುಡುತ್ತಿದ್ದ.

"ಅಂಗಲ್ಲಪ್ಪ, ನಾನು ನಿಂಗ್ ಯಾವತ್ತೂ ಅನ್ನೇಯ ಮಾಡಾಕಿಲ್ಲ. ನಾವಿಬ್ರೂ ನಿನ್ ಚಂದಾಗ್ ನೋಡ್ಕಂಬ್ತೀವಿ. ಅತ್ಲ್ ಕಡ್ಡಿ ಎತ್ತಿ ಇತ್ಲಾಗ್ ಇಡಬ್ಯಾಡ ನೀನು. ಅಂಗ್ ಸುಕವಾಗಿಟ್ಟಿರ್ತೀವಿ. ನೀನೇ ಮುಂದ್ ನಿಂತು ಮದ್ವೆ ಮಾಡಪ್ಪ. ನಿನ್ ಮಗಳು ಓದು ಬರಾ ತಿಳ್ಕಂಡಿರೊ ದೊಡ್ಡ ಮನ್ಸನ್ ಮದ್ವೆ ಆಗಾದು ನಿಂಗೂ ಕೋಡ್ ಮೂಡ್ದಂಗಲ್ವೇನಪ್ಪ" ಎಂದು ಗೌರಿ ವಿಧವಿಧವಾಗಿ ಒಪ್ಪಿಸುವ ಪ್ರಯತ್ನ ಮಾಡುತ್ತಿದ್ದಳು.

"ದೊಡ್ ಮನಸ್ರು ಊರಾಗವ್ರೆ–ಒಡೇರು, ಜೋಯಿಸ್ರು, ಇವ್ನೇನ್ ದೊಡ್ಡ ಮನ್ಸ ಅಲ್ಲ ನಂಗೆ"– ಎಂದ ಪೂಜಾರಪ್ಪ.

"ಆ ದೊಡ್ ಮನುಸ್ರು ಎಂದಾನ ನಮ್ ಕಷ್ಟ ಸುಕ ವಿಚಾರಿಸ್ಕಂಡವ್ರ? ಗುಡಿಸ್ಲಾಕ್ ಬಂದು ಹರಕ್‌ಚಾಪೆ ಮ್ಯಾಲ್ ಕುಂತ್ಕಂಡವ್ರ? ಈ ನವಾಬು ನಮ್ಮೊನೆ ಆಗಿಲ್ವ?"–ಗೌರಿ ಕೇಳಿದಳು.

ಪೂಜಾರಪ್ಪ ಗಂಟಿಕ್ಕಿದ ಮುಖದಲ್ಲಿ ಮೇಲೆದ್ದ. "ಒಡೇರ್‌ತಾವ ವೋಗ್ ಬತ್ತೀನಿ" ಎಂದ.

"ನೀನೇನಾರ ಅವ್ರ್ ಯೇಳ್ದಂಗ್ ಕೇಳಿರೆ ನೀನ್ ಬರಾದ್ರಾಗೆ ನಾನ್ ಯೆಣ ಆಗಿರ್ತೀನಿ. ಬರ್ವಾಗ ಅಂಗೇ ಗುಂಡಿ ತೋಡಿ, ಅವ್ರ್‌ತಾವೆ ಚಟ್ಟ ಕಟ್ಟಿಸ್ಕಂಡ್ ಬಾ" ಎಂದು ಹೇಳಿದ ಗೌರಿ ಗದ್ಗದಿತಳಾದಳು.

ಪೂಜಾರಪ್ಪ ರೊಯ್ಯನೆ ಹೊರಟ.

ಹೊರಗೆ ಬಂದಾಗ ಅಲ್ಲಿ ನಿಂತಿದ್ದ ಶಬರಿಯನ್ನು ಹುರಿದುಮುಕ್ಕುವಂತೆ ನೋಡಿದ. "ಅದೇನೊ ಯೆಣ ಆಗ್ತಾಳಂತೆ ಯೆಣ; ನೋಡು" ಎಂದು ಸಿಟ್ಟಿನಲ್ಲಿ ಹೇಳಿ ಹೊರಡುವಾಗ ಸಂಕಟ ಕಾಡತೊಡಗಿತು.

ಶಬರಿ "ಆಗ್‌ಬಾರದ್ದೇನೂ ಆಗಿಲ್ಲ. ಸುಮ್ಕೆ ಇಬ್ರೂ ಸಂಕಟ ಪಟ್ಕಂಡು ಒಳೊಳ್ಗೇ ಯಾಕ್ ಸುಟ್ಕೋಗ್ತೀರ" ಎಂದು ನೋವಿನಿಂದ ಹೇಳಿದಳು.

ಪೂಜಾರಪ್ಪ ಮಾತಾಡಲಿಲ್ಲ. ಒತ್ತಿ ಬರುವ ಕಣ್ಣೀರನ್ನು ಒರೆಸಿಕೊಂಡು ಹೊರಟ.

ಊರ ಒಡೆಯರು ಮತ್ತು ಜೋಯಿಸರ ಬಳಿಗೆ ಹೋಗಿ ಎಲ್ಲವನ್ನೂ ಹೇಳಬೇಕೆಂದುಕೊಂಡಿದ್ದ ಪೂಜಾರಪ್ಪನ ಕಾಲುಗಳು ಮರಗಿಡಗಳ ನಡುವಿನ ಹಾದಿಯಲ್ಲಿ ಸಾಗಿದವು. ತೋಪು ಬಂದು ತಲುಪಿದವು. ಹೊಂಗೆ–ಹುಣಿಸೆಗಳು ಬೆಳೆದ ತೋಪು.

ಬಿಸುವ ಗಾಳಿಯನ್ನು ತಂಪಾಗಿಸುವ ಹಸಿರೆಲೆಗಳು.
ಪೂಜಾರಪ್ಪನ ತುಂಬ ಬಿರುಸುಗೊಂಡ ಬಿಸಿಯಲೆಗಳು.
ಮರವೊಂದರ ಬುಡದಲ್ಲಿ, ಮಣ್ಣು ಮುರಿದು ಮೇಲೆದ್ದ ಬೇರುಗಳು.
ಹೋಗಿ ಕೂತು ಉಸ್ಸೆಂದು ಬಿಸಿಯನ್ನು ಹೊರಹಾಕಿದ.
ತಂಪು ವಾತಾವರಣಕ್ಕೆ ಹೊಂದಿಕೊಳ್ಳತೊಡಗಿದ.
ರೆಂಬೆ ಕೊಂಬೆಗಳಲ್ಲಿ ತೂರಿ ಬರುವ ತಂಗಾಳಿ
ಬುಡಕ್ಕೆ ಒರಗಿದವನಿಗೆ ಬೇರಿನ ಆಸರೆ.

ಬೇರಿನಿಂದ ಹಿಡಿದು ಕಾಂಡ ಕೊಂಬೆಗಳವರೆಗೆ ಒಂದೇ ಆಕಾರ; ಒಂದೇ ಮರ.

ಒಡೆದ ಮನಸ್ಸನ್ನು ಒಂದುಮಾಡಿಕೊಳ್ಳಲು ಪ್ರಯತ್ನಿಸಿದ.
ಮರಗಳ ನೆರಳಲ್ಲಿ, ನಡುವೆ ನುಗ್ಗಿರುವ ಬಿಸಿಲಲ್ಲಿ ಓಡಾಡಿದ.
ಮಣ್ಣಿಗೆ ಮೆತ್ತಿಕೊಂಡು ಬಿದ್ದಿದ್ದ ಬಂಡೆಯೊಂದರ ಮೇಲೆ ಮಲಗಿದ.
ಅದೇನು ನಿದ್ದೆ ಹತ್ತಿತೊ ಸಾಯಂಕಾಲದವರೆಗೆ ಏಳಲಿಲ್ಲ.
ಎದ್ದು ನೋಡಿದರೆ– ಬದಿಯಲ್ಲಿ ಹುಚ್ಚೀರ ಕೂತಿದ್ದ.

ತಾನು ತುಂಬಾ ಹೊತ್ತಿನಿಂದ ಕಾಯುತ್ತ ಕೂತಿರುವುದಾಗಿ ಸನ್ನೆ ಮೂಲಕ ತಿಳಿಸಿದ.

ಪೂಜಾರಪ್ಪನಿಗೆ ಮನಸ್ಸು ತುಂಬಿಕೊಂಡಿತು. ಹುಚ್ಚೀರನ ಬೆನ್ನುತಟ್ಟಿದ. “ನೀನು ವೋಗು ನಾನ್ ಆಮೇಲ್ ಬತ್ತೀನಿ” ಎಂದು ಪೂಜಾರಪ್ಪ ಹೇಳಿದರೂ ಹುಚ್ಚೀರ ಒಪ್ಪಲಿಲ್ಲ. “ನೀನ್ ಹೊರಡೋವರೆಗೂ ಇಲ್ಲೇ ಇರ್ತೀನಿ” ಎಂದು ಆಂಗಿಕ ಭಾಷೆಯಲ್ಲಿ ಹೇಳಿದ. ಪೂಜಾರಪ್ಪ “ಸರಿ ನಡಿ” ಎಂದು ಹೊರಟು ನಿಂತ.

ಮನೆಗೆ ಬಂದ ಪೂಜಾರಪ್ಪನನ್ನು ಗೌರಿ ಕೇಳಿದಳು– “ಒಡೇರ್ ಏನಂದ್ರು?”

"ಅವ್ರ್‌ನ್ಯಾರ್ ಕೇಳಿದ್ರು ಏನಾರ ಅಂಬಾಕೆ" ಎಂದ ಪೂಜಾರಪ್ಪ.

"ಯಾಕೆ ಊರಾಕೋಗಿರ್ಲಿಲ್ವ?"–ಗೌರಿಯ ಪ್ರಶ್ನೆ.

"ಊರಾಗೇನೈತೆ ವೋಗಾಕೆ?"–ಪೂಜಾರಪ್ಪನ ಪ್ರಶ್ನಾರ್ಥಕ ಉತ್ತರ. ಗೌರಿ ಆಶ್ಚರ್ಯದಿಂದ ನೋಡಿದಳು.

"ಏನಾರ ಇಟ್‌ಗಿಟ್ ಮಾಡಿದ್ರೆ ಉಂಬಾಕಿಕ್ಕಮ್ಮಣ್ಣಿ. ವೊಟ್ಟೆ ಚುರ್‌ಗುಟ್‌ತೈತೆ" ಎಂದು ಪೂಜಾರಪ್ಪ ಕೂತುಕೊಂಡ.

ಗೌರಿಗೆ ಹೇಳಿಕೊಳ್ಳಲಾಗದ ಭಾವನೆ. ಬೆಳಗ್ಗೆ ಸಿಟ್ಟಾಗಿ ಹೋದ ಅಪ್ಪ ಸಂಕಟವಾಗಿ ಬಂದಿದ್ದಾನೆ. ಬೆಳಗ್ಗೆ ವೈರಿಯಂತೆ ಉರಿಯುತ್ತಿದ್ದವನು ಈಗ ವೈರ ಮುರಿದ ಮನಸ್ಸಾಗಿದ್ದಾನೆ.

ಗೌರಿ ಅಪ್ಪನ ಹತ್ತಿರ ಬಂದಳು. "ನೀನಂಗ್ ಸಿಟ್ ಮಾಡ್ಕಂಡ್ ವೋದ್ರೆ ನಾನ್ ಯಾವ ಮಕ ವೊತ್ಕಂಡ್ ಅಡಿಗೆ ಮಾಡಾನ? ನೀನೇ ಯೇಳಪ್ಪ. ಇವಾಗ್ ಮಾಡ್ತೀನಿ. ಇಟ್ ಯಾಕಪ್ಪ? ಒಂದು ಪಾವು ಅಕ್ಕಿ ಐತೆ. ಅನ್ನಾನೇ ಮಾಡ್ತೀನಿ" ಎಂದು ಹೇಳುತ್ತ ಉಕ್ಕಿ ಬರುತ್ತಿರುವ ಕಣ್ಣೀರು ಒರೆಸಿಕೊಂಡು ಅಪ್ಪನನ್ನು ದಿಟ್ಟಿಸಿ ಒಲೆಯ ಬಳಿಗೆ ಬಂದಳು. ಕಟ್ಟಿಗೆಗಳನ್ನು ಇಟ್ಟು, ಮಡಿಕೆಯಲ್ಲಿ ಅಕ್ಕಿಹಾಕಿ, ನೀರು ಬೆರೆಸಿ, ಕೈಯ್ಯಾಡಿಸಿ, ಬಸಿದು ಮತ್ತೆ ನೀರು ಹಾಕಿ ಒಲೆಯ ಮೇಲಿಟ್ಟಳು.

ಉರಿಯುತ್ತಿರುವ ಒಲೆಯ ಮೇಲೆ ಕುದಿಯುವ ನೀರು.

ಮುಂದೆ ಕೂತ ಗೌರಿ; ಒಲೆಯನ್ನೊಮ್ಮೆ ಗೌರಿಯನ್ನೊಮ್ಮೆ ನೋಡುವ ಅಪ್ಪ.

ಕುದಿವ ನೀರಲ್ಲಿ ಅರಳಿದ ಅಕ್ಕಿ ಅನ್ನವಾಯಿತು.

ಕುದಿಯುತ್ತಿದ್ದ ಮೌನ ಮಾತಾಯಿತು.

"ಅನ್ನ ಆತು ಕಣಪ್ಪ. ಕೈ ತೊಳ್ಕ. ಉಂಬೀವಿಂತೆ"– ಗೌರಿ ಪ್ರೀತಿಯಿಂದ ಕರೆದಳು.

"ನೀನೂ ಕುಂತ್ಕ. ಇಬ್ರೂ ಉಂಬಾನ" ಎಂದು ಪೂಜಾರಪ್ಪ ಮೇಲೆದ್ದ.

ಗೌರಿ ಅಪ್ಪನ ಮುಖ ನೋಡಿದಳು. "ಯಾಕಂಗ್ ನೋಡ್ತೀಯ? ಒಟ್ಗೆ ಉಂಬಾನ ಅಂದೆ. ಕೇಳುಸ್ಲಿಲ್ವ?" ಎಂದು ಗಡುಸಾಗಿ ಹೇಳಿದ.

"ನಿಂಗ್ ಉಂಬಾಕಿಕ್ಕಿ ಆಮ್ಯಾಕ್ ನಾನುಂಬ್ತೀನಿ ಕಣಪ್ಪ' ಎಂದಳು ಗೌರಿ.

"ಮುಂದೆ ಜತ್ಯಾಗ್ ಉಂಬಾಕೆ ಆಗ್ತೈತೊ ಇಲ್ವೊ ಅದಕ್ ಅಂಗಂದೆ ಕಣವ್ವ" ಎಂದು ಹೇಳುವಾಗ ಪೂಜಾರಪ್ಪನ ಗಂಟಲು ಉಬ್ಬಿಕೊಂಡಿತ್ತು.

"ಅದ್ಯಾಕಪ್ಪ ಅಂಗಂಬ್ತೀಯ"– ಗೌರಿಯದೂ ಅದೇ ಧ್ವನಿಸ್ಥಿತಿ.

"ಯಾಕೂ ಇಲ್ಲ ಕಣವ್ವ. ಸುಮ್ಕೆ ಅಂಗಂದೆ" ಎಂದು ಕೈತೊಳೆದುಕೊಂಡು ಬಂದು ಊಟಕ್ಕೆ ಕೂತ.

ಮನಸಾರೆ ಊಟ ಮಾಡಿದ. ಹೊರಬಂದು ಕಟ್ಟೆಯ ಮೇಲೆ ಕೂತ. ಊಟ ಮಾಡಿದ ಮೇಲೆ ಕೆಲವರು ಗುಡಿಸಲುಗಳಿಂದ ಹೊರಬಂದು ಪೂಜಾರಪ್ಪನನ್ನು ನೋಡಿ ಒಳಹೋದರು. ಇನ್ನು ಕೆಲವರು ಎದುರಿಗೇ ಓಡಾಡಿದರು. ಮಾತನಾಡಿಸಲಿಲ್ಲ. ತಿಮ್ಮರಾಯಿ ಹೊರಬಂದು ಬಾಗಿಲಲ್ಲಿ ಕೂತುಕೊಂಡ. ಆದರೆ ಪೂಜಾರಪ್ಪನನ್ನು ಮಾತನಾಡಿಸುವ ಗೊಡವೆಗೆ ಹೋಗಲಿಲ್ಲ. ಹುಚ್ಚೀರ ಹತ್ತಿರಕ್ಕ ಹೋಗಲೊ ಬೇಡವೋ ಎಂದು ಅತ್ತಿತ್ತ ನೋಡುತ್ತಿದ್ದ.

ಪೂಜಾರಪ್ಪನಿಗೆ ತಾನು ಇಷ್ಟು ಒಂಟಿಯೆ ಎನ್ನಿಸಿತು. ಯಾಕೆ ಯಾರೂ ಹತ್ತಿರ ಬರುತ್ತಿಲ್ಲ? ಮಾತನಾಡಿಸುತ್ತಿಲ್ಲ? ಇವರೆಲ್ಲರೊಂದಿಗೆ ಮಾತನಾಡಬೇಕೆಂದೇ ಇಲ್ಲಿ ಬಂದು ಕೂತಿದ್ದೇನೆ; ಮನಸ್ಸಿನಲ್ಲಿರುವುದನ್ನ ಹೇಳಿ ಹಗುರವಾಗಬೇಕೆಂದು ಕೊಂಡಿದ್ದೇನೆ. ಆದರೆ... ಹಟ್ಟಿಯಲ್ಲಿ ಒಂಟಿ... ಎಂಥ ಯಾತನೆ!

"ಸೂರ್ಯಪ್ಪ"– ಪೂಜಾರಪ್ಪ ಗಟ್ಟಿಯಾಗಿ ಕೂಗಿದ.

ಸೂರ್ಯ ಗುಡಿಸಲಿನಿಂದ ಹೊರಗೆ ಬಂದ; ನೋಡಿದ. ಆದರೆ 'ಯಾಕೆ ಕರೆದದ್ದು?' ಎಂದು ಕೇಳಲಿಲ್ಲ.

ಪೂಜಾರಪ್ಪನೇ ಮಾತಿಗೆ ಮುಂದಾದ "ನಾನ್ ಒಸಿ ಮಾತಾಡದೈತೆ."

ಆಗ ಶಬರಿ ಹೊರಬಂದು ಕೇಳಿದಳು– "ಮಾತಾಡಾದೈತೊ ಜಗಳಾಡಾದೈತೊ?"

"ನಾನೂ ನಿಮ್ಮಂಗೇ ಒಬ್ ಮನ್ಸ. ಮಾತು ಅಂದ್ರೆ ಮಾತು; ಜಗಳ ಅಂದ್ರ ಜಗಳ" ಎಂದು ಪೂಜಾರಪ್ಪ ಬೇಸರದಿಂದಲೇ ಹೇಳಿದ.

"ಜಗಳ ಆಡಿ ಉಂಡಿರಾದೆಲ್ಲ ಕರಗಿಸ್ಕಂಬೇಕು ಅಂಬ್ತ ಇದ್ದೀಯೇನೊ" ಎಂದು ಶಬರಿ ಕುಟುಕಿದಳು.

ಆಗ ಹೊರಬಂದ ಗೌರಿ "ಅಂಗೆಲ್ಲ ಅನ್‌ಬ್ಯಾಡ. ಅಪ್ಪಯ್ಯಂಗೆ ಏನೋ ಯೇಳಾದೈತೆ. ಆಗ್ನಿಂದ ಒದ್ದಾಡ್ತ ಇರಾದ್ ನೋಡ್ತಾ ಇವ್ನಿ ನಾನು" ಎಂದಳು.

ಸೂರ್ಯನಿಗೆ ಶಬರಿ ಒರಟಾಗಿ ಮಾತಾಡುವುದು ಸರಿಕಾಣಲಿಲ್ಲ. "ಇಂಥ ವಿಷ್ಯದಲ್ಲಿ ಒರಟಾಗಿರ್‌ಬಾರ್ದು ಶಬರಿ. ಪೂಜಾರಪ್ಪ ನಮ್ಗೇನ್ ವೈರೀನ? ಇದೇ ಹಟ್ಟಿ ಮನುಷ್ಯ." ಎಂದು ಸಮಾಧಾನದಿಂದ ಹೇಳಿದ.

ಈ ಮಾತಿನಿಂದ ಪೂಜಾರಪ್ಪ ಉತ್ತೇಜಿತನಾದ. "ಉಂಡಿದ್ ಮುಗ್ದಿದ್ರೆ ಎಲ್ರೂ ಬರ್ರಿ. ಯೆಂಗುಸ್ರು, ಗಂಡುಸ್ರು ಎಲ್ಲಾರು" ಎಂದು ಕರೆದ.

ಒಬ್ಬೊಬ್ಬರೇ ಬಂದರು. ಕೆಲವರು ಕೂತರು; ಕೆಲವರು ನಿಂತರು. ಸೂರ್ಯ ಹತ್ತಿರ ಬಂದ; ಪೂಜಾರಪ್ಪ ಗೌರಿಯ ಕಡೆ ನೋಡಿದ. ದೂರದಲ್ಲಿ ನಿಂತಿದ್ದ ನವಾಬನನ್ನು ದಿಟ್ಟಿಸಿದ. ನಿಧಾನವಾಗಿ ಮಾತಿಗೆ ಶುರುಮಾಡಿದ.

"ಎಲ್ಲಾ ಯೋಚ್ನೆ ಮಾಡಿವ್ನಿ. ನಾನ್ ಯೆಚ್ಗೆ ಏನೂ ಯೇಳಾಕಿಲ್ಲ. ನನ್ ಮಗಳಿಗೆ ಅಮ್ಮ ಇಲ್ಲ. ಅದೂ ನಿಮ್ಗೂ ಗೊತ್ತೈತೆ. ಇವಾಗ್ ಹಟ್ಟಿನಾರೆಲ್ಲ ಅಮ್ಮ ಆಗ್‌ಬೇಕು. ನಮ್ ಗೌರಿ ಮದ್ವೆ ಮಾಡ್‌ಬೇಕು."

ಯಾರಿಗೂ ಮಾತು ಹೊರಡಲಿಲ್ಲ. ಬೀಸುತ್ತಿದ್ದ ಗಾಳಿಗೆ ಗರ ಬಡಿದಂತೆ ಸದ್ದಿಲ್ಲದೆ ಇದ್ದರು. ಕಡೆಗೆ ಸೂರ್ಯ ಕೇಳಿದ–"ಮದ್ವೆ ಯಾರ್ ಜೊತೆ?"

"ಇನ್‌ಯಾರ್ ಜತೆ ಮಾಡಾಕಾಯ್ತದೆ? ನನ್ ಮಗ್ಳು ಯಾರ್‌ಜತೆ ಅಂಬ್ತಾಳೊ ಅವ್ರ್‌ಜತೆ."

ಹಟ್ಟಿ ಆನಂದವಾಯಿತು

ಗುಜುಗುಜು ಆರಂಭವಾಯಿತು.

ಇದು ನಿಜವೆ? ಪೂಜಾರಪ್ಪ ಮತ್ತೇನೊ ಮರೆಮಾಚಿ ಹೀಗೆಲ್ಲ ಮಾತಾಡುತ್ತಿದ್ದಾನೆಯೆ? ಇದರಲ್ಲಿ ಸಂಚೇನಾದರೂ ಇದೆಯೆ?

ಸಣ್ಣೀರ ಕೇಳಿಯೇ ಬಿಟ್ಟ–"ಇದೆಂಗಣ್ಣ ನಂಬಾದು? ಇದೇನ್ ನನ್ ಕಿವೀನೊ ಅಲ್ವೊ ಅಂಬ್ತಾ ಅನ್ಮಾನ ಆಗ್ತಾ ಐತೆ?"

ಪೂಜಾರಪ್ಪ ನೋವಿನಿಂದ ಚಡಪಡಿಸಿದ – "ನೀವೆಲ್ಲ ನಂಬ್ ಬೇಕಾರೆ ಏನ್ ಮಾಡ್ಬೇಕು ಯೇಳ್ರಿ. ನನ್ ಮಗಳಾಣೆಗೂ ನಾನೇಳಾದ್ ದಿಟ. ಈ ಮಾರಮ್ ದ್ಯಾವ್ರಾಣೇಗೂ ದಿಟ" ಎಂದು ಒತ್ತಾಯಪೂರ್ವಕವಾಗಿ ಹೇಳಿದ.

"ಆಮ್ಯಾಕ್ ಒಡೇರ್ ಬ್ಯಾಡ ಅಂದ್ರು ಅಂಬ್ತ...." ಒಬ್ಬ ರಾಗ ಎಳೆದ.

ಪೂಜಾರಪ್ಪ ಕೂಡಲೇ–"ಗೌರಿ ನನಿಗುಟ್‌ದೋಳು ಕಣೋ, ಒಡೇರ್‌ಗ್ ಉಟ್‌ದೋಳಲ್ಲ." ಎಂದು ಗಟ್ಟಿಯಾಗಿ ಹೇಳಿದಾಗ ನಂಬಿಕೆಯ ಕಟ್ಟೆ ತುಂಬಿ ಹಟ್ಟಿಯಲ್ಲಿ ರೋಮಾಂಚನ.

* * *

ಹಟ್ಟಿಯಲ್ಲಿ ಹೇಳಿದಷ್ಟೇ ಗಟ್ಟಿಯಾಗಿ ಒಡೆಯರು ಮತ್ತು ಜೋಯಿಸರ ಎದುರು ಹೇಳಲಾಗಲಿಲ್ಲ. "ಇರಾ ಒಬ್ ಮಗ್ಳನ್ನ ಎಂಗ್ ಕಳ್ಕಂಬ್ಲಿ ದಣೇರ" ಎಂದು ವಿವರಿಸಿದ. ನರಸಿಂಹರಾಯಪ್ಪ ಮೊದಲು ರೇಗಿದರೂ ಆನಂತರ – "ಆಳಾಗಿ ವೋಗ್ಲಿ ಬಿಡು. ನಾನೇನ್ ಮದ್ವೆ ಆಗಬೇಕಾ ನಿನ್‌ಮಗ್ಳನ್ನ" ಎಂದ. ಆದರೆ ಜೋಯಿಸರು–"ನಮ್ ಸಂಪ್ರದಾಯದ್ ಗತಿಯೇನಯ್ಯ? ಅವ್ನು

ನಿಖಾಗಿಖಾ ಅಂದು ನಮ್ಮನ್ನೆಲ್ಲ ಮಿಕಾ ಮಾಡ್‌ಬಿಟ್ಟಾನು. ಲಾಗಾಯ್ತಿನಿಂದ ಹೇಗ್ ನಡೀತಾ ಇತ್ತೊ ಹಾಗೆ ಆಗ್ಬೇಕು. ನಿಮ್ ಸಂಪ್ರದಾಯ ನೀವ್ ಬಿಡ್‌ಬಾರ್ದು. ಅದ್ರಲ್ಲೂ ಮೊದಲನೆ ರಾತ್ರೀನ ನಿನ್ ಮಗ್ಳು ದೇವಸ್ಥಾನದಲ್ಲಿ ದೇವರ ಜೊತೆ ಕಳೀಬೇಕು... ಏನಂತೀರ ನರಸಿಂಹರಾಯಪ್ಪ?" ಎಂದು ಕೇಳಿದಾಗ ಅವರು "ಅಂಬಾದೇನೈತೆ? ನೀವಂದಂಗೇ ನಾನಂಬಾದು" ಎಂದರು. ಜೋಯಿಸರು "ಗೊತ್ತಾಯ್ತೇನೊ ಪೂಜಾರಪ್ಪ?" ಎಂದು ಆತನ ಮುಖ ನೋಡಿದರು. ಪೂಜಾರಪ್ಪ "ನೀವೇಳಿದ್ದೆಲ್ಲ ಅವ್ರ್‌ಗೇಳ್ತೀನಿ" ಎಂದ. ನರಸಿಂಹರಾಯಪ್ಪ ರೇಗಿದ– "ಯೇಳ್ತೀನಿ ಅಂಬ್ತೀಯಲ್ಲೊ ಮಾಡ್ತೀನಿ ಅನ್ಬೇಕು."

ಪೂಜಾರಪ್ಪ "ಯೇಳ್ತೀನಿ ದಣೇರ. ಅವ್ರೆಲ್ಲ ಒಟ್ಗೆ ಆಗಿ ನನ್ನೇ ಒಂಟಿ ಮಾಡಿರೆ–, ಮಾಡೇ ಮಾಡ್ತೀನಿ ಅಂಬ್ತ ಯೆಂಗ್ ನಿಮ್ಗೇಳಾದು" ಎನ್ನುತ್ತ ಚಿಂತೆಯಿಂದಲೇ ಹೊರಟುನಿಂತ.

ನರಸಿಂಹರಾಯಪ್ಪ ಗದರಿದ–"ನಾವೇಳ್ದಂಗ್ ಕೇಳ್ದಿದ್ರೆ ಊರಾಗ್ ಕಾಲಿಡ್ತಾಕಿಲ್ಲ. ಕೂಲಿಕೆಲ್ಸಕ್ಕೆ ನಿಮ್ಮಟ್ಟಿನಾಗಿರಾ ಒಂದ್ ನರಪಿಳ್ಳೇನೂ ಕರ್‍ಯಾಕಿಲ್ಲ."

ಕೇಳಿಸಿದರೂ ಕೇಳಿಸದಂತೆ ಪೂಜಾರಪ್ಪ ನಿಧಾನವಾಗಿ ನಡೆದ. ಕಾಲು ಕರೆದೊಯ್ದ ಕಡೆ ಹೊರಟ. ಸೀದಾ ಅದೇ ತೋಪಿಗೆ ಬಂದಿದ್ದ. ಅದೇ ಮರಗಳು, ಅದೇ ಬುಡಗಳು; ಅದೇ ಬೇರುಗಳು; ಅದೇ ಹಸಿರೆಲೆಗಳು.

ಕಾದ ಕರುಳಿಗೆ ಮರಗಳ ನೆರಳು.

ಭಾವಕೋಶದಲ್ಲಿ ಬಿಗಿಯಾದ ಬೇರುಗಳು.

ಪೂಜಾರಪ್ಪ ತೋಪಿನ ತುಂಬಾ ಓಡಾಡಿದ. ಸಾಕಾದಾಗ ಕೂತ. ಒಂಟಿ ಯಾತನೆಯ ಸುಳಿಯಿಂದ ಹೊರಬರುವ ಒತ್ತಾಸೆಯಿಂದ ಎದ್ದುನಿಂತ. ಹಟ್ಟಿಯಲ್ಲಿ ಒಂಟಿಯಾಗುವುದು, ಊರಿನಿಂದ ಉಚ್ಚಾಟನೆಗೊಳ್ಳುವುದು– ಎಂಥ ಇಕ್ಕಟ್ಟು!

ಹಟ್ಟಿಗೆ ಬಂದವನು ಊರ ಒಡೆಯರ ಆದೇಶವನ್ನು ವಿವರಿಸಿದ. ನಿಜ ಹೇಳಬೇಕೆಂದರೆ ಹಿಂದಿನ ಕಟ್ಟುಪಾಡುಗಳನ್ನು ಮೀರಲು ತನಗೂ ಇಷ್ಟವಿಲ್ಲವೆಂದು ಪ್ರಾಮಾಣಿಕವಾಗಿ ಹೇಳಿದ. ಮದುವೆಗೆ ಹೇಗಿದ್ದರೂ ಒಪ್ಪಿರುವುದರಿಂದ ಎಲ್ಲವೂ ಹಿಂದಿನಂತೆ– ಸಂಪ್ರದಾಯಬದ್ಧವಾಗಿ ನಡೆಯಲಿ, ತನ್ನ ಮಗಳು ಮೊದಲರಾತ್ರಿಯನ್ನು ದೇವಸ್ಥಾನದಲ್ಲಿ ಕಳೆಯಲಿ ಎಂದು ವಾದಿಸಿಯೂ ಬಿಟ್ಟ.

ಸೂರ್ಯ "ಅದೊಂದ್ ಮಾತ್ರ ಸಾಧ್ಯವಿಲ್ಲ" ಎಂದ.

ಹಟ್ಟಿಯ ಜನರು ಪ್ರತಿಕ್ರಿಯಿಸಲಿಲ್ಲ. ಅವರ ಮೌನ, ಸೂರ್ಯನಿಗೆ ಅರ್ಥವಾಯಿತು. "ಯಾಕೆ ನಿಮ್ಗೆಲ್ಲ ಭಯಾನ? ಹೇಳಿ ಬಾಯ್‌ಬಿಟ್ ಹೇಳಿ.

ಯಾವ್ದನ್ನೂ ನಿಮ್ ಒಪ್ಪಿಗೆ ಇಲ್ದೆ ನಾವ್ ಮಾಡೊಲ್ಲ" ಎಂದು ಒತ್ತಾಯಿಸಿದ. ಆಗ ಒಬ್ಬರಿಗೊಬ್ಬರು ಮುಖನೋಡಿಕೊಂಡರು. ಸಣ್ಣೀರ ಮೊದಲು ಬಾಯಿಬಿಟ್ಟ.

"ನೋಡು ಸೂರ್ಯಪ್ಪ, ಗೌರಿ–ನವಾಬಣ್ಣ ಮದ್ವೆ ಆಗಾಕೆ ನಾವೆಲ್ಲ ಒಪ್ಕಂಡ್ವಿ. ಆದ್ರೆ ಹಳೇದೆಲ್ಲ ಬಿಡಾದು ಅಂದ್ರೆ ಎಂಗೆ? ನಮ್ ಯೆಂಡ್ರೆಲ್ಲ ಮದಲ್ನೇ ರಾತ್ರಿ ದ್ಯಾವ್ರ ಗುಡ್ಯಾಗ್ ಇದ್ ಬಂದಿಲ್ವ?"

ಮತ್ತೊಬ್ಬ ಮಾತು ಮುಂದುವರೆಸಿದ. "ಊಂಕಣಪ್ಪ, ಆಮ್ಯಾಕ್ ಒಂದ್ ವೋಗಿ ಇನ್ನೊಂದಾದಾತು. ದ್ಯಾವ್ರಿಗ್ ಸಿಟ್‌ಬಂದು ಹಟ್ಟೀಗೆಲ್ಲ ಕೆಟ್ಟುದ್ ಆಗ್ ಬಿಟ್ಟಾತು."

"ಆ ಚಂದ್ರ, ರಕ್ತ ಕಾರ್ಕಂಡ್ ಸಾಯ್ಲಿಲ್ವ? ನವಾಬಣ್ಣನೂ ಅಂಗೇ ಆಗ್ಬೇಕ?"– ಮತ್ತೊಬ್ಬನ ಪ್ರಶ್ನೆ.

ಆಗ ಹೆಂಗಸೊಬ್ಬಳು "ನಮ್ ಗೌರೀಗೆ ಅಂತಾ ಗತಿ ಬರಾದ್ ಬ್ಯಾಡ ಕಣಪ್ಪ. ಇವಾಗ್ ಸ್ಯಬರಿ ಬಾಳ್ ನೋಡ್ತಿರಾದೆ ಸಾಕು" ಎಂದು ಹೇಳಿದಳು.

ಸೂರ್ಯ–"ನವಾಬಂಗೂ ಏನೂ ಆಗಲ್ಲ. ಹಟ್ಟಿಗೂ ಏನೂ ಆಗಲ್ಲ" ಎಂದು ಧೈರ್ಯ ಹೇಳಿದ.

ನವಾಬ "ನನಿಗ್ ಧೈರ್ಯ ಇದೆ. ನಂಗೇನೂ ಆಗಲ್ಲ. ನಾವೆಲ್ಲ ಸುಖವಾಗಿರ್ತೀವಿ. ನೀವ್ ಚಿಂತೆ ಮಾಡ್‌ಬೇಡಿ" ಎಂದ.

"ನಮ್‌ನಮ್ ವಿಸ್ಯ ಆದ್ರೆ ಗುಂಡಿಗೆ ಗಟ್ಟಿಮಾಡ್ಕಬವ್ದು. ಇದು ದ್ಯಾವರ್ ವಿಸ್ಯ ಕಣಪ್ಪ" ಎಂದು ಪೂಜಾರಪ್ಪ ಹೇಳಿದಾಗ ಅನೇಕರು ಮೌನವಾಗಿ ಸಮ್ಮತಿಸಿದರು.

ಸೂರ್ಯ ಸುಮ್ಮನಾಗಲಿಲ್ಲ. ತನ್ನ ವಿಚಾರವನ್ನು ಕೈಬಿಡಲಿಲ್ಲ. ಸತ್ಯದ ಸ್ಫೋಟಕ್ಕೆ ಇದು ಸರಿಯದ ಸಂದರ್ಭ ಎಂದು ಆತನಿಗೆ ಗೊತ್ತಿತ್ತು.

"ನೋಡಿ, ಆವತ್ನಿಂದ ನಾನ್ ಹೇಳ್ತಿದ್ದೀನಿ. ಅದ್ರಲ್ಲೇನೊ ಮೋಸ ಇದೆ. ಆವತ್ತು ನಡೆದದ್ದೇನು? ಚಂದ್ರ ಅಲ್ಲಿಗೆ ಹೋದ. ಯಾಕ್ ಹೇಳಿ? ಮೊದಲು ಶಬರಿ ಹೋಗಿದ್ಲು. ಅದಕ್ಕೆ ಅಂತ ಹೋದ. ಈಗ ಹೆಣ್ಣು ಹೋಗೋದ್ ಬೇಡ. ಗಂಡೂ ಹೋಗೋದ್ ಬೇಡ. ಆದ್ರಿಂದ ಯಾರೂ ಸಾಯೋ ಪ್ರಶ್ನೇನೇ ಬರೊಲ್ಲ. ಇಷ್ಟಕ್ಕೂ ದೇವರಿಗೆ ನೀವೆಲ್ಲ ಮಕ್ಕಳಿದ್ದಂತೆ. ಹೆಂಗಸ್ರಿಗೆಲ್ಲ ದೇವರು ತಂದೆ ಇದ್ದಂತೆ. ತಂದೇನೇ ಮಗಳ ಜೊತೆ ಮಲಗ್ಬೇಕು ಅಂತ ಬಯ್ಸೋದೆಲ್ಲಾದ್ರೂ ಉಂಟಾ? ನೀವೇ ಯೋಚ್ನೆ ಮಾಡಿ. ಪೂಜಾರಪ್ಪ ಮೊದ್ಲು ರೇಗಾಡಿದ್ರೂ ಕಡೆಗೆ ಈ ಮದ್ವೇಗೆ ಯಾಕ್ ಒಪ್ಕೊಂಡಿದ್ದು ಹೇಳಿ. ಮಗಳು ಸುಖವಾಗಿರ್ಲಿ ಅಂತ

ಅಲ್ವಾ? ದೇವರಾದ್ರೂ ಅಷ್ಟೆ. ಮಗಳು ಸುಖವಾಗಿರ್ಲಿ ಅಂತ ಬಯಸ್ತಾನೆಯೇ ಹೊರ್ತು ಸೂಳೆ ಆಗ್ಲಿ ಅಂತ ಬಯ್ಸಲ್ಲ. ಏನಂತೀರ?" ಸೂರ್ಯ ಭಾವತುಂಬಿದ ಮಾತುಗಳನ್ನು ಆಡಿದಾಗ ಅವರೆಲ್ಲ ಮೂಕರಾಗಿ ಕೂತಿದ್ದರು. ಹೆಂಗಸರ ಮನಸ್ಸುಗಳಲ್ಲಿ ಪ್ರಶ್ನೆಗಳು ಏಳುತ್ತಿದ್ದವು. ದೇವರು ತಮ್ಮನ್ನೇಕೆ 'ಸೂಳೆ' ಮಾಡಬಯಸುತ್ತಾನೆ ಎಂದು ಯೋಚಿಸುತ್ತಿದ್ದರು. ಸೂರ್ಯ ಮಾತು ಮುಂದುವರೆಸಿದ–

"ನನಗನ್ಸುತ್ತೆ, ಹಿಂದೆ ಯಾರೊ ಕತೆ ಕಟ್ಟಿ ಈ ಹೆಂಗಸರನ್ನ ದುರುಪಯೋಗ ಮಾಡ್ಕೊಂಡಿದಾರೆ. ಮತ್ತೆ ಯಾರೊ ಈಗ್ಲೂ ಅದನ್ನ ಮುಂದುವರ್ಸಿದಾರೆ. ಹೆಣ್ಣು ಗುಡೀಗ್ ಹೋಗೋಕ್ ಮುಂಚೇನೇ ಯಾರೋ ಸೇರ್ಕೊಂಡಿರ್ತಾರೆ. ಕತ್ಲಲ್ಲಿ ಗರ್ಭಗುಡಿಯಿಂದ ಹೊರಬರ್ತಾರೆ... ಯೋಚ್ನೆ ಮಾಡಿ. ಇದ್ರಲ್ಲಿ ಏನೋ ಮೋಸ ಇದೆ. ದೇವರು ಯಾವತ್ತೂ ಮಗಳ ಜೊತೆ ಮಲಗ್‌ಬೇಕು ಅಂತ ಕೇಳೊಲ್ಲ."

ಸೂರ್ಯನ ಮಾತುಗಳನ್ನು ಎಲ್ಲರೂ ಕೇಳುತ್ತಿದ್ದಾಗ ಹುಚ್ಚೀರ ಚಡಪಡಿಸಿದ; ನೋವು ತಿನ್ನುತ್ತಿದ್ದ. ಶಬರಿ ಆತನನ್ನು ಗಮನಿಸುತ್ತಿದ್ದಳು. ಇದ್ದಕ್ಕಿದ್ದಂತೆ ಏನೋ ಹೊಳೆದಂತೆ ಶಬರಿಯ ಗುಡಿಸಲಿಗೆ ನುಗ್ಗಿದ, ಶಬರಿಯೂ ಹಿಂದೆ ಹೋದಳು. ಪುಸ್ತಕ ಎಲ್ಲಿದೆ ಎಂಬಂತೆ ಕೇಳಿದ. ಈಕೆ ಮತ್ತೆ ಏನೆಂದು ಕೇಳಿದಾಗ ನೋಟ್ ಪುಸ್ತಕ ಮತ್ತು ಪೆನ್ಸಿಲ್ಲನ್ನು ಶಬರಿಯ ಬ್ಯಾಗಿನಿಂದ ತೆಗೆದುಕೊಂಡು ಹೊರಗೆ ಬಂದ. ಸೂರ್ಯನ ಕೈಹಿಡಿದು ತನ್ನ ಕಡೆ ನೋಡಲು ಹೇಳಿದ. ಒಂದು ಹಾಳೆಯಲ್ಲಿ ಏನನ್ನೋ ಬರೆದ. ಎಲ್ಲರೂ ನೋಡುತ್ತಿದ್ದರು. ಹುಚ್ಚೀರ ಆವೇಶದಿಂದ ಬರೆಯುತ್ತಿದ್ದ ಬರೆದು ಮುಗಿಸುವವರೆಗೆ ಎಲ್ಲರೂ ಸುಮ್ಮನೆ ನೋಡುತ್ತಿದ್ದರು.

ಕಣ್ಣುಗಳಲ್ಲಿ ಕುತೂಹಲ;
ಮನಸ್ಸಿನಲ್ಲಿ ಕೋಲಾಹಲ.

ಹುಚ್ಚೀರ ತನ್ನದೇ ರೀತಿಯಲ್ಲಿ ಬರೆದು ಸೂರ್ಯನಿಗೆ ಕೊಟ್ಟ. ಅದನ್ನು ಓದಿದ ಸೂರ್ಯ ಸಂಭ್ರಮಿಸಿದ.

"ನೋಡಿ ಇಲ್ನೋಡಿ. ಓದೋದು ಬರೆಯೋದು ಕಲುತ್ರೆ ಏನ್ ಅನ್ಕೂಲ ಅನ್ನೋದಕ್ಕೆ ಈ ಹುಚ್ಚೀರಾನೇ ಸಾಕ್ಷಿ. ಈಗ ಸತ್ಯ ಹೊರ್ಗಡೆ ಬಂದಿದೆ" ಎಂದು ಸೂರ್ಯ ಕೂಗಿ ಹೇಳಿದ.

ಎಲ್ಲರೂ ಮತ್ತಷ್ಟು ಕುತೂಹಲಿಗಳಾದರು. ಕೆಲವರಂತು "ಏನದು? ಏನ್

ಬರ್ದವ್ನೆ ನಮ್ ಉಚ್ಚೀರ?" ಎಂದು ಕೇಳಿದರು.

ಹುಚ್ಚೀರ, ಅಕ್ಷರಗಳ ಕಾಗುಣಿತದಲ್ಲಿ ಅಲ್ಲಲ್ಲೆ ತಪ್ಪು ಮಾಡಿದ್ದರೂ ವಿಷಯವನ್ನು ಸರಿಯಾಗಿ ಬರೆದಿದ್ದ. ಕಾಗುಣಿತ ತಪ್ಪಾಗಿತ್ತೇ ಹೊರತು ಸತ್ಯ ತಪ್ಪಾಗಿರಲಿಲ್ಲ. "ಆವತು ಚಂದ್ರ ನಾನು ಗುಡಿಗೆ ಹೋದೆವು. ಬೀಗ ಒಡೆದು ಒಳಗೆ ಹೋದೆವು. ಒಳಗೆ ಕತಲು ಇದ್ದಾಗ ದೇವರು ಬಂದನು. ಚಂದ್ರ ನೋಡಿದ. ಏ ಒಡೆಯ ಎಂದು ನುಗ್ಗಿದ. ಹಿಡಿದ. ಕಿರೀಟ ಕಿತ್ತುಬಿಟ್ಟ. ನೋಡಿದೆ ನಾನು. ಊರ ಒಡೇರು ನರಸಿಂಹರಾಯಪ್ಪ ಇದ್ದರು. ಜಗಳ ಆಯಿತು. ಶಬರಿ ಓಡಿದಳು. ನಾನು ಅಲ್ಲೇ ನಿಂತಿದೇ. ಜಗಳ. ಒಡೆಯ ಹೊಡೆದ. ಚಂದ್ರ ಕೆಳಗೆ ಬಿದ. ಒಡೆಯ ಹೊದ. ಜೊಯಿಸರ ಜತೆ ಬಂದ. ಬಾಗಿಲಿಗೆ ಚಂದ್ರನ ಹೆಣ ಹಾಕಿದರು."– ಹೀಗೆ ಹುಚ್ಚೀರ ಬರೆದಿದ್ದ.

ಸೂರ್ಯ ಗಟ್ಟಿಯಾಗಿ ಹೇಳಿದ– "ನೋಡಿ ಸತ್ಯ ಇಲ್ಲಿದೆ. ಇಷ್ಟುದಿನ ಹುಚ್ಚೀರನಲ್ಲಿ ಸತ್ಯ ಮೂಕವಾಗಿತ್ತು. ಈಗ ಅಕ್ಷರದಲ್ಲಿ ಹೊರ್ಗಡೆ ಬಂದಿದೆ. ಇದು ನರಸಿಂಹರಾಯಪ್ಪ ಮತ್ತು ಜೋಯಿಸರ ಕರಾಮತ್ತು. ಇಷ್ಟುದಿನ ಹಾದಿ ತಪ್ಪಿಸಿ ನಿಮ್ ಮಾನ ಹಾಳ್ ಮಾಡ್ದೋರು ಅವ್ರೇ" ಎಂದು ತನ್ನ ವಿಚಾರವನ್ನು ಪ್ರತಿಪಾದಿಸುತ್ತ "ನಿಮ್ಗ ಓದೋಕ್ ಬರುತ್ತಲ್ಲ. ನೀವೇ ಓದಿ" ಎಂದು ಹುಚ್ಚೀರ ಬರೆದದ್ದನ್ನು ತೋರಿಸಿದ. ಎಲ್ಲರೂ ಮುಗಿಬಿದ್ದು ಓದಿದರು. ಪುಸ್ತಕ ಕಿತ್ತುಕೊಂಡು ಒಬ್ಬೊಬ್ಬರೆ ಓದಲು ಪ್ರಯತ್ನಿಸಿದರು. ಗುಂಪಾಗಿಯೂ ಓದಿದರು. ಆಮೇಲೆ ತಬ್ಬಿಬ್ಬಾಗಿ ಕೂತರು.

ಇದ್ದಕ್ಕಿದ್ದಂತೆಯೇ ಮೂರ್ನಾಲ್ಕು ಜನ ಹೆಂಗಸರು ಅಳತೊಡಗಿದರು. ಸೂರ್ಯ ಮೃದುವಾಗಿ ಕೇಳಿದ–"ಯಾಕ್ರಮ್ಮ? ಯಾಕಳ್ತಿದ್ದೀರ?". ಶಬರಿ ಅಳುವವರ ಹತ್ತಿರ ಬಂದು ಕೇಳಿದಳು–"ಏನಾತ್ರವ್ವ? ಯಾಕಿಂಗ್ ಅಳ್ತೀರ ಯೇಳ್ರವ್ವ? ಏನಾರ ತಪ್ಪಾಗಿದ್ರೆ ಸರ್‌ಪಡ್ಸಾನ."

ಒಬ್ಬ ಹೆಂಗಸು ಹೇಳಿದಳು.–"ನಾನ್ ಮಾನ ಕಳ್ಕಂಡ್ ಮ್ಯಾಲೆ ಎಂಗವ್ವ ಸರ್‌ಪಡುಸ್ತೀಯ? ನೀನಾದ್ರೂ ಗುಡೀನಾಗಿಂದ ಓಡ್ ಬಂದೆ. ನಾವ್ ಅಂಗ್ ಮಾಡಾಕಾಗ್ಲಿಲ್ವಲ್ಲ" ಎಂದು ಕಣ್ಣೀರು ಒರೆಸಿಕೊಂಡಳು. ಇನ್ನೊಬ್ಬಾಕೆ "ವೋದ್ ಮಾನ ತಿರ್ಗಾ ಎಂಗ್ ಬತ್ತೈತವ್ವ" ಎಂದು ದುಃಖಿಸಿದಳು. ಆಗ ಒಬ್ಬಾತ ರೇಗಿದ–"ಯಾಕಂಗ್ ಬಡ್ಕಂತೀರ? ನಿಮ್ಗೇನ್ ಗೊತ್ತಿತ್ತ ಆ ಕಳನನ್ ಮಕ್ಳು ಗುಡೀನಾಗ್ ಲಾಡಿ ಬಿಚ್ತಾರೆ ಅಂಬ್ತ. ಈಟಕ್ಕೂ ಅದ್ ನಿಜಾನೊ ಇದು ನಿಜಾನೊ ನಾವೇನ್ ಕಂಡಿದ್ದೀವ? ಅವಾಗ ಗುಡಿಗೋಗಿ ಅಂಗಾತು ಅಂಬಂಗಿದ್ರೆ ಇವಾಗ್

ವೋಗ್ದೆ ಇದ್ರೆ ಏನಾಗ್ತೈತೆ ನೋಡಾನ ಬಿಡ್ರಿ" ಎಂದು ಹೇಳಿದಾಗ ಉಳಿದವರೂ ಇದಕ್ಕೆ ಒಪ್ಪಿದರು. ಸಣ್ಣೀರ "ಇದನ್ನು ನೋಡೇ ಬಿಡಾನ. ಇದೂ ಒಂದ್ ಪರೀಕ್ಸೆ ಆಗೇಬಿಡ್ಲಿ" ಎಮದು ಘೋಷಿಸಿ ಟವಲ್ ಕೊಡವಿ ಎದ್ದುಬಿಟ್ಟ. ಇತರರೂ ಏಳತೊಡಗಿದರು. ಆಗ ಸೂರ್ಯ "ಕೂತ್ಕಳ್ಳಿ ಇನ್ನೂ ಮುಗ್ದಿಲ್ಲ" ಎಂದು ಕೂಡಿಸಿ "ಈಗ ಗೌರಿ ಅಭಿಪ್ರಾಯ ಕೇಳ್ಬೇಕು. ಆಕೇನೂ ಇದಕ್ಕೆ ಒಪ್‌ಬೇಕು" ಎಂದು ಆಕೆಯ ಕಡೆ ನೋಡಿದ.

ಗೌರಿ "ನಾನ್ಯಾಕ್ ವೋಗ್ಲಿ ಗುಡೀಗೆ. ಮದ್ವೆ ಆದ್‌ಮ್ಯಾಗೆ ಗಂಡನ್ ಜತೆ ಮಲಗ್ತೀನಿ. ಇಲ್ದಿದ್ರೆ ಯೆಂಡ್ತಿ ಎಂಗಾಗ್ತೀನಿ?" ಅಂದಳು.

ನವಾಬ್ ಮೆಚ್ಚುಗೆಯಿಂದ ನೋಡಿದ.

ಆಗ ತಿಮ್ಮರಾಯಿ "ನೀನೇನಂಬ್ತಿಯ ಪೂಜಾರಪ್ಪ?" ಎಂದು ಕೇಳಿದ.

"ಎಲ್ಲಾರು ಎಂಗಬ್ತೀರೊ ನಾನು ಅಂಗೇ ಅಂಬ್ತೀನಿ. ಮಗಳ ಮಾನ ಗುಡೀನಾಗ್ ವೋಗಾದಾದ್ರೆ ನನ್ ಪ್ರಾಣ ಇಟ್ಕಂಡೇನ್ ಬಂತು? ಅದೇನಾಗ್ತೈತೊ ಆಗೇಬಿಡ್ಲಿ" ಎಂದು ಪೂಜಾರಪ್ಪ ಮಾರಮ್ಮನ ಮೂರ್ತಿ ಕಡೆ ನೋಡಿ ಕೈ ಮುಗಿದ.

## ೧೩

ಮದುವೆಗೆ ದಿನ ನಿಗದಿಯಾಯಿತು. ವಿಶೇಷ ಸಿದ್ಧತೆಯೇನೂ ಇರಲಿಲ್ಲ. ಎಲ್ಲ ಸರಳವಾಗಿ ಆಗಬೇಕೆಂಬುದು ಸೂರ್ಯನ ಅಭಿಪ್ರಾಯ. ಅದಕ್ಕೆ ಎಲ್ಲರ ಒಪ್ಪಿಗೆ. ನವಾಬ–ಗೌರಿಯ ಮನದಾಳದಲ್ಲಿ ಹೊಸ ಹೂದೋಟ. ಆದರೆ ಯಾರೂ ರಾತ್ರಿ ಶಾಲೆಗೆ ತಪ್ಪಿಸಿಕೊಳ್ಳಲಿಲ್ಲ–ಮದುವೆಯ ನೆಪದಲ್ಲಿ. ಈ ಮದುವೆಯ ಪ್ರಕರಣ ಹಟ್ಟಿಯನ್ನು ಗಟ್ಟಿಯಾಗಿಸಿತ್ತು.

ಪೂಜಾರಪ್ಪ ಮಾತ್ರ ಸಂತೋಷ–ಸಂಕಟಗಳ ವ್ಯತ್ಯಾಸ ಗೊತ್ತಾಗದಂಥ ಅನುಭವದಲ್ಲಿ ಬೆಟ್ಟ, ಗುಡ್ಡ, ತೋಪುಗಳಲ್ಲಿ ಅಲೆದಾಡುತ್ತಿದ್ದ. ಈತನ ಸ್ಥಿತಿಯನ್ನು ಅರ್ಥಮಾಡಿಕೊಂಡವನಂತೆ ಕೆಲವೊಮ್ಮೆ ಹುಚ್ಚೀರ ತನ್ನಾರಕ್ಕೆ ತಾನು ಹಿಂಬಾಲಿಸಿದ. ಮೂಕ ಸಹಚರನಾದ.

ಎಲ್ಲವನ್ನೂ ಗಮನಿಸುತ್ತಿದ್ದ ತಿಮ್ಮರಾಯಿ ಪೂಜಾರಪ್ಪನ ಜೊತೆ ಮಾತಾಡಿ ಸಮಾಧಾನಿಸಲು ಯತ್ನಿಸಿದ. ಪೂಜಾರಪ್ಪ ಮಾತಾಡಲಿಲ್ಲ.

"ಯಾಕಿಂಗಿದ್ದೀಯ? ಏನಾಗ್ತೈತೆ ನಿಂಗೆ?" ಎಂದು ತಿಮ್ಮರಾಯಿ ಪ್ರಶ್ನಿಸಿದ.

"ಏನೂ ಆಗಿಲ್ಲ" ಎಂಬುದನ್ನು ಬಿಟ್ಟರೆ ಪೂಜಾರಪ್ಪ ಮತ್ತೇನೂ ಹೇಳಲಿಲ್ಲ.

ಗೌರಿ, ತನ್ನ ಅಪ್ಪನ ಸ್ಥಿತಿಯನ್ನು ನೋಡುತ್ತ ದುಃಖಿತಳಾದಳು. ಒಮ್ಮೆ ನೇರವಾಗಿ ಹೇಳಿದಳು– "ಯಾಕಪ್ಪ ಇಂಗಿದ್ದೀಯ? ನೀನಿಂಗೇ ಇದ್ರೆ ನಾನೆಂಗಪ್ಪ ಮದ್ವೆ ಆಗ್ಲಿ? ನನ್ನ ಬಯ್ಬೇಕು ಅನ್ನಂಗಿದ್ರೆ ನಾಲ್ಗೆ ನಾಚ್ಕೆಪಟ್ಕಳಾವರ್ಗೂ ಬಯ್ದ್‌ಬಿಡು. ಬಾರುಸ್ಬೇಕು ಅನ್ನಂಗಿದ್ರೆ ಕೈ ಸೇದೋಗೋವರ್ಗೂ ಬಾರಿಸ್ಬಿಡು."

ಆಗ ಪೂಜಾರಪ್ಪ ಬಾಯಿಬಿಟ್ಟು–"ಎಲ್ಲಾನ ಉಂಟೇನವ್ವ. ಬಿಡ್ತು ಅನ್ನು. ನಿನ್ ಬಯ್ಯೋದ್, ಬಾರ್ಸಿ, ಯಾವ್ ಪುಣ್ಣೇವ್ ಕಟ್ಕಮಾನ? ನಾನ್ಯಾಕಿಂಗಿದ್ದೀನಿ ಅಂಬ್ತ ನಂಗೇ ತಿಳ್ಯಾಕಿಲ್ಲ ಮಗಳೆ. ನನ್ ಮನಸ್ನಾಗೆ ಕೊಳ್ಳಿದೆವ್ವ ಕುಣೀತಾ ಐತೊ ದ್ಯಾವ್ರ್ ದೀಪ ಉರಿತಾ ಐತೊ ಒಂದು ತಿಳ್ಯಾಕಿಲ್ಲ. ನಿನ್ ಬಿಟ್‌ಕೊಡಾಕೂ ಆಗಾಕಿಲ್ಲ; ಆ ಒಡೇರ್ ಎದ್ರಿಗ್ ನಿಂತ್ಕಳಾಕೂ ಆಗಾಕಿಲ್ಲ." ಎಂದು ಒದ್ದಾಡಿ "ಏನೇ ಆದ್ರೂ ನಿನ್ ಮದ್ವೆ ನಿಲ್ಲಾಕಿಲ್ಲ ನಡ್ದೇನಡೀತೈತೆ" ಎಂದು ಹೇಳಿ ಎದ್ದುಹೋದ.

ಊರೊಳಗೆ ಹೋಗಿ ಒಡೆಯರು ಮತ್ತು ಜೋಯಿಸರಿಗೆ ಮದುವೆಯ

ವಿಷಯ ತಿಳಿಸಬೇಕೆನ್ನಿಸಿದರೂ ಮನಸ್ಸು ಒಪ್ಪಲಿಲ್ಲ; ಸುಮ್ಮನಾದ.

ಮದುವೆಯ ದಿನ ಬಂದೇಬಿಟ್ಟಿತು.

ಹಟ್ಟಿಯ ಎಲ್ಲ ಗುಡಿಸಲುಗಳ ಮುಂದೆ ತಳಿರುತೋರಣ. ಅಂಗಳವನ್ನು ಸಗಣಿ ನೀರಲ್ಲಿ ಸಾರಿಸಿ ರಂಗೋಲಿಯಲ್ಲಿ ಸಂತೋಷದ ಸಿಂಗಾರ. ಕಟ್ಟೆಯನ್ನು ಗುಡಿಸಿ ಸಾರಿಸಿ ಚೊಕ್ಕಟ ಮಾಡಿದ ಸಡಗರ.

ಎಲ್ಲರೂ ಸೇರಿದರು. ಶಬರಿ ಗೌರಿಯನ್ನೂ, ಸೂರ್ಯ ನವಾಬನನ್ನೂ ಕರೆತಂದರು. ಹಾರ ಬದಲಾವಣೆ, ಮಾಂಗಲ್ಯಧಾರಣೆ, ಸರಳತೆಯ ಮೂಲಕ ಬದಲಾವಣೆ. ಪೂಜಾರಪ್ಪನ ಕಣ್ಣು ತುಂಬಿತ್ತು. ಮನಸ್ಸು ಮಂತ್ರವಾಗಿತ್ತು. ಬಾಯಿ ಮೌನವಾಗಿತ್ತು. ಆದರೆ ಹೆಣ್ಣುಮಕ್ಕಳ ಬಾಯಿಂದ ಹಾಡು ಹರಿದಿತ್ತು. ಹಟ್ಟಿಯವರ ಆನಂದಕ್ಕೆ ಧಕ್ಕೆಯಾಗದಂತೆ ರಾತ್ರಿ ಗಂಡು–ಹೆಣ್ಣನ್ನು ಕೂಡಿಸುವುದೆಂದು ಮೊದಲೇ ತೀರ್ಮಾನವಾಗಿತ್ತು. ಆಗ ಹೂಚೆಂಡಿನಾಟವನ್ನೂ ಒಳಗೊಂಡಂತೆ ಸಂಭ್ರಮದ ನಿರೀಕ್ಷೆ. ಗಂಡು ಹೆಣ್ಣು ಒಟ್ಟಿಗೆ ಕೂರುವುದು, ಆರತಿ ಬೆಳಗುವುದು; ಗಂಡು ಹೆಣ್ಣು ಹೂಚೆಂಡುಗಳನ್ನು ಪರಸ್ಪರ ಎಸೆಯುವುದು. ಎಲ್ಲರೂ ನೋಡುತ್ತ, ಭಾಗವಹಿಸುತ್ತ ಆನಂದಿಸುವುದು. ಆಮೇಲೆ ಒಟ್ಟಿಗೇ ಊಟ. ಮದುವೆಯ ಮೊದಲ ಹಂತ ಮುಗಿಸಿದ ಹಟ್ಟಿ, ಹೊತ್ತು ಮುಳುಗುವುದನ್ನು ಕಾಯುತ್ತಿತ್ತು.

ಕಾಯುವುದರಲ್ಲಿ ಹೆಪ್ಪುಗಟ್ಟುವ ಆನಂದ ಈ ಹಟ್ಟಿಗೆ.

ಕಾಯುವುದರಲ್ಲಿ ಹೆಪ್ಪುಗಟ್ಟಿದ್ದು, ಕರಗಿ ಹರಿಯುವ ಕ್ಷಣ.

ಬಂದೇಬಿಟ್ಟಿತು.

ಸ್ವಲ್ಪ ಹೊತ್ತಿನಲ್ಲೇ–ಒಡೆಯ ಮತ್ತು ಜೋಯಿಸರ ಸವಾರಿಯೂ ಬಂದುಬಿಟ್ಟಿತು. ಆನಂದದ ಹಟ್ಟಿಗೆ ಆಶ್ಚರ್ಯ! ಆತಂಕ!

ಬಂದವನೇ ಒಡೆಯ ರೇಗಿದ– "ಏನ್ಲಾ ಪೂಜಾರಪ್ಪ? ಗುಟ್ಟಾಗ್ ಮಗ್ಳ ಮದ್ವೆಮಾಡ್ತಿದ್ದೀಯೇನ್ಲ? ಯಾವತ್ನಂಗೆ ನನ್ತಾವ್ ಬಂದು ಒಪ್ಗೆ ತಗಾಳಾದ್ ಬಿಟ್ಟು ಬೇಕಾಬಿಟ್ಟಿ ನಡ್ಕಂಡ್ರೆ ಈ ಅಟ್ಟಿ ಉಳಿತೈತೇನ್ಲ?"

ಜೋಯಿಸರೂ ದನಿಗೂಡಿಸಿದರು – "ಸಂಪ್ರದಾಯ, ನಮ್ ಸಂಪ್ರದಾಯ ಎಲ್‌ಹೋಯ್ತಯ್ಯ? ನಮ್ ಧರ್ಮ ಅಂದ್ರೆ ಏನ್ ತಿಳ್ಕಂಡೆ ನೀನು?"

ಪೂಜಾರಪ್ಪ ಉತ್ತರಿಸಲು ಒದ್ದಾಡುತ್ತಿರುವಾಗ ಸೂರ್ಯ ಬಿಗಿದನಿಯಲ್ಲಿ ಹೇಳಿದ– "ಯಾವ್ ಧರ್ಮದ ಬಗ್ಗೆ ಮಾತಾಡ್ತಿದ್ದೀರಿ ನೀವು? ಹಟ್ಟಿನಾಗಿರೊ ಒಂದು ಹೆಣ್ಣು–ಗಂಡು ಮನಸಾರ ಒಪ್ಕೊಂಡ್ರು. ಹಟ್ಟಿನೋರು ಹಾಡು ಹೇಳಿದ್ರು. ಹಸೆ ಹತ್ಸಿದ್ರು; ಈ ಹಟ್ಟೀದೆ ಒಂದು ಧರ್ಮ ಇದೆ. ಅದು ನಿಮ್ ಧರ್ಮ ಅಲ್ಲ,

ಹಟ್ಟೀಗೆ ಯಾವ್ದ್ ಸರಿ ಅನ್ನಿಸ್ತೋ ಹಾಗ್ ಮಾಡಿದಾರೆ. ಈಗೇನಾಯ್ತು?"

ಒಡೆಯ, ಜೋಯಿಸರ ಕಡೆ ನೋಡಿದ.

"ಹಾಗಾದ್ರೆ ಊರು ಬಿಟ್ಟು ಹಟ್ಟಿ ಇರ್ಬೇಕು ಅಂತೀಯೇನು?"– ಜೋಯಿಸರು ಕೇಳಿದರು.

"ಅಲ್ಲ, ಹಟ್ಟಿ ಬಿಟ್ಟು ಊರ್ ಇರ್‌ಬಾರ್ದು ಅಂತೀನಿ. ಹಟ್ಟೀನ್ ಹೊರಗಿಟ್ಟೋರು ನೀವು. ಬುಡಕಟ್ಟಿಗೂ ಒಂದು ಬದುಕು ಅನ್ನೋದ್ ಇರುತ್ತೆ ಅನ್ನೋದನ್ನ ಮರ್ರ್ತೋರು –ನೀವು. ನಿಮ್ ಧರ್ಮಕ್ಕೆ, ನಿಮ್ ಲಾಭಕ್ಕೆ, ನಿಮಿಗ್ ದುಡ್ಯೋಕೆ, ಈ ನಮ್ ಜನ ಬೇಕು. ಆದ್ರೆ ಇವ್ರಿಗ್ ಬದ್ಕೋಕೆ ಸ್ವಾತಂತ್ರ್ಯ ಬೇಡ– ಇದು ತಾನೆ ನಿಮ್ಮ ನೀತಿ?"– ಸೂರ್ಯ ಸ್ಫೋಟಗೊಂಡ.

ಒಡೆಯ ನಿಂತಲ್ಲೇ ಪತರುಗುಟ್ಟಿದ– "ಏನ್ ಮಾತಾಡ್ತ ಅವನೆ ಈ ಓಚಯ್ಯ. ಒಸಿ ಬಿಡ್ಸೇಳ್ರಿ ಜೋಯಿಸ್ರೆ" ಎಂದ. "ಅದ್ರಾಗ್ ಬಿಡ್ಸ್ ಹೇಳೋದೇನಿದೆ ಮಣ್ಣು? ಈಗ ನಮಗ್ ಬೇಕಾಗಿರೋದು ಲಾಗಾಯ್ತಿನಿಂದ ನಡ್ಕಂಡ್ ಬಂದಿರೊ ಸಂಪ್ರದಾಯ. ನಮಗೆ ಪೂಜೆ ಸಲ್ಸಿ, ಪಾದಕ್ ಬಿದ್ದು ಹೆಣ್ಣನ್ನ ದೇವಸ್ಥಾನಕ್ಕೆ ಕಳುಸ್ಬೇಕು–ದೇವರ ಜೊತೆ ಮೊದಲ್ನೇ ರಾತ್ರಿ ಕಳ್ಯೋಕೆ."– ಜೋಯಿಸರು ನೇರ ವಿಷಯಕ್ಕೆ ಬಂದರು. ಒಡೆಯ ಕೂಡಲೇ "ಅಂಗೇ ಆಗ್ಬೇಕು" ಎಂದ.

ಹಟ್ಟಿಯ ಜನ ಪರಸ್ಪರ ಮುಖನೋಡಿಕೊಂಡರು. ಸೂರ್ಯ ನೇರವಾಗಿ ಜೋಯಿಸ ಮತ್ತು ಒಡೆಯ ಇಬ್ಬರ ಮುಂದೆ ಬಂದು ನಿಂತು ಹೇಳಿದ–

"ಇವತ್ನಿಂದ ಅಂಥ ಕನಸು ಕಾಣ್ಬೇಡಿ. ದೇವರ ಹೆಸರು ಹೇಳ್ಕೊಂಡು ದೇವಸ್ಥಾನದಲ್ಲಿ ಹೆಣ್‌ಮಕ್ಕಳ ಮಾನ ಕಳೀತಿದ್ದೋರು ನೀವು ಅಂತ ಗೊತ್ತಾಗಿದೆ. ನಿಮ್ ಗುಟ್ಟು ರಟ್ಟಾಗಿದೆ. ಕೇಳಿ, ನಮ್ ಹೆಣ್‌ಮಕ್ಕಳನ್ನ ಕೇಳಿ. ಅವ್ರೆಲ್ಲ ಆರತಿ ಎತ್ತಿ ಗೌರೀನ ದೇವಸ್ಥಾನದ ಒಳ್ಗಡೆ ತಂದ್‌ಬಿಡ್ತಾರ ಕೇಳಿ."

ಆಗ ಹೆಂಗಸರು ಸ್ಪರ್ಧೆಗಿಳಿದಂತೆ "ಎಲ್ಲಾನ ಉಂಟಾ? ಬೇಕಾರ್ ನಮ್ ಪಿರಾಣ ಹೋಗ್ಲಿ. ಮಾನ ವೋಗಾಕ್ ನಾವ್ ಬಿಡಾಕಿಲ್ಲ" ಎಂದು ಒಟ್ಟಿಗೇ ಹೇಳತೊಡಗಿದರು. ಆಗ ಗಂಡಸರೂ ಹಿಂದೆ ಬೀಳಲಿಲ್ಲ. "ಈ ವಿಸ್ಯದಾಗ್ ಜುಲ್ಮೆ ಮಾಡ್‌ಬ್ಯಾಡ್ರಿ ಒಡೇರ" ಎಂದ ಒಬ್ಬ. "ಕೂಲಿ ಕೆಲಸಕ್ ಬಂದಾಗೇನಾರ ಅನ್ರಿ. ನಮ್ ಹಟ್ಟೀನಾಗ್ ನಡ್ಯಾ ವಿಸ್ಯ ನಮ್ಗೇ ಬಿಟ್ ಬಿಡ್ರಿ" ಎಂದ ಇನ್ನೊಬ್ಬ. "ಗೊತ್ತಿದ್ದೂ ಗೊತ್ತಿದ್ದೂ ಗುಡೀಗ್ ಕಳ್ಸಾಕಾಯ್ತದ ಗೌರೀನ" ಎಂದ ಮತ್ತೊಬ್ಬ.

ಒಡೆಯ ಕಿರುಚಿದ– 'ಇದೇನ್ಲ ಪೂಜಾರಪ್ಪ? ನಿಂದೇನ್ ಬೊಗಳೋ." ಪೂಜಾರಪ್ಪ ಅಧೀರನಾಗದೆ ಆವೇಗ, ಆತಂಕಗಳಿಗೂ ಒಳಗಾಗದೆ ನೆಟ್ಟನೋಟದಲ್ಲಿ

ನುಡಿದ– "ಇವ್ರ್ ನಾಲ್ಗೆ ಬ್ಯಾರೆ, ನನ್ ನಾಲ್ಗೆ ಬ್ಯಾರೆ ಆಗಾದುಂಟಾ ಒಡೆಯ!"

"ಅಂಗಾರ್ ಇವಾಗ ನಾವೇನ್ ಮಾಡ್ಬೇಕು ಅಂಬ್ತೀಯಾ" ಒಡೆಯ ಸಿಟ್ಟಿನಿಂದ ಕೇಳಿದ.

"ಮನ್ಸಿದ್ರೆ, ನನ್ ಮಗಳಿಗೆ ಒಳ್ಳೇದಾಗ್ಲಿ ಅಂಬ್ತ ಯೇಳಿ ಉಂಡೋಗ್ರಿ. ಇಲ್ಲ ಅಂಬಂಗಿದ್ರೆ ಊರ್ಕಡೀಕ್ ವೋಗ್ರಿ"– ಪೂಜಾರಪ್ಪ ನಿರ್ಧಾರಕವಾಗಿ ಹೇಳಿದ.

ಒಡೆಯ ಸಿಟ್ಟಿನಿಂದ ನೆಲವನ್ನು ಒದ್ದ.

ತಕ್ಷಣ ಶಬರಿ ಸಿಡಿದಳು– "ಆ ಬೂಮ್‌ತಾಯಿ ಮ್ಯಾಲೆ ಯಾಕ್ ಸಿಟ್ ತೋರುಸ್ತೀರಾ? ತಪ್ಪಾತು ಅಂಬ್ತ ಕಣ್ಗೊತ್ಕೊಂಡು ವೊಲ್ಟೋಗಿ."

"ವೊಲ್ಟೋಗು ಅಂದ್ರೆ ಅಂಗೇ ವೊಲ್ಟೋಗೋಕೆ ನಾನೇನ್ ಬಳೆ ತೊಟ್ಕಂಡಿಲ್ಲ"–ಒಡೆಯ ಗರ್ಜಿಸಿದ.

ಜೋಯಿಸರು ಹುಷಾರಾದರು. ಒಡೆಯನ ಸಿಟ್ಟಿಗೆ ಮೂಗುದಾರದ ಮಾತಾಡಿದರು– "ಇದ್ರಿಂದ ನಿಮ್ಗೇನ್ ನಷ್ಟ ನರಸಿಂಹರಾಯಪ್ಪ, ಕೆಟ್ಟದ್ದು ನಮಗಾಗಲ್ಲ. ಆಗೋದೆಲ್ಲ ಇವ್ರಿಗೇನೆ. ಅದಕ್ಕೆ ನಮಗ್ಯಾಕ್ ಚಿಂತೆ."

"ಅಂಗಂದ್ರಾಗ್ತೈತ? ನಾವೇ ಯೆಂಗುಸ್ರುನ್ ಕೆಡ್ಸಾದು ಅಂಬ್ತ ಯೇಳಾಕ್ ಏನೈತೆ ಸಾಕ್ಸಿ ಇವ್ರ್ ತಾವ? ಅದನ್ನಾರ ಕೇಳಾದ್ ಬ್ಯಾಡ್ವ?" ಎನ್ನುತ್ತ ಮತ್ತೊಂದುಪಟ್ಟು ಹಾಕಲು ಶುರುಮಾಡಿದ–ನರಸಿಂಹರಾಯಪ್ಪ.

ಕೂಡಲೇ ಸೂರ್ಯ ಅದಕ್ಕೆ ಉತ್ತರಿಸಿದ–"ಸಾಕ್ಷಿ ಬೇಕಾ ಸಾಕ್ಷಿ? ಅವತ್ತು ಚಂದ್ರ ಸತ್ತಾಗ ಅದನ್ನೆಲ್ಲ ನೋಡ್ದೋನು ಈ ಹುಚ್ಚೀರ. ಇಲ್ನೋಡಿ, ಈತ ಏನೇನ್ ನಡೀತು ಅಂತ ಬರ್ದ್‌ಕೊಟ್ಟಿದಾನೆ ಇಲ್ಲಿ" ಎಂದು ಪುಸ್ತಕದ ಹಾಳೆ ತೋರಿಸಿದ. "ಜೋಯಿಸ್ರೆ ಓದಿ" ಎಂದು ಒತ್ತಾಯಿಸಿದ.

ಜೋಯಿಸರು ಅದನ್ನು ನೋಡಿಯೂ ನೋಡದಂತೆ ಓದುತ್ತಾ" ಅದೆಲ್ಲ ಈಗ್ ಯಾಕೆ? ನಾವ್ ಹೇಳ್ದಂತೆ ಕೇಳಲ್ಲ ಅಂದ್ ಮ್ಯಾಲೆ ನಾವ್ಯಾಕ್ ಇಲ್ಲಿರ್ಬೇಕು? ಸಾಕ್ಷೀಗೀಕ್ಷಿ ಕಟ್ಕೊಂಡು ಏನ್ ಮಾಡ್ತೀಯ ನರಸಿಂಹರಾಯ. ಅವ್ರ್‌ಗೇ ಬೇಡ ಸಂಪ್ರದಾಯ ಅಂದ್‌ಮೇಲೆ ನಮ್ಗೇಕೆ? ಸುಮ್ನೆ ನಡ್ಯಪ್ಪ" ಎಂದು ಒತ್ತಾಯಿಸಿ ಕೈಹಿಡಿದೆಳೆದು ಕರೆದೊಯ್ದರು. ನರಸಿಂಹರಾಯಪ್ಪ ಉರಿಯುತ್ತಲೇ ಹೋದ.

ಈ ಘಟನೆಯಿಂದ ಸ್ವಲ್ಪ ವಿಚಲಿತರಾದ ಹಟ್ಟಿಯವರು ಮತ್ತೆ ಮೊದಲಸ್ಥಿತಿಗೆ ಬಂದರು. ಹಾಡು–ಹಬ್ಬದ ಆನಂದ.

ಆದರೆ ಒಡೆಯ–ಜೋಯಿಸ–ಇಬ್ಬರೂ ಮೊದಲಸ್ಥಿತಿಗೆ ಬಂದಿರಲಿಲ್ಲ, ದಾರಿಯುದ್ದಕ್ಕೂ ನರಸಿಂಹರಾಯಪ್ಪ ತೊಣಚೆಹೊಕ್ಕ ನಾಯಿಯಂತೆ

ಎಗರಾಡುತ್ತಿದ್ದ. ರಾಮಾಜೋಯಿಸರು ಸಮಾಧಾನಿಸುತ್ತಿದ್ದರು. "ಇದು ಇಲ್ಲಿಗೇ ನಿಂತುಹೋಯ್ತು ಅಂತ ನಾವ್ ಸುಮ್ಮನಾಗ್ಬೇಕು. ಆಮೇಲೆ ಈ ವಿಷ್ಯಾನ ಪೇಪರ್‌ನಾಗೇನಾದ್ರೂ ಹಾಕ್ಸಿದ್ರೆ ಏನ್ ಗತಿ? ಅದಕ್ಕೆ ನಾವ್ ಜಾಸ್ತಿ ಗಲಾಟೆ ಮಾಡ್‌ಬಾರ್ದು. ಅಷ್ಟು ಬುದ್ಧಿ ಬೇಡ್ವಾ ನಿನಗೆ" ಎಂದು ತಿಳಿಹೇಳಿದರು. ಆಗ ನರಸಿಂಹರಾಯಪ್ಪನಿಗೆ ವಿಷಯದ ವ್ಯಾಪ್ತಿ ಅರ್ಥವಾಯಿತು. ಆದರೂ "ಅಂಗಾರೆ ಇವ್ರ್‌ನ ಸುಮ್ ಸುಮ್ಕೆ ಎದ್ರಾಕ್ಕಳಾದ್ ಬ್ಯಾಡ ಅಂಬ್ತೀರ?" ಎಂದು ಕೇಳಿದ.

"ಮತ್ ಇನ್ನೇನಂತೀಯ? ಅವ್ರಿಗ್ ಕೂಲಿಕೆಲ್ಸ ಕೊಡಲ್ಲ ಹಾಗೆ ಹೀಗೆ ಅಂತ ಆತುರದ ತೀರ್ಮಾನ ತಗೋಬೇಡಪ್ಪ. ಆಮೇಲ್ ಆ ಸೂರ್ಯ ಈ ವಿಷ್ಯಾನ ಡಾಣಾ ಡಂಗುರ ಮಾಡ್‌ಬಿಟ್ಟಾನು. ಹುಷಾರಾಗಿ ಒಳ್ಳೇರ್ ಥರಾ ಇರೋಣ" ಎಂದು ಜೋಯಿಸರು ಮತ್ತೆ ಒತ್ತಾಯಪೂರ್ವಕವಾಗಿ ತಿಳಿಹೇಳಿದಾಗ, ನರಸಿಂಹರಾಯಪ್ಪ ನೆಲದಮೇಲೆ ನಿಂತ. "ನೀವ್ ಯೇಳಾದೆ ಸರಿ ಸಾಮೇರ" ಎಂದ.

ಸಾವಿತ್ರಮ್ಮನಿಗೆ ಗೌರಿಯ ಮದುವೆ ವಿಷಯ ಗೊತ್ತಾಗಿದ್ದು ಎರಡು ಮೂರು ದಿನಗಳ ನಂತರ. ಎರಡು ಮೂರು ದಿನಗಳವರೆಗೆ ಹೊಲದ ಕೆಲಸಕ್ಕೆ ಬಾರದ ಗೌರಿಯ ಬಗ್ಗೆ ವಿಚಾರಿಸಿದಾಗ ವಿಷಯ ತಿಳಿದುಬಂತು. ಉಳಿದವರು ತಾವಾಗಿಯೇ ಹೇಳಲು ಹೋಗಿರಲಿಲ್ಲ. ಒಡೆಯರ ವಿರೋಧ ಇದ್ದದ್ದೂ ಒಂದು ಮುಖ್ಯಕಾರಣ. ಗೌರಿಯ ಮದುವೆಯಾದಾಗ ಆಕೆ ಗಂಡಿನೊಂದಿಗೆ ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಬರಬೇಕಿತ್ತಲ್ಲ ಎಂಬ ಪ್ರಶ್ನೆಯೊಂದಿಗೆ ನರಸಿಂಹರಾಯಪ್ಪನ ಬಳಿಗೆ ಬಂದಳು. ನರಸಿಂಹರಾಯಪ್ಪ– "ಅವ್ರೆಲ್ಲ ಇದ್ದೆಬುದ್ಧಿ ಕಲ್ತು ಈ ಕಟ್ಟು ಕಟ್ಳೆ ಬಿಡ್ತೀವಿ ಅಂಬ್ತ ಅವ್ರೆ. ನಾನು ನಿಮ್ಮಿಷ್ಟ ಅಂದೆ." ಎಂದು ಹೇಳಿದ್ದಲ್ಲದೆ "ಒಂದ್ ಕೆಲ್ಸ ಮಾಡು ನೀನು. ವೊಸಾ ಸೀರೆ ಗೀರೆ ತಗಂಡು ಗೌರೀಗೆ ಕೊಟ್ ಬಾ. ಏಟಾದ್ರೂ ನಮ್ ಪೂಜಾರಪ್ಪನ ಮಗ್ಳು. ನಮ್ ಮಗಳಿದ್ದಂಗೆ ಅಂಬ್ತ ತಿಳ್ಕಂಡ್ರಾತು. ಏನಂಬ್ತಿಯ?" ಎಂದು ಸಲಹೆ ಕೊಟ್ಟ. ಸಾವಿತ್ರಮ್ಮ ಒಪ್ಪಿ ಹೊರಟೇಬಿಟ್ಟಳು.

ಈ ವಿಷಯವನ್ನು ಕೇಳಿದ ಜೋಯಿಸರು–"ಏನಪ್ಪ ಒಡೆಯ, ನನಗಿಂತ ಬುದ್ಧಿವಂತ ಆಗ್ತಾ ಇದ್ದಂಗಿದೆ ನೀನು" ಎಂದು ಮೆಚ್ಚುಗೆಯಲ್ಲೇ ಚುಚ್ಚಿದರು. "ಎಲ್ಲಾನ ಉಂಟಾ ಸಾಮೇರ. ಸಾವಾಸ್‌ದೋಸ ನೋಡ್ರಿ, ಎಲ್ಲೋ ಒಸಿ ಬುದ್ದಿ ಬಂದೈತೆ ನಿಮ್ ಜತೆ ಓಡಾಡಿದ್ರಿಂದ" ಎಂದು ನರಸಿಂಹರಾಯಪ್ಪ ದೇಶಾವರಿ ನಗೆ ನಕ್ಕ. ಜೋಯಿಸರು ಆಗಲೂ ಸುಮ್ಮನಿರಲಿಲ್ಲ.

"ಎಲಾ ಇವ್ನ. ನನ್ ಥರಾನೇ ನಗ್ತೀಯಲ್ಲಯ್ಯ! ಎಮದು ಛೇಡಿಸಿದರು.

"ಆಗ್ಲೇ ಯೇಳಿದ್ನಲ್ಲ ಸಾಮೇರ, ಎಲ್ಲಾ ಸಾವಾಸ್‌ದೋಸ" ಎಂದು ನರಸಿಂಹರಾಯಪ್ಪ ಮತ್ತೆ ನಕ್ಕಾಗ ವಿಧಿಯಿಲ್ಲದೆ ಜೋಯಿಸರು ಆತನಜೊತೆ ನಗತೊಡಗಿದರು.

ಮಾರನೇ ದಿನವೇ ಸಾವಿತ್ರಮ್ಮ ತಟ್ಟೆಯಲ್ಲಿ ರೇಷ್ಮೆ ಸೀರೆ, ಕುಪ್ಪಸದ ಬಟ್ಟೆ, ಅರಿಸಿನ ಕುಂಕುಮ, ಷರಟಿನ ಬಟ್ಟೆ, ಅಕ್ಷತೆ– ಇತ್ಯಾದಿಗಳನ್ನು ಇಟ್ಟುಕೊಂಡು ಕೆಲ ಹೆಂಗಸರೊಂದಿಗೆ ಬುಡಕಟ್ಟಿನ ಹಟ್ಟಿಗೆ ಬಂದಾಗ ಅಲ್ಲಿದ್ದವರಿಗೆಲ್ಲ ಅಚ್ಚರಿಯೋ ಅಚ್ಚರಿ! ಊರಿನ ಒಡೆಯರು ಸೇಡಾಗಿ ಬಂದು ಬಡಿಯಬಹುದೆಂದು ಭಾವಿಸಿದ್ದ ಕೆಲವರಿಗೆ ಇದೊಂದು ಒಗಟು. ಒಗಟಿನಲ್ಲಿ ಒಗಟಾಗಿ ನಿಂತಿದ್ದ ಪೂಜಾರಪ್ಪ.

ಸಾವಿತ್ರಮ್ಮನನ್ನು ನೋಡಿದ ಹೆಂಗಸರು ದಡಬಡನೆ ಬಂದು ಕಟ್ಟೆಯ ಮೇಲಿದ್ದ ಕಸ ಸರಿಸಿ "ಕುಂತ್ಕಳ್ಳವ್ವ" ಎಂದರು. ಶಬರಿ ಹೊರಬಂದು "ಏನ್ರವ್ವ ಈಟ್‌ದೂರ?" ಎಂದು ಪ್ರಶ್ನಾರ್ಥಕವಾಗಿ ಸ್ವಾಗತಿಸಿದಳು.

"ಗೌರಿ ಮದ್ವೇಗಂತೂ ನೀವ್ಯಾರೂ ಕರೀಲಿಲ್ಲ. ವಿಸ್ಯ ಗೊತ್ತಾಗಿ ನಾನೇ ಬಂದೆ" ಎಂದಳು ಸಾವಿತ್ರಮ್ಮ.

"ಊರ್ನೋರ್ನ ಕರ್‍ಯಾದು ಅಂದ್ರೆ ಒಡೇರ್ನ ಕರ್‍ಯಾದು ಅಂಬ್ತ ಕಟ್ಟುಪಾಡಿತ್ತಲ್ಲ; ಈಸಾರಿ ಕಟ್ಟುಪಾಡೆಲ್ಲ ಮುರ್ದು ನಮ್‌ಪಾಡಿಗ್ ನಾ ಮದ್ವೆ ಮಾಡಾನ ಅಂದ್ಕಂಡ್ವಿ"– ಎಂದು ಶಬರಿ ವಿವರಿಸಿದಳು.

"ಒಡೇರ್ನ ಕರ್ಯೋದು ಕಟ್ಟುಪಾಡು. ಅವ್ರ್‌ನ್ ಬಿಟ್ಟು ನನ್ ಕರೀಬವ್ದಿತ್ತಲ್ಲ?"– ಸಾವಿತ್ರಮ್ಮನ ಪ್ರಶ್ನೆ.

"ಹೆಂಗಸ್ರುನ್ ಕರ್‍ಯಾದು ಯಾವಾಗ್‌ತಾನೆ ಇತ್ತವ್ವ?"– ಶಬರಿಯ ಮರುಪ್ರಶ್ನೆ.

"ಅದೂ ನಿಜ ಅನ್ನು. ಆದ್ರೇನ್ ಮಾಡಾದು. ಯೆಣ್ ಜೀವ, ನಂಗ್ ತಡೀಲಿಲ್ಲ. ಬಂದ್‌ಬಿಟ್ಟೆ" ಎಂದು ಸಾವಿತ್ರಮ್ಮ ಹೇಳುವ ವೇಳೆಗೆ ಸೂರ್ಯ ಬಂದ.

ಬಂದವನೆ "ನೀವ್ ಹೀಗ್ ಒಂಟಿ ಬಂದ್ರಿ ಅಂತ ನಿಮ್ಮ ಒಡೆಯರು ವಿರೋಧ ಮಾಡಲ್ಲ ತಾನೆ?" ಎಂದು ಕೇಳಿದ.

"ಅದ್ಯಾಕ್ ಮಾಡ್ತಾರೆ ಇರೋಧವ? ಗೌರೀನೂ ನಮ್ ಮಗಳಿದ್ದಂಗೆ, ವೋಗ್ ಬಾ ಅಂಬ್ತ ಯೇಳಿದ್ದೇ ಅವ್ರು" ಎಂದು ಇದ್ದ ವಿಷಯವನ್ನು ಇದ್ದಂತೆ ಹೇಳಿದಳು– ಸಾವಿತ್ರಮ್ಮ

ಸೂರ್ಯ "ಓ ಹಾಗಾ?" ಎಂದು ರಾಗ ಎಳೆದ. ಅಷ್ಟರಲ್ಲಿ ಶಬರಿಯು ಗೌರಿ ಮತ್ತು ನವಾಬಣ್ಣ ಇಬ್ಬರನ್ನೂ ಕೂಗಿ ಕರೆದಳು. ಅವರಿಬ್ಬರೂ ಗುಡಿಸಲಿನಿಂದ

ಬಂದರು. ಸಾವಿತ್ರಮ್ಮನಿಗೆ ಕೈ ಮುಗಿದು ನವಾಬ ಹೇಳಿದ– "ನೀವ್ ಬಂದಿದ್ದು ಒಳ್ಳೇದಾಯ್ತು. ಸಂಬಂಧ ಬೆಸೆದಂತಾಯ್ತು."

"ಇವ್ರ್‌ನೆಲ್ಲ ಬಿಟ್  ನಾವ್ ಬದ್ಕಕಾಯ್ತದೇನಪ್ಪ? ಇವ್ರೆಲ್ಲ ಬಂದ್ ಕೆಲ್ಸ ಮಾಡಿರಲ್ವ ಬೂಮ್‌ತಾಯಿ ಬೆಳೆ ಕೊಡಾದು." ಎಂದು ಸಾವಿತ್ರಮ್ಮ ಸಹಜ ದನಿಯಲ್ಲಿ ನುಡಿದು ಗೌರಿಯ ಕಡೆ ತಿರುಗಿ "ತಗಾ ಗೌರಿ, ನಿಂಗೆ, ನಿನ್ ಗಂಡಂಗೆ ಬಟ್ಟೆ ತಂದಿವ್ನಿ" ಎಂದು ಕೊಟ್ಟು ಹಣೆಗೆ ಕುಂಕುಮವಿಟ್ಟು, ಕೆನ್ನೆಗೆ ಅರಿಸಿನ ಬಳಿದು ತಲೆಮೇಲೆ ಅಕ್ಷತೆ ಹಾಕಿದಳು.

ಪುನೀತನಾದಂತೆ ನೋಡುತ್ತಿದ್ದ ಪೂಜಾರಪ್ಪ "ಒಡತಿ ಕಾಲಿಗ್ ಬೀಳು ಮಗಾ" ಎಂದು ಗೌರಿಗೆ ಸೂಚಿಸಿದ. ಗೌರಿ ಹಾಗೆಯೇ ಮಾಡಿದಳು. ಸಾವಿತ್ರಮ್ಮ "ಒಳ್ಳೇದಾಗ್ಲವ್ವ" ಎಂದು ಹಾರೈಸಿ, ನವಾಬನಿಗೆ "ನಮ್ ಯೆಣ್ ಮಗಳು ದೈರ್ಯ ಮಾಡಿ ನಿನ್ ಮದ್ವೆ ಆಗವ್ಳೆ. ಚಂದಾಗ ನೋಡ್ಕಬೇಕಪ್ಪ" ಎಂದು ಸಲಿಗೆಯ ದಾಟಿಯಲ್ಲಿ ಹೇಳಿದಳು. ನವಾಬ್ ನಸುನಕ್ಕ.

ಸಾವಿತ್ರಮ್ಮ ವಾಪಸ್ ಹೋದಮೇಲೆ ಎಲ್ಲರ ಬಾಯಲ್ಲೂ ಅದೇ ಮಾತು. ಆಕೆಯ ದೊಡ್ಡತನದ ಬಗ್ಗೆ ಮೆಚ್ಚುಗೆ; ಒಡೆಯ–ಒಡತಿ ನಡುವೆ ಇರೋ ವ್ಯತ್ಯಾಸ ಕುರಿತು ಚರ್ಚೆ. ಎಲ್ಲವನ್ನೂ ಕೇಳಿಸಿಕೊಳ್ಳುತ್ತ ಕೂತಿದ್ದ ಶಬರಿಗೆ ಅದೇನನ್ನಿಸಿತೊ "ಅವ್ರೇನ್ ನಮಿಗ್ ಬೂಮಿ ಬಿಟ್‌ಕೊಡಾಕಿಲ್ಲ ಬಿಡ್ರಿ" ಎಂದು ಗೊಣಗು ಮಾತಾಡಿದಳು. ಆಗ ಸೂರ್ಯ "ಅವ್ರ್ ನಿಮಿಗ್ ಭೂಮೀನೂ ಬಿಟ್ಕೊಡಲ್ಲ; ಕೂಲಿ ಕೆಲಸದಿಂದಾನೂ ನಿಮ್ಮನ್ನು ಬಿಟ್ಕೊಡಲ್ಲ" ಎಂದು ವಾಸ್ತವದ ಒಳ ನುಡಿಯಾಡಿದ. ನವಾಬ "ಮುಂದೊಂದು ದಿನ ಭೂಮೀನೂ ಕೊಡ್‌ಬೇಕಾಗುತ್ತೆ" ಎಂದ. ಆಗ ಒಬ್ಬಾಕೆ "ಮದ್ವೆ ಆಗ್ ಮೂರ್‌ದಿನ ಆಗ್ಯೆತೆ ನೋಡು–ಆನಂದವಾಗಿದ್ದೀಯ–ಅದ್ಕೆ ಇಂಗೆಲ್ಲ ಮಾತಾಡ್ತೀಯಪ್ಪ" ಎಂದು ನವಾಬನನ್ನು ತಮಾಷೆ ಮಾಡಿದಳು. ಇನ್ನೊಬ್ಬಾಕೆ "ಸರ್‍ಯಾಗ್ ಯೇಳ್ದೆ ಕಣವ್ವ. ನೀನ್ ಏನಂಬ್ತಿಯಾ ಗೌರಿ?" ಎಂದು ಜಿಗುಟಿದಳು. ಗೌರಿ ನಾಚಿಕೆಯಿಂದ "ಯೇ ವೋಗಕ್ಕ ನಗ್ಸಾರಾಟ ಆಡ್‌ಬ್ಯಾಡ" ಎಂದು ಹುಸಿನಗೆ ತೋರಿಸಿ ನವಾಬನ ಕಡೆ ನೋಡಿದಳು.

ವಾತಾವರಣದಲ್ಲಿ  ಉಕ್ಕಿದ ನಗೆ. ಉಸಿರುಗಟ್ಟುವ ಹೊಗೆಯೆಲ್ಲ ಹಾರಿಹೋಗಿ ನಿಚ್ಚಳವಾದ ಮನಸ್ಸು. ಎಲ್ಲರ ಎದೆಗೂಡಿನಲ್ಲಿ ಗುಬ್ಬಚ್ಚಿ ಹಾಡು. ಗಿಡುಗನ ಭಯವಿಲ್ಲದ ಕನಸಿನ ಕಣ್ಣು.

ದಿನಕಳೆದಂತೆ ಮತ್ತದೇ ಬದುಕಿನ ಹಾದಿ. ನವಾಬ ರಕ್ತಕಾರಿಕೊಂಡು ಸಾಯಲಿಲ್ಲ; ಗೌರಿಗೆ ಗರ ಬಡಿಯಲಿಲ್ಲ. ಏನಾದರೂ ಆದೀತೇನೊ ಎಂದು

ಒಳಗೊಳಗೇ ಆತಂಕದಿಂದ ಇದ್ದ ಜನರು ನಿರಾಳವಾಗತೊಡಗಿದರು. ಅದರಲ್ಲೂ ಪೂಜಾರಪ್ಪ ನಿಟ್ಟುಸಿರುಬಿಟ್ಟು "ಸದ್ಯ ಏನೂ ಆಗ್‌ಬಾರದ್ದಾಗ್ಲಿಲ್ಲ ತಿಮ್ಮರಾಯಿ" ಎಂದು ಸಮಾಧಾನಗೊಂಡ. ಆದರೆ ಇವರೆಲ್ಲ ಸಮಾಧಾನದ ಮನಸ್ಥಿತಿಗೆ ಬರಬೇಕಾದರೆ ಅದೆಂಥಾ ಕೆಂಡಪಯಣ ಕೈಗೊಂಡಿದ್ದರೆಂದು ಅವರಿಗೇ ಗೊತ್ತು.

ಬೆಳಗ್ಗೆಯಾಗುವುದೇ ತಡ, ಗೌರಿಯ ಮನೆ ಬಾಗಿಲಕಡೆ ಭೀತಿಯಿಂದ ನೋಡಿದ್ದರು. ಬಾಗಿಲಲ್ಲಿ ನವಾಬಣ್ಣ ರಕ್ತಕಾರಿ ಬಿದ್ದಿಲ್ಲ; ಸದ್ಯ! ಎಂದು ಪ್ರತಿದಿನ ನಿಟ್ಟುಸಿರುಬಿಟ್ಟಿದ್ದರು. ಗೌರಿ ಸಿಕ್ಕಿದಾಗ "ನಿಂಗೇನಾರ ಆಗ್ತಾ ಐತೇನೆ" ಎಂದು ಕೇಳಿದ್ದರು. ಒಂದಿಬ್ಬರು ತಮಾಷೆಯಾಗಿ "ಗಂಡನ ಜತೆ ಇದ್ರೆ ಏನಾದ್ರು ಆಗ್ದೆ ಇರ್ತೈತ" ಎಂದು ಛೇಡಿಸಿ ತಮಗೆ ತಾವೇ ಹಗುರವಾಗಲು ಪ್ರಯತ್ನಿಸಿದ್ದರು. ಇನ್ನಿಬ್ಬರು "ಮಾರಮ್ಮಂಗೇನಾರ ಅರಕೆವೊತ್ಕಂಡ್ರೆ ಚಂದಾಗಿತ್ತೇನೊ" ಎಂದು ಸಲಹೆ ಕೊಟ್ಟಿದ್ದರು. ಅದಕ್ಕೆ ನವಾಬ ಮತ್ತು ಸೂರ್ಯ ಒಪ್ಪೋದಿಲ್ಲವೆಂದು ಗೊತ್ತಿದ್ದರೂ ಹೀಗೆ ಹೇಳಿದ್ದರು. ಕಡೆಗೆ ಕೆಲವರು ಶಬರಿಯ ಬಳಿ ಬಂದು "ಮದ್ವೇನ ಇಂಗೆಲ್ಲ ಮಾಡಿದ್ದಕ್ಕೆ ಏನೂ ಆಗಾಕಿಲ್ಲ ಅಲ್ವಾ?" ಎಂದು ಅನುಮಾನದಿಂದ ಕೇಳಿದ್ದರು. ಶಬರಿ "ನೀವೇ ಎಲ್ರೂ ಒಪ್ಪಿದ್‌ಮ್ಯಾಲಲ್ವ ಇಂಗ್ ಮದ್ವೆ ಮಾಡಿದ್ದು?"ಎಂದು ಪ್ರಶ್ನಿಸಿದ್ದಳು. "ಅದೇನೊ ದಿಟ ಕಣವ್ವ. ನಮಿಗ್ ಗೊತ್ತಾಗ್ದಂಗೆ ಮಾನಕಳುದ್ರು ಆ ಒಡೇರು ಅಂಬ್ತ ಅನ್ನಿಸ್ತು ನೋಡು, ವೊಟ್ಟೇಗೆಲ್ಲ ಕೆಂಡ ಬಿದ್ದಂಗಾತು. ಸೂರ್ಯಪ್ಪ ಯೇಳಿದ್ದೇ ಸರಿ ಅನ್ನಿಸ್ತು" ಎಂದಿದ್ದಳು ಒಬ್ಬಾಕೆ.

"ಸೂರ್ಯ ಯೇಳಿದ್ದಲ್ಲ; ನಮ್ ವುಚ್ಚೀರ ಯೇಳಿದ್ದು" ಎಂದು ತಿದ್ದಿದಳು ಶಬರಿ. ಆಗ ಅವರು ಹೌದೆಂದರು. "ಒಂದ್‌ವೇಳೆ ನೀವೆಲ್ಲ ಸೂರ್ಯನ್ನ ಬ್ಯಾರೇನೂ ಅಂದ್ಕಳದಾದ್ರೆ, ನಮ್ಮೋನೇ ವುಚ್ಚೀರ ಯೇಳಿದ್ನ ನಂಬಾಕಿಲ್ವ?" ಎಂದು ಶಬರಿ ಮತ್ತೆ ಪ್ರಶ್ನಿಸಿದಳು. "ನಾವ್ ನಂಬಲ್ಲ ಅಂಬ್ತ ಯೇಳಾಕಿಲ್ಲ. ಯಾವತ್ತೂ ಇಂಗಾಗಿಲ್ಲ ನೋಡು. ಅದ್ಕೆ ಒಂದೊಂದ್ ಕಿತ ಏನೇನೊ ಅನ್ನುಸ್ತೈತೆ" ಎಂದು ಅವರು ಸ್ಪಷ್ಟಪಡಿಸಿದರು. ಶಬರಿ ಅಲ್ಲಿಗೇ ಸುಮ್ಮನಾಗಲಿಲ್ಲ. "ಒಂದ್ ವೇಳೆ ಸೂರ್ಯ ಈ ವಿಸ್ಯ ಯೇಳಿದ್ರೆ ಬ್ಯಾರೇನು ಅಂದ್ಕಂಡು ನೀವ್ ನಂಬ್ತಾ ಇರ್ಲಿಲ್ವ?" ಎಂದು ಮತ್ತೆ ಕೇಳಿದಳು. "ಎಲ್ಲಾನ ಉಂಟ? ಸೂರ್ಯಪ್ಪನ್ನ ಬ್ಯಾರೆ ಅಂದ್ಕಳಾದೆಲ್ಲಾನ ಉಂಟ? ಅಂಗೇನೂ ಇಲ್ಲ" ಎಂದರು ಅವರು, ಜೊತೆಗೆ "ವುಚ್ಚೀರ ಕಣ್ಣಾರೆ ಕಂಡಿದ್ನಲ್ಲ ಅದುಕ್ಕೆ ಅವ್ನ್ ಬರ್‍ಕೊಟ್ಟಾಗ ನಂಬ್ಕೆ ಬಂತು" ಎಂದೂ ಹೇಳಿದರು. "ನಂಬ್ಕೆ ಬಂದ್ ಮ್ಯಾಲೆ ಸುಮ್ಕೆ ಇದ್ ಬಿಡ್ರಿ. ಬ್ಯಾರೆ

ಏನೂ ಆಗಾಕಿಲ್ಲ. ಸಾವಿತ್ರಕ್ಕ ಬಂದೊದ್ ಮ್ಯಾಲೆ ಒಡೇರ್ ಎದ್ರುಬೀಳಾದೂ ಇಲ್ದಂಗಾತು. ಬ್ಯಾರೆ ಇನ್ನೇನಾಗ್ತೈತೆ. ಸುಮ್ಕೆ ಅದೂ ಇದೂ ತಲ್ಯಾಗ್ ತುಂಬ್ಕಾಬ್ಯಾಡ್ರಿ" ಎಂದು ಶಬರಿ ಸಮಾಧಾನ ಮಾಡಿದಳು.

"ಏನಾರ ಆಗಂಗಿದ್ರೆ ಅಮಾಸೆದಿನ ಆಗ್ತೈತೆ ಕಣ್ರವ್ವ. ಅಲ್ಲೀಗಂಟ ಕಾಯಾನ" ಎಂದು ಒಬ್ಬಾಕೆ ಗಡುವು ನಿಗದಿ ಮಾಡಿದ್ದೂ ಆಯಿತು. ಅಮಾವಾಸ್ಯೆಯ ದಿನ ಕೆಲವು ಹೆಂಗಸರಿಗಾದರೂ ನಿದ್ದೆ ಬರಲಿಲ್ಲ. ಮತ್ತೆ ಕೆಲವರು 'ಏನಾದ್ರೂ ಆಗಂಗಿದ್ರೆ ಗೌರೀಗೆ, ನವಾಬಣ್ಣಂಗೆ ಆಗ್ತೈತೆ. ನಮ್ಗ್ ಯಾಕ್ ಆಗ್ತೈತೆ' ಎಂದು ಸಮಾಧಾನಿಸಿ ಕೊಂಡಿದ್ದರು. ಗಂಡಸರಿಗೂ ಅಮಾವಾಸ್ಯೆಯ ಗಡುವು ಕಾಡಿಸ ತೊಡಗಿತ್ತು. ಏನಾದರಾಗಲೆಂದು ಹೊರಗೆ ಇಣುಕದೆ ಹಳೇ ದುಪ್ಪಟಿ ಹೊದ್ದು ಮಲಗಿದರು. ನಾಯಿ ಬೊಗಳಿದಾಗ, ಗೂಬೆ ಗೊಟ ಗೊಟ ಎಂದಾಗ, ಹೆಂಡತಿಯರು ತಿವಿದು ಎಬ್ಬಿಸಿದಾಗ, ಎದ್ದರು; ಹೊರಗೆ ಬರಲಿಲ್ಲ. ಬೆಳಿಗ್ಗೆಯಾದಾಗ ನೋಡುತ್ತಾರೆ– ಗೌರಿ ರಂಗೋಲಿ ಇಡುತ್ತಿದ್ದಾಳೆ; ನವಾಬಣ್ಣ ನಸುನಗೆಯಲ್ಲಿ ನಿಂತಿದ್ದಾನೆ!

ಹಟ್ಟಿಯಲ್ಲಿ ಬಿಟ್ಟ ನಿಟ್ಟುಸಿರು ತಂಗಾಳಿಯಾಗಿ ಬೀಸಿತು;
ಹಗಲ ಹುಣ್ಣಿಮೆ ಆವರಿಸಿತು.

* * *

ತೋಪಿನಲ್ಲಿ ಸೂರ್ಯ ಓಡಾಡುತ್ತ ಆಲೋಚಿಸಿದ. ಎಷ್ಟು ದೊಡ್ಡದಾಗಿದೆ ಈ ತೋಪು! ಹೊಂಗೆ ಮರಗಳು ಸಾಕಷ್ಟಿವೆ; ಕೆಲವು ಹುಣಿಸೆ ಮರಗಳಿವೆ; ಉಳಿದಂತೆ ವಿವಿಧ ರೀತಿಯ ಮರಗಳು, ಸ್ವಲ್ಪ ಬಯಲು; ಹತ್ತಿರದಲ್ಲೆ ಬೆಟ್ಟ ಗುಡ್ಡದ ಸಾಲು. ಅಲ್ಲಲ್ಲೆ ಮತ್ತೆ ಮರಗಿಡಗಳು. ಒಟ್ಟು ವಿಸ್ತಾರವಾದ ಪ್ರದೇಶ. ಇದು ಯಾರಿಗೆ ಸೇರಿದ್ದು? ಅನುಭವಿಸುತ್ತಿರುವುದಂತೂ ಒಡೆಯ ನರಸಿಂಹರಾಯಪ್ಪ. ಹೊಂಗೆ ಸೊಪ್ಪು ಕಿತ್ತು ಸೆಣಬು ಮಾಡುತ್ತಾನೆ. ಸೊಪ್ಪನ್ನು ಗದ್ದೆಯಲ್ಲಿ ತುಳಿದುಬಿಟ್ಟರೆ ಅದೇ ಬೆಳೆಗೆ ಪೂರಕವಾದ ಗೊಬ್ಬರ. ಇನ್ನು ಹುಣಿಸೆಮರಗಳ ಫಸಲನ್ನು ಒಡೆಯನೇ ಪಡೆಯುತ್ತಾನೆ. ಅವನು ಅನಧಿಕೃತ ಯಜಮಾನನಾಗಿದ್ದಾನೆ. ಯಾರಿಗೂ ಸೇರದ ಭೂಮಿಯೆಂದರೆ ಅದು ಸರ್ಕಾರಿ ಲೆಕ್ಕಕ್ಕೆ ಬರುತ್ತದೆ. ಇದನ್ನು ಈ ಜನರಿಗೆ ಕೊಡಿಸಬೇಕು. ಇದು ತಮಗೇ ಸಲ್ಲಬೇಕೆಂದು ಇವರು ಹೋರಾಟಕ್ಕಿಳಿಯಬೇಕು. ಕಾಲ ಪಕ್ವವಾಗುತ್ತಿದೆ. ಜನರಿಗೆ ತಿಳುವಳಿಕೆ ಮೂಡುತ್ತಿದೆ. ತಮಗೆ ಯಾರು ಮತ್ತು ಯಾವುದು ವಿರೋಧ ಎಂದು ಈಗ ಜನರಿಗೆ ಅರಿವಾಗತೊಡಗಿದೆ.

ಶಬರಿಮನಸ್ಸುಗಳಲ್ಲಿ ಮೂಡುತ್ತಿರುವ ಧನುಸ್ಸು;
ಬೆವರ ಭೂಮಿಯಲ್ಲಿ ಬೆಳಕಿನ ಬಾಣ;
ಸೂರ್ಯಕಿರಣ.

ತೋಪಿನಲ್ಲಿ ತೂರಿ ಬರುತ್ತಿರುವ ಕೆಂಪು ಕಿರಣಗಳ ನಡುವೆ ಓಡಾಡುತ್ತ ನೋಡುತ್ತಾನೆ ಸೂರ್ಯ–ನಿಸರ್ಗದ ಸೂರ್ಯ ಕೆಂಪಾಗಿದ್ದಾನೆ. ತೋಪಿನ ತುಂಬ ತನ್ನ ಪ್ರಭಾ ವಲಯವನ್ನು ವಿಸ್ತರಿಸಿದ್ದಾನೆ. ಬೀಸುವ ಗಾಳಿಗೆ ಅಲುಗಾಡುವ ಎಲೆಗಳ ಲಯಕ್ಕೆ ತಕ್ಕಂತೆ ತೋಪಿನಲ್ಲಿ ನೆರಳು ಬೆಳಕಿನ ನಡಿಗೆ. ಇವುಗಳ ನಡುವೆ ಸೂರ್ಯನ ಹೆಜ್ಜೆ.

ಕನಸಿನ ತೋಪು; ಮನಸಿನ ಹುರುಪು;
ಹಟ್ಟಿಯ ಅನುಭವ, ಅಕ್ಷರದ ಅರಿವು;
ಸಂಜೆಗೆಂಪಿನವರೆಗೆ ಬೆಳೆಯುತ್ತಿರುವ ನಿಲುವು.

ಸೂರ್ಯ ತೋಪಿನೊಳಗೊಂದಾಗಿ ಯೋಚಿಸುತ್ತ ಕೂತ. ಹೊಸ ಉತ್ಸಾಹದ ಸೆಳೆತ.

ಅಷ್ಟರಲ್ಲಿ ಶಬರಿ, ಗೌರಿ ಮತ್ತು ನವಾಬ್ ಆ ಕಡೆಗೆ ಬಂದರು. ನವಾಬ್ "ಈ ತೋಪು ಎಷ್ಟು ಚೆನ್ನಾಗಿದೆ ಅಲ್ವ ಸೂರ್ಯ?" ಎಂದು ಖುಷಿಯಾಗಿ ಹೇಳಿದ. ಸೂರ್ಯ ತನ್ನ ಆಲೋಚನೆಯನ್ನು ಹೊರಗೆಡಹಿದ–"ಇಷ್ಟು ಚನ್ನಾಗಿರೊ ತೋಪು, ಪಕ್ಕದಲ್ಲಿರೊ ಬಯಲು ನಮ್ ಜನಕ್ ಸೇರ್ಬೇಕು."

ಶಬರಿ ಥಟ್ಟನೆ ಕೇಳಿದಳು– "ನಮ್ಗಾ? ಇದೆಲ್ಲ ನಮಿಗ್ ಸೇರ್ಬೇಕಾ?"

"ಹೌದು, ಈ ಹೊಂಗೆ, ಹುಣಿಸೆ ಎಲ್ಲಾನು ಆ ಒಡೆಯ ಬಳುಸ್ತಾ ಇದಾನೆ. ಲಾಭ ಮಾಡ್ಕೋತಾ ಇದಾನೆ. ಇದು ಅಪ್ಪಿಗ್ ಸೇರಿದ್ದಲ್ಲ. ಇದು ನಮ್ ಹಟ್ಟೀಗ್ ಹತ್ರ ಇರೋ ತೋಪು. ಇದನ್ನು ನಾವೇ ಅನುಭವಿಸ್ಬೇಕು ಅಂತ ಎಲ್ರೂ ಕೇಳ್ಬೇಕು. ನಮ್ ವಶ ಮಾಡ್ಕೊಂಡು ಮತ್ತಷ್ಟು ಬೆಳುಸ್ಬೇಕು. ಆ ಬಯಲನ್ನ ಹೊಲ ಮಾಡ್ಬೇಕು. ಮತ್ತಷ್ಟು ಮರಗಿಡ ಬೆಳೀಬೇಕು"– ಸೂರ್ಯ ಹೇಳುತ್ತ ಹೋದಂತೆ ಶಬರಿ ಅನುಭವಿಸತೊಡಗಿದಳು. ಹೊಂಗೆ ಹುಣಿಸೆಗಳು ಕೈಬೀಸಿ ಕರೆದಂತೆ, ತಾಯಿಯಾಗಿ ತಲೆನೇವರಿಸಿದಂತೆ, ಕಾದು ತೊಟ್ಟಿಕ್ಕುವ ಕಣ್ಣೀರು ಒರೆಸಿದಂತೆ, –ಹೀಗೆ ಏನೇನೊ ಭಾವನೆ. ಶಬರಿ ಮರಗಳ ಹತ್ತಿರ ಬಂದಳು.

ಕಾಂಡಗಳನ್ನು ಮುಟ್ಟಿ ಕಣ್ಣಿಗೆ ಒತ್ತಿಕೊಂಡಳು. ಸೂರ್ಯ ಮಾತು ನಿಲ್ಲಿಸಿದ್ದ; ಗೌರಿ, ನವಾಬ್ ನೋಡುತ್ತಿದ್ದರು.

ಬಯಲಾಗುತ್ತಿರುವ ಭಾವನೆಗಳಿಗೆ ತೋಪು ತಂಗುದಾಣ;
ಗಾಣದ ಬದುಕಿನ ಹಗ್ಗ ಹರಿದು ಹರಡಿದ ಹೊಂಗಿರಣ.

ಸೂರ್ಯನಿಗೆ ಅರ್ಥವಾಯಿತು. "ಶಬರಿ" ಎಂದು ಮೆದುವಾಗಿ ಕರೆದು "ಆ್ಞ" ಎಂದ ಶಬರಿ ಸೂರ್ಯನ ಕಡೆ ನೋಡಿದಳು.

"ಈ ತೋಪು ಆ ಬಯಲು ಎರಡೂ ನಮ್ಮದಾಗ್‌ಬಿಟ್ರೆ ಏಟ್ ಚಂದಾಗಿರ್‍ತೈತೆ" ಎಂದು ಉದ್ಗರಿಸಿದಳು.

ಸೂರ್ಯ ಹೌದೆಂಬಂತೆ ತಲೆಯಾಡಿಸಿ, ನವಾಬನ ಕಡೆ ತಿರುಗಿ, "ಈ ತೋಪು, ಆ ಬಯಲು–ಇದೇ ಬದುಕು! ಅಲ್ವಾ ಗೆಳೆಯ?" ಎಂದು ಕೇಳಿದ. ಹೀಗೆ ಕೇಳಿದವನು ಬಯಲು–ತೋಪುಗಳನ್ನೊಮ್ಮೆ ದಿಟ್ಟಿಸಿದ. ನವಾಬ್‌ಗೆ ಯಾವ ಅರ್ಥದಲ್ಲಿ ಸೂರ್ಯ ಈ ಮಾತು ಹೇಳಿದನೆಂದು ತಕ್ಷಣ ತಿಳಿಯಲಿಲ್ಲ; ಕೇಳಿದ– "ಹಾಗಂದ್ರೆ? ಏನರ್ಥ ನಿನ್ ಮಾತಲ್ಲಿ?"

ಸೂರ್ಯ ನಸುನಗುತ್ತ ಹೇಳಿದ–"ಬೇರೆ ಏನರ್ಥ ಇರುತ್ತೆ ಗೆಳೆಯ; ನಿಸರ್ಗ ಅನ್ನೋದು, ಈ ಪರಿಸರ ಅನ್ನೋದು ನಮ್ಮ ಬದುಕಿನ ಪ್ರತೀಕ ಅನ್ಸುತ್ತೆ ನನಗೆ, ಪರಿಸರ ಅಂತ ಹೇಳಿ ಬರೀ ತೋಪು ಮಾತ್ರ ಬೆಳುದ್ರೆ ಸಾಲದು, ಬಯಲೂ ಬೇಕು; ಬೆಟ್ಟಗುಡ್ಡ ಬೇಕು. ಮರಗಿಡ ಬೇಕು. ಹೊಲಾನೂ ಬೇಕು; ಬರೀ ನೆಲಾನೂ ಬೇಕು. ಯಾವ್ಯಾವುದು ಎಷ್ಟೆಷ್ಟು ಅನ್ನೋ ಹದಕ್ಕೆ ಬರೋದೇ ಬದುಕು."

ಸೂರ್ಯನ ಗಂಭೀರ ಶೈಲಿಗೆ ಕಚಗುಳಿ ಇಡುವಂತೆ ನವಾಬ್ "ಏನಪ್ಪ ಫಿಲಾಸಫರ್ ಆಗ್ತಾ ಇದ್ದೀಯಾ ಹೇಗೆ?" ಎಂದು ಕೇಳಿದ. ಆಗ ಸೂರ್ಯ "ನೀನು ಇತ್ತೀಚೆಗೆ ಮದ್ವೆ ಆಗಿದ್ದೀಯ ನೊಡು, ಅದಕ್ಕೆ ನಿನಗೆ ತುಂಟತನ ಜಾಸ್ತಿ ಆಗ್ತಿದೆ" ಎಂದು ನಗುತ್ತಲೇ ಚುರುಕುಮುಟ್ಟಿಸಿದ. ನವಾಬ್ "ಸಾರಿ ಬ್ರದರ್, ನೀನೇನೊ ಸೀರಿಯಸ್ಸಾಗ್ ಹೇಳ್ತಾ ಇದ್ದಾಗ ನಾನ್ ತಮಾಷೆ ಮಾಡ್ದೆ. ಸಾರಿ" ಎಂದು ಪಶ್ಚಾತ್ತಾಪದಿಂದ ನುಡಿದ. "ಪರವಾಗಿಲ್ಲ ಬಿಡು. ನೀನು ಈಗ ತಮಾಷೆ ಮಾಡ್ದೆ ಇದ್ರೆ ಇನ್‌ಯಾವಾಗ ಮಾಡ್ತೀಯ! ಯಾವಾಗ್ಲೂ ಹುಬ್ಬು ಗಂಟಿಟ್ಕಂಡು ಸೀರಿಯಸ್ ಫೋಜು ಕೊಡೋದು ಸರ್‍ಯಲ್ವಲ್ಲ" ಎಂದು ತಾನೇ ಸಮಾಧಾನದ

ಮಾತಾಡಿದ ಸೂರ್ಯ "ನಾನು ಯಾಕ್ ಆ ಮಾತು ಹೇಳ್ತಾ ಇದ್ದೆ ಗೊತ್ತಾ?" ಎಂದು ಮೊದಲಿನ ಮಾತಿಗೇ ಹಿಂತಿರುಗಿದ. ನವಾಬ್ "ಹೇಳು ಹೇಳು" ಎಂದ.

"ನೋಡು ನವಾಬ್, ನಮಗೆ ಹಸಿರು ಬೇಕು, ತೋಪು ಬೇಕು, ಮರ ಗಿಡ ಬೇಕು. ಹಾಗಂತ ಬಯಲು ಬೇಡ ಅಂತ ತಿಳ್ಕೊಬಾರ್ದು. ಬಯಲಿಗೂ ಬದುಕಿನಲ್ಲಿ ಒಂದು ಬೆಲೆ ಇದೆ; ನೆಲೆ ಇದೆ. ಪರಿಸರದ ಸಮತೋಲನ ಕಾಪಾಡೋದೇ ಪರಿಸರ ಪ್ರಜ್ಞೆ, ಅಂತ ನನ್ನ ಭಾವನೆ. ಪರಿಸರ ಪ್ರಜ್ಞೆಗೆ ಪರಿಸರದ ಸಮಾನತೆ ಮುಖ್ಯ ಆಗ್ಬೇಕು. ಸಮಾಜದ ಸಮತೋಲನ ಮತ್ತು ಸಮಾನತೆಯಲ್ಲಿ ಹೇಗೆ ಸಾಮಾಜಿಕ ಪ್ರಜ್ಞೆ ಕಾಣ್ತೇವೊ ಹಾಗೆ ಇಲ್ಲೂ ಕಾಣ್ಬೇಕು ಅನ್ಸುತ್ತೆ ನಂಗೆ."– ಸೂರ್ಯ ತುಂಬ ಗಂಭೀರವಾಗಿ ಹೇಳತೊಡಗಿದ. ಇದೇನೂ ಅರ್ಥವಾಗದ ಶಬರಿ ತೋಪು, ಬಯಲು, ಬೆಟ್ಟಗಳನ್ನು ನೋಡುತ್ತಿದ್ದಳು. ಗೌರಿ, ನವಾಬನ ಮುಖ ನೋಡುತ್ತಿದ್ದಳು.

"ಈ ಪ್ರಶ್ನೆ ಈಗ ಯಾಕ್ ಬಂತು ನಿನಗೆ?"– ನವಾಬ ಕೇಳಿದ.

"ಯಾಕೆ ಬಂತು ಅನ್ನೋದ್ಕಿಂತ, ಇಂಥ ಪ್ರಶ್ನೆಗಳನ್ನು ಕೇಳ್ಕೋಳ್ತಾ ಇರ್ಬೇಕು ಅನ್ನೋದ್ ನನಗೆ ಮುಖ್ಯ. ಪ್ರತಿಭಟನೆ ಮತ್ತು ಪ್ರಶ್ನೆ ಎರಡಕ್ಕೂ ಸಂಬಂಧ ಇದೆ ಅಂತ ನಿಂಗೂ ಗೊತ್ತು. ಆದ್ರೆ ಈ ಪ್ರಶ್ನೆಯನ್ನ ಹೊರಗಿನ ವ್ಯವಸ್ಥೆಗೂ ಹಾಕ್ಬೇಕು. ನಮ್ಮ ಒಳಗಿನ ವ್ಯವಸ್ಥೆಗೂ ಹಾಕ್ಕೋಬೇಕು. ಆಗ ಪ್ರಶ್ನೇನೂ ಸಾರ್ಥಕ. ಪ್ರತಿಭಟನೇನೂ ಸಾರ್ಥಕ. ಅದಕ್ಕೆ ನನಗೆ ನಾನೇ ಕೆಲವು ಪ್ರಶ್ನೆಗಳನ್ನು ಹಾಕ್ಕೊಳ್ತಾ ಇರ್ತೀನಿ. ಸಾಮಾಜಿಕ–ಆರ್ಥಿ ಸಮಾನತೆ ಮತ್ತು ಪರಿಸರ ಸಮಾನತೆ– ಎಲ್ಲವೂ ಒಟ್ಟಿಗೆ ನಮ್ಮೊಳ್ಗಡೆ ಇದ್ರೆ ಎಷ್ಟು ಚೆನ್ನ ಅನ್ಸುತ್ತೆ. ಈಗ ಒಂದೊಂದೂ ಒಂದೊಂದ್ ವಾದ– ಪ್ರತಿವಾದ ಆಗಿಬಿಟ್ಟಿದೆ. ವಾದ–ಪ್ರತಿವಾದಗಳ ಗೊಂದಲದಲ್ಲಿ ಪೂರಕವಾದ ಪ್ರಜ್ಞೆ ಹಿಂದಕ್ ಸರೀತಾ ಇದೆ."– ಸೂರ್ಯ ಅಂತರಂಗದ ಆಲೋಚನೆಗಳಿಗೆ ಮಾತಿನ ರೂಪ ಕೊಡತೊಡಗಿದ್ದ. ಆಗ ನವಾಬ "ಹಾಗಂದ್ರೆ? ಸ್ವಲ್ಪ ಬಿಡ್ಸಿಹೇಳು" ಎಂದ. ಸೂರ್ಯ ಮತ್ತೂ ಸ್ಪಷ್ಟಪಡಿಸಿದ– "ಸಮಾಜ ಬದಲಾವಣೆ ಮತ್ತು ಪರಿಸರ ಪ್ರಜ್ಞೆ ಬೇರೆ ಬೇರೆ ದಾರಿ ಹಿಡ್ದಿವೆ ಅಂತ ನಿನಗನ್ನೊಲ್ವ? ಪ್ರಗತಿಪರ ವಾದಗಳು ಪರಸ್ಪರ ಪೂರಕವಾಗಿರೊ ಅಂಶಗಳನ್ನು ಗುರುತಿಸಿಕೊಳ್ಳೊ ಬದ್ಲು ವಿರುದ್ಧವಾಗಿರೊ ಸಣ್ಣಪುಟ್ಟ ವಿಷಯಗಳನ್ನು ಹೆಚ್ಚು ಮುಂದುಮಾಡ್ತಾ ಇಲ್ವೆ?" ತಕ್ಷಣ ನವಾಬ ಕೇಳಿದ–" ಹಾಗಾದ್ರೆ ಹೊಂದಾಣಿಕೆ ಮಾಡ್ಕೊಬೇಕಾ?"

"ಛೆ"– ಸೂರ್ಯ ಬೇಸರದಿಂದಲೇ ಪ್ರತಿಕ್ರಿಯಿಸಿದ. "ಹೊಂದಾಣಿಕೆ

ಅಲ್ಲ. ಆಯಾ ವಾದಗಳ ವ್ಯಾಖ್ಯಾನಗಳ ವೈಪರೀತ್ಯದಲ್ಲಿ ಈ ಸಮಸ್ಯೆ ಇದೆ. ಸಾಮಾಜಿಕ–ಆರ್ಥಿಕ ಬದಲಾವಣೆಯ ಕೇಂದ್ರಪ್ರಜ್ಞೆಗೆ ಎಲ್ಲವೂ ಪೂರಕ ವಾಗಿರಬೇಕು. ಅದನ್ನೇ ನಾನು 'ಪೂರಕವಾದ' ಅಂದದ್ದು."

ನವಾಬ್ "ಅದ್ಸರಿ" ಎಂದು ಸುಮ್ಮನಾದ. ಅಷ್ಟರಲ್ಲಿ ಗೌರಿಯು ನವಾಬನನ್ನು ಜಿಗುಟಿದಳು. ಇದನ್ನು ಗಮನಿಸಿದ ಸೂರ್ಯ ನಗುತ್ತಾ "ಗೌರೀಗೆ ತಲೆ ಚಿಟ್ ಹಿಡ್ದಿರ್‌ಬೇಕು" ಎಂದ. "ಅಂಗಲ್ಲಣ್ಣ, ವೋಗಿ ಅಡುಗೆ ಮಾಡ್ಬೇಕಲ್ಲ" ಎಂದಳು. ಸೂರ್ಯ ಮತ್ತೆ ನಗುತ್ತ "ವಾಸ್ತವ ಅಂದ್ರೆ ಇದು ನೋಡು" ಎಂದ.

ಎಲ್ಲರೂ ಹೊರಟು ನಿಂತರು. ಶಬರಿ ಮಾತ್ರ ತೋಪಿನಲ್ಲಿ ಓಡಾಡುತ್ತಲೇ ಇದ್ದಳು. "ಏನಪ್ಪ ನಿನ್‌ಕೆಲ್ಸಾನ ಶಬರಿ ಮಾಡ್ತಿರೋ ಹಾಗಿದೆ" ಎಂದು ನವಾಬ ನಗುತ್ತ ಶಬರಿಯನ್ನು ಕೂಗಿದ. ಶಬರಿ ಬಂದಳು. ಬಂದವಳು ಯಾರ ಮಾತಿಗೂ ಕಾಯದೆ "ಅದೇಟ್ಸರ್ತಿ ಬಂದಿವ್ನಿ ಈ ತೋಪಿಗೆ. ಇವತ್ತು ಏನೊ ವೊಸಾತರ ಕಾಣುಸ್ತಾ ಐತೆ" ಎಂದಳು. "ಪರಿಸರದ ಜೊತೆ ನಮ್ಮ ಸಂಬಂಧ ಹೇಗಿರುತ್ತೊ ಹಾಗ್ ಕಾಣ್ಸುತ್ತೆ" ಎಂದ ಸೂರ್ಯ. "ಅಂಗಂದ್ರೆ?" ಎಂದಳು ಶಬರಿ. "ಹಾಗಂದ್ರೆ ಹೀಗೆ" ಎಂದು ಸೂರ್ಯ ಸ್ಪಷ್ಟಪಡಿಸಿದ– "ಈ ತೋಪು ನಿಮ್ಗೆ ಹತ್ತಿರದಲ್ಲಿದ್ರೂ ಹತ್ರ ಆಗಿರ್ಲಿಲ್ಲ. ಯಾಕಂದ್ರೆ ಅದರಿಂದ ನಿಮಗೆ ಏನೂ ಸಿಗ್ತಾ ಇರ್ಲಿಲ್ಲ– ಒಂದಿಷ್ಟು ನೆರಳು ಬಿಟ್ಟು. ದುಡಿಯೋಕೆ ಮಾತ್ರ ನೀವು ತೋಪಿಗೆ ಬೇಕು. ಅನುಭವಿಸೋಕೆ ತೋಪು ನಿಮ್ದಲ್ಲ. ಮುಂದೆ ಈ ತೋಪು ನಿಮ್ಮದಾಗ್‌ಬೇಕು ಅನ್ನೋಭಾವನೆ ಬಂದಾಗ ಅದಕ್ಕೂ ನಿಮ್ಗೂ ಸಂಬಂಧ ಬೆಳ್ಯುತ್ತೆ. ನೀವು– ಅದೂ ಬೇರ್‌ಬೇರೆ ಆಗೊಲ್ಲ ಅನ್ಸುತ್ತೆ. ಅಲ್ವಾ?"

ಶಬರಿಗೆ ನಿಜವೆನ್ನಿಸಿತು. "ನೀನಂಬಾದ್ ದಿಟ ಅನುಸ್ತೈತೆ" ಎಂದಳು. ಆಗ ಗೌರಿ "ಅಪ್ಪಯ್ಯ ಅಸ್ಕಂಡ್ ಕಾಯ್ತಾ ಇರ್‍ತೈತೆ. ಬಿರ್‌ಬಿರ್ನ್ ವೋಗಾನ ಬರ್‍ರಿ" ಎಂದು ಹೆಜ್ಜೆ ಹಾಕಿದಳು. "ಬರೀ ಪೂಜಾರಪ್ಪಂಗ್ ಊಟಕ್ ಇಟ್ರಾಯ್ತೇನಮ್ಮ– ನಮ್ಮ ಹೊಟ್ಟೆಪಾಡು ಸ್ವಲ್ಪ ನೋಡು ಎಂದು ಛೇಡಿಸಿದ ಸೂರ್ಯ. "ಅದ್ಕೇನಂತಣ್ಣ, ಇವತ್ತು ನಮ್ಮನ್ಯಾಗೇ ಎಲ್ರೂ ಉಂಡ್ರಾತು" ಎಂದು ಸಂತೋಷದಿಂದ ಹೇಳಿದಳು ಗೌರಿ. "ಆಮ್ಯಾಕ್ ನಿಮ್ಮಪ್ಪ ಉರ್‍ದ್ ಉಪ್ಪಾಕಿದ್ರೆ. ನಮ್ ಗತಿ ದ್ಯಾವ್ರೇಗತಿ" ಎಂದು ನಕ್ಕಳು ಶಬರಿ.

"ನಮ್ಮಪ್ಪಯ್ಯ ಅಟಂದ್ ಕೆಟ್ಟಾನಲ್ಲ. ಇವಾಗಂತೂ ಉಂಬಾದು, ಓಡಾಡಾದು, ಕಟ್ಟೆ ಮ್ಯಾಲ್ ಮಲ್ಗಾದು, ಆಟೇಯ" ಎಂದು ಗೌರಿ ತನ್ನ ತಂದೆಯನ್ನು ಸಮರ್ಥಿಸಿಕೊಂಡಳು.

ಶಬರಿಗೆ ತಾನು ಘಾಸಿ ಮಾಡಿದೆ ಎನ್ನಿಸಿತು. "ಸುಮ್ಕೆ ನಗ್ಸಾರಕ್ ಅಂಗಂದೆ

ಕಣೇ ಗೌರಿ. ಪೂಜಾರಪ್ಪನ್ ನೋಡಿರೆ ಪುಣ್ಣೇವ್ ಕಂಡಂಗಾಗ್ತೈತೆ ಇವಾಗ ಎಂದು ಮನದಾಳದಿಂದ ಮಾತಾಡಿದಳು. ಗೌರಿ "ಆಟೇಳು ಮತ್ತೆ" ಎಂದು ಹುಸಿಮುನಿಸಿನಲ್ಲೇ ಹೇಳಿ "ಒಸಿ ಬಿರ್‌ಬಿರ್ನ ಯೆಜ್ಜೆ ಆಕ್ರಿ" ಎಂದು ಒತ್ತಾಯಿಸಿದಳು.

ಇವರು ಹಟ್ಟಿಗೆ ಬರುವ ವೇಳೆಗೆ ಕತ್ತಲಾಗಿತ್ತು. ಹೆಂಗಸರು ಅಡುಗೆ ಮಾಡುತ್ತಿದ್ದರೆ ಗಂಡಸರು ಹೊರಗೆ ಕೂತಿದ್ದರು. ಮನೆಯ ಹೆಂಗಸರ ವಿರೋಧ ಹೆಚ್ಚಾದಂತೆ ಗಂಡಸರು ಗಂಡಂಗಿಗೆ ಹೋಗುವುದನ್ನು ಕಡಿಮೆ ಮಾಡಿದ್ದರು. ಗೌರಿ–ನವಾಬರ ಮದುವೆಯ ದಿನವೂ ಕುಡಿತಕ್ಕೆ ಅವಕಾಶವಾಗಿರಲಿಲ್ಲ. ಕೇಳುವ ಧೈರ್ಯವೂ ಇರಲಿಲ್ಲ. ಹಿಂದೆ ಒಡೆಯರೇ ಸಾರಾಯಿಯನ್ನು ಸರಬರಾಜು ಮಾಡುತ್ತಿದ್ದರು. ಗುಡಿಗೆ ಹೆಣ್ಣು ಬಿಟ್ಟು ಬಂದು ಕುಡಿದು, ತಿಂದು, ತೇಗಿ ಮಲಗುತ್ತಿದ್ದರು. ಈಗ ಅದು ತಪ್ಪಿಹೋಗಿತ್ತು. ಕುಡಿತ ಇಲ್ಲದೆಯೂ ಇರಬಹುದೆಂದು ಅನ್ನಿಸತೊಡಗಿತ್ತು. ಹೆಚ್ಚೆಂದರೆ ತೀರಾ ಶ್ರಮವಾದಾಗ ಒಂದಿಷ್ಟು ಕುಡಿದು ಯಾರಿಗೂ ಪತ್ತೆಯಾಗದಂತೆ ಮಲಗುವವರೂ ಇದ್ದರು.

ಇವತ್ತಂತು ಎಲ್ಲರೂ ಇದ್ದಾರೆ. ಸೂರ್ಯ ಅವರ ಜೊತೆಯೇ ಕೂತುಕೊಂಡ. ಅದೂ ಇದೂ ಮಾತಾಡುತ್ತ ತೋಪು, ಬಯಲುಗಳ ವಿಷಯ ಎತ್ತಿದ. "ಅದು ನಿಮಗೆ ಸೇರಬೇಕು. ಯೋಚ್ನೆ ಮಾಡಿ. ನೀವು ಹ್ಞೂ ಅಂದ್ರೆ ಮುಂದಿನ ದಾರಿ ತುಳಿಯೋಣ" ಎಂದು ಹುರಿದುಂಬಿಸಿದ. ಜನರು ಯೋಚಿಸತೊಡಗಿದರು. ಒಬ್ಬಾತ "ಮುಂದಿನ ಮನೆ ಅನ್ನ ನಂಬ್ಕಂಡು ಈ ಮನೆ ಮುದ್ದೆ ತಪ್ಪಿಸ್ಕಂಡಂಗಾದಾತು" ಎಂದ. "ಹಾಗಂದ್ರೆ?"– ಸೂರ್ಯ ಸ್ಪಷ್ಟನೆ ಕೇಳಿದ. ಆತ ಹೇಳಿದ– "ಅಂಗಂದ್ರೆ ಬ್ಯಾರೆ ಏನೂ ಇಲ್ಲಪ್ಪ. ತೋಪು ನಮ್ಗೇ ಬೇಕು ಅಂಬ್ತಕೇಳಿದ್ ಮ್ಯಾಗೆ ಊರ್ನೋರು ನಮಿಗ್ ಕೂಲಿಕೆಲ್ಸಾನೇ ಕೊಡ್ದೆವೋದ್ರೆ? ಆವಾಗ್ ಬಾಳೇವ್ ಮಾಡಾದ್ ಎಂಗೆ?"

ಸೂರ್ಯ ಹೇಳಿದ– " ನಿಮಗೆ ಹಿಂಗನ್ನೋದು ಸರೀನೆ. ಆದ್ರೆ ಇಡೀ ಊರು ನಿಮ್ಮನ್ನ ದೂರ ಮಾಡಲ್ಲ. ಊರಲ್ಲೂ ನಿಮ್ ಥರಾನೇ ಬದ್ಕೋ ಜನ ಇದಾರೆ. ಭೂಮಿ ಇಲ್ದೆ ಮನೆ ಇಲ್ದೆ ಹೊಟ್ಟೆ ಬಟ್ಟೇಗ್ ಒದ್ದಾಡೊ ಜನ ಊರ್ನಲ್ಲೂ ಇದಾರೆ. ಒಡೆಯರ ಬಳಗ ಈ ಜನ್ರನ್ನೂ ದೂರ ಇಟ್ಟಿದೆ; ವಂಚನೆ ಮಾಡ್ತಾ ಇದೆ."

"ಅದ್ರೂನೂವೆ ಉಸಾರಾಗ್ ಹೆಜ್ಜೆ ಇಡ್ಬೇಕಪ್ಪ" ಎಂದು ಆತ ಮತ್ತೆ ಒತ್ತಿ ಹೇಳಿದ.

"ಅದ್ಸರಿ, ಎಲ್ಲಾ ಇವತ್ತೇ ಆಗ್ಬೇಕಿಲ್ಲ. ಈ ದಿಕ್ಕಿನಲ್ಲಿ ಯೋಚ್ನೆ ಮಾಡೋಣ. ಯಾವಾಗ ಎಲ್ರೂ ಹ್ಞೂ ಅಂತೀರೊ ಅವತ್ತೇ ಕೇಳೋಣ" ಎಂದ ಸೂರ್ಯ.

"ಕೇಳಾದಿನಾನೂ ಬಂದೆ ಬರ್‍ತೈತೆ" ಎಂದು ದೃಢವಾಗಿ ಹೇಳಿದಳು ಶಬರಿ. ಜೊತೆಗೆ ಮತ್ತೊಂದು ಮಾತು ಸೇರಿಸಿದಳು– " ನಾವೆಲ್ಲ ಒಂದಾಗಿದ್ರೆ ಯಾರ್ ಏನೂ ಮಾಡಾಕಿಲ್ಲ. ಗೌರಿ ಮದ್ವೆ ವಿಸ್ಯಾನೇ ತಗಳ್ಳಿ. ನವಾಬಣ್ಣನ ಜತೆ ಮದ್ವೇ ಆತು. ದ್ಯಾವ್ರ್ ಗುಡೀಗೆ ವೋಗ್ದೆ ಇಲ್ಲೇ ಗಂಡನ್ ಜತೆ ಇದ್ದದ್ದೂ ಆತು. ಕೆಟ್ಟದ್ದೇನಾತು? ಏನೂ ಆಗ್ಲಿಲ್ಲ. ನಾವೆಲ್ಲ ಒಂದಾಗಿದ್ದೀವಿ ಅಂಬ್ತ ತಿಳುದ್ ಮ್ಯಾಕೆ ಒಡೇರೂ ಉಸ್ರೆತ್ತಿಲ್ಲ."

ಈಗ ಸಣ್ಣೀರ "ನೀನಂಬಾದೂ ದಿಟ ಅನ್ನು" ಎಂದು ತಲೆಯಾಡಿಸಿದ. ಹುಚ್ಚೀರ ಸಂತೋಷದಿಂದ ಅರಳಿದ. ಒಳಹೋಗಿ ಪುಸ್ತಕಗಳನ್ನು ಹಿಡಿದುಕೊಂಡು ಬಂದು ನಿಂತ. ಆತ ಶಾಲೆಗೆ ಸಿದ್ಧವಾಗಿ ಬಂದದ್ದನ್ನು ನೋಡಿದ ಸೂರ್ಯ "ಇವತ್ತು ಆ ಶಾಲೆ ಇಲ್ಲ, ಇವತ್ತಿಲ್ಲೇ ಶಾಲೆ" ಎಂದ. ಹುಚ್ಚೀರ ಪುಸ್ತಕಗಳನ್ನು ಸೂರ್ಯನ ಮುಂದಿಟ್ಟ. ಆಗ ಸೂರ್ಯ "ಇವತ್ತು ಪುಸ್ತಕದ ಶಾಲೆ ಅಲ್ಲ. ಭೂಮಿ ಶಾಲೆ. ಇಲ್ಲೇ ಕುಂತ್ಕೊಂಡು ಭೂಮಿ, ಬಯಲು ಅದೂ ಇದೂ ಮಾತಾಡೋಣ, ತಗೋ, ಪುಸ್ತಕ ಒಳ್ಗಡೆ ಇಟ್ ಬಾ" ಎಂದು ಪುಸ್ತಕಗಳನ್ನು ವಾಪಸ್ ಕೊಟ್ಟರೂ ಹುಚ್ಚೀರ ಒಳಗೆ ಇಡಲಿಲ್ಲ. ಅದರ ಬದಲು ಅಲ್ಲೇ ಕಟ್ಟೆಯಮೇಲೆ ದೀಪದ ಬೆಳಕಲ್ಲಿ ಕೂತು ಏನೋ ಬರೆಯತೊಡಗಿದ. ಸೂರ್ಯ "ಇನ್‌ಮೇಲೆ ಹುಚ್ಚೀರ ಮೇಷ್ಟ್ರಾಗ್‌ಬಿಡ್ತಾನೆ."ಎಂದು ತಮಾಷೆ ಮಾಡಿದ. ಆನಂತರ ತುಂಬಾ ಹೊತ್ತು ಭೂಮಿ ಹುಟ್ಟಿದ್ದು, ಭೂ ಒಡೆಯರ ಪಾಲಾದದ್ದು, ಮುಂತಾದ ವಿಷಯಗಳನ್ನು ಕತೆಯೋಪಾದಿಯಲ್ಲಿ ಹೇಳುತ್ತ ಜನರ ಜತೆ ಕಳೆದ. ಕಡೆಗೆ "ಒಂದ್ ಹಾಡು ಹೇಳೋಣವಾ" ಎಂದ. "ಊಂಕಣಪ್ಪ, ಬರೀ ಮಾತ್ ಕೇಳಿ ತಲೆ ಎಲ್ಲಾ ತೊಲೆ ತರಾ ಆಗೈತೆ. ತೊಲೆ ಒಳ್ಗೆ ಗುಂಗರಿ ಸೇರ್‍ಕಂಡ್ ಕೊರೀತಾ ಐತೆ. ಒಂದ್ ಪದ ಯೇಳಿದ್ರೆ ಒಸಿ ಅಗುರ ಆಗ್ತೈತೆ" ಎಂದು ಸಣ್ಣೀರ ಸಣ್ಣದನಿಯಲ್ಲಿ ಹೇಳಿಯೇಬಿಟ್ಟ. ಸೂರ್ಯನಿಗೆ, ಸನ್ನಿವೇಶ ಅರ್ಥವಾಯ್ತು. "ಈಗ್ ಹೇಳ್ಕೊಡ್ತೀನಿ, ಹೇಳಿ" ಎಂದು ಶುರುಮಾಡಿದ–

"ಈ ಭೂಮಿ ನಮ್ಮದು ಆಕಾಶ ನಮ್ಮದು
ಗಾಳಿ ನೀರು ಬೆಂಕಿ ಕೂಡಿ ಪಂಚಭೂತ ನಮ್ಮದು॥
ನಮ್ಮ ಭೂಮಿಗರ್ಭದಲ್ಲಿ ಭ್ರೂಣಗಳ ಕೊಂದರು
ಆಕಾಶದ ಅನಂತವನ್ನು ಆಪೋಶನಗೊಂಡರು
ಬೀಸೋಗಾಳಿ ಎದುರು ನಿಂತು ಗಾಳಹಾಕಿ ಹಿಡಿದರು.
ಕುಡಿವ ನೀರ ಕಣ್ಣ ಕಳೆದು ಕುರುಡಾಗಿಬಿಟ್ಟರು.

ಬೆಂಕಿ ಹಿಡಿದು ಎಗರಿ ಕುಣಿದು ಕನಸುಗಳ ಸುಟ್ಟರು॥”...

–ಹೀಗೆ ಹೇಳಿಕೊಟ್ಟದ್ದನ್ನು ತಪ್ಪು ಸರಿಗಳ ಸಮೇತ ಜನರು ಹಾಡಿದರು. ಮತ್ತೆ ಮತ್ತೆ ಹೇಳಿಕೊಟ್ಟ ಸೂರ್ಯ ಅದರ ಅರ್ಥವನ್ನೂ ವಿವರಿಸಿದ. ಅವರು ಉತ್ಸಾಹಿತರಾದರು. ಕೆಲವರಂತು ಎದ್ದು ಕುಣಿಯತೊಡಗಿದರು. ಅಷ್ಟರಲ್ಲಿ ಹೆಂಗಸರು ಹೊರಬಂದು “ಉಂಬಾಕ್ ಬರಾಕಿಲ್ವ” ಎಂದು ಕೇಳಿದರು. ಹುಚ್ಚೀರನ ಹತ್ತಿರ ಕಟ್ಟೆ ಮೇಲೆ ಕೂತಿದ್ದ ತಿಮ್ಮರಾಯಿ “ಎಲ್ಲಾರು ಇಲ್ಲೇ ತರ್‍ರವ್ವ. ಒಟ್ಗೇ ಉಂಡ್ರಾತು” ಎಂದ. ಪೂಜಾರಪ್ಪ “ಅಂಗೇ ಮಾಡ್ರವ್ವೊ. ಎಲ್ಲಾ ಇಲ್ಲೆ ಕುಂತ್ಕಂಡ್ ಉಂಬಾನ” ಎಂದು ತಿಮ್ಮರಾಯಿಯ ಮಾತಿಗೆ ಪೂರಕವಾದ. ಆಗ ಶಬರಿ ಉತ್ಸಾಹದಿಂದ “ಯಾರ್ ಮನ್ಯಾಗ್ ಏನಾರ ಮಾಡಿರ್‍ಲಿ. ಎಂಗಪ್ಪ ವೊರೀಗ್ ತರಾದು ಅಂದ್ಕೊಬ್ಯಾಡ್ರಿ. ಎಲ್ಲಾರ್ ಮನೇದೂ ವೊಟ್ಟೇಪಾಡೇ. ತಗಂಡ್ ಬರ್‍ರಿ” ಎಂದು ಹುರಿದುಂಬಿಸಿದಳು. ಹಿಂದೆಮುಂದೆ ನೋಡುತ್ತಿದ್ದವರೂ ಆ ಹುರುಪಿನಿಂದ ತಂದರು.

ಮುದ್ದೆ, ಉಳಿಸೊಪ್ಪು, ರೊಟ್ಟಿ, ಚಟ್ನಿ, ಬದನೆಕಾಯಿ ಹುಳಿ, ಅರ್ಧಾಮ್ರ, ಮೆಣಸಿನಕಾಯಿ, ಗೊಜ್ಜು–ಹೀಗೆ ತರಾವರಿ ತಂದಿಟ್ಟರು. ಎಲ್ಲರೂ ತಂದದ್ದು ಹೊಟ್ಟೆಗಾಗಿ. ಯಾವುದೂ ಅಪಥ್ಯವಲ್ಲ. ನವಾಬ ಎಲ್ಲರೂ ಒಂದೊಂದಾಗಿ ತಂದಿಡುವುದನ್ನು ನೋಡುತ್ತಲೇ ಇದ್ದ. ಎಲ್ಲವನ್ನೂ ನೋಡಿ ನಸುನಕ್ಕ. ನವಾಬನ ನಗೆಯನ್ನು ನೋಡಿದ ಸೂರ್ಯ “ಏನ್ ಸಮಾಚಾರ?” ಎಂದು ತಮಾಷೆಯಲ್ಲಿ ತಿವಿದು ಕೇಳಿದ. ನವಾಬ “ಪೂರಕವಾದ!” ಎಂದು ಅಲ್ಲಿದ್ದ ಆಹಾರ ವೈವಿಧ್ಯದ ಕಡೆ ಕಣ್ಣು ಎಗರಿಸಿ ತೋರಿಸಿ ನುಡಿದ. ಸೂರ್ಯನಿಗೆ ನಗು ತಡೆಯಲಾಗಲಿಲ್ಲ. ನಗುತ್ತಾ “ಪೂರಕವಾದ ಅಷ್ಟೇ ಅಲ್ಲ; ಭೂಮಿವಾದ, ಕಣಯ್ಯಾ ಭೂಮಿವಾದ” ಎಂದು ಹೇಳಿದ್ದಲ್ಲದೆ “ಈಗ ವಾದಾನೆಲ್ಲ ವಾಸ್ತವಕ್ಕಿಳ್ಸಿ ಊಟ ಮಾಡೋಣ” ಎಂದು ತಟ್ಟೆಯನ್ನು ಎಳೆದುಕೊಂಡ. “ಈಗ ನಾವೆಲ್ಲ ಭೂಮಿ ಮೇಲಿದೇವೆ. ಅದ್ರಿಂದ ಇದು ಭೂಮಿವಾದಾನೇ ಸರಿ” ಎಂದು ಮುದ್ದೆಗೆ ಕೈ ಹಾಕಿದ ನವಾಬ “ಈ ಭೂಮಿ ನಮ್ಮದು ಈ ಊಟ ನಮ್ಮದು–ಅಂತ ಎಲ್ರೂ ಒಂದೇ ಮನಸ್ಸಿಂದ ಊಟ ಮಾಡಿ” ಎಂದು ನಗುತ್ತಲೇ ಹೇಳಿದ.

ಶಬರಿ “ನೀವು ಎಲ್ಲಾರು ಕುಂತ್ಕಳ್ರವ್ವ. ನಾವ್ ನಾವೇ ಆಕ್ಕಂಡ್ ಉಂಬಾನ” ಎಂದು ಒತ್ತಾಯಿಸಿದಾಗ ಎಲ್ಲ ಹೆಂಗಸರೂ ಗಂಡಸರೊಂದಿಗೆ ಕೂತರು. ಮಾತುಗಳ ಮಧ್ಯೆ ಊಟ ನಡೆಯಿತು– ಹುರುಪಿನಿಂದ; ಉತ್ಸಾಹದಿಂದ.

ಊಟ ಮಾಡುತ್ತಿರುವಾಗಲೇ ತಿಮ್ಮರಾಯಿ "ಸೂರ್ಯಪ್ಪ, ನಿನ್ನವ್ವ, ಅಪ್ಪ ಎಲ್ಲವ್ರೆ? ಏನ್ ಮಾಡ್ತಾ ಅವ್ರೆ?" ಎಂದು ಕೇಳಿದ.

ಸೂರ್ಯ ಊಟ ಮಾಡುತ್ತಿದ್ದವನು ಹಾಗೇ ಕೂತ. ಮಾತಾಡಲಿಲ್ಲ. ತಿಮ್ಮರಾಯಿಗೆ ತಾನು ಕೇಳಬಾರದಿತ್ತೇನೊ ಎನ್ನಿಸಿತು. "ಬೋದಿನ್ದಿಂದ ಕೇಳಾನ ಅಂದ್ಕಂಡಿದ್ದೆ ಕಣಪ್ಪ. ನೀನ್ ಯಾವಾಗ಼್ೂ ಈ ಕೆಲಸ್ದಾಗಿದ್ರೆ ಅವ್ರಿಗೆ ವೊಟ್ಟೆಪಾಡೆಂಗೆ ಆಂಬ್ತ ಉಂಬ್ತಾ ಕುಂತಾಗ್ ನೆಪ್ಪಿಗ್ ಬಂತು. ಕೇಳಿದ್ದೇನಾರ ತೆಪ್ಪಾತ?" ಎಂದು ಸೂರ್ಯನನ್ನು ಪಶ್ಚಾತ್ತಾಪದ ತುಡಿತದಿಂದ ಕೇಳಿದ. ಸೂರ್ಯ "ಹಾಗೇನಿಲ್ಲ ಕಣಜ್ಜ. ನಂಗೆ ಅಪ್ಪ ಇಲ್ಲ. ಉಳ್ದಿರೋದು ಅಮ್ಮ ಮಾತ್ರ" ಎಂದು ಎಲ್ಲೋ ನೋಡುತ್ತಾ ಕೂತ. ಆಗ ಪೂಜಾರಪ್ಪ "ಒಂದು ಕಿತ ಕರ್ಕಂಡ್ ಬಾರಪ್ಪ ನಿಮ್ಮವ್ವನ್ನ" ಎಂದ.

ಸೂರ್ಯನ ಕಣ್ಣಲ್ಲಿ ನೀರು ತುಂಬಿರುವುದನ್ನು ಶಬರಿ ಗಮನಿಸಿದಳು.

# ೧೪

ಸೂರ್ಯ ಮಲಗಿರಲಿಲ್ಲ. ಕೈಯ್ಯಲ್ಲಿ ಪುಸ್ತಕ, ಪಕ್ಕದಲ್ಲಿ ಬಗಲುಚೀಲ, ಚಿಂತೆಯ ಮುಖ.

"ಸೂರ್ಯ",–ಶಬರಿ ಮಾತನಾಡಿಸಿದಳು.

ಸೂರ್ಯ ತಲೆಯೆತ್ತಿ ನೋಡಿದ. "ಬಾ, ಶಬರಿ" ಎಂದ.

ಶಬರಿ ಬಂದು ಕೂತಳು. ಮೆಲ್ಲಗೆ ಆತನ ಕೈ ಹಿಡಿದುಕೊಂಡಳು.

"ನಿಮ್ಮವ್ವನ್ನ ಒಂದ್ ಕಿತ ಇಲ್ಲಿಗ್ ಕರ್ಕಂಡ್ ಬಾ."

ಸೂರ್ಯ ಮೌನವಾಗಿ ಶಬರಿಯ ಕೈಯನ್ನು ಒತ್ತಿ ಹಿಡಿದ.

"ನಂಗಂತೂ ಅವ್ವ ಇಲ್ಲ. ನಿಂಗಾನ ಐತಲ್ಲ. ಕರ್ಕಂಡ್ ಬಾ"– ಮತ್ತೆ ಒತ್ತಾಯ.

"ಹೌದು, ನನಗೆ ಅವ್ವ ಇದಾಳೆ– ಇದ್ದೂ ಇಲ್ದಂತೆ."– ಸೂರ್ಯ ನಿಟ್ಟುಸಿರಿನೊಂದಿಗೆ ನುಡಿದ.

"ಯಾಕಂಗಂಬ್ತೀಯ? ನಿಂಗೂ ನಿನ್ನವ್ವಂಗೂ ಆಗಾಕಿಲ್ವ'

"ಹಾಗೇನಿಲ್ಲ. ಅಮ್ಮನ್ನ ನೋಡೋಕೆ ಆಗ್ತಾ ಇಲ್ವಲ್ಲ."

"ಅದಕ್ಕೇ ನಾನಂದಿದ್ದು– ಇಲ್ಲಿ ಕೆಲ್ಸ ಇದ್ದೇ ಇರ್ತೈತೆ. ಅಂಗಂಬ್ತ ಯೆತ್ತವ್ವನ್ ಮರ್ಯಾದುಂಟಾ? ಒಂದ್ ಕಿತ ವೋಗ್ ಬಾ. ಬತ್ತೀನಿ ಅಂದ್ರೆ ಕರ್ಕಂಡ್ ಬಾ."

"ಅದಕ್ಕೂ ಕಾಲ ಬರ್ಬೇಕು."

"ಯೆತ್ತವ್ವನ್ ನೋಡಾಕೂ ಕಾಲ ಬರ್‌ಬೇಕಾ?"

"ಈ ದೇಶ್ದಲ್ಲಿ ಹಾಗಾಗಿದೆ ನಮ್ಮಂತೋರ್ ಪಾಡು."

"ಏನೋಪ್ಪ ನಂಗೊಂದೂ ತಿಳ್ಯಾಕಿಲ್ಲ. ಬರ್ತಾ ಬರ್ತಾ ನೀನು ಒಗಟಾಗ್ತಿದ್ದೀಯ."

"ಒಗಟು ಬಿಡ್ಸೋಕ್ ಬಂದೋನೇ ಒಗಟಾಗೋದು ಎಂಥ ವಿಪರ್ಯಾಸ."

"ನಂಗಿವೆಲ್ಲ ದೊಡ್ ದೊಡ್ ಮಾತು ತಿಳ್ಯಾಕಿಲ್ಲ. ಬೂಮ್‌ತಾಯಿ, ತೋಪು, ಅಟ್ವಿ, ಬೆಟ್ಟ ಅಂದ್ರೆ ಚಂದಾಗ್ ತಿಳೀತೈತೆ. ಅಂಗೇ ಅವ್ವ ಅಂದ್ರೆ ಮನಸ್ನಾಗೆಲ್ಲ ಮಳೆ ವೊಯ್ದಂಗಾಯ್ತದೆ."

ಸೂರ್ಯ ಶಬರಿಯ ತಲೆನೇವರಿಸಿದ. ಆಕೆಯ ಕಣ್ಣಲ್ಲಿ ನೀರು

ತುಂಬಿರುವುದನ್ನು ನೋಡಿದ. ಕಣ್ಣೀರು ಒರೆಸುತ್ತ "ನನ್ನವ್ವ ಹಟ್ಟೀಗ್ ಬರೋ ದಿನ ಬಂದೇ ಬರುತ್ತೇ" ಎಂದು ಕಣ್ಣಲ್ಲಿ ನೀರು ತುಂಬಿಕೊಂಡ.

* * *

ಅಮ್ಮನ ನೆನಪು ತೋಪಿನ ತಂಗಾಳಿ.
ಕಾಂಡ ಕೊಂಬೆಗಳಲ್ಲಿ ಲಾವಾರಸ.
ಕೆಂಡಕ್ಕೆ ಕವಚ–ಸೂರ್ಯಮುಖ.

ಸೂರ್ಯ ಮರದಿಂದ ಮರಕ್ಕೆ ಓಡಾಡಿದ.
ಮನಸ್ಸಿನಲ್ಲೇ 'ನೀವು ಕಂಡಿರೆ' ಎಂದು ಕೇಳಿದ.
ತಾಯಿಯನ್ನು ಕಾಣಲು ಹೋಗುವುದೆ ಬಿಡುವುದೆ–ಗೊತ್ತಾಗದ ಗಾಣದ ಸುತ್ತು.

ಅಷ್ಟರಲ್ಲಿ ನವಾಬ ಬಂದ. ಸೂರ್ಯ ಆತನನ್ನು ಕೇಳಿದ–

"ನಾನ್ ಅಮ್ಮನ್ ನೋಡ್ಕಂಡ್ ಬರ್ಲಾ?"

"ಏನ್ ಮಾತೂಂತ ಆಡ್ತೀಯ ಸೂರ್ಯ? ಹೋಗಿ ಸಿಕ್ಕೊಳ್ಬೇಕು ಅಂತಿದ್ದೀಯೇನು? ಇನ್ ಸ್ವಲ್ಪದಿನ ಎಲ್ಲಾ ಒಂದು ಸ್ಥಿತೀಗ್ ಬರುತ್ತೆ. ಆಮೇಲೆ ಹೋದ್ರಾಯ್ತು" ಎಂದು ನವಾಬ ಹೇಳಿದರೂ ಸೂರ್ಯನಿಗೆ ಸಮಾಧಾನವಾಗಲಿಲ್ಲ.

"ನಾನು ಎಲ್ಲಿದ್ದೀನಿ ಹೇಳು ಅಂತ ಅಮ್ಮಂಗೆ ಪೋಲಿಸ್ನೋರು ಅದೆಷ್ಟು ತೊಂದ್ರೆ ಕೊಟ್ಟಿರ್‌ಬಹ್ದು. ಅಲ್ವಾ?"

"ನಮ್ ಸಂಗಾತಿಗಳು ಇದಾರಲ್ಲ. ಅದೆಲ್ಲ ನಿಭಾಯ್ಸಿರ್ತಾರೆ."

"ಆದ್ರೂ ಅಮ್ಮಂಗೆ ಎಷ್ಟು ಸಂಕಟ ಆಗಿರ್ಬೇಕು; ಅದೆಷ್ಟು ಅತ್ತಿರ್ಬೇಕು."

"ಸೂರ್ಯ, ನಿನ್ ತಳಮಳ ನಂಗರ್ಥ ಆಗುತ್ತೆ. ರಾತ್ರಿ ತಿಮ್ಮರಾಯಿ ನಿನ್ ತಾಯಿ ಬಗ್ಗೆ ಕೇಳ್ದಾಗ್ನಿಂದ ನಿನಗೆ ಅದೇ ನೆನಪು ಕೊರೀತಾ ಇದೆ. ಆದ್ರೆ ತಾಯಿ ನೆನಪಲ್ಲಿ ತಾಳ್ಮೆ ಕಳ್ಕೊಬೇಡ. ಇನ್ ಸ್ವಲ್ಪದಿನ ಅಷ್ಟೆ."

"ಅಂದ್ರೆ ಕಾಲಕ್ಕಾಗಿ ಕಾಯ್ಬೇಕು"– ಸೂರ್ಯ ಬೇಸರದಿಂದ ಹೇಳಿದ.

"ಅದು ನಿನ್ನದೇ ಮಾತು ಸೂರ್ಯ; ನೀನೇ ಹೇಳ್ತಿದ್ದ ಮಾತು. ಕಾಲದ ಜೊತೆ ಹೋಗ್ಬೇಕು; ಕಾಲಕ್ಕಾಗಿ ಕಾಯ್ಬೇಕು. ಕಾಲಾನ ಮೀರ್ಬೇಕು. ಇದು ನೀನೇ ಹೇಳಿಕೊಟ್ಟ ನೀತಿ, ಅಲ್ವ?" – ನವಾಬ ಆಪ್ತವಾಗಿ ಪ್ರಶ್ನಿಸಿದ.

"ನಿಜ. ಆದ್ರೇನ್ ಮಾಡೋದು. ಅಮ್ಮನ ಜಾಗ್ದಲ್ಲಿ ನಿಂತು ನೋಡ್ದಾಗ ತುಂಬಾ ನೋವಾಗುತ್ತೆ."

"ಅದೇನೇ ಇರ್ಲಿ ಸೂರ್ಯ. ನೀನು ಈಗ ಹೋದ್ರೆ ವಿನಾಕಾರಣ ತೊಂದ್ರೇಗ್ ಸಿಕ್ಕೋತೀಯ. ನಿನಗಾಗಿ ಪೋಲಿಸರು ಬಲೆ ಬೀಸಿರ್ತಾರೆ. ಸದ್ಯ ಅವ್ರು ಈಕಡೆ ಬರೋದ್ ಕಡ್ಮೆ. ಹಾಗ್ ನೋಡಿದ್ರೆ ನಾನ್ ಬಂದ್ಮೇಲಂತೂ ಬಂದೇ ಇಲ್ಲ. ದಯವಿಟ್ಟು ನನ್ ಮಾತು ಕೇಳು. ಸದ್ಯಕ್ಕೆ ಎಲ್ಲೂ ಹೋಗ್ಬೇಡ."

ಸೂರ್ಯ ಮೌನವಾದ.

ಆದರೆ ಒಳಗಿನ ಬೇಗೆ ಆರಿರಲಿಲ್ಲ. ಅದೊಂದು ಹಿತವಾದ ಬೇಗೆ. ನೆನಪಿನ ಸಂತೋಷದೊಳಗೆ ಸೇರಿದ ಸಂಕಟದ ಸುಳಿ. ಮನುಷ್ಯಸಂಬಂಧದ ಬಳುವಳಿ. ಹೋರಾಟದ ಹಾದಿ ಸುಗಮವಲ್ಲ. ವೈಯಕ್ತಿಕ ಒಳಹೋರಾಟಗಳನ್ನು ಉಳಿಸಿಕೊಳ್ಳುತ್ತ, ಒಳಗನ್ನು ಮೀರಿ ಹೊರಗಿನ ವಿರೋಧಗಳಿಗೆ ಮುಖಾಮುಖಿ ಯಾಗಿ ಮತ್ತೆ ಅಂತರ್ಮುಖಿಯಾಗುವ ಹಾಗೆ–**ಕಮ್ಮಾರನ ಕಮ್ಮಟ**.

ನವಾಬನಿಗೆ ಸೂರ್ಯ ಪ್ರತಿಕ್ರಿಯಿಸದೆ ಬೆನ್ನು ತಟ್ಟಿದ. ಭಾವನೆಯ ಗಟ್ಟಿಯನ್ನು ಬೇಗೆಯಲ್ಲಿ ಬೇಯಿಸುತ್ತ ಕರಗಿಸತೊಡಗಿದ.

ಆಗ ನವಾಬ್ ಹೇಳಿದ– "ಸುತ್ತಮುತ್ತ ಇರೋ ಬೇರೆ ಜನ್ರನ್ನೂ ಶಾಲೇಗ್ ಕರೆತರಬೇಕು. ಆ ಬಗ್ಗೆ ಇನ್ ಮುಂದೆ ಕೆಲ್ಸ ಮಾಡ್ಬೇಕು. ಈ ಭೂಮಿ ನಮ್ಮದು ಅನ್ನೋ ಹಾಡು ಹರಡ್ಬೇಕು..." ಗೆಳೆಯನ ಉತ್ಸಾಹವನ್ನು ಕಂಡು ಸೂರ್ಯನಿಗೆ ಹೆಮ್ಮೆಯೆನಿಸಿತು. ಹಗುರವಾಗುತ್ತ ಹೇಳಿದ– "ಮದ್ವೆ ರಜಾನ ತುಂಬಿಕೊಡ್ಬೇಕು ಅಂತ ಹೊರಟಂಗಿದೆ."

"ತಮಾಷೆ ಮಾಡ್ಬೇಡಪ್ಪ" ಎಂದು ನವಾಬ ಹುಸಿಮುನಿಸು ತೋರಿದಾಗ,

"ಓಕೆ ನಾನ್ ರೆಡಿ. ಕ್ರಿಯೇನೆ ನಮ್ ತಾಯಿ. ಸರೀನಾ?"

"ತಾಯೀನೊ ತಂದೇನೊ ಒಟ್ನಲ್ಲಿ ಕೆಲ್ಸ ಮಾಡೋಣ. ಸ್ತ್ರೀವಾದಿಗಳು ತಾಯಿ ಅನ್ನೋದು, ಪುರುಷವಾದಿಗಳು ತಂದೆ ಅನ್ನೋದು, ಆಮೇಲ್ ಮಾಡ್‌ಬೇಕಾದ ಕೆಲ್ಸ ಒಂದ್‌ಬಿಟ್ಟು, ಬೇರೆ ಎಲ್ಲಾ ಮಾಡೋದು, ಅದೆಲ್ಲ ಈಗ ನಮಿಗ್ ಬೇಡ". ನವಾಬನ ಮಾತು ಕೇಳಿ ಸೂರ್ಯ ಅಚ್ಚರಿಗೊಂಡ.

"ಏನ್ ಗೆಳೆಯ. ಸಿನಿಕಲ್ ಆಗ್ತಾ ಇದ್ದೀಯಾ ಹೇಗೆ?"

"ಖಂಡಿತ ಇಲ್ಲ. ಸಿನಿಕಲ್ ಆಗಿರೋರು ಹೀಗೆಲ್ಲ ಚರ್ಚೆ ಮಾಡ್‌ಬಹುದು ಅಂತ ಹೇಳ್ದೆ. ಯಾಕೆಂದ್ರೆ ಅಪ್ರಿಗ್ಯಾವ್ದೂ ರುಚಿಸೊಲ್ಲ ನೋಡು, ತಾಯಿ–ತಂದೆ, ಅಣ್ಣ–ತಂಗಿ ಎಲ್ರುನ್ನೂ ಎದುರುಬದುರು ನಿಲ್ಸಿ ಕ್ರಿಯೇನ ನಿಷ್ಕ್ರಿಯೆ ಮಾಡಿ

ಮಹಾನ್ ಸಾಧಕರಾಗ್ತಾರೆ. ಅದಕ್ಕೆ ಸುಮ್ನೆ ಹಾಗಂದೆ–ಪಾಸಿಂಗ್ ರಿಮಾರ್ಕ್ಸ್ ಥರಾ. ಆಮೇಲೆ ಅದನ್ನೇ ಹಚ್ಕೊಂಡು ನಿದ್ದೆ ಕೆಡ್ಬೇಡ."– ನವಾಬ್ ವಿವರಿಸಿದ.

"ನಿದ್ದೆ ಕೆಟ್ರೂ ಪರ್ವಾಗಿಲ್ಲ; ದೃಷ್ಟಿ ಕೆಡಬಾರದು"– ಸೂರ್ಯ ಸಮಸ್ಥಿತಿಗೆ ಬರುತ್ತಾ ಹೇಳಿದ.

ನವಾಬ " ಮಾತು ಅಂದ್ರೆ ಇದು ನೋಡು" ಎಂದು ಮೆಚ್ಚುಗೆ ಸೂಚಿಸಿದ. ಆಗ ಸೂರ್ಯ ಮತ್ತೆ ಗಂಭೀರವಾಗಿ ಹೇಳಿದ–"ನೋಡು ಗೆಳೆಯ, ನಾನು ಭಾವ ಆದಾಗ ನೀನು ಬುದ್ಧಿ ಆಗ್ಬೇಕು. ನೀನು ಭಾವ ಆದಾಗ ನಾನ್ ಬುದ್ಧಿ ಆಗ್ತೀನಿ. ಆಗ ಭಾವ–ಬುದ್ಧಿ ಸಮಾನವಾಗಿ ಒಬ್ರಲ್ಲೇ ಇರೋಕ್ ಸಾಧ್ಯ ಆಗುತ್ತೆ."

"ಭಾವ–ಬುದ್ಧಿಗಳ ಸಮಾನತೆ! ಅಲ್ವಾ?"

"ಹೌದಲ್ವ ಗೆಳೆಯ? ನಾವು ಎಲ್ಲಾ ಕಡೆ ಎದುರಿಸ್ತಾ ಇರೋದು ಕ್ರೈಸಿಸ್ ಆಫ್ ಈಕ್ವಾಲಿಟಿ (crisis of equality) ಅಲ್ವಾ? ದೇಹದ ಒಳಗೆ, ದೇಹದ ಹೊರಗೆ– ಎಲ್ಲಾ ಕಡೆ ಸಮಾನತೆಯ ಬಿಕ್ಕಟ್ಟು."

"ಬಿಕ್ಕಟ್ಟನ್ನು ತೆಗೆದು ಸಮಾನತೆ ಉಳ್ಸೋಕಾಗಿ ನಮ್‌ಕ್ರಿಯೆ. ಬಾ ಹೋಗೋಣ" ಎಂದು ನವಾಬ್ ಹೆಜ್ಜೆಹಾಕಿದ.

ಇಬ್ಬರೂ ಜೊತೆಯಲ್ಲಿ ಹೊರಟರು.

ನಾಲ್ಕೈದು ದಿನ ಬೆಟ್ಟದಾಚೆಯ ಬುಡಕಟ್ಟಿನ ಜನರನ್ನು, ಊರಿನ ಬಡಜನರನ್ನು ಭೇಟಿಯಾದರು. ಹುಚ್ಚೀರ, ಸಣ್ಣೀರ ಮುಂತಾದವರ ಸಹಾಯದಿಂದ ಇವರನ್ನೆಲ್ಲ ಸಂಪರ್ಕಿಸಿ ಸ್ನೇಹಸಂಪಾದನೆ ಮಾಡತೊಡಗಿದರು.

ಊರೊಳಗೆ ಇವರು ಬಂದು ಹೋದ ಸುದ್ದಿ ಗೊತ್ತಾದ ಮೇಲೆ ಜೋಯಿಸರು ಜಾಗೃತರಾದರು. ನರಸಿಂಹರಾಯಪ್ಪನಿಗೆ ಸ್ವಲ್ಪ ಬಿಗಿಯಾಗಿರ ಬೇಕೆಂದು ಸಲಹೆಕೊಟ್ಟರು.

"ನಾನ್ ಯಾವ್ದುಕ್ಕೂ ಎದ್ರಲ್ಲ ಸಾಮೇರ" ಎಂದ ನರಸಿಂಹರಾಯಪ್ಪ.

ಇದು ಎಂದಿನಂತೆ ಆಡುವ ಜಡಮಾತೆಂದು ಜೋಯಿಸರು ಭಾವಿಸಿದರು. ಆದರೆ ನರಸಿಂಹರಾಯಪ್ಪನ ಮುಂದಿನ ಮಾತು ಅವರನ್ನೇ ಚಕಿತಗೊಳಿಸಿತು.

"ನಮ್ ಎಮ್ಮೆಲ್ಲೆ ಸಾಯೇಬ ಸಿಕ್ಕಿದ್ದ. ನಮ್ಮೂರ್ ಉದ್ದಾರ ಮಾಡಾಕ್ ಬತ್ತೀನಿ ಅಂದವ್ನೆ. ಮನ್ನೆ ಪೋಲಿಸಪ್ಪನೂ ಬಂದಿದ್ದ. ನಾನು ನನ್ ಉಸಾರ್ಗೆ ಏನ್ ಬೇಕೊ ಎಲ್ಲಾ ಮಾಡ್ತಾ ಇವ್ನಿ."

"ನಂಗೊಂದ್ ಮಾತೂ ಹೇಳಲೇ ಇಲ್ವಲ್ಲ?"– ಎಂದು ಕೇಳಿಯೇಬಿಟ್ಟರು ಜೋಯಿಸರು.

"ಅದೇನೊ ವಿಸ್ಯ ಒಸಿ ಗುಟ್ಟಾಗಿರ್ಲಿ ಅಂದಿದ್ರು. ಅದಕ್ಕೇ ಸುಮ್ಕಿದ್ದೆ. ಯಾವತ್ತಿದ್ರೂ ನಿಮಗೇಳ್ದೆ ಏನಾರ ಮಾಡಕಾಯ್ತದ? ನಾಳೆ ನಾಡಿದ್ ಎಮ್ಮೆಲ್ಲೆ ಜತ್ಯಾಗೆ ಯಾರ್ಯಾರೊ ದೊಡ್ಡೋರ್ ಬತ್ತಾರೆ. ಅದ್ಕೇ ಇವತ್ ಯೇಳ್ ಬಿಟ್ಟೆ ನಿಮ್ಗೆ." ಎಂದು ವಿವರಿಸಿದ ನರಸಿಂಹರಾಯಪ್ಪ.

"ಆದ್ರೂ ಇಷ್ಟು ದಿನ ಮುಚ್ಚಿಟ್ಕೋಬಾರದಿತ್ತು" ಎಂದು ಹೇಳಿಬಿಟ್ಟರು ಜೋಯಿಸರು.

"ನಿಮ್ದೊಳ್ಗೆ ರಗಳೆ ಆತಲ್ಲ. ಅವ್ರ್ ಮುಚ್ಚಿಡು ಅಂದಿದ್ರು. ಅದ್ಕೆ ಅಂಗಿದ್ದೆ ಅಂಬ್ತ ಹೇಳಿದ್ನಲ್ಲ. ನಮ್ಮೂರ್ಗೆ ಅದೇನೇನೊ ತರ್ತಾರಂತೆ. ನಿಮ್ಗೂ ಯೇಳ್ತಾರೆ ಸುಮ್ಕಿರ್ರಿ ಸಾಮೇರ" ಎಂದು ನರಸಿಂಹರಾಯಪ್ಪ ದೊಡ್ಡ ದನಿಯಲ್ಲೇ ಹೇಳಿದ.

"ಒಟ್ನಲ್ಲಿ 'ನರ' ಆಗಿರಪ್ಪ 'ಸಿಂಹ' ಆಗ್‌ಬೇಡ" ಎಂದು ಜೋಯಿಸರು ಮಾರ್ಮಿಕವಾಗಿ ನುಡಿದರು.

"ಸಿಂಹ ಆದ್ರೇನಂತೆ ನಿಮ್ಮನ್ ತಿನ್ತೀನಾ? ನಿಮ್ದೇನ್ ಮಾಂಸ, ಮುದ್ದೆ ತಿಂದ್ ಬೆಳ್ದೀರಾ ಸ್ಯರೀರಾನ ತಿನ್ನಾಕೆ. ನೀವ್ ಸುಮ್ಕಿರಿ ಸಾಮೇರ" ಎಂದು ನರಸಿಂಹರಾಯಪ್ಪ ಒಡೆಯನ ಠೇಂಕಾರದಲ್ಲಿ ಮಾತು ಮುಂದುವರಿಸಿದಾಗ ಜೋಯಿಸರೇ ಸುಮ್ಮನಾದರು.

ಇಷ್ಟೆಲ್ಲ ಮಾತುಕತೆಯನ್ನು ಪೂಜಾರಪ್ಪ ಕೇಳಿಸಿಕೊಂಡಿದ್ದ. ಇತ್ತೀಚೆಗೆ ಇವರ ಕಡೆ ಸುಳಿಯದಿದ್ದವನು ಹೀಗೆ ದೂರವಾಗುವುದು ಸರಿಯಲ್ಲವೆಂದು ಭಾವಿಸಿ ಮೊದಲಿನಂತಲ್ಲದಿದ್ದರೂ ಸುಮ್ಮನೆ ಆಗೊಮ್ಮೆ ಈಗೊಮ್ಮೆ ಬಂದು ಹೋಗೋಣವೆಂದುಕೊಂಡು ಸದ್ದಿಲ್ಲದೆ ಗೋಡೆಯ ಪಕ್ಕದಲ್ಲಿ ಬಂದು ನಿಂತಿದ್ದ. ಮುಂದೆ ಹೆಜ್ಜೆಯಿಡಲು ಹಿಂಜರಿಯುತ್ತಿದ್ದಾಗ ಇವರ ಮಾತುಗಳು ಕೇಳಿಸಿ ಅಲ್ಲೇ ನಿಂತ. ಆನಂತರ ಅವರ ಬಳಿ ಹೋಗಲು ಮನಸ್ಸಾಗಲಿಲ್ಲ. ಇಬ್ಬರ ಮಧ್ಯೆ ಏನೋ ನಡೆಯುತ್ತಿದೆ– ಇದು ಸರಿಯಾದ ಸಮಯವಲ್ಲ ಎಂದು ಭಾವಿಸಿ ಹಿಂತಿರುಗಿಬಿಟ್ಟ.

ಇಲ್ಲಿ ನಡೆದದ್ದನ್ನು, ಪೂಜಾರಪ್ಪ, ಸೂರ್ಯನಿಗೆ ತಿಳಿಸಿದ. ಜೋಯಿಸರಿಗೂ ತಿಳಿಸದೆ ಒಡೆಯರು ಏನೋ ಮಾಡುತ್ತಿದ್ದಾರೆಂದು ಹೇಳಿದ. ಆಗ ಸೂರ್ಯನಿಗೆ ಅನ್ನಿಸಿತು–ಪೂಜಾರಪ್ಪ ಅವರ ಜೊತೆ ಸಂಪರ್ಕದಲ್ಲಿರುವುದು ಒಳ್ಳೆಯದು– ಅಂತ. ಅದನ್ನೇ ಹೇಳಿದ "ನಿನ್ ಹಳೇ ಸಂಬಂಧ ಯಾಕ್ ಬಿಡ್ತೀಯ ಪೂಜಾರಪ್ಪ. ಇಷ್ಟಕ್ಕೂ ಹಾಗೆಲ್ಲ ಒಂದೇ ಸಾರಿ ಕಡಕೊಳ್ಳೋ ಸಂದರ್ಭ ಬಂದಿಲ್ಲ."

ಪೂಜಾರಪ್ಪನಿಗೂ ಹಾಗೆ ಅನ್ನಿಸಿದ್ದರಿಂದಲೇ ಒಡೆಯರ ಬಳಿ ಹೋಗಿದ್ದ.

ಹಾಗೇ ವಾಪಸ್ ಬರಬಾರದಿತ್ತು ಎನ್ನಿಸಿ "ನಾಳೇನೇ ವೋಯ್ತೀನಿ ಕಣಪ್ಪ. ಮೊದ್ಲು ಜೋಯಿಸಪ್ನೋರ್ ತಾವ್ ವೋಯ್ತೀನಿ. ಆಮ್ಯಾಕ್ ಒಡೇರ್‌ತಾವ" ಎಂದ.

* * *

ಹಟ್ಟಿಯಲ್ಲಿ ಕೆಲವು ಮಕ್ಕಳು ಬಿಟ್ಟು ಬೇರಾರೂ ಇರಲಿಲ್ಲ. ಎಲ್ಲರೂ ಕೆಲಸಕ್ಕೆ ಹೋಗಿದ್ದರು. ತಿಮ್ಮರಾಯಿಗೆ ತುಂಬಾ ಕೆಮ್ಮು ಜ್ವರ ಕಾಣಿಸಿಕೊಂಡದ್ದರಿಂದ ಶಬರಿ ಮನೆಯಲ್ಲೇ ಇದ್ದಳು. ಸೂರ್ಯ, ನವಾಬ್–ಇಬ್ಬರೂ ಬೆಟ್ಟದಾಚೆಯ ಜನರನ್ನು ಕಂಡು ಹಾಗೇ ಅಡ್ಡಾಡಿಕೊಂಡು ಬರುತ್ತೇವೆಂದು ಹೋಗಿದ್ದರು. ಮಕ್ಕಳು ಆಟ ಆಡುತ್ತ ಗದ್ದಲ ಮಾಡುತ್ತಿದ್ದರು. ಶಬರಿ ಹೊರಬಂದು "ಅಪ್ಪಯ್ಯ ಮಲೀಕಂಡೈತೆ, ಅಂಗೆಲ್ಲಾರ ತೋಪ್ನಾಗ್‌ವೋಗಿ ಆಡ್ಕಂಡ್ ಬರ್ರಪ್ಪ" ಎಂದು ಮಕ್ಕಳಿಗೆ ಮೃದುವಾಗಿ ಹೇಳಿದಳು. ಒಬ್ಬ ಹುಡುಗ "ಮನೆ ಕಾಯ್ಬೇಕು ನಾವು" ಎಂದ. "ಯೇ ಮನ್ಯಾಗೇನ್ ಪಿತಾರಿ ಇಟ್ಟವ್ರ? ಸುಮ್ಕೆ ವೋಗ್ರಿ. ಇಲ್ಲ ಅಂದ್ರೆ ತುಟಿಪಿಟಿಕ್ ಅನ್ದಂಗೆ ಕಟ್ಟೆ ಮ್ಯಾಲ್ ಕುಂತ್ಕಾಬೇಕು" ಎಂದು ತಾಕೀತು ಮಾಡಿದಳು. ಆಗ ಅವರು "ಅಂಗಾರ್ ತೋಪ್ನಾಗೋಗ್ತೀವಿ" ಎಂದು ಕುಣಿಯುತ್ತ ಹೊರಟರು. ಹೋಗುವಾಗ ಒಂದಿಬ್ಬರು "ಯಕ್ಕೋ ಮನೇ ಕಡೀಕ್ ಒಸಿ ನೋಡ್ಕಳಕ್ಕೋ" ಎಂದು ಕೂಗಿ ಹೇಳಿದರು. "ಚಿನ್ನ, ಬೆಳ್ಳಿ ಎಲ್ಲಾ ಜ್ವಾಪಾನ್ವಾಗ್ ನೋಡ್ಕಂಬ್ತೀನಿ, ವೋಗ್ರಲ ಸುಮ್ಕೆ" ಎಂದು ಶಬರಿ ನಗುತ್ತಾ ಹೇಳಿ ಕಟ್ಟೆ ಮೇಲೆ ಕೂತಳು.

ಹಾಗೆ ಹೋದ ಹುಡುಗರು ಹೀಗೆ ಓಡೋಡಿ ಬಂದರು. ಶಬರಿ ಕುತೂಹಲದಿಂದ "ಯಕ್ರಲಾ ಇಂಗ್ ಎದ್ನೋ ಬಿದ್ನೋ ಅಂಬ್ತ ಬತ್ತಾ ಇದ್ದೀರ?" ಎಂದು ಕೇಳಿದಳು.

"ತೋಪ್ನಾಗೆ ನಾವ್ ಆಡಾಕಾಗಕಿಲ್ಲ ಕಣಕ್ಕೊ. ಅದ್ಯಾರೊ ಬಿಳೀಜನ ಬಂದವ್ರೆ. ಡುರ್‌ಡುರ್ ಅಂಬ್ತೈತಲ್ಲ, ಅಂತ ಗಾಡಿ ತಗಂಡ್ ಬಂದವ್ರೆ. ನಾವ್ ನೋಡಿದ್ದೇ ತಡ ಎದ್ರಿಕಂಡ್ ಓಡ್ ಬಂದ್ವಿ" ಎಂದು ಹೊಸತು ಕಂಡ ಉತ್ಸಾಹದಲ್ಲಿ ವರದಿ ಒಪ್ಪಿಸಿದರು. ಅವರಿಗೆ ಆಟವಾಡಲು ತೋಪು ತಪ್ಪಿಹೋಯಿತು ಎಂಬ ಬೇಸರಕ್ಕಿಂತ ಹೊಸ ಸುದ್ದಿಯನ್ನು ಕೊಡುತ್ತಿರುವ ಹುರುಪೇ ಹೆಚ್ಚಾಗಿತ್ತು. "ಅದೇನ್ ಬೆಳ್ಳಗವ್ರಕ್ಕ ಅವ್ರು. ಫಳಫಳ ಅಂಬ್ತ ವೊಳೀತಾ ಅವ್ರೆ. ಜತ್ಯಾಗೆ ಒಡೇರೂ ಜೋಯ್ಸಪ್ಪ ಎಲ್ಲಾ ಅವ್ರೆ." ಎಂದು ಮತ್ತಷ್ಟು ವಿವರ ಕೊಟ್ಟರು.

ಶಬರಿಗೂ ತಡೆಯಲಾಗಲಿಲ್ಲ. "ನೋಡಾನ್ ಬರ್ರಲ" ಎಂದು ಹೊರಟಳು.

ತೋಪಿನ ಹತ್ತಿರ ಬಂದಾಗ ಹುಡುಗರು ಹೇಳಿದ್ದು ನಿಜವೆಂದು ಗೊತ್ತಾಯಿತು. ಅಲ್ಲೊಂದು ಹೊಸ ರೀತಿಯ ಕಾರು ಮತ್ತು ಒಂದು ಜೀಪು ನಿಂತಿದ್ದವು. ಮೂವರು ಬಿಳಿಜನರು ಇದ್ದರು; ಜೊತೆಗೆ ನರಸಿಂಹರಾಯಪ್ಪ, ಜೋಯಿಸ ಮತ್ತು ಎಂ.ಎಲ್.ಎ. ಎಲ್ಲರೂ ತೋಪನ್ನು ನೋಡುತ್ತಿದ್ದರು. ಆನಂತರ ಬಯಲು ಎಷ್ಟಿದೆಯೆಂದು ಲೆಕ್ಕ ಹಾಕುತ್ತಿದ್ದರು. ಎಂ.ಎಲ್.ಎ. "ನೀವ್ ಯಾವ್ದಕ್ಕೂ ಯೋಚಿಸ್ಬೇಡಿ. ಎಲ್ಲಾ ವ್ಯವಸ್ಥೆ ಆಗುತ್ತೆ. ಸರ್ಕಾರ ಸಿದ್ಧವಿದೆ" ಎಂದು ಹೇಳುತ್ತಿದ್ದ. ಊರ ಒಡೆಯನಿಗೆ "ಈ ಪ್ರದೇಶದ ಬಣ್ಣಾನೇ ಬದ್ಲಾಗ್ ಬಿಡುತ್ತೆ" ಎಂದದ್ದಲ್ಲದೆ "ಏನಂಬ್ತೀರ ಜೋಯಿಸ್ರೆ" ಎಂದು ಕೇಳಿದ. ಜೋಯಿಸರು "ನಾವು ಇಲ್ಲೀವರ್ಗೆ ಮೂರು ಬಣ್ಣಾನೇ ಶ್ರೇಷ್ಠ ಅಂತಿದ್ವಿ–ಅದೇ ಕೇಸರಿ, ಬಿಳಿ, ಹಸಿರು–ಇವ್ರು ಬಂದ್ ಮೇಲೆ ಬೇರೆ ಬಣ್ಣಾನೇ ಆಗುತ್ತೆ ಬಿಡಿ. ಹೊಸಜನ, ಹೊಸಬಣ್ಣ; ಜೈ ಅಂದ್ರಾಯ್ತು" ಎಂದು ದೇಶಾವರಿ ನಗೆ ನಕ್ಕಾಗ ಎಂ.ಎಲ್.ಎ. "ದೇಶ ಮುಂದುವರೀ ಬೇಕಲ್ವ. ದುಡ್ಡಿದ್ದೋನೆ ದೊಡ್ಡಪ್ಪ. ಜೈಜೈ ಅಂದು ನಮ್ಗೂ ಅನುಕೂಲ ಮಾಡ್ಕೋಳ್ಳೋಣ. ದೇಶಕ್ಕೂ ಮಾಡೋಣ. ಏನಂತೀರ?" ಎಂದು ಉತ್ಸಾಹದಲ್ಲಿ ಹೇಳಿದಾಗ ಜೋಯಿಸರು "ಬೇರೆ ಅನ್ನೋದೇನಿದೆ? ಇದು ನಮ್ಮ ಪ್ರದೇಶದ ಪುಣ್ಯ" ಎಂದು ಭಾಷ್ಯ ಬರೆದರು–ಬಾಯಲ್ಲೆ. ಆಗ ಎಂ.ಎಲ್.ಎ. "ಪುಣ್ಯ ಅಲ್ದೆ ಇನ್ನೇನು? ಈ ಮೂಲೇಗೆ ಅಮೆರಿಕದೋರು ಬರ್ತಾರೆ ಅಂದ್ರೆ ಅದೇನ್ ಸಾಮಾನ್ಯಾನ" ಎಂದು ಉಬ್ಬಿಹೋದ. ಬಿಳಿಯರೂ– ಅದೇ ಅಮೆರಿಕದವರು–"ಬ್ಯೂಟಿಫೂಲ್ ಏರಿಯಾ" ಎಂದು ಉದ್ಗರಿಸುತ್ತಿದ್ದರು. ಇದರಿಂದ ಎಂ.ಎಲ್.ಎ. ಮತ್ತಷ್ಟು ಉಬ್ಬಿಹೋದ.

ಶಬರಿಗೆ ಇವರೆಲ್ಲ ಏನು ಮಾತಾಡುತ್ತಿದ್ದಾರೆ, ಏನು ಮಾಡುತ್ತಾರೆ ಎಂದು ಸ್ಪಷ್ಟವಾಗಲಿಲ್ಲ. ಆದರೆ ಎಂ.ಎಲ್.ಎ. "ಹೆಚ್ಚು ಕಡಿಮೆ ಒಂದ್ ತಿಂಗಳೊಳ್ಗಡೆ ಕೆಲ್ಸ ಶುರು ಮಾಡ್ತಾರೆ ನರಸಿಂಹರಾಯಪ್ಪ" ಎಂದದ್ದು ಮಾತ್ರ ಸ್ಪಷ್ಟವಾಗಿತ್ತು. ಇಲ್ಲಿ –ಈ ತೋಪಿನ ಸ್ಥಳದಲ್ಲಿ, ಏನೋ ಕೆಲಸ ಶುರುವಾಗುತ್ತದೆಯೆಂಬ ಸೂಚನೆ ಸಿಕ್ಕಿತ್ತು.

ರಾತ್ರಿ, ಶಾಲೆಯಲ್ಲಿ ಸೇರಿದಾಗ ಶಬರಿ ತಾನು ಕಂಡದ್ದು, ಕೇಳಿದ್ದು– ಎಲ್ಲವನ್ನೂ ವಿವರಿಸಿದಳು. ಸೂರ್ಯ ಮತ್ತು ನವಾಬ್‌ಗೆ ಈ ಭೂಮಿ ಬೇರೆಯವರ ಪಾಲಾಗುತ್ತಿರಬಹುದೆಂಬ ಅನುಮಾನ ಬಂದಿತು. ಅದರಲ್ಲೂ ಬಿಳಿಯರು ಬಂದಿದ್ದರು ಎಂದ ಮೇಲೆ ಯಾವುದಾದರೂ ಬಹುರಾಷ್ಟ್ರೀಯ ಕಂಪನಿಗೆ ಈ ಜಾಗವನ್ನು ಸರ್ಕಾರ ಕೊಡುತ್ತಿರಬಹುದೆ ಎಂಬ ಊಹೆಯನ್ನೂ ಮಾಡಿದರು.

ಅವರು ನಗರ ಬಿಟ್ಟು ಇಷ್ಟು ದೂರ ಬರುತ್ತಾರೆಯೆ ಎಂಬ ಪ್ರಶ್ನೆಯೂ ಎದುರಾಯಿತು. ಗಲಾಟೆಯಿಲ್ಲದ ಪ್ರದೇಶ. ಕಡಿಮೆ ಬೆಲೆ– ಎಂದೆಲ್ಲ ಯೋಚಿಸಿರಬಹುದೆಂಬ ಉತ್ತರವೂ ಹೊಳೆಯಿತು. ಆದರೆ ಯಾವುದೂ ಸ್ಪಷ್ಟವಿಲ್ಲ.

ಸೂರ್ಯ ಒಂದು ಉಪಾಯ ಮಾಡಿದ. ಮಾರನೇ ದಿನವೇ ಪೂಜಾರಪ್ಪನ ಜೊತೆ ಮಾತಾಡಿದ. "ಏನಾದ್ರು ಮಾಡಿ ವಿಷ್ಯ ತಿಳ್ಕೋಬೇಕಲ್ಲ" ಎಂದು ಒತ್ತಾಯಿಸಿದ. ಪೂಜಾರಪ್ಪ ಅಳೆದೂ ಸುರಿದು ಮೂರ್‍ನಾಲ್ಕು ದಿನ ತೆಗೆದುಕೊಂಡ. ಹಿಂಜರಿಯುತ್ತಲೇ ಒಡೆಯರ ಮನೆ ಹತ್ತಿರ ಬಂದ.

"ಏನ್ಲಾ ಪೂಜಾರಪ್ಪ, ಮಗಳ್‌ಮದ್ವೆ ಮಾಡಿದ ಮ್ಯಾಕೆ ಮರ್‍ತೆ ಬಿಟ್ಟೇನ್ಲ ನಮ್ಮನ್ನ" ಎಂದು ನರಸಿಂಹರಾಯಪ್ಪ ಗದರಿದ.

"ನಿಮ್ಮನ್ನೆಲ್ಲಾನ ಮರ್‍ಯಾದುಂಟಾ ದಣೇರ. ನೀವೇನ್ ತೆಪ್ ತಿಳ್ಕಂಡಿವ್ರೊ ಅಂಬ್ತ ಹೆದ್ರಿಕಂಡ್ ಬರ್‍ಲಿಲ್ಲ ಆಟೇಯ" ಎಂದು ಪೂಜಾರಪ್ಪ ಸಮಜಾಯಿಷಿ ನೀಡಿದ. ಅಷ್ಟರಲ್ಲಿ ಹೊರಬಂದ ಸಾವಿತ್ರಮ್ಮ "ತೆಪ್ ತಿಳ್ಕಂಡಿದ್ರೆ ನಾನೇ ಬಂದು ಸೀರೆಕುಪ್ಪಸ ಕೊಡ್ತಿದ್ನೇನು" ಎಂದಳು. ಪೂಜಾರಪ್ಪ "ಅದೆಲ್ಲ ನಮ್ಮ ಪುಣ್ಣೇವು ಕಣ್ರವ್ವ" ಎಂದು ವಿನೀತನಾಗಿ ನುಡಿದ. "ಆಟ್ ಬುದ್ದಿ ಇದ್ರೆಸಾಕು" ಎಂದ ನರಸಿಂಹರಾಯಪ್ಪ. "ಆಟ್ ಬುದ್ದಿ ಇಲ್ದೆ ಏನ್ ದಣಿ. ನಂಗೆ ಯೆದ್ರಿಕೆ ಆಗಿತ್ತು. ಅದ್ಕೇ ಬಂದಿರ್‍ಲಿಲ್ಲ. ಏನೋ ಎಲ್ಲಾ ವೊಟ್ಟೇಗ್ ಆಕ್ಕಂಡು ಮದ್ಲಿನಂಗೇ ಮಾತಾಡ್ಸಿದ್ರಿ. ನನ್ ಪುಣ್ಣೇವು" ಎಂದು ಮತ್ತೆ ಒತ್ತಿ ಹೇಳಿದ.

ನರಸಿಂಹರಾಯಪ್ಪ ಉಬ್ಬಿಹೋದ. "ಪುಣ್ಣೇವು ಇಷ್ಟಕ್ಕೇ ನಿಲ್ಲಲ್ಲ ಕಣಯ್ಯ. ನಮ್ ಊರಿಗೆ ಅಮೆರಿಕಾದೋರ್ ಬತ್ತಾರೆ. ಅದೇ, ನಿಮ್ಮ ಅಟ್ಟಿತಾವ್ ಒಂದ್ ತೋಪು, ಬಯಲು, ಎಲ್ಲಾ ಐತಲ್ಲ, ಅದೆಲ್ಲ ಅವ್ರೇ ತಗಂಡು ಏನೇನೋ ಕಟ್ತಾರಂತೆ, ಏನೇನೋ ತಯಾರ್ ಮಾಡ್ತಾರಂತೆ. ನಿಮ್ಮೋರ್‍ಗೂ ಕೆಲ್ಸ ಸಿಗ್ತೈತೆ ಬಿಡು." ಎಂದು ಉತ್ಸಾಹದಿಂದ ವಿವರಿಸಿದ.

"ಅಂಗಾ ದಣೇರ. ನಮ್ಗೇನ್ ಕೆಲ್ಸ ಕೊಟ್ಟಾರು ದಣೇರ" ಎಂದು ಪೂಜಾರಪ್ಪ ಕೇಳಿದ. ಆಗ ನರಸಿಂಹರಾಯಪ್ಪ "ಕೆಲ್ಸ ಕೊಡಾದೇನ್ ನನ್ ಕೈಯ್ಯಾಗೈತ? ಅವ್ರ್ ಅದೇನ್ ಮಾಡ್ತಾರೊ ಏನ್ ಕೊಡ್ತಾರೊ ನಾನ್ಯಾರ್‍ಲ ಕೇಳಾಕೆ" ಎಂದು ಕಡ್ಡಿತುಂಡಾದಂತೆ ಹೇಳಿದರು. ಮತ್ತೇನೂ ಕೇಳಲಾಗದೆ ಪೂಜಾರಪ್ಪ "ಬತ್ತೀನಿ ದಣಿ" ಎಂದು ಹೊರಟ. "ಮನೇಗ್ ಬಂದಾನ್ ಬರೀ ಕೈಯ್ಯಾಗ್ ಯಾಕ್ಲ ವೋಗ್ತೀಯ" ಎಂದು ನರಸಿಂಹರಾಯಪ್ಪ ಸಾವಿತ್ರಮ್ಮನಿಗೆ "ಏನಾರ ರಾಗಿನೊ ಅಕ್ಕಿನೋ ಕೊಟ್‌ಕಳ್ಸು. ಬಾಳಾದಿನದ್ ಮ್ಯಾಗ್ ಬಂದವನೆ" ಎಂದ. ಸಾವಿತ್ರಮ್ಮ

ಅಕ್ಕಿಯನ್ನೇ ತಂದುಕೊಟ್ಟಳು. ಪೂಜಾರಪ್ಪ ತೆಗೆದುಕೊಂಡು ಕೈಮುಗಿದು ಹೊರಟ.

ಪೂಜಾರಪ್ಪನಿಂದ ವಿಷಯ ತಿಳಿದ ಸೂರ್ಯ ಮುಂದಿನ ಅಪಾಯವನ್ನು ಮನಗಂಡ. ರಾತ್ರಿ ಕಟ್ಟೆಯ ಹತ್ತಿರ ಎಲ್ಲರನ್ನೂ ಕೂಡಿಸಿಕೊಂಡು ವಿವರಿಸಿದ. ಅಮೆರಿಕದ ಕಂಪನಿ ಎಲ್ಲಿಗೆ ಬಂದರೆ ಅದರ ಮೇಲೆ ಸರ್ಕಾರದ ನಿಯಂತ್ರಣ ಇರೊಲ್ಲ ಎಂಬ ಅಂಶದಿಂದ ಹಿಡಿದು ಎಲ್ಲ ಅಪಾಯಗಳನ್ನೂ ಸರಳವಾಗಿ ವಿವರಿಸಿದ. ಆಗ ಶಬರಿ ಹೇಳಿದಳು–

"ನೀನ್ ಯೇಳಾದೆಲ್ಲ ದೊಡ್ಡ ವಿಸ್ಯ. ನಮಗೆ ನಮ್ ತೋಪುಬೇಕು. ಅದನ್ನ ನಾವ್ ಬಿಟ್‌ಕೊಡಕೊಡ್ದು. ಆಟೇಯ."

"ನಾನೂ ಅದನ್ನೇ ಹೇಳೋದು. ಅದನ್ ಹೇಳೋಕೆ ಹಿನ್ನೆಲೆ ಹೇಳ್ತಾ ಇದ್ದೆ." ಎಂದು ಸೂರ್ಯ ಸ್ಪಷ್ಟಪಡಿಸಿದ.

ಸಣ್ಣೀರ ಒಂದು ಪ್ರಶ್ನೆ ಕೇಳಿದ– "ಅಲ್ಲ ಸೂರ್ಯಪ್ಪ, ಅವ್ರ ಯಾರೋ ಬಂದಾಗ ನಮ್ಗೂ ಕೆಲ್ಸ ಕೊಡ್ತಾರೆ ಅಲ್ವ? ಅವಾಗ ಈ ಒಡೆಯನ್ ಉಸಾಬರೀನೇ ಇರಾಕಿಲ್ಲ ಏನಂಬ್ತೀಯ?"

ಸೂರ್ಯ ವಿವರಿಸಿದ–"ಬಾಣಲೆಯಿಂದ ಬೆಂಕಿಗ್ ಬಿದ್ದಂತೆ ಆಗುತ್ತೆ ಅಷ್ಟೆ. ಇಷ್ಟಕ್ಕೂ ಇವ್ರ ಕೊಡೋದೂ ಕೂಲಿ ಕೆಲ್ಸಾನೇ. ಇನ್ನೊಂದು ವಿಷ್ಯ ನೆನಪಿರ್ಲಿ. ಬಾಣಲೆ–ಬೆಂಕಿ ಬೇರ್ ಬೇರೆ ಆಗಿರೋಲ್ಲ. ಒಂದಕ್ಕೆ ಇನ್ನೊಂದ್ ಬೇಕು. ಅದ್ರಿಂದ ಒಡೆಯನಿಂದ ತಪ್ಪಿಸ್ಕೊಳ್ತೀನಿ ಅಂತ ತಿಳ್ಕೋಬೇಡಿ. ನೀವೇ ಒಡೆಯರಾಗ್ಬೇಕು. ಈ ತೋಪಿಗೆ ಬಯಲಿಗೆ ನೀವೇ ಒಡೆಯರು ಅಂತ ಅವ್ರ ಮುಂದೆ ಹೇಳ್ಬೇಕು."

"ಯೇಳಿದ್ ಕೂಡ್ಲೆ ಒಡೇರಾಗಾಕಾಯ್ತದ"– ಪೂಜಾರಪ್ಪ ಪ್ರಶ್ನಿಸಿದ.

"ಇಲ್ಲ, ಹೇಳಿದ್ರಷ್ಟೇ ಸಾಲ್ದು. ನಮ್ಮ ಹಕ್ಕನ್ನ ಸ್ಥಾಪಿಸ್ಬೇಕು. ನೋಡಿ, ಈ ತೋಪನ್ನ ಅವ್ರ ಬೆಳ್ಸಿದಾರ? ತಿಮ್ಮರಾಯಿ, ನೀನು ದೊಡ್ಡೋನು, ನೀನೇ ಹೇಳಪ್ಪ"– ಸೂರ್ಯ ಕೇಳಿದ.

"ಅವ್ರ ಯಾಕ್ ಬೆಳುಸ್ತಾರೆ? ಅಲ್ಲಿ ಗಿಡಪಡ ಬೆಳ್ಯಾದ ನೋಡಿ ನಾವೇ ಉಡುಗ್ರಾಗಿದ್ದಾಗ್ನಿಂದ ಜ್ವಾಪಾನ ಮಾಡಿದ್ವಿ. ಈ ಮಟ್ಟಕ್ ಬೆಳುದ್ವು"– ತಿಮ್ಮರಾಯಿ ಹೆಮ್ಮೆಯಿಂದ ಹೇಳಿದ.

"ಅದಕ್ಕೇ ನಾನ್ ಹೇಳೋದು. ಇದು ನಿಮ್ಮದು. ನಿಮಿಗ್ ಸೇರಿದ್ದು."– ಮತ್ತೆ ಸೂರ್ಯ ಹೇಳಿದ.

"ಅದ್ಸರಿ, ನಮ್ದು ನಮಿಗ್ ಕೊಡ್ರಿ ಅಂಬ್ತ ಕೇಳಾಕೋಗಿ ಇದ್‌ಬದ್

ಕೂಲಿ ಕೆಲ್ಸಾನೂ ಕಳ್ಕಂಡ್ರೆ?" ಎಂದು ಒಬ್ಬಾತ ಯಾವತ್ತಿನ ಆತಂಕವನ್ನು ತೆರೆದಿಟ್ಟ.

"ಒಂದೆರಡು ದಿನ ಅವ್ರ್ ಧಿಮಾಕ್ ಮಾಡ್‌ಬಹುದು. ಆದ್ರೆ ಆಮೇಲ್ ಕೂಲಿ ಕೆಲ್ಸಕ್ ಯಾರ್ನ ಕರ್ಕಂಡ್ ಬರ್ತಾರೆ? ನೀವಿಲ್ದೆ ಇದ್ರೆ ಅವ್ರ್‌ಗೆ ವನವಾಸವೇ ಗತಿ"– ಸೂರ್ಯ ಧೈರ್ಯ ತುಂಬಿದ.

"ನಮ್ ಬದ್ಲು ಬ್ಯಾರೇರ್ ಕೂಲೀಗ್ ಬಂದ್ರೆ?"– ಸಣ್ಣೀರ ಕೇಳಿದ.

"ಅದಕ್ಕೇ, ಎಲ್ರೂ ಒಟ್ಟಾಗೇ ಭೂಮಿ ಕೇಳ್ಬೇಕು. ಬೆಟ್ಟದ ಆ ಕಡೆ ಇರೋರು, ಊರ್ನಲ್ ಇರೋ ಬಡಜನ ಎಲ್ರೂ ಒಟ್ಟಿಗೆ ಸೇರ್ಬೇಕು. ನಾಳೆ ಅವ್ರ್ ಜೊತೇನೂ ಮಾತಾಡೋಣ"; ಎಂದು ಸೂರ್ಯ ಹೇಳಿದಾಗ ಸ್ವಲ್ಪ ಸಮಾಧಾನ ಮೂಡಿತು.

ಮಾರನೇ ದಿನವೇ ಸೂರ್ಯ ಮತ್ತು ನವಾಬ ಬೆಟ್ಟದಾಚೆಯ ಬುಡಕಟ್ಟಿನವರನ್ನು ಭೇಟಿಯಾದರು. ಊರಲ್ಲಿರುವ ರಾಮಣ್ಣ, ತಿಮ್ಮಣ್ಣ ಮುಂತಾದ ಬಡವರ ಪ್ರತಿನಿಧಿಗಳ ಜೊತೆ ಮಾತಾಡಿದರು. ಎಲ್ಲರೂ ಹಟ್ಟಿಯಲ್ಲಿ ಸೇರುವುದೆಂದು ತೀರ್ಮಾನವಾಯಿತು.

ಅವರೆಲ್ಲ ಬರುತ್ತಾರೆಂದು ಗೊತ್ತಾದಾಗ ಶಬರಿ ಸಂಭ್ರಮದಿಂದ ಇತರೆ ಹೆಂಗಸರಿಗೆ ಹೇಳಿದಳು– "ಇವತ್ತು ಎಲ್ರೂ ಕಟ್ಟೆತಾವ ಒಟ್ಟಿಗೆ ಉಂಬಾನ. ಊರಿನ್ ಜನ, ಬೆಟ್ಟದಾಕಡೆ ಜನ ಬತ್ತಾರೆ. ಏನಾರ ಪಾಯ್ಸಗೀಯ್ಸ ಮಾಡಾನ!!

ಶಬರಿಯ ಮಾತಿಗೆ ಎಲ್ಲರೂ ಒಪ್ಪಿದರು. ತಂತಮ್ಮ ಮನೆಯಲ್ಲಿರುವ ಸಾಮಗ್ರಿಗಳನ್ನು ಒಟ್ಟಿಗೆ ಸೇರಿಸಿ ಒಂದೇ ಕಡೆ ಅಡುಗೆ ಮಾಡುವ ತೀರ್ಮಾನವಾಯಿತು. ಅದರಂತೆ ರಾತ್ರಿಗೆ ಪಾಯಸ ಸಿದ್ಧವಾಯಿತು.

ಊರಿನ ರಾಮಣ್ಣ, ತಿಮ್ಮಣ್ಣ ಮುಂತಾದ ಏಳೆಂಟು ಜನರು ಬಂದರು. ಬೇರೆ ಬುಡಕಟ್ಟಿನ ಗೋವಿಂದ, ಹನುಮಂತ, ಮುಂತಾದವರೂ ಬಂದಿದ್ದರು. ಎಲ್ಲಾ ಕೂತಾಗ ಶಬರಿ "ಮದ್ಲು ಉಂಬಾಕ್ ಇಡ್ತೀವಿ. ಆಮ್ಯಾಲ್ ಮಾತುಕತೆ" ಎಂದಳು.

ಎಲ್ಲರೂ ಒಟ್ಟಿಗೆ ಕೂತು ಊಟ ಮಾಡಿದರು. ಊರಿನ ರಾಮಣ್ಣ "ಇಂಗೇ ಆವಾಗಾವಾಗ ಕರ್ದು ಉಂಬಾಕಿಡವ್ವ ಶಬರಿ" ಎಂದ ಸಂತೋಷದಿಂದ. ಆಕೆ "ನೀವೂ ಆಟೇಯ. ನಮ್ಮನ್ನೂ ಊರಿಗ್ ಕರ್ದು ಉಂಬಾಕಿಡ್ರಿ" ಎಂದಳು. "ನಾಳೀಕೆ ಬರ್ರವ್ವ ಅದಕ್ಕೇನು! ನಮ್ ಕೇರಿನಾಗೆ ಸಮಾರಾದನೆ ಮಾಡಿಸ್‌ಬಿಡ್ತೀನಿ" ಎಂದ ರಾಮಣ್ಣ. ತಿಮ್ಮಣ್ಣ "ನಾವ್‌ನಾವ್ ಒಟ್ಟಿಗೆ ಇದ್ರೇನೆ ಚಂದ. ಯಾವತ್ ಬತ್ತೀರ ಯೇಳ್ರಿ" ಎಂದು ಕೇಳಿಯೇಬಿಟ್ಟ. ಆಗ ಸೂರ್ಯ "ಮನಸಿದ್ ಕಡೆ

ಮಾರ್ಗ ಇರುತ್ತೆ ಅನ್ನೋದ್ಕೆ ಇದೇ ಸಾಕ್ಷಿ" ಎಂದು ಮೆಚ್ಚುಗೆ ಸೂಚಿಸಿದ.

ಊಟವಾದ ಕೂಡಲೇ ನವಾಬ ಒಂದು ಸಲಹೆಕೊಟ್ಟ–"ಮೊದ್ಲು ನಮ್ ಹಾಡಿನಿಂದ ಶುರುಮಾಡೋಣ. ಏನಂತೀಯ ಸೂರ್ಯ?" ಸೂರ್ಯ 'ಆಗಲಿ' ಎಂದ. ನವಾಬ "ಗೌರಿ, ಶಬರಿ, ಸಣ್ಣೀರ ರೆಡಿ" ಎಂದ. ಶಬರಿ ಮತ್ತು ಗೌರಿಯ ನೇತೃತ್ವದಲ್ಲಿ ಹೆಂಗಸರು ಮತ್ತು ಸಣ್ಣೀರನ ನೇತೃತ್ವದಲ್ಲಿ ಗಂಡಸರು ನಿಂತುಕೊಂಡರು.

"ಈ ಭೂಮಿ ನಮ್ಮದು, ಆಕಾಶ ನಮ್ಮದು, ಈ ಬಯಲು ನಮ್ಮದು, ತೋಪು ನಮ್ಮದು" ಎಂದು ಉತ್ಕಟತೆಯಿಂದ ಹಾಡಿದರು. ಇದರ ಫಲವಾಗಿ ಉತ್ಕಟ ವಾತಾವರಣವೇ ನಿರ್ಮಾಣವಾಯಿತು. ಆನಂತರ ಸೂರ್ಯ ತೋಪು ಮತ್ತು ಬಯಲಿಗೆ ಎದುರಾಗಿರುವ ಕಂಟಕವನ್ನು ವಿವರಿಸಿದ. ಅದನ್ನು ಪಡೆದು ನೀವೇ ಒಡೆಯರಾಗಬೇಕು– ಎಂದ. ಬಡವರೇ ಭೂಮಿಯ ಒಡೆಯರು– ಎಂದು ಒತ್ತಿ ಹೇಳಿದ. ಆಗ ಶಬರಿ "ದುಡಿಯೋರೆ ಒಡೇರು" ಎಂದು ಉತ್ಸಾಹದಿಂದ ಘೋಷಿಸಿದಳು. ಎಲ್ಲರ ಮನಸ್ಸಿನಲ್ಲೂ ತೋಪು ತುಂಬಿಕೊಂಡಿತ್ತು. ಆದರೆ ಪಕ್ಕದಲ್ಲೇ ಬಯಲು ಇತ್ತು!

ಮತ್ತದೇ ಪ್ರಶ್ನೆ– " ನಾವು ತಿರುಗಿ ಬಿದ್ಮೇಲೆ ಊರಾಗ್ ಬದ್ಕಾದೆಂಗೆ? ಆ ಒಡೆಯ ಸುಮ್ಕೆ ಬಿಡ್ತಾನ? ನಿಮ್ಗಾಗ್ನ ದೂರ್ದಾಗೊಂದು ನೆಲೆ ಅಂಬ್ತ ಐತೆ. ನಾವು ಊರ್ನಾಗಿರೊ ಬಡವರು ನೆಲೆ ಕಳ್ಕಮಂಗಾದ್ರೆ?" – ರಾಮಣ್ಣ, ತಿಮ್ಮಣ್ಣ ತಮ್ಮ ಅಳುಕನ್ನು ಪ್ರಾಮಾಣಿಕವಾಗಿ ಹೇಳಿದರು.

ಸೂರ್ಯನಿಗೆ ಅದರಲ್ಲೂ ಸತ್ಯವಿದೆ ಅನ್ನಿಸಿತು. ಅಷ್ಟರಲ್ಲೇ ಶಬರಿ "ನಿಮ್ಗೆ ಊರಾಗ್ ನೆಲೆ ಇಲ್ಲ ಅಂದ್ರೆ ಇಲ್ಲೇ ನಾವ್ ಕರ್ಕಂಬ್ತೀವಿ" ಎಂದಳು. ಇದರಿಂದ ಸಂತೋಷವಾದರೂ ವಸ್ತುಸ್ಥಿತಿಯನ್ನು ಬಿಟ್ಟು ಮುಂದೆ ಹೋಗುವುದಕ್ಕೆ ಮತ್ತಷ್ಟು ಚರ್ಚೆಯ ಅಗತ್ಯವಿತ್ತು. ಸೂರ್ಯ ಚರ್ಚೆಗೆ ದಾರಿ ತೋರಿದ. "ಯಾರ್ಯಾರಿಗೆ ಏನೇನು ಅನ್ಸುತ್ತೆ ಹಾಗೇ ಹೇಳಿ. ಯಾವ್ದೂ ಮುಚ್ಚಿಟ್ಕೋಬೇಡಿ" ಎಂದ.

ಎಲ್ಲರಿಗೂ ಭೂಮಿ ಬೇಕಾಗಿತ್ತು. ತೋಪು ತಮ್ಮದೇ, ಬಯಲಭೂಮಿ ತಮ್ಮದೇ ಎಂಬ ಬಗ್ಗೆ ಯಾರಲ್ಲೂ ಭಿನ್ನಾಭಿಪ್ರಾಯ ಇರಲಿಲ್ಲ. ಆದರೆ ಬಹಿರಂಗವಾಗಿ ಈ ಭೂಮಿ ನಮ್ಮದು, ಈ ಬಯಲು ನಮ್ಮದು, ಈ ತೋಪು ನಮ್ಮದು– ಎಂದು ಕೇಳಿದ ನಂತರದ ಬೆಳವಣಿಗೆಗಳ ಬಗೆ ಸಹಜ ಆತಂಕವಿತ್ತು. ಅದನ್ನು ಅವರೆಲ್ಲ ಹೇಳಿದರು. ಸೂರ್ಯ ಅವರಿಗೆ ಧೈರ್ಯ ತುಂಬಲು ಪ್ರಯತ್ನಿಸಿದ.

"ಒಮ್ಮೆ ಮುಖಾಮುಖಿ ಆಗದಿದ್ದರೆ ಭವಿಷ್ಯದಲ್ಲಿ ಬೆಳಕಿಲ್ಲ. ಗುಪ್ತ ಗುಲಾಮ

ಗಿರಿಯೇ ಗತಿ. ಮೇಲ್ನೋಟಕ್ಕೆ ನಿಮಗೆಲ್ಲ ಸ್ವಾತಂತ್ರ್ಯ ಇದ್ದಂತೆ ಕಾಣುತ್ತೆ. ಊರು ಬಿಟ್ಟು ಕಾಡಲ್ಲಿರೋರ್ಗೆಲ್ಲ ಸ್ವಾತಂತ್ರ್ಯ ಇದೆ ಅಂತ ಕೆಲವರು ಬುದ್ಧಿವಂತ್ರು ಹೇಳ್ತಾರೆ. ಇನ್ನು ಊರು ಅನ್ನೋದೆ ಸ್ವತಂತ್ರ ಪ್ರದೇಶ ಅನ್ನೋರು ಇದ್ದಾರೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಊರು ಮತ್ತು ಕಾಡು ಎರಡೂಕಡೆ ಇರೋರು ವ್ಯವಸ್ಥೆಯ ಒಳ ಸುಳೀಲಿದಾರೆ. ಹೀಗಾಗಿ ಇಬ್ಬರೂ ಗುಪ್ತ ಗುಲಾಮಗಿರೀಲಿದಾರೆ. ಈ ವ್ಯವಸ್ಥೆಯೇ ಗುಪ್ತ ಗುಲಾಮಗಿರಿ ವ್ಯವಸ್ಥೆ. ಇದ್ರಿಂದ ಇವತ್ತಲ್ಲ ನಾಳೆ ಹೊರಬರಬೇಕು.”

–ಈ ವಿಚಾರವನ್ನು ಮೊದಲು ಹೀಗೆಯೇ ಹೇಳಿದ. ಆಮೇಲೆ ಪ್ರಶ್ನೆಗಳು, ಉತ್ತರಗಳು ನಡೆದವು. ತನ್ನ ವಿಚಾರವನ್ನು ಅವರಿಗೆ ಅರ್ಥವಾಗೋ ಹಾಗೆ ಮತ್ತೆ ಮತ್ತೆ ಹೇಳಿದ. “ಊರಿನ ಆಸ್ತಿವಂತರು, ಸರ್ಕಾರದ ಅಧಿಕಾರಸ್ಥರು, ಮೌಢ್ಯ ಬಿತ್ತೊ ಜನರು, ಎಲ್ಲರೂ ನಿಮ್ಮನ್ನ ಒಂದಲ್ಲ ಒಂದು ರೀತಿ ಗುಲಾಮರನ್ನಾಗಿ ಮಾಡ್ತಾರೆ. ಈಗ ವಿದೇಶ ಸಾಹುಕಾರರು ಬಂದು ಮತ್ತಷ್ಟು ಗುಲಾಮರನ್ನಾಗಿ ಮಡ್ತಾರೆ” ಎಂದೆಲ್ಲ ವಿವರಿಸಿದ.

ಕಡೆಗೆ, ಮೊದಲು ಸೂರ್ಯ ಮತ್ತು ನವಾಬ್ ಈ ವಿಷಯವನ್ನು ಊರ ಒಡೆಯರ ಬಳಿ ಪ್ರಸ್ತಾಪಿಸಬೇಕೆಂದೂ ಆನಂತರದ ಬೆಳವಣಿಗೆ ಗಮನಿಸಿ ಒಟ್ಟಾಗಿ ತೀರ್ಮಾನ ತೆಗೆದುಕೊಳ್ಳಬೇಕೆಂದೂ ನಿರ್ಧಾರವಾಯಿತು.

ಶಬರಿಗೆ ಅಷ್ಟು ಸಮಾಧಾನವಾಗಿರಲಿಲ್ಲ. ಆನಂತರ ತನ್ನ ಮನದಾಳವನ್ನು ಸೂರ್ಯನ ಎದುರು ತೆರೆದಿಟ್ಟಳು.

“ನಾವೆಲ್ಲ ಒಟ್ಗೆ ಒಡೇರ್‌ತಾವೋಗಿ ಕೇಳ್ಬೇಕಿತ್ತು. ಇನ್ ಕಾಯೋದ್ರಾಗೆ ಒಳ್ಳೇದೇನೊ ಕಾಣ್ಸಾಕಿಲ್ಲ ನಂಗೆ.”

“ಶಬರೀನೇ ಕಾಯೊಲ್ಲ ಅಂದ್ರೆ ಹೇಗೆ?” ಎಂದು ಸೂರ್ಯ ನಕ್ಕ.

“ಕಾಯೋದು ಅಂದ್ರೆ ಸುಮ್ಕೆ ಇರಾದಲ್ಲ. ಕಾಯೋದು ಕುದಿಯೋದು ಎಲ್ಲಾ ಒಂದೇ. ಅದು ಕಾಯೋರ್ಗಾಟೇ ಗೊತ್ತಾಗ್ತೈತೆ”– ಶಬರಿ ನಿಖರವಾಗಿ ನುಡಿದಳು.

“ಸರ್ಯಾಗ್ ಹೇಳ್ದೆ ಶಬರಿ. ಆದ್ರೆ ಇದು ಒಬ್ಬ ವ್ಯಕ್ತಿ ವಿಷಯ ಅಲ್ಲ, ಒಂದು ಸಮೂಹದ ವಿಷಯ. ಆದ್ರಿಂದ ಎಲ್ರೂ ಕುದಿಯೋವರ್ಗೆ ಕಾಯ್ಬೇಕು”– ಸೂರ್ಯ ವಸ್ತುಸ್ಥಿತಿಯನ್ನು ವಿವರಿಸಿದ.

ಶಬರಿ ಮಾತಾಡಲಿಲ್ಲ. ಆಕೆಯ ಮುಖದಲ್ಲಿ ಬಿಗುವಿತ್ತು. ಒಳಗೆ ಲಾವಾರಸದ ಕುದಿತವಿತ್ತು.

ಕೆಂಡ ಮುಚ್ಚಿದ ಕೊಂಡ;

ಬೆಂಕಿಯ ಮನೆಯ ಮುಚ್ಚಿದ ಬಾಗಿಲು;
ಕಾಯುತ್ತಿರುವ ಭಾವ; ಕುದಿವ ಜೀವ.

ಸೂರ್ಯ ದಿಟ್ಟಿಸಿದ; ಬಿಗಿ ಮುಖದ ಭಾವಕ್ಕೆ ಕಚಗುಳಿಯಿಡಲೆಂದು ಹೇಳಿದ–"ಆದ್ರೆ ಒಂದ್ ವಿಷ್ಯ. ಮದ್ವೆ ಆಗೋಕೆ ಇಷ್ಟು ಕಾಯ್ಸೊಲ್ಲ." ಶಬರಿ ದಿಟ್ಟಿಸುತ್ತ ನಗೆಮುಖ ಮಾಡಿದಳು. "ಆವಿಷ್ಯ ಮರ್ತೇಬಿಟ್ಟಿದ್ಯೇನೊ ಅಂದ್ಕೊಂಡಿದ್ದೆ." ಎಂದಳು. "ಎಲ್ಲಾದ್ರೂ ಉಂಟಾ ಶಬರಿ? ಅದು ಒಳ್ಗಡೆ ಕೊರೀತಾನೇ ಇರುತ್ತೆ. ಆದ್ರೆ ಮದ್ವೆ ನಮ್ ಕೈಯ್ಯಲ್ಲಿದೆ. ಹೋರಾಟ ನಮ್ಮಿಬ್ರ ಕೈಯ್ಯಲ್ಲಷ್ಟೇ ಇಲ್ಲ. ಅಲ್ವಾ?" ಎಂದು ಪ್ರಶ್ನಾರ್ಥಕವಾಗಿ ಶಬರಿಯ ಮುಖ ನೋಡಿದ ಸೂರ್ಯ. "ಅದು ಗೊತ್ತು" ಎಂದಳು ಶಬರಿ.

ಶಬರಿಯೊಳಗೆ ಸೂರ್ಯ ಹುಟ್ಟುವುದನ್ನು ಕಂಡು ಭಾವಾವೇಶದಿಂದ ಬಿಗಿದಪ್ಪಿದ.

* * *

ಹೊಲದಲ್ಲಿ ಕೆಲಸ ನಡೆಯುತ್ತಿತ್ತು. ಒಡೆಯ ಬದುವಿನ ಮೇಲೆ ನಿಂತು ಸೂಚನೆ ಕೊಡುತ್ತಿದ್ದ. ಆನಂತರ ಬಾವಿಯ ಬಳಿಯಿದ್ದ ಕರೆಂಟು ರೂಮಿನ ಮುಂದೆ ಬಂದು, ಆಳು ಹಾಕಿದ ಕುರ್ಚಿಯಲ್ಲಿ ಕೂತ. ಒಮ್ಮೆ ದಿಟ್ಟಿಸಿದ. ನೂರಾರು ಎಕರೆ ಜಮೀನು. ಇಂಥದೇ ಜಮೀನು ಮೂರ್ನಾಲ್ಕು ಕಡೆ ಇದೆ. ಕೆಲಸ ಮಾಡುವವರ ಸಂಖ್ಯೆಯೂ ನೂರಾರು.

ಕೂಲಿಗಾರರಲ್ಲಿದ್ದ ಶಬರಿ ಆಗಾಗ್ಗೆ ಈತನ ಕಡೆ ನೋಡುತ್ತಿದ್ದಳು. ಯಾಕೆ ಹೀಗೆ ಎಂದುಕೊಂಡ. ಶಬರಿ ಈತನ ಕಡೆಗೊಮ್ಮೆ ದೂರಕ್ಕೊಮ್ಮೆ ನೋಡುತ್ತಿದ್ದಳು. ಒಡೆಯ ಅವಳ ನೋಟಕ್ಕೆ ತನ್ನದೇ ಅರ್ಥಕೊಡುತ್ತ ಮೀಸೆಯನ್ನು ಸರಿಯಗಿ ತೀಡುತ್ತ ಅವಳ ಕಡೆ ನೋಡಿದ. ಅವಳು ದೃಷ್ಟಿ ಬದಲಿಸಿ ದೂರಕ್ಕೆ ನೋಡಿದಳು. ಆಕೆ ಯಾರೂ ಇಲ್ಲದ ಜಾಗವನ್ನು ಹುಡುಕುತ್ತಿರಬಹುದೇ ಎಂದುಕೊಂಡು ನೋಡಿದ. ಶಬರಿ ಹಸನ್ಮುಖಿಯಾಗಿದ್ದಳು. ಖುಷಿಗೊಂಡು ದಿಟ್ಟಿಸುತ್ತಿರುವಾಗ ಸೂರ್ಯ–ನವಾಬ ಹತ್ತಿರ ಬಂದಿದ್ದರು. "ನರಸಿಂಹರಾಯಪ್ಪನೋರೆ" ಎಂದು ಕರೆದ ಸೂರ್ಯ "ನಮಸ್ಕಾರ" ಎಂದ. ನರಸಿಂಹರಾಯಪ್ಪ ಶಬರಿಯಿಂದ ದೃಷ್ಟಿಕಿತ್ತು "ಬರ್ರಪ್ಪ ಬರ್ರಿ" ಎಂದು ಕರೆದ. ಮತ್ತೆ ಆಕಡೆ ನೋಡಿದ. ಇದನ್ನು ಗಮನಿಸಿದ್ದ ಸೂರ್ಯ "ಶಬರಿ ನಮ್ಮನ್ ಕಾಯ್ತಾ ಇದ್ದಳು. ನಿಮ್ ಜೊತೆ ಒಂದು ವಿಷ್ಯ ಮಾತಾಡೋಕ್ ಬರ್ತೀವಿ ಅಂತ ಮೊದ್ಲೇ ಹೇಳಿದ್ವಿ" ಎಂದು

ಹೇಳಿ ಒಡೆಯನಿಗೆ ನಿರಾಶೆ ತಂದ. ಆತ "ಯೆಷ್ಟೆಷ್ಟೆ" ಎನ್ನುತ್ತಾ "ಸರ್ಯಾಗ್ ಕೆಲ್ಸ ಮಾಡ್ತಾರೋ ಇಲ್ವೊ ಅಂಬ್ತ ಕಾಯ್ತಾ ಕುಂತಿವ್ನಿ" ಎಂದಾಗ "ಅಂತೂ ನೀವೂ ಕಾಯ್ಬೇಕಾಯ್ತು" ಎಂದು ಸೂರ್ಯ ತಮಾಷೆ ಮಾಡಿದ. ಆಗ ನರಸಿಂಹರಾಯಪ್ಪ "ಅದಿರ್ಲಿ. ಏನ್ ಬಂದಿದ್ದು ನಿಮ್ ಸವಾರಿ?" ಎಂದು ಬಿಗಿಯಾಗಿ ಕೇಳಿದ. ಸೂರ್ಯ ನೇರವಾಗಿ ವಿಷಯಕ್ಕೆ ಬಂದ–" ಆ ತೋಪು ಇದ್ಯಲ್ಲ. ಅದನ್ನ, ಆಮೇಲ್ ಅಲ್ಲೆ ಇರೋ ಬಯಲು ಜಮೀನನ್ನ ಬುಡಕಟ್ಟಿನೋರ್ಗೆ, ಊರ್ನಲ್ಲಿರೊ ಬಡವರಿಗೆ ಹಂಚಬೇಕು. ಅದನ್ ಕೇಳೋಕ್ ಬಂದಿದ್ದೇವೆ" ಎಂದ.

ನರಸಿಂಹರಾಯಪ್ಪ ಎದ್ದುನಿಂತ. ಹತ್ತರಕ್ಕೆ ಬಂದ. "ಬರ್ರಿ ಮಾತಾಡ್ಕಂಡ್ ವೋಗಾನ" ಎಂದ. ನಡೆಯುತ್ತ ಹೇಳಿದ. "ಅದು ನಂದಲ್ಲಪ್ಪ. ಸರ್ಕಾರದ್ದು. ನಾನೆಂಗ್ ಅಂಚಾಕಾಯ್ತದೆ?"

ನರಸಿಂಹರಾಯಪ್ಪ ರೇಗದೆ ತಣ್ಣಗೆ ಹೇಳಿದ್ದು ಅಚ್ಚರಿ ಮೂಡಿಸಿತ್ತು.

"ಹಾಗಂದ್ರೆ ಹೇಗೆ? ನೀವೇ ಇಷ್ಟುದಿನ ಅನುಭವುಸ್ತಾ ಇದ್ರಿ?" – ಸೂರ್ಯ ಕೇಳಿದ.

"ಆದ್ರೇನ್ ಬಂತಪ್ಪ. ನಾನು ನಂದೇ ಅಂದ್ಕಂಡು ಈಟೊರ್ಸ ಆ ತೋಪು ನೋಡ್ಕಂಡಿವ್ನಿ. ಆ ಎಮ್ಮೆಲ್ಲೆ ಧರ್ಮಯ್ಯ ಬಂದು ಧರ್ಮಕರ್ಮ ಒಂದೂ ನೋಡ್ದೆ ಅದ್ಯಾರ್ಗೋ ಅಮೆರಿಕಾದೋರಿಗ್ ಕೊಡುಸ್ತೀನಿ ಅಂಬಾದ? ಏನೊ ನಮ್ಮೂರ್ಗೂ ಒಸಿ ಕಿಮ್ಮತ್ ಬರ್ತೈತೆ ಅಂಬ್ತ ನಾನು ಉಙ್ಞ ಅಂದ್ ಬಿಟ್ಟೆ. ಇವಾಗ್ ನನ್ ಕೈಯ್ಯಾಗೇನೂ ಇಲ್ಲ. ಬೇಕಾರೆ ಜೋಯಿಸ್ರನ್ನೇ ಕೇಳ್ರಿ"– ನರಸಿಂಹರಾಯಪ್ಪ ಕೈಚೆಲ್ಲಿದಂತೆ ಮಾತಾಡಿದ.

"ಇಂಗ್ ಮಾತಾಡಿ ಅಂತ ಜೋಯಿಸರೇ ಹೇಳಿಕೊಟ್ಟಿದಾರ?"– ಸೂರ್ಯ ಚುಚ್ಚಿದ.

"ಯಾಕೆ ನಂಗೇನ್ ಮಾತ್ ಬರಾಕಿಲ್ವ? ಅಮೆರಿಕಾದೋರ್ ಜತ್ಯಾಗೇ ಮಾತಾಡಿವ್ನಿ, ನಿಮ್ತಾವ್ ಮಾತಾಡಾಕ್ ಬರಾಕಿಲ್ವ?" ಎಂದು ನರಸಿಂಹರಾಯಪ್ಪ ಬಿಗುಮಾನದಿಂದ ಹೇಳಿದ.

"ಬರುತ್ತೆ, ಬರುತ್ತ" ಸೂರ್ಯ ವ್ಯಂಗ್ಯವಾಗಿ ಹೇಳಿ ಮತ್ತೆ ಮಾತು ಮುಂದುವರೆಸಿದ–" ಈಗ ತೋಪನ್ನು ಅನುಭವಿಸ್ತಾ ಇರೋರು ನೀವು. ಬೆಳಿಸ್ದೋರು ಬಡವರು. ಅವ್ರಿಗ್ ಬಿಟ್‌ಕೊಡೋದು ನ್ಯಾಯ."

"ಕಂಡೋರ್‌ತಾವ ನ್ಯಾಯ ಯೇಳಿಸ್ಕಳಾಕೆ ನಮ್ ಬುದ್ದಿ ಏನ್ ಬತಗೆಟ್ಟಿಲ್ಲ. ನಮ್ ತಲೇನಾಗೇನ್ ಸಗಣಿ ಇಲ್ಲ. ಸುಮ್ಕೆ ಆ ಬಡವರ ತಲೆ ಕೆಡ್ಸಿ ಅವ್ರ

ಕೂಲೀಗೂ ಕಲ್ ಆಕ್ ಬ್ಯಾಡ್ರಿ. ಏನೊ ನಾಲಕ್ ಕಾಸುಟ್ಟಿಸ್ಕಂಡು ವೊಟ್ಟೆ ತುಂಬಿಸ್ಕಂಬ್ತಾ ಅವ್ರೆ."– ನರಸಿಂಹರಾಯಪ್ಪ ಗಡುಸಾಗಿ ನುಡಿದ.

"ಅದೆಲ್ಲ ನಮ್ಗೂಗ್ಗೊತ್ತು. ಅವ್ರ ಹೊಟ್ಟೆ ಮೇಲೆ ಹೊಡ್ಯೋಕೇಂತ ನಾವ್ ಹೊರಟಿಲ್ಲ. ಅವ್ರ ಮನಸ್ನಲ್ಲಿರೋದ್ನ ನಿಮ್ ಕಿವೀಗ್ ಹಾಕಿದ್ದೀವಿ. ನಿಮ್ ಊರಿನ ಜನ, ನಿಮ್ ಹಟ್ಟಿಜನ. ಆಮೇಲೆ ನಿವುಂಟು ಅವರುಂಟು. ಸುಮ್ನೆ ಯಾಕ್ ಅವಮಾನ ಅನುಭವಿಸ್ತೀರಿ ಅಂತ ಮೊದ್ಲೇ ಹೇಳೋಕ್ ಬಂದಿದ್ದೀವಿ, ಅಷ್ಟೆ"– ಸೂರ್ಯನ ಮಾತು ನಿಖರವಾಗಿತ್ತು.

"ಅವ್‌ಮಾನ ಗಿವ್‌ಮಾನ ಏನಿದ್ರು, ಇನ್‌ಮ್ಯಾಕೆ ಆ ಬಿಳೀ ಒಡೇರು, ಅದೇ ಅಮೆರಿಕಾದೋರು, ಅವ್ರೇ ನೋಡ್ಕಂಬ್ತಾರೆ." ಎಂದು ಹೇಳಿದ ನರಸಿಂಹರಾಯಪ್ಪ "ಯೇ ಏನ್ ಈ ಕಡೀಕ್ ನೋಡ್ತಾ ಇವ್ರಿ. ಇಲ್ಲೇನ್ ಕೋತಿ ಕುಣಿತಾ ಐತಾ?" ಎಂದು ಈಕಡೆಯೇ ನೋಡುತ್ತಿದ್ದ ಕೂಲಿಯವರ ಕಡೆ ನೋಡಿ ಗದರಿದ. "ಬತ್ತೀನಿ' ಎಂದು ಹೊರಟೇಬಿಟ್ಟ.

ಸೂರ್ಯ ಮತ್ತು ನವಾಬ ಮುಂದೇನು ಮಾಡುವುದೆಂದು ಚಿಂತಿಸಿದರು. ಈಗ ವಿಷಯ ಬಯಲಾಗಿದೆ. ಸುಮ್ಮನಿರುವುದು ಸಾಧ್ಯವೇ ಇಲ್ಲ. ಈ ಜನರಿಂದ ಪ್ರತಿಭಟನೆ ನಡೆಯಲೇಬೇಕು– ಯೋಚಿಸಿದರು. ನವಾಬ್ ಹೇಳಿದ–" ಈ ಸಂದರ್ಭಕ್ಕೆ ನಮ್ ಗೆಳೆಯರೆಲ್ಲ ಬರೋದು ವಾಸಿ ಅನ್ಸುತ್ತೆ. ಈಗ ಇಲ್ಲಿ ಒಂದು ಘಟ್ಟಕ್ಕೆ ಬಂದದ್ದಾಗಿದೆ. ಈಗ ನೇರ ಎಂಟ್ರಿ ಆಗ್ಲೇಬೇಕು. ಈ ಜನರ ಜೊತೆಗೆ ನಮ್ಮ ಸಂಘ ಸೇರ್ಬೇಕು. ಸಂಘದ ನೇತೃತ್ವದಲ್ಲೇ ಪ್ರತಿಭಟನೆ ನಡೀಬೇಕು. ಆಗ ಈ ಜನಕ್ಕೂ ಧೈರ್ಯ ಬರುತ್ತೆ."

ನವಾಬನ ಸಲಹೆ ಸೂರ್ಯನಿಗೆ ಸರಿ ಎನ್ನಿಸತೊಡಗಿತು. ಆದರೂ ಯೋಚಿಸಿದ. ಇದು ನಿರ್ಣಾಯಕ ಘಟ್ಟವಾಗ್ತಾ ಇದೆ. ಆದ್ದರಿಂದ ಸಂಘದವರ ಜೊತೆ ಮಾತಾಡೋದಂತೂ ಆಗಲೇಬೇಕು. ನವಾಬನನ್ನು ಸಂಘದ ಗೆಳೆಯರ ಬಳಿಗೆ ಕಳಿಸಿ ಚರ್ಚಿಸಲು ಹೇಳಬೇಕು. ಅವರು ಇಲ್ಲಿಗೆ ಬರುವುದು ಸರಿಯೆಂದು ನಿರ್ಣಯಿಸಿದರೆ ಕರೆತರಬೇಕು. ತಾನೊಬ್ಬನೇ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಬದಲು ಹೀಗೆ ಮಾಡುವುದೇ ಸರಿಯೆಂದು ಭಾವಿಸಿ ನವಾಬನಿಗೆ ಹೇಳಿದ. ಆತನಿಗೂ ಅದು ಸೂಕ್ತ ಅನ್ನಿಸಿತು. "ನಾಳೆಯೇ ಹೊರಡ್ತೀನಿ" ಎಂದ.

ಪಟ್ಟಣಕ್ಕೆ ಹೋಗಿ ಗೆಳೆಯರನ್ನು ಭೇಟಿಯಾಗಿ ಬರುತ್ತೇನೆಂದು ಹೇಳಿದಾಗ ಗೌರಿಯು ತಾನೂ ಬರುತ್ತೇನೆಂದು ನವಾಬನಿಗೆ ಒತ್ತಾಯಮಾಡಿದಳು.

"ಈಗ ಬೇಡ ಮರಿ" ಎಂದ.

"ನಾನೊಬ್ಳೆ ಇರಲ್ಲ ಇಲ್ಲಿ" ಎಂದಳು.

"ಇಷ್ಟುದಿನ ಇರ್ಲಿಲ್ವ?"

"ಇದ್ದೆ ಆವಾಗ ಅಟ್ಟೀನೆ ನಂದೂ ಅನ್ನುಸ್ತಿತ್ತು. ಈಗ ನೀನೇ ಅಟ್ಟಿ ಅನುಸ್ತಾ ಐತೆ."

"ಮದ್ವೆ ಆದ ಹೊಸತು. ಅನ್ನೋದು ಸಹಜ."

"ಅದೆಲ್ಲ ನಂಗೊತ್ತಿಲ್ಲ. ನಾನೂ ಪಟ್ಟಣ ನೋಡ್‌ಬೇಕು."

"ನಾನ್ ಪಟ್ಟಣ ನೋಡೋಕ್ ಹೋಗ್ತಾ ಇಲ್ಲ. ಅಲ್ಲಿ ಗೆಳೆಯರನ್ನು ನೋಡ್‌ಬೇಕು. ಇಲ್ಲಿನ ವಿಷ್ಯ ಮಾತಾಡ್ಬೇಕು."

'ಮಾತಾಡ್ವಾಗ ನಾನೂ ಇರ್ತೀನಿ. ನಮ್ ವಿಸ್ಯಕ್ಕೆ ನಾವೇ ಇರಾದ್ ಬ್ಯಾಡ್ವಾ?"

ಗೌರಿಯ ಪ್ರಶ್ನೆಗೆ ನವಾಬನಿಗೆ ಏನು ಉತ್ತರಕೊಡುವುದೆಂದು ತಕ್ಷಣಕ್ಕೆ ತಿಳಿಯಲಿಲ್ಲ.

ಸೂರ್ಯನ ಬಳಿ ಎಲ್ಲವನ್ನೂ ಹೇಳಿದ. ಸೂರ್ಯ ಯೋಚಿಸಿ "ಗೌರೀನ್ ಕರ್ಕೊಂಡ್ ಹೋಗು. ಅದೇ ಸರಿ. ಆಕೇಗೂ ಅನುಭವ ಆಗ್ಬೇಕು. ಅದ್ರಿಂದ ಇಲ್ಲಿ ಹೋರಾಟಕ್ಕೂ ಪ್ರಯೋಜನ ಇದೆ." ಎಂದ.

ಗೌರಿ ಮತ್ತು ನವಾಬ ಪಟ್ಟಣಕ್ಕೆ ಹೊರಟ ಸುದ್ದಿ ಗೊತ್ತಾದಾಗ ಎಲ್ಲರೂ ಸಂಭ್ರಮಿಸಿದರು. ಹೊರಟು ನಿಂತ ದಿನ ಆರತಿ ಬೆಳಗಿ ಬೀಳ್ಕೊಟ್ಟರು. ಪೂಜಾರಪ್ಪ ಕಣ್ತುಂಬಿ ನಿಂತಿದ್ದ.

ಸೂರ್ಯ "ಬೇಗ ಬಂದ್ಬಿಡು ಗೆಳೆಯ" ಎಂದ.

ಶಬರಿ "ಅಲ್ಲೇ ಇದ್‌ಬಿಟ್ಟೀಯ ಗೌರಿ. ಬೇಗ ಬಂದ್ಬಿಡು" ಎಂದು ತಮಾಷೆ ಮಾಡಿದಳು.

ಗೌರಿಯಂತೂ ಹೊಸಲೋಕಕ್ಕೆ ಹೊರಟ ಸಂಭ್ರದಲ್ಲಿದ್ದಳು. ಹಟ್ಟಿ ದಾಟುವಾಗ ಸೂರ್ಯ ನವಾಬನಿಗೆ "ಹುಷಾರು, ಗೌರಿ ಜೋಪಾನ" ಎಂದು ಮೆಲುದನಿಯಲ್ಲಿ ಎಚ್ಚರಿಸಿದ.

ನವಾಬ್ "ಬರ್ತೀನಿ ಬ್ರದರ್" ಎಂದು ಹೇಳಿ ಹೊರಟಾಗ, ಹಟ್ಟಿಯ ಜನರೆಲ್ಲ ಗಂಡನ ಮನೆಗೆ ಹೆಣ್ಣನ್ನು ಕಳಿಸುವಂತೆ ಬೀಳ್ಕೊಟ್ಟರು.

"ಮದಲ್‌ಸಾರಿ ವೊರ್ಗಡೀಕ್ ವೋಗ್ತಾ ಅವ್ಳೆ ನಮ್ಮೆಣ್ ಮಗಳು. ದೃಷ್ಟಿ ಗಿಷ್ಟಿ ಆದಾತು. ಪರ್ಕೆ ತರ್ರಿ" ಎಂದು ಒಬ್ಬಾಕೆ ಪೊರಕೆಯನ್ನು ನೀವಳಿಸಿ ಅದನ್ನು ಸುಟ್ಟಳು. ಪೊರಕೆಯು ನಿಟಿನಿಟಿಯೆಂದು ಸದ್ದು ಮಾಡುತ್ತ ಸುಟ್ಟು ಹೋಯಿತು. ಹೆಂಗಸರೆಲ್ಲ ಸಂತೋಷಪಟ್ಟರು.

ನವಾಬನನ್ನು ಕಳಿಸಿದ್ದಾದ ಮೇಲೆ ಸೂರ್ಯ ಇವರನ್ನೆಲ್ಲ ಹುರಿದುಂಬಿಸುವ ಕೆಲಸದಲ್ಲಿ ನಿರತನಾದ. "ನೀವು ಧೈರ್ಯ ಮಾಡಿ. ನಾನೂ ನನ್ನ ಗೆಳೆಯರು ನಿಮ್ ಜೊತೆ ಸೇರಿ ಹೋರಾಟಮಾಡ್ತೀವಿ" ಎಂದು ಸ್ಪಷ್ಟಪಡಿಸಿದಾಗ ಅವರಲ್ಲಿ ಧೈರ್ಯ ಮೂಡತೊಡಗಿತು. ಅವರಿಗೆ ಇದ್ದ ಅಧೈರ್ಯವೆಂದರೆ ಮುಂದಿನ ಹೊಟ್ಟೆಪಾಡಿನ ಸಮಸ್ಯೆಯಷ್ಟೇ. "ಯಾವಾಗ್ಲೂ ವೊಟ್ಟೆಪಾಡು ಅಂದ್ಕಂಡ್ರಾಯ್ತದ? ಭೂಮಿ ಸಿಗಾದಾದ್ರೆ ವೊಟ್ಟೆ ಬಟ್ಟೆ ಕಟ್ಟಾಕ್ ಇಂದೆ ಮುಂದೆ ನೋಡ್‌ಬಾರ್ದು" ಎಂದು ಶಬರಿ ದೃಢವಾಗಿ ಮತ್ತೆ ಮತ್ತೆ ಹೇಳಿದಳು. ಆಗ ಸಣ್ಣೀರ, "ಯೆಣ್ ಮಗಳೀಗೇ ಈಟೊಂದ್ ರೋಸ ಇರ್‌ಬೇಕಾರೆ ನಾವ್ ಸುಮ್ಕಿರಾದ್ ಸರ್‍ಯಾಗಕಿಲ್ಲ" ಎಂದು ನಿರ್ಧಾರಕವಾಗಿ ನುಡಿದ. ಊರಿನ ರಾಮಣ್ಣನಂತೂ "ನಾವು ಹಿಂದೆ ಮುಂದೆ ನೋಡಾಕಿಲ್ಲಪ್ಪ" ಎಂದ. ಹೊಸ ಹುರುಪು ಮೂಡತೊಡಗಿತ್ತು. ಅಂತಿಮ ರೂಪಕ್ಕಾಗಿ ಕಾಯುತ್ತಿತ್ತು.

ಈ ಕಡೆ ನರಸಿಂಹರಾಯಪ್ಪ ಸುಮ್ಮನಿರಲಿಲ್ಲ. ನಡೆದದ್ದನ್ನು ಜೋಯಿಸರಿಗೆ ವಿವರಿಸಿದ. ಅವರು ಎಂ.ಎಲ್.ಎ. ಧರ್ಮಯ್ಯನಿಗೆ ಎಲ್ಲ ತಿಳಿಸುವುದು ಲೇಸೆಂದು ಸಲಹೆ ನೀಡಿದರು. "ನಮ್ ಕೈ ತೊಳ್ಕೊಂಡು ಎಲ್ಲಾ ಅವ್ರ ಮೇಲೆ ಹಾಕ್‌ಬಿಡೋಣ" ಎಮದು ಜೋಯಿಸರು ಹೇಳಿದಾಗ ಒಡೆಯನಿಗೂ ಸರಿಯೆನ್ನಿಸಿತು. ತಕ್ಷಣ ಪಟ್ಟಣಕ್ಕೆ ಹೊರಟ.

ಪಟ್ಟಣದಲ್ಲಿ ಎಂ.ಎಲ್.ಎ. ಧರ್ಮಯ್ಯನವರನ್ನು ಭೇಟಿಯಾಗಿ ಬೆಳವಣಿಗೆಗಳನ್ನು ವಿವರಿಸಿದ. ಧರ್ಮಯ್ಯ "ಏನೂ ಹೆದರಬೇಡಿ. ಧರ್ಮ ಕರ್ಮ ಇಲ್ದೆ ಇರೋ ಜನ ಗಲಾಟೆ ಮಾಡಿದ್ರೆ ಏನೂ ಆಗೋದಿಲ್ಲ. ಒಂದೆರಡು ದಿನ್ದಲ್ಲೇ ಎಲ್ಲಾ ತೀರ್ಮಾನ ಆಗುತ್ತೆ. ವಿದೇಶಿ ಬಂಡವಾಳ ಬರುತ್ತೆ ಅಂದ್ರೆ ಸರ್ಕಾರ ಏನ್ ಮಾಡೋಕೂ ಸಿದ್ಧ ಇದೆ. ಈ ಸಮಯದಲ್ಲಿ ನಾವೂ ಅಷ್ಟಿಷ್ಟು ಮಾಡ್ಕೊಂಡ್ರಾಯ್ತು" ಎಂದು ಧೈರ್ಯ ತುಂಬಿದ. ನರಸಿಂಹರಾಯಪ್ಪ "ನನ್ ಮರೀಬ್ಯಾಡ್ರಿ ಬುದ್ದಿ" ಎಂದು ಕೈ ಮುಗಿದು ಹೊರಟು ನಿಂತಾಗ "ಇನ್ ಎರಡುದಿನ. ಮೊದಲು ನಿಮಿಗ್ ಸಲ್‌ಬೇಕಾದ್ದೆಲ್ಲ ಸಲ್ಸಿ ಆಮೇಲೆ ನಮ್ ಕೆಲ್ಸ. ಆರಾಮವಾಗಿರಿ. ಎಲ್ಲಾ ನನಿಗ್ ಬಿಟ್ ಬಿಡಿ." ಎಂದು ಧರ್ಮಯ್ಯ ಮತ್ತೊಮ್ಮೆ ಭರವಸೆ ನೀಡಿದ. ನರಸಿಂಹರಾಯಪ್ಪ "ನಮ್ ಜೋಯಿಸ್ರನ್ನೂ ಮರೀಬ್ಯಾಡ್ರಿ. ಖಾತೆ ಗೀತೆ ಎಲ್ಲಾ ಅವ್ರೆ ಮಾಡ್ತಾರು." ಎಂದು ಕೇಳಿಕೊಂಡ. ಧರ್ಮಯ್ಯ ನಗುತ್ತ "ನಿಮ್ಮನ್ ಮರುತ್ರೂ ಅವ್ರನ್ ಮರ್‍ಯೋಲ್ಲ" ಎಂದ. ನರಸಿಂಹರಾಯಪ್ಪ ಬೆಪ್ಪಾಗಿ ನೋಡಿದಾಗ "ನಿಮ್ಮನ್ನೂ ಮರೆಯೊಲ್ಲ. ಅವ್ರನ್ನೂ ಮರೆಯೊಲ್ಲ.

ಹೆದ್ರಬೇಡಿ" ಎಂದು ನಗುತ್ತಾ ಒಳಹೋಗಿ ಒಂದು ನೋಟಿನ ಕಟ್ಟು ತಂದು ನರಸಿಂಹರಾಯಪ್ಪನ ಕೈಗೆ ಕೊಟ್ಟು "ಇದ್ರಲ್ಲಿ ಒಂದು ಲಕ್ಷ ರೂಪಾಯಿ ಇದೆ. ಇದು ಸುಮ್ನೆ ಕೊಡ್ತಿರಾ ಹಣ. ಜಮೀನ್ಗೆ ತೋಪ್ಗೆ ಸೈನ್ ಮಾಡಿಸ್ಕೊಂಡು ಎರಡು ದಿನಕ್ಕೆ ಪೈಸಲ್ ಮಾಡುಸ್ತೀನಿ." ಎಂದು ಹೇಳಿದ.

ನರಸಿಂಹರಾಯಪ್ಪನ ಸಂತೋಷಕ್ಕೆ ಪಾರವೇ ಇಲ್ಲ. "ಈ ದುಡ್ ಕೊಟ್ಟಿದ್ನ ಜೋಯ್ಸಪ್ಪಂಗ್ ಯೇಳ್ಬ್ಯಾಡ್ರಿ ಬುದ್ದಿ" ಎಂದು ಮೆತ್ತಗೆ ಕೇಳಿಕೊಂಡ. "ಬಲಗೈಯ್ಯಲ್ ಕೊಟ್ಟಿದ್ದು ಎಡಗೈಗೆ ಗೊತ್ತಾಗ್‌ಬಾರ್ದು ಅಂತಾರಲ್ಲ ಹಾಗೆ ನನ್ ವ್ಯವಹಾರ. ನೀವ್ ಆರಾಮವಾಗಿರಿ ಅಂತ ಎಷ್ಟು ಸಾರಿ ಹೇಳೋದು ನಿಮ್ಗೆ" ಎಂದು ಧರ್ಮಯ್ಯ ಒತ್ತಿ ಹೇಳಿದಾಗ ನರಸಿಂಹರಾಯಪ್ಪ "ಗೊತ್ತಾತು ಗೊತ್ತಾತು" ಎಂದು ನೋಟಿನ ಕಟ್ಟನ್ನು ಕಣ್ಣಿಗೆ ಒತ್ತಿಕೊಂಡ.

ಧರ್ಮಯ್ಯ "ಬಸ್‌ಗಿಸ್ನಾಗೆಲ್ಲ ಹೋಗ್‌ಬೇಡಿ ಇಷ್ಟು ದುಡ್ ಇಟ್ಕೊಂಡು. ನಾನೇ ಒಂದ್ ಕಾರ್ ಕಳುಸ್ತೀನಿ, ಅದ್ರಲ್ ಹೋಗಿ" ಎಂದು ನರಸಿಂಹರಾಯಪ್ಪನಿಗೆ ಹೇಳಿ, ಡ್ರೈವರ್ ಕರೆದು "ಇವ್ರ್‌ನ ಊರಿಗೆ ಬಿಟ್‌ಬಾ" ಎಂದು ಸೂಚಿಸಿದ.

ನರಸಿಂಹರಾಯಪ್ಪ ಧರ್ಮಯ್ಯನಿಗೆ ಕೈಮುಗಿದ. ಆಗ ಧರ್ಮಯ್ಯ– "ದೇವ್ರಿಗ್ ಕೈಮುಗೀರಿ" ಎಂದು ವಿನಯ ತೋರಿಸಿದ. ನರಸಿಂಹರಾಯಪ್ಪ "ನೀವೇ ನನ್ ಬಾಗಕ್ ದ್ಯಾವ್ರ್ ತರಾ ಆಗಿವ್ರಿ" ಎಂದು ಕೈಮುಗಿದೇ ನಿಂತಿದ್ದ.

ಅಷ್ಟರಲ್ಲಿ ಕಾರು ಸಿದ್ಧವಾಗಿ ಬಂತು.

# ೧೫

ಹೋರಾಟದೊಳಗೊಂದು ಒಂಟಿತನ;
ಕ್ರಿಯೆಯೆ ತಾಯ್ತನ;
ತಾಯ್ತನಕ್ಕೆ ಕರುಳುಂಟು;
ಕರುಳು ಕೊರಳಾದಾಗ ಅರ್ಥವುಂಟು;
ಅಂತಃಕರಣ ಆಕ್ರೋಶವಾದಾಗ ಆಳವುಂಟು.
ಕೊರಳು ಕರುಳನ್ನು ನುಂಗಿದರೆ?
ಸಂಕಟವಿಲ್ಲದ ಸಿಟ್ಟು ಅಟ್ಟ ಏರಿದರೆ?

–ಶಾಲೆಯೊಳಗೆ ಕೂತ ಸೂರ್ಯನ ಒಳಗೊಂದು ಕಡೆಗೋಲು. ಬೆಳಗ್ಗೆ ಎದ್ದವನೆ ಬಂದು ಕೂತಿದ್ದ.

ಮುಖ್ಯಘಟ್ಟಕ್ಕೆ ಬಂದು ತಲುಪುತ್ತಿರುವ ಬೆಳವಣಿಗೆಗಳನ್ನು ಒಂದೊಂದಾಗಿ ತುಂಬಿಕೊಳ್ಳುತ್ತ, ತರ್ಕಿಸುತ್ತ, ತತ್ವವಾಗುತ್ತ, ನಿರೀಕ್ಷೆಯ ನೋಟದಲ್ಲಿ ಶಾಲೆಯನ್ನೊಮ್ಮೆ ಅವಲೋಕಿಸಿದ.

ಅನೇಕರು ಸ್ಲೇಟು, ಪುಸ್ತಕಗಳನ್ನು ಇಲ್ಲೇ ಇಟ್ಟಿದ್ದಾರೆ. ಮನೆಗೆ ಕೊಂಡೊಯ್ದು ಓದುವ ಬಿಡುವು ಇಲ್ಲವೆಂಬ ಖಾತರಿ ಅವರಿಗೆ. ಕೆಲವರು ಮಾತ್ರ ಮನೆಗೆ ಕೊಂಡೊಯ್ದಿದ್ದಾರೆ. ಅವರಲ್ಲಿ ಶಬರಿ, ಗೌರಿ, ಹುಚ್ಚೀರ ಸೇರಿದ್ದಾರೆ. ಸೂರ್ಯ ನೋಡುತ್ತಲೇ ಇದ್ದ; ಇಲ್ಲಿ ಖಾಲಿಯಾಗಿರುವ ಶಾಲೆ; ಹಟ್ಟಿ ಜನರ ಮನಸ್ಸಿಗೆ ಸ್ಥಳಾಂತರಗೊಂಡ ಶಾಲೆ, ಇದೇ ಒಂದು ಇತಿಹಾಸ. ಅಕ್ಷರ ಇತಿಹಾಸಕ್ಕೆ ಅಲಿಖಿತ ಇತಿಹಾಸ ಸೇರಿದಾಗ ಅದಕ್ಕೆ ಪೂರ್ಣ ವಿನ್ಯಾಸ. ವಿನ್ಯಾಸದ ಒಳಹಾದಿಯಲ್ಲಿ ಚಲನಶೀಲ ಹೆಜ್ಜೆಗಳು.

ಸೂರ್ಯ, ಚಿಂತನೆಯ ಮೂಸೆಯಲ್ಲಿ ಒಳದನಿಗಳಿಗೊಂದು ವಿನ್ಯಾಸ.
ಒಬ್ಬನೇ ಕೂತಷ್ಟೂ ಯೋಚನೆ–ಯಾತನೆ; ಎದ್ದು ಹೊರಟ.
ಸೂರ್ಯನಿಗೆದುರಾಗಿ ಹುಡುಗರು ಓಡಿಬಂದರು.

"ಅಲ್ ಗಲಾಟೆ ಆಗ್ತಾ ಐತೆ. ಸ್ಯಬರಕ್ಕ ನಿನ್ ಕರ್ಕಂಡ್ ಬಾ ಅಂಬ್ತ

ಕಳ್ಸಿದ್ಲು?" ಎಂದು ಗಾಬರಿಯಿಂದ ಹೇಳಿದರು.

"ಎಲ್ಲಿ? ಎಲ್ಲಿ ಗಲಾಟೆ?" – ಸೂರ್ಯನೂ ಗಾಬರಿಗೊಂಡು ಕೇಳಿದ.

"ಅದೇ ತೋಪಿನ್ತಾವ"– ಹುಡುಗರು ಉತ್ತರಿಸಿದರು.

ನಿಜ; ತೋಪಿನಲ್ಲಿ ಗಲಾಟೆ ನಡೆದಿತ್ತು.

ಶಬರಿ ತೋಪಿನತ್ತ ಹೋಗುತ್ತಿದ್ದಳು. ಅಲ್ಲಿ ಮೂರ್ನಾಲ್ಕು ತರಾವರಿ ವಾಹನಗಳು ಬಂದು ನಿಂತಿದ್ದವು. ಪೋಲಿಸರ ಚಿಕ್ಕ ವ್ಯಾನೊಂದು ಇತ್ತು. ನಾಲ್ಕೈದು ಜನ ಬಿಳಿಯರು, ಧರ್ಮಯ್ಯ, ನರಸಿಂಹರಾಯಪ್ಪ, ಜೋಯಿಸರು ಇದ್ದರು. ಪೋಲಿಸರು ವ್ಯಾನಿನಿಂದ ಇಳಿದು ಬಂದೂಕು ಸಮೇತ ನಿಲ್ಲತೊಡಗಿದ್ದರು. ಕೆಲವರ ಕೈಯ್ಯಲ್ಲಿ ಲಾಠಿಗಳಿದ್ದವು–

ಶಬರಿಗೆ ಕುತೂಹಲವಾಯಿತು. ಇವತ್ತು ತೋಪಿಗೆ ಏನೊ ಆಗುತ್ತದೆಯೆಂಬ ಆತಂಕದಿಂದ ಹತ್ತಿರ ಹೋದಳು.

ಆಧುನಿಕ ಗರಗಸದಲ್ಲಿ ತೋಪಿನ ಮರಗಳನ್ನು ಕಡಿದುಹಾಕುವ ಸಿದ್ಧತೆ ನಡೆದಿತ್ತು. ಶಬರಿ ಹತ್ತಿರ ಬರುವುದಕ್ಕೂ ಗರಗಸ ಮರದ ಬುಡಕ್ಕೆ ಹೋಗುವುದಕ್ಕೂ ಸರಿಯಾಗಿತ್ತು.

ಅದೇನು ಆವೇಶ ಬಂದಿತೊ, ಶಬರಿ–"ಕೊಯ್‌ಬ್ಯಾಡ್ರಿ, ಮರ ಕೊಯ್ ಬ್ಯಾಡ್ರಿ" ಎಂದು ಓಡಿ ಬಂದು ಮರವನ್ನು ಅಪ್ಪಿಕೊಂಡಳು. "ಮರ ಕೊಯ್ಯಾಕ್ ನಾನ್ ಬಿಡಾಕಿಲ್ಲ; ನನ್ ಜೀವ ತೆಗೆದ್ರೂ ಬಿಡಾಕಿಲ್ಲ" ಎಂದು ಕಿರುಚಿದ್ದಲ್ಲದೆ "ಸಣ್ಣೀರ, ಹುಚ್ಚೀರ, ಮರಿಯಮ್ಮ, ಲಕ್ಷ್ಮಕ್ಕ, ಕಾಳವ್ವ, ಬರ‍್ರವ್ವೋ ಬರ‍್ರಿ" ಎಂದು ಆವೇಶಭರಿತಳಾಗಿ ಒಂದೇ ಸಮ ಕೂಗಿಕೊಂಡಳು. ಅಲ್ಲಿದ್ದವರಿಗೆ ಅನಿರೀಕ್ಷಿತ ಆಘಾತ. ಬಿಳಿಯರಿಗೆ ಬೇಸರ.

"ಏನಿದು? What is happening? ಎಂದು ಕೇಳಿದರು.

"ಅವ್ಳನ್ ಎಳೆದಾಕ್ರಿ" ಎಂದು ಅಬ್ಬರಿಸಿದ ಧರ್ಮಯ್ಯ, ಬಿಳಿಯರಿಗೆ– "ಏನೂ ಆಗೊಲ್ಲ. Nothing will happen'' ಎಂದು ಆಶ್ವಾಸನೆ ಕೊಟ್ಟ.

ಪೋಲಿಸರು ಶಬರಿಯ ಹತ್ತಿರ ಬಂದರು. "ಈಕಡೆ ಬರ್ತಿಯೋ ಇಲ್ವೊ?" ಎಂದು ಗದರಿಸಿದರು.

"ಆಗ್ಲೇ ಯೇಳ್ಳಿಲ್ವ? ಜೀವ ವೋದ್ರು ಸರೀನೆ ಈ ಮರದ್ ಜೀವ ಕಳ್ಯಾಕ್ ಬಿಡಾಕಿಲ್ಲ" ಎಂದವಳೆ, ಶಬರಿ ಮತ್ತೆ ತನ್ನವರನ್ನೆಲ್ಲ ಕೂಗಿದಳು. ಅಲ್ಲಲ್ಲೇ ಇದ್ದ ಅವರೆಲ್ಲ ಓಡೋಡಿ ಬಂದರು. ಹುಡುಗರು ಓಡಿಹೋಗಿ ಕೆಲವರನ್ನು ಕರೆತಂದರು. ಬಂದವರು ಶಬರಿಯತ್ತ ನೋಡಿದರು.

"ಏನ್ ಸುಮ್ಕೆ ನೋಡ್ತೀರ? ಈ ತೋಪ್ ನಮ್ದು. ಇವ್ರೆಲ್ಲ ಮರ ಕೊಯ್ಯಾಕ್ ಬಂದವ್ರೆ. ಒಬ್ಬೊಬ್ರೂ ಮರ ಇಟ್ಕಳ್ಳಿ" ಎಂದು ಶಬರಿ ಕೂಗಿದಳು. ಪೋಲಿಸರು ಎಳೆಯುವುದು, ಶಬರಿ ಕೂಗುವುದು, ಧರ್ಮಯ್ಯನ ಕಿರಚಾಟ, ಬಿಳಿಯರ ಪೇಚಾಟ– ಇವುಗಳ ಮಧ್ಯೆ ಹುಚ್ಚೀರನ ಮೂಕ ಆಕ್ರೋಶ–ಆಕ್ರಂದನ.

ಜನರೆಲ್ಲ ತೋಪಿಗೆ ನುಗ್ಗಿದರು. ಒಬ್ಬೊಬ್ಬರು ಒಂದೊಂದು ಮರವನ್ನು ಅಪ್ಪಿಕೊಂಡರು.

ಕೂಡಲೆ ಮತ್ತಷ್ಟು ಉತ್ಸಾಹಿತಳಾದ ಶಬರಿ "ಈ ಭೂಮಿ ನಮ್ಮದು ಈ ತೋಪು ನಮ್ಮದು" ಎಂದು ಹೇಳತೊಡಗಿದಳು. ಉಳಿದವರೂ ಅದನ್ನೇ ಹೇಳತೊಡಗಿದರು. ಶಬರಿ ಕೂಗಿದಳು–"ಯೇ ಹುಡುಗ್ರ ಸೂರ್ಯನ್ ಕರ್ಕಂಡ್ ಬರ್‍ರಿ ಸೂರ್ಯನ್ನ."

ಹುಡುಗರು ಅತ್ತ ಓಡುತ್ತಿರುವಾಗ ಇತ್ತ ಹುಚ್ಚೀರ ಶಬರಿ ಹತ್ತಿರ ಬಂದ. ಆಕೆಯನ್ನು ಎಳೆದಾಡುತ್ತಿದ್ದ ಪೋಲಿಸರನ್ನು ಹಿಡಿದು ಎಳೆಯತೊಡಗಿದ. ಅವರು ಆತನನ್ನು ನೂಕಿದರು. ಬಿದ್ದವನು ಎದ್ದ. ಮತ್ತೆ ಪೋಲಿಸರನ್ನು ಹಿಡಿದೆಳೆದ. ಪೋಲಿಸರು ಉಳಿದವರನ್ನು ಎಳೆಯಲು ಯತ್ನಿಸುತ್ತಿದ್ದರು. "ಈ ಭೂಮಿ ನಮ್ಮದು ಈ ತೋಪು ನಮ್ಮದು" ಘೋಷಣೆ ಮೊಳಗುತ್ತಿತ್ತು. ಬಿಳಿಯರ ಬೇಸರ ಹೆಚ್ಚಾಯಿತು. ಅವರು ಎಂ.ಎಲ್.ಎ. ಧರ್ಮಯ್ಯನಿಗೆ ತಾಕೀತು ಮಾಡಿದರು. ಆತ ನರಸಿಂಹರಾಯಪ್ಪನನ್ನು ಗದರಿಕೊಂಡ.

"ಏನ್ರಿ ಇದೆಲ್ಲ? ಇಲ್ಲಿ ಇಷ್ಟೊಂದ್ ವಿರೋಧ ಇದೆ ಅಂತ ಮೊದ್ಲೇ ನೀವ್ ಹೇಳಿದ್ರೆ ಇನ್ನಷ್ಟು ಪೋಲಿಸ್ ತರ್ತಾ ಇದ್ವಿ" ಎಂದ. ನರಸಿಂಹರಾಯಪ್ಪ "ಇಂಗಾಯ್ತದೆ ಅಂಬ್ತ ನಂಗೇನ್ ಗೊತ್ತು ಸಾಯೇಬ್ರ" ಎಂದು ಕೈಕೈ ಹಿಚುಕಿಕೊಂಡು ಜೋಯಿಸರ ಕಡೆ ನೋಡಿದ. ಅವರು "ನನ್ ಏನಪ್ಪ ನೋಡ್ತೀಯ? ಅಲ್ ಸೂರ್ಯ ಓಡ್ ಬರ್ತಾ ಅವ್ನೆ. ಆತನ್ ಕಡೆ ನೋಡು. ಇನ್ನೂ ಏನೇನ್ ಆಗುತ್ತೊ!" ಎಂದರು. ನರಸಿಂಹರಾಯಪ್ಪ, ಧರ್ಮಯ್ಯ ಆಕಡೆ ನೋಡಿದರು.

ಸೂರ್ಯ ಹುಡುಗರೊಂದಿಗೆ ಓಡೋಡಿ ಬರುತ್ತಿದ್ದ.

"ಇವ್ನೇ ಇವ್ನೇ ಇದೆಲ್ಲ ಮಾಡ್ಸಾದು" ಎಂದು ಗಡಿಬಿಡಿಯಿಂದ ಹೇಳಿದ– ನರಸಿಂಹರಾಯಪ್ಪ.

"ಅದನ್ನೇ ನಾನ್ ಬಡ್ಕಂಡಿದ್ದು. ಇವ್ನ್ ಇಲ್ಲಿ ಎಷ್ಟು ಪ್ರಭಾವಶಾಲಿ, ಈ ಜನರ ಶಕ್ತಿ ಏನು ಎಲ್ಲಾ ಹೇಳ್‌ಬೇಕಿತ್ತು ಅಲ್ವ? ಈಗ್ ನೋಡು, ಕಡಿಮೆ

ಪೋಲಿಸ್ರಿದಾರೆ. ಏನಾಗುತ್ತೆ ಅವ್ರ್ ಕೈಲಿ?" ಎಂದು ಧರ್ಮಯ್ಯ ಚಡಪಡಿಸಿದ.

ಅಷ್ಟರಲ್ಲಿ ಸೂರ್ಯ ಬಂದ. ಜನರೆಲ್ಲ ಮತ್ತಷ್ಟು ಗಟ್ಟಿಯಾಗಿ "ಈ ಭೂಮಿ ನಮ್ಮದು" ಎಂದು ಕೂಗಿದರು.

ಸೂರ್ಯನಿಗೆ ಸನ್ನಿವೇಶದ ಅರಿವಾಯಿತು. ತಾವೆಲ್ಲ ಸರಿಯಾಗಿ ಸಿದ್ಧವಾಗುವುದಕ್ಕೆ ಮುಂಚೆಯೇ ಕೆಲಸ ಮುಗಿಸಬೇಕೆಂದು ಇವರೆಲ್ಲ ಬಂದಿದ್ದಾರೆ. ಎಂಬ ಅರಿವಾಯಿತು. ಆತನೂ ಜನರೊಂದಿಗೆ ಘೋಷಣೆ ಕೂಗತೊಡಗಿದ. ಹುಡುಗರೂ ಸೇರಿಕೊಂಡರು. ಈ ವೇಳೆ ಪೂಜಾರಪ್ಪ, ತಿಮ್ಮರಾಯಿ ದಡಬಡನೆ ಬಂದರು. ಜನರನ್ನು ಸೇರಿಕೊಂಡರು! ಸುದ್ದಿ ಊರ ಬಡವರಿಗೂ ತಿಳಿದು ಅವರೂ ಓಡೋಡಿ ಬಂದರು.

ಸೂರ್ಯ ಘೋಷಣೆ ಕೂಗುತ್ತಲೇ ಬಿಳಿಯರ ಬಳಿಗೆ ಬಂದ.

ಮೊದಲೇ ಬೇಸರಗೊಂಡಿದ್ದ ಅವರು "Stop action, Stop action" ಎಂದು ಕೂಗಿದರು. ಆಗ ಧರ್ಮಯ್ಯ "ಸಾಹೇಬ್ರು ಹೇಳ್ತಿರೋದ್ ಕೇಳುಸ್ಲಿಲ್ವೇನಯ್ಯ? ಇನ್‌ಸ್ಪೆಕ್ಟರ್, ಎಳೆಯೋದು ಹೊಡೆಯೋದು ನಿಲ್ಸಿ" ಎಂದು ಕಿರುಚಿದ.

ಪೋಲಿಸರು ನಿಲ್ಲಿಸಿದರು. ಅದರೆ ಜನರು ಮರಗಳನ್ನು ಅಪ್ಪಿಕೊಂಡೇ ಇದ್ದರು. ಬಿಳಿಯರ ಬಳಿಗೆ ಬಂದ ಸೂರ್ಯ ಕೇಳಿದ – "What is going on? This is anti democratic." ಅವರು ಧರ್ಮಯ್ಯನ ಕಡೆ ತೋರಿಸಿದರು.

ಸೂರ್ಯ ಧರ್ಮಯ್ಯನ ಬಳಿ ಬಂದು "ನೋಡಿ ಈ ತೋಪನ್ನ ಕಡಿಯೋದಾಗ್ಲಿ, ಕಿತ್ತುಕೊಳ್ಳೋದಾಗ್ಲಿ ಯಾವತ್ತೂ ಆಗೋದಿಲ್ಲ... ಈ ಪ್ರಯತ್ನ ಈಗ್ಲೇ ಬಿಟ್ ಬಿಡಿ."

"ಅದೆಂಗ್ರಿ ಬಿಡೋಕಾಗುತ್ತೆ. ಇವ್ರು ಕೋಟ್ಯಾಂತರ ರೂಪಾಯಿ ಹಾಕಿ ಇಲ್ಲಿ ಒಂದು Mines Company ತೆಗೀತಾ ಅವ್ರೆ. ಈ ಏರಿಯಾ ಅನ್ಕೂಲವಾಗಿದೆ ಅಂತ ಪರೀಕ್ಷೆ ಮಾಡಿತಿಳ್ಕೊಂಡಿದಾರೆ. ಈ ತೋಪಿನ ಜಾಗ್ದಲ್ಲಿ ಆಫೀಸು ವಗ್ಯೆರೆ ಎಲ್ಲಾ ಮಾಡ್ತಾರೆ. ಈ ಬೆಟ್ಟದಲ್ಲೂ ಒಳ್ಳೆ ಗ್ರಾನೈಟ್ ಇದ್ಯಂತೆ. ಎಲ್ಲಕ್ಕೂ ಸರ್ಕಾರದ ಒಪ್ಪಿಗೆ ಇದೆ. You cannot go against law of the land." ಎಂದು ಜೋರಾಗಿ ಒಂದೇ ಸಮನೆ ಹೇಳಿದ ಧರ್ಮಯ್ಯ ಸರಿಯಾಗಿ ಹೇಳಿದ್ದೇನೆ ಎಂಬಂತೆ ಬಿಳಿಸಾಹೇಬರ ಕಡೆ ನೋಡಿದ. ಅವರು ತಲೆಯಾಡಿಸಿದಾಗ ಸಂತೋಷಿಸಿದ. ಮತ್ತೊಮ್ಮೆ ಸೂರ್ಯನಿಗೆ "You must give respect to law of the land" ಎಂದು ಹೆಮ್ಮೆಯಿಂದ ಆದೇಶಿಸಿದ.

ಸೂರ್ಯ ಆಸ್ಫೋಟಿಸಿದ–"ಯಾವ್ದು ಲಾ ಆಫ್ ದಿ ಲ್ಯಾಂಡ್?

ದುಡಿಯೋರ್ಗೆ ಭೂಮಿ ವಂಚನೆ ಮಾಡೋದು ಲಾ ಆಫ್ ದಿ ಲ್ಯಾಂಡ? ಈ ತೋಪನ್ನೆಲ್ಲ ಬೆಳ್ಸಿರೋ ಜನರಿಂದ ಅದನ್ ಕಿತ್ಕೊಳ್ಳೋದು ಈ ನೆಲದ ಕಾನೂನ? ಪೋಲಿಸ್ನೋರ್ ಹತ್ರ ಬಡಿಸೋದು ಈ ನೆಲದ ಪುಣ್ಯಾನ? ದಲಿತ್ರನ್ನ, ಬಡವರನ್ನ ಹೆಣಮಾಡಿ ಅಧಿಕಾರ ನಡ್ಸೋದು ನಿಮ್ಮ ಮೋಕ್ಷ ಸಾಧನೇನ? ಹೇಳಿಸ್ವಾಮಿ ಹೇಳಿ. ಈ ಜನ ಏನ್ ತಪ್ ಮಾಡಿದಾರೆ ಹೇಳಿ. ಬಸುರಿ ಥರಾ ಬೆಳೆದು ನಿಂತಿರೊ ಈ ಮರಗಳ್ನ ಕಡೀ ಬೇಡಿ ಅನ್ನೋದು ತಪ್ಪಾ?'

ಸೂರ್ಯನ ಸ್ಫೋಟಕ್ಕೆ ಶಬ್ದವೆಲ್ಲ ನಿಶ್ಯಬ್ದವಾಯಿತು.

ಮೌನ ಮುತ್ತಿಕೊಂಡಿತು.

ಆಗ ಸೂರ್ಯನ ಹತ್ತಿರ ಬಂದ ಪೋಲಿಸ್ ಇನ್ಸ್‌ಪೆಕ್ಟರ್ "ನಿನ್ ಹೆಸರೇನು?" ಎಂದು ಕೇಳಿದ. ಆತನಲ್ಲಿ ಸೂರ್ಯನನ್ನು ಎಲ್ಲೋ ನೋಡಿದ ಭಾವವಿತ್ತು.

"ಬಹುವಚನ್ದಲ್ ಕೇಳಿ ಹೇಳ್ತೀನಿ" ಎಂದ ಸೂರ್ಯ.

"ಈ ಪ್ರೊಟೆಸ್ಟ್ ಮಾಡೋರ್ದೆಲ್ಲ ಇದೇ ಧಿಮಾಕು" ಎಂದು ಗೊಣಗಿಕೊಂಡ ಪೋಲಿಸ್ ಇನ್ಸ್‌ಪೆಕ್ಟರ್ "All right, what is your name?" ಎಂದು ಕೇಳಿದ.

" ಇಂಗ್ಲೀಷ್‌ನಲ್ಲಿ ಬಹುವಚನಾನ ಮುಚ್‌ಹಾಕ್ಬೇಡಿ. ಕನ್ನಡದಲ್ ಕೇಳಿ" ಎಂದು ದಿಟ್ಟ ಮಾತಾಡಿದ– ಸೂರ್ಯ.

"ಬಹಳ ಜಾಸ್ತಿ ಆಯ್ತು" ಎಂದು ಬೇಸರದಿಂದಲೇ" ಏನ್ ನಿಮ್ಮ ಹೆಸರು?" ಎಂದು ಇನ್ಸ್‌ಪೆಕ್ಟರ್ ಪ್ರಶ್ನಿಸಿದ.

"ಸೂರ್ಯ"– ಸೂರ್ಯನ ಉತ್ತರ.

"ಸೂರ್ಯ! ಓ.ಕೆ ಮೊದ್ಲು ಎಲ್ಲಿದ್ರಿ? ಇದೇ ಥರಾ ಕೆಲ್ಸ ಎಂದಾದ್ರೂ ಮಾಡಿದ್ರಾ?"– ಇನ್ಸ್‌ಪೆಕ್ಟರ್ ಪ್ರಶ್ನೆ.

"ಅದೆಲ್ಲ ಈಗ್ ಯಾಕೆ? ಇದೇನ್ ಕೋರ್ಟಲ್ಲ"– ಸೂರ್ಯ ಕಟುವಾಗಿ ಉತ್ತರ ನೀಡಿದ.

ಅಷ್ಟರಲ್ಲಿ ಧರ್ಮಯ್ಯ ಬೇಸರಿಂದ "ರೀ ಇನ್ಸ್‌ಪೆಕ್ಟರೇ ಇಲ್ ನಾವ್ ಯಾಕ್ರಿ ಎಂ.ಎಲ್.ಎ. ಅಂತ ಇರೋದು? ಎಲ್ಲಾ ನೀವೇ ಮುಗುಸ್ತಿರೇನು?" ಎಂದು ರೇಗಿದ. ಇನ್ಸ್‌ಪೆಕ್ಟರ್ ಸುಮ್ಮನೆ ನಿಂತ.

ಬಿಳಿ ಸಾಹೇಬರು ಧರ್ಮಯ್ಯನಿಗೆ ಸದ್ಯಕ್ಕೆ ವಾಪಸ್ ಹೋಗುವುದು ಉತ್ತಮವೆಂದು ಸೂಚಿಸಿದರು. ಆನಂತರ ಚರ್ಚಿಸಿ ತೀರ್ಮಾನಿಸೋಣ ಎಂಬುದು ಅವರ ಅಭಿಪ್ರಾಯವಾಗಿತ್ತು. ಅವರೇ ಹಾಗೆ ಹೇಳಿದ ಮೇಲೆ ತನ್ನ ಪೌರುಷ

ಪ್ರದರ್ಶನ ಬೇಕಿಲ್ಲವೆಂದು ಧರ್ಮಯ್ಯ ನಿರ್ಧರಿಸಿದ.

ಎಲ್ಲರೂ ವಾಹನಗಳಲ್ಲಿ ಹೊರಟುಹೋದರು.

ಹೋಗುವಾಗ ಬಿಳಿಯರು– ಎಲ್ಲಾ ಬೇಗ ತೀರ್ಮಾನವಾದರೆ ಸರಿಯೆಂದೂ ಇಲ್ಲದಿದ್ದರೆ ಬೇರೆ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುವುದಾಗಿಯೂ ಹೇಳಿದರು. ಧರ್ಮಯ್ಯ ಸ್ವಲ್ಪ ಕಾಲಾವಕಾಶ ಕೇಳಿದ. ತಾನು ಇಲ್ಲೇ ಇದ್ದು ನರಸಿಂಹರಾಯಪ್ಪ, ಜೋಯಿಸರು ಮತ್ತು ಪೋಲಿಸರೊಂದಿಗೆ ಚರ್ಚಿಸಿ ಸಮಸ್ಯೆಯನ್ನು ಪರಿಹರಿಸುವುದಾಗಿ ಭರವಸೆ ನೀಡಿದ.

ಇಲ್ಲಿ ತೋಪಿನಲ್ಲಿ ಸಂಭ್ರಮವೋ ಸಂಭ್ರಮ ಎಲ್ಲರೂ ಹೊಸ ಅನುಭವದಿಂದ ಪುಳಕಿತರಾಗಿದ್ದರು. ಸನ್ನಿವೇಶವೇ ಸಂಘಟನೆ ಮತ್ತು ಸ್ಥೈರ್ಯವನ್ನು ಸ್ಥಾಪಿಸಿತ್ತು. ಅಳುಕು ದೂರವಾಗಿತ್ತು. ಏನಾದರಾಗಲಿ ಎದುರಿಸಲೇಬೇಕಲ್ಲ ಎಂಬ ಭಾವನೆ ಬೆಳೆದಿತ್ತು. ಸೂರ್ಯನಂತೂ ಸಂತೋಷಭರಿತನಾಗಿದ್ದ. ಎಲ್ಲರೂ ಹಟ್ಟಿಯ ಕಡೆ ಹೊರಟರು. ಊರಿನವರು 'ನಾವು ನಿಮ್ ಜತೆ ಇರ್ತೀವಿ' ಎಂದು ಹೇಳಿ ಹೋದರು.

ಹಟ್ಟಿಗೆ ಬಂದಾಗ ಭಾವಾವೇಶ ಇಳಿದಿತ್ತು.

ಎಲ್ಲರೂ ನೆಲದ ಮೇಲೆ ಕೂತರು. ಆಗಿಹೋದದ್ದನ್ನು ಮೆಲುಕು ಹಾಕಿದರು. ಮುಂದೆ ಏನೆಲ್ಲ ಆಗಬಹುದೆಂದು ಚರ್ಚಿಸಿದರು. ಸೂರ್ಯ ಧೈರ್ಯದ ಮಾತಾಡಿದ. ಎಲ್ಲರೂ ಮುಂದಿನದನ್ನು ಎದುರಿಸುವ ಅನಿವಾರ್ಯವನ್ನು ಮನಗಂಡಿದ್ದರು. ಅಳುಕು ಅಳಿದಿತ್ತು.

ತನ್ನ ಸ್ನೇಹಿತರನೇಕರು ನವಾಬನ ಜೊತೆ ಬರುವ ವಿಷಯವನ್ನು ಸೂರ್ಯ ಹೇಳಿದ. ಆನಂತರ ಹೋರಾಟಕ್ಕೆ ಮತ್ತಷ್ಟು ಹುರುಪು ತುಂಬುವ ಬಗ್ಗೆ ಮಾತನಾಡಿದ.

ಎಲ್ಲರೂ ಒಟ್ಟಿಗೆ ಊಟಮಾಡಬೇಕೆಂದು ಶಬರಿಯು ಸಲಹೆ ನೀಡಿ ಸಿದ್ಧತೆಗೆ ತೊಡಗಿದಳು. ಹೆಂಗಸರೆಲ್ಲ ತಂತಮ್ಮ ಮನೆಗಳಿಂದ ರಾಗಿಹಿಟ್ಟು, ಸೊಪ್ಪು, ಬೇಳೆ ಮುಂತಾದವನ್ನು ತಂದರು. ಮೂರುಕಲ್ಲು ಗುಂಡುಗಳನ್ನಿಟ್ಟು ಒಲೆ ಮಾಡಿ ಅಡುಗೆ ಮಾಡಲು ಅಣಿಯಾದರು.

ಸೂರ್ಯ "ಈ ಭೂಮಿ ನಮ್ಮದು" ಹಾಡು ಹೇಳತೊಡಗಿದ.

ಹುಚ್ಚೀರ ಕುಣಿಯತೊಡಗಿದ. ಹುಡುಗರು ಹೆಜ್ಜೆ ಹಾಕಿದರು.

* * *

ರಾತ್ರಿ ಎಲ್ಲರೂ ಮಲಗಿದ್ದಾರೆ–ಸೂರ್ಯ ಮತ್ತು ಶಬರಿಯನ್ನು ಹೊರತು

ಪಡಿಸಿ, ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದ ಶಬರಿಗೆ ಸೂರ್ಯ ಮೆಚ್ಚುಗೆಯ ಮಾತನಾಡಿದ–"ಇವತ್ತು ಏನೇನ್ ನಡೀತು ಅದೆಲ್ಲ ನಿನ್ನಿಂದ. ನೀನೇ ಇವತ್ತು ಒಂದು ಶಕ್ತಿ ಆಗ್‌ಬಿಟ್ಟಿದ್ದೀಯ. ನನ್ ಕನಸು ನಿನ್ನಲ್ಲಿ ನನಸಾಗಿ ನಿಂತ್‌ಬಿಟ್ತು." ಶಬರಿ ಆತನ ಕೈಬೆರಳುಗಳನ್ನು ನೇವರಿಸುತ್ತಾ "ಅದೆಲ್ಲ ಏನೂ ಹೇಳ್‌ಬ್ಯಾಡ. ನನ್ ಇಂಗ್ ಮಾಡಿದ್ದೇ ನೀನು. ಎಲ್ಲಾ ನಿಂಗೇ ಸೇರ್‌ಬೇಕು" ಎಂದು ಆತನಿಗೇ ಅದರ ಗೌರವವನ್ನು ಅರ್ಪಿಸಿದಳು. ಜೊತೆಗೆ "ಈಗ ನಾನ್ ನಿನ್ ತರಾನೇ ಆಗಿವ್ನಿ ಅಲ್ವಾ?" ಎಂದು ಪ್ರಶ್ನಿಸಿದಳು. "ಯಾಕೆ? ಅನ್ಮಾನಾನ?" ಎಂದ.

"ಅಂಗಲ್ಲ ನಾವ್ ಇನ್‌ಮ್ಯಾಕ್ ತಡ ಮಾಡ್‌ಬಾರ್ದು. ಅದ್ಕೇ ಅಂಬ್ತ ಕೇಳ್ದೆ."

"ಯಾವ್ ವಿಷ್ಯ ಹೇಳ್ತಿದ್ದಿಯ?"

"ಮದ್ವೆ ವಿಷ್ಯ. ಎಂಗಿದ್ರೂ ಗೌರಿ ಮದ್ವೆ ಆಗೈತಲ್ಲ, ಇವಾಗ್ ಯಾರೂ ಏನು ಅಂದ್ಕಮಲ್ಲ. ಬ್ಯಾಗ್ ಯೇಳ್‌ಬಿಟ್ಟು ಮದ್ವೆ ಆಗಾನ."

"ತೋಪಿನ ವಿಷ್ಯ ಒಂದು ತೀರ್ಮಾನ ಆದ್ ಕೂಡ್ಲೇ ಆಗೋಣ."

"ಅದ್ಕೂ ಇದ್ಕೂ ಯಾಕ್ ಗಂಟ್ ಆಕ್ತೀಯ?"

"ಹಾಗೇನಿಲ್ಲ. ಈಗ ಹೋರಾಟ ಬಿರುಸಾಗ್ ಶುರುವಾಗಿದೆ. ಮಧ್ಯೆ ಮದ್ವೆ ವಿಷ್ಯ ತರೋದ್ ಬೇಡ ಅಂತ ಹಾಗಂದೆ."

"ಅದೂ ದಿಟ. ವೋಗ್ಲಿ ಮುಂದುಟ್ಟೋ ಮಗೂಗೆ ಏನ್ ಯೆಸ್ರಿಡಾನ" ಯಾವ್ದಾನ ವೊಸಾ ಯೆಸ್ರಿಡ್ಬೇಕು. ಆ್ನ?"

"ಹುಟ್ಟೋದು ಗಂಡೋ ಹೆಣ್ಣೋ ಗೊತ್ತಿಲ್ಲ. ಈಗ್ಲೇ ಹೆಸ್ರಿನ್ ವಿಷ್ಯ ಯಾಕೆ?"

"ಎಲ್ಲದ್ಕೂ ಯಾಕೆ ಯಾಕೆ ಅಂದ್ರೆ ಕನಸು ಬೀಳಾದಾದ್ರು ಯಾಕೆ ಯೇಳು?"– ಶಬರಿ ಬೇಸರದಿಂದಲೇ ಕೇಳಿದಳು.

ಸೂರ್ಯ ಬೆಚ್ಚಿದ–ಅವಳ ತೋಳು ಹಿಡಿದು ಕೂಡಿಸಿ ದಿಟ್ಟಿಸಿದ.

"ಬೇಸರ ಮಾಡ್ಕೋಬೇಡ. ಹೆಸರು ತಾನೆ? ಹೇಳ್ತೀನಿ" ಎಂದು ಯೋಚಿಸಿ "ಗಂಡಾಗ್ಲಿ ಹೆಣ್ಣಾಗ್ಲಿ ಹೊಂದಿಕೊಳ್ಳೋ ಹೆಸರುಬೇಕು ಅಲ್ವಾ? ತೇಜ; ತೇಜ ಅಂತ ಇಟ್ರೆ? ಅಥವಾ ಉದಯ?" ಎಂದು ಕೇಳಿದ.

"ತೇಜ ಅಂಬಾದೆ ಚಂದಾಗೈತೆ. ಯೇಳಾಕೆ ಕೇಳಾಕೆ ಎಲ್ಲಾದ್ದಕೂ ಚಂದಾಗೈತೆ. ಅಂಗಂದ್ರೇನು?"

ಸೂರ್ಯ ಅರ್ಥವನ್ನು ವಿವರಿಸಿದ.

ಶಬರಿ ಸಂತೋಷದಿಂದ ಆತನ ತೋಳಲ್ಲಿ ಸೇರಿದಳು.

* * *

ಬೆಳಗಿನ ಜಾವ ಹೊರಗೆ ಗದ್ದಲ.

ಬಾಗಿಲು ಬಡಿದ ಸದ್ದು. "ಸೂರ್ಯ ಸೂರ್ಯ" ಎಂಬ ಕೂಗು.

ಸೂರ್ಯ, ಶಬರಿ, ತಿಮ್ಮರಾಯಿ, ಬಾಗಿಲು ತೆಗೆದು ಹೊರಗೆ ಬಂದರು.

ಪೋಲಿಸ್ ಇನ್ಸ್‌ಪೆಕ್ಟರ್! ಜೊತೆಗೆ ಐವತ್ತಕ್ಕೂ ಹೆಚ್ಚು ಪೋಲಿಸರು! ಇವರ ಗದ್ದಲಕ್ಕೆ ಹೊರಬಂದು ನಿಂತ ಜನರು!

ಸೂರ್ಯನಿಗೆ ಅಪಾಯದ ಮುನ್ಸೂಚನೆ ಕಂಡಿತು.

"ನಿನ್ನನ್ನ ಅರೆಸ್ಟ್ ಮಾಡೋಕ್ ಬಂದಿದ್ದೀವಿ" ಎಂದ ಇನ್ಸ್‌ಪೆಕ್ಟರ್ ಪೋಲಿಸರಿಗೆ "ಕೋಳ ತೊಡ್ಸಿ" ಎಂದು ಆಜ್ಞಾಪಿಸಿದ.

ಶಬರಿ ಬೆಚ್ಚಿದಳು– " ಇಲ್ಲ ನಾವ್ ಬಿಡಾಕಿಲ್ಲ; ಸೂರ್ಯನ್ ಬಿಡಾಕಿಲ್ಲ" ಎಂದು ಚಡಪಡಿಸಿದಳು.

"ನೀನ್ ಬಿಡಲ್ಲ ಅಂದ್ರೆ ಯಾರ್ ಕೇಳ್ತಾರೆ? ಕೋಳಿ ಕೇಳ್ ಖಾರ ಅರ್ಯೋಕ್ ಬಂದಿಲ್ಲ ನಾವು... ಹಾಕ್ರೋ ಕೋಳ" ಎಂದು ಇನ್ಸ್‌ಪೆಕ್ಟರ್ ಗದರಿದ.

ಸೂರ್ಯ ಗಾಬರಿಗೊಳ್ಳದೆ ಕೇಳಿದ– "ಅರೆಸ್ಟ್ ಮಾಡೋಕೆ ಏನ್ ಕಾರಣ? ಎಲ್ಲಿದೆ ವಾರಂಟು?"

"ಇಲ್ಲಿದೆ ನೋಡು." ಎಂದು ವಾರಂಟನ್ನು ತೋರಿಸಿದ ಇನ್ಸ್‌ಪೆಕ್ಟರ್ ಎಲ್ಲರನ್ನು ಉದ್ದೇಶಿಸಿ ಹೇಳಿದ– " ನೋಡಿ ಈ ಸೂರ್ಯ ಕೊಲೆಗಾರ. ಒಂದು ಕೊಲೆ ಕೇಸಿನಲ್ಲಿ ಸಿಕ್ಕಿಹಾಕ್ಕೊಂಡು, ತಪ್ಪಿಸ್ಕೊಂಡು ಇಲ್ ಬಂದ್ ಸೇರಿ ನಿಮ್ಮನ್ನೆಲ್ಲ ಹಾದಿ ತಪ್ಸಿದಾನೆ. ತೋಪಿನಹತ್ರ ನೋಡ್ದಾಗ್ಲೇ ನಂಗನ್ಮಾನ ಬಂತು. ಇವ್ನ ಫೋಟೋ ನೋಡಿದ್ದೆ. ಈಗ ನಿಮ್ಗೆಲ್ಲ ಹೇಳ್ತಾ ಇದ್ದೀನಿ. ನೀವ್ಯಾರಾದ್ರೂ ಅಡ್ಡಬಂದ್ರೆ ನೀವೂ ಕೊಲೆಕೇಸಿಗ್ ಸೇರ್ಕೊತೀರಿ. ಹುಷಾರ್."

ಶಬರಿಗೆ ನಂಬಲಾಗಲಿಲ್ಲ. "ಎಲ್ಲಾ ಸುಳ್‌ಸುಳ್ಳೆ ಯೇಳ್‌ಬ್ಯಾಡ್ರಿ. ಸೂರ್ಯ ಅಂತಾ ಮನ್ಸ ಅಲ್ಲ." ಎಂದು ಅಳತೊಡಗಿದಳು.

"ಹೂಂಕಣ್ ಬುದ್ದಿ. ಬೋಲ್ ಒಳ್ಳೆ ಮನ್ಸ" ಎಂದ ಸಣ್ಣೀರ.

ಪೂಜಾರಪ್ಪನೂ ದನಿ ಸೇರಿಸಿದ. ತಿಮ್ಮರಾಯಿಯಂತೂ "ಈಯಪ್ನಿಂದ ನಮ್ ಜನಕ್ಕೆ ಅಕ್ಸರ ಬಂತು, ಬುದ್ದಿ ಬಂತು. ಇಂಗೆಲ್ಲ ಕರ್ಕಂಡ್ ವೋಗ್‌ಬ್ಯಾಡಿ ಬುದ್ದೇರ" ಎಂದು ಬೇಡಿದ.

ಇನ್ಸ್‌ಪೆಕ್ಟರ್ ಒಂದೇ ಮಾತಲ್ಲಿ ಹೇಳಿದ– "ಸರ್ಕಾರದ ಆಜ್ಞೆ, ನಾನೇನೂ

ಮಾಡೊ ಹಾಗಿಲ್ಲ. ನಮಿಗ್ ದಾರಿ ಬಿಟ್‌ಬಿಡಿ."

ಪೋಲಿಸರು ಸೂರ್ಯನಿಗೆ ಕೋಳ ತೊಡಿಸಿದರು.

ಅಧೀರನಾಗದೆ ಸೂರ್ಯ ಎಲ್ಲರಿಗೂ ಕೈಮುಗಿದ.

"ನಾನ್ ಮತ್ತೆ ಬಂದೇ ಬರ್ತೀನಿ. ಹೋರಾಟ ಮಾಡೋರ್‍ಗೆ ಸುಳ್ಳು ಆರೋಪ ಹೊರ್‍ಸೋದು ನಮ್ ದೇಶದ ಒಂದು ಸಂಪ್ರದಾಯ; ಸರ್ಕಾರದ ಸಂಪ್ರದಾಯ. ಈಗ ತೋಪು, ಬಯಲು ಎಲ್ಲಾ ಬೇಕು ಅಂತ ನೀವ್ ಕೇಳಿದ್ದಕ್ಕೆ ನನ್ ಕೈಯ್ಯಿಗ್ ಕೋಳ ಹಾಕಿದಾರೆ. ಆದ್ರೆ ನೀವು ಯಾವತ್ತೂ ನಮ್ ತೋಪನ್ನ ಬಿಟ್‌ಕೊಡ್‌ಬೇಡಿ. ಭೂಮಿ ಬಿಟ್ಟು ಕೊಡ್‌ಬೇಡಿ. ಚನ್ನಾಗ್ ನೆನಪಿರ್‍ಲಿ. ನಾನ್ ಬರ್ತೀನಿ" ಎಂದು ಹೊರಡುತ್ತ ಅಳುತ್ತಿದ್ದ ಶಬರಿಯನ್ನು ಸಂತೈಸಿದ. "ನೀನೇ ಅಳ್ತಾ ಇದ್ರೆ ಹೇಗೆ ಶಬರಿ? ನಾನು ಮತ್ತೆ ಬಂದೇ ಬರ್ತೀನಿ. ನೀನೇ ಎಲ್ರಿಗೂ ಧೈರ್ಯ ತುಂಬ್‌ಬೇಕು. ಎಲ್ಲಿ ಈಗ ಹೇಳು– ಈ ಭೂಮಿ ನಮ್ಮದು, ಈ ತೋಪು ನಮ್ಮದು– ಹೇಳು ಶಬರಿ ಹೇಳು" ಎಂದು ಹುರಿದುಂಬಿಸಿದ.

ಶಬರಿ ಅಳುತ್ತಲೇ "ಈ ಭೂಮಿ ನಮ್ಮದು" ಹಾಡಿನ ಎರಡು ಸಾಲು ಹೇಳುತ್ತ ಸಮಾಧಾನ ಸ್ಥಿತಿಗೆ ಬಂದಳು. ಸೂರ್ಯ ಮುಂದಡಿಯಿಟ್ಟ. ಪೋಲಿಸರು ಕರೆದೊಯ್ಯುತ್ತಿದ್ದರು. ಶಬರಿ ಗಟ್ಟಿಯಾಗಿ ಹಾಡತೊಡಗಿದಳು. ಉಳಿದವರೂ ಕಣ್ಣು ತುಂಬಿಕೊಂಡು ದನಿಗೂಡಿಸಿದರು. "ಈ ಭೂಮಿ ನಮ್ಮದು ಆಕಾಶ ನಮ್ಮದು ಈ ತೋಪು ನಮ್ಮದು ಬಯಲು ನಮ್ಮದು"ಮೊಳಗತೊಡಗಿತು. ಸೂರ್ಯ ಮರೆಯಾಗುವವರೆಗೆ ಮೊಳಗುತ್ತಲೇ ಇತ್ತು.

# ೧೬

ಎಲ್ಲವನ್ನು ನೆನಪಿಸಿಕೊಳ್ಳುತ್ತ ಹುಚ್ಚೀರನೊಂದಿಗೆ ಕೂತಿದ್ದ ಶಬರಿಯ ಕಿವಿಯಲ್ಲಿ ಅದೇ ಹಾಡು ಮಾರ್ದನಿಗೊಳ್ಳತೊಡಗಿತು. “ಈ ಭೂಮಿ ನಮ್ಮದು...” ಎಂಥ ಸನ್ನಿವೇಶವದು! ಈಗಲು ಕಣ್ಣಿಗೆ ಕಟ್ಟಿದಂತಿದೆ. ಮತ್ತೆ ಬಂದೇಬರ್ತೇನೆ ಎಂದಿದ್ದ ಸೂರ್ಯ ಬರಲೇ ಇಲ್ಲ. ಅಪ್ಪ ಹೇಳುತ್ತಲೇ ಇದ್ದ “ಬಂದೇ ಬರ್ತಾನೆ ಕಣವ್ವ. ಎಲ್ಲಾದ್ಕು ಕಾಯ್ಬೇಕು ಕಣವ್ವ. ಒಳ್ಳೇದಕ್ಕೆ ಜಾಸ್ತಿ ಕಾಯ್ಬೇಕು”– ಅಪ್ಪ ಹೀಗೆ ಹೇಳುತ್ತಲೆ ಹೋಗಿಬಿಟ್ಟ– ಮತ್ತೆ ತಿರುಗಿಬಾರದ ಜಾಗಕ್ಕೆ. ಸೂರ್ಯ?

ಇಲ್ಲ ಹಾಗೆ ಹೋಗಿರಲಾರ. ಮತ್ತೆ ಬರುತ್ತಾನೆ. ತಾನು ಕಾಯುತ್ತಿರುವುದಕ್ಕಾದರೂ ಬರಬೇಕು...

ಎಲ್ಲವೂ ಅಂದುಕೊಂಡಂತೆ ಆಗಬೇಕಲ್ಲ? ಅಪ್ಪ ಇಷ್ಟು ಬೇಗ ಸಾಯಬಹುದೆಂದು ಭಾವಿಸಿರಲಿಲ್ಲ. “ಮಗಳೇ ನಿಂಗ್ ಇಂಗಾಗ್‌ಬಾರ್ದಿತ್ತು ಕಣವ್ವ” ಎನ್ನುತ್ತಲೇ ಹೋಗಿಬಿಟ್ಟ. ತುಡಿಯುತ್ತ, ಕುಡಿಯುತ್ತ ಹೋಗಿಬಿಟ್ಟ. ಕಡೆಗೆ ಮಣ್ಣು ಮಾಡುವಾಗ ಅಪ್ಪನಿಗೆ ಇಷ್ಟವಾದ ವಸ್ತುವನ್ನು ಹೆಣದ ಜೊತೆ ಗುಂಡಿಗೆ ಹಾಕಬೇಕೆಂದು ಪೂಜಾರಪ್ಪ ಹೆಂಡದ ಬುಂಡೆ ಹಾಕಿದ! ಇವತ್ತೇ ಎಲ್ಲಾ ನಡೆದದ್ದು– ಅಪ್ಪ ಮಣ್ಣಾದದ್ದು!

ಏನು ಮಾಡಿದರೂ ನಿದ್ದೆ ಬರುತ್ತಿಲ್ಲ. ಹುಚ್ಚೀರನಿಗೆ ಹೋಗೆಂದರೂ ಹೋಗುತ್ತಿಲ್ಲ. ಶಬರಿಯ ಮುಖವನ್ನೇ ನೋಡುತ್ತಿದ್ದ.

ಕೆದರಿದ ಕೂದಲಲ್ಲಿ ಕಂಗೆಟ್ಟ ಮುಖ;
ಒಡೆದ ಕನಸುಗಳ ಕಣ್ಣು.
ಅದರುವ ತುಟಿಯಲ್ಲಿ ಅಳುತ್ತ ಕೂತ ಮಾತು.

ಶಬರಿ ಏನನ್ನೂ ಹೇಳದೆ ಒಳಗೆ ಹೋದಳು. ಸೂರ್ಯನ ಬಗಲು ಚೀಲವನ್ನು ನೋಡಿ ಕೈಗೆತ್ತಿಕೊಂಡಳು. ಪುಸ್ತಕಗಳು; ಪಿಸ್ತೂಲು–ಎಲ್ಲಾ ಇವೆ. ಎದೆಗೆ ಒತ್ತಿಕೊಂಡಳು; ಕಣ್ಣು ಮುಚ್ಚಿಕೊಂಡಳು.

ಮುಚ್ಚಿದ ಕಣ್ಣೊಳಗೆ ಸೂರ್ಯನ ಕಿರಣ.
ಕತ್ತಲೊಳಗೆ ಕಾಡುವ ಬೆಳಕು.
ಬೆಳಕಲ್ಲೊಂದು ಬೆಳಕಿನ ರೂಪ.

ಸೂರ್ಯ ಬರುತ್ತಾನೆ; ಬರುವವರೆಗೂ ಕಾಯುತ್ತೇನೆ. ಬಂದಾನೊ ಬಾರನೊ ಎಂದೇ ಕಾಯುತ್ತೇನೆ. ಇಷ್ಟು ದಿನ ಹೀಗೇ ಅಲ್ಲವೆ–ಶಬರಿಯ ಒಳಮಾತು.

ಬಗಲು ಚೀಲವನ್ನು ತಗಲುಹಾಕಿ ಹೊರಗೆ ಬಂದಳು–ಅಳುತ್ತ ಕೂತ ಹುಚ್ಚೀರನ ಕಣ್ಣೊರೆಸಿದಳು. ಆತನ ತಲೆಯನ್ನು ನೇವರಿಸುತ್ತ ನೆನಪಿನತ್ತ ಸಾಗಿದಳು.

* * *

ಪೋಲಿಸರು ಅರೆಸ್ಟ್ ಮಾಡಿ ಕರೆದೊಯ್ದ ಮೇಲೆ ಶಬರಿಗೆ ಆತನ ಆಗಮನಕ್ಕೆ ಕಾಯುವುದೇ ಕೆಲಸವಾಯಿತು. ಜೊತೆಗೆ ತಮ್ಮವರ ಹೋರಾಟದ ಹುಮ್ಮಸ್ಸನ್ನು ಕಾಯ್ದುಕೊಳ್ಳಬೇಕಿತ್ತು. ಸೂರ್ಯ ಬರಲಿಲ್ಲವೆಂಬ ಬೇಗೆಯನ್ನು ಅದುಮಿಟ್ಟುಕೊಂಡು ನಗೆ ಚಿಮ್ಮಿಸುತ್ತ ಒಳ್ಳೆಯದರ ನಿರೀಕ್ಷೆಗೆ ನೀರೆರೆಯಬೇಕಿತ್ತು. ಈ ಕೆಲಸವನ್ನು ಶಬರಿ ನಿರ್ವಹಿಸುತ್ತ ಬಂದಳು.

ಪಟ್ಟಣಕ್ಕೆ ಹೋಗಿ ಗೆಳೆಯರೊಂದಿಗೆ ಬರುವುದಾಗಿ ಹೇಳಿದ ನವಾಬ ಬರಲಿಲ್ಲ. ಗೌರಿಯ ಸುದ್ದಿಯೂ ಇಲ್ಲ. ಪೂಜಾರಪ್ಪ ಮತ್ತೆ ಮತ್ತೆ ಶಬರಿಯನ್ನು ವಿಚಾರಿಸಿದ. ಸಮಾಧಾನ ಮಾಡುವುದರಲ್ಲಿ ಆಕೆಗೆ ಸಾಕಾಗುತ್ತಿತ್ತು.

ತನ್ನನ್ನು ತಾನು ಸಮಾಧಾನ ಮಾಡಿಕೊಳ್ಳಬೇಕಾದಾಗ, ಶಬರಿಯು ತೋಪಿಗೆ ಹೋಗುತ್ತಿದ್ದಳು. ಅಲ್ಲಿ ನಡೆದು, ನಿಂತು, ಕೂತು, ತನ್ನನ್ನು ತಾನು ಸಂತೈಸಿಕೊಳ್ಳುತ್ತ ನಿರ್ಧಾರಕ ನಿಲುವಿನತ್ತ ಸಾಗುತ್ತಿದ್ದಳು. ಸ್ವಲ್ಪ ದಿನ ಯಾರೂ ತೋಪಿನ ತಂಟೆಗೆ ಬಾರದೆ ಇದ್ದದ್ದು ಆಶ್ಚರ್ಯ ಹುಟ್ಟಿಸಿತ್ತು. ಆದರೆ ನರಸಿಂಹರಾಯಪ್ಪ ಮತ್ತು ಜೋಯಿಸರು ಹಟ್ಟಿಯ ಜನರೊಂದಿಗೆ ಮಾತುಕತೆಯನ್ನಾಡಲು ಬಂದು ಚನ್ನಾಗಿ ದಬಾಯಿಸಿದ್ದರು.

"ಇವ್ರ್‌ಗಂತೂ ಬುದ್ದಿ ಇಲ್ಲ ಅಂದ್ರೆ ನಿಮ್ಗೂ ಇಲ್ವ? ಹಿರೇರು ಅಂಬ್ತ ಯಾಕಿದ್ದೀರಿ ಇಲ್ಲಿ?" ಎಂದು ಪೂಜಾರಪ್ಪ ಮತ್ತು ತಿಮ್ಮರಾಯಿಯನ್ನು ತರಾಟೆಗೆ ತೆಗೆದುಕೊಂಡಿದ್ದರು. ಅವರು "ನಮ್ಮದೇನೈತೆ ದಣೇರ. ಎಲ್ಲಾರು ಸೇರಿ ಏನ್ ತೀರ್ಮಾನ ತಗಂಬ್ತಾರೊ ಎಲ್ಲಾ ಅಂಗೇ ಆಯ್ತುದೆ" ಎಂದು ಕೈ ತೊಳೆದುಕೊಂಡರು.

ಹೀಗೆ ಹದಿನೈದು–ಇಪ್ಪತ್ತು ದಿನಗಳು ಕಳೆದವು. ಒಂದು ರಾತ್ರಿ; ಊಟ ಮಾಡಿ ಮಲಗುವ ಹೊತ್ತು. ಈಗ ನೀರಿಗೆ ಇಳಿದಿದ್ದಾಗಿದೆ; ಈಜಲೇ ಬೇಕು– ಎಂಬಂಥ ಮಾತುಗಳನ್ನು ಶಬರಿ ಹೇಳುತ್ತಿದ್ದಳು. ಎಲ್ಲರಿಗೂ ಪ್ರಿಯವಾದ "ಈ ಭೂಮಿ ನಮ್ಮದು" ಹಾಡನ್ನು ಹೇಳಬೇಕೆಂದು ಹುರಿದುಂಬಿಸುತ್ತ ತಾನೇ ಮೊದಲೆರಡು ಸಾಲುಗಳನ್ನು ಶುರುಮಾಡಿದಳು.

ಅಷ್ಟರಲ್ಲಿ "ಶಬರಿ" ಎಂಬ ಕೂಗು; ಆಕಡೆ ನೋಡಿದರೆ ಗೌರಿ ಬರುತ್ತಿದ್ದಾಳೆ! ಜೊತೆಗೆ ನವಾಬ!

ಎಲ್ಲರಿಗೂ ಖುಷಿಯೋ ಖುಷಿ.

ಅಮಾವಾಸ್ಯೆಯ ಅನಿರೀಕ್ಷಿತ ಬೆಳದಿಂಗಳು.

ಎಲ್ಲರ ಮುಖದಲ್ಲಿ ನಗೆಮುಗುಳು.

ಶಬರಿ "ಗೌರಿ" ಎಂದು ಸಂಭ್ರಮಿಸಿ ಎದ್ದಳು. ತಾನೇ ಹೋಗಿ ಕೈ ಹಿಡಿದು ಕರೆತಂದಳು. ಪೂಜಾರಪ್ಪ "ಚಂದಾಗಿದ್ದೀಯ ಮಗೈ" ಎಂದು ಕೇಳಿದ. "ಉ್ಣಂಕಣಪ್ಪ" ಎಂದಳು ಗೌರಿ. ಆಮೇಲೆ ನವಾಬನ ಕ್ಷೇಮಸಮಾಚಾರ. ನವಾಬ "ನಮ್ದಿರ್ಲಿ ನೀವೆಲ್ಲ ಹೇಗಿದ್ದೀರಿ?" ಎಂದು ಕೇಳಿದ.

"ಸೂರ್ಯ ಇಲ್ಲ" ಎಂದು ಶಬರಿ ಖಿನ್ನಳಾಗಿ ಮಾತು ಶುರುಮಾಡುತ್ತಿದ್ದಂತೆಯೇ ನವಾಬ್ "ವಿಷ್ಯ ಎಲ್ಲ ನಂಗೊತ್ತು. ಇಲ್ಲಿ ಏನ್ ನಡೀತು ಅಂತ ಪೇಪರ್‌ಗಳಲ್ಲೆ ಬಂತು. ನಾವೆಲ್ಲ ಗೆಳೆಯರು ಒಟ್ಗೆ ಸೂರ್ಯನ್ನ ನೋಡ್ಕಂಡ್ ಬಂದ್ವಿ" ಎಂದು ವಿವರಿಸಿದ.

ಶಬರಿ ಸಹಿತ ಎಲ್ಲರೂ ಮಿಂಚಾದರು. "ಸೂರ್ಯನ್ ಕಂಡಿದ್ದಾ?" ಎಂದು ಕೇಳಿದರು. ಆಗ ಗೌರಿ ಹೇಳಿದಳು.–"ನಾನೂ ವೋಗಿದ್ದೆ. ಸೂರ್ಯಣ್ಣ ನಿಮ್ಮೆಲ್ರನ್ನೂ ನೆಪ್ಪಿ ಮಾಡ್ಕಂಡ. ಏನೇ ಆದ್ರೂ ಯೆದ್ರ್‌ಬ್ಯಾಡ್ರಿ ಅಂಬ್ತ ಯೇಳಮ್ಮ ಅಂಬ್ತ ಕೇಳ್ಕಂಡ. ಸೂರ್ಯಣ್ಣಂಗೆ ಜೇಲ್‌ನಾಗೂ ನಿಮ್ದೇ ಯೋಚ್ನೆ...."

ಗೌರಿಗೆ ಅಳು ಬಂತು. ಶಬರಿಯ ಕಣ್ಣು ತುಂಬಿ ಬರುತ್ತಿತ್ತು. ಒರೆಸಿ ಕೊಂಡಳು. "ಆಮ್ಯಾಕೆ.. ಆಮ್ಯಾಕೇನು ಯೇಳು"; ಎಂದು ಗೌರಿಯನ್ನು ಒತ್ತಾಯಿಸಿದಳು. ಸಣ್ಣೀರ "ನಮ್ಮನ್ ಕೇಳಿದ್ ವಿಸ್ಯ ಅಂಗಿರ್ಲವ್ವ. ಸೂರ್ಯಪ್ಪ ಯಾವಾಗ್ ಬತ್ತಾನಂತೆ ಅದನ್ನೇಳು" ಎಂದ. ಆಗ ನವಾಬ್ ಮಾತನಾಡಿದ–

"ಸೂರ್ಯ ಸದ್ಯಕ್ಕೆ ಬರೋಸ್ಥಿತೀಲಿಲ್ಲ. ಅವ್ನ ಮೇಲೆ ಸುಳ್ ಕೇಸಿದೆ. ಈಗ ಈ ಒಡೆಯ, ಜೋಯಿಸ, ಎಂ.ಎಲ್.ಎ. ಎಲ್ಲಾ ಕುಮ್ಮಕ್ಕು ಕೊಡ್ತಾ ಇದಾರೆ. ಇಷ್ಟರಲ್ಲೇ ತೋಪನ್ನ ಅವ್ರ್ ವಶಪಡಿಸ್ಕೊಳ್ತಾರೆ. ಅದಕ್ಕೆ ಅವ್ಕಾಶ

ಕೊಡಬಾರ್ದು ಅಂತ ಸೂರ್ಯ ಮತ್ತೆ ಮತ್ತೆ ಹೇಳಿದಾನೆ."

"ಸೂರ್ಯ ಯಾವಾಗ್ ಬತ್ತಾನೆ ನವಾಬಣ್ಣ?"–ಶಬರಿ ಕೇಳಿದಳು. ಆಕೆಯ ಧ್ವನಿಯಲ್ಲಿ ಯಾತನೆಯಿತ್ತು; ಯಾಚನೆಯಿರಲಿಲ್ಲ.

"ನಮ್ ಸ್ನೇಹಿತ್ರೆಲ್ಲ ಪ್ರಯತ್ನ ಮಾಡ್ತಿದಾರೆ. ಒಳ್ಳೆ ಲಾಯರ್ನೆ ಇಟ್ಟಿದ್ದೀವಿ. ಬೇಕಾದ್ರೆ ಗೌರೀನ್ ಕೇಳಿ."

"ಯಾಕೆ ನೀನ್ ಯೇಳಿದ್ರೆ ನಾವ್ ನಂಬಲ್ಲ ಅಂಬ್ತೀವ? ನಮಿಗ್ ನೀನ್ ಬ್ಯಾರೆ ಗೌರಿ ಬ್ಯಾರೆ ಅಲ್ಲ." ಎಂದು ಶಬರಿ ಹೇಳಿದಾಗ ನವಾಬನ ಕೊರಳುಬ್ಬಿ ಬಂತು. ಒಂದು ಕ್ಷಣ ಸುಮ್ಮನಿದ್ದು ಮತ್ತೆ ಹೇಳಿದ–"ಇನ್ನೊಂದು ವಿಷ್ಯ ಅಂದ್ರೆ ಸೂರ್ಯನ್ ತಾಯೀನು ಕಂಡು ಧೈರ್ಯ ಹೇಳ್ ಬಂದಿದ್ದೀವಿ."

ತಕ್ಷಣ ಗೌರಿ–"ನಾನೂ ವೋಗಿದ್ದೆ" ಎಂದಳು.

"ಏಟೊಂದ್ ಅದೃಷ್ಟ ನಿಂದು" ಎಂದು ಶಬರಿ ಕಣ್ಣೀರು ಒರೆಸಿಕೊಂಡಳು.

ಆಮೇಲೆ ನವಾಬ ತಾವು ಹೋದದ್ದು, ಸ್ನೇಹಿತರನ್ನು ಕಂಡದ್ದು, ಆ ವೇಳೆಗೆ ಸೂರ್ಯನ ಬಂಧನವಾದ ವಿಷಯ ಗೊತ್ತಾದದ್ದು, ಆತನ ತಾಯಿಯನ್ನು ಕಂಡದ್ದು ಎಲ್ಲವನ್ನೂ ಮೊದಲಿನಿಂದ ನಿರೂಪಿಸತೊಡಗಿದಾಗ ಶಬರಿ ತಡೆಯದೆ ಕೇಳಿದಳು– "ಸೂರ್ಯನ ಅವ್ವ ಏನಂದ್ರು? ಸೂರ್ಯನ್ ಮ್ಯಾಲೆ ಬ್ಯಾಸ್ರ ಮಾಡ್ಕಂಡ್ರ?" "ಇಲ್ಲ" ನವಾಬ ಹೇಳಿದ–"ಅವ್ರಿಗೆ ಇದೆಲ್ಲ ಅಭ್ಯಾಸ ಆಗಿದೆ. ಸೂರ್ಯನ್ನ ಹೆತ್ತು ಈ ಸಮಾಜಕ್ಕೆ ಅಂತ್ಲೇ ಬಿಟ್ ಬಿಟ್ಟಿದಾರೆ. ತಮಿಗ್ ತೊಂದ್ರೆ ಆದ್ರೂ ಪರ್ವಾಗಿಲ್ಲ ನಾಲಕ್ ಜನಕ್ ಒಳ್ಳೇದ್ ಮಾಡ್ಲಿ ಅಂತ ಯಾವಾಗ್ಲೂ ಹೇಳ್ತಾರೆ."

"ಮಾತಾಯಿ!"– ಉದ್ಗರಿಸಿದ ತಿಮ್ಮರಾಯಿ.

"ನಿಜ"– ನವಾಬ ಮಾತು ಮುಂದುವರೆಸಿದ– "ಆ ಮಹಾತಾಯಿ ನಿಮ್ಮ ಬಗ್ಗೆ ಎಷ್ಟು ವಿಚಾರಿಸ್ಕೊಂಡ್ರು ಗೊತ್ತ? ಸೂರ್ಯ ಇಲ್ಲ ಅಂತ ಅವ್ರು ಎದೆಗುಂದಬಾರ್ದು. ಸೂರ್ಯಂಗೆ ಸಂತೋಷ ಆಗ್ಬೇಕು ಅಂದ್ರೆ ನೀವೆಲ್ಲ ಅವ್ನ್ ತೋರ್‍ಸಿದ್ ದಾರೀಲ್ ಹೋಗ್ಬೇಕು ಅಂತ ನಿಮ್ಗೆಲ್ಲ ಹೇಳು ಅಂದ್ರು. ಮಗ ಜೈಲಲ್ಲಿದ್ರೂ ನಾನ್ ಸಹಿಸ್ಕೊಂಡಿದ್ದೀನಿ, ಅವ್ರೂ ಹಾಗೇ ಇರ್ಬೇಕು ಅಂತ ತಿಳ್ಸು ಅಂದ್ರು. ನನ್ ಮಗನ್ಗೆ ಇಷ್ಟು ದಿನ ಅನ್ನ ಕೊಟ್ಟಿದಾರ, ಅವ್ರ್‌ಗೆ ಒಳ್ಳೇದಾಗ್ಲಿ ಅಂತ ನಿಮ್ ಬಗ್ಗೆ ಹೇಳಿದ್ರು."

ಕೇಳುತ್ತ ಕೂತವರ ಕಣ್ಣಲ್ಲಿ ತಾನೇ ತಾನಾಗಿ ನೀರು ಹರಿಯಿತು. ಬಿಕ್ಕುತ್ತಲೇ ಒಬ್ಬಾಕೆ ಕೇಳಿದಳು–"ಆ ಮಾತಾಯಿದು ಒಂದ್ ಪಟ ಇದ್ರೆ ಕೊಡಪ್ಪ. ದಿನಾ

ಕೈಮುಗೀತೀವಿ."

"ಈಗ ನನ್ ಹತ್ರ ಇಲ್ಲ. ಮತ್ತೆ ಹೋದಾಗ ತಗೊಂಡ್ ಬರ್ತೀನಿ" ಎಂದು ನವಾಬ್ ಸಮಾಧಾನಿಸಿದ.

ಎಲ್ಲರಲ್ಲೂ ಸೂರ್ಯನ ಹಾದಿಯಲ್ಲಿ ಹೋಗಲೇಬೇಕೆಂಬ ಭಾವನೆ ಬಲವಾಗಿತ್ತು. ನವಾಬ್ ಮುಂದಿನ ಕಾರ್ಯಾಚರಣೆಯ ಬಗ್ಗೆ ವಿವರ ನೀಡಿದ.

"ಈಗ ನಾನು ಒಂದು ಬೇಡಿಕೆ ಪತ್ರ ಸಿದ್ಧ ಮಾಡ್ಕೊಂಡ್ ಬಂದಿದ್ದೀನಿ. ಇದನ್ನ ಊರಿನ್ ಒಡೆಯರಿಗೆ, ಎಂ.ಎಲ್.ಎ.ಗೆ, ಸರ್ಕಾರಕ್ಕೆ ಕೊಟ್ಟು ಮೊದ್ಲು ಅವ್ರ್ ಕೆಲ್ಸ ತಡೀಬೇಕು. ಇದು ನೀವೇ ಕೊಡೋ ಪತ್ರ. ಅದ್ರಿಂದ ನೀವೆಲ್ಲ ಇದಕ್ಕೆ ಸೈನ್ ಮಾಡ್ಬೇಕು."

"ಸೇನು ಅಂದ್ರೆ?"– ಸಣ್ಣೀರ ಕೇಳಿದ.

"ಸೈನ್ ಅಂದ್ರೆ ಕನ್ನಡದಲ್ಲಿ ಸಹಿ ಅಂತಾರೆ. ನೀವು ಮೊದ್ಲು ಹೆಬ್ಬೆಟ್ಟು ಒತ್ತುತಾ ಇದ್ರಲ್ಲ, ಅದ್ರಬದ್ಲು ನೀವೇ ನಿಮ್ ಹೆಸ್ರನ್ನ ಬರೀಬೇಕು."

"ಅಂಗಾರೆಲ್ಲ ಸೇನ್ ಮಾಡ್ತೀವಿ. ಕೊಡು ನವಾಬಣ್ಣ" ಎಂದು ಶಬರಿ ಪತ್ರವನ್ನು ಕೇಳಿದಳು.

"ಮೊದ್ಲು ಇದ್ರಲ್ಲೇನಿದೆ ಅಂತ ಓದ್ ಹೇಳ್ತೀನಿ" ಎಂದು ನವಾಬ ಓದಿದ. ಅದರಲ್ಲಿ ಬುಡಕಟ್ಟಿನ ಸ್ಥಿತಿಗತಿ, ಅವರಿಗೆ ಭೂಮಿ ಕೊಡಲೇಬೇಕೆಂಬ ಒತ್ತಾಯ, ಯಾವ ಕಾರಣಕ್ಕೂ ತೋಪನ್ನಾಗಲಿ ಪಕ್ಕದ ಬಯಲನ್ನಾಗಲಿ, ಬೆಟ್ಟ ಗುಡ್ಡ ಪ್ರದೇಶವನ್ನಾಗಲಿ ವಿದೇಶಿ ಕಂಪನಿಗೆ ಕೊಡಬಾರದೆಂಬ ಆಗ್ರಹ ಇತ್ತು.

ಒಬ್ಬೊಬ್ಬರೇ ಸಹಿ ಹಾಕಿದರು.

ಹುಚ್ಚೀರನಂತೂ ಸಹಿ ಹಾಕಿ ಪತ್ರವನ್ನು ಹಿಡಿದುಕೊಂಡು ಕುಣಿದಾಡಿದ.

"ನಾನು ನಾಳೇನೇ ಹೋಗ್ತೀನಿ. ಈ ಪತ್ರ ತಲುಪುಸ್ತೇನೆ. ಆನಂತರ ನಾವು ದಿನಾ ತೋಪನ್ನ ಕಾಯ್ಬೇಕು. ಅವ್ರ್ ಯಾರೂ ಕಾಲಿಡ್‌ಬಾರ್ದು. ಹಾಗ್ ಮಾಡ್‌ಬೇಕು.

–ನವಾಬ ಮುಂದಿನ ಕ್ರಿಯೆಯ ಬಗ್ಗೆ ಹೇಳಿದ್ದಾದ ಮೇಲೆ ಪೂಜಾರಪ್ಪ "ಇವ್ರ್‌ಗೇನಾರ ಉಂಬಾಕಿಕ್ರವ್ವ. ಆಗ್ನಿಂದ ಮಾತೇ ಆಯ್ತುಲ್ಲ" ಎಂದ. ಶಬರಿ "ಮಾತಾಡ್ತ ಮರ್ತೇಬಿಟ್ವಿ. ಏನೈತೊ ನೋಡ್ತೀನಿ" ಎಂದು ಎದ್ದು ಹೋದಳು.

ಉಳಿದ ಹೆಂಗಸರು ಗೌರಿಯ ಸುತ್ತ ಕೂತರು. ಪಟ್ಟಣ ಹೆಂಗಿತ್ತು? ಏನೇನ್ ಕಂಡೆ? ಏನೇನ್ ತಂದೆ?– ಮುಂತಾದ ಪ್ರಶ್ನೆಗಳನ್ನು ಕೇಳತೊಡಗಿದರು.

"ಎಲ್ಲಾ ವೊತ್ತಾರೆ ಯೇಳ್ತೀನಿ. ಇವಾಗ ನಿಮಿಗ್ ಅಂಬ್ತ ಬಳೆ ತಂದಿವ್ನಿ. ಎಲ್ಲಾ ತಗಳ್ರಿ" ಎಂದು ಬಳೆಗಳನ್ನು ಕೊಟ್ಟಳು. ಅವರೆಲ್ಲ "ಏಟಾದ್ರು ನಮ್ಮ ಅಟ್ಟಿ ಮಗಳಲ್ವ" ಎಂದು ಹೆಮ್ಮೆಪಟ್ಟರು.

ನವಾಬ್ "ಬಿಸ್ಕತ್ ಪ್ಯಾಕೇಟ್ ತಂದಿದ್ವಲ್ಲ ಅವ್ರಿಗ್ ಕೊಡು ಗೌರಿ" ಎಂದ.

ಗೌರಿ ಬ್ಯಾಗಿನಿಂದ ಬಿಸ್ಕತ್ ಪ್ಯಾಕೆಟ್ ತೆಗೆದು ಎಲ್ಲರಿಗೂ ಒಂದೊಂದು ಬಿಸ್ಕತ್ತನ್ನು ಹಂಚಿದಳು. ಇವರು ಬಿಸ್ಕತ್ತನ್ನು ಸವಿದು ಮುಗಿಸುವ ವೇಳೆಗೆ ಹೊರಬಂದ ಶಬರಿ "ಏನೇನೊ ತಿನ್ತಾ ಕುಂತಿವ್ರಿ. ನಂಗೇನೂ ಇಲ್ವ?" ಎಂದು ತಮಾಷೆ ಮಾಡಿದಳು. ಗೌರಿ "ಒಂದೇ ಬಿಸ್ಕತ್ ಐತೆ. ನಂಗರ್ಧ ನಿಂಗರ್ಧ" ಎಂದು ಮುರಿದುಕೊಟ್ಟಳು. ಶಬರಿ "ನಾನ್ ಮಾತ್ರ ಅರ್ಧ ಉಂಬಾಕಿಕ್ಕಲ್ಲ. ಪೂರ್ತಿ ಇಕ್ತೀನಿ. ಬರ್ರಿ" ಎಂದು ಊಟಕ್ಕೆ ಕರೆದಳು.

* * *

ನವಾಬ್ ಒಡೆಯರ ಮನೆಯ ಹತ್ತಿರ ಹತ್ತಾರು ಜನರೊಂದಿಗೆ ಬಂದ. ಈತನು ಬಂದಾಗಲೇ ಏನೋ ಕಾದಿದೆಯೆಂದು ನರಸಿಂಹರಾಯಪ್ಪನಿಗೆ ಅನ್ನಿಸಿತು. ಆಳೊಬ್ಬನನ್ನು ಕರೆದು ರಾಮಾಜೋಯಿಸರ ಬಳಿಗೆ ಕಳಿಸಿದ. ಜೋಯಿಸರು ಬರುವವರೆಗೆ ತಾನೇ ಮಾತಾಡುತ್ತ ಕೂತ.

"ಏನಯ್ಯ ನವಾಬ ಇಲ್ಲೀಗಂಟ ಬಂದಿದ್ದಿ?"

"ನಮ್ಮ ಜನಗಳ ಹಕ್ಕಿನ್ ಬಗ್ಗೆ ಮಾತಾಡಕ್ ಬಂದಿದ್ದೀನಿ."

"ಏನಯ್ಯ ಅಂಗಂದ್ರೆ? ಅವ್ರ್ ಕೇಳ್ತವ್ರೆ ಅಂಬ್ತ ನನ್ ಮನೇನೇ ಬರ್ಕೊಡಕಾಯ್ತದ?"

"ನಿಮ್ ಮನೆ ಯಾರ್ ಕೇಳ್ತಿದಾರೆ? ನಮಿಗ್ ಬೇಕಾಗಿರೋದು ಭೂಮಿ; ನಮ್ ತೋಪು."

"ನನ್ ತೋಪ್ನ ನಿಮ್ ತೋಪು ಅಂದ್ರೆ ಕೊಟ್‌ಬಿಡಾಕಾಯ್ತದ? ಇನ್ ಆ ಬಯಲು ಐತಲ್ಲ; ಅದೆಲ್ಲ ಸರ್ಕಾರುದ್ದು. ನನ್ತಾವೇನ್ ಕಿಸೀತಿಯ?"

"ಯಾವ್ದು ನಿಮ್ದು ಅಂತ ಹೇಳ್ತೀರೋ ಅದು ನಿಮ್ದಲ್ಲ. ಯವ್ದು ಸರ್ಕಾರುದ್ದು ಅಂತಿರೋ ಅದು ಜನಗಳದ್ದು."

ಅಷ್ಟರಲ್ಲಿ ಆಗಮಿಸಿದ ರಾಮಾಜೋಯಿಸರು "ಏನಾಯ್ತು? ಏನಂತೆ ಇವ್ರ್‌ದು? ಏನ್ ಬೇಕಂತೆ?" ಎಂದು ಆತುರಾತುರವಾಗಿ ಕೇಳಿದರು. ಆಗ ನರಸಿಂಹರಾಯಪ್ಪ "ತಲೆಕೆಟ್ಟೋನೊಬ್ಬ ಇವ್ರ್ ತಲೆ ಎಲ್ಲಾ ಕೆಡ್ಸಿ ಕರ್ಕಂಡ್ ಬಂದವ್ನೆ. ನೀವೇ ಒಸಿ ಇಚಾರ್ಸಿ" ಎಂದ.

"ಏನಯ್ಯ, ಏನಯ್ಯ ನಿಂದು?"– ಜೋಯಿಸರು ನವಾಬನನ್ನು ಪ್ರಶ್ನಿಸಿದರು. ಅವರ ಪ್ರಶ್ನೆಯಲ್ಲಿ ಅಸಹನೆಯಿತ್ತು.

"ನಮ್ ಜನಗಳ ಹಕ್ಕಿನ ಬಗ್ಗೆ ಮಾತಾಡೋಕ್ ಬಂದಿದ್ದೀನಿ"–ನವಾಬನ ಮೊದಲಿನಂತೆಯೇ ಹೇಳಿದ.

"ನಿಮ್ ಜನ? ಏನ್ ಮಾತೂಂತ ಆಡ್ತೀಯ? ನಿನ್ ಜೊತೇಲಿರೋರ್ ಯಾರೂ ನಿಮ್ ಜನ ಅಲ್ಲ. ಇವ್ರೆಲ್ಲ ಏನ್ ಸಾಬರೇನಯ್ಯ?" ಎಂದು ಜೋಯಿಸ ಕೇಳಿದಾಗ ನವಾಬನಿಗೆ ಸಿಟ್ಟು ಬಂತು. ಆದರೂ ತಡೆದುಕೊಂಡು ಹೇಳಿದ– "ನಮ್ ಜನ ಅಂದ್ರೆ ನಮ್ ಜಾತಿ ಜನ, ನಮ್ ಧರ್ಮದ ಜನ ಅಂತ ಅಲ್ಲ, ಅದನ್ನೆಲ್ಲ ಮೀರಿದ ಜನ– ನಮ್ ಜನ. ಇವ್ರ್ ಮನಸ್ನಲ್ಲಿ ಅದು ಯಾವುದೇ ಭಾವನೆ ಇಲ್ಲ. ಸುಮ್ನೆ ನಮ್ಮನ್ ಒಡೆಯೋಕ್ ಪ್ರಯತ್ನ ಮಾಡ್‌ಬೇಡಿ."

"ಯಾರಯ್ಯ ಒಡೆಯೋದು? ನಾನೋ ನೀನೋ? ಬಡಬಗ್ಗರ ಹತ್ರ ಬಂದು ಸಹಾಯ ಮಾಡೋ ನೆಪ ಮಾಡ್ಕೊಂಡು ಸಂಚು ಮಾಡ್ತಿದ್ದೀಯ, ದೇಶದ್ರೋಹ ಮಾಡ್ತಿದ್ದೀಯ"– ಜೋಯಿಸರು ನೇರ ಆರೋಪ ಮಾಡಿದರು.

"ಬಾಯಿಗ್ ಬಂದಂತೆ ಮಾತಾಡ್‌ಬೇಡಿ"–ನವಾಬ ರೇಗಿದ–"ನನ್ ಮನಸ್ನಲ್ಲಿ ಅಂತ ಯಾವ ಭಾವನೇನೂ ಇಲ್ಲ. ಈ ಜನಗಳ ಮನಸ್ನಲ್ಲೂ ಇಲ್ಲ. ಸುಮ್ ಸುಮ್ನೆ ವಿಷಬೀಜ ಬಿತ್‌ಬೇಡಿ. ಹಿಂದೆ ಮುಂದೆ ನೋಡ್ಕೊಂಡು ಮಾತಾಡಿ."

"ಅದೆಲ್ಲ ನಿನ್ನಿಂದ ಕಲೀಬೇಕಾಗಿಲ್ಲ. ನಿನ್ ನಾಟಕ ಜಾಸ್ತಿ ದಿನ ನಡ್ಯೋದಿಲ್ಲ. ಅದೇನ್ ಹೇಳ್ಬೇಕೊ ಬೇಗ ಹೇಳು."

ಜೋಯಿಸರು ಜೋರು ಮಾಡುತ್ತಿರುವಾಗ ನರಸಿಂಹರಾಯಪ್ಪ ಸುಮ್ಮನೆ ನೋಡುತ್ತಿದ್ದ. ಯಾವ ರೀತಿಯಿಂದಲಾದರೂ ಈ ಜನರನ್ನು ಹತ್ತಿಕ್ಕುವುದು ಅವನಿಗೆ ಬೇಕಾಗಿತ್ತು.

ನವಾಬ್ ಜನರೆಲ್ಲ ಸಹಿಮಾಡಿದ ಪತ್ರವನ್ನು ಕೊಡುತ್ತ ಹೇಳಿದ–

"ಈ ಪತ್ರಾನ ನಿಮ್ಗೆ, ಎಂ.ಎಲ್.ಎ.ಗೆ, ಸರ್ಕಾರಕ್ಕೆ ಒಟ್ಟಿಗೇ ಕೊಡ್ತಾ ಇದ್ದೀವಿ. ಈ ಊರ್‍ನೋರಾಗಿ ನೀವೇ ಎಲ್ಲಾ ಫೈಸಲ್ ಮಾಡಿದ್ರೆ ಶಾಂತಿ ಇರುತ್ತೆ. ಇಲ್ದೆ ಇದ್ರೆ ಮುಂದೆ ಏನೇ ಆದ್ರೂ ಅದಕ್ಕೆ ನೀವೇ ಹೊಣೆ."

ನರಸಿಂಹರಾಯಪ್ಪ ಸಿಡಿಮಿಡಿಗೊಂಡ.

"ಏನ್ ಸಾಮೇರ, ಈ ಸಾಬಣ್ಣ ಇಂಗೆಲ್ಲ ಮಾತಾಡ್ತಾನೆ."

ತಕ್ಷಣವೇ ನವಾಬ್ "ಸಾಬಣ್ಣಗೀಬಣ್ಣ ಅಂತೆಲ್ಲ ಕರೀಬೇಡಿ. ನಾನು ಒಬ್ ಮನುಷ್ಯ ಅಷ್ಟೆ" ಎಂದು ಬಿರುಸಾಗಿ ಹೇಳಿದ.

"ಸದ್ಯ ಮನುಷ್ಯ ಅಂದಲ್ಲ ನಮ್ ಪುಣ್ಯ, ದೇವರು ಅಂತ ಹೇಳ್‌ಲಿಲ್ಲ. ನೋಡಯ್ಯ. ನಿನ್ ಪತ್ರ ನೀನ್ ಕೊಡು. ನಾವು ಏನ್ ಮಾಡ್ಬೇಕು ಅಂತ ಪರಿಶೀಲಿಸ್ತೇವೆ." ಎಂದು ಜೋಯಿಸರು ಸರ್ಕಾರಿ ಭಾಷೆಗೆ ತಿರುಗಿದರು.

ನವಾಬ ಕೊಟ್ಟ. "ಮತ್ತೊಂದು ಸಾರಿ ಹೇಳ್ತೀನಿ. ದುಯವಿಟ್ಟು ಇಲ್ಲೇ ಫೈಸಲ್ ಮಾಡ್ಕೊಳ್ಳಿ. ನೀವು ಈ ಜನಗಳ ಪರವಾಗಿ ಸರ್ಕಾರಕ್ಕೆ ತಿಳ್ಸಿ. ತೋಪು, ಬಯಲು ಬಿಟ್ಕೊಡಿ" ಎಂದು ವಾದಿಸಿದ.

"ಆಯ್ತು ಆಯ್ತು. ನೀನ್ ಹೋಗ್‌ಬಹುದು" ಎಂದು ಹೇಳಿದ ಜೋಯಿಸರು ನವಾಬನ ಜೊತೆಗಿದ್ದ ಜನರನ್ನು ಕುರಿತು. "ಈ ಪತ್ರದಲ್ ಇರೋದೆಲ್ಲ ನಿಮಿಗ್ ಒಪ್ಗೆ ಇದೆಯೇನ್ರೋ" ಎಂದು ಕೇಳಿದ.

"ಒಪ್ಗೆ ಇಲ್ದಿದ್ರೆ ನಾವ್ಯಾಕ್ ನಮ್ ಯೆಸ್ರು ಬರೀತಿದ್ವಿ ನೋಡ್ರಿ ಅದ್ರಾಗೆ ನಮ್ ಯೆಸ್ರೆಲ್ಲ ನಾವೇ ಬರ್ದಿದ್ದೀವಿ" ಎಂದ ಸಣ್ಣೀರ. ಉಳಿದ ಜನ "ಅವ್ದು ಸಾಮೇರ" ಎಂದದ್ದಲ್ಲದೆ "ಏನೋ ನಮ್ ಕಡೀಕ್ ಒಸಿಕಣ್ ಬಿಡ್ರಿ; ಸುಮ್ಕೆ ಅಟ ಮಾಡ್‌ಬ್ಯಾಡ್ರಿ ಬುದ್ದಿ" ಎಂದೂ ಹೇಳಿದರು– ಒಂದಿಬ್ಬರು.

"ಬಿಡ್ತೀವಿ ಬಿಡ್ತೀವಿ ಸರ್‍ಯಾಗ್ ಕಣ್ ಬಿಡ್ತೀವಿ. ಈಗ ಜಾಗ ಬಿಡ್ರಿ" ಎಂದರು ಜೋಯಿಸರು.

ನವಾಬ್ ಜನರೊಂದಿಗೆ ಹೊರಟ.

ಜೋಯಿಸರ ಮಾತಿನಿಂದ ನವಾಬನಿಗೆ ಬೇಸರವಾಗಿತ್ತು. ಧರ್ಮದ ವಿಷಯ ತೆಗೆದು ವಿನಾಕಾರಣ ತನ್ನನ್ನು ಜನರಿಂದ ದೂರ ಮಾಡುವ ಅವರ ಪ್ರಯತ್ನ ಹೇಸಿಗೆಯೆನಿಸಿತು. ಇಲ್ಲೇ ಈ ನೆಲದಲ್ಲೇ ಹುಟ್ಟಿ ಬೆಳೆದವನನ್ನು ಪರಕೀಯ ಮಾಡುವ ಪ್ರಯತ್ನ. ಧರ್ಮದ ಹೆಸರಲ್ಲಿ ಅಧರ್ಮದ ಕೆಲಸ. ಹಿಂದೂವಾಗಲಿ, ಮುಸ್ಲಿಮನಾಗಲಿ, ಕ್ರೈಸ್ತನಾಗಲಿ ಧರ್ಮವನ್ನು ಅಧರ್ಮದ ಕೆಲಸಗಳಿಗೆ ಬಳಸಿಕೊಳ್ಳುವುದು ಆತ್ಮವಂಚನೆ, ಜನವಂಚನೆ. ತಾನು ಎಂದೂ ಧರ್ಮಪ್ರಚಾರ ಮಾಡಲಿಲ್ಲ. ಹುಟ್ಟೇ ತನಗೆ ಪರಕೀಯತೆಯ ಪಟ್ಟ ಕೊಡಬೇಕೆ? ಹುಟ್ಟಿನ ಕಾರಣದಿಂದ ಕೋಟ್ಯಾಂತರ ಜನಕ್ಕೆ ಅಸ್ಪೃಶ್ಯತೆಯ ವಿಷಗಾಳಿ ಉಣಿಸಿದ ವ್ಯವಸ್ಥೆ; ಪರಕೀಯಗೊಳಿಸಿದ ವ್ಯವಸ್ಥೆ. ಅದೇ ಹುಟ್ಟಿನ ಕಾರಣಕ್ಕೆ ಅನ್ಯಧರ್ಮೀಯನೆಂದು ತನ್ನನ್ನು ಅನಾಥಗೊಳಿಸುವ ಹುನ್ನಾರ. ಕಿಡಿಗೇಡಿಗಳು ಎಲ್ಲಾ ಕಡೆ ಇರುತ್ತಾರೆ. ಹಾಗೆಂದು ಯಾವುದೇ ಒಂದು ಜನಾಂಗ, ಒಂದು ಧರ್ಮವನ್ನು ಇಡಿಯಾಗಿ ದ್ವೇಷಿಸುವುದೆ? ಎಲ್ಲ ಜನರೂ ನರಸಿಂಹರಾಯಪ್ಪನಂತಲ್ಲ, ಎಲ್ಲ ಜೋಯಿಸರೂ ಈ ಊರ ಜೋಯಿಸರಂತಲ್ಲ ಎಂಬುದೇ ಈ ದೇಶದ ಪುಣ್ಯ. ಪರಕೀಯತೆಯ

ಪಾಪಕ್ಕೆ ಸಾಂತ್ವನ ನೀಡುವ ಪುಣ್ಯ!

ಜನರ ಜೊತೆಯಲ್ಲೇ ಒಳಗೊಂದು ಒಂಟಿತನ;
ಕಡೆಗೂ ಕಾಪಾಡುವುದು ಎದೆಯಾಳದ ಗೆಳೆತನ.

ನವಾಬ್ ಅಂತರ್ಮುಖಿಯಾಗಿಬಿಟ್ಟಿದ್ದ. ಸೂರ್ಯನಿದ್ದರೆ ಆತನೊಂದಿಗೆ ಹಂಚಿಕೊಳ್ಳಬಹುದಿತ್ತು. ಮುಸ್ಲಿಮರಿಗೆ ಬಿನ್‌ಲಾಡೆನ್ ಬೇರೆ, ಪೈಗಂಬರ್ ಬೇರೆ ಎಂದು ಪರಸ್ಪರ ಚರ್ಚಿಸಬಹುದಿತ್ತು. ಹಿಂದೂಗಳಿಗೆ ಗಾಂಧಿ ಬೇರೆ, ಗೋಡ್ಸೆ ಬೇರೆ ಎಂದು ವಿಚಾರ ವಿನಿಯಮಯ ಮಾಡಿಕೊಳ್ಳಬಹುದಿತ್ತು. ಗಾಂಧಿಯನ್ನು ಕೊಂದದ್ದು ಸರಿಯೆಂದು ಬಿನ್‌ಲಾಡೆನ್ ಮಾಡಿದ್ದೆಲ್ಲ ಸೂಕ್ತವೆಂದೂ ಅಮೆರಿಕದ ಯುದ್ಧ ಪಿಪಾಸುತನ ಒಳಿತೆಂದೂ ವಾದಿಸುವವರು ಯಾವ ಧರ್ಮದವರಾಗಲು ಸಾಧ್ಯ? ಈ ಎಲ್ಲ ವಾದ-ಪ್ರತಿವಾದಗಳ ಮಧ್ಯೆ ಮನುಷ್ಯನೇ ಪರಕೀಯ. ಮನಸ್ಸೊಂದು ಯಾತನಾ ಶಿಬಿರ..... 'ಸೂರ್ಯ, ನೀನಿದ್ದರೆ ಎಷ್ಟೆಲ್ಲ ಮಾತಾಡಬಹುದಿತ್ತು. ಇದು ಬುದ್ಧಿಯ ಮಾತಲ್ಲ; ಭಾವದ ಮಾತು. ನನ್ನ-ನಿನ್ನ ಬೌದ್ಧಿಕ ಚರ್ಚೆಗೂ ಒಂದು ಭಾವದ ನೆಲೆ ಇರ್ತಾ ಇತ್ತು ಅಲ್ವಾ ಸೂರ್ಯ.... ಯಾರ ಜೊತೆ ಮಾತಾಡಲಿ ನಾನು?....'

ನವಾಬನ ಒಳಗೊಂದು ಗರಗಸ; ಲಾವಾರಸ;
ಉದ್ವಿಗ್ನತೆಯಲ್ಲಿ ಉರಿಯುವ ಮೌನದ ನಡಿಗೆ.
ಎಷ್ಟು ಉರಿದರೂ ಬೂದಿಯಾಗದ ಭಾವ.
ಒಳ-ಹೊರಗಿನ ಒತ್ತಡದಲ್ಲಿ ಒಂಟಿ ಜೀವ.

ಮಾತಿಲ್ಲದೆ ಎಷ್ಟು ದೂರ ಹೋಗಲು ಸಾಧ್ಯ? ಸಣ್ಣೀರ ಖಿನ್ನನಾಗಿ ಕೇಳಿದ– "ನಿನ್ನ, ಬ್ಯಾರೇನು ಅಂಬ್ತ ಆ ಜೋಯಿಸ್ರು ಅಂದ್ರಲ್ಲ. ಅದಕ್ ಬ್ಯಾಸ್ರಾನ ನವಾಬಣ್ಣ?"

"ಛೆ! ಛೆ! ಇಲ್ಲ... ಅಂಥಾದ್ದೇನೂ ಇಲ್ಲ."

"ಮತ್ತೆ ಯಾಕಿಂಗ್ ಇದ್ದೀಯ? ಒಂದ್ ಮಾತೂ ಆಡ್ತಾನೇ ಇಲ್ಲ."

"ನಿಜ; ಅವ್ರ್ ಹಾಗಂದಾಗ ಏನೇನೊ ನೆನಪಿಗ್ ಬಂತು. ಏನಾದ್ರೂ ಹೇಳ್ಕೊಳ್ಳೋಣ ಅಂದ್ರೆ ಸೂರ್ಯಾನೂ ಇಲ್ಲ, ಬೇರೆ ಗೆಳೆಯರೂ ಇಲ್ಲ."

"ಯಾಕೆ? ನಾವಿಲ್ವ? ಎಂಥ ಮಾತಾಡ್ತೀಯ ನವಾಬಣ್ಣ? ನಮ್ಮನ್ನೆಲ್ಲ ಏನಂದ್ಕಂಡೆ?"

ನವಾಬ್ ತಬ್ಬಿಬ್ಬಾದ.

ಹೌದು; ಇವರೆಲ್ಲ ಇದ್ದಾರೆ. ತಾನೇಕೆ ಹಾಗೆ ಯೋಚಿಸಿದೆ? ಸೂರ್ಯನೆ ಇರಬೇಕೆಂದು ಯಾಕೆ ಬಯಸಿದೆ? ಇವರಿಗೆ ತನ್ನ ತಾತ್ವಿಕಯಾತನೆ ಅರ್ಥವಾಗುವುದಿಲ್ಲವೆಂದೆ? ಯಾತನೆಗೆ ತಾತ್ವಿಕ ಭಾಷೆ ಬೇಕೆ? ಸಣ್ಣೀರ ಮತ್ತೆ ಕೇಳಿದ–"ಯಾಕಣ್ಣ ಸುಮ್ಕಾದೆ? ನಾವೆಂದಾನ ನಿನ್ ಬ್ಯಾರೇನೂ ಅಂಬ್ತ ತಿಳ್ಕಂಡಿದ್ವ? ಅಂಗ್ ತಿಳ್ಕಂಡಿದ್ರೆ ಗೌರೀಗೂ ನಿಂಗೂ ಮದ್ವೆ ಆಯ್ತಿತ್ತ? ಆ ಒಡೆಯ, ಜೋಯಿಸ ಎಲ್ರನ್ನೂ ಬಿಟ್ಟು ನಿನ್ ಜತ್ಯಾಗ್ ನಾವ್ ನಿಂತ್ಕಂಡಿಲ್ವ?"

ನವಾಬ್ ಭಾವುಕನಾದ.

"ತಪ್ಪಾಯ್ತು. ನಾನ್ ನಿಜವಾಗೂ ತಪ್ ಮಾಡ್ದೆ. ನನ್ ಸಂಕಟಾನ ನಿಮ್ ಹತ್ರಾನೇ ಹಂಚ್ಕೋಬೇಕಾಗಿತ್ತು" ಎಂದು ಗದ್ಗದಿತನಾಗಿ ಹೇಳಿದ.

"ಈಗಾನ ಯೇಳ್ಕ ನಿನ್ ಸಂಕಟ; ಮನ್ಸು ಅಗುರಾಗ್ತೈತೆ ನವಾಬಣ್ಣ."

ನವಾಬ್ ನಸುನಗುತ್ತ ಹೇಳಿದ–"ಈಗ್ ನಿಮ್ಗೆಲ್ಲ ಹೇಳೊ ಅಗತ್ಯಾನೇ ಇಲ್ಲ. ನಾನ್ ಹೇಳ್ದೆ ಇದ್ರು ಎಲ್ಲ ನಿಮ್ ಅನುಭವಕ್ ಬಂದಿದೆ. ಇದಕ್ಕಿಂತ ದೊಡ್ಡ ವಿಷ್ಯ ಯಾವ್ದಿದೆ? ನಿಮ್ಮ ಮನಸ್ಗಿಂತ ದೊಡ್ಡದು ಯಾವಿದ್ದೆ?"

"ಅದೇನೋಪ್ಪ, ನಮ್ಗೆ ಅಂಬ್ತ ಈಟೆಲ್ಲ ಪಡಿಪಾಟಲು ಬೀಳ್ತಿದ್ದೀಯ ನೀನು. ನಿನ್ನನ್ನ ನಾವ್ ಒಂಟಿ ಮಾಡೇವ? ಎಂದಾನ ಬಿಟ್ ಕೊಟ್ಟೇವ?" ಸಣ್ಣೀರ ಎಲ್ಲರ ಮನಸ್ಸಿಗೆ ಮಾತಾಗಿದ್ದ. ನವಾಬ್ ಆತನ ಕೈ ಹಿಡಿದು ಬಿಗಿಯಾಗಿ ಒತ್ತಿದ. ಅದು ಅವನ ಮನಸ್ಸಾಗಿತ್ತು.

ಕ್ಷಣಕಾಲ ಮೌನ.

ನವಾಬನೇ ಮಾತು ಆರಂಭಿಸಿದ; ಮುಂದೆ ಮಾಡಬೇಕಾದ ಕೆಲಸಗಳ ಬಗ್ಗೆ ಗಮನ ಸೆಳೆದ. ಧೈರ್ಯ ಕಳೆದುಕೊಳ್ಳೋದು ಬೇಡ. ಎಲ್ಲಾ ಕೆಲಸಗಳಿಗೂ ಇಂತಹ ಅಡೆತಡೆಗಳು ಇರುತ್ತವೆ ಎಂಬ ಬಗ್ಗೆ ನಮ್ಮ ಸ್ವಾತಂತ್ರ್ಯ ಹೋರಾಟ, ಅಸ್ಪೃಶ್ಯತಾ ವಿರೋಧಿ ಹೋರಾಟ, ರಷ್ಯಾ ಚೈನಾ ಮುಂತಾದ ಕಡೆ ನಡೆದ ಹೋರಾಟ– ಇವೆಲ್ಲ ಉದಾಹರಣೆ ಕೊಡ್ತಾ ಹೋದ. ಮಧ್ಯೆ ಮಧ್ಯೆ "ಅರ್ಥ ಆಯ್ತ?" ಎಂದು ಕೇಳುತ್ತಿದ್ದ. "ಒಟ್ನಾಗೆ ಮನಸ್ ಮಾಡಿರೆ ಏನ್ ಬೇಕಾರೂ ಆಯ್ತದೆ. ಆಗಾವರ್ಗೂ ಕಾಯ್‌ಬೇಕಾಯ್ತದೆ ಅಂಬ್ತ ಗೊತ್ತಾತು" ಅಂದರು ಅವರು. "ಸುಮ್ನೆ ಕಾಯ್ತಾ ಇದ್ರೆ ಆಗೋದಿಲ್ಲ. ಕೆಲ್ಸ ಮಾಡ್ತಾನೆ ಇರ್ಬೇಕು; ಕಾಯ್ಬೇಕು" ಎಂದು ನವಾಬ್ ಸ್ಪಷ್ಟಪಡಿಸಿದ.

"ಅದ್ಸರಿ, ನವಾಬಣ್ಣ, ಈಗ ಮುಂದೇನ್ ಮಾಡ್ಬೇಕು; ಅದನ್ನೇಳಣ್ಣ" ಎಂದು ಸಣ್ಣೀರ ನೇರ ವಿಷಯಕ್ಕೆ ಬಂದ.

"ಆ ವಿಷ್ಯಕ್ ಬರೋಕೇಂತ್ಲೆ ನಾನ್ ಇಷ್ಟೆಲ್ಲ ಹೇಳಿದ್ದು. ಯಾರ‍್ಯಾರು ಎಷ್ಟು ಕಷ್ಟ ಬಿದ್ದಿದಾರೆ ಅಂತ ಗೊತ್ತಾಗ್ಲಿ ಅಂತ ಹಿಂದಿನ ವಿಷ್ಯ ಎಲ್ಲಾ ಹೇಳ್ದೆ. ಈಗ ನೋಡಿ, ಇವ್ರಂತೂ ಏನೂ ಮಾಡೊಲ್ಲ. ಇದನ್ನ ನಾವು ರಾಜ್ಯಮಟ್ಟಕ್ಕೇ ತಗೊಂಡ್ ಹೋಗ್ಬೇಕು. ನಮ್ ಗೆಳೆಯರೂ ಅದಕ್ಕಾಗಿ ಕಾಯ್ತಾ ಇದಾರೆ. ಅವ್ರ್ ಹತ್ರ ಹೋಗಿ ಇಲ್ಲಿ ವಿಷ್ಯ ಎಲ್ಲಾ ಹೇಳ್ತೀನಿ. ಅದಕ್ ಮುಂಚೆ ಎಂ.ಎಲ್.ಎ. ಧರ್ಮಯ್ಯನ್ನ ಕಾಣ್ತೀನಿ. ಆಮೇಲೆ ನಮ್ಮ ಸ್ನೇಹಿತರ ಜೊತೆ ಸೇರಿ ಸರ್ಕಾರದ ಹತ್ರ ಈ ವಿಷ್ಯ ತಿಳ್ಸಿ ಎಲ್ಲಾ ಇಲ್ಲಿಗ್ ಬಂದು ನಿಮ್‌ಜೊತೆ ಸೇರ‍್ಕೊಂಡು ಹೋರಾಟ ಮಾಡ್ತೀವಿ. ರಾಜ್ಯಮಟ್ಟದಲ್ಲೂ ಹೋರಾಟ ಮಾಡ್ತೀವಿ. ಎಲ್ಲಾ ಕಡೆ ಜನ್ರಿಂದಲೂ ಇದಕ್ ಬೆಂಬಲತಗಳ್ತೀವಿ." ನವಾಬನ ವಿವರಣೆ ಕೇಳಿದ ಜೊತೆಗಾರನೊಬ್ಬ ಹುರುಪುಗೊಂಡು "ಎಲ್ಲಾರೂ ನಮ್ ಜತೇಗ್ ಬಂದ್ರೆ ಈ ಒಡೆಯ ಜೋಯಿಸ ಇಬ್ರೂ ಕುಂತ್ಕಂಡೇನೇ ಒಂದು ಎಲ್ಡು ಎಲ್ಲಾ ಮಾಡ್ಕಂಡ್ ಬಿಡ್ತಾರೆ" ಎಂದ.

ಸಣ್ಣೀರ "ಅವ್ರ್ ಬೇಧಿ ವೊಡ್ಕಂಡಂಗೇ ಬಿಡು" ಎಂದು ಉಲ್ಲಸಿತನಾದ.

ಹಟ್ಟಿಯಲ್ಲಿ ಎಲ್ಲವನ್ನೂ ಮಾತಾಡಿದ್ದಾದ ಮೇಲೆ ನವಾಬ್ ಮಾರನೇದಿನವೇ ಹೊರಡಲು ಸಿದ್ಧನಾದ. ಗೌರಿ ತಾನೂ ಬರುತ್ತೇನೆಂದಳು. "ಇಲ್ಲೇ ಇದ್‌ಬಿಡು" ಎಂದು ನವಾಬ ಹೇಳಿದರೂ ಕೇಳಲಿಲ್ಲ. "ಅಲ್ಲಿ ಏನೇನ್ ಆಗ್ತೈತೊ ನಾನು ಜತ್ಯಾಗಿದ್ರೆ ಒಳ್ಳೇದು" ಎಂದಳು ಗೌರಿ. "ನನ್ ಜತೆ ಬೇರೆ ಗೆಳೆಯರು ಇದ್ದೇ ಇರ‍್ತಾರೆ. ನಾನೊಬ್ನೆ ಎಲ್ಲೂ ಹೋಗಲ್ಲ" ಎಂದರೂ ಗೌರಿ ಕೇಳಲಿಲ್ಲ. "ನಾನೂ ಜತೇಗ್ ಬತ್ತೀನಿ" ಎಂದಳು. ಶಬರಿ "ಅವ್ಳ್ ಆಟಂದೇಳ್‌ವಾಗ ಯಾಕ್ ಬ್ಯಾಡ ಅಂಬ್ತೀಯ. ಅವ್ಳೂ ವೋರಾಟ ಮಾಡಾಳ್ ತಾನೇ" ಎಂದು ದನಿಗೂಡಿಸಿದಳು.

ನವಾಬ್ ಗೌರಿಯ ಜೊತೆ ಅತ್ತ ಹೊರಡುವ ವೇಳೆಗಾಗಲೇ ಎಂ.ಎಲ್.ಎ. ಧರ್ಮಯ್ಯನಿಗೆ ಒಡೆಯ ಮತ್ತು ಜೋಯಿಸರಿಂದ ಎಲ್ಲ ಸುದ್ದಿ ತಿಳಿದಿತ್ತು. ಧರ್ಮಯ್ಯ ಸೀದಾ ಊರಿಗೆ ಬಂದ. ಪರಿಸ್ಥಿತಿಯ ಬಗ್ಗೆ ಚರ್ಚಿಸಿದ. ಜನರ ಮೇಲೆ ಏನೂ ಜೋರು ಮಾಡಬೇಡಿ ಎಂದು ಸಲಹೆ ನೀಡಿದ. ಜೋಯಿಸರು ಅದನ್ನೇ ಸಮರ್ಥಿಸಿದರು. "ಅವರವರಲ್ಲೇ ಒಡಕು ಹುಟ್ಸೋ ಹಾಗೆ ಬೀಜ ಹಾಕಿದ್ದೀನಿ" ಎಂದು ಖುಷಿಯಾಗಿ ಹೇಳಿದರು. ಕೂಲಿ ಕೆಲಸಕ್ಕೆ ಈ ಜನರೇ ಬೇಡ ಎಂದರೆ ಅವರೆಲ್ಲ ಒಗ್ಗಟ್ಟಾಗುತ್ತಾರೆ. ಅದರ ಬದಲು ಅವರಲ್ಲೇ ಆಸೆ ಹುಟ್ಟಿಸಿ ಒಡಕು ತರೋಣ ಎಂಬ ತೀರ್ಮಾನಕ್ಕೂ ಬಂದರು. ಧರ್ಮಯ್ಯನಂತೂ ಆತುರದಲ್ಲಿದ್ದ. "ತಡಮಾಡಿದರೆ ನಮ್ಮ ಕೈ ಮೀರುತ್ತೆ. ಬರೋದುಡ್ಡಿಗೆ ಮೂರ‍್ನಾಮ

ಆಗುತ್ತೆ. ಎಲ್ಲಾ ಬೇಗ ಮುಗುಸ್ಬೇಕು" ಎಂದು ಮುಂದಿನ ಕಾರ್ಯಾಚರಣೆ ಕುರಿತು ಸಮಾಲೋಚಿಸಿದ.

# ೧೭

ಶಬರಿಗೆ ಒಂದೊಂದು ಮರವನ್ನೂ ತಬ್ಬಿಕೊಳ್ಳಬೇಕೆನ್ನಿಸಿತು. ಹತ್ತಾರು ಮರಗಳನ್ನು ತಬ್ಬಿಕೊಂಡಳು. ಒಂದು ಮರದ ಹತ್ತಿರ ತಬ್ಬಿ ನಿಂತುಬಿಟ್ಟಳು. ಬಿಟ್ಟು ಕೊಡಲಾರೆನೆಂಬ ಭಾವ. ಮುಚ್ಚಿದ ಕಣ್ಣೊಳಗೆ ಮೂಡಿನಿಂತ ಸೂರ್ಯ ಚೈತನ್ಯ.

"ಏಯ್ ಶಬರಿ"

ತಿರುಗಿ ನೋಡಿದಳು;

ಗಡಸು ದನಿಯಲ್ಲಿ ಗದರಿದ ಗೂಳಿ.

ಹೆಡೆಯೆತ್ತಿ ನಿಂತ ಒಡೆಯ.

"ಮರ ಯಾಕ್ ಅಂಗ್ ತಬ್ಕಂಡ್ ನಿಂತ್ಕಬ್ತೀಯ. ಎದ್ರಿಗ್ ನಾನ್ ಇಲ್ವ?"

ಶಬರಿಗೆ ಅಸಹ್ಯವೆನ್ನಿಸುವ ಮಾತು.

ಮರುಮಾತಾಡದೆ ಹೊರಟಳು.

ಫಕ್ಕನೆ ಕೈಹಿಡಿದ–ನರ–ಸಿಂಹ–ರಾಯಪ್ಪ!

ಕೈ ಕೊಸರಿದಳು; ಸಿಟ್ಟು ಸಂಕಟಗಳಿಂದ ಸುಟ್ಟುಬಿಡುವಂತೆ ನೋಡಿದಳು.

"ನಿನ್ ಸೀರೆ ಕಿತ್ತು ಅದನ್ನೇ ಚಾಪೆ ಮಾಡ್ತೀನಿ. ಆದ್ರೆ ಮ್ಯಾಲ್ ನಿನ್ನ ಮಲಗ್ಸಿ..."

"ಸಾಕ್ ನಿಲ್ಸು. ನಾನ್ ಸತ್ತೇನೇ ವೊರ್ತು ನನ್ ಮೈಕೊಡಾಕಿಲ್ಲ ನಿಂಗೆ."

"ಕಣ್ಣಾಗ್ ಎಣ್ಣೆ ಆಕ್ಕಂಡ್ ಕಾದ್ರೂ ಆ ಸೂರ್ಯ ಬರಾಕಿಲ್ಲ. ನವಾಬ ಯಾವಾಗ್ ನೆಗದ್ ಬೀಳ್ತಾನೊ ಗೊತ್ತಿಲ್ಲ. ಇವಾಗಾರ ನನ್ ಕೂಡ್ಕ. ಇಲ್ದಿದ್ರೆ ನಿನ್ ಏನ್ ಮಾಡ್ತೀನಿ ಅಂಬ್ತ ನಂಗೇ ಗೊತ್ತಿಲ್ಲ."

ಶಬರಿ ಶಕ್ತಿಯಾದಳು; ಹಿಡಿದ ಕೈ ಕೊಡವಿ ಒಡೆಯನನ್ನು ಸುಡುವಂತೆ ನೋಡುತ್ತ–"ನಂಗೀರಾದ್ ಒಬ್ನೇ ಗಂಡ; ಸೂರ್ಯ! ನಾನ್ ಸತ್ತರೂ ಸರೀನೇ, ನನ್ ಗಂಡ ಸೂರ್ಯ!" ಎಂದು ಹೇಳಿ ಅಲ್ಲಿಂದ ರಭಸವಾಗಿ ಹೊರಟಳು.

ಒಡೆಯ ಒಂದು ಕ್ಷಣ ತಬ್ಬಿಬ್ಬಾದರೂ ಕೂಗಿ ಹೇಳಿದ–"ಇವತ್ತಲ್ಲ ನಾಳೆ ನೀನು ನನ್ ಮಗ್ಗಲಾಗ್ ಮಲುಗ್ಲೇಬೇಕು. ನೋಡ್ತಾ ಇರು."

ತಾತ್ಸಾರದಿಂದ ತಿರುಗಿನೋಡಿದ ಶಬರಿ ತನ್ನ ದಾರಿ ತಾನು ಹಿಡಿದಳು– ತನ್ನ ಗಂಡ ಸೂರ್ಯ, ಸೂರ್ಯನೊಬ್ಬನೇ ಎಂದು ಮೊಟ್ಟಮೊದಲ ಸಲ ಬಹಿರಂಗವಾಗಿ ಹೇಳಿದ್ದಳು.

**'ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ?**
**ಲೌಕಿಕಕ್ಕೊಬ್ಬ ಗಂಡನೆ? ಪಾರಮಾರ್ಥಕ್ಕೊಬ್ಬ ಗಂಡನೆ?'**

ಹೊಟ್ಟೆಯ ಮೇಲೆ ಕೈಯ್ಯಿಟ್ಟುಕೊಂಡೇ ಹಟ್ಟಿಗೆ ಬಂದಳು; ಒಳಗೆ ಹೋದಳು.
ಸೂರ್ಯನ ಫೋಟೋವನ್ನು ನೋಡುತ್ತ ಮನಸ್ಸನ್ನು ನೆಟ್ಟಳು.
ಕಳವಳವ ಕಳೆದುಕೊಂಡಳು.

ಒಳಗೆ ಭೂಮಿ ಸೂರ್ಯನ ಬಿಂಬ.
ಹೊರಗೆ ಆಕಾಶ ಸೂರ್ಯನ ಬಿಸಿಲ ಬೇಗೆ.
ಕತ್ತಲು ಬೆಳಕಿನ ಜೋಡಿನಡಿಗೆ.

ಬರುತ್ತಾನೆ; ಬಂದೇ ಬರುತ್ತಾನೆ ಸೂರ್ಯ; ಕತ್ತಲು ಕಳೆದ ಮೇಲೆ ಬೆಳಕು ಬರಲೇಬೇಕಲ್ಲವೆ?

ತಿಮ್ಮರಾಯಿ ಒಳಗೆ ಬಂದು ಶಬರಿಯ ಸೂರ್ಯನೋಟವನ್ನು ಗಮನಿಸಿದ. "ಸೂರ್ಯ ಬತ್ತಾನೆ ಕಣವ್ವ. ನೀನೇನೂ ಸಿಂತೆ ಮಾಡ್ಬ್ಯಾಡ" ಎಂದು ಸಮಾಧಾನಿಸಿದ. ಶಬರಿ ನಿಟ್ಟುಸಿರು ಬಿಟ್ಟು "ಉಂಬಾಕ್ ಬಾರಪ್ಪ" ಎಂದು ಗಂಗಳ ತಂದಿಟ್ಟಳು. "ನೀನೂ ಉಣ್ಣವ್ವ" ಎಂದ ತಿಮ್ಮರಾಯಿ. "ಯಾಕೊ ಎಲ್ಡ್‌ದಿನ್ದಿಂದ ಉಂಬಾಕ್ ಸೇರಾದೇ ಇಲ್ಲ ಕಣಪ್ಪ" ಎಂದಳು.

"ಯಾವಾಗ್ಲೂ ಸಿಂತೆ ಮಾಡೀರಂಗೇಯ" ಎಂದ.

"ಅಂಗೇನಿಲ್ಲ. ಯಾಕೊ ವೊಟ್ಟೆ ತೊಳಿಸ್ದಂಗಾಯ್ತದೆ."

"ವೊಟ್ಟೆ ಕಟ್ಟೀರಿನ್ನೇನಾಯ್ತದೆ? ವೊತ್ತಿಗ್ ಸರ್ಯಾಗ್ ಉಣ್‌ಬೇಕು."

"ನೀನ್ಯಾವಾಗ್ಲೂ ಇಂಗೇಯ. ನಾನೊಂದ್ ಯೇಳಿರೆ ನೀನೊಂದ್ ಯೇಳ್ತೀಯ."

"ನಂಗ್ ತೋಚಿದ್ ನಾನ್ ಯೇಳ್ತೀನಿ. ವೊಟ್ಟೆಗೇನೂ ಆಕ್ದೆ ಇದ್ರೆ ತೊಳುಸ್ದೆ ಇನ್ನೇನಾಯ್ತದವ್ವ? ಅದ್ಕೆ ನಾನ್ ಯೇಳಾದು; ಇದ್ದಾಗಾನ ವೊತ್ತಿಗ್ ಸರ್ಯಾಗ್ ಉಣ್‌ಬೇಕು. ಇಲ್ದಾಗ್ ಉಪಾಸ ಬೀಳಾದ್ ಇದ್ದೇ ಇರ್ತೈತೆ."

"ಆಯ್ತು ಇವಾಗುಣ್ಣು ನೀನು."

ಶಬರಿ ಇಟ್ಟ ಮುದ್ದೆಯನ್ನು ತಿಮ್ಮರಾಯಿ ಉಣ್ಣ ತೊಡಗಿದ. ಎದುರು ಕೂತಿದ್ದ ಶಬರಿಗೆ ಇದ್ದಕ್ಕಿದ್ದಂತೆ ವಾಕರಿಕೆ ಬಂತು.

ಅಲ್ಲಿಂದ ಎದ್ದಳು; ತಿಮ್ಮರಾಯಿ ಏನಾಯಿತೆಂಬಂತೆ ನೋಡುತ್ತಿದ್ದ. ವಾಕರಿಕೆ ತಡೆಯಲಾಗದೆ ಹೊರಬಂದ ಶಬರಿ ವಾಂತಿ ಮಾಡಿಕೊಂಡಳು.

ತನ್ನ ಗುಡಿಸಲ ಹೊರಗೆ ರಾಗಿಕಲ್ಲು ಬೀಸುತ್ತ ಕೂತಿದ್ದ ಸಣ್ಣೀರನ ಹೆಂಡತಿ ಲಕ್ಷ್ಮಕ್ಕ ಇದನ್ನು ಗಮನಿಸಿದಳು.

ಹೊರಬಂದ ತಿಮ್ಮರಾಯಿ "ಲಚ್ಮವ್ವ. ಯಾಕೊ ಎಲ್ಡ್‌ಮೂರ್ದಿನ್‌ದಿಂದ ವಾಕ್ರಿಕೆ ಅಂಬ್ತೈತೆ. ಒಸಿ ನೋಡವ್ವ ನನ್ ಮಗಳನ್ನ" ಎಂದ.

ಶಬರಿ "ಅಂತಾದೇನು ಆಗಿಲ್ಲ ಬಿಡಪ್ಪ. ಈಟಕ್ಕೆಲ್ಲ ಎದ್ರಿಕಂಡ್ರಾಯ್ತದ" ಎಂದರೂ ತಿಮ್ಮರಾಯಿ ಸುಮ್ಮನಾಗಲಿಲ್ಲ.

"ವೊತ್ತಿಗ್ ಸರ್ಯಾಗ್ ಉಂಬಾಕಿಲ್ಲ; ಸಿಂತೆ ಮಾಡಾದ್ ಬಿಡಾಕಿಲ್ಲ. ಇನ್ನೇನ್ ಆಗ್ತೈತೆ" ಎಂದು ಮತ್ತೆ ಬೇಜಾರು ಮಾಡಿಕೊಂಡ. "ಬಾ ಲಚ್ಮವ್ವ. ಒಸಿ ನೋಡಿ, ನೀನಾರ ಬುದ್ದಿ ಯೇಳು" ಎಂದು ಒತ್ತಾಯಿಸಿದ.

ಲಕ್ಷ್ಮವ್ವ ಬಂದಳು. ಶಬರಿಯ ಮೈ ಮುಟ್ಟಿ ನೋಡಿದಳು. "ಜರ–ಗಿರ ಏನೂ ಇಲ್ಲ" ಎಂದು ಹೊಟ್ಟೆಯನ್ನು ಒತ್ತಿದಳು. ಮತ್ತೆ ಒತ್ತಿದಳು. ಶಬರಿಯ ಮುಖ ದಿಟ್ಟಿಸಿದಳು. ಹಾಗೇ ಜೋಲುಬಿದ್ದ ಸೆರಗಿನ ಕಡೆ ನೋಡಿದಾಗ ತುದಿಯಲ್ಲಿ ಏನ್ನೋ ಇಟ್ಟು ಗಂಟು ಹಾಕಿರುವುದು ಕಂಡಿತು.

"ಏನ್ ಸ್ಯಬರಿ ಅದು" ಎಂದು ಸೆರಗಿನ ತುದಿಯ ಗಂಟನ್ನು ಬಿಚ್ಚಿದಳು.

ಹುಣಿಸೇಕಾಯಿಗಳು!

ಹೊಟ್ಟೆ ಒತ್ತಿದಾಗ ಮೂಡಿದ ಅನುಮಾನಕ್ಕೆ ಸಾಕ್ಷಿ!

"ಬಾ ಇಲ್ಲಿ" ಎಂದು ತನ್ನ ಗುಡಿಸಲಿನ ಒಳಗೆ ಕರೆದೊಯ್ದಳು. ಲಕ್ಷ್ಮಕ್ಕ ಸೂಲಗಿತ್ತಿಯೂ ಹೌದೆಂದು ಶಬರಿಗೆ ಗೊತ್ತಿತ್ತು. ಆಕೆ "ಏನೂ ಆಗಿಲ್ಲ ಬಿಡಕ್ಕ" ಎಂದರೂ ಕೇಳದೆ ಕರೆದೊಯ್ದಳು. ತಿಮ್ಮರಾಯಿಗೆ ತಡೆಯಲಾಗಲಿಲ್ಲ. ಯಾಕೆ ಕರೆದೊಯ್ದಳೆಂದು ಗೊತ್ತಿರಲಿಲ್ಲ. ಹಿಂದೆಯೇ ಹೋದ. ಈತ ಹೋಗುವುದರೊಳಗೆ ಲಕ್ಷ್ಮಕ್ಕ ಬಾಗಿಲನ್ನು ಮುಂದು ಮಾಡಿದ್ದಳು. ತಿಮ್ಮರಾಯಿ ಬಾಗಿಲ ಬಳಿ ಹೊರಗೇ ನಿಂತ.

ಲಕ್ಷ್ಮಕ್ಕ "ಇಂಗ್ ಮಲೀಕ" ಎಂದಳು.

ಶಬರಿ ಮಲಗಿಕೊಂಡಳು. ಎಲ್ಲ ನೋಡಿದ ಲಕ್ಷ್ಮಕ್ಕ ಕೇಳಿದಳು–

"ಯಾಕೆ ಇಂಗ್ ಮಾಡ್ಕಂಡೆ?"

"ಏನಾಗೈತವ್ವ?"

"ಏನಾಗೈತೆ ಅಂಬ್ತ ನನ್ನೇ ಕೇಳ್ತೀಯ? ನಿನ್ ವೊಟ್ಟೆ ಒಳಗಡೆ ಕೂಸ್ ಬೆಳೀತಾ ಐತೆ ಕೂಸು!"

ಹೊರಗೆ ನಿಂತಿದ್ದ ತಿಮ್ಮರಾಯಿ ಬೆಚ್ಚಿದ.

ಶಬರಿಯ ಬಾಯಿಂದ ಯಾವ ಮಾತೂ ಬರಲಿಲ್ಲ.

"ಯಾಕ್ ಸುಮ್ಕಿದ್ದೀಯ? ಯಾರ್ದೇ ಈ ಕೂಸು?"

"ಸೂರ್ಯಂದು"– ಶಬರಿ ನಿರ್ವಿಕಾರವಾಗಿ ಹೇಳಿದಳು.

"ಏಟ್ ಸಲೀಸಾಗ್ ಯೇಳ್ತಾ ಇದ್ದೀಯ? ಇವಾಗೇನ್ ಮಾಡಾದು?"

"ಏನ್ ಮಾಡಾದು ಅಂದ್ರೆ? ಸೂರ್ಯ ಬರಾವರ್ಗೂ ಕಾಯಾದು; ಮದ್ವೆ ಆಗಾದು."

"ಸೂರ್ಯಪ್ಪ ಯಾವತ್ ಬತ್ತಾನೊ ಏನ್ ಪಾಡೊ. ಈಗ್ ಯಾರ್ಗೂ ಗೊತ್ತಿಲ್ಲ. ಮದ್ದು ಮಾಡ್‌ಕೊಡ್ತೀನಿ. ಎಲ್ಲಾ ಸರ್ಯಾಗ್ತೈತೆ."

"ಬ್ಯಾಡ ಕಣಕ್ಕ. ನನ್ನ ಕೂಸ್ನ ನಾನ್ ಕೊಲೆ ಮಾಡಾಕಿಲ್ಲ."–ಶಬರಿ ಉಕ್ಕಿ ಬರುವ ಅಳುವನ್ನು ತಡೆಯುತ್ತ ಹೇಳಿದಳು.

"ಈಗೇನ ಅದು ಬೆಳ್ದಿಲ್ಲ. ಏಟೊ ಜನ ಅಂಗ್ ಮಾಡಿಸ್ಕಂಬ್ತಾರೆ. ಕಂಡೋರ್ ಬಾಯಿಗ್ ಬೀಳಾದ್ ತಪ್ತೈತೆ. ನನ್‌ಮಾತ್ ಕೇಳೇ ಸ್ಯಬರಿ"– ಲಕ್ಷ್ಮಕ್ಕ ಒತ್ತಾಯಿಸಿದಳು.

ತಿಮ್ಮರಾಯಿ ಖಿನ್ನನಾಗಿದ್ದ. ಒಳಹೋಗಿ ಲಕ್ಷ್ಮಕ್ಕನ ಮಾತಿಗೆ ಒಪ್ಪು ಎಂದು ಶಬರಿಯನ್ನು ಒತ್ತಾಯಿಸಬೇಕೆಂದುಕೊಂಡ. ಆದರೆ ಒಳಗೆ ಹೋಗಲಾಗದೆ ಅಲ್ಲೇ ನಿಂತ.

ನಾನು ಸೂರ್ಯಂಗಾಗಿ ಕಾಯ್ತೀನಿ ಕಣಕ್ಕ. ಸೂರ್ಯ ನಂಗೆಂದೂ ಮೋಸ ಮಾಡಾಕಿಲ್ಲ. ಬಂದೇ ಬರ್ತಾನೆ. ಬಂದಾನೆ ಮದ್ವೆ ಆಗ್ತಾನೆ. ಅಲ್ಲೀಗಂಟ ಬಸುರಿ ಆಗಿರಾ ವಿಸ್ಯ ಯಾರ್ಗೂ ಯೇಳಲ್ಲ ಅಂಬ್ತ ಮಾತ್ ಕೊಡಕ್ಕ."

ಶಬರಿ ಲಕ್ಷ್ಮಕ್ಕನ ಮುಂದೆ ಕೈ ನೀಡಿದಳು.

ಕಣ್ತುಂಬಿಕೊಂಡ ಲಕ್ಷ್ಮಕ್ಕ ಶಬರಿಯ ಕೈಮೇಲೆ ಕೈಯ್ಯಿಟ್ಟು ಹೇಳಿದಳು. "ನನ್ ಗಂಡನ್ ಮ್ಯಾಗೆ ಆಣೆ ಇಟ್ ಯೇಳ್ತೀನಿ. ನಾನ್ ಯಾರ್ಗೂ ಯೇಳಾಕಿಲ್ಲ. ದ್ಯಾವ್ರ್ ಮನ್ಸ್ ಮಾಡಿ ಸೂರ್ಯಪ್ಪನ್ನ ಬ್ಯಾಗ್ ಕರೆಸ್ಕಂಬಂಗಾಗ್ಲಿ ಕಣವ್ವ. ತಡ ಆದ್ರೆ ವೊಟ್ಟೆ ಮುಂದಕ್ ಬಂದು ಎಲ್ರಿಗೂ ಗೊತ್ತಾಗ್ತೈತೆ."

"ಅಂಗೇನಾರ ಆದ್ರೆ ನಾನ್ ಮಗ ಅಡಿತೀನಿ ಕಣಕ್ಕ. ಸೂರ್ಯನ್ ಯೆಸ್ರೇಳ್ಕಂಡ್ ಸಾಕ್ತೀನಿ"–ಶಬರಿಯ ಮಾತು ಕೇಳಿ ಲಕ್ಷ್ಮಕ್ಕ "ನನ್ನವ್ವ, ಎಂತಾ ಮನ್ಸೇ ನಿಂದು" ಎಂದು ಅಪ್ಪಿಕೊಂಡಳು. ಅಳುತ್ತ ಸಮಾಧಾನಿಸಿದಳು.

ಅತ್ತು ಸಾಕಾದ ಮೇಲೆ ಇಬ್ಬರೂ ಎದ್ದರು.

ಲಕ್ಷ್ಮಕ್ಕ "ನೀನ್ ನನ್ ತಂಗಿ ಇದ್ದಂಗೆ ಸ್ಯಬರಿ. ಎಲ್ಲಾ ಒಳ್ಳೇದಾಯ್ತದೆ" ಎಂದಳು.

ತಿಮ್ಮರಾಯಿ ಕಣ್ಣೀರು ಒರೆಸಿಕೊಳ್ಳುತ್ತ ಹೊರಟುಹೋದ.
ಶಬರಿ ಅಳುವಿನಲ್ಲೇ ನಕ್ಕು ಹೊರಬಂದಳು.
ಲಕ್ಷ್ಮಕ್ಕನೂ ಹೊರಬಂದಳು.
ಬಾಗಿಲು ಮುಂದು ಮಾಡಿದಳು.
ಶಬರಿ ಒಬ್ಬಳೇ ಒಳಗೆ ಕೂತಳು.
ಕೈಯ್ಯಲ್ಲಿ ಸೂರ್ಯನ ಭಾವಚಿತ್ರ.
ಕರೆದತ್ತ ಕೊಂಡೊಯ್ಯುವ ನೆನಪಿನ ಚಕ್ರ.

ಒತ್ತಿ ಬರುವ ನೆನಪಲ್ಲಿ ಅತ್ತಳು.
ಸಂಕಟದ ಸೆಳೆತದಲ್ಲಿ ಎದ್ದಳು.
ತೋಪಿನತ್ತ ಹೊರಟಳು.
ಹೊಂಗೆ ಹುಣಿಸೆಗಳ ತೋಪು
ಫಲಭರಿತ ಮರಗಳ ಗುಂಪು
ಜೀವಶಕ್ತಿಯ ಹುರುಪು.
ಶಬರಿ ಬಂದಳು ಒಳಗೆ ಅಳುತ್ತ.
ಅಡವಿಯಂಥ ತೋಪು ಹೊಕ್ಕಳು.

**'ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆನು**
**ಗಿಡುಗಿಡುದಪ್ಪದೆ ಬೇಡಿದೆನೆನ್ನಂಗಕ್ಕೆಂದು**
**ಅವು ನೀಡಿದಳು ತಮ್ಮ ಲಿಂಗಕ್ಕೆಂದು'**

ಒಳಗೆಲ್ಲ ಓಡಾಡಿದಳು, ಮರಗಿಡಗಳ ಮುಟ್ಟಿದಳು.
ಕಳವಳದ ಕನಸು ಕಟ್ಟಿದಳು.

ಕೊಂಬೆ ತುದಿಯ ಹಕ್ಕಿಗಳನ್ನು, ಹಾರಾಡುವ ಆಸೆಗಳನ್ನು,
ನಡೆದಾಡುವ ಕಣ್ಣುಗಳನ್ನು, ಕೇಳಿದಳು.

**‘ಚಿಲಿಪಿಲಿ ಎಂದೋದುವ ಗಿಳಿಗಳಿರಾ!**
**ನೀವು ಕಾಣಿರೇ? ನೀವು ಕಾಣಿರೇ?**
**ಸರವೆತ್ತಿ ಪಾಡುವ ಕೋಗಿಲೆಗಳಿರಾ?**
**ನೀವು ಕಾಣಿರೇ? ನೀವು ಕಾಣಿರೇ?**
**ಎರಗಿ ಬಂದಾಡುವ ತುಂಬಿಗಳಿರಾ!**
**ನೀವು ಕಾಣಿರೇ? ನೀವು ಕಾಣಿರೇ?**
**ಗಿರಿ ಗಹ್ವರದೊಳಗಾಡುವ ನವಿಲುಗಳಿರಾ!**
**ನೀವು ಕಾಣಿರೇ? ನೀವು ಕಾಣಿರೇ?’**

ಶಬರಿಯು ಮರಮರದಲ್ಲೂ ಜೀವಕಂಡಳು. ಮುಟ್ಟಿದಳು.
ಮುಟ್ಟಿದ್ದೇ ಮಾತು. ಮಾತೆಲ್ಲ ಮೌನ.

**‘ವನವೆಲ್ಲ ನೀವೆ**
**ವನದೊಳಗಣ ದೇವ ತರುವೆಲ್ಲ ನೀವೆ**
**ತರುವಿನೊಳಗಾಡುವ ಖಗಮೃಗವೆಲ್ಲ ನೀವೆ**
**ಸರ್ವಭರಿತವಾಗಿ ಎನಗೇಕೆ ಮುಖದೋರೆ?’**

ಶಬರಿಯ ಭಾವದ ಒಡಲು ತುಂಬುತ್ತಿತ್ತು
ಉಕ್ಕುವ ಸಿಕ್ಕುಗಳು; ಕಾಡುವ ಬೆಕ್ಕುಗಳು.
ಒಂಟಿಜೀವವೇ ಒಳಗೆಂಥ ಚಿತ್ತಾರ!
ಸೂರ್ಯನ ಉತ್ತರ.

ಶಬರಿ ಮರವೊಂದರ ಬುಡದಲ್ಲಿ ಕೂತಳು.
ಬೇರುಬಿಗಿದಪ್ಪಿ ಕನಸಿನ ಪ್ರಶ್ನೆಗಳು;
ಒತ್ತರಿಸಿ ಬಂದ ಉತ್ತರದಲ್ಲಿ ಕಣ್ಣು ಮುಚ್ಚಿಕೊಂಡಳು.

**'ಕಾಣುತ್ತ ಕಾಣುತ್ತ**
**ಕಂಗಳ ಮುಚ್ಚಿದೆ ನೋಡವ್ವ!**
**ಕೇಳುತ್ತ ಕೇಳುತ್ತ**
**ಮೈಮರೆದೊರಗಿದೆ ನೋಡವ್ವ!**
**ಹಾಸಿದ ಹಾಸಿಗೆಯ ಹಂಗಿಲ್ಲದೆ ಹೋಯಿತ್ತು ಕೇಳವ್ವ!**
..............................
**ಕೂಡುವ ಕೂಟವ ನಾನೇನಂದರಿಯದೆ**
**ಮರೆದೆ ಕಾಣವ್ವ!'**

"ಸ್ಯಬರಿ..... ಸ್ಯಬರಿ..."

ಶಬರಿ ಮುಚ್ಚಿದ ಕಣ್ಣು ತೆರೆಯಲಿಲ್ಲ.

"ಸ್ಯಬರವ್ವ ಸ್ಯಬರವ್ವ" ಎಂದು ಯಾರೊ ಮೃದುವಾಗಿ ಮೈಮುಟ್ಟಿ ಅಲುಗಾಡಿಸಿದ ಅನುಭವ.

ಶಬರಿ ಕಣ್ಣು ತೆರೆದಳು.

ಎದುರಿಗೆ ಅಪ್ಪ ಕೂತಿದ್ದ!

"ಯಪ್ಪ ಯಾವಾಗ್ ಬಂದೆ?"

"ಆಗ್ಲೇ ಬಂದೇ ಕಣವ್ವ. ಯಾಕವ್ವ ಮಗ್ಳೆ, ಇಂಗೊಬ್ಳೇ ಕುಂತಿದ್ದೀಯಾ?" ಶಬರಿಗೆ ಮಾತನಾಡಲು ಆಗಲಿಲ್ಲ. ಅಳತೊಡಗಿದಳು

"ಅಳ್‌ಬ್ಯಾಡ ಕಣವ್ವ. ಅಳ್‌ಬ್ಯಾಡ. ವೊಟ್ಟೇಗ್ ಸರ್‍ಯಾಗ್ ತಿನ್ನಲ್ಲ ನೋಡು. ಅದಕ್ಕೆ ತೊಳಿಸ್ದಂಗಾಗಿರ್‍ತೈತೆ. ನೀನೇನೂ ಸಿಂತೆ ಮಾಡ್‌ಬ್ಯಾಡ ಕಣವ್ವ. ನಿನ್ ಜತೇಗ್ ನಾನಿವ್ನಿ"– ತಿಮ್ಮರಾಯಿ ಸಮಾಧಾನಿಸಿದ.

ಅಪ್ಪನ ಅಕ್ಕರೆಯಲ್ಲಿ ಗಳಗಳನೆ ಅತ್ತಳು.

"ಯೇ ಇದಕ್ಕೆಲ್ಲ ಅಳ್ತಾರೇನವ್ವ. ಸೂರ್ಯಪ್ಪ ಬಂದೇ ಬತ್ತಾನೆ. ಬಾ ಎದ್ದೇಳು" ಎಂದು ಕೈ ಹಿಡಿದು ಏಳಿಸಿದ.

ಶಬರಿಯನ್ನು ಮರಗಳ ನಡುವೆ ಕರೆತಂದ.

ಹುಣಿಸೆಮರವೊಂದರ ಬಳಿ ನಿಂತ; ನೋಡಿದ.

ಶಬರಿಯು ಇಲ್ಲಿ ನಿಂತದ್ದೇಕೆಂದು ಕೇಳುವ ಮುನ್ನವೇ ಐದಾರು ಎಳೆ ಹುಣಿಸೆಕಾಯಿಗಳನ್ನು ಕಿತ್ತ. ಶಬರಿ ನೋಡುತ್ತಿದ್ದಳು.

"ಎಳೆ ಉಣಿಸೇಕಾಯಿ; ಬೋಲ್ ಚಂದ. ತಿನ್ನವ್ವ" ಎಂದು ಆಕೆಗೆ ಕೊಟ್ಟ.

ಏನು ಹೇಳಬೇಕೆಂದು ತೋಚಲಿಲ್ಲ ಅವಳಿಗೆ.

ತೋಪಿನ ತುಂಬ ತಳಮಳಗೊಂಡ ಮನಸ್ಸು.

"ಆಮ್ಯಾಕ್ ತಿಂತೀನಿ ಕಣಪ್ಪ" ಎಂದಳು.

"ವೋಗ್ಲಿ, ಸೆರಿಗ್ನಾಗ್ ಕಟ್ಕಳವ್ವ"

ಸೆರಗಿನಲ್ಲಿ ಕಟ್ಟಿಕೊಳ್ಳುತ್ತಲೇ ಒಂದು ಹುಣಿಸೇಕಾಯನ್ನು ಹಾಗೇ ಇಟ್ಟುಕೊಂಡಳು. ಅಪ್ಪ ನೋಡುತ್ತಿರುವಂತೆ ತಿನ್ನತೊಡಗಿದಳು.

ಮಗಳು ಬಾಯಿ ಚಪ್ಪರಿಸಿ ತಿನ್ನುವುದನ್ನು ನೋಡಿದ ತಿಮ್ಮರಾಯಿಗೆ ಕೊರೆಯುವ ಸಂತೋಷ; ಖಿನ್ನತೆಯ ಹೊರವೇಷ.

ಶಬರಿಯನ್ನು ಹಟ್ಟಿಯವರೆಗೆ ಬಿಟ್ಟು ತಿಮ್ಮರಾಯಿ "ನಾನಾಮ್ಯಾಕ್ ಬತ್ತೀನಿ" ಎಂದು ಹೊರಟ.

ತಿಮ್ಮರಾಯಿ ಕತ್ತಲಾದ ಮೇಲೆ ಬಂದ.

ಕತ್ತಲಾಗಿ ಬರಲಿಲ್ಲ; ಬೆಳಕಾಗಿ ಬರಲಿಲ್ಲ.

ಕತ್ತಲುಬೆಳಕುಗಳ ತುಯ್ದಾಟದಂತೆ ತೂರಾಡುತ್ತ ಬಂದ.

ಶಬರಿಗೆ ಗೊತ್ತಾಯಿತು– ಅಪ್ಪ ಕುಡಿದು ಬಂದಿದ್ದಾನೆ.

ಆಕೆ ಏನೂ ಮಾತಾಡಲಿಲ್ಲ.

ಊಟಕ್ಕೆ ಇಟ್ಟಳು. ಮಾತಾಡದೆ ಊಟ ಮಾಡಿದ.

ಮೂಲೆಗೆ ಹೋಗಿ ಹರಿದ ದುಪ್ಪಟಿ ಹೊದ್ದುಕೊಂಡು ಮಲಗಿದ.

"ವೊಟ್ಟೆ ತುಂಬ ಉಂಡ್ ಮಲೀಕಳವ್ವ. ಬರೀವೊಟ್ಟೇಗಿರ್‌ಬ್ಯಾಡ. ಸೂರ್ಯ ಬಂದೇ ಬತ್ತಾನೆ. ಉಂಡ್ ಮಲೀಕ"–ತಿಮ್ಮರಾಯಿ ಮಮತೆಯ ಮಾತಾಡಿ ಮಲಗಿಕೊಂಡ.

ಶಬರಿ ದೀಪದ ಬೆಳಕು ನೋಡುತ್ತ ಕೂತಳು.

ಹೊರಗೆ ಗಾಳಿಯ ಸದ್ದು.

ಸದ್ದಿಲ್ಲದೆ ಉರಿಯುವ ದೀಪ

ಶಬರಿಯ ನೋಟದೊಳಗೆ ಸೂರ್ಯನ ಕೂಟ.

ಕೂಟದ ನೆನಪಲ್ಲಿ ಕೂತ ಶಬರಿ.

ಲಕ್ಷ್ಮಕ್ಕ ಬಂದು ಕೂಗಿದಾಗ ಎಚ್ಚರ.

"ಬಾರಕ್ಕ"–ಶಬರಿ ಕರೆದಳು.

ಹತ್ತಿರ ಬಂದು ಕೂತ ಲಕ್ಷ್ಮಕ್ಕ "ಉಂಡೇನವ್ವ" ಎಂದು ಕೇಳಿದಳು.

ಶಬರಿಯ ಮೌನ.

"ಇಂಗೆಲ್ಲ ಉಪಾಸ ಇರ್‌ಬಾರ್ದು ಕಣವ್ವ" ಎಂದ ಲಕ್ಷ್ಮಕ್ಕ ತಾನೇ ಎದ್ದು

ಹೋಗಿ ಮುದ್ದೆ ಸಾರು ತಂದು ಮುಂದಿಟ್ಟಳು. "ತಗಾ ತಿನ್ನವ್ವ" ಎಂದು ಒತ್ತಾಯಿಸಿದಳು.

ಅಕ್ಕನ ಅಕ್ಕರೆ; ಶಬರಿ ಮರು ಮಾತಾಡದೆ ತಿಂದಳು.

ಉಂಡಿದ್ದಾದ ಮೇಲೆ ಲಕ್ಷ್ಮಕ್ಕ "ಯಾವ್ದುಕ್ಕೂ ಸಿಂತೆ ಮಾಡ್‌ಬ್ಯಾಡ. ಏನಿದ್ರೂ ನನ್ತಾವ್ ಯೇಳ್ಕ. ಏನು?" ಎಂದಳು.

"ನೀನಿರ್ವಾಗ ನಂಗೇನ್ ಬಯ ಬಿಡಕ್ಕ" ಎಂದಳು ಶಬರಿ.

"ಇನ್‌ಮ್ಯಾಕೆ ಇಂಗೆಲ್ಲ ಉಪಾಸ ಇರ್‌ಬಾರ್ದು. ತಿಳೀತ?

"ತಿಳೀತು."

"ಇವಾಗ್ ಸುಮ್ಕೆ ಮಲೀಕ. ಸೂರ್ಯಪ್ಪ ಬಂದೇ ಬತ್ತಾನೆ. ಅವ್ನನ್ನೇ ನೆಪ್ತಿ ಮಾಡ್ಕಂಡು ನಿದ್ದೆ ವೋಗು. ದ್ಯಾವ್ರ್‌ತರಾ ಕನಸ್ನಾಗ್ ಬಂದು ಬಯಬೀಳ್‌ಬ್ಯಾಡ ಬತ್ತೀನಿ–ಅಂಬ್ತ ಯೇಳ್ತಾನೆ."

ಶಬರಿ ನಕ್ಕಳು.

ಲಕ್ಷ್ಮಕ್ಕ ತಲೆ ನೇವರಿಸಿ ಹೊರಟಳು.

ಶಬರಿ ಬಾಗಿಲು ಮುಂದು ಮಾಡಿ ಬಂದಳು. ಲಕ್ಷ್ಮಕ್ಕನ ಕೊನೆಯ ಮಾತು ಮನಸ್ಸಿನಲ್ಲಿ ನೆಟ್ಟಿತ್ತು. ದೀಪ ಆರಿಸಿ ಮಲಗಿದಳು.

ಬೆಳಗ್ಗೆ ಎದ್ದಾಗ ತಿಮ್ಮರಾಯಿ ಇರಲಿಲ್ಲ. ಹೊರಗೆ ಇರಬಹುದೆಂದು ಬಂದು ನೋಡಿದಳು; ಇರಲಿಲ್ಲ. ಕಟ್ಟೆ ಮೇಲೆ ಕೂತಿದ್ದ ಸಣ್ಣೀರ "ನವಾಬಣ್ಣ ಇವತ್ತೇನಾರ ಬರ್‌ಬವ್ದಲ್ವೇನವ್ವ?" ಎಂದು ಕೇಳಿದ. "ಇವತ್ತೊ ನಾಳೇನೊ ಬತ್ತಾನೆ" ಎಂದು ತಿಮ್ಮರಾಯಿ ಎಲ್ಲಿರಬಹುದೆಂದು ಅತ್ತಿತ್ತ ನೋಡಿದಳು.

"ತಿಮ್ಮರಾಯಪ್ಪ ತೋಪಿನ್‌ತಾವೋಗ್ತೀನಿ ಅಂಬ್ತ ವೋದಕಣ್ರವ್ವ"– ಇನ್ನೊಬ್ಬ ಹೇಳಿದ. ಸಣ್ಣೀರನೂ ಅದನ್ನೇ ಹೇಳಿ ಒಂದು ಮಾತು ಕೇಳಿದ– "ಇವತ್ತು ಒಡೇರು ಕೂಲಿಕೆಲ್ಸಕ್ ಬರೇಳವ್ರೆ, ವೋಗಾನ ಅಲ್ವೇನವ್ವ?"

"ಅವ್ರೇ ಕರುದ್‌ಮ್ಯಾಗೆ ಇಲ್ಲ ಅಂಬಾದ್ಯಾಕೆ? ಅದೂ ಮಾಡ್ಬೇಕು ಇದೂ ಮಾಡ್ಬೇಕು. ಅವ್ರೇ ಬರ್‌ಬ್ಯಾಡ್ರಿ ಅಂದಾಗ ಅದೇನಾಗ್ತೈತೊ ನೋಡಾನ" ಎಂದು ಶಬರಿ ಸ್ಪಷ್ಟಪಡಿಸಿದಳು. ಒಳಗೆ ಹೋದಳು.

ಶಬರಿಯ ಹಿಂದೆಯೇ ಲಕ್ಷ್ಮಕ್ಕ ಬಂದಳು.

"ತಗಾ, ರಾಗಿ ಗಂಜಿ ಮಾಡಿವ್ನಿ. ಒಳ್ಳೇದು; ವೊಟ್ಟೇಗ್ ತಂಪು; ಕುಡಿ" ಎಂದು ಕುಡಿಕೆಯನ್ನು ಕೈಗಿತ್ತಳು.

ಭಾವ ತುಂಬಿದ ಕುಡಿಕೆ.

ಮಾತಿಲ್ಲದೆ ತೆಗೆದುಕೊಂಡಳು; ಕುಡಿದಳು.

"ನಿದ್ದೆ ಚಂದಾಗ್ ಮಾಡ್ದೇನವ್ವ?"

"ಊ್ಞ ಕಣಕ್ಕ"

"ಕನಸ್ನಾಗೆಲ್ಲ ಸೂರ್ಯಪ್ಪ! ಅಲ್ವಾ?"

"ವೋಗಕ್ಕ"–ಶಬರಿ ನಾಚಿಕೊಂಡಳು.

"ಯಾವಾಗ್ಲೂ ಇಂಗಿರ್‌ಬೇಕು ನೋಡು. ಎಲ್ಲಿ ಯೇಳು; ಏನಾತು ಕನಸ್ನಾಗೆ."

"ವೋಗಕ್ಕ ಅಂದ್ರೆ"–ಮತ್ತೆ ನಾಚಿಕೆ.

ಲಕ್ಷ್ಮಕ್ಕ ಶಬರಿಯ ಕೆನ್ನೆ ನೇವರಿಸಿ "ಏನ್ ಕನಸ್‌ಬಿತ್ತು ಯೇಳೇ ತಂಗೆವ್ವ"ಎಂದಳು

ಶಬರಿ ಒಳಗಿಳಿದಳು.

**'ಅಕ್ಕ ಕೇಳವ್ವ, ಅಕ್ಕಯ್ಯ, ನಾನೊಂದು ಕನಸ ಕಂಡೆ!**
**ಅಕ್ಕಿಯಡಕೆ ಓಲೆ ತೆಂಗಿನಕಾಯ ಕಂಡೆ!**
**ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು**
**ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವ!**
**ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿವೆನು!'**

"ಯಾಕ್ ಅಂಗ್ ಸುಮ್ಕೆ ನಿಂತ್ಕಂಡೆ. ಏನಾತು ಯೇಳು ಕನಸ್ನಾಗೆ?"–ಲಕ್ಷ್ಮಕ್ಕ ಮತ್ತೆ ಕೇಳಿದಾಗ ಶಬರಿ ಎಚ್ಚೆತ್ತಳು.

"ನೀನೇ ಯೇಳಿದ್ದಲ್ಲ ಸೂರ್ಯ ಕನಸ್ನಾಗೆ ದ್ಯಾವ್ರ ತರಾ ಬತ್ತಾನೆ ಅಂಬ್ತ..."

ಶಬರಿ ಹೇಳುತ್ತಿರುವಾಗಲೇ ಲಕ್ಷ್ಮಕ್ಕ "ನಾನೇಳಿದ್ದು ದಿಟ ಆತೋ ಇಲ್ವೋ?" ಎಂದು ತುಂಟ ನಗೆ ಬೀರಿದಳು.

"ವೋಗ್ಲಿ, ಕನಸ್ನಾಗೆ ಏನೇನಾತು ಯೇಳವ್ವ?"

"ಅದೆಂಗ್ ಎಲ್ಲಾ ಯೇಳಾಕಾಯ್ತದೆ!"

"ಅಂಗಾರ್ ಯೇಳಾಕಾಗ್ದೆ ಇರಾದೆಲ್ಲ ಆಗೈತೆ ಅನ್ನು."

"ವೋಗಕ್ಕ; ನಿಂದೊಳ್ಳೆ ನಗ್ಸಾರಾಟ ಆತು."

"ಯಾಕವ್ವ? ಅಂಗೆಲ್ಲ ಕೇಳ್ದೆ ಅಂಬ್ತ ಬ್ಯಾಸ್ರಾನಾ?"

"ಬಿಡ್ತು ಅನ್ನು. ಅಂಗಂದ್ರೆ ನನ್ ನಾಲ್ಗೆ ಬಿದ್ದೋಗ್ಲಿ."

"ಅಂಗೆಲ್ಲ ಯಾಕೆ ಅಂಬ್ತೀಯ ನನ್ನವ್ವ. ನೀನ್ ಚಂದಾಗಿದ್ರೆ ಆಟೇ ಸಾಕು."

"ನಿನ್ನಂತ ಅಕ್ಕಯ್ಯ ಇರ್ವಾಗ ನಂಗೇನಾಗ್ತೈತೆ. ಚಂದಾಗೇ ಇರ್ತೀನಿ."

"ಅಂಗಿರ್‌ಬೇಕು ನೋಡು. ಕನಸ್ನಾಗೆ ಸೂರ್ಯಪ್ಪ ಚಂದಾಗೇ ನಡಿಸ್ಕಂಡಿರ್ಬೇಕು"ಎಂದು ಮತ್ತೆ ತಮಾಷೆ ಮಾಡಿದಳು.

ಕನಸಿನ ಕೂಟದ ಮಾತು ಮನಸ್ಸಲ್ಲೇ ಇತ್ತು.

ಹೇಳಲು ಹಾತೊರೆದರೂ ನಾಲಿಗೆ ನಾಚಿಕೊಂಡಿತ್ತು.

**'ಎನ್ನ ಮನವ ಮಾರುಗೊಂಡನವ್ವ!**
**ಎನ್ನ ತನುವ ಸೂರೆಗೊಂಡನವ್ವ!**
**ಎನ್ನ ಸುಖವನ್ನೊಪ್ಪುಗೊಂಡನವ್ವ!**
**ಎನ್ನಿರವನಿಂಬುಗೊಂಡನವ್ವ!**

ಶಬರಿಯ ಮುಖದಲ್ಲೇ ಮಾತುಗಳನ್ನು ಓದಿಕೊಂಡ ಲಕ್ಷ್ಮಕ್ಕ "ಯಾವಾಗ್ಲೂ ಇಂಗೇ ಇರ್ಬೇಕು. ಯಾಕ್ ಗೊತ್ತೇನವ್ವ? ಕನಸಿಲ್ದೆ ಕಾಯಾಕಾಗಲ್ಲ ಕಣವ್ವ!" ಎಂದು ತಲೆ ನೇವರಿಸಿ ಹೊರಟಳು.

ಶಬರಿ ಭಾವುಕಳಾಗಿದ್ದಳು.

ಅಪ್ಪನಿಗೆಂದು ಅಡುಗೆ ಮಾಡಿಟ್ಟಳು. ಅಪ್ಪ ಬರಲಿಲ್ಲ. ಹುಚ್ಚೀರ ಬಂದ. ಆತನನ್ನು ಅಪ್ಪ ಎಲ್ಲೆಂದು ಕೇಳಿದಳು. ಗೊತ್ತಿಲ್ಲವೆಂದ. ಆತನೊಂದಿಗೆ ಹೊರಟಳು.

ಬಂದು ನೋಡಿದರೆ ತಿಮ್ಮರಾಯಿ ತೋಪಿನಲ್ಲಿದ್ದ.

ತೋಪಿನೊಳಗೆ ಬಂದ ಕೂಡಲೇ ಶಬರಿಗೆ ವಿಚಿತ್ರ ಅನುಭವ. 'ನೀವು ಕಾಣಿರೇ ನೀವು ಕಾಣಿರೇ' ಎಂದು ಮರವನ್ನು ಅಪ್ಪಿಕೊಳ್ಳುವ ಕಾತರ; ಕಳವಳ.

ತಿಮ್ಮರಾಯಿ "ಯಾಕವ್ವ ಇಲ್ಲೀಗಂಟ ಬಂದೆ. ನಾನೇ ಬತ್ತಿದ್ದೆ" ಎಂದು ತನ್ನಾರಕ್ಕೆ ತಾನು ಕೂತ.

ತಿಮ್ಮರಾಯಿ ಮಾತಾಡಲಿಲ್ಲ.

"ಯಾಕಪ್ಪ ಇಂಗಿದ್ದೀಯ?"–ಶಬರಿ ಕೇಳಿದಳು.

"ನಂಗೇನಾಗೈತವ್ವ? ಗುಂಡ್‌ಕಲ್ಲಿದ್ದಂಗಿವ್ನಿ"– ತಿಮ್ಮರಾಯಿ ನಗುತ್ತ ಹೇಳಿದ. ಆದರೆ ಆ ನಗುವಿನಲ್ಲಿ ಸಹಜತೆ ಇರಲಿಲ್ಲ; ಕೊರೆಯುವ ಚಳಿಗೆ ಹೊದ್ದುಕೊಂಡ ಹಳೇ ದುಪ್ಪಟಿಯಂತಿತ್ತು.

ತಾನು ಒಡೆಯನಿಗೆ–ಸೂರ್ಯನೇ ನನ್ನ ಗಂಡ–ಎಂದು ಹೇಳಿದ್ದು ಅಪ್ಪನಿಗೆ ಗೊತ್ತಾಗಿರಬಹುದೆ? ಒಡೆಯ ಮತ್ತೆ ಒತ್ತಾಯ ತಂದಿರಬಹುದೆ?–ಹೀಗೆ ಶಬರಿಗೆ ಹತ್ತಾರು ಯೋಚನೆ.

"ಊರಾಕೇನಾರ ವೋಗಿದ್ದೇನಪ್ಪ?"–ಕೇಳಿದಳು.

"ನಂಗೇನೈತವ್ವ ಕೆಲ್ಸ ಅಲ್ಲಿ?"

"ಒಡೇರ್ ವೊಲತ್ತಾವೇನಾರ ವೋಗಿದ್ದ?"

"ಈ ತೋಪ್ ಬಿಟ್ಟು ಎಲ್ಲೂ ವೋಗಿಲ್ಲ ಕಣವ್ವ."

"ತೋಪ್‌ಗೆ ಯಾರಾನ ಬಂದಿದ್ರಾ?"

"ಒಂದ್ ನರಪಿಳ್ಳೇನೂ ಸುಳ್ದಿಲ್ಲ."

ಶಬರಿಗೆ ಖಚಿತವಾಯಿತು. ಅಪ್ಪನಿಗೆ ಯಾವುದೂ ಗೊತ್ತಿಲ್ಲ. ಒಡೆಯ ಏನೂ ಹೇಳಿಲ್ಲ. ಇದು ಖಾತರಿಯಾಯಿತು. ಮತ್ತೊಂದು ಪ್ರಶ್ನೆ ಕಾಯುತ್ತಿತ್ತು.

"ಲಚ್ಮಕ್ಕ ಏನಾರ ಯೇಳ್ತೇನಪ್ಪ?"

ತಿಮ್ಮರಾಯಿ ಶಬರಿಯ ಮುಖನೋಡಿ ಮೌನವಾದ. ಸುಂಕಟಕಟ್ಟೆಯಲ್ಲಿ ಸಂಕಟಪಡುವ ಸರುಹೊತ್ತು–ಮಾತು!

"ಯಾಕಪ್ಪ ಸುಮ್ಕಾದೆ?"

"ಯಾಕೂ ಇಲ್ಲವ್ವ, ಇವತ್ ಯಾಕ್ ಇಂಗೆಲ್ಲ ಕೇಳ್ತಾ ಇದ್ದೀಯ ಅಂಬ್ತ ಯೋಚ್ನೆ ಬಂತು. ಆಟೇಯ".

"ಯಾರಾನ ಮಾತಾಡಿ ನಿಂಗ್ ಬ್ಯಾಸ್ರ ಮಾಡವ್ರೇನೊ ಅಂಬ್ತ ಕೇಳ್ದೆ ಕಣಪ್ಪ. ಲಚ್ಮಕ್ಕ ನಂಗ್ ಆ ಕಾಯ್ಲೆ ಈ ಕಾಯ್ಲೆ ಅಂಬ್ತ ಏನಾರ ಎದ್ರಿಸ್ಯೆತೇನೊ ಅಂಬ್ತ....."

"ಇಲ್ಲ ಕಣವ್ವ. ನಂಗ್ ಯಾರೂ ಎದ್ರಿಸಿಲ್ಲ. ಇದು ನಮ್ ಯಿರೇರ್ ಬೆಳ್ಸಿದ್ ತೋಪಲ್ವ, ಅದ್ಕೇ ಬಂದ್ ಕುಂತ್ಕಂಡೆ. ನಡೀ ವೋಗಾನ" ಎಂದು ಎದ್ದ.

ಹೋಗುವುದಕ್ಕೆ ಮುಂಚೆ ಮರವೊಂದನ್ನು ಬಲವಾಗಿ ತಬ್ಬಿಕೊಂಡ. ಇದನ್ನು ಕಂಡ ಹುಚ್ಚೀರ ತಾನೂ ಒಂದು ಮರವನ್ನು ತಬ್ಬಿಕೊಂಡ.

ಶಬರಿ ಇಬ್ಬರನ್ನೂ ನೋಡುತ್ತ ನಿಂತಳು.

ಈ ತೋಪಿನಲ್ಲೇ ಕೈ ಹಿಡಿದಿದ್ದನಲ್ಲ ಆ ಚಂಡಾಳ.

ಆಸ್ತಿ, ಅಂತಸ್ತಿನ ಅಹಂಕಾರ; ಅಧಿಕಾರ.

ಮರುಳಾಗುತ್ತೇನೆಂದು ನಂಬಿದ ಮರುಳ!

ತನ್ನೊಳಗೆ ತಾನು ನಕ್ಕಳು ಶಬರಿ.

"ಯಪ್ಪಾ"

ಶಬರಿಯ ಆಪ್ತ ದನಿಯಿಂದ ಎಚ್ಚೆತ್ತ ತಿಮ್ಮರಾಯಿ ಮರವನ್ನು ಬಿಟ್ಟು ಮಗಳ ಹತ್ತಿರ ಬಂದ. ಆಕೆಯ ಜೊತೆ ಮೌನವಾಗಿ ಹೆಜ್ಜೆ ಹಾಕಿದ.

ಹುಚ್ಚೀರ ತೋಪಿನೊಳಗೆ ನಿಂತಿದ್ದ.
ತೋಪು ತಳಮಳವಾಗಿತ್ತು.
ಶಬರಿ ಕೂಗಿದಳು.
ಹುಚ್ಚೀರ ಹೆಜ್ಜೆ ಕಿತ್ತಿಡುತ್ತ ಬಂದ.
ಮಾತಿಲ್ಲ. ಕತೆಯಿಲ್ಲ; ಮೌನದ ನಡಿಗೆ.

* * *

ಮಾರನೇ ದಿನ ಬೆಳಗ್ಗೆ; ಹೊರಗೆ ಹೋಗಿದ್ದ ಹುಡುಗರು ಓಡೋಡಿ ಬಂದರು. ನಾ ಮುಂದು ತಾ ಮುಂದು ಎಂಬಂತೆ ಕಿರುಚಿದರು–

"ತೋಪೆಲ್ಲ ಕಡ್ದ್ ಆಕವ್ರೆ. ಒಂದ್ ಮರಾನೂ ಇಲ್ಲ. ಗಿಡಾನೂ ಇಲ್ಲ." ಗಾಬರಿಯಿಂದ ಎಲ್ಲ ಬಂದರು. ಶಬರಿ ಕಂಗಾಲಾಗಿ ಕೇಳಿದಳು–"ಏನ್ಲಾ ನೀವೇಳ್ತಿರಾದು. ಏನಾಗ್ಯೆತ್ರೊ ನಮ್ ತೋಪ್ಗೆ?"

"ಎಲ್ಲಾ ಕಡ್ದಾಕವ್ರೆ ಕಣಕ್ಕ. ಒಂದ್ ಮರಾನೂ ಬಿಟ್ಟಿಲ್ಲ."

ಏದುಸಿರು ಬಿಡುತ್ತ ಒಬ್ಬ ಹುಡುಗ ಹೇಳಿದ.

"ಏನಗ್ಯೆತೆ ನೋಡಾನ" ಎಂದ ಪೂಜಾರಪ್ಪ.

ತಿಮ್ಮರಾಯಿ ಮಾತಾಡದೆ ಮುಂದಡಿಯಿಟ್ಟ.

ಶಬರಿ ರಭಸವಾಗಿ ಹೊರಟಳು. ಎಲ್ಲರೂ ಬರುವಂತೆ ಕರೆದಳು.

ಒಟ್ಟಿಗೇ ಹೊರಟರು. ಬಂದು ನೋಡಿದರು.

ನಿಜ; ತೋಪು ನಾಶವಾಗಿತ್ತು! ಒಂದೇ ರಾತ್ರಿಯಲ್ಲಿ ನಾಶವಾಗಿತ್ತು! ಮರಗಳನ್ನು ಸಾಗಿಸಲಾಗಿತ್ತು! ಮರವನ್ನು ಕೊಯ್ದ ಮಿಷಿನ್‌ಗಳು ಮದಹತ್ತಿ ನಿಂತಿದ್ದವು! ಜೊತೆಗೆ ಪೋಲಿಸರ ದಂಡು.

ಶಬರಿಯಾದಿಯಾಗಿ ಎಲ್ಲರೂ ಗರಬಡಿದಂತೆ ನಿಂತರು.

ನೋಡುನೋಡುತ್ತಿದ್ದಂತೆ ಕಣ್ಣುಗಳು ತುಂಬಿನಿಂತವು.

ಶಬರಿ ಮರಗಳನ್ನು ಉದ್ದೇಶಿಸಿ ಸೂರ್ಯನ ನೆನಪಲ್ಲಿ 'ನೀವು ಕಾಣಿರೆ ನೀವು ಕಾಣಿರೆ" ಎಂದಿದ್ದಳು. ಈಗ ಪೋಲಿಸರನ್ನು ಉದ್ದೇಶಿಸಿ ಮರಗಳನ್ನು 'ನೀವು ಕಾಣಿರೆ ನೀವು ಕಾಣಿರೆ" ಎಂದು ಕೇಳುವ ಸ್ಥಿತಿ. ಅವರು ನೆಟ್ಟಿದ್ದ ಬೋರ್ಡೊಂದರ ಕಡೆ ಬೊಟ್ಟು ಮಾಡಿ ತೋರಿಸಿದರು.

ಅದು ಬಹುರಾಷ್ಟ್ರೀಯ ಕಂಪನಿಯೊಂದರ ನಾಮಫಲಕ!

"ಆ ಒಡೆಯ ಎಲ್ಲಿ?"–ಶಬರಿ ಕೇಳಿದಳು.

"ಯಾವ್ ಒಡೆಯರು?"–ಪೋಲಿಸ್ ಅಧಿಕಾರಿ ಕೇಳಿದ–"ಊರ್ನಲ್ಲಿರೊ ಹಳೆ ಒಡೆಯಾನೊ ಈ ಬೋರ್ಡ್ ಹಾಕಿರೊ ಹೊಸ ಒಡೆಯಾನೊ?"

"ಯಾರೋ ಒಬ್ಬ; ಈ ತೋಪಿನ್ ಜೀವ ತೆಗ್ದೋನು"– ಶಬರಿ ಸಂಕಟದಿಂದ ಸ್ಫೋಟಿಸಿದಳು.

"ಹಾಗೆಲ್ಲ ಅವ್ನು ಇವ್ನು ಅಂತ ಮಾತಾಡ್‌ಬೇಡ."

"ಇನ್ನೇನ್ ದ್ಯಾವ್ರು ಅಂಬ್ತ ಆರತಿ ಮ್ಯಾಡ್‌ಬೇಕ?"

"ಬಾಯಿಗ್ ಬಂದಂಗ್ ಮಾತಾಡಿದ್ರೆ ಕಂಬಿ ಎಣಸ್ಬೇಕಾಗುತ್ತೆ ಕಂಬಿ. ನಮಗೆ ಕಾನೂನ್ ಮುಖ್ಯ."

"ಮಾತಾಡ್ ಬಾರುದ್ದೇನ್ ಮಾತಾಡಿವ್ನೀ ನಾನು?"

"ನಿನ್ಗೆಲ್ಲ ವಿವರಣೆ ಕೊಡೋದು ನಮ್ ಕೆಲ್ಸ ಅಲ್ಲ."

ಮಾತುಕತೆ ಆಗುತ್ತಿದ್ದಾಗಲೇ ಉಳಿದವರಲ್ಲಿ ಆವೇಶ ಆವರಿಸುತ್ತಿತ್ತು. ಸಣ್ಣೀರ "ಸುಮ್ಕೆ ಯಾಕವ್ವ ಮಾತಾಡಾದು? ಮುಂದೇನ್ ಮಾಡ್‌ಬೇಕೊ ಅದನ್ ಮಾಡಾನ. ಯೇಳವ್ವ ಏನ್ ಮಾಡ್‌ಬೇಕು" ಎಂದು ಕೇಳಿದ.

"ಅಳೇ ಒಡೆಯಾನೊ ವೊಸಾ ಒಡೆಯಾನೊ, ಯಾರಾನ ಬರಾವರ್ಗೂ ಇಲ್ಲೇ ಕುಂತ್ಕಮಾನ. ಅದೇನ್ ಮಾಡ್ತಾರೊ ಮಾಡ್ಲಿ" ಎಂದು ಶಬರಿ ನಿರ್ಧಾರಕವಾಗಿ ನುಡಿದಳು.

"ಮತ್ತೇನ್ ಕಣಿಕೇಳಾದು. ಕಡ್ದಿರಾ ಬುಡಾ ಐದಾವಲ್ಲ. ಅಲ್ಲೆ ಕುಂತ್ಕಮಾನ ನಡೀರಿ" ಎಂದು ಸಣ್ಣೀರ ಹುರಿದುಂಬಿಸಿದ.

ಶಬರಿ ಮುನ್ನುಗ್ಗುತ್ತಿದ್ದಂತೆ ಎಲ್ಲರೂ ಹೆಜ್ಜೆಯಿಟ್ಟರು. ಅಷ್ಟರಲ್ಲಿ ನೂರಾರು ಪೋಲಿಸರು ಅಡ್ಡನಿಂತರು.

"ಮುಂದಕ್ ಹೆಜ್ಜೆ ಇಟ್ರೆ ಎಲ್ರನ್ನೂ ಎತ್‌ಹಾಕ್ಕಂಡ್ ಹೋಗ್ತೀನಿ" ಎಂದು ಅಧಿಕಾರಿ ಘೋಷಿಸಿದ. ಅದೇ ಉಸಿರಿನಲ್ಲಿ ಪೋಲಿಸರು ಎಲ್ಲರನ್ನೂ ಹಿಂದಕ್ಕೆ ನೂಕಿದರು. ಶಬರಿ ಎಲ್ಲರಿಗೂ ಹೇಳಿದಳು– "ಇವ್ರ್ ಬುಡುತ್ತಾವ್ ಬಿಡ್ದೇ ಇದ್ರೆ ಇಲ್ಲೇ ಕುಂತ್ಕಮನ. ಕುಂತ್ಕಳ್ರಿ."

ಎಲ್ಲರೂ ಕೂತರು. "ಈ ಭೂಮಿ ನಮ್ಮದು" ಹಾಡು ಹೇಳತೊಡಗಿದರು. ಪೋಲಿಸ್ ಅಧಿಕಾರಿ ಎಚ್ಚರಿಸಿದಷ್ಟೂ ಇವರ ಹಾಡು ಎತ್ತರಕ್ಕೇರಿತು. ಕಡೆಗೆ ಅಧಿಕಾರಿ ಅಧೀನ ಇನ್ಸ್‌ಪೆಕ್ಟರ್ ಒಬ್ಬನನ್ನು ಕರೆದು ಕಿವಿಯಲ್ಲಿ ಏನೋ ಹೇಳಿದ. ಆತ ಜೀಪ್‌ನಲ್ಲಿ ಹೊರಟ.

ಹಾಡು ಹೇಳುತ್ತ ಕೂತೇ ಇದ್ದರು.

ಹೋದ ಜೀಪ್ ವಾಪಸ್ ಬಂದಿತು. ಇನ್ಸ್‌ಪೆಕ್ಟರ್ ಮೇಲಧಿಕಾರಿಗೆ ವರದಿ ಒಪ್ಪಿಸಿದ. ಆಮೇಲೆ ಅಧಿಕಾರಿ ಹೇಳಿದ–

"ನನ್ ಮಾತ್ ಕೇಳ್ರಿ. ನಿಮ್ಮೂರ್ ಒಡೆಯರು ಊರಲ್ಲಿಲ್ಲ. ಎಲ್ಲಾ ಒಟ್ಟಿಗೆ ಬೆಂಗಳೂರಿಗೆ ಹೋಗಿದಾರೆ. ನೀವಿಲ್ಲಿ ಎಷ್ಟು ಹೊತ್ತು ಕೂತ್ರೂ ಏನೂ ಆಗೋದಿಲ್ಲ. ನಾನ್ ಅವ್ರಿಗೆ ಏನ್ ನಡೀತು ಅಂತ ತಿಳುಸ್ತೀನಿ. ಈಗ ಎದ್ ಹೋಗಿ ನಾಳೆ ಅವ್ರ್ ಬಂದಾಗ ಮಾತಾಡಿ."

ಶಬರಿಯ ಸುತ್ತಮುತ್ತ ಸಣ್ಣೀರ, ಪೂಜಾರಪ್ಪ ಮುಂತಾದವರೆಲ್ಲ ಕೂತು ಸಮಲೋಚಿಸಿದರು. ಪೂಜಾರಪ್ಪ "ಎಂಗಿದ್ರೂ ಇವತ್ತೊ ನಾಳೇನೊ ನವಾಬ್ ಬತ್ತಾನೆ. ಆಮೇಲ್ ಏನ್ ಮಾಡಾದು ಅಂಬ್ತ ಕೇಳ್ಕಮಾನ. ಅಲ್ಲೀಗಂಟ ಸುಮ್ಕಿರಾನ." ಎಂದು ಕೊಟ್ಟ ಸಲಹೆ ಅನೇಕರಿಗೆ ಸರಿಯೆನ್ನಿಸಿತು. ಶಬರಿ ಮಾತ್ರ ಮಾತಾಡಲಿಲ್ಲ. ಸೂರ್ಯ, ನವಾಬ ಇಲ್ಲದಾಗ ತಮಗೆ ತೋಚಿದಂತೆ ಮಾಡುವುದು ಸರಿಯಲ್ಲವೆಂಬ ಅಭಿಪ್ರಾಯಕ್ಕೆ ಎಲ್ಲರೂ ಬಂದರು.

## ೧೮

ತಿಮ್ಮರಾಯಿ ಒಬ್ಬನೇ ಕೂತಿದ್ದ.

ಕಾಂಡ ಕೊಂಬೆಗಳಿಲ್ಲದ ಬುಡಗಳು–ರುಂಡ ಮುಂಡಗಳಿಲ್ಲದ ಪಾದಗಳು!

ಅವನ್ನೂ ಎತ್ತಿ ಹಾಕುತ್ತಾರೆ. ಮಟ್ಟಸ ಮಾಡುತ್ತಾರೆ.

ಇಷ್ಟು ಸಲೀಸಾಗಿ ಶಬರಿಯೊಳಗಿನ ಹೊಸ ಜೀವವನ್ನು ತೆಗೆಯಲಾದೀತೆ?

ಸೂರ್ಯ ಬರದಿದ್ದರೆ ಹೊಸ ಜೀವದ ಗತಿ? ಶಬರಿಯ ಗತಿ?

ಈಗ ಎಲ್ಲ ಅಲ್ಲೋಲ–ಕಲ್ಲೋಲ–ಬಂಡೆಬಿದ್ದ ಬಾವಿ!

ಕಪಿಲೆಯ ಬಾನಿ ನೀರಿಗೆ ಇಳಿದೀತೆ?

ನೀರು ತುಂಬಿಕೊಂಡು ಮೇಲೇರೀತೆ?

ಕಾಲುವೆ ತುಂಬ ನೀರು ಹರಿಸೀತೆ?

ಇಲ್ಲವೆ–ಬಂಡೆಯ ಮೇಲೊಂದು ಬಂಡೆ?

ಆಗ ಶಬರಿ ಏನಾದಾಳು? ಹಟ್ಟಿ ಏನಾದೀತು?

ಹಟ್ಟಿಯ ಹಿರಿಯನಾಗಿ ಯಾರನ್ನೂ ತಡೆಯಲಿಲ್ಲ. ಒಳಗೆ ಬಂದ ಸೂರ್ಯನನ್ನು ಬೇಡ ಎನ್ನಲಿಲ್ಲ. ಶಬರಿಯ ಆಸೆಗೆ ಅಡ್ಡಿಮಾಡಲಿಲ್ಲ. ಈಗಲೂ ಅಷ್ಟೆ. ಮಗಳ ಹಾದಿಯಲ್ಲಿ ಹೂವು ಚೆಲ್ಲಬೇಕು....

ಒಂದು ವೇಳೆ ಸೂರ್ಯ ಬರದಿದ್ದರೆ?

ತಿಮ್ಮರಾಯಿಗೆ ತಡೆದುಕೊಳ್ಳಲಾಗಲಿಲ್ಲ.

ಎದ್ದು ಹೊರಟ. ಬೆಟ್ಟಗುಡ್ಡಗಳಲ್ಲಿ ಒಬ್ಬಂಟಿಯಾಗಿ ಓಡಾಡಿದ.

ರಾತ್ರಿ ಹೊತ್ತಾದ ಮೇಲೆ ಮನೆಗೆ ಬಂದ.

ಬಂದಾಗ ಹೆಂಡದ ಬುಂಡೆ ಕೈಯ್ಯಲ್ಲಿತ್ತು.

ಶಬರಿ ಬೇಸರದಿಂದ "ಏನಪ್ಪ ಇದೆಲ್ಲ?" ಎಂದಳು.

"ಏಟ್ ದಿನ ಆತವ್ವ ಕುಡ್ದು. ಏನೊ ಇವತ್ತು ಒಸಿ ರುಚಿ ನೋಡಾನ ಅನ್ನಿಸ್ತು. ಬ್ಯಾಡ ಅಂದ್ರೆ ಬಿಸಾಕ್ ಬಿಡ್ತೀನಿ." ಎಂದು ತಿಮ್ಮರಾಯಿ ಹೇಳಿದಾಗ

ಶಬರಿ ಅಪ್ಪನ ಕೈಹಿಡಿದು "ಜಾಸ್ತಿ ಕುಡಿಬ್ಯಾಡ ಕಣಪ್ಪ" ಎಂದು ಕೇಳಿಕೊಂಡಳು.

ತಿಮ್ಮರಾಯಿ ಕೂತುಕೊಂಡ. "ಉಂಬಾಕಿಕ್ಕವ್ವ" ಎಂದು ಕೇಳಿದ.

"ಯಾಕಪ್ಪ ಕುಡ್ಯಾಕಿಲ್ವ"– ಶಬರಿ ಆಶ್ಚರ್ಯದಿಂದ ಕೇಳಿದಳು.

"ಇಲ್ಲ ಕಣವ್ವ. ಉಂಬ್ತೀನಿ. ಇಕ್ಕವ್ವ ಉಂಬಾಕೆ."

ಶಬರಿ ಸಂತೋಷದಿಂದ ಊಟಕ್ಕೆ ಇಟ್ಟಳು. ತಿಮ್ಮರಾಯಿ ಹೊಟ್ಟೆ ತುಂಬ ಊಟಮಾಡಿದ. ಆಮೇಲೆ "ಮಲೀಕಂಬ್ತೀನಿ ಕಣವ್ವ" ಎಂದು ದುಪ್ಪಟಿ ಹೊದ್ದುಕೊಂಡ.

ಶಬರಿ ತಾನೂ ಊಟ ಮಾಡಿ ಹೊರಬಂದಳು.

ಇಂದು ನಡೆದ ಘಟನೆಯ ಬಗ್ಗೆ ಮಾತನಾಡಬೇಕೆಂದು ಎಲ್ಲರನ್ನೂ ಕರೆದಳು. ಎಲ್ಲರೂ ಅವರವರ ಭಾವ ಬಿಚ್ಚಿಟ್ಟರು. ನವಾಬ್ ಮತ್ತು ಗೆಳೆಯರು ಬಂದಮೇಲೆ ಸರಿಯಾದ ತೀರ್ಮಾನಕ್ಕೆ ಬರಬೇಕೆಂಬುದು ಹೆಚ್ಚೂಕಮ್ಮಿ ಎಲ್ಲರ ಅನಿಸಿಕೆಯಾಗಿತ್ತು.

ಶಬರಿಯ ಜವಾಬ್ದಾರಿ ಹೆಚ್ಚಾಗಿತ್ತು. ನವಾಬ್–ಗೆಳೆಯರು ಬರುವವರೆಗೆ ಹಟ್ಟಿಯ ಹುರುಪನ್ನು ಕಾಯ್ದುಕೊಳ್ಳಬೇಕಾಗಿತ್ತು.

ಒಬ್ಬಾತ ಹೇಳಿದ–"ತೋಪು ತಿರ್‍ಗಾ ಬರಾಕಿಲ್ಲ. ಗಲಾಟೆ ಮಾಡ್ತಾನೇ ಇರಾದ್ಯಾಕೆ?"

ಶಬರಿ ಉತ್ತರಿಸಿದಳು–"ತೋಪು ಇದ್ ಜಾಗ ನಮ್ದು ಅಂಬ್ತ ಕೇಳ್ಬೇಕು. ಆಕಡೆ ಬಯಲೈತಲ್ಲ ಅದನ್ನ ನಮ್ಗೇ ಕೊಡ್ಬೇಕು ಅಂಬ್ತಾನೂ ಕೇಳ್ಬೇಕು. ನಮಿಗ್ ಸಿಕ್ಕಿದ್ ಮ್ಯಾಲೆ, ತೋಪಿದ್ ಜಾಗ್‌ದಾಗೆ ನಾವೇ ಮರಗಿಡ ಬೆಳುಸ್ಬೇಕು. ಉಳಿದಿದ್ರಾಗೇ ಒಟ್ಟಿಗೇ ಬೆಳೆ ಬೇಳೀಬೇಕು." ಸಣ್ಣೀರ ಹೇಳಿದ– "ನೀರ್‍ನಾಗ್ ಇಳುದ್ ಮ್ಯಾಗೆ ಮಳೆ ಏನು, ಚಳಿ ಏನು? ತಿರ್‍ಗಾ ಹಿಂದಕ್ ನೋಡ್‌ಬಾರ್‍ದು."

ಹೀಗೆ ಮಾತುಕತೆ ನಡೆದು ನವಾಬನ ನಿರೀಕ್ಷೆಯಲ್ಲಿ ಎಲ್ಲರೂ ಮಲಗಲು ಹೊರಟರು. ಅಷ್ಟರಲ್ಲಿ ಸಣ್ಣೀರ ಒಂದು ಅನುಮಾನ ಹೇಳಿದ– "ಸ್ಯಬರವ್ವ, ನೆನ್ನೆ ಕತ್ಲಾಗ್ ಮರ ಕೊಯ್ದಂಗೆ ಇವತ್ತು ನಮ್ ಅಟ್ಟಿಗೇನೂ ಮಾಡಲ್ಲ ಅಂಬ್ತೀಯ?"

ಎಲ್ಲರೂ ಸ್ತಬ್ಧವಾಗಿ ನಿಂತರು. ಇಲ್ಲ, ಹೌದು– ಎರಡೂ ಹೇಳಲಾಗದ ಸ್ಥಿತಿ. ಆದರೂ ಶಬರಿ ಧೈರ್ಯತುಂಬಿದಳು. "ಅಂಗೆಲ್ಲ ಏನೂ ಆಗಾಕಿಲ್ಲ. ಅಂಗ್ ಮಾಡಂಗಿದ್ರೆ ಎಂದೋ ಮಾಡ್ತಾರು; ಈಟ್ ದಿನ ಸುಮ್ಕಿರ್‍ತಿರ್‍ಲಿಲ್ಲ." ಯೋಚಿಸಿದಾಗ ಅದೂ ಸರಿಯೆನ್ನಿಸಿತು. ಹಾಗೂ ಹೀಗೂ ಮತ್ತೆ ಮಾತುಕತೆ

ಶುರುವಾಯಿತು. ಸಣ್ಣೀರ ತನ್ನ ಅನುಮಾನ ಹಗುರವಾಗಿ ತೆಗೆದುಕೊಳ್ಳಬಾರದೆಂದು ಮತ್ತೆ ಮತ್ತೆ ಹೇಳಿದ. ಶಬರಿ ಮತ್ತೆ ಅದೇ ಧೈರ್ಯದ ಮಾತಾಡಿದಳು. ಈ ಮಧ್ಯೆ ಹುಚ್ಚೀರ ಪುಸ್ತಕ ತಂದು ಏನನ್ನೋ ಬರೆದು ತೋರಿಸಿದ.

"ನಾನು ಎಚ್ಚರವಾಗಿ ಕಾಯುತ್ತೇನೆ" ಎಂದು ಬರೆದಿದ್ದ ತಪ್ಪಿಲ್ಲದೆ.

ಹಾಗಾದರೆ ಇಬ್ಬರು ಮೂವರು ಸರದಿಯ ಮೇಲೆ ಕಾಯುವುದು ಸರಿ ಎಂಬ ತೀರ್ಮಾನಕ್ಕೆ ಬಂದರು. ಹುಚ್ಚೀರನ ಜೊತೆಗೆ ಮತ್ತಿಬ್ಬರನ್ನು ಮೊದಲ ಸರದಿಗೆ ಆಯ್ಕೆ ಮಾಡಿದರು. ಉಳಿದವರು ಮಲಗಲು ಹೋದರು.

ಶಬರಿ ಮನೆಯೊಳಗೆ ಹೋದಾಗ ಲಕ್ಷ್ಮಕ್ಕ ಹಿಂದೆಯೇ ಬಂದಳು. ಮಲಗಿರುವ ತಿಮ್ಮರಾಯಿಯನ್ನು ನೋಡಿ "ಈಟ್ ಬ್ಯಾಗ ಮಲೀಕಂಡ್ನೈತೆ" ಎಂದು ಉದ್ಗಾರ ಮಾಡಿ. ಮೆತ್ತಗೆ "ಎಂಗೈತೆ ನಿನ್ ವೊಟ್ಟೆ. ತಲೆ ತಿರ್‍ಗಾದು ಅದೂ ಇದೂ ಏನೂ ಇಲ್ವ?" ಎಂದು ಕೇಳಿದಳು. ಶಬರಿ, ತಿಮ್ಮರಾಯಿಯ ಕಡೆ ನೋಡುತ್ತ "ಏನೂ ಇಲ್ಲ" ಎಂದಳು. ಲಕ್ಷ್ಮಕ್ಕ "ವೊಟ್ಟೇಗಿರಾ ಕೂಸ್ನ ಚಂದಾಗ್ ನೋಡ್ಕಾಬೇಕವ್ವ" ಎಂದು ಕೆನ್ನೆ ಚಿವುಟಿ, ನಗುತ್ತಾ ಹೊರಟಳು. ಶಬರಿ, ತಿಮ್ಮರಾಯಿ ಹತ್ತಿರ ಬಂದು ದುಪ್ಪಟಿಯನ್ನು ಸರಿಯಾಗಿ ಹೊದಿಸಿದಳು. ಮಗುವಿನಂತೆ ಮುದುಡಿ ಮಲಗಿದ್ದ ಅಪ್ಪನ ತಲೆ ನೇವರಿಸಿದಳು.

"ಅಪ್ಪಯ್ಯ ಏನೋ ತಲೇಗ್ ಅಚ್ಕಂಡೈತೆ. ಯಾಕೊ ಬಾಯ್ ಬಿಡ್ತಾ ಇಲ್ಲ. ನನ್ತಾವ್ ಯಾವ್ದೂ ಮುಚ್ಚಿಡ್ತಿರ್‍ಲಿಲ್ಲ.... ಯಾಕಪ್ಪ ಇಂಗ್ ಮಾಡ್ತೀಯ? ನನ್ತಾವೆಲ್ಲ ಯೇಳ್ಕಳಪ್ಪ."

ಮನಸ್ಸು ಮಾತಾಡಿಕೊಂಡಿತು.

ಶಬರಿ ಅಪ್ಪನ ಮಗ್ಗುಲಲ್ಲಿ ಕೂತು ಮುಖವನ್ನೇ ದಿಟ್ಟಿಸುತ್ತ ಮತ್ತೆ ತಲೆಯನ್ನು ನೇವರಿಸಿ, ಮಗುವನ್ನು ಮಲಗಿಸುವಂತೆ ಮೃದುವಾಗಿ ಮೈ ತಟ್ಟಿದಳು.

ಎಷ್ಟೋ ಹೊತ್ತು ಹಾಗೆ ಕೂತಿದ್ದಳು.

ಎದ್ದು ಮಲಗಲು ಹೋಗುವಾಗ ಅಪ್ಪನ ಪಕ್ಕದಲ್ಲಿದ್ದ ಹೆಂಡದಬುಂಡೆಯತ್ತ ನೋಡಿದಳು.

ಬುಂಡೆ ಬರಿದಾಗಿತ್ತು.

* * *

ಕೋಳಿ ಕೂಗುವ ಹೊತ್ತು.

ನರಳುವ ಸದ್ದು; ತನ್ನ ಹೆಸರು ಹಿಡಿದು ಕರೆದ ದನಿ; ಪರಿಚಿತ ದನಿ. ಮತ್ತೆ ಮತ್ತೆ ಕರೆದಂತೆ.

ನಿದ್ದೆಮಂಪರಿನಲ್ಲಿ ಎದ್ದಳು ಶಬರಿ.

ಎದ್ದು ನೋಡಿದರೆ ತಿಮ್ಮರಾಯಿ ನರಳುತ್ತಿದ್ದಾನೆ. ಮೇಲೇಳಲು ಪ್ರಯತ್ನ ಮಾಡುತ್ತ, ಎದೆ ಹಿಡಿದುಕೊಂಡು "ಉರಿ ಉರಿ" ಎಂದು ನರಳುತ್ತಿದ್ದಾನೆ.

ಗಾಬರಿಗೊಂಡ ಶಬರಿ ಅಪ್ಪನ ಹತ್ತಿರ ಬಂದಳು. ಕೂಡಿಸಿದಳು. "ಯಾಕಪ್ಪ; ಏನಾಗ್ತಾ ಐತಪ್ಪ?" ಎಂದು ಕಳವಳದಿಂದ ಕೇಳಿದಳು.

"ಎದೇ ಉರೀತಾ ಐತೆ ಕಣವ್ವ. ಅಂಗೇ ವೊಟ್ಟೇನಾಗೂ ಉರಿ ಐತೆ ಮಗ್ಳೆ" ಎಂದು ತಿಮ್ಮರಾಯಿ ನರಳಿದಾಗ ಶಬರಿಗೆ ಭಯ. ತಕ್ಷಣ "ಸಣ್ಣೀರ, ಉಚ್ಚೀರ, ಲಚ್ಮಕ್ಕ, ಪೂಜಾರಪ್ಪ...." ಎಂದು ಒಬ್ಬೊಬ್ಬರನ್ನೇ ಕೂಗತೊಡಗಿದಳು.

ತಿಮ್ಮರಾಯಿ "ಒಸಿ ಇರವ್ವ; ಇರವ್ವ ಒಸಿ" ಎಂದು ಕೈಹಿಡಿದು ಜಗ್ಗಿದರೂ ಕೇಳದೆ ಶಬರಿ ಎದ್ದೋಡಿದಳು. ಕೂಗಿದಳು. ಕಾವಲು ಕಾಯುತ್ತಿದ್ದವರನ್ನೂ ಒಳಗೊಂಡಂತೆ ಎಲ್ಲರೂ ಓಡೋಡಿ ಬಂದರು. ಆವೇಳೆಗೆ ತಿಮ್ಮರಾಯಿ ಕುಸಿದುಬಿಟ್ಟಿದ್ದ. ಎದೆ ಹಿಡಿದು ಒದ್ದಾಡುತ್ತಿದ್ದ. ಶಬರಿಯ ಕಡೆ ನೋಡಿ "ಬಾಮಗ್ಳೇ" ಎಂದು ಕರೆದ; ಕೈ ಹಿಡಿದುಕೊಂಡ.

"ನಾನ್ ವೋಗ್ತೀನಿ... ವೋಗ್ತೀನಿ... ಸೂರ್ಯ ಬತ್ತಾನೆ... ಇವತ್ತಲ್ಲ ನಾಳೆ ಬಂದೆ ಬತ್ತಾನೆ... ವೊಟ್ಟೇಗಿರಾ ಕೂಸ್ನ ಚಂದಾಗ್ ನೋಡ್ಕ ಮಗಳೆ.... ಚಂದಾಗ್ ನೋಡ್ಕ ಮಗಳೆ... ಚಂದಾಗ್ ನೋಡ್ಕ..."

ತಿಮ್ಮರಾಯಿ ಮಾತಿನಿಂದ ಶಬರಿ ಬೆಚ್ಚಿಬಿದ್ದಳು.

'ವೊಟ್ಟೇಗಿರ ಕೂಸು....."

ಎಲ್ಲಾರೂ ಪ್ರಶ್ನಾರ್ಥಕವಾದರು–ಲಕ್ಷ್ಮಕ್ಕನನ್ನು ಹೊರತುಪಡಿಸಿ. ಶಬರಿಗೆ ಸ್ಪಷ್ಟವಾಯಿತು. ಅಪ್ಪನಿಗೆ ಎಲ್ಲವೂ ಗೊತ್ತಾಗಿದೆ. ಹೇಗೇಂತ ಗೊತ್ತಿಲ್ಲ... ಒಟ್ಟಿನಲ್ಲಿ ಅಪ್ಪ ಹಚ್ಚಿಕೊಂಡಿದ್ದಾನೆ... ಲಕ್ಷ್ಮಕ್ಕನ ಕಡೆ ನೋಡಿದಳು. ಆಕೆ ಶಬರಿಯ ಬಳಿ ಕೂತು ಮೃದುವಾಗಿ ಬೆನ್ನು ತಟ್ಟಿದಳು. ಅದರಲ್ಲಿ ಸಾಂತ್ವನದ ಸಾಲುಗಳಿದ್ದವು. ತಿಮ್ಮರಾಯಿ ಮತ್ತೆ ಮಾತಾಡಿದ–"ನನ್ ಮಗ್ಳು ಇನ್ ಮ್ಯಾಲೆ ನಿಮ್ಗೆಲ್ಲಾರ್ಗೂ ಮಗ್ಳು. ಚೆಂದಾಗ್ ನೋಡ್ಕಳ್ಳಿ. ಸೂರ್ಯ ಬಂದಾಗ ಮದ್ವೆ ಮಾಡ್ರಿ. ನನ್ ಮಗ್ಳ ವೊಟ್ಟೇನಾಗೆ ಸೂರ್ಯನ್ ಕೂಸು ಬೆಳೀತಾ ಐತೆ. ಇನ್ ಮ್ಯಾಗ್ ಇವ್ಳು ನಿಮ್ ಮಗ್ಳು.... ನಿಮ್ಮ ಮಗ್ಳು.....

ಮಾತು ನಿಂತಿತು.

ಮನೆಯ ತುಂಬ ಅಳು.

ಯಾರ ಅಳು ಎಂದು ಬಿಡಿಸಿ ಹೇಳಲಾಗದಂಥ ರೋಧನ.

ಅದರಲ್ಲಿ ಎದ್ದು ಕೇಳಿಸಿದ್ದು ಶಬರಿಯ ಆಕ್ರಂದನ.

ಲಕ್ಷ್ಮಕ್ಕ ಮುಂತಾದವರು ಅಳುತ್ತಲೆ ಶಬರಿಯ ಅಳುವನ್ನು ನಿಲ್ಲಿಸಲು ಪ್ರಯತ್ನಿಸಿದರು. ಆದರೆ ಶಬರಿ ಸುಸ್ತಾಗುವವರೆಗೆ ಅತ್ತಳು.

ಬೆಳಗಾದ ಮೇಲೆ ಪೂಜಾರಪ್ಪ ನೆಂಟರಿಷ್ಟರಿಗೆಲ್ಲ ಹೇಳಿಕಳಿಸಿದ.

ಎಲ್ಲರೂ ಬಂದು ಸೇರಿ ಮಣ್ಣು ಮಾಡುವ ವೇಳೆಗೆ ಸಾಯಂಕಾಲವಾಗಿತ್ತು. ಅಲ್ಲೀವರೆಗೆ ಒಬ್ಬೊಬ್ಬರದು ಒಂದೊಂದು ಊಹೆ; ವ್ಯಾಖ್ಯಾನ. ಇತ್ತೀಚೆಗೆ ಏನೋ ಹಚ್ಚಿಕೊಂಡಿದ್ದ. ಮಗಳು ಬಸುರಿಯಾದ ವಿಷಯವೇ ಇರಬೇಕು; ಅದಕ್ಕೇ ಸತ್ತ ಎಂಬ ಗುಸುಗುಸು. ಹೆಚ್ಚು ಕುಡೀತಿದ್ದ; ಕರುಳು ಸುಟ್ಟು ಸತ್ತ ಅಂತ ಇನ್ನೊಂದು ಊಹೆ. ಒಟ್ಟಿನಲ್ಲಿ ಹೊಟ್ಟೇನೋವು, ಎದೆನೋವು ಅಂತ ಸತ್ತದ್ದಂತೂ ನಿಜ. ಸಾವಿಗೆ ಇಂಥದೇ ಕಾರಣ ಯಾಕೆ ಬೇಕು? ಅದು ಬರುವಾಗ ಬಂದೇ ಬರುತ್ತೆ– ಎಂಬುದು ಕೊನೆಯ ಮಾತು.

ಒಂದು ಕಡೆ ಶಬರಿಯ ಮೌನ; ಇನ್ನೊಂದು ಕಡೆ ಹುಚ್ಚೀರನ ಮೌನ.

* * *

ಈಗಲೂ ಅಷ್ಟೆ.

ಇಲ್ಲೀವರೆಗಿನ ಎಲ್ಲ ನೆನಪುಗಳ ಕಾಡುಕತ್ತಲಲ್ಲಿ ತತ್ತರಿಸಿ ಕೂತಿದ್ದಳು ಶಬರಿ. ಶಬರಿಯ ಒಳ ಮಾತುಗಳ ಮೂಕವೇದನೆಯಾದ ಹುಚ್ಚೀರ.

ಇಬ್ಬರೂ ಕತ್ತಲಕೂಸುಗಳು.

ಮನಸ್ಸಲ್ಲಿ ಸೂರ್ಯ ನಿರೀಕ್ಷೆಗಳು.

ಅದೇಗಾಳಿ–ಗುಡುಗು–ಮೋಡದ ಬೆಡಗು.

ಬಂದಾನೊ, ಬಾರನೊ?

ಸೂರ್ಯನೂ ಬರಲಿಲ್ಲ; ನವಾಬನೂ ಬರಲಿಲ್ಲ; ಗೌರಿಯೂ ಇಲ್ಲ.

ಏನಾಯಿತೊ ಗೊತ್ತಿಲ್ಲ.

ಗೊತ್ತು ಗುರಿಗಳಿಗೆ ಗರ ಬಡಿದಂತೆ,
ನೀರಿನೊಳಗಿನ ಉರಿಯಂತೆ
ಮೋಡದ ಮರೆಯ ಕೆಂಡದಂತೆ......

ಎಷ್ಟು ಹೊತ್ತಾಯಿತೊ ಗೊತ್ತಿಲ್ಲ; ಶಬರಿ ಬಾಗಿಲಿಗೆ ಒರಗಿ ಮಲಗಿದ್ದಳು–

ನಿದ್ದೆಯನ್ನು ಒದ್ದು ಬಂದ ನೆನಪುಗಳೆಲ್ಲ ನಿದ್ದೆಗೆ ಸಂದಂತೆ.
ಹೊರ ಚಪ್ಪರದ ಗೂಟಕ್ಕೆ ಒರಗಿ ಹುಚ್ಚೀರ ಮಲಗಿದ್ದ–
ಮೂಕವೇದನೆಯ ಮತ್ತೊಂದು ಆಯಾಮಕ್ಕೆ ಹೋದಂತೆ.
ಏನೋ ಸದ್ದಾಯಿತು.
ಗಲಿಬಲಿಗೊಂಡು ಎದ್ದಳು ಶಬರಿ.
ಇನ್ನೇನು ಸೂರ್ಯ ಹುಟ್ಟುವ ಹೊತ್ತು.
ವಾಹನವೊಂದು ಬಂತು; ಹತ್ತಾರು ಜನರಿದ್ದ ವ್ಯಾನು.
ಕಾಲು ಹಾದಿಯಲ್ಲಿ ಅತ್ತಿತ್ತ ವಾಲಾಡುತ್ತ ಬಂದ ವಾಹನ.
ಶಬರಿ "ಉಚ್ಚೀರ..... ಉಚ್ಚೀರ" ಎಂದು ಗಡಿಬಿಡಿಯಿಂದ ಏಳಿಸಿದಳು.
ಹುಚ್ಚೀರ ಎದ್ದ.
ವಾಹನ ನಿಂತಿತು.
ಮೊದಲು ನವಾಬ ಇಳಿದ; ಆಮೇಲೆ ಗೌರಿ.
ಹುಚ್ಚೀರ ತನ್ನದೇ ದನಿಯಲ್ಲಿ ಕೂಗಿದ.
ಶಬರಿ ಸೂರ್ಯನಿಗಾಗಿ ಕಣ್ಣರಳಿಸಿಕೂತಳು.
ಹುಚ್ಚೀರನ ಸದ್ದಿಗೆ ಹಟ್ಟಿಯವರೆಲ್ಲ ಎದ್ದರು; ಹೊರಬಂದರು.

ವ್ಯಾನಿನಿಂದ ಒಬ್ಬೊಬ್ಬರೇ ಇಳಿದರು. ಗೌರಿಯನ್ನು ನೋಡಿ ಪೂಜಾರಪ್ಪನಿಗೆ ಸಂತೋಷವಾಯಿತು. ನವಾಬ ಬಂದದ್ದು ಎಲ್ಲರಿಗೂ ಸಮಾಧಾನ ತಂದಿತ್ತು. ಉಳಿದಂತೆ ಗೆಳೆಯರು ಬಂದಿದ್ದರು.

ಮೌನವಾಗಿದ್ದ ಶಬರಿ ಎಲ್ಲರಿಗೂ ಪ್ರಶ್ನೆಯಾದಳು. ಗೌರಿ, ಶಬರಿಯ ಹತ್ತಿರ ಬಂದಳು. ಶಬರಿ ಆಕೆಯನ್ನು ತಬ್ಬಿಕೊಂಡು ಅಳತೊಡಗಿದಳು. ನವಾಬ್ ಕಳವಳದಿಂದ ಕೇಳಿದಾಗ ಪೂಜಾರಪ್ಪ ತಿಮ್ಮರಾಯಿಯ ಸಾವಿನ ಸುದ್ದಿ ಹೇಳಿದ. ನವಾಬನಿಗೆ ಮಾತೇ ಹೊರಡಲಿಲ್ಲ. ಜೊತೆಗೆ ಬಂದಿದ್ದ ಗೆಳೆಯರ ಕಡೆ ನೋಡಿದ. ತನಗೆ ತಾನೇ ಸಾಂತ್ವನ ಮಾಡಿಕೊಂಡ.

"ಈಗ ಇನ್ನೊಂದ್ ಸುದ್ದಿ ಹೇಳ್ತಿದ್ದೀನಿ" ಎಂದು ಎಲ್ಲರ ಮುಖ ನೋಡಿದ. ಶಬರಿಯ ಹತ್ತಿರ ಬಂದು "ಶಬರಿ ಸಮಾಧಾನ ಮಾಡ್ಕೊ" ಎಂದು ಸಂತೈಸಿದ. ಆಕೆ ಕಣ್ಣೀರು ಒರೆಸಿಕೊಂಡು ಅಳು ನಿಲ್ಲಿಸಿ "ಸೂರ್ಯ ಯಾವತ್ ಬತ್ತಾನೆ ನವಾಬಣ್ಣ?" ಎಂದು ಕೇಳಿದಳು.

ನವಾಬ್ ಗದ್ಗದಿತನಾದ. ಮಾತು ಹೊರಡಲಿಲ್ಲ. ಕಣ್ಣಲ್ಲಿ ನೀರು.

ಎಲ್ಲರಿಗೂ ಉರಿವ ಮರಳಲ್ಲಿ ನಿಂತ ಅನುಭವ.

"ಯಾಕಣ್ಣ? ಯಾಕಳ್ತೀಯ?"– ಶಬರಿ ಕೇಳಿದಳು.

ಆಗಲೂ ನವಾಬನಿಗೆ ಹೇಳಲಾಗಲಿಲ್ಲ.

ಆಗ, ಜೊತೆಯಲ್ಲಿ ಬಂದಿದ್ದ ಗೆಳೆಯರಲ್ಲಿ ಒಬ್ಬ ಮಾತಾಡಿದ.

"ಸೂರ್ಯ ನಮ್ ಜೊತೆ ಇಲ್ಲ."

"ಅಂಗಂದ್ರೆ?"–ಸಣ್ಣೀರನ ಪ್ರಶ್ನೆ.

"ಸೂರ್ಯ..... ಸೂರ್ಯ..... ಸತ್ತುಹೋದ!"

"ಆ್ಞ!"

ಮಾತಿಲ್ಲದ ಗಳಿಗೆ.

ಅದನ್ನು ಮುರಿದು ಉರಿಯತೊಡಗಿದ ಅಳು...

ಆಗ ವ್ಯಾನಿನ ಬಳಿ ಹೋದ ಗೆಳೆಯರು ಒಳಗಿದ್ದ ಸೂರ್ಯನ ಶವವನ್ನು ಹೊರಗೆ ಇಳಿಸಿದರು. ಜೊತೆಗೆ ಒಬ್ಬ ವಯಸ್ಸಾದ ಹೆಂಗಸು ಇಳಿದರು.

ಹಟ್ಟಿಯ ನಡುವೆ ಈ ಸೂರ್ಯನ ಶವ ಮಲಗಿತ್ತು!

ಮೂಡಲ ದಿಕ್ಕಿನಲ್ಲಿ ಆ ಸೂರ್ಯನ ಹುಟ್ಟು ಆಗುತ್ತಿತ್ತು!

ಹುಚ್ಚೀರನ ಆಕ್ರಂದನಕ್ಕೆ ಮೇರೆಯೇ ಇಲ್ಲ, ಸೂರ್ಯಶವದ ಕಾಲುಗಳನ್ನು ಭದ್ರವಾಗಿ ಹಿಡಿದು ಅವುಗಳ ಮೇಲೆ ತಲೆಯಿಟ್ಟು ಒಂದೇ ಸಮ ಅತ್ತ.

ಮೂರ್ಛೆಯೊ ಮೌನವೊ ಗೊತ್ತಾಗದ ಸ್ಥಿತಿಯಲ್ಲಿದ್ದ ಶಬರಿಯನ್ನು ಗೌರಿ, ಲಕ್ಷ್ಮಕ್ಕ ಮುಂತಾದವರು ಸೂರ್ಯಶವದ ಬಳಿಗೆ ಕರೆತಂದರು. ಶಬರಿ ಸೂರ್ಯನ ತಲೆಯ ಬಳಿ ಕೂತಳು. ತಲೆಯ ಕೂದಲನ್ನು ನೇವರಿಸಿದಳು. ಕೆನ್ನೆಗಳ ಮೇಲೆ ಕೈಯಾಡಿಸಿದಳು. ತನ್ನ ಕೆನ್ನೆಮೇಲೆ ಹರಿಯುತ್ತಿದ್ದ ಕಣ್ಣೀರನ್ನು ಬೆರಳಲ್ಲಿ ಒರೆಸಿ ಅದನ್ನು ಸೂರ್ಯನ ತುಟಿಗಳ ಮೇಲೆ ಸವರಿದಳು. ನೋಡುತ್ತಿದ್ದವರ ಕರುಳು ಚುರುಗುಡುತ್ತಿರುವಾಗಲೇ ತನ್ನ ಹಣೆ ಕುಂಕುಮವನ್ನು ಬೆರಳಲ್ಲಿ ತೆಗೆದುಕೊಂಡು ಸೂರ್ಯನ ಹಣೆಗೆ ಇಟ್ಟಳು! ಹೆಂಗಸರ ಕಣ್ಣಿನ ಕಟ್ಟೆ ಒಡೆಯಿತು.

"ನಡ್ ನೀರ್ನಾಗ್ ನಮ್ಮನ್ ಬಿಟ್ ವೋದೆಲ್ಲಪ್ಪ ಸೂರ್ಯಪ್ಪ" ಎಂದು ಗಟ್ಟಿಯಾಗಿ ರೋಧಿಸಿದರು. "ಸ್ಯಬರಿ.... ಸ್ಯಬರಿ..." ಎಂದು ಮುಂದೆ ಹೇಳಲಾಗದೆ ಬಿಕ್ಕಿದರು.

ಸ್ವಲ್ಪ ಹೊತ್ತು ಸುಮ್ಮನಿದ್ದ ಗಂಡಸರು ತಮ್ಮ ಒದ್ದೆಗಣ್ಣುಗಳನ್ನು ಒರೆಸಿಕೊಂಡು ಹೆಂಗಸರನ್ನು ಗದರಿಕೊಂಡರು.

"ನೀವೇ ಇಂಗೆಲ್ಲ ಅತ್ರೆ ಸ್ಯಬರವ್ವನ್ ಗತಿ ಏನು. ಸುಮ್ಕಿರ್ರಿ." ಬರಬರುತ್ತ

ಅಳು ಒಳಸೇರಿತು.

ಆಗ ಪೂಜಾರಪ್ಪ ನವಾಬನನ್ನು "ಇದೆಲ್ಲ ಎಂಗಾಯ್ತಪ್ಪ?" ಎಂದು ಕೇಳಿದ.

ನವಾಬ್ ನಿಟ್ಟುಸಿರುಬಿಟ್ಟು ನಡೆದದ್ದನ್ನು ಹೇಳಿದ.

"ನಾನು ಇಲ್ಲಿಂದ ಸೀದಾ ಈ ಗೆಳೆಯರ ಹತ್ರ ಹೋದೆ. ಎಲ್ಲಾ ಸೇರಿ ನಿಮ್ ತೋಪಿನ ವಿಷಯದಲ್ಲಿ ಪತ್ರ ಕೊಡ್ತೋಕೆ ಅಂತ ಎಂ.ಎಲ್.ಎ. ಧರ್ಮಯ್ಯನ ಹತ್ರ ಹೋದ್ವಿ. ಆತನಿಗೆ ಏನ್ ಹೇಳಿದ್ರೂ ಕೇಳೊ ಸ್ಥಿತಿಯಲ್ಲಿ ಇರಲಿಲ್ಲ. ಸಂಬಂಧಪಟ್ಟ ಮಂತ್ರಿಗಳ ಹತ್ರ ಹೋಗ್ಬೇಕು ಅಂತ ಹೊರಟಾಗ ನನ್ನನ್ನ ಪೋಲಿಸರು ಅರೆಸ್ಟ್ ಮಾಡಿದ್ರು."

"ಯಾಕೆ? ಅಂತಾದೇನಪ್ಪ ಆಗಿತ್ತು"– ತಡೆಯಲಾಗದೆ ಕೇಳಿದ ಪೂಜಾರಪ್ಪ.

"ನಾನು ನಿಮ್ಮನ್ನೆಲ್ಲ ಬೇರೆ ಧರ್ಮಕ್ಕೆ ಬಲಾತ್ಕಾರವಾಗ್ ಸೇರುಸ್ತಿದ್ದೀನಿ ಅಂತ ನರಸಿಂಹರಾಯಪ್ಪ, ಜೋಯಿಸ್ರು, ಸುಳ್‌ಸುಳ್ಳೇ ನಾನ್ ಏಜೆಂಟು ಅದೂ ಇದೂ ಅಂತ ಬರ್‌ಕೊಟ್ಟಿದ್ದಾರೆ."

"ಎಲಾ ಇವ್ನ!"–ಸಣ್ಣೀರ ಸಿಟ್ಟಿನಿಂದ ಉದ್ಗರಿಸಿದ.

ನವಾಬ್ ಮುಂದುವರಿಸಿದ.

"ಆಮೇಲ್ ನನ್ ಗೆಳೆಯರು ಕಾನೂನ್ ಪ್ರಕಾರಾನೇ ಬಿಡಿಸ್ಕೊಂಡ್ರು. ಆ ಕೇಸ್ ಮುಂದುವರ್‍ಯುತ್ತೆ..."

"ನಮ್ ಸೂರ್ಯಪ್ಪನ್ ಇಸ್ಯ ಯೇಳಣ್ಣ"– ಲಕ್ಷ್ಮಕ್ಕ ಒತ್ತಾಯವಾಗಿ ಕೇಳಿದಳು.

"ಅದಕ್ಕೇ ಬಂದೆ ಲಕ್ಷ್ಮಕ್ಕ. ಆಮೇಲ್ ಏನಾಯ್ತು ಗೊತ್ತ? ಜೈಲ್‌ನಲ್ಲಿ ಸೂರ್ಯ ನೇಣು ಹಾಕ್ಕೊಂಡ್ ಸತ್ತ, ಅಂತ ಸುದ್ದಿ ಬಂತು....."

ನವಾಬ್ ಹೇಳುತ್ತಿರುವಾಗಲೇ ಲಕ್ಷ್ಮಕ್ಕ "ನಮ್ ಸೂರ್ಯಪ್ಪಂಗೆ ನೇಣ್ ಅಕ್ಕಳಾ ಅಂತಾದ್ದೇನ್ ಬಂದಿತ್ತು. ಅಂಗೆಲ್ಲ ಆಗಿರಾಕಿಲ್ಲ" ಎಂದಳು. ಮತ್ತೊಬ್ಬಾಕೆ "ಸೂರ್ಯಪ್ಪ ಅಂಗೆಲ್ಲ ಮಾಡ್ಕಳಾ ಮನ್ಸ ಅಲ್ಲ" ಎಂದು ದನಿಗೂಡಿಸಿದಳು.

"ಅದು ನಿಜ." ನವಾಬ್ ಹೇಳಿದ– "ನಮ್ ಪ್ರಕಾರ ನಡೆದಿರೋದೆ ಬೇರೆ. ಪೋಲಿಸ್ನೋರು ಸೂರ್ಯಂಗೆ ಹೊಡೆದು ಬಡಿದು ಮಾಡಿದಾರೆ. ಆಗ ಈತ ಸತ್ತಿರ್ಬೇಕು. ಆಮೇಲೆ ಪೋಲಿಸ್ನೋರೆ ನೇಣು ಹಾಕಿ ಈತ ಆತ್ಮಹತ್ಯೆ ಮಾಡ್ಕೊಂಡ ಅಂತ ಸುಳ್ಳಸುದ್ದಿ ಹುಟ್ಟಿಸಿದಾರೆ. ಇದೆಲ್ಲ ಕಟ್ಟುಕತೆ ಅಂತ ನಾವು ಹೋರಾಟಕ್ ಸಿದ್ಧ ಆಗಿದ್ದೀವಿ."

"ಸತ್‌ವೋದ್ ಮ್ಯಾಗೆ ಏನ್ ವೋರಾಟಾನೋ ಏನ್ಕತೆಯೊ" ಎಂದು

ಪೂಜಾರಪ್ಪ ನೋವಿನಿಂದ ನುಡಿದ.

"ಇಂಥ ಘಟನೆ ಮುಂದೆ ಆಗ್‌ಬಾರ್ದಲ್ಲ. ಅದಕ್ಕೆ ನಾವು ವಿರೋಧ ಮಾಡ್ಲೇ ಬೇಕು"– ಗೆಳೆಯರಲ್ಲೊಬ್ಬ ಹೇಳಿದ.

"ಒಟ್ನಾಗೆ ಸಾವಿಗಿಂತ ದೊಡ್ಡದು ಯಾವ್ದೂ ಇಲ್ಲ ಅಂಬ್ತ ಗೊತ್ತಾತು ಬಿಡ್ರಪ್ಪ" ಎಂದು ಪೂಜಾರಪ್ಪ ಕಣ್ಣು ಒರೆಸಿಕೊಳ್ಳುತ್ತ ಪಕ್ಕಕ್ಕೆ ಹೋದ. ನವಾಬ್ ಗದ್ಗದಿತನಾಗಿ ಇನ್ನೊಂದು ವಿಷಯ ತಿಳಿಸಿದ.

"ಸೂರ್ಯಂಗೆ ಇಲ್ಲೇ– ಈ ಹಟ್ಟಿ ಹತ್ರಾನೇ ಮಣ್ಣಾಗ್ ಬೇಕು ಅಂತ ಆಸೆ ಇತ್ತು. ಇದನ್ನ ನಮ್ ಗೆಳೆಯರ ಹತ್ರ ಹೇಳಿದ್ದ. ಇವರು ಜೈಲಿಗೆ ಹೋಗಿ ನೋಡ್ದಾಗ ಒಂದ್ ವೇಳೆ ನನಿಗ್ ಸಾವಿನ ಶಿಕ್ಷೆ ಏನಾದ್ರೂ ಕೊಟ್ರೆ ಹಟ್ಟೀಗ್ ಹೆಣ ತಗೊಂಡ್ ಹೋಗಿ ಶಬರಿ ಹೇಳಿದ್ ಕಡೆ ಮಣ್ ಮಾಡಿ ಅಂತ ಹೇಳಿದ್ನಂತೆ..."

ಶಬರಿ "ಸೂರ್ಯ" ಎಂದು ಕಿರುಚಿದ ರಭಸಕ್ಕೆ ಹಟ್ಟಿಗೆ ಹಟ್ಟಿಯೇ ತಲ್ಲಣಗೊಂಡಿತು. ಶಬರಿಯ ಅಳುವಿಗೆ ತಡೆಯಿರಲಿಲ್ಲ. ಅಷ್ಟೇ ಅಲ್ಲ, ಸೂರ್ಯನ ಸಾವಿನಲ್ಲೂ ತಮ್ಮ ಬಗೆಗಿದ್ದ ಪ್ರೀತಿಯನ್ನು ಕಂಡು ಜನರು "ಸೂರ್ಯಪ್ಪ... ಯಾಕಪ್ಪ ನಮ್ಮನ್ ಬಿಟ್ಟೋದೆ" ಎಂದು ಗಟ್ಟಿಯಾಗಿ ಅಳತೊಡಗಿದರು. ಯಾರು ಯಾರನ್ನೂ ಸುಮ್ಮನಿರಿಸುವ ಸ್ಥಿತಿಯಲ್ಲಿರಲಿಲ್ಲ. ಕಡೆಗೆ ಗೌರಿ, ಶಬರಿಗೆ ಸಮಾಧಾನ ಹೇಳಿದರೆ, ನವಾಬ ಮತ್ತು ಗೆಳೆಯರು ಉಳಿದವರಿಗೆ ಸುಮ್ಮನಿರಲು ಹೇಳಿದರು. ಪೂಜಾರಪ್ಪ ಮತ್ತೆ ಗದರಿದ–"ಸಾವು ಸಾವೇ ಕಣ್ರೋ. ಯೆಂಗುಸ್ರು ಗಂಡುಸ್ರು ಎಲ್ಲಾ ಅತ್ರು ಅಂಬ್ತ ಸಾವೇನ್ ವೊಂಟೋಯ್ತದ? ಸಾವ್ ಬಂದು ಬಡುದ್ ಮ್ಯಾಲ್ ಮುಗ್ದೋತು. ಸುಮ್ಕೆ ಮುಂದಿನ ಕೆಲ್ಸ ನೋಡ್ರಿ. ಎಲ್ ಮಣ್ ಮಾಡಾದು, ಯಾವಾಗ ಮಾಡಾದು ಸ್ಯಬರವ್ವನ ಕೇಳಿ ಕೆಲ್ಸ್ ಮುಗುಸ್ರಿ" ಎಂದು ದುಃಖದಲ್ಲೇ ಗದರಿದಾಗ ಅಳು ಕಡಿಮೆಯಾಯಿತು.

ಅಲ್ಲೀವರೆಗೆ ತನ್ನಾರಕ್ಕೆ ತಾನು ಅಳುತ್ತ ಒಬ್ಬಂಟಿಯಾಗಿದ್ದ ವಯಸ್ಸಾದ ಹೆಂಗಸು ಯಾರೆಂದು ಯಾರೂ ಕೇಳಿರಲಿಲ್ಲ. ಪೂಜಾರಪ್ಪನೇ ಕೇಳಿದ.

"ಇಯಮ್ಮ ಯಾರಪ್ಪ? ನಾವ್ ಇಚಾರಿಸ್ಕಮ್ಲೇ ಇಲ್ಲ."

ಆಗ ಗೌರಿ ಆಕೆಯ ಬಗ್ಗೆ ಹೇಳಿದಳು–"ಇವ್ರು ಸೂರ್ಯಪ್ಪನ್ ತಾಯಿ. ಸತ್ ವಿಸ್ಯ ಗೊತ್ತಾದ್ ಮ್ಯಾಲೆ ನಾನೇ ಒಂದಿಬ್ರು ಜತ್ಯಾಗ್ ವೋಗಿ ಕರ್ಕಂಡ್ ಬಂದೆ."

ಶಬರಿ ಆ ತಾಯಿಯ ಕಡೆ ನೋಡಿದಳು.

ಗೌರಿ ಸೂರ್ಯನ ತಾಯಿಯನ್ನು ಶಬರಿಯ ಹತ್ತಿರ ಕರೆತಂದಳು.

ತಾಯಿ ಶಬರಿಯನ್ನು ತಬ್ಬಿ ಸಮಾಧಾನಿಸಿದಳು. "ನಂಗೆಲ್ಲ ಗೊತ್ತು ಶಬರಿ. ನಾನು ಜೈಲಿಗ್ ಹೋಗಿ ನೋಡ್ದಾಗ, ಸೂರ್ಯ ನಿನ್ ವಿಷ್ಯ ಎಲ್ಲಾ ಹೇಳಿದ್ದ. ಅಲ್ಲಮ್ಮ ಇವ್ನ್ ವಿಷ್ಯ ಗೊತ್ತಿದ್ದೂ ಹೇಗಮ್ಮ ಇಷ್ಟಪಟ್ಟೆ? ಪೋಲಿಸ್ನೋರು ಇವ್ನ್ ಹಿಂದ್ ಬಿದ್ದಿದ್ರು. ಯಾವತ್ತಿದ್ರು ಇವ್ನು ಹೀಗೇ ಸಾಯೋನು ಅಂತ ನನಗಂತೂ ಅನ್ನಿಸ್ಬಿಟ್ಟಿತ್ತು. ಸಾವಿನ್ ಜೊತೇಲೆ ಬದುಕ್ತಾ ಇದ್ ನನ್ ಮಗನ್ನ ಅದೆಷ್ಟ್ ಹಚ್ಕೊಂಡ್ ಬಿಟ್ಟೆ ಶಬರಿ...."

ತಾಯಿಗೆ ದುಃಖ ಉಮ್ಮಳಿಸಿತು.

ಸಾವಿನ ಜೊತೆಯಲ್ಲೇ ಬದುಕಿದ ಸೂರ್ಯ!

ಶಬರಿ ದಿಟ್ಟಿಸಿ ನೋಡಿದಳು– ಸೂರ್ಯನನ್ನೊಮ್ಮೆ– ತಾಯಿಯನ್ನೊಮ್ಮೆ.

**'ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ!**
**ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ**
**ಚೆಲುವಂಗಾನೊಲಿದೆನವ್ವ!**
**ಭವವಿಲ್ಲದ ಭಯವಿಲ್ಲದ ಚೆಲುವನಂಗಾನೊಲಿದೆ!**
**ಕುಲುಸೀಮೆಯಿಲ್ಲದ ನಿಸ್ಸೀಮ ಚೆಲುವಂಗಾನೊಲಿದೆ!**
**ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ.'**

ಶಬರಿ ಎದ್ದಳು. ತಾಯಿಯ ಕೈ ಹಿಡಿದು ಏಳಿಸಿದಳು.

ಪೂಜಾರಪ್ಪನ ಕಡೆ ತಿರುಗಿ "ಅಪ್ಪಯ್ಯನ್ ಮಗ್ಗಲಾಗೆ ಮಣ್ ಮಾಡಾನ" ಎಂದು ಹೇಳಿದಳು.

ತಾಯಿಯನ್ನು ಒಳಗೆ ಕರೆದೊಯ್ದಳು.

* * *

ಮಣ್ಣು ಮಾಡಲು ಸೂರ್ಯನನ್ನು ಹೊತ್ತು ತಂದರು.

ಶಬರಿಯ ಆಸೆಯಂತೆ ತಿಮ್ಮರಾಯಿಯ ಗುಡ್ಡೆಯ ಪಕ್ಕದಲ್ಲೇ ಗುಂಡಿ ತೋಡಲಾಗಿತ್ತು.

ಸೂರ್ಯನ ಶವವನ್ನು ಗುಂಡಿಯಲ್ಲಿ ಮಲಗಿಸಿದರು. ಒಬ್ಬೊಬ್ಬರೇ ಹಿಡಿ ಮಣ್ಣು ಹಾಕುತ್ತ ಹೋದರು.

ಶಬರಿ ಸೆರಗುಹೊದ್ದು ನೋಡುತ್ತಿದ್ದಳು.
ಸೂರ್ಯನ ತಾಯಿ ಸಾಕ್ಷಿಯಂತೆ ಕೂತಿದ್ದಳು.
ಹುಚ್ಚೀರ ಉಮ್ಮಳಿಸುವ ದುಃಖದಲ್ಲಿ ಹಿಡಿ ಮಣ್ಣು ಹಾಕಿದ.
ಶಬರಿಯ ಕಣ್ಣು ಸೂರ್ಯನ ಮುಖದ ಮೇಲೆ.
ಅದೇ ಮುಖ; ಮೊದಲ ದಿನ ನೋಡಿದ ಮುಖ.
ಬಂದದ್ದು ಅಪರಿಚಿತನಾಗಿ;
ಇದ್ದದ್ದು ಎಲ್ಲರೊಳಗೊಂದಾಗಿ;
ಕಲಿಸಿದ ಅಕ್ಷರಗಳಲ್ಲಿ ಸೂರ್ಯನ ತುಡಿತ.
ಬರೆದ ಸಾಲುಗಳೆಲ್ಲ ಭೂಮಿಗೀತ.

'ಈ ಭೂಮಿ ನಮ್ಮದು.....'

ಶಬರಿ 'ನನ್ನದೆಲ್ಲವೂ ನಿನ್ನದು' ಎಂದಿದ್ದಳು; ಒಂದಾಗಿದ್ದಳು.

ತಾಳಿ ಕಟ್ಟಿದವನು ಒಂದಾಗದೆ ಹೋದ.
ತಾಳಿ ಕಟ್ಟದವನು ಒಂದಾಗಿಯೆ ಹೋದ!

ಹೊಟ್ಟೆಯ ಮೇಲೆ ಕೈ ಇಟ್ಟುಕೊಂಡ ಶಬರಿ ನೆನಪುಗಳನ್ನು ರೆಪ್ಪೆಗಳಲ್ಲಿ ಮುಚ್ಚಿಕೊಳ್ಳುವಂತೆ ಕಣ್ಣು ಮುಚ್ಚಿದಳು. ರೆಪ್ಪೆಗಳ ಸೆರೆಯಿಂದ ತಪ್ಪಿಸಿಕೊಂಡು ಬಂದವು ಹತ್ತಾರು ಹನಿಗಳು.

"ಸ್ಯಬರವ್ವ"– ಪೂಜಾರಪ್ಪ ಕರೆದ.

ಶಬರಿ ಮುಚ್ಚಿದ ಕಣ್ಣು ತೆರೆದಳು.

"ಇನ್ ಮಕ ಮುಚ್ಬೇಕು ಕಣವ್ವ. ಸೂರ್ಯಪ್ಪಂಗೆ ಇಷ್ಟ ಆಗಿರಾದೇನಾರ ಇದ್ರೆ ಅದುನ್ನೂ ಗುಡ್ಡೆ ಒಳ್ಗಾಕ್ ಬೇಕು. ಏನಿಷ್ಟ ಇತ್ತು ಯೇಳವ್ವ"

"ಬಗಲುಚೀಲ"–ಶಬರಿಯ ಬಾಯಿಂದ ತಾನೇ ತಾನಾಗಿ ಹೊರಬಿತ್ತು.

ಪೂಜರಪ್ಪ "ಸಣ್ಣೀರ ವೋಗ್ ತಗಂಡ್ ಬಾರ್ಲ" ಎಂದದ್ದೇ ಆತ ತಡಮಾಡದೆ ಅಲ್ಲಿಂದ ಓಡಿದ. ಬೇಗ ತರಬೇಕೆಂಬ ಬಯಕೆ. ಸೂರ್ಯನಿಗೆ ಇಷ್ಟವಾದದ್ದನ್ನು ತಂದು ಕೊಟ್ಟ ಪುಣ್ಯ ಬರುವುದೆಂಬ ನಂಬಿಕೆ.

ಸಣ್ಣೀರ ಆ ಕಡೆ ಹೋದದ್ದು ಯಾಕೆಂದು ತಿಳಿದ ನವಾಬ್ ಮತ್ತು

ಗೆಳೆಯರು ಹೇಳಿದರು–"ನಾವ್ ಹೀಗ್ ಹೇಳ್ತೀವಿ ಅಂತ ತಪ್ ತಿಳ್ಕೋಬೇಡಿ. ಸೂರ್ಯಂಗೆ ಇಂಥ ಯಾವ್ದೇ ಆಚರಣೇಲಿ ನಂಬಿಕೆ ಇರ್ಲಿಲ್ಲ. ಆದ್ರಿಂದ ಬಗಲು ಚೀಲಾನ ಆತನಿಗೆ ಇಷ್ಟವಾದ್ದು ಅಂತ ಅವ್ನ್ ಜೊತೇಲೆ ಮಣ್ಣು ಮಾಡೋದ್ ಬೇಡ. ಬೇಕಾದ್ರೆ ಅವ್ನ್ ತಾಯಿನ್ ಕೇಳಿ."

ಪೂಜಾರಪ್ಪ ಸೂರ್ಯನ ತಾಯಿಯತ್ತ ನೋಡಿದ. ಆಕೆ "ಅವ್ರ್ ಹೇಳಿದ್ದು ನಿಜ. ನನ್ ಮಗ ಹಳೆ ಆಚರಣೆ ಯಾವ್ದನ್ನೂ ಮಾಡ್ತಿರ್ಲಿಲ್ಲ. ಈ ಭೂಮಿ ಕಂಡ್ರೆ ಅವ್ನಿಗ್ ಪಂಚಪ್ರಾಣ ಇತ್ತು. ಭೂಮೀಲ್ ಮಲಗ್ಸಿ ಈ ಭೂಮೀ ಮೇಲಿರೊ ಮಣ್ ಹಾಕಿದ್ರೆ, ಅಷ್ಟೇ ಸಾಕು." ಎಂದು ಹೇಳಿದರು.

ನುಂಗಿದ ದುಃಖದೊಳಗಿಂದ ಬಂದ ದನಿ.

ತಾಯಿ ಒಂದು ಹಿಡಿ ಮಣ್ಣು ಹಾಕಿದ್ದಾಯಿತು.

ಈಗ ಶಬರಿಯ ಸರದಿ.

ಗೌರಿ ಶಬರಿಯನ್ನು ಹಿಡಿದು ಏಳಿಸಿದಳು. ಕರೆತಂದಳು.

ಶಬರಿ ಮಣ್ಣನ್ನು ಹಿಡಿಯಲಿಲ್ಲ.

ಸೂರ್ಯನ ಮುಖವನ್ನು ಎದೆಯೊಳಗಿಟ್ಟುಕೊಂಡಳು.

"ಮಣ್ ತಗಾ ಶಬರಿ" ಎಂದು ಗೌರಿ ಹಿಡಿಮಣ್ಣು ಕೊಡಹೋದಳು.

ಶಬರಿ ಬೇಡವೆಂದು ತಲೆಯಾಡಿಸಿದಳು.

ಪೂಜಾರಪ್ಪ ಒತ್ತಾಯಿಸಿದ– "ಆಕವ್ವ; ಒಂದ್ ಇಡಿ ಮಣ್ ಆಕ್‌ಬಿಡು, ನೀನೊಬ್ಳು ಆಕಿದ್ರೆ ಮಣ್ ಮಾಡ್ ಬಿಡ್ತೀವಿ."

ಶಬರಿ, ಮತ್ತೆ ಇಲ್ಲವೆಂದು ತಲೆಯಾಡಿಸಿದಳು.

"ನನ್ ಪಾಲಿಗ್ ಸೂರ್ಯ ಸತ್ತಿಲ್ಲ. ನಿಮಿಗ್ ಬೇಕಿದ್ರೆ ಮಣ್ ಆಕ್ರಿ; ಮಣ್ ಮಾಡ್ರಿ"– ಶಬರಿ, ಸೂರ್ಯನ ಕಡೆ ನೋಡುತ್ತ ನುಡಿದಳು.

ನೆಟ್ಟನೋಟ; ನಿಷ್ಠುರನುಡಿ!

ಪೂಜಾರಪ್ಪನಿಗೆ ಏನು ಮಾಡಬೇಕೆಂದು ತೋಚದೆ ನವಾಬ್ ಮತ್ತು ಗೆಳೆಯರ ಕಡೆಗೆ ನೋಡಿದ. ಅವರು ಕೆಲಸ ಮುಗಿಸುವಂತೆ ಮುಖಭಾವದಲ್ಲೇ ಸೂಚಿಸಿದಾಗ ಒಂದು ಕ್ಷಣದಲ್ಲಿ ಕೆಲಸ ಮುಗಿದುಹೋಯಿತು.

ಸೂರ್ಯನ ಮುಖ ಮಣ್ಣಲ್ಲಿ ಮುಚ್ಚಿಹೋಯಿತು.

* * *

ಸಣ್ಣೀರ ಬಗಲುಚೀಲದ ಸಮೇತ ಓಡೋಡಿ ಬಂದ.

ಸೂರ್ಯ ಗುಡ್ಡೆಯಾಗಿರುವುದನ್ನು ನೋಡಿದ.

ಬಗಲು ಚೀಲವನ್ನು ಏನು ಮಾಡಬೇಕೆಂದು ತೋಚದೆ ಅತ್ತಿತ್ತ ನೋಡಿದ; ಯಾರೂ ಮಾತಾಡಲಿಲ್ಲ. ಕಡೆಗೆ ತಾನೇ ತೀರ್ಮಾನಿಸಿದ.

ಬಗಲು ಚೀಲವನ್ನು ಸೂರ್ಯನ ಗುಡ್ಡೆ ಮೇಲೆ ಇಟ್ಟ.

ಆ ವೇಳೆಗೆ ಹೆಂಗಸರಲ್ಲಿ ಗುಸುಗುಸು ಪ್ರಾರಂಭವಾಗಿತ್ತು. ಸಾವಿನ ಸಂದರ್ಭದಲ್ಲಿ ಕೆಲವು ಪದಗಳನ್ನು ಹಾಡುವ ಪದ್ಧತಿ ಈ ಜನರಲ್ಲಿದ್ದುದರಿಂದ ಯಾವ ಪದವನ್ನು ಹಾಡುವುದು, ಹಾಡಿದರೆ ಸೂರ್ಯನ ಸ್ನೇಹಿತರು ಒಪ್ಪುವರೊ ಇಲ್ಲವೊ–ಹೀಗೆ ಹೆಂಗಸರು ತಂತಮ್ಮಲ್ಲೇ ಪಿಸುಗುಡುತ್ತಿದ್ದರು. ಲಕ್ಷ್ಮಕ್ಕ ಹೇಳಿದಳು– "ಈಗ ಹಳೇ ಪದಗಿದ ಬ್ಯಾಡ ಕಣ್ರವ್ವ. ಸೂರ್ಯಪ್ಪ ನಮಿಗ್ ಮೊಟ್‌ಮೊದ್ಲು ಕಲ್ಸಿದ್ ಪದ ಐತಲ್ಲ– ಅದೇ ಸ್ಯಬರಜ್ಜಿ ಪದ– ಅದುನ್ನೇ ಯೇಳಾನ; ಸೂರ್ಯಪ್ಪಂಗೂ ಅದು ಇಷ್ಟ ಅಲ್ವಾ?"

ಹಾಡು ಆರಂಭಿಸಿದರು:

'ಗುಡಿಯ ಕಟ್ಟಲಿಲ್ಲ, ಮುಡಿಯ ಕಟ್ಟಲಿಲ್ಲ
ಮಡಿ ಮೈಲಿಗೆಯ ಮನಸು ಮೊದಲೇ ಇಲ್ಲ
ಶಬರಜ್ಜಿ ನಮ್ಮ ಶಬರಜ್ಜಿ
ಸ್ವಾಭಿಮಾನದ ಅಜ್ಜಿ, ಸಾವಿಲ್ಲದ ಅಜ್ಜಿ...'

ಹಾಡಿನ ಸಾಲು ಮುಗಿದಮೇಲೆ ಮೌನ–ಮಾತು ಮಣ್ಣಾದಂತೆ.
ನೋವು ಕಣ್ಣಾದಂತೆ.
ನೀರಿಗೆ ಬಿದ್ದ ಸುಣ್ಣವಾದಂತೆ,
ಕತ್ತಲು ಬೆತ್ತಲಾಗಿ ಕಾದಂತೆ.....
ಬೆಳಕು ಬಯಲಾದಂತೆ......

ಶಬರಿ ಮೌನದಲ್ಲಿ ಎದ್ದಳು.
ದಿಟ್ಟಿಸಿದಳು___

ಸಮಾಧಿಯ ಮೇಲೆ ಸೂರ್ಯನ ಚೀಲ!
ಚರಿತ್ರೆಯ ಹಂಬಲ!

ಶಬರಿ ಹತ್ತಿರ ಬಂದಳು; ನಿರ್ಧಾರದಿಂದ ನೋಡಿದಳು.
ಬಗಲು ಚೀಲವನ್ನು ಕೈಗೆತ್ತಿಕೊಂಡಳು.

ಹೆಗಲಿಗೇರಿಸಿಕೊಂಡು ಹೆಜ್ಜೆಯಿಟ್ಟಳು.

**‘ನಾನು ನಿನಗೊಲಿದೆ. ನೀನು ನನಗೊಲಿದೆ!**
**ನೀನೆನ್ನನಗಲದಿಪ್ಪೆ, ನಾ ನಿನ್ನನಗಲದಿಪ್ಪೆನಯ್ಯ!**
**ನಿನಗೆ ನನಗೆ ಬೇರೊಂದು ಠಾವುಂಟೇ?**
**ನೀನು ಕರುಣೆಯೆಂಬುದ ನಾನು ಬಲ್ಲೆನು!**
**ನೀನಿರಿಸಿದ ಗತಿಯೊಳಗೆ ಇಪ್ಪವಳಾನಯ್ಯ.”**

* * *